## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:12-11-2010ರಂದು ಬೆಳಗ್ಗೆ 11.00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಎಲ್ಲಾ ಜಂಟಿ ನಿರ್ದೇಶಕರು ನಗರ ಯೋಜನೆ |
| 03 | ಎಂ.ಮುನಿರಾಜು | ಸದಸ್ಯರು | ಎಲ್ಲಾ ಸಹಾಯಕ ನಿರ್ದೇಶಕರು ನಗರ ಯೋಜನೆ |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ವಾಣಿಜ್ಯ ಕಟ್ಟಡ, ಮಾಲ್, ಬಹು ಮಹಡಿ ಕಟ್ಟಡ ಹಾಗೂ ಇನ್ನಿತರೆ ಕಟ್ಟಡಗಳಿಗೆ ನಕ್ಷೆಗಳನ್ನು ಮಂಜೂರಾತಿ ನೀಡಲಾಗಿರುತ್ತದೆ. ಸದರಿ ನಕ್ಷೆಗಳನ್ನು ನೀಡುವಾಗ ಅನುಸರಿಸಿರುವ ಮಾನದಂಡಗಳೇನು. ಸಿ.ಡಿ.ಪಿ-2015ರ ಪ್ರಕಾರ ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆಯೇ ಅದೇ ರೀತಿ ನಕ್ಷೆ ಮಂಜೂರಾತಿ ಪಡೆದ ಮಾಲೀಕರು ಕಟ್ಟಡಗಳನ್ನು ಮಂಜೂರಾತಿ ನಕ್ಷೆಯ ಪ್ರಕಾರವೇ ನಿರ್ಮಿಸಿರುತ್ತಾರೆಯೇ. ಒಂದು ವೇಳೆ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಂತಹ ಮಾಲೀಕರ ವಿರುದ್ಧ ಎಷ್ಟು ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ. ಸಿ.ಡಿ.ಪಿ.ಯಲ್ಲಿ ನಮೂದಿಸಿರುವ ಮಾದರಿಯಲ್ಲಿಯೇ ರಸ್ತೆಗಳನ್ನು ಬಿಟ್ಟು ಕಟ್ಟಡದ ಮಾಲೀಕರು ಕಟ್ಟಡಗಳನ್ನು ನಿರ್ಮಿಸಿರುತ್ತಾರೆಯೇ ನಕ್ಷೆಯನ್ನು ಮಂಜೂರು ಮಾಡುವಾಗ ನೀವುಗಳು ಸ್ಥಳ ಪರಿಶೀಲನೆ ಮಾಡಿ ನಕ್ಷೆ ಮಂಜೂರಾತಿ ಮಾಡಲಾಗಿರುತ್ತದೆಯೇ ಎಂಬ ಬಗ್ಗೆ ವಿವರಗಳನ್ನು ನೀಡುವುದು.

ಮುಂದುವರೆದಂತೆ ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಾಗ ಅಂತಹ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ ಕಲಂ 321(1) ಮತ್ತು (2)ರಡಿ (Provisional Order) ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ

ಆದೇಶಗಳನ್ನು ಪಡೆದಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3) (Confirmation Order) ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಸದರಿ ಸ್ಥಿರೀಕರಣ ಆದೇಶವನ್ನು ಪ್ರಶ್ನಿಸಿ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ ಆದೇಶಗಳನ್ನು ಪಡೆದಿರುತ್ತಾರೆಂಬ ಬಗ್ಗೆ ವಿವಿರವಾದ ವರದಿಯನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯ ಸದಸ್ಯರು ಮಾತನಾಡುತ್ತಾ, ನಕ್ಷೆ ಮಂಜೂರಾತಿ ಪಡೆದ ಮಾಲೀಕರು ಕಟ್ಟಡವನ್ನು ಪ್ರಾರಂಭಿಸುವ ಮೊದಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ. ಹಾಗೂ ಕಟ್ಟಡಗಳನ್ನು ನಿರ್ಮಿಸಿದ ನಂತರ ಸ್ವಾಧೀನಪತ್ರ ಪಡೆಯಬೇಕಾಗಿರುತ್ತದೆ. ನಕ್ಷೆ ಮಂಜೂರಾತಿ ಪಡೆದಂತಹ ಎಷ್ಟು ಮಾಲೀಕರು ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಮತ್ತು ಸ್ವಾಧೀನಪತ್ರವನ್ನು ಪಡೆದಿರುತ್ತಾರೆಂಬ ಬಗ್ಗೆ ವಿವರಗಳನ್ನು ಒದಗಿಸುವಂತೆ ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಜಂಟಿ ನಿರ್ದೇಶಕರು-ನಗರಯೋಜನೆ ರವರು ನಕ್ಷೆ ಮಂಜೂರಾತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆಯವರು ನೀಡುತ್ತಿದ್ದು, ಮೇಲ್ವಿಚಾರಣೆಯನ್ನು ವಾರ್ಡ್ ಮಟ್ಟದ ಇಂಜಿನಿಯರ್‌ಗಳೇ ನಿರ್ವಹಿಸುತ್ತಿರುತ್ತಾರೆ. ಈಗ ನಕ್ಷೆ ಮಂಜೂರಾತಿ ನೀಡುವ ಅಧಿಕಾರವನ್ನು ಕೂಡ ಆಯಾ ಉಪವಿಭಾಗದ ಇಂಜಿನಿಯರ್‌ಗಳಿಗೇ ವರ್ಗಾಯಿಸಲಾಗಿರುತ್ತದೆ. ನಗರ ಯೋಜನೆಯವರ ಹಂತದಲ್ಲಿ ನಕ್ಷೆಯನ್ನು ಮಂಜೂರು ಮಾಡುವಾಗ ಯಾವುದಾದರೂ ತಂಟೆ ತಕರಾರು ಬಂದಲ್ಲಿ ಸ್ಥಳ ಪರಿಶೀಲನೆ ಮಾಡಲಾಗುತ್ತಿತ್ತು. ಇಲ್ಲದಿದ್ದ ಪಕ್ಷದಲ್ಲಿ ನಕ್ಷೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ ಮಾಲೀಕರು ಬಿಲ್ಡಿಂಗ್ ಬೈಲಾ ಪ್ರಕಾರ ಎಲ್ಲಾ ದಾಖಲೆಗಳನ್ನು ಒದಗಿಸಿದಲ್ಲಿ ನಕ್ಷೆಯನ್ನು ಮಂಜೂರು ಮಾಡಲಾಗುತ್ತಿತ್ತು. ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನ ಪತ್ರವನ್ನು ಪಡೆಯುವ ಬಗ್ಗೆ ಕಟ್ಟಡದ ಮಾಲೀಕರು ಉಪವಿಭಾಗದ ಇಂಜಿನಿಯರ್‌ಗಳಿಂದಲೇ ಪಡೆಯಬಹುದಾಗಿರುತ್ತದೆ. ಪ್ರಮಾಣ ಪತ್ರಗಳನ್ನು ಪಡೆಯದಂತ ಮಾಲೀಕರ ವಿರುದ್ಧ ಕಾನೂನು ಚೌಕಟ್ಟಿನಲ್ಲಿ ಕ್ರಮ ವಹಿಸಲಾಗಿರುತ್ತದೆಂದು ಸಮಿತಿಗೆ ತಿಳಿಸಿದರು.

ಕೊನೆಯದಾಗಿ ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ಅಧಿಕಾರಿಗಳಾದ ನೀವು ಸೇರಿ ಕಾನೂನಿನಗೆ ಹಾಗೂ ನಗರದ ನಾಗರೀಕರಿಗೆ ಯಾವುದೇ ಚ್ಯುತಿ ಬರದಂತೆ ಕಾರ್ಯನಿರ್ವಹಿಸೋಣ ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಅಪೀಲು ಸ್ಥಾಯಿ ಸಮಿತಿಯ ದಿನಾಂಕ:12-11-2010ರಂದು ಮಧ್ಯಾಹ್ನ 3.00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 03 | ಎಂ.ಮುನಿರಾಜು | ಸದಸ್ಯರು | ಸಹಾಯಕ ಆಯುಕ್ತರು (ಜಾಹೀರಾತು) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಎಲ್ಲಾ ವಲಯದ ಕಂದಾಯ ಅಧಿಕಾರಿಗಳು (ಜಾಹೀರಾತು) |
| 05 | ಡಾ||ಎಸ್.ರಾಜು | ಸದಸ್ಯರು | ಎಲ್ಲಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು (ಜಾಹೀರಾತು) |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ಜಾಹೀರಾತು ಫಲಕಗಳನ್ನು ಅಳವಡಿಸಲಾಗಿರುತ್ತದೆ. ಅನಧಿಕೃತವಾಗಿ ಅಳವಡಿಸಿಕೊಂಡಿರುವ ಜಾಹೀರಾತುದಾರರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತು ಫಲಕಗಳು, ಬ್ಯಾನರ್‌ಗಳು ಮತ್ತು ಬಂಟಿಂಗ್ಸ್‌ಗಳನ್ನು ತೆರವುಗೊಳಿಸಲು ಅನುಸರಿಸುತ್ತಿರುವ ಕ್ರಮಗಳೇನು. ಜಾಹೀರಾತಿನಿಂದ ನಗರ ಪಾಲಿಕೆಯ ಬೊಕ್ಕಸಕ್ಕೆ ವಾರ್ಷಿಕ ಎಷ್ಟು ಆಧಾಯ ಬರುತ್ತಿದೆ. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತುಗಳ ವಿರುದ್ಧ ಇದುವರೆವಿಗೂ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ.

ಜಾಹೀರಾತು ಮಾಲೀಕರು ಪರವಾನಗಿಯನ್ನು ಪಡೆಯುವಾಗ ನೀಡುವ ಅಳತೆ ಮತ್ತು ಸಂಖ್ಯೆಗಳಿಗಿಂತ ಹೆಚ್ಚು ಅಳತೆ ಮತ್ತು ಸಂಖ್ಯೆಯ ಜಾಹೀರಾತುಗಳನ್ನು ಪ್ರದರ್ಶಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಈ ರೀತಿ ಪ್ರದರ್ಶಿತವಾಗುತ್ತಿರುವ ಎಷ್ಟು ಜಾಹೀರಾತುಗಳನ್ನು ಪತ್ತೆ ಹಚ್ಚಲಾಗಿರುತ್ತದೆ ಮತ್ತು ಅಂತಹ ಜಾಹೀರಾತುದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ. ಇದರಿಂದಾಗಿ ನಗರ ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುವುದಿಲ್ಲವೆ ಎಂಬ ಬಗ್ಗೆ ವಿವರವನ್ನು ನೀಡುವುದು.

ಮುಂದುವರೆದಂತೆ ಕೆಲವೊಂದು ಜಾಹೀರಾತುದಾರರು ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಪಡೆದಿದ್ದು ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ. ಪರವಾನಗಿ ಅವಧಿ ಮುಗಿದಿದ್ದರೂ ಸಹ

ಕಾಲಮಿತಿಯೊಳಗೆ ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ತನ್ನಷ್ಟಕ್ಕೆ ತಾನೇ ಪರವಾನಗಿಯು (ಡೀಮ್ಡ್ ಪರ್ಮಿಷನ್) ಮುಂದುವರೆಯುತ್ತದೆಂದು ಭಾವಿಸಿ ಅಳವಡಿಸಿಕೊಂಡಿರುವ ಜಾಹೀರಾತು ಫಲಕಗಳೆಷ್ಟು.

ಹಳೆಯ ಬಸ್ ನಿಲ್ದಾಣಗಳನ್ನು ಕೆಡವಿ ಅದೇ ಸ್ಥಳದಲ್ಲಿ ಎಷ್ಟು ಹೊಸ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಹಳೆಯ ಬಸ್ ನಿಲ್ದಾಣವನ್ನು ಕೆಡವಿದಾಗ, ಆ ಸ್ಥಳದಲ್ಲಿದ್ದ ಕಬ್ಬಿಣ ಮತ್ತಿತರ ವಸ್ತುಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗಿದೆಯೇ. ಜಾಹೀರಾತು ಬೈಲಾ 2006 ರಲ್ಲಿ ಯಾವುದೇ ಕಾರಣಕ್ಕೂ ಬಸ್ ತಂಗುದಾಣಗಳ ಸ್ಥಳ ಬದಲಾವಣೆಗೆ ಅವಕಾಶ ಇರುವುದಿಲ್ಲ. ಯಾವುದಾದರೂ ಅನಿವಾರ್ಯ ಸಂದರ್ಭದಲ್ಲಿ ಮಾನ್ಯ ಆಯುಕ್ತರ ಪೂರ್ವಾನುಮತಿ ಪಡೆದ ಸ್ಥಳ ಬದಲಾವಣೆ ಅರ್ಜಿಯನ್ನು ಪರಿಗಣಿಸಬಹುದಾಗಿರುತ್ತದೆ. ಎಷ್ಟು ಪ್ರಕರಣಗಳಲ್ಲಿ ಆಯುಕ್ತರ ಪೂರ್ವಾನಮತಿ ಪಡೆದು ಸ್ಥಳ ಬದಲಾವಣೆ ಮಾಡಿ ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿರುತ್ತದೆ. ಪ್ರಸ್ತಾಪಿತ ಟೆಂಡರ್‌ನ ನಿಯಮಗಳಿಗೆ ವಿರುದ್ಧವಾಗಿ, ಜಾಹಿರಾತುದಾರರು ಬಸ್ ತಂಗುದಾಣ ನಿರ್ಮಾಣ ಮಾಡಿದಲ್ಲಿ, ಜಾಹಿರಾತು ಒಪ್ಪಂದವು ಮುರಿದು ಹೋಗುತ್ತದೆಂದು ಷರತ್ತಿನಲ್ಲಿ ತಿಳಿಸಲಾಗಿದೆ. ಆದರೆ 85 ಬಸ್ ತಂಗುದಾಣಗಳು ಪರವಾನಗಿ ಇಲ್ಲದೆ ಬದಲಿ ಸ್ಥಳದಲ್ಲಿ ನಿರ್ಮಾಣಗೊಂಡಿರುವುದಾಗಿ ತಿಳಿದು ಬಂದಿದ್ದು, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ. ಜಾಹೀರಾತುದಾರರೇ ಅವರ ಅನುಕೂಲಕ್ಕೆ ತಕ್ಕಂತೆ, ಅನಧಿಕೃತವಾಗಿ ಸ್ಥಳ ಬದಲಾವಣೆ ಮಾಡಿಕೊಂಡು ಬಸ್ ತಂಗುದಾಣಗಳನ್ನು ನಿರ್ಮಿಸಿದಲ್ಲಿ ಅದು ನಿಯಮ ಬಾಹೀರವಲ್ಲವೆ. ಕಿಯಾಸ್ಕ್ ಮಾದರಿಯ ಬಸ್‌ತಂಗುದಾಣದಲ್ಲಿ ಎರಡು ಚಿಕ್ಕ-ಚಿಕ್ಕ ಬೋರ್ಡ್‌ಗಳಿದ್ದು, ಅವುಗಳಲ್ಲಿ ಬಿಬಿಎಂಪಿಯ ಸಾಮಾಜಿಕ ಸುದ್ದಿ ಪ್ರಕಟಿಸಬೇಕು. ಆದರೆ ಜಾಹಿರಾತುದಾರರು ಪಾಲಿಸುತ್ತಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಜಾಹೀರಾತುದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ. ಕರಾರು ಪತ್ರದ ಪ್ರಕಾರ 120 ದಿನಗಳಲ್ಲಿ ಬಸ್ ತಂಗುದಾಣ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸ ಬೇಕು. ಬಸ್‌ತಂಗುದಾಣ ಪೂರ್ಣಗೊಂಡ ಬಗ್ಗೆ ಎ.ಇ.ಇ.(ಜಾಹಿರಾತು) ರವರು ದೃಡೀಕರಣ ನೀಡಬೇಕು. ಆದರೆ ಬಸ್ ತಂಗುದಾಣಗಳು ಪೂರ್ಣಗೊಳ್ಳದಿದ್ದರೂ, ಪೂರ್ಣಗೊಂಡ ಬಗ್ಗೆ ದೃಡೀಕರಣ ನೀಡಿರು ವಂತಹ ಪ್ರಕರಣಗಳಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ. ಬಿಬಿಎಂಪಿ & ರಿಪ್ಪಲ್ ಮೀಡಿಯಾರವರು ದಿನಾಂಕ:14-12-2009ರಂದು 50ಬಸ್ ತಂಗುದಾಣ ನಿರ್ಮಾಣ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಇವುಗಳಲ್ಲಿ 31 ಬಸ್ ತಂಗುದಾಣ ನಿರ್ಮಾಣವಾಗಿದ್ದು, ಅದರಲ್ಲಿ 19 ಬಸ್ ತಂಗುದಾಣಗಳು ಬದಲಿ ಸ್ಥಳದಲ್ಲಿ ನಿರ್ಮಾಣಗೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆಂಬ ಬಗ್ಗೆ ವಿವಿರವನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯ ಸದಸ್ಯರು ಮಾತನಾಡುತ್ತಾ, ಜಾಹೀರಾತುದಾರರು ತಮಗೆ ಇಷ್ಟ ಬಂದ ರೀತಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಇದರಿಂದಾಗಿ ನಗರ ಸೌಂದರ್ಯಕ್ಕೆ ಅಡಚಣೆಯಾಗುತ್ತಿರುವುದನ್ನು ಗಮನಿಸಬಹುದಾಗಿರುತ್ತದೆ. ಅದರಲ್ಲೂ ಇತ್ತೀಚೆಗೆ ಹುಟ್ಟುಹಬ್ಬಗಳ ನೆಪದಲ್ಲಿ ಎಲ್ಲೆಂದರಲ್ಲಿ ಬ್ಯಾನರ್ಸ್ ಮತ್ತು ಬಂಟಿಂಗ್ಸ್‌ಗಳನ್ನು ಅಳವಡಿಸುತ್ತಿರುವುದು ಸರ್ವೆ ಸಾಮಾನ್ಯವಾಗಿಬಿಟ್ಟಿದೆ. ಆದುದರಿಂದ ಯಾರದೇ ಹುಟ್ಟುಹಬ್ಬದ ಜಾಹೀರಾತಾಗಿರಲಿ ಅಥವಾ ಅನುಮತಿ ಪಡೆಯದೇ ಪ್ರದರ್ಶಿಸಿರುವ ಜಾಹೀರಾತಾಗಲಿ ಕೂಡಲೇ ತೆರವುಗೊಳಿಸುವುದು. ನಗರದ ಸೌಂದರ್ಯಕ್ಕೆ ಚ್ಯುತಿ ಅಥವಾ ನಗರ ಪಾಲಿಕೆಯ ಬೊಕ್ಕಸಕ್ಕೆ

ನಷ್ಟವುಂಟಾಗುವಂತಹ ಯಾವುದೇ ಸಂದರ್ಭದಲ್ಲೂ ಯಾವುದೇ ಒತ್ತಡಕ್ಕೆ ಮಣಿಯದೆ ಕಾರ್ಯನಿರ್ವಹಿಸುವುದೆಂದು ತಿಳಿಸಿದರು.

ಬಸ್ ತಂಗುದಾಣಗಳನ್ನು ನಿಗಧಿತ ಸ್ಥಳಗಳಲ್ಲಿಯೇ ನಿರ್ಮಿಸಲಾಗುತ್ತಿದೆ. ಒಂದು ವೇಳೆ ಬದಲಿಯಾಗಿ ನಿರ್ಮಾಣ ಮಾಡಬೇಕಾದಲ್ಲಿ ಆಯುಕ್ತರ ಅನುಮೋದನೆ ಪಡೆದು ಸ್ಥಳ ಬದಲಾವಣೆ ಮಾಡಿಕೊಳ್ಳಲಾಗುತ್ತಿದೆ. ಒಂದೊಂದು ಕಡೆ ನಿಗಧಿತ ವೇಳೆಗೆ ಬಸ್ ತಂಗುದಾಣಗಳನ್ನು ನಿರ್ಮಿಸಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಸಹ ಟೆಂಡರ್ ಪಡೆದ ಗುತ್ತಿಗೆದಾರರಿಗೆ ಕೂಡಲೇ ಮುಗಿಸಿಕೊಡಬೇಕೆಂದು ತಿಳಿಸಲಾಗಿರುತ್ತದೆ. ಬಸ್ ತಂಗುದಾಣಗಳ ಮೇಲೆ ಬಿ.ಬಿ.ಎಂ.ಪಿ.ಯ ಸುದ್ದಿಯನ್ನು ಪ್ರಕಟಿಸದಿದ್ದವರ ಮೇಲೆ ಕಾನೂನಿನಂತೆ ಕ್ರಮ ವಹಿಸಲಾಗುತ್ತದೆಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಹೊಸ ವಲಯಗಳ ಕಂದಾಯ ಅಧಿಕಾರಿ (ಜಾಹೀರಾತು)ರವರುಗಳು ನಮ್ಮ ವಲಯಗಳಲ್ಲಿ ಪ್ರತ್ಯೇಕವಾಗಿ ಜಾಹೀರಾತುಗಳನ್ನು ನಿರ್ವಹಿಸಲು ಯಾವುದೇ ಸಿಬ್ಬಂದಿಯಿರುವುದಿಲ್ಲ. ಕಂದಾಯ ಇಲಾಖೆಯ ಜೊತೆಗೇ ಜಾಹೀರಾತು ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಇದರಿಂದಾಗಿ ನಮಗೆ ಕೆಲಸದ ಒತ್ತಡವುಂಟಾಗಿ ಯಾವುದೇ ಕೆಲಸ ಕಾರ್ಯಗಳನ್ನು ಕಾಲಮಿತಿಯೊಳಗೆ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಹಳೆಯ ವಲಯಗಳಲ್ಲಿರುವಂತೆ ಹೊಸ ವಲಯಗಳಿಗೂ ಪ್ರತ್ಯೇಕವಾಗಿ ಜಾಹೀರಾತುಗಳಿಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು. ಹಾಗೂ ಮುಖ್ಯವಾಗಿ ಜಾಹೀರಾತು ಫಲಕಗಳು, ಬಂಟಿಂಗ್ಸ್ ಮತ್ತು ಬ್ಯಾನರ್ಸ್‌ಗಳನ್ನು ತೆರವುಗೊಳಿಸುವಾಗ ನಮ್ಮ ಸಿಬ್ಬಂದಿಗಳಿಗೆ ಸಂಬಂಧಪಟ್ಟ ಜಾಹೀರಾತುದಾರರುಗಳು ಹಲ್ಲೆ ಮಾಡುತ್ತಿರುತ್ತಾರೆ. ಅದರಲ್ಲೂ ರಾಜಕಾರಣಿಯವರ ಬಗ್ಗೆ ಹಾಕಿದಂತ ಯಾವುದೇ ಫಲಕ, ಬಂಟಿಂಗ್ಸ್, ಬ್ಯಾನರ್ಸ್



ಮತ್ತು ಪೋಸ್ಟರ್ಸ್‌ಗಳನ್ನು ತೆಗೆಯಲು ಹೋದಾಗ ಗೂಂಡಗಿರಿಯಂತೆ ವರ್ತಿಸುವ ಕೆಲವೊಂದು ಕಿಡಿಗೇಡಿಗಳು ಜೀವ ಬೆದರಿಕೆ ಹಾಕುತ್ತಿದ್ದಾರೆಂಬ ವಿಷಯವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ತಮ್ಮ ಎಲ್ಲಾ ಸಮಸ್ಯೆಗಳ ಬಗ್ಗೆ ಪೂಜ್ಯ ಮಹಾಪೌರರು, ಆಯುಕ್ತರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕೂಡಲೇ ಪರಿಹರಿಸಿಕೊಡುವುದಾಗಿ ತಿಳಿಸಿದರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ಅಧಿಕಾರಿಗಳಾದ ನೀವು ಸೇರಿ ಕಾನೂನಿನಗೆ ಯಾವುದೇ ಚ್ಯುತಿ ಬರದಂತೆ ಕಾರ್ಯನಿರ್ವಹಿಸಲು ಶ್ರಮಿಸೋಣ ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:15-11-2010ರಂದು ಬೆಳಗ್ಗೆ 11-00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಆಯುಕ್ತರು (ಕಂದಾಯ) |
| 03 | ಎಂ.ಮುನಿರಾಜು | ಸದಸ್ಯರು | ಎಲ್ಲಾ ಕಂದಾಯ ಅಧಿಕಾರಿಗಳು (ರಾಜರಾಜೇಶ್ವರಿನಗರ/ದಕ್ಷಿಣ/ಬೊಮ್ಮನಹಳ್ಳಿ/ಮಹದೇವಪುರ/ದಾಸರಹಳ್ಳಿ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | (ರಾಜರಾಜೇಶ್ವರಿನಗರ/ದಕ್ಷಿಣ/ಬೊಮ್ಮನಹಳ್ಳಿ/ಮಹದೇವಪುರ/ದಾಸರಹಳ್ಳಿ) ವಲಯಗಳ ಎಲ್ಲಾ ಸಹಾಯಕ ಕಂದಾಯ ಅಧಿಕಾರಿಗಳು |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ವಲಯವಾರು ವಾರ್ಷಿಕ ನಿಗಧಿ ಪಡಿಸಿರುವ ಕಂದಾಯದ ಮೊತ್ತವೆಷ್ಟು, ಹಾಲಿ ವಸೂಲಾಗಿರುವ ಕಂದಾಯದ ಮೊತ್ತವೆಷ್ಟು, ವಸೂಲಾಗಿರಬೇಕಾಗಿರುವ ಕಂದಾಯದ ಮೊತ್ತವೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸ್‌ನ್ ಹಾಲ್‌ಗಳೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸ್‌ನ್ ಹಾಲ್‌ಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಚಿತ್ರಮಂದಿರಗಳೆಷ್ಟು ಅವುಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಎಷ್ಟು ಖಾಲಿ ನಿವೇಶನಗಳಿಂದ ಕಂದಾಯ ವಸೂಲಾಗಿರುತ್ತದೆ ಹಾಗೂ ಎಷ್ಟು ಕಟ್ಟಡಗಳಿಂದ ಕಂದಾಯ ವಸೂಲಾಗಿರುತ್ತದೆ. ಕಂದಾಯವನ್ನು ನಿಗಧಿ ಪಡಿಸಿಕೊಳ್ಳದಿರುವ ಖಾಲಿ ನಿವೇಶನ ಮತ್ತು ಕಟ್ಟಡಗಳೆಷ್ಟು, ವಾಣಿಜ್ಯ ಕಟ್ಟಡ/ಮಾಲ್‌ಗಳೆಷ್ಟಿರುತ್ತವೆ, ಅವುಗಳಿಂದ ವಸೂಲಾಗುತ್ತಿರುವ ಕಂದಾಯವೆಷ್ಟು, ಕಂದಾಯವನ್ನು ನಿಗಧಿಪಡಿಸಿಕೊಳ್ಳದಿರುವ ಹಾಗೂ ತಪ್ಪಾಗಿ ನಿಗಧಿಪಡಿಸಿಕೊಂಡಿರುವ ಸ್ವತ್ತು/ಕಟ್ಟಡದ ಮಾಲೀಕರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ವಿವಿರವನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

-2-

ಸಮಿತಿಯ ಸದಸ್ಯರು ಮಾತನಾಡುತ್ತಾ, ನಮ್ಮ ವಾರ್ಡ್‌ಗಳಲ್ಲಿ ಬಹಳಷ್ಟು ಬಹುಮಹಡಿಗಳ ಕಟ್ಟಡಗಳ ಮಾಲೀಕರು, ವಾಣಿಜ್ಯ ಕಟ್ಟಡದ ಮಾಲೀಕರು ಸರಿಯಾಗಿ ಕಂದಾಯವನ್ನು ನಿಗಧಿಪಡಿಸಿಕೊಂಡಿಲ್ಲದಿರುವುದು

ನಮ್ಮಗಳ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ತಾವುಗಳು ಕೂಡಲೇ ತಪಾಸಣೆ ಮಾಡಿ ಕೂಡಲೇ ಸರಿಯಾಗಿ ಅಂದರೆ ಎಸ್.ಎ.ಎಸ್. 2008-2009 ರಿಂದ 2010-11ರಲ್ಲಿ ನಮೂದಿಸಿರುವ ಕಂದಾಯವನ್ನು ನಿಗಧಿಪಡಿಸಿಕೊಳ್ಳುವಂತೆ ಅಂತಹ ಮಾಲೀಕರುಗಳಿಗೆ ನೋಟೀಸ್‌ಗಳನ್ನು ಜಾರಿ ಮಾಡಿ ಕಂದಾಯವನ್ನು ವಸೂಲು ಮಾಡಲು ಕ್ರಮ ಕೈಗೊಂಡಲ್ಲಿ ನಗರ ಪಾಲಿಕೆಯ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಯಾವುದೇ ಸಂಶವಿರುವುದಿಲ್ಲವೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಕಂದಾಯ)ರವರು ದಿನಾಂಕ:30-11-2010ರವರೆಗೆ ಕಟ್ಟಡದ ಮಾಲೀಕರು ತಮ್ಮ ತಮ್ಮ ಕಟ್ಟಡಗಳಿಗೆ ತಾವೇ ಕಂದಾಯವನ್ನು ನಿಗಧಿಪಡಿಸಿಕೊಳ್ಳುವ ಅವಕಾಶವನ್ನು ನೀಡಲಾಗಿರುತ್ತದೆ. 30-11-2010 ಮುಗಿದ ನಂತರ ಆಯಾ ವಲಯ ಮಟ್ಟದಲ್ಲಿ ಸರ್ವೆ ಕಾರ್ಯವನ್ನು ಪ್ರಾರಂಭಿಸಿ ದಿನಾಂಕ:15-12-2010ರಿಂದ ಕಂದಾಯವನ್ನು ನಿಗಧಿಪಡಿಸಿಕೊಂಡಿರದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲಾಗುವುದು. ಅಂತಹ ಕಟ್ಟಡಗಳಿಗೆ ಕಂದಾಯವನ್ನು ನಿಗಧಿಪಡಿಸಿ ಒಟ್ಟು ಪಾವತಿಸಬೇಕಾದ ಕಂದಾಯದ ಮೊತ್ತಕ್ಕೆ ಮಾಸಿಕ ಶೇಕಡ ರೂ.2/-ರಂತೆ ಬಡ್ಡಿಯನ್ನು ವಿಧಿಸಲಾಗುವುದು. ದಿನಾಂಕ:30-11-2010 ಮುಗಿದ ನಂತರ ವಲಯವಾರು ವಾರ್ಷಿಕ ವಸೂಲಾಗಿರುವ ಕಂದಾಯದ ಮೊತ್ತವನ್ನು ಕ್ರೂಢೀಕರಿಸಿ ಸಮಿತಿಯ ಮುಂದೆ ಮಂಡಿಸಲಾಗುವುದು. ತಪ್ಪಾಗಿ ಲೆಕ್ಕಾಚಾರ ಮಾಡಿ ಕಂದಾಯವನ್ನು ನಿಗಧಿಪಡಿಸಿಕೊಂಡಿರುವ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ಕಂದಾಯದ 2 ಪಟ್ಟು ದಂಡವನ್ನು ವಿಧಿಸಿ (ಅಂದರೆ ಉದಾ:-ಕಂದಾಯದ ಮೊತ್ತ ರೂ.5000/-ಗಳಾಗಿದ್ದರೆ ಅದರ ಮೇಲೆ ರೂ.10000/-ಗಳಷ್ಟು ದಂಡವನ್ನು ವಿಧಿಸಿದರೆ ಒಟ್ಟು ರೂ.15000/-ಗಳಾಗುತ್ತದೆ.) ವಸೂಲು ಮಾಡಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಕೊನೆಯದಾಗಿ ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕತೆಯು ಇಂದಿನ ದಿನಗಳಲ್ಲಿ ಅತಿ ಪ್ರಮುಖವಾಗಿದ್ದು, ಅದನ್ನು ಕ್ರೂಡೀಕರಿಸಿ ನಗರ ಪಾಲಿಕೆಯ ಕೀರ್ತಿ ಪಾತಕೆಯನ್ನು ಎತ್ತರಕ್ಕೆ ಏರಿಸುವ ಗುರುತರವಾದ ಜವಾಬ್ದಾರಿಯು ಚುನಾಯಿತ ಪ್ರತಿನಿಧಿಗಳಾದ ನಮ್ಮ ಮತ್ತು ಅಧಿಕಾರಿಗಳಾದ ನಿಮ್ಮ ಮೇಲಿರುತ್ತದೆ. ಈ ವಿಷಯವನ್ನು ಅರಿತು ನಾವು ಮತ್ತು ನೀವುಗಳು ಸೇರಿ ಶ್ರಮಿಸೋಣವೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:15-11-2010ರಂದು ಮಧ್ಯಾಹ್ನ 3-00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|

| | | | |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಆಯುಕ್ತರು (ಕಂದಾಯ) |
| 03 | ಎಂ.ಮುನಿರಾಜು | ಸದಸ್ಯರು | ಎಲ್ಲಾ ಕಂದಾಯ ಅಧಿಕಾರಿಗಳು (ಪಶ್ಚಿಮ/ಪೂರ್ವ/ಬ್ಯಾಟರಾಯಪುರ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | (ಪಶ್ಚಿಮ/ಪೂರ್ವ/ಬ್ಯಾಟರಾಯಪುರ) ವಲಯಗಳ ಎಲ್ಲಾ ಸಹಾಯಕ ಕಂದಾಯ ಅಧಿಕಾರಿಗಳು |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ವಲಯವಾರು ವಾರ್ಷಿಕ ನಿಗದಿ ಪಡಿಸಿರುವ ಕಂದಾಯದ ಮೊತ್ತವೆಷ್ಟು, ಹಾಲಿ ವಸೂಲಾಗಿರುವ ಕಂದಾಯದ ಮೊತ್ತವೆಷ್ಟು, ವಸೂಲಾಗಿರಬೇಕಾಗಿರುವ ಕಂದಾಯದ ಮೊತ್ತವೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸ್‌ನ್ ಹಾಲ್‌ಗಳೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸ್‌ನ್ ಹಾಲ್‌ಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಚಿತ್ರಮಂದಿರಗಳೆಷ್ಟು ಅವುಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಎಷ್ಟು ಖಾಲಿ ನಿವೇಶನಗಳಿಂದ ಕಂದಾಯ ವಸೂಲಾಗಿರುತ್ತದೆ ಹಾಗೂ ಎಷ್ಟು ಕಟ್ಟಡಗಳಿಂದ ಕಂದಾಯ ವಸೂಲಾಗಿರುತ್ತದೆ. ಕಂದಾಯವನ್ನು ನಿಗಧಿ ಪಡಿಸಿಕೊಳ್ಳದಿರುವ ಖಾಲಿ ನಿವೇಶನ ಮತ್ತು ಕಟ್ಟಡಗಳೆಷ್ಟು, ವಾಣಿಜ್ಯ ಕಟ್ಟಡ/ಮಾಲ್‌ಗಳೆಷ್ಟಿರುತ್ತವೆ, ಅವುಗಳಿಂದ ವಸೂಲಾಗುತ್ತಿರುವ ಕಂದಾಯವೆಷ್ಟು, ಕಂದಾಯವನ್ನು ನಿಗಧಿಪಡಿಸಿಕೊಳ್ಳದಿರುವ ಹಾಗೂ ತಪ್ಪಾಗಿ ನಿಗಧಿಪಡಿಸಿಕೊಂಡಿರುವ ಸ್ವತ್ತು/ಕಟ್ಟಡದ ಮಾಲೀಕರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ವಿವಿರವನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

-2-

ಸಮಿತಿಯ ಸದಸ್ಯರು ಮಾತನಾಡುತ್ತಾ, ನಮ್ಮ ವಾರ್ಡ್‌ಗಳಲ್ಲಿ ಬಹಳಷ್ಟು ಬಹುಮಹಡಿಗಳ ಕಟ್ಟಡಗಳ ಮಾಲೀಕರು, ವಾಣಿಜ್ಯ ಕಟ್ಟಡದ ಮಾಲೀಕರು ಸರಿಯಾಗಿ ಕಂದಾಯವನ್ನು ನಿಗಧಿಪಡಿಸಿಕೊಂಡಿಲ್ಲದಿರುವುದು ನಮ್ಮಗಳ ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ತಾವುಗಳು ಕೂಡಲೇ ತಪಾಸಣೆ ಮಾಡಿ ಕೂಡಲೇ ಸರಿಯಾಗಿ ಅಂದರೆ ಎಸ್.ಎ.ಎಸ್. 2008-2009 ರಿಂದ 2010-11ರಲ್ಲಿ ನಮೂದಿಸಿರುವ ಕಂದಾಯವನ್ನು ನಿಗಧಿಪಡಿಸಿಕೊಳ್ಳುವಂತೆ ಅಂತಹ ಮಾಲೀಕರುಗಳಿಗೆ ನೋಟೀಸ್‌ಗಳನ್ನು ಜಾರಿ ಮಾಡಿ ಕಂದಾಯವನ್ನು ವಸೂಲು ಮಾಡಲು ಕ್ರಮ

ಕೈಗೊಂಡಲ್ಲಿ ನಗರ ಪಾಲಿಕೆಯ ಆರ್ಥಿಕ ಸ್ಥಿತಿಯು ಉತ್ತಮಗೊಳ್ಳುವುದರಲ್ಲಿ ಯಾವುದೇ ಸಂಶವಿರುವುದಿಲ್ಲವೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಕಂದಾಯ)ರವರು ದಿನಾಂಕ:30-11-2010ರವರೆಗೆ ಕಟ್ಟಡದ ಮಾಲೀಕರು ತಮ್ಮ ತಮ್ಮ ಕಟ್ಟಡಗಳಿಗೆ ತಾವೇ ಕಂದಾಯವನ್ನು ನಿಗಧಿಪಡಿಸಿಕೊಳ್ಳುವ ಅವಕಾಶವನ್ನು ನೀಡಲಾಗಿರುತ್ತದೆ. 30-11-2010 ಮುಗಿದ ನಂತರ ಆಯಾ ವಲಯ ಮಟ್ಟದಲ್ಲಿ ಸರ್ವೆ ಕಾರ್ಯವನ್ನು ಪ್ರಾರಂಭಿಸಿ ದಿನಾಂಕ:15-12-2010ರಿಂದ ಕಂದಾಯವನ್ನು ನಿಗಧಿಪಡಿಸಿಕೊಂಡಿರದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲಾಗುವುದು. ಅಂತಹ ಕಟ್ಟಡಗಳಿಗೆ ಕಂದಾಯವನ್ನು ನಿಗಧಿಪಡಿಸಿ ಒಟ್ಟ ಪಾವತಿಸಬೇಕಾದ ಕಂದಾಯದ ಮೊತ್ತಕ್ಕೆ ಮಾಸಿಕ ಶೇಕಡ ರೂ.2/-ರಂತೆ ಬಡ್ಡಿಯನ್ನು ವಿಧಿಸಲಾಗುವುದು. ದಿನಾಂಕ:30-11-2010 ಮುಗಿದ ನಂತರ ವಲಯವಾರು ವಾರ್ಷಿಕ ವಸೂಲಾಗಿರುವ ಕಂದಾಯದ ಮೊತ್ತವನ್ನು ಕ್ರೂಢೀಕರಿಸಿ ಸಮಿತಿಯ ಮುಂದೆ ಮಂಡಿಸಲಾಗುವುದು. ತಪ್ಪಾಗಿ ಲೆಕ್ಕಾಚಾರ ಮಾಡಿ ಕಂದಾಯವನ್ನು ನಿಗಧಿಪಡಿಸಿಕೊಂಡಿರುವ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ಕಂದಾಯದ 2 ಪಟ್ಟು ದಂಡವನ್ನು ವಿಧಿಸಿ (ಅಂದರೆ ಉದಾ:- ಕಂದಾಯದ ಮೊತ್ತ ರೂ.5000/-ಗಳಾಗಿದ್ದರೆ ಅದರ ಮೇಲೆ ರೂ.10000/-ಗಳಷ್ಟು ದಂಡವನ್ನು ವಿಧಿಸಿದರೆ ಒಟ್ಟು ರೂ.15000/-ಗಳಾಗುತ್ತದೆ.) ವಸೂಲು ಮಾಡಲು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

ಕೊನೆಯದಾಗಿ ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕತೆಯು ಇಂದಿನ ದಿನಗಳಲ್ಲಿ ಅತಿ ಪ್ರಮುಖವಾಗಿದ್ದು, ಅದನ್ನು ಕ್ರೂಡೀಕರಿಸಿ ನಗರ ಪಾಲಿಕೆಯ ಕೀರ್ತಿ ಪಾತಕೆಯನ್ನು ಎತ್ತರಕ್ಕೆ ಏರಿಸುವ ಗುರುತರವಾದ ಜವಾಬ್ದಾರಿಯು ಚುನಾಯಿತ ಪ್ರತಿನಿಧಿಗಳಾದ ನಮ್ಮ ಮತ್ತು ಅಧಿಕಾರಿಗಳಾದ ನಿಮ್ಮ ಮೇಲಿರುತ್ತದೆ. ಈ ವಿಷಯವನ್ನು ಅರಿತು ನಾವು ಮತ್ತು ನೀವುಗಳು ಸೇರಿ ಶ್ರಮಿಸೋಣವೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:22-11-2010ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಆಯುಕ್ತರು |
| 02 | ಎಂ.ಕೃಷ್ಣಪ್ಪ | ಸದಸ್ಯರು | ಕೌನ್ಸಿಲ್ ಕಾರ್ಯದರ್ಶಿ |
| 03 | ಎಂ.ಮುನಿರಾಜು | ಸದಸ್ಯರು | ಜಂಟಿ ಆಯುಕ್ತರು (ದಾಸರಹಳ್ಳಿ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಉಪ ಆಯುಕ್ತರು (ಕಂದಾಯ) |
| 05 | ಡಾ॥ಎಸ್.ರಾಜು | ಸದಸ್ಯರು | ಉಪ ಕಾನೂನು ಅಧಿಕಾರಿಗಳು |
| 06 | ರಮೇಶ್ ರಾಜು ಕೆ. | ಸದಸ್ಯರು | ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳು |

| | | | |
|---|---|---|---|
| 07 | ಮುನಿರತ್ನಮ್ಮ | ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿಗಳು |
| 08 | ಶಾಹೀನ್ ತಾಜ್ | ಸದಸ್ಯರು | ಎಲ್ಲಾ ವಲಯದ ಆರೋಗ್ಯಾಧಿಕಾರಿಗಳು |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ಮುಖ್ಯವಾಗಿ ಇಂದಿನ ವಿಷಯವೆಂದರೆ ಅಪೀಲುಗಳ ಸ್ಥಾಯಿ ಸಮಿತಿಗೆ ಇದ್ದಂತಹ ಅಧಿಕಾರವನ್ನು ಯಾವುದೇ ನಿರ್ಣಯವನ್ನು ಕೈಗೊಳ್ಳದೆ ಏಕಾಏಕಿ ದಿನಾಂಕ:20-08-2003ರಂದು ಮೊಟಕುಗೊಳಿಸಲಾಗಿಸಿ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣಕ್ಕೆ ಅಧಿಕಾರವನ್ನು ನೀಡಲಾಗಿರುತ್ತದೆ. ಈ ಬಗ್ಗೆ ಕೌನ್ಸಿಲ್ ಕಾರ್ಯಲಯದಲ್ಲಿ ಪರಿಶೀಲಿಸಲಾಗಿ ಯಾವುದೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ಮುಂದೆಯಾಗಲೀ ಅಪೀಲುಗಳ ಸ್ಥಾಯಿಸಮಿತಿಯ ಮುಂದೆಯಾಗಲೀ ಮಂಡಿಸದೇ ತೀರ್ಮಾನ ಕೈಗೊಂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

2002-03ರಲ್ಲಿ ಕೆ.ಎಂ.ಸಿ.ಕಾಯ್ದೆ ಕಲಂ 308, 309 ಮತ್ತು 321(3)ರಕ್ಕೆ ತಿದ್ದುಪಡಿ ತಂದು 443ಎ ರಡಿ ನಕ್ಷೆ ಮಂಜೂರಾತಿ ಪಡೆದು ನಕ್ಷೆಗೆ ವಿರುದ್ಧವಾಗಿ ಅಥವಾ ಅನಧಿಕೃವಾಗಿ ನಿರ್ಮಾಣ ಮಾಡಿದಂತಹ ಸಂದರ್ಭದಲ್ಲಿ 321(3)ರಡಿ ನೀಡಿದ (Confirmation Order) ಸ್ಥಿರೀಕರಣ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಅಪೀಲು ಸಲ್ಲಿಸಲು ಅವಕಾಶ ಮಾಡಿಕೊಡಲಾಗಿರುತ್ತದೆ. ಆದರೆ ಸದರಿ ಅವಕಾಶವನ್ನು ಉಪಯೋಗಿಸಿಕೊಂಡು ನಕ್ಷೆಗೆ ವಿರುದ್ಧವಾಗಿ ಹಾಗೂ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಿದಂತಹ ಕಟ್ಟಡದ ಮಾಲೀಕರು 321(1)ಮತ್ತು (2)ರಡಿ ನೀಡಿರುವ ನೋಟೀಸ್‌ಗಳಿಗೆ ಕರ್ನಾಟಕ ಉಚ್ಚನ್ಯಾಯಾಲಯ ಮತ್ತು ಸಿಟಿ ಸಿವಿಲ್ ನ್ಯಾಯಾಲಯದಲ್ಲೂ ಸಹ ತಡೆಯಾಜ್ಞೆ ಪಡೆಯುತ್ತಿರುತ್ತಾರೆ. ಅಲ್ಲದೆ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣವು ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ನೀಡಲಾದ (Confirmation Order) ಸ್ಥಿರೀಕರಣ ಆದೇಶದ ಮೇಲೆ ವ್ಯವಹರಿಸಬಹುದಾಗಿದ್ದು 321(1) ಮತ್ತು (2)ರಡಿಯಲ್ಲಿ ನೀಡಲಾದ ನೋಟೀಸ್‌ಗಳಿಗೂ ಸಹ ತಡೆಯಾಜ್ಞೆ ನೀಡುತ್ತಿರುವುದನ್ನು ಗಮನಿಸಬಹುದಾಗಿರುತ್ತದೆ. ಕೆ.ಎ.ಟಿ. ಮುಂದೆ 2003ರಿಂದ ಇದುವರೆವಿಗೂ ದಾಖಲಾದ ಪ್ರಕರಣಗಳಲ್ಲಿ ಸುಮಾರು 681 ಪ್ರಕರಣಗಳು ಬಾಕಿ ಉಳಿದಿರುತ್ತವೆ. 2003ರಲ್ಲಿ ದಾಖಲಾಗಿರುವ ಸುಮಾರ 54 ಪ್ರಕರಣಗಳು ಇದುವರೆವಿಗೂ ಇತ್ಯರ್ಥವಾಗದೆ ಬಾಕಿ ಉಳಿದಿರುವುದು ಕಂಡು ಬರುತ್ತದೆ. ಇದುವರೆವಿಗೂ ನ್ಯಾಯಾಧೀಕರಣದ ಮುಂದೆ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ಅನಧಿಕೃತ ಮತ್ತು ಒತ್ತುವರಿ ಮಾಡಿರುವಂತಹ ಕಟ್ಟಡಗಳನ್ನು ತೆರವುಗೊಳಿಸಿರುವುದು ಕಂಡು ಬಂದಿರುವುದಿಲ್ಲ.

ಭಾರತ ಸಂವಿಧಾನಾತ್ಮಕ ಕಾಯ್ದೆ 74ರ ತಿದ್ದುಪಡಿಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿರುತ್ತದೆ. ಆದರೆ 2003ರಲ್ಲಿ ಚುನಾಯಿತ ನಗರ ಪಾಲಿಕೆ ಸದಸ್ಯರಿದ್ದರೂ ಸಹ ಅಪೀಲು ಸ್ಥಾಯಿ ಸಮಿತಿಯ ಹಾಗೂ ಮಹಾಗನಗರ ಪಾಲಿಕೆ ಸಭೆಯ ಅನುಮೋದನೆ ಪಡೆಯದೆ 308, 309 ಮತ್ತು 321(3)ಗಳಿಗೆ ತಿದ್ದು ಪಡಿ

ತಂದು ಸಮಿತಿ ಮತ್ತು ನಗರ ಪಾಲಿಕೆಯ ಸಭೆಯ ಅಧಿಕಾರವನ್ನು ಮೊಟಕುಗೊಳಿಸಿರುವುದು ಸಮಂಜಸವಾಗಿರುವುದಿಲ್ಲ. ಅಪೀಲು ಸ್ಥಾಯಿ ಸಮಿತಿಯಿಂದ ಹಿಂದಕ್ಕೆ ಪಡೆದು ಕೆ.ಎ.ಟಿ. ಮುಂದೆ ಪ್ರಕರಣಗಳನ್ನು ಮಂಡಿಸಿದ ನಂತರ ನಗರ ಪಾಲಿಕೆಗೆ ಆಗಿರುವ ಅನುಕೂಲಗಳೇನು ಎಂಬ ಬಗ್ಗೆ ಯೋಚಿಸಬೇಕಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ 61(ಎ) ಪ್ರಕಾರ ಅಪೀಲಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳ ಬಗ್ಗೆ ವ್ಯವಹರಿಸುವ ಅಧಿಕಾರವು ಅಪೀಲು ಸ್ಥಾಯಿ ಸಮಿತಿಗೆ ಇರುತ್ತದೆ.

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೆ.ಎಂ.ಸಿ. ಕಾಯ್ದೆ ಕಲಂ 308, 309 ಮತ್ತು 321(3)ರ ಪ್ರಕರಣಗಳ ಅಡಿಯಲ್ಲಿ ಆಯುಕ್ತರು ತೆಗೆದುಕೊಂಡ ಕ್ರಮದ ಬಗ್ಗೆ ಭಾದಿತನಾದ ಯಾವಬ್ಬ ವ್ಯಕ್ತಿಯು ಕಲಂ 443 ಎ (1) (i)ರಡಿ ದಿನಾಂಕ:20-08-2003ರಿಂದ ಜಾರಿಗೆ ಬರುವಂತೆ ಕರ್ನಾಟಕ ಅಪೀಲು ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ಕಲಂನ್ನು ತಿದ್ದುಪಡಿ ಮಾಡುವುದಕ್ಕಿಂತ ಮೊದಲು ಸದರಿ ಮೇಲ್ಮನವಿಗಳನ್ನು ಪಾಲಿಕೆಯ ಅಪೀಲುಗಳ ಸ್ಥಾಯಿ ಸಮತಿಯ ಮುಂದೆ ಸಲ್ಲಿಸಿಕೊಳ್ಳಲು ಅವಕಾಶವಿತ್ತು. ಈ ತಿದ್ದುಪಡಿಯ ನಂತರ ಅಪೀಲುಗಳ ಸ್ಥಾಯಿ ಸಮಿತಿಯ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. ಆದಕಾರಣ ದಿನಾಂಕ:20-08-2003ರಿಂದ ಜಾರಿಗೆ ಬರುವಂತೆ ಮಾಡಲಾಗಿರುವ ಕಲಂ 443 ಎ (1) (i)ಗೆ ತಿದ್ದುಪಡಿ ಮಾಡಿರುವುದನ್ನು ಪುನರ್ ಪರಿಶೀಲಿಸಿ ಪುನಃ ಸದರಿ ಕಲಂನ್ನು ತಿದ್ದುಪಡಿ ಮಾಡಿ ಪಾಲಿಕೆಯ ಅಪೀಲುಗಳ ಸ್ಥಾಯಿ ಸಮಿತಿಗೆ ಮೇಲ್ಮನವಿ ಅಧಿಕಾರವನ್ನು 20-08-2003ರ ಹಿಂದೆ ಇರುವಂತೆಯೇ ನೀಡುವಂತೆ ಆಯುಕ್ತರು ಸರ್ಕಾರವನ್ನು ಕೋರುವುದೆಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಮಾನ್ಯ ಆಯುಕ್ತರು ಮಾತನಾಡುತ್ತಾ, ಸದರಿ ವಿಷಯದ ಬಗ್ಗೆ ಸಮಿತಿ ಮತ್ತು ಪಾಲಿಕೆಯ ಸಭೆಯು ಒಂದು ನಿರ್ಣಯವನ್ನು ಕೈಗೊಂಡಲ್ಲಿ ಅದನ್ನು ಕಾನೂನಿನ ಪ್ರಕಾರ ಸರ್ಕಾರಕ್ಕೆ ಕಳಹಿಸಿಕೊಡಲು ಕ್ರಮ ವಹಿಸಲಾಗುವುದೆಂದು ಸಮಿತಿಯ ಗಮನಕ್ಕೆ ತಂದರು.

ಆಯುಕ್ತರು ಮುಖ್ಯವಾಗಿ ನಗರ ಪಾಲಿಕೆಯ ಆರ್ಥಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮಾತನಾಡುತ್ತಾ, ಎಲ್ಲಾ ವಲಯಗಳಲ್ಲಿ ಸರ್ವೆ ಕಾರ್ಯವು ನಡೆಯುತ್ತಿದ್ದು ಈಗಾಗಲೇ ಶೇಕಡ 80ರಷ್ಟು ಸರ್ವೆ ಕಾರ್ಯವು ಮುಗಿದಿರುತ್ತದೆ. ಪೂರ್ಣವಾಗಿ ಸರ್ವೆ ಕಾರ್ಯವನ್ನು ಈ ತಿಂಗಳ 30ರೊಳಗೆ ಮುಗಿಸುವಂತೆ ಆದೇಶಿಸಿದ್ದು,



ಕಂದಾಯವನ್ನು ನಿಗಧಿಪಡಿಸಿಕೊಳ್ಳದ ಹಾಗೂ ತಪ್ಪಾಗಿ ಕಂದಾಯವನ್ನು ನಿಗಧಿಪಸಿಕೊಂಡಿರುವ ಕಟ್ಟಡದ ಮಾಲೀಕರನ್ನು ಗುರುತಿಸಿ ದಿನಾಂಕ:15-12-2010ರಿಂದ ನೋಟೀಸ್ ಜಾರಿ ಮಾಡಲು ಆದೇಶಿಸಲಾಗುತ್ತದೆ. ಕಂದಾಯವನ್ನು ನಿಗಧಿಪಡಿಸಿಕೊಂಡಿರದ ಮಾಲೀಕರಿಗೆ ನೋಟೀಸ್ ಜಾರಿ ಮಾಡಲಾಗುವುದು. ಅಂತಹ ಕಟ್ಟಡಗಳಿಗೆ ಕಂದಾಯವನ್ನು ನಿಗಧಿಪಡಿಸಿ ಒಟ್ಟ ಪಾವತಿಸಬೇಕಾದ ಕಂದಾಯದ ಮೊತ್ತಕ್ಕೆ ಮಾಸಿಕ ಶೇಕಡ ರೂ.2/-ರಂತೆ ಬಡ್ಡಿಯನ್ನು ವಿಧಿಸಲಾಗುವುದು. ದಿನಾಂಕ:30-11-2010 ಮುಗಿದ ನಂತರ ವಲಯವಾರು ವಾರ್ಷಿಕ ವಸೂಲಾಗಿರುವ ಕಂದಾಯದ ಮೊತ್ತವನ್ನು ಕ್ರೂಢೀಕರಿಸಿ ಸಮಿತಿಯ ಮುಂದೆ ಮಂಡಿಸಲಾಗುವುದು. ತಪ್ಪಾಗೆ ಲೆಕ್ಕಾಚಾರ ಮಾಡಿ ಕಂದಾಯವನ್ನು ನಿಗಧಿಪಡಿಸಿಕೊಂಡಿರುವ ಮಾಲೀಕರಿಗೆ ನೋಟೀಸ್ ಜಾರಿ ಮಾಡಿ ಕಂದಾಯದ 2 ಪಟ್ಟು ದಂಡವನ್ನು ವಿಧಿಸಿ (ಅಂದರೆ ಉದಾ:-ಕಂದಾಯದ ಮೊತ್ತ ರೂ.5000/-ಗಳಾಗಿದ್ದರೆ ಅದರ ಮೇಲೆ ರೂ.10000/-ಗಳಷ್ಟು ದಂಡವನ್ನು ವಿಧಿಸಿದರೆ ಒಟ್ಟು ರೂ.15000/-ಗಳಾಗುತ್ತದೆ.) ವಸೂಲು ಮಾಡಲು ಕ್ರಮ ವಹಿಸಲು ಸಿದ್ದತೆ ಮಾಡಿಕೊಳ್ಳಲಾಗುತ್ತಿದೆ.

ಮುಖ್ಯವಾಗಿ ಇಂದು ಶಾಲಾ/ಕಾಲೇಜು, ಖಾಸಗಿ ಆಸ್ಪತ್ರೆಗಳು/ನರ್ಸಿಂಗ್‌ಹೋಮಗಳಿಗೆ ಕಂದಾಯದಲ್ಲಿ ರಿಯಾಯಿತಿ ನೀಡುತ್ತಿರುವ ಬಗ್ಗೆ ಯಾಚಿಸಬೇಕಾಗಿದೆ. ಕಾರಣ ಅವರುಗಳು ವಾಣಿಜ್ಯ ಮಟ್ಟದಲ್ಲಿ ವಿದ್ಯಾಸಂಸ್ಥೆಗಳನ್ನು ನಡೆಸುತ್ತಿದ್ದು ಅವರಿಗೇಕೆ ರಿಯಾಯಿತಿ ಎಂಬುದು ತಿಳಿಯುತ್ತಿಲ್ಲ. ಒಂದು ವೇಳೆ ಎಲ್ಲಾ ಶಾಲಾ/ಕಾಲೇಜು ಮತ್ತು ಖಾಸಗಿ ಆಸ್ಪತ್ರೆಗಳು/ನರ್ಸಿಂಗ್‌ಹೋಮಗಳಿಗೆ ಅವರವರ ವಲಯಕ್ಕೆ ಒಳಪಡುವ ವಾಣಿಜ್ಯ ದರದಲ್ಲಿ ಕಂದಾಯವನ್ನು ನಿಗಧಿಪಡಿಸಿದ್ದೇ ಆದರೆ ನಗರ ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಉತ್ತುಂಗ ಮಟ್ಟಕ್ಕೆ ತರವುದರಲ್ಲಿ ಯಾವುದೇ ಸಂಶಯವಿರುವುದಿಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ.

ಈಗಾಗಲೇ ಎಲ್ಲಾ ವಲಯಗಳಲ್ಲಿ ಟ್ರೇಡ್ ಲೈಸೆನ್ಸ್ ಅಂದೋಲವನ್ನು ಹಮ್ಮಿಕೊಳ್ಳಲು ಸೂಚಿಸಲಾಗಿರುತ್ತದೆ. ನಗರದ ಶುಚಿತ್ವಕ್ಕೆ ಹೆಚ್ಚಿನ ಆಧ್ಯತೆಯನ್ನು ನೀಡಲಾಗಿದ್ದು, ಪರಿಸರ ಅಭಿಯಂತರರುಗಳನ್ನು ಸಹ ನೇಮಿಸಲಾಗಿರುತ್ತದೆ. ಈ ಬಗ್ಗೆ ಎಲ್ಲಾ ಅಧಿಕಾರಿಗಳು ಮತ್ತು ಚುನಾಯಿತ ಜನ ಪ್ರತಿನಿಧಿಗಳಾದ ತಾವುಗಳು ಜೊತೆಯಲ್ಲಿ ಸೇರಿ ಕಾರ್ಯನಿರ್ವಹಿಸೋಣ. ನಗರದ ನಾಗರೀಕರು ಅಧಿಕಾರಿಗಳನ್ನಾಗಲೀ ಜನ ಪ್ರತಿನಿಧಿಗಳಾದ ನಿಮ್ಮನ್ನಾಗಲೀ ಯಾರನ್ನೇ ದೂಷಿಸಿದರೂ ಸಹ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ದೂಷಿಸಿದಂತಾಗುತ್ತದೆ. ಆದುದರಿಂದ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಒಟ್ಟುಗೂಡಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಭಿವೃದ್ಧಿಗೋಸ್ಕರ ಶ್ರಮಿಸುವುದೆಂದು ತಿಳಿಸಿದರು.

ಸಮಿತಿಯ ಸದಸ್ಯರು ಮಾತನಾಡುತ್ತಾ, ಕನ್ನಡ ಶಾಲೆ/ಕಾಲೇಜುಗಳಿಗೆ ಹಾಗೂ ರೋಗಿಗಳಿಗೆ ಉಚಿತವಾಗಿ ಸೇವೆ ಸಲ್ಲಿಸುವಂತಹ ಆಸ್ಪತ್ರೆ/ನರ್ಸಿಂಗ್ ಹೋಂಗಳಿಗೆ ಮಾತ್ರ ಕಂದಾಯದಲ್ಲಿ ರಿಯಾಯಿತಿಯನ್ನು ನೀಡುವುದು. ಟ್ರೇಡ್ ಲೈಸೆನ್ಸ್ ಮೇಳವನ್ನು ನಮ್ಮ ಗಮನಕ್ಕೆ ತಂದಿರುವುದಿಲ್ಲವೆಂದು ಅಧ್ಯಕ್ಷರು ಮತ್ತು ಸದಸ್ಯರುಗಳು ಆಕ್ಷೇಪ ವ್ಯಕ್ತಪಡಿಸಿದರು.

-4-

ಈ ಬಗ್ಗೆ ಆಯುಕ್ತರು ಸಭೆಯಲ್ಲಿ ಹಾಜರಿದ್ದ ಮುಖ್ಯ ಆರೋಗ್ಯಾಧಿಕಾರಿಯವರಿಗೆ ಮೌಖಿಕವಾಗಿ ಆದೇಶ ನೀಡಿ ಕೂಡಲೇ ಮತ್ತೊಮ್ಮೆ ಸುತ್ತೋಲೆಯನ್ನು ಹೊರಡಿಸಿ ಪ್ರತಿ ವಾರ್ಡಿನ ಸದಸ್ಯರಿಗೆ ಕಳುಹಿಸಿ ಅವರನ್ನು ಸಹ ಮೇಳದಲ್ಲಿ ಭಾಗಿಗಳನ್ನಾಗಿ ಮಾಡಿಕೊಂಡು ಟ್ರೇಡ್ ಲೈಸೆನ್ಸ್ ಮೇಳವನ್ನು ನಡೆಸುವಂತೆ ಸೂಚಿಸಿದರು.

ಕೊನೆಯದಾಗಿ ಅಧ್ಯಕ್ಷರು ಆಯುಕ್ತರು ತಿಳಿಸಿರುವಂತೆ ನಗರ ಪಾಲಿಕೆಯ ಕೀರ್ತಿ ಪಾತಕೆಯನ್ನು ಎತ್ತರಕ್ಕೆ ಏರಿಸುವ ಗುರುತರವಾದ ಜವಾಬ್ದಾರಿಯು ಚುನಾಯಿತ ಪ್ರತಿನಿಧಿಗಳಾದ ನಮ್ಮ ಮತ್ತು ಅಧಿಕಾರಿಗಳಾದ ನಿಮ್ಮ ಮೇಲಿರುತ್ತದೆ. ಈ ವಿಷಯವನ್ನು ಅರಿತು ನಾವು ಮತ್ತು ನೀವು ಸೇರಿ ಕಾರ್ಯನಿರ್ವಹಿಸೋಣವೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ವಿಷಯ ಸಂಖ್ಯೆ:ಅಸ್ಥಾಸ/01/2010-11

ವಿಷಯ:- ಕೆ.ಎಂ.ಸಿ.ಕಾಯ್ದೆ ಕಲಂ 443 ಎ (1) (i)ರಡಿ ದಿನಾಂಕ:20-08-2003ರಿಂದ ಜಾರಿಗೆ ಬರುವಂತೆ ಕರ್ನಾಟಕ ಅಪೀಲು ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ಕಲಂಗೆ ತಿದ್ದುಪಡಿ ತರುವ ಬಗ್ಗೆ.

* * * * *

ಪ್ರಸ್ತಾವನೆ:- ಸಭೆಯಲ್ಲಿ ಹಾಜರಿದ್ದ ಆಯುಕ್ತರು ಮತ್ತು ಅಧಿಕಾರಿಗಳೊಡನೆ ಸುದೀರ್ಘವಾಗಿ ಚರ್ಚಿಸಲಾಯಿತು. ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಮಂಜೂರಾದ ನಕ್ಷೆಗೆ ವಿರುದ್ಧವಾಗಿ ಹಾಗೂ ಅನಧಿಕೃತವಾಗಿ

ಕಟ್ಟಡಗಳನ್ನು ನಿರ್ಮಾಣ ಮಾಡಿದಂತಹ ಕಟ್ಟಡದ ಮಾಲೀಕರಿಗೆ ಅನಧಿಕೃವಾಗಿ ನಿರ್ಮಾಣ ಮಾಡಿರುವ ಕಟ್ಟಡ ಅಥವಾ ನಡುಜಾಗೆಗಳನ್ನು ತೆರವುಗೊಳಿಸುವಂತೆ ಕೆ.ಎಂ.ಸಿ.ಕಾಯ್ದೆ ಕಲಂ 321(1) ಮತ್ತು (2)ರಡಿ (Provisional Order) ತಾತ್ಕಾಲಿಕ ಆದೇಶವನ್ನು ಜಾರಿ ಮಾಡುತ್ತಿದ್ದು, ಸದರಿ ತಾತ್ಕಾಲಿಕ ಆದೇಶದಂತೆ ಮಾಲೀಕರು ಉಲ್ಲಘಂನೆ ಮಾಡಿರುವ ಭಾಗಗಳನ್ನು ತೆರವುಗೊಳಿಸುವುದು ಅಥವಾ ಅವುಗಳನ್ನು ಸಮರ್ಥನೆ ಮಾಡಿಕೊಂಡು ಉತ್ತರಗಳನ್ನು ನೀಡುತ್ತಿರುತ್ತಾರೆ. ಮಾಲೀಕರು ನೀಡಿದಂತಹ ಉತ್ತರ, ಉಲ್ಲಂಘನೆಗಳನ್ನು/ಅನಧಿಕೃತ ಕಟ್ಟಡವನ್ನು ತೆರುವುಗೊಳಿಸಿದ ಪ್ರಮಾಣವು ತೃಪ್ತಿಕರವಾಗಿಲ್ಲದಿದ್ದಲ್ಲಿ ನಿಮ್ಮ ಕಟ್ಟಡದ ವ್ಯತಿರಿಕ್ತ ಭಾಗ/ಅನಧಿಕೃತ ಕಟ್ಟಡಗಳನ್ನು ಏಕೆ ತೆರವುಗೊಳಿಸಬಾರದೆಂದು ಕೆ.ಎಂ.ಸಿ.ಕಾಯ್ದೆ ಕಲಂ 321(3) (Confirmation Order) ಸ್ಥಿರೀಕರಣ ಆದೇಶವನ್ನು ಜಾರಿ ಮಾಡಲಾಗುತ್ತಿದೆ. ಸದರಿ ಸ್ಥಿರೀಕರಣ ಆದೇಶವನ್ನು ಪ್ರಶ್ನಿಸಿ ಮಾಲೀಕರು ಅಪೀಲು ಸ್ಥಾಯಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸುತ್ತಿದ್ದರು.

2002–03ರಲ್ಲಿ ಕೆ.ಎಂ.ಸಿ.ಕಾಯ್ದೆ ಕಲಂ 308, 309 ಮತ್ತು 321(3)ರಕ್ಕೆ ತಿದ್ದುಪಡಿ ತಂದು 443ಎ ರಡಿ ನಕ್ಷೆ ಮಂಜೂರಾತಿ ಪಡೆದು ನಕ್ಷೆಗೆ ವಿರುದ್ಧವಾಗಿ ಅಥವಾ ಅನಧಿಕೃವಾಗಿ ನಿರ್ಮಾಣ ಮಾಡಿದಂತಹ ಸಂದರ್ಭದಲ್ಲಿ 321(3)ರಡಿ ನೀಡಿದ (Confirmation Order) ಸ್ಥಿರೀಕರಣ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಅಪೀಲು ಸಲ್ಲಿಸಲು ಅವಕಾಶ ಮಾಡಿಕೊಡಲಾಗಿರುತ್ತದೆ. ಆದರೆ ಸದರಿ ಅವಕಾಶವನ್ನು ಉಪಯೋಗಿಸಿಕೊಂಡು ನಕ್ಷೆಗೆ ವಿರುದ್ಧವಾಗಿ ಹಾಗೂ ಅನಧಿಕೃತವಾಗಿ ಕಟ್ಟಡಗಳನ್ನು ನಿರ್ಮಾಣ ಮಾಡಿದಂತಹ ಕಟ್ಟಡದ ಮಾಲೀಕರು 321(1)ಮತ್ತು (2)ರಡಿ ನೀಡಿರುವ ನೋಟೀಸ್‌ಗಳಿಗೆ ಕರ್ನಾಟಕ ಉಚ್ಚನ್ಯಾಯಾಲಯ ಮತ್ತು ಸಿಟಿ ಸಿವಿಲ್ ನ್ಯಾಯಾಲಯದಲ್ಲೂ ಸಹ ತಡೆಯಾಜ್ಞೆ ಪಡೆಯುತ್ತಿರುತ್ತಾರೆ. ಅಲ್ಲದೆ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣವು ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ನೀಡಲಾದ (Confirmation Order) ಸ್ಥಿರೀಕರಣ ಆದೇಶವನ್ನು ಮೇಲೆ ವ್ಯವಹರಿಸಬಹುದಾಗಿದ್ದು 321(1) ಮತ್ತು (2)ರಡಿಯಲ್ಲಿ ನೀಡಲಾದ ನೋಟೀಸ್‌ಗಳಿಗೂ ಸಹ ತಡೆಯಾಜ್ಞೆ ನೀಡುತ್ತಿರುವುದನ್ನು ಗಮನಿಸಬಹುದಾಗಿರುತ್ತದೆ. ಕೆ.ಎ.ಟಿ. ಮುಂದೆ 2003ರಿಂದ ಇದುವರೆವಿಗೂ ದಾಖಲಾದ ಪ್ರಕರಣಗಳಲ್ಲಿ ಸುಮಾರು 681 ಪ್ರಕರಣಗಳು ಬಾಕಿ ಉಳಿದಿರುತ್ತವೆ. 2003ರಲ್ಲಿ ದಾಖಲಾಗಿರುವ ಸುಮಾರ 54 ಪ್ರಕರಣಗಳು ಇದುವರೆವಿಗೂ ಇತ್ಯರ್ಥವಾಗದೆ ಬಾಕಿ ಉಳಿದಿರುವುದು ಕಂಡು ಬರುತ್ತದೆ. ಇದುವರೆವಿಗೂ ನ್ಯಾಯಾಧೀಕರಣದ ಮುಂದೆ ದಾಖಲಾದ ಪ್ರಕರಣಗಳಿಗೆ ಸಂಬಂಧಿಸಿದಂತೆ ಯಾವುದೇ ಅನಧಿಕೃತ ಮತ್ತು ಒತ್ತುವರಿಗೆ ಮಾಡಿರುವಂತಹ ಕಟ್ಟಡಗಳನ್ನು ತೆರವುಗೊಳಿಸಿರುವುದು ಕಂಡು ಬಂದಿರುವುದಿಲ್ಲ.



ಕರ್ನಾಟಕ ಉಚ್ಚನ್ಯಾಯಾಲಯ ಮತ್ತು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಕೆ.ಎಂ.ಸಿ.ಕಾಯ್ದೆ ಕಲಂ 321(1) ಮತ್ತು (2)ರಡಿಯಲ್ಲಿ ನೀಡಲಾಗುವು (Provisional Order) ತಾತ್ಕಾಲಿಕ ಆದೇಶಕ್ಕೆ ತಡೆಯಾಜ್ಞೆ ಪಡೆಯುತ್ತಿರುತ್ತಾರೆ. ಅಲ್ಲದೆ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣವು ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ (Confirmation Order) ಸ್ಥಿರೀಕರಣ ಆದೇಶದ ಮೇಲೆ ವ್ಯವಹರಿಸಬಹುದಾಗಿದ್ದು 321(1) ಮತ್ತು (2)ರಡಿಲ್ಲಿ ನೀಡಲಾದ (Provisional Order) ತಾತ್ಕಾಲಿಕ ಆದೇಶಗಳಿಗೂ ತಡೆಯಾಜ್ಞೆ ಪಡೆಯುತ್ತಿರುವುದರಿಂದ ನಗರ ಪಾಲಿಕೆಯು ತಕ್ಷಣಕ್ಕೆ ಯಾವುದೇ ಕ್ರಮ ಜರುಗಿಸಲು ಸಾಧ್ಯವಾಗುತ್ತಿಲ್ಲ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ (Confirmation Order) ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ ನಂತರ ಮಾತ್ರ ಕೇವಿಯೆಟ್ ದಾಖಲಿಸಬಹುದಾಗಿರುತ್ತದೆ. ಇಲ್ಲದಿದ್ದಲ್ಲಿ ಕೇವಿಯೆಟ್ ದಾಖಲಿಸಲು ಬರುವುದಿಲ್ಲವೆಂದು ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1) ಮತ್ತು (2)ರಡಿಯಲ್ಲಿ ನೀಡಲಾಗುವ (Provisional Order) ತಾತ್ಕಾಲಿಕ ಆದೇಶಕ್ಕೆ ಕಟ್ಟಡದ ಮಾಲೀಕರು ತಡೆಯಾಜ್ಞೆ ಪಡೆಯುತ್ತಿರುವುದರಿಂದ ನಗರ ಪಾಲಿಕೆಯು ಹೆಚ್ಚಿನ ಮಾನವ ಸಂಪನ್ಮೂಲವನ್ನು ಉಪಯೋಗಿಸಬೇಕಾಗಿರುತ್ತದೆಂದು ಸಭೆಯಲ್ಲಿ ಹಾಜರಿದ್ದ ಕಾನೂನು ಅಧಿಕಾರಿಗಳು ತಿಳಿಸಿರುತ್ತಾರೆ.

ಭಾರತ ಸಂಮಿಧಾನಾತ್ಮಕ ಕಾಯ್ದೆ 74ರ ತಿದ್ದುಪಡಿಯಲ್ಲಿ ಚುನಾಯಿತ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿರುತ್ತದೆ. ಆದರೆ 2003ರಲ್ಲಿ ಚುನಾಯಿತ ನಗರ ಪಾಲಿಕೆ ಸದಸ್ಯರಿದ್ದರೂ ಸಹ ಅಪೀಲು ಸ್ಥಾಯಿ ಸಮಿತಿಯ ಹಾಗೂ ಮಹಾಗನಗರ ಪಾಲಿಕೆ ಸಭೆಯ ಅನುಮೋದನೆ ಪಡೆಯದೆ 308, 309 ಮತ್ತು 321(3)ಗಳಿಗೆ ತಿದ್ದು ಪಡಿ ತಂದು ಸಮಿತಿ ಮತ್ತು ನಗರ ಪಾಲಿಕೆಯ ಸಭೆಯ ಅಧಿಕಾರವನ್ನು ಮೊಟಕುಗೊಳಿಸಿರುವುದು ಸಮಂಜಸವಾಗಿರುವುದಿಲ್ಲ. ಅಪೀಲು ಸ್ಥಾಯಿ ಸಮಿತಿಯಿಂದ ಹಿಂದಕ್ಕೆ ಪಡೆದು ಕೆ.ಎ.ಟಿ. ಮುಂದೆ ಪ್ರಕರಣಗಳನ್ನು ಮಂಡಿಸಿದ ನಂತರ ನಗರ ಪಾಲಿಕೆಗೆ ಆಗಿರುವ ಅನುಕೂಳಗಳೇನು ಎಂಬ ಬಗ್ಗೆ ಯೋಚಿಸಬೇಕಾಗಿರುತ್ತದೆ. ಇತ್ತೀಚೆಗೆ ಕೇಂದ್ರ ಸರ್ಕಾರವು ಚುನಾಯಿತ ಪ್ರತಿ ನಿಧಿಗಳಿಗೆ

ಹೆಚ್ಚಿನ ಅಧಿಕಾರವನ್ನು ನೀಡಲಾಗುತ್ತದೆಂದು ಪುನರಚ್ಚರಿಸಲಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ 61(ಎ) ಪ್ರಕಾರ ಅಪೀಲಿಗೆ ಸಂಬಂಧಿಸಿದ ಎಲ್ಲಾ ಪ್ರಕರಣಗಳ ಬಗ್ಗೆ ವ್ಯವಹರಿಸುವ ಅಧಿಕಾರವು ಅಪೀಲು ಸ್ಥಾಯಿ ಸಮಿತಿಗೆ ಇರುತ್ತದೆ.

**ದಿನಾಂಕ:22–11–2010: ನಿರ್ಣಯ:–** ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಕೆ.ಎಂ.ಸಿ. ಕಾಯ್ದೆ ಕಲಂ 308, 309 ಮತ್ತು 321(3)ರ ಪ್ರಕರಣಗಳ ಅಡಿಯಲ್ಲಿ ಆಯುಕ್ತರು ತೆಗೆದುಕೊಂಡ ಕ್ರಮದ ಬಗ್ಗೆ ಭಾದಿತನಾದ ಯಾವಬ್ಬ ವ್ಯಕ್ತಿಯು ಕಲಂ 443 ಎ (1) (i)ರಡಿ ದಿನಾಂಕ:20–08–2003ರಿಂದ ಜಾರಿಗೆ ಬರುವಂತೆ ಕರ್ನಾಟಕ ಅಪೀಲು ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದ್ದು, ಸದರಿ ಕಲಂನ್ನು ತಿದ್ದುಪಡಿ ಮಾಡುವುದಕ್ಕಿಂತ ಮೊದಲು ಸದರಿ ಮೇಲ್ಮನವಿಗಳನ್ನು ಪಾಲಿಕೆಯ ಅಪೀಲುಗಳ ಸ್ಥಾಯಿ ಸಮತಿಯ ಮುಂದೆ ಸಲ್ಲಿಸಿಕೊಳ್ಳಲು ಅವಕಾಶವಿತ್ತು. ಈ ತಿದ್ದುಪಡಿಯ ನಂತರ ಅಪೀಲುಗಳ ಸ್ಥಾಯಿ ಸಮಿತಿಯ ಅಧಿಕಾರವನ್ನು ಮೊಟಕುಗೊಳಿಸಲಾಗಿದೆ. **ಆದಕಾರಣ ದಿನಾಂಕ:20–08–2003ರಿಂದ ಜಾರಿಗೆ ಬರುವಂತೆ ಮಾಡಲಾಗಿರುವ ಕಲಂ 443 ಎ (1) (i)ಗೆ ತಿದ್ದುಪಡಿ ಮಾಡಿರುವುದನ್ನು ಪುನರ್ ಪರಿಶೀಲಿಸಿ ಪುನಃ ಸದರಿ ಕಲಂನ್ನು ತಿದ್ದುಪಡಿ ಮಾಡಿ ಪಾಲಿಕೆಯ ಅಪೀಲುಗಳ ಸ್ಥಾಯಿ ಸಮಿತಿಗೆ ಮೇಲ್ಮನವಿ ಅಧಿಕಾರವನ್ನು ನೀಡುವಂತೆ ಸರ್ಕಾರವನ್ನು ಕೋರಲು ತೀರ್ಮಾನಿಸಿ ಈ ವಿಷಯವನ್ನು ಪಾಲಿಕೆಯ ಸಭೆಯ ಮುಂದೆ ನಿರ್ಣಯಕ್ಕಾಗಿ ಮಂಡಿಸುವುದೆಂದು ತೀರ್ಮಾನಿಸಲಾಯಿತು.**

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

1. *ಪೂಜ್ಯ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಪೂಜ್ಯ ಮಹಾಪೌರರ ಅವಗಾಹನೆಗಾಗಿ ತರಲು ಕೋರಿದೆ.*
2. *ಉಪ ಮಹಾಪೌರರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಉಪ ಮಹಾಪೌರರ ಅವಗಾಹನೆಗಾಗಿ ತರಲು ಕೋರಿದೆ.*
3. *ಆಡಳಿತ ಪಕ್ಷದ ನಾಯಕರು/ವಿರೋಧ ಪಕ್ಷದ ನಾಯಕರು/ಜೆ.ಡಿ.ಎಸ್.ಪಕ್ಷದ ನಾಯಕರುಗಳಿಗೆ ಮಾಹಿತಿಗಾಗಿ ಕಳುಹಿಸಿದೆ.*
4. *ಎಲ್ಲಾ ನಗರ ಪಾಲಿಕೆ ಸದಸ್ಯರುಗಳಿಗೆ.*
5. *ಆಯುಕ್ತರರವರ ಆಪ್ತ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ ಆಯುಕ್ತರ ಅವಗಾಹನೆಗಾಗಿ ತರಲು ಕೋರಿದೆ.*
6. *ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.*
7. *ಕಛೇರಿ ಕಡತಕ್ಕೆ*

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:25-11-2010ರಂದು ಬೆಳಗ್ಗೆ 11-00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಪೂರ್ವ ಮತ್ತು ಮಹಾದೇವಪುರ ವಲಯದ ಅಧೀಕ್ಷಕ ಅಭಿಯಂತರರು |
| 03 | ಎಂ.ಮುನಿರಾಜು | ಸದಸ್ಯರು | ಪೂರ್ವ ಮತ್ತು ಮಹಾದೇವಪುರ ವಲಯದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಪೂರ್ವ ಮತ್ತು ಮಹಾದೇವಪುರ ವಲಯದ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| 05 | ಡಾ॥ಎಸ್.ರಾಜು | ಸದಸ್ಯರು | ಪೂರ್ವ ಮತ್ತು ಮಹಾದೇವಪುರ ವಲಯದ ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, 2003-04ರಿಂದ ಇದುವರೆವಿಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶವನ್ನು ಅನಧಿಕೃತ ಅಥವಾ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿರುವ ಮಾಲೀಕರಿಗೆ ಜಾರಿ ಮಾಡಿದಾಗ, ಸಂಬಂಧಪಟ್ಟ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸದರಿ ಎರಡು ಆದೇಶಗಳ ಮೇಲೆ ನ್ಯಾಯಾಲಯಗಳು ಯಾವ ಯಾವ ರೀತಿಯ ಆದೇಶಗಳನ್ನು ನೀಡಿರುತ್ತವೆ. ಯಥಾಸ್ಥಿತಿ ಆದೇಶವನ್ನು ನೀಡಿರುವಂತ ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಕಟ್ಟಡವು ಯಥಾಸ್ಥಿತಿ ಆದೇಶ ನೀಡಿದ ದಿನದಂದು ಯಾವ ರೀತಿಯಲ್ಲಿತ್ತೋ ಅದೇ ಮಾದರಿಯಲ್ಲಿ ಇರಬೇಕಾಗುತ್ತದೆ. ಯಥಾಸ್ಥಿತಿ ಆದೇಶವನ್ನು ಪಡೆದಿರುವ ಎಷ್ಟು ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಯಥಾಸ್ಥಿತಿಯಲ್ಲೇ ಕಟ್ಟಡವು ಇರುತ್ತದೆಂಬ ಬಗ್ಗೆ ಸಭೆಗೆ ಮಾಹಿತಿಯನ್ನು ಸಮಿತಿಗೆ ಒದಗಿಸುವಂತೆ ಸೂಚಿಸಿದರು.

-2-

ಆರೋಗ್ಯ ಇಲಾಖೆಯಲ್ಲಿ ಅಪೀಲು ಕೋರಿ ಬರುತ್ತಿರುವ ಅರ್ಜಿಗಳನ್ನು ಸ್ವೀಕರಿಸುತ್ತಿರುವುದಿಲ್ಲವೆಂಬುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ಹಲವಾರು ಸಾರ್ವಜನಿಕರು ದೂರವಾಣಿ ಮುಖಾಂತರ ನನ್ನಲ್ಲಿ ಮನವಿ ಮಾಡಿಕೊಂಡಿರುತ್ತಾರೆ. ಯಾವ ಕಾರಣಕ್ಕಾಗಿ ನೀವು ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಹಾಗೂ ಹಿಂಬರಹ ನೀಡುವಾಗ ಸ್ಪಷ್ಟವಾದ ಕಾರಣವನ್ನು ತಿಳಿಸಿ ತಿರಸ್ಕರಿಸಲಾಗಿರುತ್ತೆಂಬ ಬಗ್ಗೆಯೂ ಸಹ ನಮೂದಿಸದೆ ಹಿಂಬರಹ ನೀಡುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಐಷಾರಾಮಿ ಹೋಟೆಲ್, ಮಧ್ಯಮ ವರ್ಗದ ಹೋಟೆಲ್ ಹಾಗೂ ದರ್ಶಿನಿಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಬೃಹತ್ ಮತ್ತು ಸಣ್ಣ ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು ಎಷ್ಟು ಮೀನು ಮಾರಾಟ ಮಳಿಗೆಗಳು, ಮಾಂಸ ಮಾರಾಟ ಮಳಿಗೆಗಳು ಹಾಗೂ ಕೋಳಿ ಮಾರಾಟ ಕೇಂದ್ರಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ದಿನಿತ್ಯದ ಕಸವನ್ನು ನಿರ್ವಹಿಸುತ್ತಿರುವ ಸ್ಥಳ ಹಾಗೂ ಗುತ್ತಿಗೆದಾರರ ವಿವಿರಗಳನ್ನು ಒದಗಿಸುವುದು. ಆರೋಗ್ಯ ಇಲಾಖೆಯು ನೀಡುತ್ತಿರುವ ಪರವಾನಗಿ ಶುಲ್ಕದಿಂದ ನಗರ ಪಾಲಿಕೆಗೆ ಬರುತ್ತಿರುವ ಆಧಾಯವೆಷ್ಟು. ದಿನ ನಿತ್ಯ

ಸಂಗ್ರಹವಾಗುವ ತ್ಯಾಜ್ಯವನ್ನು ವಿಲೇ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಒದಗಿಸುವುದೆಂದು ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಅಭಿಯಂತರರುಗಳು ನಕ್ಷೆ ಉಲ್ಲಂಘನೆ ಅಥವಾ ಅನಧಿಕೃತ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ-308ರಡಿ ಮಾಹಿತಿ ಕೇಳಿ ನೋಟೀಸ್‌ಗೆ ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದರೆ ನೋಟೀಸ್‌ಗಳಿಗೆ ಮಾಲೀಕರು ಘನ ಉಚ್ಚನ್ಯಾಯಾಲಯದಲೋ ಅಥವಾ ಸಿಟಿ ಸಿವಿಲ್ ನ್ಯಾಯಾಲಯದಲ್ಲೋ ತಡೆಯಾಜ್ಞೆ ಪಡೆಯುತ್ತಾರೆ. ಮಾಲೀಕರು ಪಡೆದಂತಹ ತಡೆಯಾಜ್ಞೆಗಳು ನಮಗೆ ತಲುಪವ ವೇಳಗೆ ಮಾಲೀಕರು ಕಟ್ಟಡವನ್ನು ಪೂರ್ಣಗೊಳಿಸಿಕೊಂಡು ಬಿಡುತ್ತಾರೆ. ಈ ವಿಷಯದಲ್ಲಿ ಘನ ಉಚ್ಚ ನ್ಯಾಯಾಲಯ ಮತ್ತು ಸಿಟಿ ಸಿವಿಲ್ ನ್ಯಾಯಾಲಗಳ ವ್ಯಾಪ್ತಿಯಲ್ಲಿ ತಡೆಯಾಜ್ಞೆ ನೀಡದಂತೆ ಕೋರಬಹುದಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ ನಂತರ ಮಾಲೀಕರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣವನ್ನು ದಾಖಲಿಸಬಹುದಾಗಿರುತ್ತದೆ. ಆದುದರಿಂದ ಈ ವಿಷಯದ ಬಗ್ಗೆ ಸಮಿತಿಯು ಕೂಲಂಕಷವಾಗಿ ಪರಿಶೀಲನೆ ಮಾಡಿ ನಕ್ಷೆ ಉಲ್ಲಂಘನೆ ಅಥವಾ ಅನಧಿಕೃತ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ ಕಲಂ 308ರಡಿ ಮಾಹಿತಿ ಕೇಳಿ ನೋಟೀಸ್‌ಗೆ ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ ನಂತರ ಅಂತಹ ಮಾಲೀಕರು ಸಮಿತಿಯ ಮುಂದೆ ಬಂದಲ್ಲಿ, ಸಮಿತಿಯು ಯಾವ ಕ್ರಮವನ್ನು ಕೈಗೊಂಡಿರುತ್ತದೆಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಯುವುದರಿಂದ ಕಾನೂನಿನಡಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗೆ ಅವಕಾಶವಾಗುತ್ತದೆಂದು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

-3-

ಸಭೆಯಲ್ಲಿ ಹಾಜರಿದ್ದ ಆರೋಗ್ಯವೈದ್ಯಾಧಿಕಾರಿಗಳು ತಮ್ಮ ವ್ಯಾಪ್ತಿಗಳಲ್ಲಿ ಯಾವುದೇ ಅಪೀಲು ಕೋರಿ ಬರುವಂತಹ ಅರ್ಜಿಗಳನ್ನು ತಿರಸ್ಕರಿಸಿರುವುದಿಲ್ಲ. ಹಾಗೂ ನಗರ ಪಾಲಿಕೆಯ ಆರೋಗ್ಯ ಬೈಲಾ ಪ್ರಕಾರವೇ ಕಾರ್ಯನಿರ್ವಹಿಸುತ್ತಿದ್ದೇವೆ. ಈ ಸಾಲಿನಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟ್ರೇಡ್ ಲೈಸೆನ್ಸ್ ಮೇಳವನ್ನು ಜಾರಿಗೆ ತಂದಿದ್ದು, ಸಾರ್ವಜನಿಕರಿಂದ ಒಳ್ಳೆಯ ಅಭಿಪ್ರಾಯ ವ್ಯಕ್ತವಾಗಿರುತ್ತದೆ ಹಾಗೂ ಹೆಚ್ಚಿನ ಸಾರ್ವಜನಿಕರು ಸ್ಪಂದಿಸಿರುತ್ತಾರೆ. ದಿನ ನಿತ್ಯದ ತ್ಯಾಜ್ಯ ವಿಂಗಡಣೆ ಮತ್ತು ವಿಲೇವಾರಿ ಕಾರ್ಯವು ನಡೆಯುತ್ತಿದ್ದು, ಡಂಪ್ಪಿಂಗ್ ಯಾರ್ಡಿನ ಸಮಸ್ಯೆ ಇರುತ್ತದೆಂದು ತಿಳಿಸಿರುತ್ತಾರೆ. ಹಾಗೂ ಸಿಬ್ಬಂದಿಗಳ ಕೊರತೆ ಇದ್ದು ಕಾಲಮಿತಿಯೊಳಗೆ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲದಿರುವ ಬಗ್ಗೆ ತಿಳಿಸುತ್ತಾ, ಮಾನ್ಯ ಅಧ್ಯಕ್ಷರು ಕೋರಿರುವ ಮಾಹಿತಿಗಳನ್ನು ಒಟ್ಟುಗೂಡಿಸಿ ಸಮಿತಿಯ ಮುಂದೆ ಮಂಡಿಸುವುದಾಗಿ ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ನಗರದ ನಾಗರೀಕರಿಗೆ ಮೂಲಭೂತ ಸೌಕರ್ಯಗಳನ್ನು ನೀಡುವ ನಿಟ್ಟಿನಲ್ಲಿ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ನಿವುಗಳು ಒಟ್ಟಾಗಿ ಸೇರಿ ಕಾರ್ಯನಿರ್ವಹಿಸೋಣವೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,

ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:25-11-2010ರಂದು ಮಧ್ಯಾಹ್ನ 3-00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಪಶ್ಚಿಮ ಮತ್ತು ದಾಸರಹಳ್ಳಿ ವಲಯದ ಅಧೀಕ್ಷಕ ಅಭಿಯಂತರರು |
| 03 | ಎಂ.ಮುನಿರಾಜು | ಸದಸ್ಯರು | ಪಶ್ಚಿಮ ಮತ್ತು ದಾಸರಹಳ್ಳಿ ವಲಯದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಪಶ್ಚಿಮ ಮತ್ತು ದಾಸರಹಳ್ಳಿ ವಲಯದ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| 05 | ಡಾ॥ಎಸ್.ರಾಜು | ಸದಸ್ಯರು | ಪಶ್ಚಿಮ ಮತ್ತು ದಾಸರಹಳ್ಳಿ ವಲಯದ ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, 2003-04ರಿಂದ ಇದುವರೆವಿಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶವನ್ನು ಅನಧಿಕೃತ ಅಥವಾ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿರುವ ಮಾಲೀಕರಿಗೆ ಜಾರಿ ಮಾಡಿದಾಗ, ಸಂಬಂಧಪಟ್ಟ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸದರಿ ಎರಡು ಆದೇಶಗಳ ಮೇಲೆ ನ್ಯಾಯಾಲಯಗಳು ಯಾವ ಯಾವ ರೀತಿಯ ಆದೇಶಗಳನ್ನು ನೀಡಿರುತ್ತವೆ. ಯಥಾಸ್ಥಿತಿ ಆದೇಶವನ್ನು ನೀಡಿರುವಂತ ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಕಟ್ಟಡವು ಯಥಾಸ್ಥಿತಿ ಆದೇಶ ನೀಡಿದ ದಿನದಂದು ಯಾವ ರೀತಿಯಲ್ಲಿತ್ತೋ ಅದೇ ಮಾದರಿಯಲ್ಲಿ ಇರಬೇಕಾಗುತ್ತದೆ. ಯಥಾಸ್ಥಿತಿ ಆದೇಶವನ್ನು ಪಡೆದಿರುವ ಎಷ್ಟು ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಯಥಾಸ್ಥಿತಿಯಲ್ಲೇ ಕಟ್ಟಡವು ಇರುತ್ತದೆಂಬ ಬಗ್ಗೆ ಸಭೆಗೆ ಮಾಹಿತಿಯನ್ನು ಸಮಿತಿಗೆ ಒದಗಿಸುವಂತೆ ಸೂಚಿಸಿದರು.

-2-

ಆರೋಗ್ಯ ಇಲಾಖೆಯಲ್ಲಿ ಅಪೀಲು ಕೋರಿ ಬರುತ್ತಿರುವ ಅರ್ಜಿಗಳನ್ನು ಸ್ವೀಕರಿಸುತ್ತಿರುವುದಿಲ್ಲವೆಂಬುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ಹಲವಾರು ಸಾರ್ವಜನಿಕರು ದೂರವಾಣಿ ಮುಖಾಂತರ ನನ್ನಲ್ಲಿ ಮನವಿ ಮಾಡಿಕೊಂಡಿರುತ್ತಾರೆ. ಯಾವ ಕಾರಣಕ್ಕಾಗಿ ನೀವು ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಹಾಗೂ ಹಿಂಬರಹ ನೀಡುವಾಗ ಸ್ಪಷ್ಟವಾದ ಕಾರಣವನ್ನು ತಿಳಿಸಿ ತಿರಸ್ಕರಿಸಲಾಗಿರುತ್ತೆಂಬ ಬಗ್ಗೆಯೂ ಸಹ ನಮೂದಿಸದೆ ಹಿಂಬರಹ ನೀಡುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಐಷಾರಾಮಿ ಹೋಟೆಲ್, ಮಧ್ಯಮ ವರ್ಗದ ಹೋಟೆಲ್ ಹಾಗೂ ದರ್ಶಿನಿಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಬೃಹತ್ ಮತ್ತು ಸಣ್ಣ ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು ಎಷ್ಟು ಮೀನು ಮಾರಾಟ ಮಳಿಗೆಗಳು, ಮಾಂಸ ಮಾರಾಟ ಮಳಿಗೆಗಳು ಹಾಗೂ ಕೋಳಿ ಮಾರಾಟ ಕೇಂದ್ರಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ದಿನಿತ್ಯದ ಕಸವನ್ನು ನಿರ್ವಹಿಸುತ್ತಿರುವ ಸ್ಥಳ ಹಾಗೂ ಗುತ್ತಿಗೆದಾರರ ವಿವಿರಗಳನ್ನು ಒದಗಿಸುವುದು. ಆರೋಗ್ಯ ಇಲಾಖೆಯು ನೀಡುತ್ತಿರುವ ಪರವಾನಗಿ ಶುಲ್ಕದಿಂದ ನಗರ ಪಾಲಿಕೆಗೆ ಬರುತ್ತಿರುವ ಆಧಾಯವೆಷ್ಟು. ದಿನ ನಿತ್ಯ ಸಂಗ್ರಹವಾಗುವ ತ್ಯಾಜ್ಯವನ್ನು ವಿಲೇ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಒದಗಿಸುವುದೆಂದು ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಅಭಿಯಂತರರುಗಳು ನಕ್ಷೆ ಉಲ್ಲಂಘನೆ ಅಥವಾ ಅನಧಿಕೃತ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ-308ರಡಿ ಮಾಹಿತಿ ಕೇಳಿ ನೋಟೀಸ್‌ಗೆ ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ

ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದರೆ ನೋಟೀಸ್‌ಗಳಿಗೆ ಮಾಲೀಕರು ಘನ ಉಚ್ಚನ್ಯಾಯಾಲಯದಲೋ ಅಥವಾ ಸಿಟಿ ಸಿವಿಲ್ ನ್ಯಾಯಾಲಯದಲ್ಲೋ ತಡೆಯಾಜ್ಞೆ ಪಡೆಯುತ್ತಾರೆ. ಮಾಲೀಕರು ಪಡೆದಂತಹ ತಡೆಯಾಜ್ಞೆಗಳು ನಮಗೆ ತಲುಪವ ವೇಳಗೆ ಮಾಲೀಕರು ಕಟ್ಟಡವನ್ನು ಪೂರ್ಣಗೊಳಿಸಿಕೊಂಡು ಬಿಡುತ್ತಾರೆ. ಈ ವಿಷಯದಲ್ಲಿ ಘನ ಉಚ್ಚ ನ್ಯಾಯಾಲಯ ಮತ್ತು ಸಿಟಿ ಸಿವಿಲ್ ನ್ಯಾಯಾಲಗಳ ವ್ಯಾಪ್ತಿಯಲ್ಲಿ ತಡೆಯಾಜ್ಞೆ ನೀಡದಂತೆ ಕೋರಬಹುದಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ ನಂತರ ಮಾಲೀಕರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣವನ್ನು ದಾಖಲಿಸಬಹುದಾಗಿರುತ್ತದೆ. ಆದುದರಿಂದ ಈ ವಿಷಯದ ಬಗ್ಗೆ ಸಮಿತಿಯು ಕೂಲಂಕಷವಾಗಿ ಪರಿಶೀಲನೆ ಮಾಡಿ ನಕ್ಷೆ ಉಲ್ಲಂಘನೆ ಅಥವಾ ಅನಧಿಕೃತ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ ಕಲಂ 308ರಡಿ ಮಾಹಿತಿ ಕೇಳಿ ನೋಟೀಸ್‌ಗೆ ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ ನಂತರ ಅಂತಹ ಮಾಲೀಕರು ಸಮಿತಿಯ ಮುಂದೆ ಬಂದಲ್ಲಿ, ಸಮಿತಿಯು ಯಾವ ಕ್ರಮವನ್ನು ಕೈಗೊಂಡಿರುತ್ತದೆಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಯುವುದರಿಂದ ಕಾನೂನಿನಡಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗೆ ಅವಕಾಶವಾಗುತ್ತದೆಂದು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

-3-

ಸಭೆಯಲ್ಲಿ ಹಾಜರಿದ್ದ ಆರೋಗ್ಯವೈದ್ಯಾಧಿಕಾರಿಗಳು ತಮ್ಮ ವ್ಯಾಪ್ತಿಗಳಲ್ಲಿ ಯಾವುದೇ ಅಪೀಲು ಕೋರಿ ಬರುವಂತಹ ಅರ್ಜಿಗಳನ್ನು ತಿರಸ್ಕರಿಸಿರುವುದಿಲ್ಲ. ಹಾಗೂ ನಗರ ಪಾಲಿಕೆಯ ಆರೋಗ್ಯ ಬೈಲಾ ಪ್ರಕಾರವೇ ಕಾರ್ಯನಿರ್ವಹಿಸುತ್ತಿದ್ದೇವೆ. ಈ ಸಾಲಿನಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟ್ರೇಡ್ ಲೈಸೆನ್ಸ್ ಮೇಳವನ್ನು ಜಾರಿಗೆ ತಂದಿದ್ದು, ಸಾರ್ವಜನಿಕರಿಂದ ಒಳ್ಳೆಯ ಅಭಿಪ್ರಾಯ ವ್ಯಕ್ತವಾಗಿರುತ್ತದೆ ಹಾಗೂ ಹೆಚ್ಚಿನ ಸಾರ್ವಜನಿಕರು ಸ್ಪಂದಿಸಿರುತ್ತಾರೆ. ದಿನ ನಿತ್ಯದ ತ್ಯಾಜ್ಯ ವಿಂಗಡಣೆ ಮತ್ತು ವಿಲೇವಾರಿ ಕಾರ್ಯವು ನಡೆಯುತ್ತಿದ್ದು, ಡಂಪ್ಪಿಂಗ್ ಯಾರ್ಡಿನ ಸಮಸ್ಯೆ ಇರುತ್ತದೆಂದು ತಿಳಿಸಿರುತ್ತಾರೆ. ಹಾಗೂ ಸಿಬ್ಬಂದಿಗಳ ಕೊರತೆ ಇದ್ದು ಕಾಲಮಿತಿಯೊಳಗೆ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲದಿರುವ ಬಗ್ಗೆ ತಿಳಿಸುತ್ತಾ, ಮಾನ್ಯ ಅಧ್ಯಕ್ಷರು ಕೋರಿರುವ ಮಾಹಿತಿಗಳನ್ನು ಒಟ್ಟುಗೂಡಿಸಿ ಸಮಿತಿಯ ಮುಂದೆ ಮಂಡಿಸುವುದಾಗಿ ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ನಗರದ ನಾಗರೀಕರಿಗೆ ಮೂಲಭೂತ ಸೌಕರ್ಯಗಳನ್ನು ನೀಡುವ ನಿಟ್ಟಿನಲ್ಲಿ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ನಿವುಗಳು ಒಟ್ಟಾಗಿ ಸೇರಿ ಕಾರ್ಯನಿರ್ವಹಿಸೋಣವೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:26-11-2010ರಂದು ಬೆಳಗ್ಗೆ 11-00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಬೊಮ್ಮನಹಳ್ಳಿ ಮತ್ತು ಯಲಹಂಕ ವಲಯದ ಅಧೀಕ್ಷಕ ಅಭಿಯಂತರರು |
| 03 | ಎಂ.ಮುನಿರಾಜು | ಸದಸ್ಯರು | ಬೊಮ್ಮನಹಳ್ಳಿ ಮತ್ತು ಯಲಹಂಕ ವಲಯದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಬೊಮ್ಮನಹಳ್ಳಿ ಮತ್ತು ಯಲಹಂಕ ವಲಯದ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| 05 | ಡಾ॥ಎಸ್.ರಾಜು | ಸದಸ್ಯರು | ಬೊಮ್ಮನಹಳ್ಳಿ ಮತ್ತು ಯಲಹಂಕ ವಲಯದ ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, 2003-04ರಿಂದ ಇದುವರೆವಿಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶವನ್ನು ಅನಧಿಕೃತ ಅಥವಾ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿರುವ ಮಾಲೀಕರಿಗೆ

ಜಾರಿ ಮಾಡಿದಾಗ, ಸಂಬಂಧಪಟ್ಟ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸದರಿ ಎರಡು ಆದೇಶಗಳ ಮೇಲೆ ನ್ಯಾಯಾಲಯಗಳು ಯಾವ ಯಾವ ರೀತಿಯ ಆದೇಶಗಳನ್ನು ನೀಡಿರುತ್ತವೆ. ಯಥಾಸ್ಥಿತಿ ಆದೇಶವನ್ನು ನೀಡಿರುವಂತ ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಕಟ್ಟಡವು ಯಥಾಸ್ಥಿತಿ ಆದೇಶ ನೀಡಿದ ದಿನದಂದು ಯಾವ ರೀತಿಯಲ್ಲಿತ್ತೋ ಅದೇ ಮಾದರಿಯಲ್ಲಿ ಇರಬೇಕಾಗುತ್ತದೆ. ಯಥಾಸ್ಥಿತಿ ಆದೇಶವನ್ನು ಪಡೆದಿರುವ ಎಷ್ಟು ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಯಥಾಸ್ಥಿತಿಯಲ್ಲೇ ಕಟ್ಟಡವು ಇರುತ್ತದೆಂಬ ಬಗ್ಗೆ ಸಭೆಗೆ ಮಾಹಿತಿಯನ್ನು ಸಮಿತಿಗೆ ಒದಗಿಸುವಂತೆ ಸೂಚಿಸಿದರು.

-2-

ಆರೋಗ್ಯ ಇಲಾಖೆಯಲ್ಲಿ ಅಪೀಲು ಕೋರಿ ಬರುತ್ತಿರುವ ಅರ್ಜಿಗಳನ್ನು ಸ್ವೀಕರಿಸುತ್ತಿರುವುದಿಲ್ಲವೆಂಬುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ಹಲವಾರು ಸಾರ್ವಜನಿಕರು ದೂರವಾಣಿ ಮುಖಾಂತರ ನನ್ನಲ್ಲಿ ಮನವಿ ಮಾಡಿಕೊಂಡಿರುತ್ತಾರೆ. ಯಾವ ಕಾರಣಕ್ಕಾಗಿ ನೀವು ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಹಾಗೂ ಹಿಂಬರಹ ನೀಡುವಾಗ ಸ್ಪಷ್ಟವಾದ ಕಾರಣವನ್ನು ತಿಳಿಸಿ ತಿರಸ್ಕರಿಸಲಾಗಿರುತ್ತೆಂಬ ಬಗ್ಗೆಯೂ ಸಹ ನಮೂದಿಸದೆ ಹಿಂಬರಹ ನೀಡುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಐಷಾರಾಮಿ ಹೋಟೆಲ್, ಮಧ್ಯಮ ವರ್ಗದ ಹೋಟೆಲ್ ಹಾಗೂ ದರ್ಶಿನಿಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಬೃಹತ್ ಮತ್ತು ಸಣ್ಣ ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು ಎಷ್ಟು ಮೀನು ಮಾರಾಟ ಮಳಿಗೆಗಳು, ಮಾಂಸ ಮಾರಾಟ ಮಳಿಗೆಗಳು ಹಾಗೂ ಕೋಳಿ ಮಾರಾಟ ಕೇಂದ್ರಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ದಿನಿತ್ಯದ ಕಸವನ್ನು ನಿರ್ವಹಿಸುತ್ತಿರುವ ಸ್ಥಳ ಹಾಗೂ ಗುತ್ತಿಗೆದಾರರ ವಿವಿರಗಳನ್ನು ಒದಗಿಸುವುದು. ಆರೋಗ್ಯ ಇಲಾಖೆಯು ನೀಡುತ್ತಿರುವ ಪರವಾನಗಿ ಶುಲ್ಕದಿಂದ ನಗರ ಪಾಲಿಕೆಗೆ ಬರುತ್ತಿರುವ ಆಧಾಯವೆಷ್ಟು. ದಿನ ನಿತ್ಯ ಸಂಗ್ರಹವಾಗುವ ತ್ಯಾಜ್ಯವನ್ನು ವಿಲೇ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಒದಗಿಸುವುದೆಂದು ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಅಭಿಯಂತರರುಗಳು ನಕ್ಷೆ ಉಲ್ಲಂಘನೆ ಅಥವಾ ಅನಧಿಕೃತ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ-308ರಡಿ ಮಾಹಿತಿ ಕೇಳಿ ನೋಟೀಸ್‌ಗೆ ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದರೆ ನೋಟೀಸ್‌ಗಳಿಗೆ ಮಾಲೀಕರು ಘನ ಉಚ್ಚನ್ಯಾಯಾಲಯದಲೋ ಅಥವಾ ಸಿಟಿ ಸಿವಿಲ್ ನ್ಯಾಯಾಲಯದಲ್ಲೋ ತಡೆಯಾಜ್ಞೆ ಪಡೆಯುತ್ತಾರೆ. ಮಾಲೀಕರು ಪಡೆದಂತಹ ತಡೆಯಾಜ್ಞೆಗಳು ನಮಗೆ ತಲುಪವ ವೇಳಗೆ ಮಾಲೀಕರು ಕಟ್ಟಡವನ್ನು ಪೂರ್ಣಗೊಳಿಸಿಕೊಂಡು ಬಿಡುತ್ತಾರೆ. ಈ ವಿಷಯದಲ್ಲಿ ಘನ ಉಚ್ಚ ನ್ಯಾಯಾಲಯ ಮತ್ತು ಸಿಟಿ ಸಿವಿಲ್ ನ್ಯಾಯಾಲಗಳ ವ್ಯಾಪ್ತಿಯಲ್ಲಿ ತಡೆಯಾಜ್ಞೆ ನೀಡದಂತೆ ಕೋರಬಹುದಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ ನಂತರ

ಮಾಲೀಕರು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣವನ್ನು ದಾಖಲಿಸಬಹುದಾಗಿರುತ್ತದೆ. ಆದುದರಿಂದ ಈ ವಿಷಯದ ಬಗ್ಗೆ ಸಮಿತಿಯು ಕೂಲಂಕಷವಾಗಿ ಪರಿಶೀಲನೆ ಮಾಡಿ ನಕ್ಷೆ ಉಲ್ಲಂಘನೆ ಅಥವಾ ಅನಧಿಕೃತ ಕಟ್ಟಡದ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ ಕಲಂ 308ರಡಿ ಮಾಹಿತಿ ಕೇಳಿ ನೋಟೀಸ್‌ಗೆ ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ ನಂತರ ಅಂತಹ ಮಾಲೀಕರು ಸಮಿತಿಯ ಮುಂದೆ ಬಂದಲ್ಲಿ, ಸಮಿತಿಯು ಯಾವ ಕ್ರಮವನ್ನು ಕೈಗೊಂಡಿರುತ್ತದೆಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಯುವುದರಿಂದ ಕಾನೂನಿನಡಿಯಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಇಲಾಖೆಗೆ ಅವಕಾಶವಾಗುತ್ತದೆಂದು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

-3-

ಸಭೆಯಲ್ಲಿ ಹಾಜರಿದ್ದ ಆರೋಗ್ಯವೈದ್ಯಾಧಿಕಾರಿಗಳು ತಮ್ಮ ವ್ಯಾಪ್ತಿಗಳಲ್ಲಿ ಯಾವುದೇ ಅಪೀಲು ಕೋರಿ ಬರುವಂತಹ ಅರ್ಜಿಗಳನ್ನು ತಿರಸ್ಕರಿಸಿರುವುದಿಲ್ಲ. ಹಾಗೂ ನಗರ ಪಾಲಿಕೆಯ ಆರೋಗ್ಯ ಬೈಲಾ ಪ್ರಕಾರವೇ ಕಾರ್ಯನಿರ್ವಹಿಸುತ್ತಿದ್ದೇವೆ. ಈ ಸಾಲಿನಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಟ್ರೇಡ್ ಲೈಸೆನ್ಸ್ ಮೇಳವನ್ನು ಜಾರಿಗೆ ತಂದಿದ್ದು, ಸಾರ್ವಜನಿಕರಿಂದ ಒಳ್ಳೆಯ ಅಭಿಪ್ರಾಯ ವ್ಯಕ್ತವಾಗಿರುತ್ತದೆ ಹಾಗೂ ಹೆಚ್ಚಿನ ಸಾರ್ವಜನಿಕರು ಸ್ಪಂದಿಸಿರುತ್ತಾರೆ. ದಿನ ನಿತ್ಯದ ತ್ಯಾಜ್ಯ ವಿಂಗಡಣೆ ಮತ್ತು ವಿಲೇವಾರಿ ಕಾರ್ಯವು ನಡೆಯುತ್ತಿದ್ದು, ಡಂಪ್ಪಿಂಗ್ ಯಾರ್ಡಿನ ಸಮಸ್ಯೆ ಇರುತ್ತದೆಂದು ತಿಳಿಸಿರುತ್ತಾರೆ. ಹಾಗೂ ಸಿಬ್ಬಂದಿಗಳ ಕೊರತೆ ಇದ್ದು ಕಾಲಮಿತಿಯೊಳಗೆ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತಿಲ್ಲದಿರುವ ಬಗ್ಗೆ ತಿಳಿಸುತ್ತಾ, ಮಾನ್ಯ ಅಧ್ಯಕ್ಷರು ಕೋರಿರುವ ಮಾಹಿತಿಗಳನ್ನು ಒಟ್ಟುಗೂಡಿಸಿ ಸಮಿತಿಯ ಮುಂದೆ ಮಂಡಿಸುವುದಾಗಿ ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ನಗರದ ನಾಗರೀಕರಿಗೆ ಮೂಲಭೂತ ಸೌಕರ್ಯಗಳನ್ನು ನೀಡುವ ನಿಟ್ಟಿನಲ್ಲಿ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ನಿವುಗಳು ಒಟ್ಟಾಗಿ ಸೇರಿ ಕಾರ್ಯನಿರ್ವಹಿಸೋಣವೆಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಅಪೀಲು ಸ್ಥಾಯಿ ಸಮಿತಿಯ ದಿನಾಂಕ:26-11-2010ರಂದು ಮಧ್ಯಾಹ್ನ 3-00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ದಕ್ಷಿಣ ಮತ್ತು ಆರ್.ಆರ್.ನಗರ ವಲಯದ ಅಧೀಕ್ಷಕ ಅಭಿಯಂತರರು |
| 03 | ಎಂ.ಮುನಿರಾಜು | ಸದಸ್ಯರು | ದಕ್ಷಿಣ ಮತ್ತು ಆರ್.ಆರ್.ನಗರ ವಲಯದ ಎಲ್ಲಾ ಕಾರ್ಯಪಾಲಕ ಅಭಿಯಂತರರುಗಳು |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಜಂಟಿ ನಿರ್ದೇಶಕರು (ತೋಟಗಾರಿಕೆ) |
| 05 | ಡಾ॥ಎಸ್.ರಾಜು | ಸದಸ್ಯರು | ದಕ್ಷಿಣ ಮತ್ತು ಆರ್.ಆರ್.ನಗರ ವಲಯದ ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರುಗಳು |
| 06 | ರಮೇಶ್ ರಾಜು ಕೆ. | ಸದಸ್ಯರು | ದಕ್ಷಿಣ ಮತ್ತು ಆರ್.ಆರ್.ನಗರ ವಲಯದ ಎಲ್ಲಾ ಆರೋಗ್ಯ ವೈದ್ಯಾಧಿಕಾರಿಗಳು |
| 07 | ಮುನಿರತ್ನಮ್ಮ | ಸದಸ್ಯರು | ಎಲ್ಲಾ ವಲಯದ ತೋಟಗಾರಿಕೆ ಅಧೀಕ್ಷಕರು, |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, 2003-04ರಿಂದ ಇದುವರೆವಿಗೂ ಕೆ.ಎಂ.ಸಿ.ಕಾಯ್ದೆ ಕಲಂ 321(1)&(2)ರಡಿ ತಾತ್ಕಾಲಿಕ ಆದೇಶವನ್ನು ಅನಧಿಕೃತ ಅಥವಾ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಿರುವ ಮಾಲೀಕರಿಗೆ ಜಾರಿ ಮಾಡಿದಾಗ, ಸಂಬಂಧಪಟ್ಟ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3)ರಡಿ ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಘನ ಕರ್ನಾಟಕ ಉಚ್ಚ ನ್ಯಾಯಾಲಯ ಹಾಗೂ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದ ಮುಂದೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಸದರಿ ಎರಡು ಆದೇಶಗಳ

ಮೇಲೆ ನ್ಯಾಯಾಲಯಗಳು ಯಾವ ಯಾವ ರೀತಿಯ ಆದೇಶಗಳನ್ನು ನೀಡಿರುತ್ತವೆ. ಯಥಾಸ್ಥಿತಿ ಆದೇಶವನ್ನು ನೀಡಿರುವಂತ ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಕಟ್ಟಡವು ಯಥಾಸ್ಥಿತಿ ಆದೇಶ ನೀಡಿದ ದಿನದಂದು ಯಾವ ರೀತಿಯಲ್ಲಿತ್ತೋ ಅದೇ ಮಾದರಿಯಲ್ಲಿ ಇರಬೇಕಾಗುತ್ತದೆ. ಯಥಾಸ್ಥಿತಿ ಆದೇಶವನ್ನು ಪಡೆದಿರುವ ಎಷ್ಟು ಪ್ರಕರಣಗಳಲ್ಲಿ ಪ್ರಕರಣವು ತೀರ್ಮಾನವಾಗುವವರೆಗೂ ಯಥಾಸ್ಥಿತಿಯಲ್ಲೇ ಕಟ್ಟಡವು ಇರುತ್ತದೆಂಬ ಬಗ್ಗೆ ಸಭೆಗೆ ಮಾಹಿತಿಯನ್ನು ಸಮಿತಿಗೆ ಒದಗಿಸುವಂತೆ ಸೂಚಿಸಿದರು.

-2-

ಆರೋಗ್ಯ ಇಲಾಖೆಯಲ್ಲಿ ಅಪೀಲು ಕೋರಿ ಬರುತ್ತಿರುವ ಅರ್ಜಿಗಳನ್ನು ಸ್ವೀಕರಿಸುತ್ತಿರುವುದಿಲ್ಲವೆಂಬುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ಹಲವಾರು ಸಾರ್ವಜನಿಕರು ದೂರವಾಣಿ ಮುಖಾಂತರ ನನ್ನಲ್ಲಿ ಮನವಿ ಮಾಡಿಕೊಂಡಿರುತ್ತಾರೆ. ಯಾವ ಕಾರಣಕ್ಕಾಗಿ ನೀವು ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಹಾಗೂ ಹಿಂಬರಹ ನೀಡುವಾಗ ಸ್ಪಷ್ಟವಾದ ಕಾರಣವನ್ನು ತಿಳಿಸಿ ತಿರಸ್ಕರಿಸಲಾಗಿರುತ್ತೆಂಬ ಬಗ್ಗೆಯೂ ಸಹ ನಮೂದಿಸದೆ ಹಿಂಬರಹ ನೀಡುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಐಷಾರಾಮಿ ಹೋಟೆಲ್, ಮಧ್ಯಮ ವರ್ಗದ ಹೋಟೆಲ್ ಹಾಗೂ ದರ್ಶಿನಿಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು 2009-2010 ಮತ್ತು 2010-11ನೇ ಸಾಲಿನಲ್ಲಿ ಎಷ್ಟು ಬೃಹತ್ ಮತ್ತು ಸಣ್ಣ ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು ಎಷ್ಟು ಮೀನು ಮಾರಾಟ ಮಳಿಗೆಗಳು, ಮಾಂಸ ಮಾರಾಟ ಮಳಿಗೆಗಳು ಹಾಗೂ ಕೋಳಿ ಮಾರಾಟ ಕೇಂದ್ರಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ದಿನಿತ್ಯದ ಕಸವನ್ನು ನಿರ್ವಹಿಸುತ್ತಿರುವ ಸ್ಥಳ ಹಾಗೂ ಗುತ್ತಿಗೆದಾರರ ವಿವಿರಗಳನ್ನು ಒದಗಿಸುವುದು. ಆರೋಗ್ಯ ಇಲಾಖೆಯು ನೀಡುತ್ತಿರುವ ಪರವಾನಗಿ ಶುಲ್ಕದಿಂದ ನಗರ ಪಾಲಿಕೆಗೆ ಬರುತ್ತಿರುವ ಆಧಾಯವೆಷ್ಟು. ದಿನ ನಿತ್ಯ ಸಂಗ್ರಹವಾಗುವ ತ್ಯಾಜ್ಯವನ್ನು ವಿಲೇ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಒದಗಿಸುವುದೆಂದು ಸೂಚಿಸಿದರು.

ಉದ್ಯಾನವನ ಮತ್ತು ಆಟದ ಮೈದಾನ ನಿರ್ವಹಣೆಗಳ ಬಗ್ಗೆ ಯಾವ ರೀತಿ ಕ್ರಮ ವಹಿಸಲಾಗುತ್ತಿದೆ. ಇಂದಿನ ಪರಿಸ್ಥಿತಿಯಲ್ಲಿ ನಗರದ ನಾಗರೀಕರಿಗೆ ಒಳ್ಳೆಯ ವಾತಾವರಣ ಹಾಗೂ ಆರೋಗ್ಯವನ್ನು ಒದಗಿಸಿಕೊಡುವುದು ನಗರ ಪಾಲಿಕೆಯ ಜವಾಬ್ದಾರಿಯಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿ ವಾರ್ಡಿಗೆ ಕನಿಷ್ಟ ಪಕ್ಷ ಒಂದೊಂದು ಉದ್ಯಾನವನ ಹಾಗೂ ಆಟದ ಮೈದಾನದ ಅವಶ್ಯಕತೆ ಇರುತ್ತದೆ. ಈ ಬಗ್ಗೆ ಪ್ರತಿ ವಾರ್ಡಿನಲ್ಲಿ ನಗರ ಪಾಲಿಕೆ ಅಥವಾ ಸರ್ಕಾರದ ನಿವೇಶವನ್ನು ಗುರುತಿಸಿ ಕೂಡಲೇ ಉದ್ಯಾನವನ ಮತ್ತು ಆಟದ ಮೈದಾನವನ್ನು ನಿರ್ಮಿಸಲು ಕ್ರಮ ವಹಿಸುವುದೆಂದು ಸೂಚಿಸಿದರು.

ಸಮಿತಿಯ ಸದಸ್ಯರಾದ ಶ್ರೀ.ರಮೇಶ್ ರಾಜುರವರು ಸಿ.ಎ.ನಿವೇಶನವಿದ್ದು ಆ ನಿವೇಶನವನ್ನು ಉದ್ಯಾನವನವಾಗಿ ಉಪಯೋಗಿಸಲು ಅವಕಾಶವಿರುತ್ತದೆಯೇ? ಇಲ್ಲದಿದ್ದಲ್ಲಿ ಯಾವ ನಿಟ್ಟಿನಲ್ಲಿ ಸದರಿ ಸಿ.ಎ. ನಿವೇಶನವನ್ನು ಉದ್ಯಾನವನ ಅಥವಾ ಆಟದ ಮೈದಾನವಾಗಿ ಉಪಯೋಗಿಸಬಹುದೆಂಬ ಬಗ್ಗೆ ಸಭೆಯಲ್ಲಿ ಹಾಜರಿದ್ದ ಜಂಟಿ ನಿರ್ದೇಶಕರು (ತೋಟಗಾರಿಕೆ)ರವರನ್ನು ಕೋರಿರುತ್ತಾರೆ.

ಜಂಟಿ ನಿರ್ದೇಶಕರು (ತೋಟಗಾರಿಕೆ)ರವರು ಈಗಾಗಲೇ ಪ್ರತಿ ವಾರ್ಡಿನಲ್ಲಿ ಆಟದ ಮೈದಾನ ಮತ್ತು ಉದ್ಯಾನವಗಳ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ. ಹಾಲಿ ಇರುವ ಉದ್ಯಾನವನಗಳನ್ನು ಉತ್ತಮ

ರೀತಿಯಲ್ಲಿ ನಿರ್ವಹಣೆ ಮಾಡಲಾಗಿರುತ್ತದೆ. ಮಾನ್ಯ ಸದಸ್ಯರು ಕೋರಿರುವಂತೆ ಸಿ.ಎ.ನಿವೇಶನವಿದ್ದಲ್ಲಿ ಅದು ಯಾರಿಂದ ನಗರ ಪಾಲಿಕೆಗೆ ವರ್ಗಾಯಿಸಲಾಗಿರುತ್ತದೆ ಹಾಗೂ ಯಾವ ಉದ್ದೇಶಕ್ಕೆ ವರ್ಗಾವಣೆಯಾಗಿರುತ್ತದೆಂಬುದನ್ನು ಪರಿಶೀಲಿಸಿಕೊಂಡು, ಅದರ ಅವಶ್ಯಕತೆ ಯಾವ ಉದ್ದೇಶಕ್ಕೆ



ಹೆಚ್ಚಾಗಿರುತ್ತದೆಂಬುದನ್ನು ಮನಗಂಡು ಮಾನ್ಯ ಆಯುಕ್ತರಿಂದ ಬದಲಾವಣೆಗಾಗಿ ಉಪಯೋಗಿಸಲು ಅನುಮತಿ ಪಡೆದು ನಾಗರೀಕರ ಅನುಕೂಲಕ್ಕಾಗಿ ತಾವು ಕೋರುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಬಹುದೆಂದು ಸಭೆಗೆ ತಿಳಿಸಿದರು.

ನಂ.08, ಲೂಯಿಸ್ ರಸ್ತೆ, ಕುಕ್ ಟೌನ್, ಬೆಂಗಳೂರು ಈ ಸ್ವತ್ತಿನ ಮಾಲೀಕರು ಕೆ.ಎಂ.ಸಿ.ಕಾಯ್ದೆ 1976ರ ಕಲಂ 321(1)ರ ಪ್ರಕಾರ ಹೊರಡಿಸಿರುವ ತಾತ್ಕಾಲಿಕ ಆದೇಶದ ವಿರುದ್ದ ಸ್ವತ್ತಿನ ಮಾಲೀಕರಾದ ಶ್ರೀಮತಿ.ಎನ್.ಪ್ರಮೀಳ ಮತ್ತು ಶ್ರೀ.ಸಿ.ಎಸ್.ಜನಾರ್ಧನರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ವಕೀಲರು ತಮ್ಮ ಹೇಳಿಕೆಯಲ್ಲಿ ಅಧಿಕಾರಿಗಳು ಪಕ್ಕದಮನೆಯವರು ನೀಡುವ ದೂರಿನ ಅನ್ವಯ ಸ್ಥಳ ಪರಿಶೀಲಿಸುತ್ತಿದ್ದು ಈ ಸಂದರ್ಭದಲ್ಲಿ ಆಸ್ತಿಯ ಮಾಲೀಕರಿಗೆ ತಿಳುವಳಿಕೆ ನೀಡದೆ ಕ್ರಮ ಜರುಗಿಸುವುದು ಸಮಂಜಸವಲ್ಲವೆಂದು ತಿಳಿಸಿ ನಿಯಮಗಳ ವಿರುದ್ದ ನೀಡುವ ನೋಟೀಸ್ ಸಮಂಜಸವಲ್ಲವೆಂದು ತಮಗೆ ತಾತ್ಕಾಲಿಕವಾಗಿ ತಡೆಯಾಜ್ಞೆ ನೀಡಬೇಕೆಂದು ಹಾಗೂ ತಮ್ಮ ಪಕ್ಕದ ಮನೆಯವರು ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದು, ಅವರ ಮೇಲೆ ಕ್ರಮ ಜರುಗಿಸಲು ಸಹ ಕೋರಿರುತ್ತಾರೆ.

ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಹೇಳಿಕೆಯಲ್ಲಿ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಈ ಮೇರೆಗೆ ಕ್ರಮ ಕೈಗೊಂಡಿದ್ದು, ನೋಟೀಸ್ ನೀಡುವಲ್ಲಿ ಲೋಪವುಂಟಾಗಿದ್ದು ಇನ್ನು ಮುಂದೆ ಈ ರೀತಿ ಅವಕಾಶ ನೀಡುವುದಿಲ್ಲವೆಂದು ತಿಳಿಸಿರುತ್ತಾರೆ.

ಉಪ ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾದಲ್ಲಿ ಅರ್ಜಿದಾರರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಲು ತಿಳಿಸಿರುತ್ತಾರೆ.

ನಿರ್ಣಯ:- ದಿನಾಂಕ:05-3-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು. ನಂ.9, ಲಿವೀಸ್ ರಸ್ತೆ, ಕೂಕ್ ಟೌನ್, ಬೆಂಗಳೂರು ಈ ಸ್ವತ್ತಿನ ಮಾಲೀಕರು ನಮ್ಮಲ್ಲಿ ಯಾವುದೇ ನಕ್ಷೆ ಇರುವುದಿಲ್ಲವೆಂದು ಲಿಖಿತವಾಗಿ ಹೇಳಿಕೆ ನೀಡಿರುವುದಾಗಿ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಟ್ಟಡದ ಕಂದಾಯವನ್ನು ತಪ್ಪಾಗಿ ಘೋಷಿಸಿಕೊಂಡಿರುವುದಾಗಿ ಸಹಾಯಕ ಕಂದಾಯ ಅಧಿಕಾರಿಯವರು ಸಮಿತಿಗೆ ವರದಿಸಿರುವುದನ್ನು ಗಮನಿಸಿ ಸದರಿಯವರ ಕಟ್ಟಡದ ಮೇಲೆ ಕಾನೂನಿನಂತೆ ಕ್ರಮ ತೆಗೆದುಕೊಳ್ಳುವುದು ಹಾಗೂ ಅರ್ಜಿದಾರರು ತಾತ್ಕಾಲಿಕ ಆದೇಶದ ವಿರುದ್ಧ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ವ್ಯವಹರಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.



11.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/27/2010-11

ಮೆ॥ ಲಕ್ಷಾ ಮಿಡಿಯಾ ಪ್ರೈ.ಲಿ., ಸಂಸ್ಥೆಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಆಯುಕ್ತರು ದಿನಾಂಕ:07-02-2011ರ ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದ ಶ್ರೀ.ರವಿರೆಡ್ಡಿಯವರು ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ.

" ಅರ್ಜಿದಾರರು ಕಾಲಾವಕಾಶ ಕೋರಿರುವುದರಿಂದ ವಿಚಾರಣೆಯನ್ನು ಮುಂದೂಡಿದೆ".

12.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11

ಮೆ॥ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಮೂಲ ಕಡತವನ್ನು ಸಂಬಂಧಪಟ್ಟ ಅಧಿಕಾರಿಗಳು ಮಂಡಿಸದಿರುವುದು ತಿಳಿದು ಬಂದಿರುತ್ತದೆ. ಅರ್ಜಿದಾರರು ಹಾಜರಿರುತ್ತಾರೆ.

" ಪಾಲಿಕೆಯ ವಕೀಲರು ಕಾಲಾವಕಾಶ ಕೋರಿರುವುದರಿಂದ ವಿಚಾರಣೆಯನ್ನು ಮುಂದೂಡಿದೆ".

13.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/29/2010-11

ರಿಪ್ಪಲ್ ಮಿಡಿಯಾದವರು ದಿನಾಂಕ:11-01-2011ರಂದು ಸಮಿತಿಗೆ ಅರ್ಜಿ ಸಲ್ಲಿಸಿ ಅನಧಿಕೃತವಾಗಿ ಪ್ರಚುರ ಪಡಿಸಿರುವ ಜಾಹೀರಾತುಗಳನ್ನು ತೆರವುಗೊಳಿಸುವಂತೆ ಹಿಂಬರಹ ನೀಡಿರುತ್ತಾರೆ. ಆದರೆ ಬದಲಿ ಸ್ಥಳಗಳನ್ನು ಗುರುತಿಸಿಕೊಡುವಂತೆ ಹಲವಾರು ಬಾರಿ ಪತ್ರ ಬರೆದು ಕೋರಲಾಗಿದ್ದರೂ ಸಹ ಸದರಿ ಅಧಿಕಾರಿಗಳಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಆದರೆ ಈಗ ಕೂಡಲೇ ತೆರವುಗೊಳಿಸುವಂತೆ ತಿಳಿಸಿರುತ್ತಾರೆ. ಇದರಿಂದಾಗಿ ನಾವು ಜಾಹೀರಾತುಗಳ ಮೇಲೆ ಹೂಡಿರುವ ಹಣವು ಲುಕ್ಸಾನ್ ಆಗುತ್ತದೆಂದು ತಿಳಿಸುತ್ತಾ, ನ್ಯಾಯ ದೊರಕಿಸಿಕೊಡುವಂತೆ ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದವರು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಮಾಲೀಕರು ಪರಸ್ಥಳಕ್ಕೆ ಹೋಗಿದ್ದು ವಿಚಾರಣೆಯನ್ನು ಮುಂದೂಡಲು ಕೋರಿಕೊಂಡ ಮೇರೆಗೆ ವಿಚಾರಣೆಯನ್ನು ಮುಂದೂಡಿದೆ.

''ಆದೇಶಕ್ಕಾಗಿ ಕಾಯ್ದಿರಿಸಿದೆ''

14.ಸಂಖ್ಯೆ:ಅಸ್ಥಾಸ/(ಅ)/31/2010-11

ಶ್ರೀ.ಡಿ.ಕೆ.ಬಿರ್ಮನ್, ಚೀಫ್‌ರೀಜಿನಲ್ ಮ್ಯಾನೇಜರ್ ಅಂಡ್ ಡ್ಯೂಲಿ ಕಾನ್ಸ್‌ಟ್ಯೂಟೆಡ್ ಅಟಾರ್ನಿ ಇವರು ಸ್ವತ್ತಿನ ಸಂಖ್ಯೆ:19, 18ನೇ ಮುಖ್ಯರಸ್ತೆ, 46ನೇ ಅಡ್ಡರಸ್ತೆ, 9ನೇ ಬ್ಲಾಕ್, ಜಯನಗರ, ವಾರ್ಡ್-168 ಈ ಸ್ವತ್ತಿನಿಂದ ಹೊರಹಾಕದಂತೆ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ವಕೀಲರು ತಮ್ಮ ಹೇಳಿಕೆಯಲ್ಲಿ ನ್ಯಾಯಾಲಯದ ಆದೇಶದ ರೀತ್ಯ ಪಾಲಿಕೆ ನೀಡಿರುವ ಹಿಂಬರಹ ತಪ್ಪಾಗಿದ್ದು ಇದರ ಕ್ರಮವು ಸರಿ ಇಲ್ಲದಿದ್ದು ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳತಕ್ಕದೆಂದು, ವಿಚಾರಣೆ ಸರಿಯಾಗಿ ನಡೆಸಿರುವುದಿಲ್ಲ, ಸಕ್ಷಮ ಪ್ರಾಧಿಕಾರಿಯು ನೀಡಿರುವ ಹಿಂಬರಹ ಸರಿಯಲ್ಲ ಎಂದು ವಾದಿಸುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ನಮಗೆ ವ್ಯವಹರಣೆ ನಡೆಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಅಪರ ಆಯುಕ್ತರು ಕೈಗೊಂಡಿರುವ ಕ್ರಮ ಸರಿಯಲ್ಲ.

ಪಾಲಿಕೆ ವಕೀಲರು ತಮ್ಮ ಹೇಳಿಕೆಯಲ್ಲಿ ಈ ಪ್ರಕ್ರಿಯೆಯಲ್ಲಿ ಪಾಲಿಕೆಯು ಕೈಗೊಂಡಿರುವ ಕ್ರಮವು ಸರಿಯಿದೆಯೆಂದು ಪರವಾನಗಿ ಇಲ್ಲದೆಯೆ ಇವರು ವ್ಯವಹರಣೆಯನ್ನು ನಡೆಸಲು ಸಾಧ್ಯವಿಲ್ಲದಿರುವುದರಿಂದ ಇವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು, ಸರ್ಕಾರದ ಅಧಿಸೂಚನೆಯ ಪ್ರಕಾರ ಅಪರ ಆಯುಕ್ತರು ನಿರ್ಣಯ ಕೈಗೊಳ್ಳಲು ಪೂರ್ಣ ಪ್ರಮಾಣದ ಅವಕಾಶವಿರುವುದಾಗಿ ತಿಳಿಸಿರುತ್ತಾರೆ.

ಅರ್ಜಿದಾರರ ವಕೀಲರು ತಮ್ಮ ಹೇಳಿಕೆಯಲ್ಲಿ ನ್ಯಾಯಾಲಯದ ಆದೇಶದ ರೀತ್ಯ ವ್ಯವಹರಣೆ ನಡೆಸಲು ಅವಕಾಶ ನೀಡಬೇಕೆಂದು ತಿಳಿಸಿ ತಮಗೆ ಲೀಸ್ ಪಿರಿಯಡ್ ಬಗ್ಗೆ ಯಾವುದೇ ವಿಧವಾದ ಆದೇಶವಿಲ್ಲದಿದ್ದು ಕೇವಲ ವ್ಯವಹರಣೆಯನ್ನು ಮಾತ್ರ ನಡೆಸಲು ಕೋರಿರುತ್ತಾರೆ.

-9-

ಪಾಲಿಕೆಯ ವಕೀಲರು ನ್ಯಾಯಾಲಯದ ಆದೇಶವನ್ನು ವಿವರಿಸುತ್ತಾ, ಕಟ್ಟಡದ ಭಾಗವನ್ನು ಹೊಡೆಯಕೂಡದೆಂದು ಸಕ್ಷಮ ಪ್ರಾಧಿಕಾರಿಯು ವಿಚಾರಣೆ ನಡೆಸತಕ್ಕದೆಂದು, ಈ ಮೇಲ್ಮನವಿಯು ಸಮಿತಿಯ ಪ್ರಾಧಿಕಾರಕ್ಕೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ.

ಅರ್ಜಿದಾರರ ವಕೀಲರು ನ್ಯಾಯಾಲಯದ ಆದೇಶದ ರೀತ್ಯ ವಿಚಾರಣೆ ನಡೆಸಲು ಕೋರಿರುತ್ತಾರೆ.

ನಿರ್ಣಯ:- ಅರ್ಜಿದಾರರ ಪರ ವಕೀಲರು ಮತ್ತು ಪಾಲಿಕೆಯ ಪರ ವಕೀಲರ ವಾದಗಳನ್ನು ಆಲಿಸಿದ ನಂತರ ಸಮಿತಿಯು ಹಿಂದೂಸ್ಥಾನ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್‌ರವರು ಸಲ್ಲಿಸಿರುವ ದಿನಾಂಕ:24-12-2010 ಮತ್ತು 21-02-2011ರ ಮೇಲ್ಮನವಿಗಳನ್ನು ವಜಾಗೊಳಿಸುವುದೆಂದು ತೀರ್ಮಾನಿಸಲಾಯಿತು.

15. ವಿಷಯ:ಸಂಖ್ಯೆ:ಅಸ್ಥಾಸ/(ಜಾ)/33/2010-11

ನಂ.73, 7ನೇ ಅಡ್ಡರಸ್ತೆ, 60 ಅಡಿ ರಸ್ತೆ, ಜೆ.ಸಿ.ನಗರ, ಮಹಾಲಕ್ಷ್ಮಿಪುರಂ ಇಲ್ಲಿ ಶ್ರೀ.ಮುನೇಗೌಡ ಎಂಬುವವರು ಮಿನರಲ್ ವಾಟರ್ ಘಟಕ ಮತ್ತು ಮಾರಾಟ ಹಾಗೂ 20 ಅಶ್ವಶಕ್ತಿ ಉದ್ದಿಮೆ ಪರವಾನಗಿಯನ್ನು ಕೋರಿದ್ದು, ಸದರಿಯವರ ಮನವಿಯನ್ನು ದಿನಾಂಕ:02-12-2010ರಂ ಆರೋಗ್ಯ ವೈದ್ಯಾಧಿಕಾರಿ, (ಮಹಾಲಕ್ಷ್ಮೀಪುರ) ವಲಯರವರು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-02-2011ರ ಟಿಪ್ಪಣಿ.

''ಸ್ಥಳ ಪರಿಶೀಲನೆಗಾಗಿ ಕಾಯ್ದಿರಿಸಿದೆ''

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಅಪೀಲು ಸ್ಥಾಯಿ ಸಮಿತಿಯ ದಿನಾಂಕ:01-04-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 04 | ಶ್ರೀಧರರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯಾಧಿಕಾರಿ (ಪಶ್ಚಿಮ) |
| 04 | ಡಾ॥ಎಸ್.ರಾಜು | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಸವನಗುಡಿ/ಮಹಾಲಕ್ಷ್ಮಿಲೇಔಟ್/ಗಾಂಧಿನಗರ) ವಲಯ |
| 05 | ರಮೇಶ್ ರಾಜು ಕೆ. | ಸದಸ್ಯರು | |
| 06 | ಮುನಿರತ್ನಮ್ಮ | ಸದಸ್ಯರು | |
| 07 | ಶಾಹೀನ್ ತಾಜ್ | ಸದಸ್ಯರು | |
| 08 | ಎಸ್.ಕೆ.ಪುಷ್ಪ | ಸದಸ್ಯರು | |
| 09 | ಮುನಿಸಂಜೀವಯ್ಯ | ಸದಸ್ಯರು | |
| 10 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

**01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/09/2010-11**

ಸ್ವತ್ತಿನ ಸಂಖ್ಯೆ:86/3 ಮತ್ತು 86/4, ಕೋಲ್ಸ್ ರಸ್ತೆ, ವಾರ್ಡ್-78ರ ಸ್ವತ್ತಿನ ಕಂದಾಯ ನಿಗಧಿಪಡಿಸಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿ ಸ್ವತ್ತಿನ ಮಾಲೀಕರಾದ ಶ್ರೀ.ಎಂ.ರಾಜ್ ಬಹದ್ದೂರ್‌ರವರು ಕಂದಾಯ ಕಡಿಮೆ ಮಾಡಿಕೊಡುವ ಬಗ್ಗೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಅಪೀಲುದಾರರು ತಮ್ಮ ಹೇಳಿಕೆಯಲ್ಲಿ ಭಾಡಿಗೆಗೆ ನೀಡಿದ್ದ ಭಾಗವು ತುಂಬಾ ದಿನಗಳಿಂದ ಖಾಲಿ ಇರುತ್ತದೆ. ಹಾಗೂ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿಲ್ಲದೇ ಇರುವುದರಿಂದ ಪರಿಶೀಲಿಸಿ ಕಂದಾಯವನ್ನು ನಿಗಧಿ ಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

ನಿರ್ಣಯ:- ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು. ಹಾಲಿ ಪ್ರಥಮ ಅಫೀಲು ಅಧಿಕಾರಿಗಳು ಮಾಡಿರುವ ಆಸ್ತಿ ತೆರಿಗೆ ಪರಿಷ್ಕರಣೆಯು ಸಮಂಜಸವಾಗಿರುವುದರಿಂದ, ಸದರಿ ತೆರಿಗೆ ಪರಿಷ್ಕರಣೆಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಆ)/12/2010-11

ಶ್ರೀ.ಎ.ಎಸ್.ಕಾಮತ್, ವ್ಯವಸ್ಥಾಪಕ ನಿರ್ದೇಶಕರು, ಬಸವನಗುಡಿ ವಲಯ ವಾರ್ಡ್-154, ನಂ.1, 5ನೇ ಮೈನ್, ಬಸವನಗುಡಿ ರಸ್ತೆ, ಎನ್.ಆರ್.ಕಾಲೋನಿ ಬೆಂಗಳೂರು-19 ಇಲ್ಲಿ ಕಾಮತ್ ಬ್ಯೂಗಲ್ ರಾಕ್ ಹೋಟೆಲ್ ರೆಸ್ಟೋರೆಂಟ್ ಮತ್ತು 25 ಅಶ್ವಶಕ್ತಿ ಪರವಾನಗಿಯನ್ನು 2010-11ನೇ ಸಾಲಿಗೆ ನವೀಕರಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ಬಸವನಗುಡಿ)ವಲಯರುವರು ದಿನಾಂಕ:22-02-2010ರಂದು ತಡೆ ಹಿಡಿದಿರುವ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಆಕ್ಷೇಪಣೆದಾರರು ಲಿಖಿತ ಮೂಲಕ ಹೇಳಿಕೆ ನೀಡಿರುತ್ತಾರೆ. ಇತರೆ ಪ್ರಕರಣಗಳಲ್ಲಿನ ಮಾಹಿತಿ ಕುರಿತಂತೆ ಉಲ್ಲೇಖಿಸಿರುತ್ತಾರೆ. ಹಾಲಿ ಪ್ರಕರಣವು ಲೋಕಾಯುಕ್ತದಲ್ಲಿ ಬಾಕಿ ಇರುವುದಾಗಿ ಪ್ರತಿವಾದಿಗಳು ತಿಳಿಸಿರುತ್ತಾರೆ. ಅಪೀಲುದಾರರು ತಮ್ಮ ಪ್ರತಿವಾದಿಗಳ ಲಿಖಿತ ಹೇಳಿಕೆಯ ಪ್ರತಿಯನ್ನು ಕೋರಿರುತ್ತಾರೆ. ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳು ಸಿ.ಡಿ.ಪಿ. ಪ್ರಕಾರ ಮಂಜೂರಾತಿ ನೀಡಿರುವುದಾಗಿ ತಿಳಿಸಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"



03.ವಿಷಯ:ಸಂಖ್ಯೆ:ಅಸ್ಥಾಸ/(ಖಾತೆ)/20/2010-11

ನಂ.71, 5ನೇ ಮುಖ್ಯರಸ್ತೆ, ಜಯನಗರ ಹೆಚ್.ಬಿ.ಸಿ.ಎಸ್. ಪದ್ಮನಾಭನಗರ ಈ ಸ್ವತ್ತಿನ ಖಾತೆಯನ್ನು ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಶ್ರೀ.ಸಂತೋಷ ಎಂಬುವವರ ಹೆಸರಿಗೆ ವರ್ಗಾಯಿಸಿದ್ದು, ಸದರಿ ಸ್ವತ್ತಿನಲ್ಲಿ ನಾವೇ ವಾಸವಾಗಿರುವುದರಿಂದ ಬೇರೆಯವರ ಹೆಸರಿಗೆ ಆಗಿರುವ ಖಾತಾವನ್ನು ರದ್ದು ಪಡಿಸಿ ತಮ್ಮ ಹೆಸರಿಗೆ ವರ್ಗಾಯಿಸಕೊಡುವಂತೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹೇಳಿಕೆಯಲ್ಲಿ ಆಸ್ತಿಯ ಮಾಲೀಕರು 3 ಜನ ಮಕ್ಕಳಿಗೆ ವಿಲ್ ಮಾಡಿದ್ದು, ಈ ಪೈಕಿ ಶ್ರೀ.ಸಂತೋಷ್‌ರವರು ಇಬ್ಬರು ಮಕ್ಕಳಿಗೆ ತಿಳಿಸದೆ ಅವರ ಹೆಸರಿಗೆ ಖಾತೆ ಮಾಡಿಕೊಂಡಿದ್ದು, 2ನೇ ವಿಲ್‌ನಲ್ಲಿ ಮೊದಲನೇ ವಿಲ್‌ನ ಬದಲಿಗೆ ಶ್ರೀ.ಅಶ್ವಥ್ಥನಾರಾಯಣರಾವ್‌ರವರ ಹೆಸರಿಗೆ ಪೂರ್ತಿ ಖಾತೆಯನ್ನು ವರ್ಗಾಯಿಸಲು ಕೋರಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ಆಸ್ತಿಯ ಮಾಲೀಕರಾದ ಶ್ರೀ.ರಾಮಸ್ವಾಮಿರವರ ಮಕ್ಕಳುಗಳು ನೀಡಿದ ಎನ್.ಓ.ಸಿ. ಆಧಾರದ ಮೇಲೆ ಖಾತೆ ವರ್ಗಾಹಿಸಿರುವುದಾಗಿ ತಿಳಿಸಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲಿದ್ದು ಮೃತ ತಂದೆಯ ಮರಣ ಸಮರ್ಥನಾ ಪತ್ರದ ಆಧಾರ ನ್ಯಾಯಾಲಯದ ತೀರ್ಮಾನದ ರೀತ್ಯ ಖಾತೆ ರದ್ದುಪಡಿಸುವ ಷರತ್ತುಗೊಳಪಡಿಸಿ ಖಾತೆ ವರ್ಗಾಹಿಸಿರುವುದಾಗಿ ತಿಳಿಸಿರುತ್ತಾರೆ.

ಪ್ರಕರಣವು ನ್ಯಾಯಾಲಯದ ಮುಂದೆ ಬಾಕಿ ಇರುವುದಾಗಿ ತಿಳಿದು ಬಂದಿರುತ್ತದೆ.

ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ಖಾತೆ ಕುರಿತಂತೆ ನ್ಯಾಯಾಲಯವು ಅಂತಿಮವಾಗಿ ತೀರ್ಪು ನೀಡಬೇಕೆಂದು ತಿಳಿಸಿರುತ್ತಾರೆ.

ನಿರ್ಣಯ:- ಅರ್ಜಿದಾರರ ಮತ್ತು ಖಾತೆದಾರರ ಹೇಳಿಕೆಗಳನ್ನು ಹಾಗೂ ಕಡತದಲ್ಲಿನ ಮತ್ತು ಖಾತೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಮೂಲ ಖಾತೆದಾರರಾದ ಶ್ರೀ.ಎಂ.ರಾಮಸ್ವಾಮಿರವರು ದಿನಾಂಕ:27-02-2000 ಮತ್ತು 10-01-2006ರಂದು ನೋಂದಾಯಿತವಲ್ಲದ ಎರಡು ವಿಲ್‌ಗಳನ್ನು ಮಾಡಿರುವುದು ಕಂಡು ಬರುತ್ತದೆ. ತದನಂತರ ಶ್ರೀ.ಆರ್.ಕುಮಾರ್‌ರವರ ಹೆಸರಿಗೆ ದಿನಾಂಕ:07-09-2000 ಮತ್ತು ದಿನಾಂಕ:24-11-2006ರಂದು ಖಾತಾ ವರ್ಗಾವಣೆ ಮಾಡಲಾಗಿರುವುದಾಗಿ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:19-01-2011ರ ಟಿಪ್ಪಣಿಯಲ್ಲಿ ವರದಿಸಲಾಗಿರುತ್ತದೆ. ಹಾಗೂ ಸ್ವತ್ತು ಹಾಲಿ ಖಾತೆದಾರರ ವಶದಲ್ಲಿಲ್ಲದೆ ಅರ್ಜಿದಾರರಾದ ಶ್ರೀ.ಅಶ್ವಥನಾರಾಯಣರಾವ್‌ರವರ ಸ್ವಾಧೀನದಲ್ಲಿರುವುದನ್ನು

ಖಾತೆದಾರರಾದ ಶ್ರೀ.ಸಂತೋಷ್‌ರವರು ಹಾಜರುಪಡಿಸಿರುವ ದಾಖಲಾತಿಗಳಿಂದ ಕಂಡು ಬರುತ್ತದೆ. ಈ ವಿಷಯವು ಅನುಮಾನಾಸ್ಪದಕ್ಕೆ ಕಾರಣವಾಗಿರುವುದನ್ನು ಸಮಿತಿಯು ಮನಗಂಡು ಶ್ರೀ.ಸಂತೋಷ್‌ರವರ ಹೆಸರಿಗೆ ವರ್ಗಾವಣೆ ಮಾಡಿರುವ ಖಾತೆಯನ್ನು ತಡೆಹಿಡಿದು ನ್ಯಾಯಾಲಯದಲ್ಲಿ ಪ್ರಕರಣವು ತೀರ್ಮಾನವಾದ ನಂತರ ನ್ಯಾಯಾಲಯದ ಅಂತಿಮ ತೀರ್ಮಾನದಂತೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

04. ವಿಷಯ:ಸಂಖ್ಯೆ:ಅಸ್ಥಾಸ/(ಅ)/26/2010-11

ಮಾಲೀಕರು, ಮೆ|| ಅವಿನಾಶಿ ಆಡ್ಸ್, ಔಟ್‌ಡೋರ್‌ಅಡ್ವರ್‌ಟೈಸಿಂಗ್, ತುಳಸಿ ಹೌಸ್, ನಂ.26, ಎಸ್.ಎಫ್.ಹೆಚ್.ಎಸ್. ಏರಿಯಾ, ನಂದಿನಿ ಲೇಔಟ್, ಬೆಂಗಳೂರು-96 ಇವರು ದಿನಾಂಕ:18-01-2011ರಂದು ಸಮಿತಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಕಡತ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ವಕೀಲರು ಹಾಜರಿರುತ್ತಾರೆ ಆದರೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ. ವಕೀಲರ ಹೇಳಿಕೆಯಲ್ಲಿ ಇದು ರೈಲ್ವೆ ಆಸ್ತಿಯಲ್ಲಿದ್ದು ಕಂದಾಯ ಅಧಿಕಾರಿಗಳ ವರದಿಯ ರೀತ್ಯ ಅಳತೆಯು ಸರಿಯಿಲ್ಲವೆಂದು 56 ಬೋರ್ಡ್‌ಗಳ ಬದಲು 61 ಬೋರ್ಡುಗಳು ಇರುವುದಾಗಿ ಹಿಂದಿನ ಅವಧಿಯಿಂದ ತೆರಿಗೆ ನಿಗಧಿಪಡಿಸಿರುವುದಾಗಿ ತಿಳಿಸಿದ್ದು, ತಾವು ಬೋರ್ಡ್‌ಗಳನ್ನು ನಿಗಧಿಪಡಿಸಿದ್ದ ಅವಧಿಗೆ ಮಾತ್ರ ಕಂದಾಯವನ್ನು ನಿಗಧಿಪಡಿಸಬೇಕೆಂದು ಕೋರಿರುತ್ತಾರೆ.



**ನಿರ್ಣಯ:**- ಸಮಿತಿಯು ಅಧಿಕಾರಿಗಳ ಮತ್ತು ವಕೀಲರ ವಾದಗಳನ್ನು ಆಲಿಸಿತು. ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಅಧಿಕಾರಿಗಳು 8 ತಿಂಗಳ ಅವಧಿ ಮೀರಿದ ನಂತರ ಮನವಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ದಿನಾಂಕ:26-11-2007ರಂದೇ ಜಾಹೀರಾತುದಾರರು ಫಲಕಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ನಗರ ಪಾಲಿಕೆಗೆ ಪತ್ರ ಮುಖೇನ ತಿಳಿಸಿರುವುದು ಕಂಡು ಬರುತ್ತದೆ. ಜಾಹೀರಾತುದಾರರು ಪತ್ರ ಬರೆದ ತಕ್ಷಣವೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡದಿರುವುದು ಸ್ಪಷ್ಟವಾಗಿರುತ್ತದೆ. ಹಾಗೂ ಯಾವ ಯಾವ ವೇಳೆಗೆ ಎಷ್ಟು ಅಳತೆಯ ಫಲಕಗಳನ್ನು ಅಳವಡಿಸಿಕೊಳ್ಳಲಾಗಿತ್ತೆಂಬ ಬಗ್ಗೆ ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಿರುವುದು ಕಂಡು ಬರುವುದಿಲ್ಲ. ಇದರಿಂದಾಗಿ ಜಾಹೀರಾತುದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆ. ಈ ಬಗ್ಗೆ ಸಮಿತಿಯು ಇನ್ನು ಮುಂದೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಸಂಖ್ಯೆ ಮತ್ತು ಅಳತೆಯ ಬಗ್ಗೆ ಸ್ಪಷ್ಟವಾಗಿ ನಮೂದಿಸುವಂತೆ ಕ್ರಮಕೈಗೊಳ್ಳುವುದು ಹಾಗೂ ಜಾಹೀರಾತುದಾರರು ಈಗಾಗಲೇ ಅಳವಡಿಸಿಕೊಂಡಿರುವ ಫಲಕಗಳಿಗೆ ಡಿಮ್ಯಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವಂತೆ ರೂ.60,05,452/-ಗಳ ಜಾಹೀರಾತು ತೆರಿಗೆಯನ್ನು ಕೂಡಲೇ ಪಾವತಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/27/2010-11

ಮೆ|| ಲಕ್ಷ್ಯ ಮಿಡಿಯಾ ಪ್ರೈ.ಲಿ., ಸಂಸ್ಥೆಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಆಯುಕ್ತರು ದಿನಾಂಕ:07-02-2011ರ ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದ ಶ್ರೀ.ರವಿರೆಡ್ಡಿಯವರು ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ.

ಪ್ರಕರಣವನ್ನು ಕರೆಯಲಾಯಿತು. ರೈಲ್ವೆ ಇಲಾಖೆಯಿಂದ ಅನುಮತಿ ದೊರಕಿದೆ. ಪಾಲಿಕೆ ವತಿಯಿಂದ ನೀಡಿರುವ ಡಿಮ್ಯಾಂಡ್ ನೋಟೀಸ್ ನಿಯಮ ಬಾಹಿರವಾಗಿರುತ್ತದೆ. ದಿನಾಂಕ:30-06-2009ರಲ್ಲಿ ಅರ್ಜಿ ಸಲ್ಲಿಸಿದೆ, ಅಧಿಕಾರಿಗಳು ಸ್ಥಳ ಪರಿಶೀಲಿಸಿರುತ್ತಾರೆ. ಡಿಮ್ಯಾಂಡ್ ನೋಟೀಸ್ ನೀಡಿರುವುದು ಹಿಂದಿನ 3 ವರ್ಷಗಳ ಅವಧಿಗೆ ನೀಡಿರುವುದು ಸರಿಯಲ್ಲ. (25-11-10ರಲ್ಲಿ ಪರಿಶೀಲನೆ) ಈಗಾಗಲೇ 60ಲಕ್ಷ ರೂಗಳನ್ನು ಪಾವತಿಸಲಾಗಿದೆ. ಆದರೆ

ಹಿಂದಿನ ಅವಧಿಯಿಂದ ನಿಗಧಿಪಡಿಸಿರುವ ರೀತಿ ಸರಿ ಇಲ್ಲ. ನ್ಯಾಯಾಲಯಕ್ಕೆ ಡೀಮ್ಡ್ ಪರ್ಮಿಷನ್ ಬಗ್ಗೆ ಮನವಿ ಸಲ್ಲಿಸಿದೆ.

ಕಾನೂನು ಸಲಹೆಗಾರರು ಕೇಸ್ ನಂ. ನೀಡಲು ಕೋರಿರುತ್ತಾರೆ.

ಮನವಿದಾರರು ರೈಲ್ವೆ ಇಲಾಖೆಯವರು ನೀಡಿರುವ ಅನುಮತಿಯಷ್ಟು ಬೋರ್ಡ್‌ಗಳನ್ನು ಅಳವಡಿಸಿಲ್ಲವೆಂದು ತಿಳಿಸಿರುತ್ತಾರೆ. ಅನುಮತಿ ನೀಡಿರುವ ಸ್ಥಳಗಳಲ್ಲಿ ತಾವು ಬೋರ್ಡ್‌ಗಳನ್ನು ಹಾಕಲು ಸಾಧ್ಯವಾಗಿರುವುದಿಲ್ಲ ಇದನ್ನು ಗಮನಿಸಬೇಕೆಂದು ಕೋರಿಕೊಂಡಿರುತ್ತಾರೆ.

ಈ ಬಗ್ಗೆ ಅಧಿಕಾರಿಗಳು ಯಾವುದೇ ಹೇಳಿಕೆಯನ್ನು ಸಭೆಯ ಮುಂದೆ ಮಂಡಿಸಿರುವುದಿಲ್ಲ.

**ನಿರ್ಣಯ:-** ಸಮಿತಿಯು ಅಧಿಕಾರಿಗಳ ಮತ್ತು ವಕೀಲರ ವಾದಗಳನ್ನು ಆಲಿಸಿತು. ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ರೈಲ್ವೆ ಇಲಾಖೆಯವರು ದಿನಾಂಕ:29-11-2007ರಲ್ಲೇ ನಗರ ಪಾಲಿಕೆಗೆ ಪತ್ರ ಬರೆದಿದ್ದರೂ ಸಹ ದಿನಾಂಕ:15-05-2008ರವರೆಗೆ ಏಕೆ ತಪಾಸಣೆ ಮಾಡಿರುವುದಿಲ್ಲವೆಂಬ ಬಗ್ಗೆ ಸಮಿತಿಯು ಕಾರಣಗಳನ್ನು ಕೇಳಲಾಗಿ ಸಂಬಂಧಪಟ್ಟ ಅಧಿಕಾರಿಗಳು ನಿಗಧಿತ ನಮೂನೆಯೊಂದಿಗೆ ಅರ್ಜಿಯನ್ನು ಸಲ್ಲಿಸಿಲ್ಲದ ಕಾರಣ ತಪಾಸಣೆ



ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ರೈಲ್ವೆ ಇಲಾಖೆಯವರು ಪತ್ರ ಬರೆದಾಗಿನಿಂದಲೂ ಪ್ರತಿ ತಿಂಗಳಲ್ಲಿ ಜಾಹೀರಾತುದಾರರು ಅಳವಡಿಸಿರುವ ಬೋರ್ಡ್‌ಗಳ ಸಂಖ್ಯೆ ಮತ್ತು ಅಳತೆಯನ್ನು ನಮೂದು ಮಾಡಿಕೊಳ್ಳಬೇಕಾದ ಜವಾಬ್ದಾರಿಯು ಸಂಬಂಧಪಟ್ಟ ಅಧಿಕಾರಿಗಳದಾಗಿದ್ದು, ತಪಾಸಣೆ ಮಾಡದಿರುವುದು ಅಧಿಕಾರಿಗಳ ಬೇಜವಾಬ್ದಾರಿತನವಾಗಿರುತ್ತದೆ. ಇದರಿಂದಾಗಿ ಜಾಹೀರಾತುದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆ. ಈ ಬಗ್ಗೆ ಸಮಿತಿಯು ಇನ್ನು ಮುಂದೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಸಂಖ್ಯೆ ಮತ್ತು ಅಳತೆಯ ಬಗ್ಗೆ ಸ್ಪಷ್ಟವಾಗಿ ನಮೂದಿಸುವಂತೆ ಕ್ರಮಕೈಗೊಳ್ಳುವುದು ಹಾಗೂ ಜಾಹೀರಾತುದಾರರು ಈಗಾಗಲೇ ಅಳವಡಿಸಿಕೊಂಡಿರುವ ಫಲಕಗಳಿಗೆ ಡಿಮ್ಯಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವಂತೆ ರೂ.55,66,209/-ಗಳ ಜಾಹೀರಾತು ತೆರಿಗೆಯನ್ನು ಕೂಡಲೇ ಪಾವತಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11</u>

ಮೆ॥ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಮೂಲ ಕಡತವನ್ನು ಸಂಬಂಧಪಟ್ಟ ಅಧಿಕಾರಿಗಳು ಮಂಡಿಸದಿರುವುದು ತಿಳಿದು ಬಂದಿರುತ್ತದೆ. ಅರ್ಜಿದಾರರು ಹಾಜರಿರುತ್ತಾರೆ.

ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಮೂಲ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಅಧಿಕಾರಿಗಳುಲ ವಿಫಲರಾಗಿರುತ್ತಾರೆ. ಕಾನೂನು ಸಲಹೆಗಾರರಿಗೆ ಈಗಾಗಲೇ ಸೂಚಿಸಿದ್ದು, ಅವರು ಈ ದಿವಸ ಗೈರು ಹಾಜರಿಯಾಗಿರುತ್ತಾರೆ. ಪ್ರಕರಣ ಕುರಿತಂತೆ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿದೆ.

“ ಆದೇಶಕ್ಕಾಗಿ ಕಾಯ್ದಿರಿಸಿದೆ”

<u>08.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/29/2010-11</u>

ರಿಪ್ಪಲ್ ಮಿಡಿಯಾದವರು ದಿನಾಂಕ:11-01-2011ರಂದು ಸಮಿತಿಗೆ ಅರ್ಜಿ ಸಲ್ಲಿಸಿ ಅನಧಿಕೃತವಾಗಿ ಪ್ರಚುರ ಪಡಿಸಿರುವ ಜಾಹೀರಾತುಗಳನ್ನು ತೆರವುಗೊಳಿಸುವಂತೆ ಹಿಂಬರಹ ನೀಡಿರುತ್ತಾರೆ. ಆದರೆ ಬದಲಿ ಸ್ಥಳಗಳನ್ನು ಗುರುತಿಸಿಕೊಡುವಂತೆ ಹಲವಾರು ಬಾರಿ ಪತ್ರ ಬರೆದು ಕೋರಲಾಗಿದ್ದರೂ ಸಹ ಸದರಿ ಅಧಿಕಾರಿಗಳಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಆದರೆ ಈಗ ಕೂಡಲೇ ತೆರವುಗೊಳಿಸುವಂತೆ ತಿಳಿಸಿರುತ್ತಾರೆ. ಇದರಿಂದಾಗಿ ನಾವು ಜಾಹೀರಾತುಗಳ ಮೇಲೆ ಹೂಡಿರುವ ಹಣವು ಲುಕ್ಸಾನ್ ಆಗುತ್ತದೆಂದು ತಿಳಿಸುತ್ತಾ, ನ್ಯಾಯ ದೊರಕಿಸಿಕೊಡುವಂತೆ ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದವರು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಮಾಲೀಕರು ಪರಸ್ಥಳಕ್ಕೆ ಹೋಗಿದ್ದು ವಿಚಾರಣೆಯನ್ನು ಮುಂದೂಡಲು ಕೋರಿಕೊಂಡ ಮೇರೆಗೆ ವಿಚಾರಣೆಯನ್ನು ಮುಂದೂಡಿದೆ.

ಮೇಲ್ಮನವಿದಾರರ ಹಾಗೂ ಅಧಿಕಾರಿಗಳ ವಾದಗಳನ್ನು ಹಾಗೂ ಕಡತವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಮೇಲ್ಮನವಿದಾರರಿಗೆ ಇ ಟೆಂಡರ್ ಮುಖೇನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ಯಾಕೇಜ್ 03



ಮತ್ತು 06ರಲ್ಲಿ ಒಟ್ಟು 50 ಸ್ಥಳಗಳಲ್ಲಿ ಬಸ್ ತಂಗುದಾಣಗಳನ್ನು ಡಿಬಿಓಟಿ (demolish built own operate transfer) ಆಧಾರದ ಮೇಲೆ ನಿರ್ಮಾಣ ಮಾಡಲು ದಿನಾಂಕ:14-12-2009ರಂದು ಅನುಮತಿ ನೀಡಿರುವುದು ಕಂಡು ಬರುತ್ತದೆ. ನಂತರ ಮೇಲ್ಮನವಿದಾರರು ಕರಾರಿನಂತೆ ಬಸ್ ತಂಗುದಾಣಗಳನ್ನು ನಿರ್ಮಿಸದೆ ಅನಧಿಕೃತವಾಗಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಿದ್ದು ಅವುಗಳನ್ನು ತೆರವುಗೊಳಿಸುವಂತೆ ಹಿಂಬರಹ ನೀಡಲಾಗಿರುತ್ತದೆ. ಈ ಬಗ್ಗೆ ಮೇಲ್ಮನವಿದಾರರು ತಮ್ಮ ಹೇಳಿಕೆಯಲ್ಲಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲು ನೀಡಿರುವ ಸ್ಥಳಗಳೇ ತಪ್ಪಾಗಿರುತ್ತವೆ ಹಾಗೂ ಕೆಲವೊಂದು ಸ್ಥಳಗಳಲ್ಲಿ ಸ್ಥಳವಾಕಾಶವಿಲ್ಲದಿರುವುದಾಗಿ ತಿಳಿಸಿರುವುದನ್ನು ಕಾಣಬಹುದಾಗಿರುತ್ತದೆ. ಈ ಬಗ್ಗೆ ಮೇಲ್ಮನವಿದಾರರು ಆಯುಕ್ತರಿಗೆ ದಿನಾಂಕ:25-03-2010ರಂದು ಪತ್ರ ಬರೆದು ಸದರಿ ಜಾಗಗಳಿಗೆ ಬದಲಿಯಾಗಿ ಜಾಗಗಳನ್ನು ಗುರುತಿಸಿಕೊಡುವಂತೆ ಕೋರಿಕೊಂಡಿರುವುದು ಹಾಗೂ ಸದರಿಯವರಿಗೆ ಹಂಚಿಕೆಯಾಗಿರುವ ಸ್ಥಳಗಳಲ್ಲಿ ಓಹೆಚ್, ವ್ಯಾಂಟೇಜ್ ಮತ್ತು ಮೋವ್ವ ಸಂಸ್ಥೆಯವರು ಅತಿಕ್ರಮಿಸಿಕೊಂಡು ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಿಕೊಂಡಿರುವುದು ಕಂಡು ಬರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಬದಲಿಯಾಗಿ ಜಾಗಗೆಗಳನ್ನು ಗುರುತಿಸಿಕೊಟ್ಟಿರುವುದಾಗಲಿ ಬೇರೆ ಸಂಸ್ಥೆಯವರು ಅತಿಕ್ರಮಿಸಿಕೊಂಡಿರುವ ಸ್ಥಳಗಳನ್ನು ತೆರವುಗೊಳಿಸಿಕೊಟ್ಟಿರುವುದಾಗಲಿ ಕಂಡು ಬರುವುದಿಲ್ಲ. ಆದಕಾರಣ ಮೆ॥ರಿಪ್ಪಲ್ ಮೀಡಿಯಾ ಸಂಸ್ಥೆಯವರು ಪೋಲಿಸ್‌ರವರ ಅನುಮತಿ ಪಡೆದು ಬೇರೆ ಜಾಗಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಿಕೊಂಡಿರುವುದು ಸ್ಪಷ್ಟವಾಗಿರುತ್ತದೆ.

<u>ನಿರ್ಣಯ:</u>- ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ಸಮಿತಿಯು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಮೆ॥ರಿಪ್ಪಲ್ ಸಂಸ್ಥೆಯವರು ಅನಧಿಕೃತವಾಗಿ ನಿರ್ಮಾಣ ಮಾಡಿರುವ ಎಲ್ಲಾ ಬಸ್ ತಂಗುದಾಣಗಳಿಗೆ ತೆರಿಗೆಯನ್ನು ವಿಧಿಸಿ ಅಧಿಕೃತಗೊಳಿಸುವುದೆಂದು ಹಾಗೂ ಇನ್ನು ಮುಂದೆ ಬಸ್ ತಂಗುದಾಣಗಳಿಗೆ ಜಾಗಗಳನ್ನು ಗುರುತಿಸಿಕೊಡುವಾಗ ಎಚ್ಚರಿಕೆ ವಹಿಸಿ ಸರಿಯಾದ ಸ್ಥಳಗಳನ್ನು ಗುರುತಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಯುಕ್ತರು ಸೂಚನೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.

<u>09.ವಿಷಯ:ಸಂಖ್ಯೆ:ಅಸ್ಥಾಸ/(ಆ)/34/2010-11</u>

ಶ್ರೀ ಜ್ಯೋತಿ ಸ್ಟೋರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

<u>10.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2010-11</u>

ಎ.ಪ್ರಗಸ್ಪತಿ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

11.ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2010-11

ವಿ.ಗುರುಸ್ವಾಮಿ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

12.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2010-11

ಎ.ಗ್ರಹದೀರ್ಕೈ, ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ

-6-

ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

13.ವಿಷಯ:ಸಂಖ್ಯೆ:ಅಸ್ಥಾಸ/(ಆ)/38/2010-11

ಬಿ.ವಿ.ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

14.ವಿಷಯ:ಸಂಖ್ಯೆ:ಅಸ್ಥಾಸ/(ಆ)/39/2010-11

ಬಿ.ದಾಮೋದರ್ ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

15.ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-201ರ ಆದೇಶಗಳಂತೆ 2011-2012ನೇ ಸಾಲಿನ ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2001ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಹಾಜರಿದ್ದು ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ನವೀಕರಿಸಬಾರದೆಂದು ಪತ್ರ ನೀಡಿ ಕೋರಿಕೊಂಡಿದ್ದರೂ ಸಹ ನವೀಕರಿಸಿರುತ್ತಾರೆ. ಆದ್ದರಿಂದ

ಸ್ವತ್ತಿನ ಮಾಲೀಕರ ಅನುಮತಿ ಇಲ್ಲದೆ ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಪರವಾನಗಿಯನ್ನು ನವೀಕರಿಸಿಕೊಡದಂತೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಆರೋಗ್ಯಾದಿಕಾರಿ (ಪಶ್ಚಿಮ)ರವರು ಸದರಿ ಉದ್ದಿಮೆಯ ಪರವಾನಗಿಯನ್ನು ಈ ವರ್ಷದಲ್ಲಿ ನವೀಕರಿಸದಂತೆ ಸಂಬಂಧಪಟ್ಟವರಿಗೆ ತಿಳಿಸಲಾಗಿರುತ್ತದೆ. ಅದರಂತೆ ಈ ವರ್ಷದಲ್ಲಿ ಸದರಿ ಉದ್ದಿಮೆಯ ಪರವಾನಗಿಯನ್ನು ನವೀಕರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಮಾಲೀಕರು ಸದರಿ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಮಾಡಿಕೊಳ್ಳಲು ಕೋರಿರುತ್ತಾರೆ. ಆದುದರಿಂದ ಮುಂದಿನ ದಿನಾಂಕಕ್ಕೆ ಪ್ರಕರವನ್ನು ಮುಂದೂಡಲಾಗಿದೆ.



16.ವಿಷಯ:ಸಂಖ್ಯೆ:ಅಸ್ಥಾಸ/(ಆ)/41/2010-11

ಶ್ರೀ.ಟಿ.ಜಿ.ಪ್ರಭಾಕರ್ ಗುಪ್ತಾರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

17.ವಿಷಯ:ಸಂಖ್ಯೆ:ಅಸ್ಥಾಸ/(ಆ)/42/2010-11

ನಾಗರಾಜ ಟ್ರೇಡಿಂಗ್‌ನ ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

18.ವಿಷಯ:ಸಂಖ್ಯೆ:ಅಸ್ಥಾಸ/(ಆ)/43/2010-11

ರಾಯಲ್ ಫೈರ್ ವರ್ಕ್ಸ್ ಇಂಡಸ್ಟ್ರೀಸ್ ಟ್ರೇಡಿಂಗ್ ಕಂಪನಿ, ಇವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

19.ವಿಷಯ:ಸಂಖ್ಯೆ:ಅಸ್ಥಾಸ/(ಆ)/44/2010-11

ಶ್ರೀಮತಿ.ಶಂಕರಮ್ಮ ಇವರು ದಿನಾಂಕ:ದಿನಾಂಕ:03-12-2010ರಂದು ಸಮಿತಿಗೆ ಮನವಿಯನ್ನು ಸಲ್ಲಿಸಿ ಸಂಖ್ಯೆ:12/1, 7ನೇ ಅಡ್ಡರಸ್ತೆ, ಸಂಪಂಗಿ ರಾಮನಗರ, ವಾರ್ಡ್-110 ಈ ಸ್ವತ್ತಿನಲ್ಲಿ ನಡೆಸುತ್ತಿರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳನ್ನು ನಗರ ಪಾಲಿಕೆಯಿಂದ ಪರವಾನಗಿ ಪಡೆದು ನಡೆಸುತ್ತಾ ಇರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳಿಗೆ ಪಡೆದಿರುವ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)ರವರ ಕಛೇರಿ, ಎಸ್-2 ಉಪ ವಿಭಾಗ ಇವರಿಗೆ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ)ರವರ ಪತ್ರ ಸಂಖ್ಯೆ:ಆ.ವೈ(ಶಿವ)ಪಿಆರ್/64/10-11, ದಿನಾಂಕ:6-10-2010ರ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರ ಪರವಾಗಿ ಅವರ ಪತಿಯವರಾದ ಶ್ರೀ.ರಾಜಶೇಖರ್‌ರವರು ಹಾಜರಿರುತ್ತಾರೆ. ಪ್ರತಿವಾದಿಗಳು ಈ ವಿಷಯದಲ್ಲಿ ಸ್ಪಷ್ಟವಾದ ನೋಟೀಸ್‌ನ್ನು 3 ದಿನಗಳೊಳಗಾಗಿ ಹೊರಡಿಸುವುದೆಂದು ತಿಳಿಸಿ ಪ್ರಕರಣವನ್ನು ಮುಂದೂಡಲಾಯಿತು.

20.ವಿಷಯ:ಸಂಖ್ಯೆ:ಅಸ್ಥಾಸ/(ಆ)/45/2010-11

ಶ್ರೀ.ಸಿ.ಪಯಾಜ್ ಪಾಷ, ನಂ.22/68 ಬಿ ಉಕ್ಸಾ ಮಸೀದಿ ರಸ್ತೆ, ಹೋಲಿ ಕ್ರೈಸ್ಟ್ ಶಾಲೆ ಎದುರು, ಅಶ್ವತ್ಥನಗರ, ಥಣೀಸಂದ್ರ, ಬೆಂಗಳೂರು-77 ಇಲ್ಲಿ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ರದ್ದುಗೊಳಿಸುವಂತೆ ಆರೋಗ್ಯ ವೈದ್ಯಾಧಿಕಾರಿ (ಬ್ಯಾಟರಾಯನಪುರ)ರವರು ದಿನಾಂಕ:12-10-2011ರಂದು ನೀಡಿರುವ ನೋಟೀಸಿನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.
ಮೇಲ್ಮನವಿದಾರರಿಗೆ ಮತ್ತು ದೂರುದಾರರಿಗೆ ನೋಟೀಸ್ ಜಾರಿ ಮಾಡಿ ಮೂಲ ಕಡತದೊಂದಿಗೆ ಸಭೆಗೆ ಹಾಜರಾಗುವಂತೆ ಸೂಚಿಸಿದೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಹಾಜರಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳು ಹಾಜರಿರುತ್ತಾರೆ. 3 ಪ್ರತಿವಾದಿಯು ಹಾಜರಿಲ್ಲದ ಪ್ರಯುಕ್ತ ಸದರಿಯವರಿಗೆ ನೋಟೀಸ್ ಜಾರಿಮಾಡುವಂತೆ ತಿಳಿಸಿ ಪ್ರಕರಣವನ್ನು ಪ್ರಕರಣವನ್ನು ಮುಂದೂಡಲಾಯಿತು.



21.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/46/2010-11

ಶ್ರೀ.ಎಸ್.ಮೋಹನ್, ನಂ.48/36, 18ನೇ ಮುಖ್ಯರಸ್ತೆ, ಉದಯಸ್ಕೂಲ್ ರಸ್ತೆ, ವಿಜಯನಗರ, ಬೆಂಗಳೂರು-10 ಇವರ ನಿವೇಶನ ಸಂಖ್ಯೆ:258, 7ನೇ ಮುಖ್ಯರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ ಈ ಸ್ವತ್ತನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸುಮಾರು 35 ವರ್ಷಗಳ ಹಿಂದೆ ವಶಪಡಿಸಿಕೊಂಡಿದ್ದು, ಈ ಬಗ್ಗೆ ಸದರಿಯವರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಹಾಗೂ ಅಹವಾಲು ಹೇಳಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಿಲ್ಲವೆಂದು ಹಾಗೂ ನಿವೇಶನ ಸಂಖ್ಯೆ:73, 4ನೇ ಟಿ ಬ್ಲಾಕ್, ಜಯನಗರ, 30-31ನೇ ಅಡ್ಡರಸ್ತೆಯಲ್ಲಿ 53X40 ಅಡಿ ಅಳತೆಯ ನಿವೇಶನವನ್ನು ಬದಲಿಯಾಗಿ ನೀಡಿ ರೂ.3,91,880/- ಗಳನ್ನು ಪಾವತಿಸಲು ಸೂಚಿಸಿರುತ್ತಾರೆ. ನನ್ನ ಸ್ವತ್ತನ್ನು ವಶಪಡಿಸಿಕೊಂಡಿರುವುದಕ್ಕೆ ಬದಲಿಯಾಗಿ ನಿವೇಶನವನ್ನು ನೀಡದೆ ಹಣವನ್ನ ಪಾವತಿಸಬೇಕೆಂದು ಕೇಳಿರುವುದು ಏಕೆಂದು ನನಗೆ ತಿಳಿಯುತ್ತಿಲ್ಲ. ನನ್ನ ಸ್ವತ್ತಿಗೆ ಬದಲಿಯಾಗಿ ಸ್ವತ್ತನ್ನು ನೀಡಬೇಕೆ ಹೊರತು ಹಣವನ್ನು ಪಾವತಿಸಿ ಎಂದು ಕೇಳುವುದು ಯಾವ ನ್ಯಾಯವೆಂದು ಪ್ರಶ್ನಿಸಿ ನ್ಯಾಯ ಒದಗಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರ ಹಾಜರಾಗಿರುತ್ತಾರೆ. ನಾವು ಜಿಪಿಎ ಮುಖಾಂತರ ಅನುಮತಿ ಪಡೆದಿದ್ದು, ಸ್ವತ್ತಿನ ಭೂ ಸ್ವಾಧೀನತೆಯನ್ನು ಕಾನೂನಿನ ಪ್ರಕಾರ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಆಸ್ತಿ ವಿಭಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿ ಸಂಬಂಧಪಟ್ಟ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಪ್ರಕರಣವನ್ನು ಮುಂದೂಡಲಾಯಿತು.

22.ವಿಷಯ:ಸಂಖ್ಯೆ:ಅಸ್ಥಾಸ/(ಆ)/47/2010-11

ಶ್ರೀ.ಬಿ.ವಿ.ಗಣೇಶ್, ನಂ.632, 12ನೇ ಅಡ್ಡರಸ್ತೆ, 2ನೇ ಮುಖ, ಗಿರಿನಗರ, ಬೆಂಗಳೂರು ಇಲ್ಲಿ ಶ್ರೀ.ವೇಣುಗೋಪಾಲ್‌ರವರ ಹೆಸರಿನಲ್ಲಿ ಪಾಲಿಕೆ ವತಿಯಿಂದ 10 ಅಶ್ವ ಶಕ್ತಿಗೆ ಪರವಾನಗಿ ಪಡೆದು ಪ್ಲೋರ್ ಮಿಲ್‌ನ್ನು ನಡೆಸುತ್ತಿದ್ದು, ಪಕ್ಕದ ಮನೆಯವರ ಆಕ್ಷೇಪಣೆಯಿಂದ ನನಗೆ ನೀಡಿದ ಉದ್ದಿಮೆ ಪರವಾನಗಿ ಮತ್ತು ವಿದ್ಯುತ್‌ನ್ನು ಕಡಿತಗೊಳಿಸಿರುತ್ತಾರೆ. ಆದುದರಿಂದ ನನಗೆ ಉದ್ದಿಮೆ ಪರವಾನಗಿ ಹಾಗೂ ವಿದ್ಯುತ್ ಸಂಪರ್ಕವನ್ನು ಕೊಡಿಸಿಕೊಡಬೇಕೆಂದು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ವಕೀಲರು ಹಾಜರಿದ್ದು, ಸದರಿ ಉದ್ದಿಮೆಗೆ 1991ರಲ್ಲಿ ಕತ್ತರಗುಪ್ಪೆ ಗ್ರಾಮ ಪಂಚಾಯಿತಿಯಿಂದ ಪರವಾನಗಿ ಪಡೆದು ಹಿಟ್ಟಿನ ಗಿರಣಿಯನ್ನು ನಡೆಸುತ್ತಿರುತ್ತಾರೆ. ಶ್ರೀ.ಕೃಷ್ಣರಾವ್‌ರವರು 1993ರಲ್ಲಿ ಪಂಚಾಯಿತಿಗೆ ತಕರಾರು ಸಲ್ಲಿಸಿದ ಕಾರಣ ಪರವಾನಿಗೆ ನವೀಕರಿಸದೇ ವಜಾ ಮಾಡಿರುತ್ತಾರೆ. ಇದನ್ನು ಪ್ರಶ್ನಿಸಿ ಶ್ರೀ.ಗಣೇಶ್‌ರವರು, ಬೆಂಗಳೂರ ಉಪ ವಿಭಾಗಾಧಿಕಾರಿಗಳಲ್ಲಿ ವಜಾ ಮಾಡಿರುವುದನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ದಿನಾಂಕ:24-09-1993ರಂದು ನವೀಕರಿಸುವಂತೆ ಆದೇಶ ಮಾಡಿರುತ್ತಾರೆ. ಶ್ರೀ.ಕೃಷ್ಣರಾವ್‌ರವರು ಉಪ ವಿಭಾಗಾಧಿಕಾರಿಗಳ ಆದೇಶವನ್ನು ಪ್ರಶ್ನಿಸಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:35656/1993ರನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ಒಂದು ವೇಳೆ ಮಾಲಿನ್ಯ ಬಂದಲ್ಲಿ ಪರಿಸರ ಮಾಲಿನ್ಯದವರಿಗೆ ದೂರು ನೀಡಬಹುದೆಂದು ಆದೇಶಿಸಿ ವಿಭಾಗಾಧಿಕಾರಿಗಳು ಮಾಡಿರುವ ಆದೇಶವು ಸಂಜಸವಾಗಿರುತ್ತದೆಂದು ದಾವೆಯನ್ನು ವಜಾ ಮಾಡಿರುತ್ತಾರೆ. ಇಷ್ಟಾದರೂ ಸಹ ಅಂಗವಿಕಲರಾದ ಶ್ರೀ.ಬಿ.ವಿ.ಗಣೇಶ್‌ರವರು ನಡೆಸುತ್ತಿರುವ ಹಿಟ್ಟಿನ ಗಿರಣಿಯ ಪರವಾನಗಿಯನ್ನು ರದ್ದು ಪಡಿಸಿರುವುದು ಯಾವ ನ್ಯಾಯ ಸ್ವಾಮಿ. ಈ ಬಗ್ಗೆ ಉದ್ದಿಮೆದಾರರು ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ರದ್ದು ಪಡಿಸಿರುವ ಆದೇಶವನ್ನು ಹಿಂಪಡೆಯಲು ತಿಳಿಸಿರುತ್ತಾರೆ. ಆದುದರಿಂದ ಅಂಗವಿಕಲರಾದ ಶ್ರೀ.ಬಿ.ವಿ.ಗಣೇಶ್‌ರವರಿಗೆ ಉದ್ದಿಮೆ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

**ನಿರ್ಣಯ**:-ವಕೀಲರ ವಾದ ಮತ್ತು ದಿನಾಂಕ:19-03-2011ರ ಆಯುಕ್ತರ ಟಿಪ್ಪಣಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಶ್ರಿ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು, ಸುಮಾರು 20 ವರ್ಷಗಳಿಂದ ಹಿಟ್ಟಿನ ಗಿರಣಿಯನ್ನು ನಡೆಸುತ್ತಿರುವುದು ಕಂಡು ಬರುತ್ತದೆ. ಸದರಿ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಶ್ರೀ.ಬಿ.ವಿ.ಗಣೇಶ್‌ರವರ ಉದ್ದಿಮೆಗೆ ರದ್ದು ಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

ಸಹಿ:
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:20-05-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಎಲ್ಲಾ ವಲಯಗಳ ಅಪರ/ಜಂಟಿ/ಉಪ ಆಯುಕ್ತರು |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಉಪ ಆಯುಕ್ತರು (ಆರೋಗ್ಯ/ಕಂದಾಯ/ಮಾರುಕಟ್ಟೆ/ಕಲ್ಯಾಣ/ಜಾಹೀರಾತು) |
| 04 | ಬಿ.ಎಸ್.ಆನಂದ | ಸದಸ್ಯರು | ಎಲ್ಲಾ ವಲಯಗಳ ಮುಖ್ಯ ಅಭಿಯಂತರರುಗಳು |
| 05 | ಎಂ.ವಸಂತಕುಮಾರಿ | ಸದಸ್ಯರು | ಮುಖ್ಯ ಆರೋಗ್ಯ ವೈದ್ಯಾಧಿಕಾರಿಗಳು |
| 06 | ಬಿ.ಗೋವಿಂದರಾಜು | ಸದಸ್ಯರು | ಎಲ್ಲಾ ವಲಯಗಳ ಕಂದಾಯ ಅಧಿಕಾರಿಗಳು |
| 07 | ಡಿ.ವೆಂಕಟೇಶ್ | ಸದಸ್ಯರು | ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರುಗಳು |
| 08 | ಜಿ.ಎನ್.ಆರ್.ಬಾಬು | ಸದಸ್ಯರು | ಎಲ್ಲಾ ವಲಯಗಳ ಆರೋಗ್ಯ ವೈದ್ಯಾಧಿಕಾರಿಗಳು |
| 09 | ಮುನಿರತ್ನಮ್ಮ | ಸದಸ್ಯರು | ಎಲ್ಲಾ ವಲಯಗಳ ತೋಟಗಾರಿಕೆ ಅಧೀಕ್ಷಕರುಗಳು |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಾಗ ಅಂತಹ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ ಕಲಂ 321(1) ಮತ್ತು (2)ರಡಿ (Provisional Order) ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ ಆದೇಶಗಳನ್ನು ಪಡೆದಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3) (Confirmation Order) ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಸದರಿ ಸ್ಥಿರೀಕರಣ ಆದೇಶವನ್ನು ಪ್ರಶ್ನಿಸಿ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ ಆದೇಶಗಳನ್ನು ಪಡೆದಿರುತ್ತಾರೆಂಬ ಬಗ್ಗೆ ವಿವಿರವಾದ ವರದಿಯನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಮುಂದುವರೆದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ವಾಣಿಜ್ಯ ಕಟ್ಟಡ, ಮಾಲ್, ಬಹು ಮಹಡಿ ಕಟ್ಟಡ ಹಾಗೂ ಇನ್ನಿತರೆ ಕಟ್ಟಡಗಳಿಗೆ ನಕ್ಷೆಗಳನ್ನು ಮಂಜೂರಾತಿ ನೀಡಲಾಗಿರುತ್ತದೆ. ಸದರಿ ನಕ್ಷೆಗಳನ್ನು ನೀಡುವಾಗ ಅನುಸರಿಸಿರುವ ಮಾನದಂಡಗಳೇನು. ಸಿ.ಡಿ.ಪಿ-2015ರ ಪ್ರಕಾರ

ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆಯೇ ಅದೇ ರೀತಿ ನಕ್ಷೆ ಮಂಜೂರಾತಿ ಪಡೆದ ಮಾಲೀಕರು ಕಟ್ಟಡಗಳನ್ನು ಮಂಜೂರಾತಿ ನಕ್ಷೆಯ ಪ್ರಕಾರವೇ ನಿರ್ಮಿಸಿರುತ್ತಾರೆಯೇ. ಒಂದು ವೇಳೆ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಂತಹ ಮಾಲೀಕರ ವಿರುದ್ಧ ಎಷ್ಟು ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ.



ಸಿ.ಡಿ.ಪಿ.ಯಲ್ಲಿ ನಮೂದಿಸಿರುವ ಮಾದರಿಯಲ್ಲಿಯೇ ರಸ್ತೆಗಳನ್ನು ಬಿಟ್ಟು ಕಟ್ಟಡದ ಮಾಲೀಕರು ಕಟ್ಟಡಗಳನ್ನು ನಿರ್ಮಿಸಿರುತ್ತಾರೆಯೇ ನಕ್ಷೆಯನ್ನು ಮಂಜೂರು ಮಾಡುವಾಗ ನೀವುಗಳು ಸ್ಥಳ ಪರಿಶೀಲನೆ ಮಾಡಿ ನಕ್ಷೆ ಮಂಜೂರಾತಿ ಮಾಡಲಾಗಿರುತ್ತದೆಯೇ ಎಂಬ ಬಗ್ಗೆ ವಿವರಗಳನ್ನು ನೀಡುವುದು.

ವಲಯವಾರು ಅನಧಿಕೃತವಾಗಿ ನಿರ್ಮಾಣ ಮಾಡಿರುವ ಕಟ್ಟಡಗಳೆಷ್ಟು, ವಾರ್ಷಿಕ ನಿಗಧಿ ಪಡಿಸಿರುವ ಕಂದಾಯದ ಮೊತ್ತವೆಷ್ಟು, ಹಾಲಿ ವಸೂಲಾಗಿರುವ ಕಂದಾಯದ ಮೊತ್ತವೆಷ್ಟು, ವಸೂಲಾಗಿರಬೇಕಾಗಿರುವ ಕಂದಾಯದ ಮೊತ್ತವೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸ್‌ನ್ ಹಾಲ್‌ಗಳೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸ್‌ನ್ ಹಾಲ್‌ಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಚಿತ್ರಮಂದಿರಗಳೆಷ್ಟು ಅವುಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಎಷ್ಟು ಖಾಲಿ ನಿವೇಶನಗಳಿಂದ ಕಂದಾಯ ವಸೂಲಾಗಿರುತ್ತದೆ ಹಾಗೂ ಎಷ್ಟು ಕಟ್ಟಡಗಳಿಂದ ಕಂದಾಯ ವಸೂಲಾಗಿರುತ್ತದೆ. ಕಂದಾಯವನ್ನು ನಿಗಧಿ ಪಡಿಸಿಕೊಳ್ಳದಿರುವ ಖಾಲಿ ನಿವೇಶನ ಮತ್ತು ಕಟ್ಟಡಗಳೆಷ್ಟು, ವಾಣಿಜ್ಯ ಕಟ್ಟಡ/ಮಾಲ್‌ಗಳೆಷ್ಟಿರುತ್ತವೆ, ಅವುಗಳಿಂದ ವಸೂಲಾಗುತ್ತಿರುವ ಕಂದಾಯವೆಷ್ಟು, ಕಂದಾಯವನ್ನು ನಿಗಧಿಪಡಿಸಿಕೊಳ್ಳದಿರುವ ಹಾಗೂ ತಪ್ಪಾಗಿ ನಿಗಧಿಪಡಿಸಿಕೊಂಡಿರುವ ಸ್ವತ್ತು/ಕಟ್ಟಡದ ಮಾಲೀಕರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ವಿವಿರವನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ವಲಯದಲ್ಲೂ ಯಾವ ಯಾವ ಕೇಬಲ್ ಸಂಸ್ಥೆಯವರು ಎಷ್ಟು ಮೀಟರ್‌ಗಳ ಕೇಬಲ್‌ಗಳನ್ನು ಅಳವಡಿಸಿರುತ್ತಾರೆ. ಕೇಬಲ್‌ಗಳನ್ನು ಅಳವಡಿಸಿದ ನಂತರ ಛಿಟ್‌ಗಳನ್ನು ಸರಿಯಾಗಿ ಮುಚ್ಚದೆ ಡಸ್ಟ್ ಹಾಕಿ ಮೇಲೆ ಟಾರ್ ಹಾಕಿರುತ್ತಾರೆ. ಅಂತಹ ಸಂಸ್ಥೆಯವರ ಮೇಲೆ ಏನು ಕ್ರಮ ಜರುಗಿಸಲಾಗಿರುತ್ತದೆ. ಆ ರೀತಿಯ ಎಷ್ಟು ಪ್ರಕರಣಗಳಲ್ಲಿ ಇದುವರೆವಿಗೆ ಕ್ರಮ ಕೈಗೊಳ್ಳಲಾಗಿರುತ್ತದೆಂಬ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ ಇಲಾಖೆಯಲ್ಲಿ ಅಪೀಲು ಕೋರಿ ಬರುತ್ತಿರುವ ಅರ್ಜಿಗಳನ್ನು ಸ್ವೀಕರಿಸುತ್ತಿರುವುದಿಲ್ಲವೆಂಬುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ಹಲವಾರು ಸಾರ್ವಜನಿಕರು ದೂರವಾಣಿ ಮುಖಾಂತರ ನನ್ನಲ್ಲಿ ಮನವಿ ಮಾಡಿಕೊಂಡಿರುತ್ತಾರೆ. ಯಾವ ಕಾರಣಕ್ಕಾಗಿ ನೀವು ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಹಾಗೂ ಹಿಂಬರಹ ನೀಡುವಾಗ ಸ್ಪಷ್ಟವಾದ ಕಾರಣವನ್ನು ತಿಳಿಸಿ ತಿರಸ್ಕರಿಸಲಾಗಿರುತ್ತೆಂಬ ಬಗ್ಗೆಯೂ ಸಹ ನಮೂದಿಸದೆ ಹಿಂಬರಹ ನೀಡುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ವಾರ್ಡ್‌ವಾರು 2010-2011 ಮತ್ತು 2011-12ನೇ ಸಾಲಿನಲ್ಲಿ ಎಷ್ಟು ಐಷಾರಾಮಿ ಹೋಟೆಲ್, ಮಧ್ಯಮ ವರ್ಗದ ಹೋಟೆಲ್ ಹಾಗೂ ದರ್ಶಿನಿಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು 2010-2011 ಮತ್ತು 2011-12ನೇ ಸಾಲಿನಲ್ಲಿ ಎಷ್ಟು ಬೃಹತ್ ಮತ್ತು ಸಣ್ಣ ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು ಎಷ್ಟು ಮೀನು ಮಾರಾಟ ಮಳಿಗೆಗಳು, ಮಾಂಸ ಮಾರಾಟ ಮಳಿಗೆಗಳು ಹಾಗೂ ಕೋಳಿ ಮಾರಾಟ ಕೇಂದ್ರಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು.

ದಿನಿತ್ಯದ ಕಸವನ್ನು ನಿರ್ವಹಿಸುತ್ತಿರುವ ಸ್ಥಳ ಹಾಗೂ ಗುತ್ತಿಗೆದಾರರ ವಿವಿರಗಳನ್ನು ಒದಗಿಸುವುದು. ಆರೋಗ್ಯ ಇಲಾಖೆಯು ನೀಡುತ್ತಿರುವ ಪರವಾನಗಿ ಶುಲ್ಕದಿಂದ ನಗರ ಪಾಲಿಕೆಗೆ ಬರುತ್ತಿರುವ ಆಧಾಯವೆಷ್ಟು. ದಿನ ನಿತ್ಯ



ಸಂಗ್ರಹವಾಗುವ ತ್ಯಾಜ್ಯವನ್ನು ವಿಲೇ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಒದಗಿಸುವುದೆಂದು ಸೂಚಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ಜಾಹೀರಾತು ಫಲಕಗಳನ್ನು ಅಳವಡಿಸಲಾಗಿರುತ್ತದೆ. ಅನಧಿಕೃತವಾಗಿ ಅಳವಡಿಸಿಕೊಂಡಿರುವ ಜಾಹೀರಾತುದಾರರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತು ಫಲಕಗಳು, ಬ್ಯಾನರ್‌ಗಳು ಮತ್ತು ಬಂಟಿಂಗ್ಸ್‌ಗಳನ್ನು ತೆರವುಗೊಳಿಸಲು ಅನುಸರಿಸುತ್ತಿರುವ ಕ್ರಮಗಳೇನು. ಜಾಹೀರಾತಿನಿಂದ ನಗರ ಪಾಲಿಕೆಯ ಬೊಕ್ಕಸಕ್ಕೆ ವಾರ್ಷಿಕ ಎಷ್ಟು ಆಧಾಯ ಬರುತ್ತಿದೆ. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತುಗಳ ವಿರುದ್ಧ ಇದುವರೆವಿಗೂ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ.

ಜಾಹೀರಾತು ಮಾಲೀಕರು ಪರವಾನಗಿಯನ್ನು ಪಡೆಯುವಾಗ ನೀಡುವ ಅಳತೆ ಮತ್ತು ಸಂಖ್ಯೆಗಳಿಗಿಂತ ಹೆಚ್ಚು ಅಳತೆ ಮತ್ತು ಸಂಖ್ಯೆಯ ಜಾಹೀರಾತುಗಳನ್ನು ಪ್ರದರ್ಶಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಈ ರೀತಿ ಪ್ರದರ್ಶಿತವಾಗುತ್ತಿರುವ ಎಷ್ಟು ಜಾಹೀರಾತುಗಳನ್ನು ಪತ್ತೆ ಹಚ್ಚಲಾಗಿರುತ್ತದೆ ಮತ್ತು ಅಂತಹ ಜಾಹೀರಾತುದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ. ಇದರಿಂದಾಗಿ ನಗರ ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುವುದಿಲ್ಲವೆ ಎಂಬ ಬಗ್ಗೆ ವಿವರವನ್ನು ನೀಡುವುದು.

ಮುಂದುವರೆದಂತೆ ಕೆಲವೊಂದು ಜಾಹೀರಾತುದಾರರು ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಪಡೆದಿದ್ದು ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ. ಪರವಾನಗಿ ಅವಧಿ ಮುಗಿದಿದ್ದರೂ ಸಹ ಕಾಲಮಿತಿಯೊಳಗೆ ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ತನ್ನಷ್ಟಕ್ಕೆ ತಾನೇ ಪರವಾನಗಿಯು (ಡೀಮ್ಡ್ ಪರ್ಮಿಷನ್) ಮುಂದುವರೆಯುತ್ತದೆಂದು ಭಾವಿಸಿ ಅಳವಡಿಸಿಕೊಂಡಿರುವ ಜಾಹೀರಾತು ಫಲಕಗಳೆಷ್ಟು.

ಘನ ಉಚ್ಚನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:5954/2011(ಎಲ್‌ಬಿ-ಬಿಎಂಪಿ-ಪಿಐಎಲ್)ರಲ್ಲಿ ದಿನಾಂಕ:08-02-2011ರಂದು ನೀಡಿರುವ ಆದೇಶದಂತೆ ಇದುವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು. ಎಷ್ಟು ಪ್ರಕರಣಗಳಲ್ಲಿ ಕ್ರಮ ವಹಿಸಿರುತ್ತೀರಿ, ಕ್ರಮ ವಹಿಸದಿದ್ದರೆ ಏತಕ್ಕಾಗಿ ಕ್ರಮ ವಹಿಸಿರುವುದಿಲ್ಲವೆಂಬ ಬಗ್ಗೆ ವರದಿಯನ್ನು ನೀಡುವಂತೆ ಸಮಿತಿಗೆ ಸೂಚಿಸಿದರು.

ಪ್ರತಿ ವಲಯದಲ್ಲೂ ಹೊಸದಾಗಿ ಉದ್ಭವವಾಗಿರುವ ಸ್ಲಂಗಳೆಷ್ಟು. ಆ ಸ್ಲಂಗಳಲ್ಲಿ ವಾಸಿಸುತ್ತಿರುವವರಿಗೆ ಪಟ್ಟಗಳನ್ನು ನೀಡಲಾಗಿರುತ್ತದೆಯೇ. ಕೆಲವು ಕಡೆ ಸಾರ್ವಜನಿಕರು ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಅಲ್ಲಿರುವ ಮರಗಳನ್ನು ಅನುಮತಿ ಪಡೆಯದೆ ಕಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಅಂತಹ ಮಾಲೀಕರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು.

ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ.ಗೌತಮ್ ಕುಮಾರ್‌ರವರು ಮಾತನಾಡುತ್ತಾ, ಜೋಗುಪಾಳ್ಯದ ಜಟಕಾ ಸ್ಟಾಂಡ್ ಹತ್ತಿರ ಸುಮಾರು ಹತ್ತು ಸಾವಿರ ಚರದಡಿ ನಗರ ಪಾಲಿಕೆ ಜಾಗವನ್ನು ಅನಧಿಕೃತವಾಗಿ

ಉಪಯೋಗಿಸಲಾಗುತ್ತಿದೆ. ಈ ಬಗ್ಗೆ 8-9 ತಿಂಗಳ ಹಿಂದೆಯೇ ಸಂಬಂಧಪಟ್ಟ ಅಪರ ಆಯುಕ್ತರೊಂದಿಗೆ ತಪಾಸಣೆ ಮಾಡಲಾಗಿರುತ್ತದೆ. ಆದರೆ ಅನಧಿಕೃತವಾಗಿ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿರುವವರನ್ನು ಇದುವರೆವಿಗೂ ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ. ಕಾರಣ ಸದರಿ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳೇ ಇರುವುದಿಲ್ಲ. ಇದರಿಂದಾಗಿ ನಗರ ಪಾಲಿಕೆಯ ಆಸ್ತಿಯು ಅನಾವಶ್ಯವಾಗಿ ಯಾರದೋ ಪಾಲಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸುವುದು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಕೆ.ಎ.ಟಿ. ಮುಂದೆ ಇರುವ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ ಇದನ್ನು ಸಮಿತಿಯು ಗಂಭೀರವೆಂದು ಪರಿಗಣಿಸಿ ತಮ್ಮ ತಮ್ಮ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕೆ.ಎ.ಟಿ. ಮುಂದೆ ದಾಖಲಾಗಿರುವ ಪ್ರಕರಣಗಳನ್ನು ವಿಳಾಸದೊಂದಿಗೆ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿದರು.

ಅನಧಿಕೃತವಾಗಿ ಕೇಬಲ್ ಅಳವಡಿಸುವುದು ಹಾಗೂ ಫಿಟ್‌ಗಳನ್ನು ಸರಿಯಾಗಿ ಮುಚ್ಚದ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಸಂಸ್ಥೆಯವರಿಗೆ ದಂಡವನ್ನು ವಿಧಿಸಲಾಗುವುದೆಂದು ಹಾಗೂ ವಿವರವಾದ ವರದಿಯನ್ನು ಸಮಿತಿಯ ಮುಂದೆ ಮಂಡಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಮುಖ್ಯ ಅಭಿಯಂತರರು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಜಾಹೀರಾತು)ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇತ್ತೀಚೆಗೆ ಯಾವುದೇ ಹೊಸ ಜಾಹೀರಾತುಗಳಿಗೆ ಪರವಾನಗಿಯನ್ನು ನೀಡುತ್ತಿರುವುದಿಲ್ಲ; ಅನಧಿಕೃತ ಜಾಹೀರಾತುಗಳನ್ನು ಆಗ್ಗಿಂದಾಂಗ್ಗೆ ತೆರವುಗೊಳಿಸಲಾಗುತ್ತಿದೆ ಹಾಗೂ ಅನಧಿಕೃತ ಜಾಹೀರಾತು ಪಲಕಗಳು, ಬಂಟಿಂಗ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸುವ ಕಾರ್ಯವನ್ನು ರಾತ್ರಿ ವೇಳೆಯಲ್ಲೂ ಸಹ ನಿರ್ವಹಿಸಲಾಗುತ್ತಿದೆ. ಇತ್ತೀಚೆಗೆ ನಗರ ಪಾಲಿಕೆಯಲ್ಲಿ ಜಾಹೀರಾತು ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ಜಾಹೀರಾತುದಾರರು ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಪಡೆದುಕೊಂಡು ಜಾಹೀರಾತುಗಳನ್ನು ಪ್ರದರ್ಶಿಸಿಸುತ್ತಿದ್ದಾರೆ. ತಡೆಯಾಜ್ಞೆ ತೆರವುಗೊಳಿಸುವ ಬಗ್ಗೆ ಈಗಾಗಲೇ ನಗರ ಪಾಲಿಕೆಯ ಕಾನೂನು ಕೋಶದ ವತಿಯಿಂದ ಕ್ರಮ ವಹಿಸಲಾಗುತ್ತಿದೆ. ಕಾಲಮಿತಿಯೊಳಗೆ ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ತನ್ನಷ್ಟಕ್ಕೆ ತಾನೇ ಪರವಾನಗಿಯು (ಡೀಮ್ಡ್ ಪರ್ಮಿಷನ್) ಮುಂದುವರೆಯುವುದೆಂದು ತಿಳಿಸಿ, ಪ್ರದರ್ಶಿಸುತ್ತಿರುವ ಜಾಹೀರಾತುಗಳನ್ನು ತೆರವುಗೊಳಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ವಲಯವಾರು ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಗುತ್ತಿಗೆದಾರರನ್ನು ನೇಮಿಸಿಕೊಂಡು ಅವರಿಂದ ಕಾರ್ಯನಿರ್ವಹಿಸಲಾಗುತ್ತಿರುವುದಲ್ಲದೆ ಪ್ರಹಾರಿಯನ್ನು ಸಹ ಬಳಸಿಕೊಂಡು ಉತ್ತಮ ಮಟ್ಟದಲ್ಲಿ ಅನಧಿಕೃತ ಜಾಹೀರಾತು, ಬಂಟಿಂಗ್ಸ್ ಮತ್ತು ಬ್ಯಾನರ್‌ಗಳ ತೆರವಿಗೆ ಕ್ರಮ ವಹಿಸಲಾಗುತ್ತಿದೆಂದು ಸಭೆಗೆ ತಿಳಿಸಿದರು.

ಜಂಟಿ ಆಯುಕ್ತರು (ಬೊಮ್ಮನಹಳ್ಳಿ)ರವರು ಸಮಿತಿಗೆ ಕೆಲವೊಂದು ಮಾರ್ಗದರ್ಶನಗಳನ್ನು ನೀಡುತ್ತಾ ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡಿದ್ದು ಕೆ.ಎಂ.ಸಿ. ಕಾಯ್ದೆಯನ್ವಯ ಸದರಿ ಕಟ್ಟಡದ ಮಾಲೀಕರ ವಿರುದ್ಧ ಕ್ರಮ ಕೈಗೊಂಡಾಗ ಸದರಿ ಮಾಲೀಕರು ಕೆ.ಎ.ಟಿ.ಯಿಂದ ತಡೆಯಾಜ್ಞೆ ಪಡೆದಿರುತ್ತಾರೆ. ನಂತರ ರಸ್ತೆ ಕಡಿತಕ್ಕಾಗಿ

ಅರ್ಜಿಯನ್ನು ಸಲ್ಲಿಸಿದಾಗ ಸದರಿಯವರ ಮನವಿಯನ್ನು ತಿರಸ್ಕರಿಸಲಾಗಿತ್ತು. ಆದರೆ ಹಿಂದಿನ ಸಮಿತಿಯು ನಮಗೆ ವಾದ ಮಂಡಿಸಲು ಅವಕಾಶ ನೀಡದೆ ರಸ್ತೆ ಕಡಿತಕ್ಕೆ ಅನುಮತಿಯನ್ನು ನೀಡಿ ಏಕ ಪಕ್ಷೀಯವಾಗಿ ನಿರ್ಣಯ ಕೈಗೊಂಡಿರುತ್ತದೆ. ಇದರಿಂದಾಗಿ ವಾರ್ಡಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಡಚಣೆ ಉಂಟಾಗಿರುತ್ತದೆ. ಆದ್ದರಿಂದ ಸದರಿ ನಿರ್ಣಯವನ್ನು ಮರು ಪರಿಶೀಲನೆಗಾಗಿ ಆಯುಕ್ತರ ಮುಖಾಂತರ ಸಮಿತಿಗೆ ಸಲ್ಲಿಸಲಾಗಿರುತ್ತದೆ. ಸದರಿ ನಿರ್ಣಯವನ್ನು ಮರು ಪರಿಶೀಲನೆ ಮಾಡಿ ಸೂಕ್ತ ನಿರ್ಣಯವನ್ನು ಮಾಡಿಕೊಡುವಂತೆ ಹಾಗೂ ಇನ್ನು ಮುಂದೆ ಏಕ ಪಕ್ಷೀಯ ನಿರ್ಣಯಗಳನ್ನು ಕೈಗೊಳ್ಳಬಾರದೆಂದು ಸಮಿತಿಯನ್ನು ವಿನಂತಿಸಿಕೊಂಡಿರುತ್ತಾರೆ.

ಘನ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:5954/2011ರಲ್ಲಿ ನೀಡಿರುವ ಆದೇಶದ ಪ್ರತಿಯೇ ನಮಗೆ ಬಂದಿರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ತಿಳಿಸಿ ಪ್ರತಿಯನ್ನು ಕಳುಹಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ಅಧಿಕಾರಿಗಳಾದ ನೀವು ಸೇರಿ ಕಾನೂನಿನಗೆ ಹಾಗೂ ನಗರದ ನಾಗರೀಕರಿಗೆ ಯಾವುದೇ ಚ್ಯುತಿ ಬರದಂತೆ ಕಾರ್ಯನಿರ್ವಹಿಸೋಣ ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:10-06-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ಆಯುಕ್ತರು (ಆ-2) |
| 04 | ಬಿ.ಎಸ್.ಆನಂದ | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) |
| 05 | ಎಂ.ವಸಂತಕುಮಾರಿ | ಸದಸ್ಯರು | ಆರೋಗ್ಯಾಧಿಕಾರಿ(ಪಶ್ಚಿಮ/ದಕ್ಷಿಣ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಮುನಿರತ್ನಮ್ಮ | ಸದಸ್ಯರು | |
| 09 | ಶಾಹೀನ್ ತಾಜ್ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01. ವಿಷಯ:ಸಂಖ್ಯೆ:ಅಸ್ಥಾಸ/(ಆ)/12/2010-11

ಶ್ರೀ.ಎ.ಎಸ್.ಕಾಮತ್, ವ್ಯವಸ್ಥಾಪಕ ನಿರ್ದೇಶಕರು, ಬಸವನಗುಡಿ ವಲಯ ವಾರ್ಡ್-154, ನಂ.1, 5ನೇ ಮೈನ್, ಬಸವನಗುಡಿ ರಸ್ತೆ, ಎನ್.ಆರ್.ಕಾಲೋನಿ ಬೆಂಗಳೂರು-19 ಇಲ್ಲಿ ಕಾಮತ್ ಬ್ಯೂಗಲ್ ರಾಕ್ ಹೋಟೆಲ್ ರೆಸ್ಟೋರೆಂಟ್ ಮತ್ತು 25 ಅಶ್ವಶಕ್ತಿ ಪರವಾನಗಿಯನ್ನು 2010-11ನೇ ಸಾಲಿಗೆ ನವೀಕರಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ಬಸವನಗುಡಿ)ವಲಯರುವರು ದಿನಾಂಕ:22-02-2010ರಂದು ತಡೆ ಹಿಡಿದಿರುವ ಹಿಂಬರಹ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ, ಮೇಲ್ಮನವಿದಾರರ ಪರವಾಗಿ ವಕೀಲರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಆರೋಗ್ಯ ವೈದ್ಯಾಧಿಕಾರಿಗಳ ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದೇವೆ. ವಾಹನ ನಿಲ್ದಾಣಕ್ಕೆ ಸಾಕಷ್ಟು ಸ್ಥಳವಕಾಶವಿರುತ್ತದೆಂದು ತಿಳಿಸಿ ಪರವಾನಗಿಯನ್ನು ನವೀಕರಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

02. ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11

ಮೆ॥ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಮೂಲ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಅಧಿಕಾರಿಗಳು ವಿಫಲರಾಗಿರುತ್ತಾರೆ. ಮುಂದಿನ ಸಭೆಗೆ ಮುಂಚಿತವಾಗಿ ಕಡತವನ್ನು ಸಮಿತಿಯ ಮುಂದೆ ಮಂಡಿಸುವುದಾಗಿ ಉಪ ಆಯುಕ್ತರು (ಜಾಹೀರಾತು)ರವರು ತಿಳಿಸಿರುತ್ತಾರೆ.

" ತೀರ್ಮಾನವನ್ನು ಕಾಯ್ದಿರಿಸಿದೆ"

03.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/33/2010-11

ನಂ.73, 7ನೇ ಅಡ್ಡರಸ್ತೆ, 60 ಅಡಿ ರಸ್ತೆ, ಜೆ.ಸಿ.ನಗರ, ಮಹಾಲಕ್ಷ್ಮಿಪುರಂ ಇಲ್ಲಿ ಶ್ರೀ.ಮುನೇಗೌಡ ಎಂಬುವವರು ಮಿನರಲ್ ವಾಟರ್ ಘಟಕ ಮತ್ತು ಮಾರಾಟ ಹಾಗೂ 20 ಅಶ್ವಶಕ್ತಿ ಉದ್ದಿಮೆ ಪರವಾನಗಿಯನ್ನು ಕೋರಿದ್ದು, ಸದರಿಯವರ ಮನವಿಯನ್ನು ದಿನಾಂಕ:02-12-2010ರಂ ಆರೋಗ್ಯ ವೈದ್ಯಾಧಿಕಾರಿ, (ಮಹಾಲಕ್ಷ್ಮೀಪುರ) ವಲಯರವರು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-02-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮನವಿದಾರರ ಪರವಾಗಿ ವಕೀಲರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿದರು. ಪ್ರಕರಣದಲ್ಲಿ ಕುಡಿಯುವ ನೀರಿನ ವಿತರಣೆ ಕುರಿತಂತೆ ಪಕ್ಕದ ಮನೆಯವರ ಆಕ್ಷೇಪಣೆ ಮೇರೆಗೆ ವಿಚಾರಣೆಗೆ ಬಂದಿರುತ್ತದೆ. ಪರವಾನಗಿ ಕುರಿತಂತೆ ನಿಯಮಾನುಸಾರ ಮನವಿ ಸಲ್ಲಿಸಲಾಗಿರುತ್ತದೆ. ಸೆಲ್ಲಾರ್‌ನಲ್ಲಿ ಸಂಪ್ ನಿರ್ಮಾಣವನ್ನು ಮಾತ್ರ ಮಾಡಿದೆ ಹಾಗೂ ಸೆಲ್ಲಾರ್‌ನಲ್ಲಿ ಕೇವಲ ಯಂತ್ರೋಪಕರಣಗಳನ್ನು ಮಾತ್ರ ಸಂಗ್ರಹಿಸಲಾಗಿದೆ. ಆದರೆ ವೈದ್ಯಾಧಿಕಾರಿಗಳು ಯಾವುದೇ ವಿಧವಾದ ಕೂಲಂಕಷ ವಿಚಾರಣೆ ನಡೆಸದೆ ಪರವಾನಗಿ ನೀಡಲು ತಿರಸ್ಕರಿಸಿರುತ್ತಾರೆ. ಇದೇ ವಲಯದಲ್ಲಿ ಕೆಲವೊಂದು



ಅನಧಿಕೃತ ಕಾರ್ಯಗಳೂ ನಡೆಯುತ್ತಿದ್ದು, ಈ ಬಗ್ಗೆ ಅಧಿಕಾರಿಗಳು ಗಮನ ಹರಿಸದೆ ಇರುವುದು ಕಂಡು ಬಂದಿರುತ್ತದೆ. ನಾನು ಕೇವಲ 3 ಚಕ್ರ ವಾಹನದ ಮೂಲಕ ಪ್ರತಿದಿನ 320 ಕ್ಯಾನ್‌ಗಳನ್ನು ಮಾತ್ರ ವಿತರಿಸುತ್ತೇನೆ.

ಆರೋಗ್ಯಾಧಿಕಾರಿವಯರು ಪರಿಶೀಲನೆಗೆ ಬಂದಾಗ ನನ್ನ ಯಾವುದೇ ಹೇಳಿಕೆ ಪಡೆಯದೆ ನನ್ನ ವಿರುದ್ಧವಾಗಿ ದೂರು ಸಲ್ಲಿಸಿರುವವರ ಬಳಿ ಮಾಹಿತಿ ಪಡೆದಿರುತ್ತಾರೆ. ವೈದ್ಯಾಧಿಕಾರಿಗಳು ನಿಡಿರುವ ತಿಳುವಳೀಕೆ ಪತ್ರ ಕ್ರಮಬದ್ಧವಲ್ಲ. ಅನಧಿಕೃತವಾಗಿ ನಡೆಯುತ್ತಿರುವ ನೀರಿನ ವಿತರಣೆ ಬಗ್ಗೆ ಕ್ರಮ ಕೈಗೊಂಡಿಲ್ಲ. ವಸತಿ ಸ್ಥಳದಲ್ಲಿ ಗುಡಿಕೈಗಾರಿಕೆ ಹಾಗೂ ಇನ್ನಿತರೆ ಇಂತಹ ಕಾರ್ಯಗಳಿಗೆ ಪರವಾನಗಿ ನೀಡಲು ಅವಕಾಶವಿರುತ್ತದೆ. ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಬಹುದು. ನಿಯಮಬಾಹಿರವಾಗಿ ಅನಧಿಕೃತವಾಗಿ ಕೆಲವು ಅಂಗಡಿಗಳು ನಡೆಯುತ್ತಿರುತ್ತವೆ. ತಮ್ಮ ಮನವಿ ನ್ಯಾಯಬದ್ಧವಾಗಿದ್ದು ನನ್ನ ಅಕ್ಕಪಕ್ಕದವರಿಂದ ಮಾತ್ರ ನಿರಾಕ್ಷೇಪಣಾ ಪತ್ರ ಪಡೆಯಬಹುದಾಗಿದ್ದು ತಮ್ಮ ಮನವಿಯನ್ನು ಪರಿಗಣಿಸಲು ಕೋರಿರುತ್ತಾರೆ.

ಆರೋಗ್ಯಾಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ಪಕ್ಕದ ಮನೆಯವರ ಆಕ್ಷೇಪಣೆ ಇದ್ದು, ಮಂಜೂರಾತಿ ನಕ್ಷೆ ನೀಡಿಲ್ಲವೆಂದು ತಿಳಿಸಿರುತ್ತಾರೆ. ಬೈಲಾ ಪ್ರಕಾರ " ಎರಿಯೇಟೆಡ್ ವಾಟರ್ " ವಾಟರ್ ತಯಾರಿಸಲು ಅವಕಾಶವಿದೆ. ಆದರೆ ಅಕ್ಕ ಪಕ್ಕದವರಿಂದ ನಿರಾಕ್ಷೇಪಣಾ ಪತ್ರ ಬೇಕಾಗುತ್ತದೆಂದು ತಿಳಿಸಿರುತ್ತಾರೆ. ನಮ್ಮ ವಲಯದಲ್ಲಿ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು ಆರೋಗ್ಯಾಧಿಕಾರಿಗಳನ್ನು ಘನ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:5954/2011ರಲ್ಲಿ ನೀಡಿರುವ ಆದೇಶದಂತೆ ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದಾಗ ಆರೋಗ್ಯಾಧಿಕಾರಿಗಳು ದೂರು ಬಂದರೆ ಮಾತ್ರ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಅಪೀಲುದಾರರು ನೀಡಿರುವ ದೂರಿನ ಮೇರೆಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

"ಸ್ಥಳ ಪರಿಶೀಲನೆಗಾಗಿ ಕಾಯ್ದಿರಿಸಿದೆ"

04. ವಿಷಯ:ಸಂಖ್ಯೆ:ಅಸ್ಥಾಸ/(ಆ)/34/2010-11

ಶ್ರೀ ಜ್ಯೋತಿ ಸ್ಟೋರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಜ್ಯೋತಿ ಸ್ಟೋರ್ಸ್‌ನವರು ಹಾಜರಿರುತ್ತಾರೆ. ಮೇಲ್ಮನವಿದಾರರಿಗೆ ವಿಚಾರಣೆಗೆ ನೋಟಿಸ್ ಜಾರಿಯಾಗಿರುವುದಿಲ್ಲ. ಕಾಲದಿಂದಲೂ ನವೀಕರಿಸಿಕೊಂಡು ಬಂದಿರುತ್ತೇವೆ. ಈಗ ನವೀಕರಣ ಮಾಡದೆ ಇರುವುದರಿಂದ ತಾವು ಮನವಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಪೋಲೀಸ್ ಇಲಾಖೆ ಹಾಗೂ ಫೈರ್ ಪೋರ್ಸ್‌ನವರು ಅನುಮತಿ ನೀಡಿರುತ್ತಾರೆ.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

05.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2010-11

ಎ.ಪ್ರಗಸ್ಪತಿ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

06.ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2010-11

ವಿ.ಗುರುಸ್ವಾಮಿ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"



07.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2010-11

ಎ.ಗ್ರಹದೀರ್ಘೆ, ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

08.ವಿಷಯ:ಸಂಖ್ಯೆ:ಅಸ್ಥಾಸ/(ಆ)/38/2010-11

ಬಿ.ವಿ.ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

09.ವಿಷಯ:ಸಂಖ್ಯೆ:ಅಸ್ಥಾಸ/(ಆ)/39/2010-11

ಬಿ.ದಾಮೋದರ್ ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

10.ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-201ರ ಆದೇಶಗಳಂತೆ 2011-2012ನೇ ಸಾಲಿನ ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ದೂರುದಾರರಿಗೆ ನೋಟೀಸ್ ಜಾರಿಯಾಗಿರುವುದಿಲ್ಲ. ವೈದ್ಯಾಧಿಕಾರಿಗಳು ತಿಳುವಳಿಕೆ ಪತ್ರ ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

" ವಿಚಾರಣೆಯನ್ನು ಮುಂದೂಡಿದೆ" 11.ವಿಷಯ:ಸಂಖ್ಯೆ:ಅಸ್ಥಾಸ/(ಆ)/41/2010-11

ಶ್ರೀ.ಟಿ.ಜಿ.ಪ್ರಭಾಕರ್ ಗುಪ್ತಾರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

-4-

12.ವಿಷಯ:ಸಂಖ್ಯೆ:ಅಸ್ಥಾಸ/(ಆ)/42/2010-11

ನಾಗರಾಜ ಟ್ರೇಡಿಂಗ್‌ನ ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

13.ವಿಷಯ:ಸಂಖ್ಯೆ:ಅಸ್ಥಾಸ/(ಆ)/43/2010-11

ರಾಯಲ್ ಫೈರ್ ವರ್ಕ್ಸ್ ಇಂಡಸ್ಟ್ರೀಸ್ ಟ್ರೇಡಿಂಗ್ ಕಂಪನಿ, ಇವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ''ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ''

14. ವಿಷಯ:ಸಂಖ್ಯೆ:ಅಸ್ಥಾಸ/(ಆ)/44/2010-11

ಶ್ರೀಮತಿ.ಶಂಕರಮ್ಮ ಇವರು ದಿನಾಂಕ:ದಿನಾಂಕ:03-12-2010ರಂದು ಸಮಿತಿಗೆ ಮನವಿಯನ್ನು ಸಲ್ಲಿಸಿ ಸಂಖ್ಯೆ:12/1, 7ನೇ ಅಡ್ಡರಸ್ತೆ, ಸಂಪಂಗಿ ರಾಮನಗರ, ವಾರ್ಡ್-110 ಈ ಸ್ವತ್ತಿನಲ್ಲಿ ನಡೆಸುತ್ತಿರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳನ್ನು ನಗರ ಪಾಲಿಕೆಯಿಂದ ಪರವಾನಗಿ ಪಡೆದು ನಡೆಸುತ್ತಾ ಇರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳಿಗೆ ಪಡೆದಿರುವ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)ರವರ ಕಛೇರಿ, ಎಸ್-2 ಉಪ ವಿಭಾಗ ಇವರಿಗೆ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ)ರವರ ಪತ್ರ ಸಂಖ್ಯೆ:ಆ.ವೈ(ಶಿವ)ಪಿಆರ್/64/10-11, ದಿನಾಂಕ:6-10-2010ರ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮನವಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಆರೋಗ್ಯಾಧಿಕಾರಿಗಳು ಗೈರು ಹಾಜರಾಗಿರುತ್ತಾರೆ. ಮಗ್ಗದಿಂದ ನಮ್ಮ ಜೀವನ, ಅಕ್ಕ ಪಕ್ಕದಲ್ಲಿ ಎಲ್ಲರೂ ಮಗ್ಗ ನಡೆಸುತ್ತಿದ್ದಾರೆ. ನಮಗೆ ಮಾತ್ರ ತೊಂದರೆ ನೀಡುತ್ತಿದ್ದಾರೆ. 22 ವರ್ಷಗಳಿಂದ ಮಗ್ಗ ನಡೆಯುತ್ತಿದೆ. ಇಲ್ಲಿ 110 ಮಗ್ಗಗಳು ಇವೆ ಕೇವಲ ನಮಗೆ ಮಾತ್ರ ನೋಟೀಸ್ ಜಾರಿ ಮಾಡಿದ್ದಾರೆ. ಇಲ್ಲಿ ಗುಡಿ ಕೈಗಾರಿಕೆಯಿಂದ ಸರ್ಕಾರದಿಂದ ನಮಗೆ ಶೇ.50ರಷ್ಟು ರಿಯಾಯಿತಿ ಸಹ ಇದೆ. ಇದು ಸಣ್ಣ ಗುಡಿಕೈಗಾರಿಕೆ. ನಮಗೆ ಪರವಾನಗಿಯನ್ನು ರದ್ದು ಪಡಿಸಕೂಡದು ಎಂದು ಕೇಳಿರುತ್ತಾರೆ. ನಾವು ಪಾಲಿಕೆಯ ನೀತಿ ನಿಯಮ ಪ್ರಕಾರವೇ ನಡೆಸುತ್ತಿದ್ದೇವೆ.

''ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ''

15. ವಿಷಯ:ಸಂಖ್ಯೆ:ಅಸ್ಥಾಸ/(ಆ)/45/2010-11

ಶ್ರೀ.ಸಿ.ಪಯಾಜ್ ಪಾಷ, ನಂ.22/68 ಬಿ ಉಕ್ಬಾ ಮಸೀದಿ ರಸ್ತೆ, ಹೋಲಿ ಕ್ರೈಸ್ಟ್ ಶಾಲೆ ಎದುರು, ಅಶ್ವತ್ಥನಗರ, ಥಣೀಸಂದ್ರ, ಬೆಂಗಳೂರು-77 ಇಲ್ಲಿ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ರದ್ದುಗೊಳಿಸುವಂತೆ ಆರೋಗ್ಯ ವೈದ್ಯಾಧಿಕಾರಿ (ಬ್ಯಾಟರಾಯನಪುರ)ರವರು ದಿನಾಂಕ:12-10-2011ರಂದು ನೀಡಿರುವ ನೋಟೀಸಿನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಮತ್ತು ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

16.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/46/2010-11

ಶ್ರೀ.ಎಸ್.ಮೋಹನ್, ನಂ.48/36, 18ನೇ ಮುಖ್ಯರಸ್ತೆ, ಉದಯಸ್ಕೂಲ್ ರಸ್ತೆ, ವಿಜಯನಗರ, ಬೆಂಗಳೂರು-10 ಇವರ ನಿವೇಶನ ಸಂಖ್ಯೆ:258, 7ನೇ ಮುಖ್ಯರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ ಈ ಸ್ವತ್ತನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸುಮಾರು 35 ವರ್ಷಗಳ ಹಿಂದೆ ವಶಪಡಿಸಿಕೊಂಡಿದ್ದು, ಈ ಬಗ್ಗೆ ಸದರಿಯವರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಹಾಗೂ ಅಹವಾಲು ಹೇಳಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಿಲ್ಲವೆಂದು ಹಾಗೂ ನಿವೇಶನ ಸಂಖ್ಯೆ:73, 4ನೇ ಟಿ ಬ್ಲಾಕ್, ಜಯನಗರ, 30-31ನೇ ಅಡ್ಡರಸ್ತೆಯಲ್ಲಿ 53X40 ಅಡಿ ಅಳತೆಯ ನಿವೇಶನವನ್ನು ಬದಲಿಯಾಗಿ ನೀಡಿ ರೂ.3,91,880/-ಗಳನ್ನು ಪಾವತಿಸಲು ಸೂಚಿಸಿರುತ್ತಾರೆ. ನನ್ನ ಸ್ವತ್ತನ್ನು ವಶಪಡಿಸಿಕೊಂಡಿರುವುದಕ್ಕೆ ಬದಲಿಯಾಗಿ ನಿವೇಶನವನ್ನು ನೀಡದೆ ಹಣವನ್ನ ಪಾವತಿಸಬೇಕೆಂದು ಕೇಳಿರುವುದು ಏಕೆಂದು ನನಗೆ ತಿಳಿಯುತ್ತಿಲ್ಲ. ನನ್ನ ಸ್ವತ್ತಿಗೆ ಬದಲಿಯಾಗಿ ಸ್ವತ್ತನ್ನು ನೀಡಬೇಕೆ ಹೊರತು ಹಣವನ್ನು ಪಾವತಿಸಿ ಎಂದು ಕೇಳುವುದು ಯಾವ ನ್ಯಾಯವೆಂದು ಪ್ರಶ್ನಿಸಿ ನ್ಯಾಯ ಒದಗಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ.



ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಮತ್ತು ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

17. ವಿಷಯ:ಸಂಖ್ಯೆ:ಅಸ್ಥಾಸ/(ಇತರೆ)/01/2011-12

**ಪ್ರಸ್ತಾವನೆ:**- ಪ್ರಕರಣವನ್ನು ಕರೆಯಲಾಯಿತು. ಉಭಯತ್ರರು ಹಾಜರು. ಶ್ರೀ.ಸುಬ್ರಮಣ್ಯರವರು ದಿವಂಗತರಾಗಿದ್ದು ಇವರ ಲೀಗಲ್ ಹೇರ್ ಎಂಬುವರಾದ ಶ್ರೀ.ನಾಗಭೂಷಣ್‌ರವರು ಹಾಜರಾಗಿರುತ್ತಾರೆ. (ವಯಸ್ಸು ಸುಮಾರು 59 ವರ್ಷ) ಮೌಖಿಕವಾಗಿ ತಮ್ಮ ಅಹವಾಲನ್ನು ತಿಳಿಸಿದ್ದು ದಾಖಲೆಗಳನ್ನು ಕೊಟ್ಟಿದ್ದೇನೆ ಎಂದು ಹೇಳಿದರು.

ಅಧಿಕಾರಿಗಳು 1998ರಲ್ಲಿ ಶುಲ್ಕ ಕಟ್ಟಿ ಎಂದು ಕೇಳಿರುತ್ತೇವೆ ಲಿಖಿತದಲ್ಲಿ ಎಂದು ಕೇಳಿದರು ಇದಕ್ಕೆ ಯಾವುದೇ ಉತ್ತರ ನೀಡಿಲ್ಲ ಎಂದು ಹೇಳಿದರು.

ಶ್ರೀ.ನಾಗಭೂಷಣರವರ ಪರವಾಗಿ ಭೂಸ್ವಾಧೀನ ನಿಯಮಗಳನ್ನು ಉಲ್ಲಂಘಿಸಿ ಜಮೀನು ಸ್ವಾಧೀನ ಪಡಿಸಿಕೊಂಡಿರುವುದು ತಪ್ಪೆಂದು ಹೇಳಿದರು. ಬಿ.ಬಿ.ಎಂ.ಪಿ. ಕಾನೂನು ಸಲಹೆಗಾರರು ಈಗಾಗಲೇ ಅಭಿವೃದ್ಧಿ



ಆಗಿರುವುದರಿಂದ ಪರಿಹಾರ ಭೂಸ್ವಾಧೀನ ಪಡಿಸಿಕೊಂಡ ದಿನಾಂಕದಲ್ಲಿ ಏನಿತ್ತೋ ಅದನ್ನು ನೀಡಬಹುದು ಎಂದು ಹೇಳಿದರು. ಈಗಿನ ಮಾರುಕಟ್ಟೆ ದರಕ್ಕೆ ಪರಿಹರ ನೀಡಲು ಶ್ರೀ.ನಾಗಭೂಷಣ್ ಪರವಾಗಿ ಹೇಳಿದರು.

**<u>ನಿರ್ಣಯ:</u>**- ಮೇಲ್ಕಂಡ ಎಲ್ಲಾ ಅಂಶಗಳನ್ನು ಹಾಗೂ ಕಡತವನ್ನು ಪರಿಶೀಲಿಸಲಾಯಿತು. ಅಧಿಕಾರಿಗಳು ವಿವರವಾದ ಟಿಪ್ಪಣಿಯನ್ನು ಸಮಿತಿಯ ಮುಂದೆ ಮಂಡಿಸಲು ವಿಫಲರಾಗಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ. ನಂತರ ದಿನಾಂಕ:22-07-2011ರಂದು ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ ಇವರಿಗೆ ಬರೆದಿರುವ ಪತ್ರವನ್ನು ಸಮಿತಿಯ ಅವಗಾಹನೆಗೆ ತಂದಿರುತ್ತಾರೆ. ಸದರಿ ಪತ್ರವನ್ನು ಪರಿಶೀಲಿಸಿದಾಗ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ದಿನಾಂಕ:30-05-2011ರಂದು ಪಾಲಿಕೆಯ ಸಭೆಯಲ್ಲಿ ನಿರ್ಣಯ ಕೈಗೊಂಡು ಸರ್ಕಾರದ ಅನುಮೋದನೆ ಕೋರಿರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಈಗಾಗಲೇ ಪಾಲಿಕೆಯ ಸಭೆಯಲ್ಲಿ ಕೈಗೊಂಡಿರುವ ನಿರ್ಣಯದಂತೆ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>14. ವಿಷಯ:ಸಂಖ್ಯೆ:ಅಸ್ಥಾಸ/(ತೆ)/03/2011-12</u>

ಚಂದ್ರೋದಯ ಕನ್ವೆಷನ್ ಸೆಂಟರ್‌ನ ಮಾಲೀಕರು ದಿನಾಂಕ:11-02-2009ರಂದು ನ್ಯಾಯಾಲಯದಲ್ಲಿ ಚಂದ್ರ ಸಾಗರ್ ಎಂಟರ್‌ಪ್ರೈಸಸ್‌ರವರ ಮಾಲೀಕತ್ವದಲ್ಲಿ ನಡೆಸುತ್ತಿರುವ ಚಂದ್ರೋದಯ ಕನ್ವೆಷನ್ ಸೆಂಟರ್‌ನ ತೆರಿಗೆ ವಿಷಯವನ್ನು ನಗರ ಪಾಲಿಕೆಯ ಅಪೀಲು ಸಮಿತಿಗೆ ವಾಪಸ್ ಕಳುಹಿಸಿ ಮತ್ತೊಮ್ಮೆ ನಮ್ಮ ಸಂಸ್ಥೆಗೆ ಅವಕಾಶ ನೀಡಿ ವಿಚಾರಣೆ ನಡೆಸಿ ತೀರ್ಮಾನ ತೆಗೆದುಕೊಳ್ಳಲು ಆದೇಶಿಸಿದ್ದು, 6 ತಿಂಗಳು ಕಳೆದಿದ್ದರೂ ಸಹ ಇದುವರೆವಿಗೂ ನಗರ ಪಾಲಿಕೆ ವತಿಯಿಂದ ನಮ್ಮನ್ನು ವಿಚಾರಣೆಗೆ ಕರೆದಿರುವುದಿಲ್ಲವೆಂದು ತಿಳಿಸಿ ನ್ಯಾಯಾಲಯದ ಆದೇಶದಂತೆ ವಿಚಾರಣೆ ಮಾಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಕರಣವನ್ನು ಕರೆಯಲಾಯಿತು. ಅಧಿಕಾರಿಗಳು ಹಾಜರಿದ್ದರು. ಈ ಹಿಂದೆ ನಿಯಮಪ್ರಕಾರವೇ ತೆರಿಗೆ ನಿಗಧಿಸಪಡಿಸಲಾಗಿದೆಎಂಬುದಾಗಿ ತಿಳಿಸಿದರು.

“ ಆದೇಶಕ್ಕಾಗಿ ನಿಗಧಿಪಡಿಸಲಾಗಿದೆ”

<u>15. ವಿಷಯ:ಸಂಖ್ಯೆ:ಅಸ್ಥಾಸ/(ಕಾ)/04/2011-12</u>

ಸ್ವತ್ತಿನ ಸಂಖ್ಯೆ:5/1, ಸರ್ವೆ ನಂ.116/3ರಲ್ಲಿ ಕಟ್ಟಿರುವ ಕಟ್ಟಡದ ವಿರುದ್ಧ ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದ್ದು, ಸದರಿ ಆದೇಶವು ಬೇರೆಯವರ ಹೆಸರಿನಲ್ಲಿದ್ದು ನನ್ನ ಮನೆಯ ಗೋಡೆಗೆ ಅಂಟಿಸಿರುತ್ತಾರೆಂದು ಮಾಲೀಕರಾದ ಶ್ರೀ.ವೇಣುಗೋಪಾಲ ರೆಡ್ಡಿರವರು ತಾತ್ಕಾಲಿಕ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ಪ್ರಸ್ತಾವನೆ:-**ಪ್ರಕರಣವನ್ನು ಕರೆಯಲಾಯಿತು. ವೇಣುಗೋಪಾಲರಾದ ನನ್ನ ಮನೆಯ ಮೇಲೆ ನನಗೆ ಸಂಬಂಧವಿಲ್ಲದ ನೋಟೀಸ್‌ನ್ನು ಬಿ.ಬಿ.ಎಂ.ಪಿ. ಅವರು ನೋಟೀಸು ಅಂಟಿಸಿದ್ದಾರೆ ನನ್ನ ಮನೆಯ ಗೋಡೆಯ ಮೇಲೆ ಎಂದು ಹೇಳಿದ್ದಾರೆ. ಕೆ.ಎ.ಟಿ. ಮತ್ತು ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ಹೂಡಿರುತ್ತೇನೆಂದು ಶ್ರೀ.ಕೆ.ಎಂ.ವೇಣುಗೋಪಾಲರೆಡ್ಡಿರವರು ತಿಳಿಸಿದ್ದಾರೆ ಮತ್ತು ದಾಖಲೆಗಳನ್ನು ಸಹ ನೀಡಿದ್ದಾರೆಂದು ತಿಳಿಸಿದ್ದಾರೆ.

**ನಿರ್ಣಯ:-** ಮೇಲ್ಮನವಿದಾರರ ಹೇಳಿಕೆಗಳನ್ನು ಸಮಿತಿಯು ಆಲಿಸಿದ ನಂತರ ಈ ವಿಷಯವು ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ವ್ಯಾಪ್ತಿಗೆ ಬರುವುದರಿಂದ ಹಾಗೂ ಈಗಾಗಲೇ ಮೇಲ್ಮನವಿದಾರರು ಕೆ.ಎ.ಟಿ. ಮತ್ತು ಸಿವಿಲ್ ನ್ಯಾಯಾಲಯಗಳಲ್ಲಿ ವ್ಯವಹರಿಸುತ್ತಿರುವುದನ್ನು ಪರಿಗಣಿಸಿ ಈ ವಿಷಯವನ್ನು ಮುಕ್ತಾಯಗೊಳಿಸುವುದೆಂದು ತೀರ್ಮಾನಿಸಲಾಯಿತು.

16.ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12

ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

**ಪ್ರಸ್ತಾವನೆ:-** ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಮತ್ತು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಾಗಿರುವುದಿಲ್ಲ. ಉಪ ಆಯುಕ್ತರು (ಆಸ್ತಿಗಳು) ಹಾಜರಾಗಿದ್ದು ದಿನಾಂಕ:05-08-2011ರಂದು ನಡೆಯುವ ಸಭೆಗೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಿ ಸ್ವೀಕೃತಿಯೊಂದಿಗೆ ಸಭೆಗೆ ಹಾಜರಾಗುವಂತೆ ಸೂಚಿಸಿ ಪ್ರಕರಣವನ್ನು ಮುಂದೂಡಲಾಯಿತು.

17. ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11

ಮಂಜು ಟ್ರೇಡಿಂಗ್ ಕಂಪನಿಯ ಮಾಲೀಕರಾದ ಶ್ರೀ.ಎ.ಜಯಚಂದ್ರನ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು

-10-

ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

**ನಿರ್ಣಯ:-** ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲೀಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನವೀಕರಿಸುವುದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

18. ವಿಷಯ:ಸಂಖ್ಯೆ:ಅಸ್ಥಾಸ/(ಆ)/07/2010-11

ಶ್ರೀ.ಕೆ.ಎಸ್.ಉದಯಶಂಕರ್, ಶ್ರೀ ಶಿವಾನಂದ ಸ್ಟೋರ್ಸ್ ಇವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

**ನಿರ್ಣಯ:-** ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲಿಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು



ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನವೀಕರಿಸುವುದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

19.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/08/2011-12

ಮಾಲೀಕರು, ಮೆ|| ಅವಿನಾಶಿ ಆಡ್ಸ್, ಔಟ್‌ಡೋರ್‌ಅಡ್ವರ್‌ಟೈಸಿಂಗ್, ತುಳಸಿ ಹೌಸ್, ನಂ.26, ಎಸ್.ಎಫ್.ಹೆಚ್.ಎಸ್. ಏರಿಯಾ, ನಂದಿನಿ ಲೇಔಟ್, ಬೆಂಗಳೂರು-96 ಇವರು ದಿನಾಂಕ:16-05-2011ರಂದು ಸಮಿತಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿಯವರು ಜಾಹೀರಾತು ಫಲಕಗಳನ್ನು ತೆರವುಗೊಳಿಸಿದ್ದರೂ ಸಹ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ದಿನಾಂಕ:09-05-2011ರಂದು ನೀಡಿರುವ ಡಿಮ್ಯಾಂಡ್ ನೋಟೀಸ್ ವಿರುದ್ಧ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಆಯುಕ್ತರು ದಿನಾಂಕ:08-06-2011ರಂದು ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ದಿನಾಂಕ 14-12-2007 ರಂದು ಬಿ.ಬಿ.ಎಂ.ಪಿರವರಿಗೆ ಜಾಗಗಳನ್ನು ತೋರಿಸಲು ಸೂಚಿಸಿರುತ್ತಾರೆ. 14 ಜಾಹೀರಾತು ಫಲಕಗಳನ್ನು ಹಾಕಲಾಗಿರುತ್ತದೆ. ನಗರ ಪಾಲಿಕೆಯು ಜಾಹೀರಾತು ಪ್ರದರ್ಶಿಸಿರುವುದಕ್ಕೆ ತೆರಿಗೆ ಪಾವತಿಸುವಂತೆ ತಿಳಿಸಿರುತ್ತಾರೆ. ಜಾಹೀರಾತು ಪಲಕಗಳನ್ನು ಸಿಂಗಲ್ (ಯೂನಿಪೋಲ್) ಪೋಲ್ ಮೇಲೆ ಪ್ರದರ್ಶಸಿಲಾಗಿದ್ದು, ಇವತ್ತಿನ ದಿನಕ್ಕೆ ಒಟ್ಟು 52 ಜಾಹೀರಾತು ಫಲಕಗಳು ಇರುತ್ತವೆ. ಬಿ.ಬಿ.ಎಂ.ಪಿ. ವತಿಯಿಂದ ಯಾವುದೆ ರೀತಿಯ ತಪಾಸಣೆ ಮಾಡಿರುವುದಿಲ್ಲ. ನಾನು ನೀಡಿರುವ ಪಟ್ಟಿಯಂತೆ ತೆರಿಗೆಯನ್ನು ಪಾವತಿಸಲು ಸಿದ್ದನಿರುವುದಾಗಿ ತಿಳಿಸಿದರು.

ಪ್ರತಿವಾದಿಗಳು ಹಾಜರಿದ್ದು, ರೈಲ್ವೆ ಇಲಾಖೆಯವರು ಜಾಹೀರಾತು ಪ್ರದರ್ಶಸಿಲು ಟೆಂಡರ್ ಕರೆದಿದ್ದು, ಮೇಲ್ಮನವಿದಾರರು ಟಂಡರ್‌ನಲ್ಲಿ ಭಾಗವಹಿಸಿ, ಯಶಸ್ವಿ ಟೆಂಡರ್‌ದಾರರಾಗಿರುತ್ತಾರೆ. ರೈಲ್ವೆ ಇಲಾಖೆಯವರು ನಗರ ಪಾಲಿಕೆಯ ಬೈಲಾಗಳನ್ನು ಪಾಲಿಸಿರುವುದಿಲ್ಲ. ಬೈಲಾನಲ್ಲಿರುವ ಗೈಡ್‌ಲೈನ್ಸ್ ರೀತಿಯಲ್ಲಿ ನಡೆಯಬೇಕೆಂದು ಸ್ಪಷ್ಟವಾಗಿ ಬೈಲಾನಲ್ಲಿ

ತಿಳಿಸಲಾಗಿದೆ. ರೈಲ್ವೆ ಇಲಾಖೆಯವರು ನಗರ ಪಾಲಿಕೆಯ ಗಮನಕ್ಕೆ ತರದೇ ರೈಲ್ವೆ ಸ್ವತ್ತಿನಲ್ಲಿ ಜಾಹೀರಾತು ಪ್ರದರ್ಶಿಸಲು ಟೆಂಡರ್ ಕರೆದಿರುತ್ತಾರೆ. ಬೈಲಾನಲ್ಲಿ ತಿಳಿಸಿರುವಂತೆ ಮೇಲ್ಮನವಿದಾರರು ಅನುಸರಿಸಿರುತ್ತಾರೆ. ಮೇಲ್ಮನವಿದಾರರು 2 ವರ್ಷಗಳ ನಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಯಾವಯಾವ ಸ್ಥಳದಲ್ಲಿ ಜಾಹೀರಾತು ಫಲಕಗಳನ್ನು ಹಾಕಲಾಗಿದೆ ಎಂಬ ಬಗ್ಗೆ ಮತ್ತು ಅಗತ್ಯವಿರುವ ತಪಸೀಲು (ಸ್ಪೇಸಿಪೀಕೇಶನ್) ಸಹ ಮೇಲ್ಮನವಿದಾರರು ನೀಡಿರುವುದಿಲ್ಲ. ನಗರ ಪಾಲಿಕೆಯವರು ಮೇಲ್ಮನವಿದಾರರಿಗೆ ಅರ್ಜಿಸಲ್ಲಿಸಲು ತಿಳಿಸಿದ್ದರು ಸಹ, ಮೇಲ್ಮನವಿದಾರರು ಅರ್ಜಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಕಡತದಲ್ಲಿನ ಟಿಪ್ಪಣಿಯಲ್ಲಿ ಕಾಣಬಹುದಾಗಿದೆ. ರೈಲ್ವೆ ಅಧಿಕಾರಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದರೂ ಸಹ ಅವರಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಮೇಲ್ಮನವಿದಾರರು ಸಿಟಿ ನ್ಯಾಯಾಲಯದ ಮುಂದೆ ದಾವೆ ಹೂಡಿರುತ್ತಾರೆ. ದಿನಾಂಕ 01-12-2007 ರಿಂದ 31-12-2010ರ ವರೆವಿಗೆ ತೆರಿಗೆ ಪಾವತಿಸಲು ಬಿಬಿಎಂಪಿ ವತಿಯಿಂದ ಡಿಮ್ಯಾಂಡ್ ನೋಟಿಸ್ ಜಾರಿಮಾಡಲಾಗಿದೆ. ಈ ಬಗ್ಗೆ ನ್ಯಾಯ ಸಮ್ಮತವಾದ ನಿರ್ಣಯವನ್ನು ಕೈಗೊಳ್ಳಲು ಮನವಿಯನ್ನು ಮಾಡಿದರು.

ಮೇಲ್ಮನವಿದಾರರು ನನ್ನ ಮನವಿಯು ಬಿ.ಬಿ.ಎಂ.ಪಿ. ಅಧಿಕಾರಿಯವರ ಗಮನದಲ್ಲಿದ್ದು, ಸ್ಥಳಗಳ ಪರಿಶೀಲನೆಯನ್ನು ಮಾಡಲು ಬಿ.ಬಿ.ಎಂ.ಪಿ. ವಿಫಲರಾಗಿರುತ್ತಾರೆ. ಸಲ್ಲಿಸಿರುವ ಪಟ್ಟಿಯಂತೆ ತೆರಿಗೆಯನ್ನು ಲೆಕ್ಕಹಾಕಲು ಮನವಿ ಮಾಡಿ, ಜಾಹೀರಾತು ಪಲಕಗಳು ಅಳತೆಗೆ ಮೀರಿ ಇರುವುದಾಗಿ ತಿಳಿಸಿರುವುದು ಸರಿಯಲ್ಲವೆಂದು ತಿಳಿಸಿರುತ್ತಾರೆ.

" ಆದೇಶಕ್ಕಾಗಿ ಕಾಯ್ದಿರಿಸಿದೆ"

<u>20. ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/10/2010-11</u>

ಶ್ರೀಮತಿ.ಡಿ.ಆರ್.ಶಿಲ್ಪಶ್ರೀ, ನಂ.207, 4ನೇ ಅಡ್ಡರಸ್ತೆ, ಮಾರೇನಹಳ್ಳಿ ಟ್ಯಾಂಕ್ ಬಂಡ್ ರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು-41 ಇವರು ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟದ ಪಾರ್ಲರ್ ಪ್ರಾರಂಭಿಸಲು ಸ್ಥಳ ಮಂಜೂರು ಮಾಡಲು ವಾರ್ಡ್ ಸಂಖ್ಯೆ:170ರ ಬಿ.ಟಿ.ಎಂ. 1ನೇ ಹಂತ, 1ನೇ ಕ್ರಾಸ್, 9ನೇ ಮುಖ್ಯರಸ್ತೆಯ ಪಾರ್ಕ್‌ನಲ್ಲಿ ನಿರ್ಮಾಣ ಮಾಡುತ್ತಿರುವ ಶೌಚಾಲಯದ ಹಿಂಭಾಗದಲ್ಲಿರುವ 10x10 ಅಡಿಗಳ ಜಾಗವನ್ನು ಮಂಜೂರು ಮಾಡಲು ಕೋರಿದ್ದು, ಸದರಿಯವರ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದ್ದು, ಸದರಿಯವರು ನಿರುದ್ಯೋಗಿಯಾಗಿದ್ದು ಜೀವನೋಪಯೋಗಕ್ಕಾಗಿ ಬೇರೆ ಯಾವುದೇ ಉದ್ಯೋಗವಿಲ್ಲದಿರುವುದರಿಂದ ಸದರಿ ಜಾಗವನ್ನು ಮಂಜೂರು ಮಾಡಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:21-06-2011ರ ಟಿಪ್ಪಣಿ

**<u>ಪ್ರಸ್ತಾವನೆ:</u>**-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದರು. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಕಾಯ್ದಿರಿಸಲಾಗಿದೆ.

-12-

<u>21.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2010-11</u>

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

**<u>ಪ್ರಸ್ತಾವನೆ</u>**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ವಕೀಲರು ಮತ್ತು ಪ್ರತಿವಾದಿಗಳು ಹಾಜರಿದ್ದರು. ಮೇಲ್ಮನವಿದಾರರು ಕಾಲಾವಕಾಶ ಕೋರಿರುವುದರಿಂದ ಪ್ರಕರಣವನ್ನು ಮುಂದೂಡಲಾಗಿದೆ.

<u>22.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2010-11</u>

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**<u>ಪ್ರಸ್ತಾವನೆ</u>**:-ಪ್ರಕರಣವನ್ನು ಕರೆಯಲಾಯಿತು. ಉಭಯತ್ರರು ಗೈರು ಹಾಜರು. ಪ್ರಕರಣವನ್ನು ಮುಂದೂಡಲಾಯಿತು.

<u>23.ವಿಷಯ:ಸಂಖ್ಯೆ:ಅಸ್ಥಾಸ/(ತೆ)/13/2010-11</u>

ಶ್ರೀಮತಿ.ಪಿ.ಶಕುಂತಲ, ಸಂಖ್ಯೆ:13, ವೀರಭದ್ರನಾಯಕ ಲೇನ್. ಕಾಟನ್ ಪೇಟೆ ಈ ಸ್ವತ್ತಿನ ಕಂದಾಯವನ್ನು ಪರಿಷ್ಕರಿಸಿ ವಸತಿ ರೂ.47600/- ಮತ್ತು ವಸತಿಯೇತರ ರೂ.57120/- ವಾರ್ಷಿಕ ಮೌಲ್ಯಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವುದನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವುದರ ವಿರುದ್ಧ, ಸ್ವತ್ತಿನ ಮಾಲೀಕರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-05-2011ರ ಟಿಪ್ಪಣಿ.

**<u>ಪ್ರಸ್ತಾವನೆ:</u>**-ಪ್ರಕರಣವನ್ನು ಕರೆಯಲಾಯಿತು. ಉಭಯತ್ರರು ಗೈರು ಹಾಜರು. ನೋಟಿಸ್‌ನ್ನು ಜಾರಿ ಮಾಡಿರುವುದಿಲ್ಲ. ಪ್ರಕರಣವನ್ನು ಮುಂದೂಡಲಾಯಿತು.

24. ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/14/2010-11

ಶ್ರೀ.ಎ.ಪ್ರಕಾಶ್, ಕನ್ಸರ್‌ವೆನ್ಸಿ ಲೇನ್, ಎಂ.ಎಂ.ರಸ್ತೆ, ಸರ್ವಜ್ಞ ನಗರ ಈ ಸ್ವತ್ತಿನಲ್ಲಿ ಒಂದು ಚಿಕ್ಕ ಪೆಟ್ಟಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದು, ಸದರಿ ಅಂಗಡಿಯನ್ನು ಖಾಲಿ ಮಾಡುವಂತೆ ಜಂಟಿ ಆಯುಕ್ತರು (ಪೂರ್ವ)ರವರು ಕೆ.ಪಿ.ಪಿ.ಕಾಯ್ದೆ ಕಲಂ 5(1)ರ ಅಡಿಯಲ್ಲಿ ದಿನಾಂಕ:03-01-2011ರಲ್ಲಿ ಗುತ್ತಿಗೆದಾರರಿಗೆ ನೀಡಿರುವ ನೋಟೀಸ್ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:01-07-2011ರ ಟಿಪ್ಪಣಿ.

**ಪ್ರಸ್ತಾವನೆ**:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು ನಾನು ಶ್ರೀ.ದಿವಾಕರನ್ ಕೆ. ಪಾಲ್‌ರವರ ಜಿ.ಪಿ.ಎ. ಹೋಲ್ಡರ್ ಆಗಿರುತ್ತೇನೆ. ಪೆಟ್ಟಿಗೆ ಅಂಗಡಿಯನ್ನು ನನ್ನ ಜೀವನೋಪಯೋಗಕ್ಕಾಗಿ ನಾನೇ ನಡೆಸುತ್ತಿದ್ದೇನೆ. ನ್ಯಾಯಾಲಯದಿಂದ ಆದೇಶವನ್ನು ಪಡೆದಿರುತ್ತೇನೆ. ನಾನು ಕಾಲಕಾಲಕ್ಕೆ ಬಾಡಿಗೆ ಮತ್ತು ವಿದ್ಯುತ್ ಬಿಲ್‌ನ್ನು ಪಾವತಿಸಿಕೊಂಡು ಬರುತ್ತಿದ್ದೇನೆ. ಒಂದೇ ಸಲ ಬಾಡಿಗೆಯನ್ನು ಪಾವತಿಸಿರುತ್ತೇನೆ. ಅದಕ್ಕೆ ರಶೀದಿ ನೀಡಿರುವುದಿಲ್ಲ. ಬಿ.ಬಿ.ಎಂ.ಪಿ.ವಿರುದ್ಧ ತಡೆಯಾಜ್ಞೆ ದಾವೆಯನ್ನು ದಾಖಲಿಸಿದ್ದು, ದಾವೆಯು ಡಿಕ್ರೀಯಾಗಿದ್ದು, ಬಿಬಿಎಂಪಿಯು ನನ್ನನ್ನು ತೆರವುಗೊಳಿಸಬಾರದೆಂದು ಶಾಶ್ವತ ತಡೆಯಾಜ್ಞೆ ಪಡೆದಿರುತ್ತೇನೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಿದ್ದು, ಸದರಿ ಸ್ವತ್ತು ಮಹಾನಗರ ಪಾಲಿಕೆಯ ಸ್ವತ್ತಾಗಿರುತ್ತದೆ. ಶ್ರೀ.ದಿವಾಕರ್ ಕೆ. ಪಾಲ್‌ರವರಿಗೆ ಗುತ್ತಿಗೆಗೆ ನೀಡಿದ್ದು, ಮೇಲ್ಮನವಿದಾರರಿಗೆ ಸಬ್ ಲೀಸ್ ನೀಡಿರುತ್ತಾರೆ. ಮೇಲ್ಮನವಿದಾರರ ಮೇಲೆ ಕೆಪಿಪಿ ಕಾಯ್ದೆ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಮೇಲ್ಮನವಿದಾರರ ಇಲ್ಲಿ ಮೇಲ್ಮನವಿ ಸಲ್ಲಿಸಿರುವುದು ಊರ್ಜಿತವಲ್ಲವೆಂದು ತಿಳಿಸಿ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಅಪೀಲು ಸಲ್ಲಿಸಬೇಕಾಗಿರುತ್ತದೆ. ಆದುದರಿಂದ ಸದರಿಯವರ ಅಪೀಲನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

" ಆದೇಶಕ್ಕಾಗಿ ಕಾಯ್ದಿರಿಸಿದೆ"

25.ವಿಷಯ:ಸಂಖ್ಯೆ:ಅಸ್ಥಾಸ/(ಆ)/15/2010-11

ಟಿ.ವಿ. ಅಂಡ್ ಸನ್ಸ್, ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ತಿಳುವಳಿಕೆ ಪತ್ರ ಕಳುಹಿಸಿದ್ದು, ನಾವು ಬಹಳ ದಿವಸದಿಂದ ಪಟಾಕಿ ವ್ಯಾಪಾರವನ್ನು ಮಾಡುತ್ತಿದ್ದು ನಮಗೆ ವಾಣಿಜ್ಯ ಮತ್ತು ಕೈಗಾರಿಕಾ ಪೆಟ್ರೋಲಿಯಂ ಮತ್ತು ಎಕ್ಸ್‌ಪ್ಲೋಸಿವ್ ಸೇಫ್ಟಿ ಆರ್ಗನೈಜೇಷನ್, ಮಂಗಳೂರು ಇವರ ಕಛೇರಿಯಿಂದ ಪರವಾನಗಿ ಪಡೆದಿರುತ್ತೇವೆ. ಆದುದರಿಂದ ನಮಗೆ ಪರವಾನಗಿ ನೀಡಬೇಕೆಂದು ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ನಿರ್ಣಯ**:- ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ



ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲೀಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನೀಡುವುದೆಂದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

26.ವಿಷಯ:ಸಂಖ್ಯೆ:ಅಸ್ಥಾಸ/(ಆ)/16/2011-12

ಶ್ರೀ.ಕೆ.ಎಸ್.ಮುತ್ತುರಾಜನ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ತಿಳುವಳಿಕೆ ಪತ್ರ ಕಳುಹಿಸಿದ್ದು, ನಾವು ಬಹಳ ದಿವಸದಿಂದ ಪಟಾಕಿ ವ್ಯಾಪಾರವನ್ನು ಮಾಡುತ್ತಿದ್ದು ನಮಗೆ ವಾಣಿಜ್ಯ ಮತ್ತು ಕೈಗಾರಿಕಾ ಪೆಟ್ರೋಲಿಯಂ ಮತ್ತು ಎಕ್ಸ್‌ಪ್ಲೋಸಿವ್ ಸೇಫ್ಟಿ ಆರ್ಗನಲೈಜೇಷನ್, ಮಂಗಳೂರು ಇವರ ಕಛೇರಿಯಿಂದ ಪರವಾನಗಿ ಸಿಕ್ಕಿರುತ್ತದೆ. ಆದುದರಿಂದ ನಮಗೆ ಪರವಾನಗಿ ನೀಡಬೇಕೆಂದು ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ನಿರ್ಣಯ:**- ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲಿಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನೀಡುವುದೆಂದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>27.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11</u>

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ



ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ಅವರ ವಕೀಲರು ಹಾಜರಿರುತ್ತಾರೆ. ಶ್ರೀ.ಎಂ.ಎ.ಜಯರಾಮ್ ಮತ್ತು ಶ್ರೀಮತಿ.ಇಂದಿರಮ್ಮರವರ ಪರವಾಗಿ ಅವರ ವಕೀಲರು ಹಾಜರಿದ್ದು ಸದರಿ ಪ್ರಕರಣದಲ್ಲಿ ಸೇರ್ಪಡೆಗೊಳಿಸಿಕೊಳ್ಳುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಶ್ರೀ.ಕೆ.ಶಶಿಕಿರಣ್‌ರವರು ಶ್ರೀ.ಎಸ್.ಎಸ್.ಜಿ.ಯವರು ಪರವಾಗಿ ವಕಾಲತ್ತು ಸಲ್ಲಿಸಿರುತ್ತಾರೆ. ಹೊಸದಾಗಿ ಸೇರ್ಪಡೆಗೊಳಿಸಿಕೊಳ್ಳಲು ಸಲ್ಲಿಸಿರುವ ಅರ್ಜಿಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಪ್ರಕರಣವನ್ನು ದಿನಾಂಕ:05-08-2011ಕ್ಕೆ ಮುಂದೂಡಲಾಗಿದೆ.

<u>28. ವಿಷಯ:ಸಂಖ್ಯೆ:ಅಸ್ಥಾಸ/(ಅ)/19/2010-11</u>

ಮೆ:ಸಂತೋಷ್ ಟ್ರೇಡಿಂಗ್ ಕಾರ್ಪೋರೇಷನ್, ನಂ.ಎ-11, ಬಾಲಾಜಿ ಕಾಂಪ್ಲೆಕ್ಸ್, 125, ಸುಲ್ತಾನ್ ಪೇಟೆ, ಬೆಂಗಳೂರು ಈ ಅಂಗಡಿಯ ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120

ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ತಿಳುವಳಿಕೆ ಪತ್ರ ಕಳುಹಿಸಿದ್ದು, ನಾವು ಬಹಳ ದಿವಸದಿಂದ ಪಟಾಕಿ ವ್ಯಾಪಾರವನ್ನು ಮಾಡುತ್ತಿದ್ದು ನಮಗೆ ವಾಣಿಜ್ಯ ಮತ್ತು ಕೈಗಾರಿಕಾ ಪೆಟ್ರೋಲಿಯಂ ಮತ್ತು ಎಕ್ಸ್‌ಪ್ಲೋಸಿವ್ ಸೇಫ್ಟಿ ಆರ್ಗನೈಜೇಷನ್, ಮಂಗಳೂರು ಇವರ ಕಛೇರಿಯಿಂದ ಪರವಾನಗಿ ಪಡೆದಿರುತ್ತೇವೆ. ಆದುದರಿಂದ ನಮಗೆ ಪರವಾನಗಿ ನೀಡಬೇಕೆಂದು ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ನಿರ್ಣಯ:-** ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲಿಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನವೀಕರಿಸುವುದೆಂದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:05-08-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು ನಗರ ಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸ.ಕಂ.ಅ.(ಮತ್ತೀಕೆರೆ/ಚಿಕ್ಕಪೇಟೆ/ವಸಂತನಗರ) |
| 04 | ಬಿ.ಎಸ್.ಆನಂದ | ಸದಸ್ಯರು | |
| 05 | ಎಂ.ವಸಂತಕುಮಾರಿ | ಸದಸ್ಯರು | |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |

| | | | |
|---|---|---|---|
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12

ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

**ಪ್ರಸ್ತಾವನೆ:-** ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಹಾಜರಾಗಿದ್ದು, ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ತಡವಾಗಿ ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಕಾಲಾವಕಾಶ ಕೋರಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/08/2011-12

ಮಾಲೀಕರು, ಮೆ॥ ಅವಿನಾಶಿ ಆಡ್ಸ್, ಔಟ್‌ಡೋರ್‌ಅಡ್ವರ್‌ಟೈಸಿಂಗ್, ತುಳಸಿ ಹೌಸ್, ನಂ.26, ಎಸ್.ಎಫ್.ಹೆಚ್.ಎಸ್. ಏರಿಯಾ, ನಂದಿನಿ ಲೇಔಟ್, ಬೆಂಗಳೂರು-96 ಇವರು ದಿನಾಂಕ:16-05-2011ರಂದು ಸಮಿತಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿಯವರು ಜಾಹೀರಾತು ಫಲಕಗಳನ್ನು ತೆರವುಗೊಳಿಸಿದ್ದರೂ ಸಹ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ದಿನಾಂಕ:09-05-2011ರಂದು ನೀಡಿರುವ ಡಿಮ್ಯಾಂಡ್ ನೋಟೀಸ್ ವಿರುದ್ಧ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಆಯುಕ್ತರು ದಿನಾಂಕ:08-06-2011ರಂದು ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

**ನಿರ್ಣಯ:-** ಸಮಿತಿಯು ಅಧಿಕಾರಿಗಳ ಮತ್ತು ವಕೀಲರ ವಾದ, ಕಡತದಲ್ಲಿರುವ ದಾಖಲೆ ಹಾಗೂ ಮೇಲ್ಮನವಿದಾರರು ಸಲ್ಲಿಸಿರುವ ಲೀಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಈಗಾಗಲೇ ಅಧಿಕಾರಿಗಳು ಕ್ರಮ ಬದ್ಧವಾಗಿ ರೈಲ್ವೆ ಜಾಗದಲ್ಲಿ ಮೇಲ್ಮನವಿದಾರರು ಅಳವಡಿಸಿರುವ ಪ್ರಕಾಶಿತ ಹಾಗೂ ಪ್ರಕಾಶಿತವಲ್ಲದ ಜಾಹೀರಾತು ಫಲಕಗಳ ಬಗ್ಗೆ ಕಾಲಕಾಲಕ್ಕೆ ತಪಾಸಣೆ ಮಾಡದೆ ಇರುವುದರಿಂದ ಜಾಹೀರಾತುದಾರರಿಗೆ ಅಧಿಕಾರಿಗಳು ಅನುಕೂಲ ಮಾಡಿಕೊಟ್ಟಂತಾಗಿರುತ್ತದೆಂದು ಅಪಾದಿಸಿ ದಿನಾಂಕ:01-04-2011ರ ನಿರ್ಣಯದಲ್ಲಿ ಸಮಿತಿಯು ಸ್ಪಷ್ಟವಾಗಿ ನಮೂದಿಸಿರುವುದು ಕಂಡು ಬರುತ್ತದೆ. ಆದರೂ ಸಹ ಅಧಿಕಾರಿಗಳು ದಿನಾಂಕ:09-05-2011ರಂದು ಡಿಮ್ಯಾಂಡ್ ನೋಟೀಸ್ ಜಾರಿ ಮಾಡಿ ಸದರಿ ನೋಟೀಸ್‌ನಲ್ಲಿ ದಿನಾಂಕ:01-12-2007ರಿಂದ 31-12-2010ರವರೆಗಿನ ಜಾಹೀರಾತು ತೆರಿಗೆ ರೂ.55,68,156/-ಗಳನ್ನು ಪಾವತಿಸುವಂತೆ ಸೂಚಿಸಲಾಗಿರುತ್ತದೆ. ಆದರೆ ಜಾಹೀರಾತುದಾರರು ದಿನಾಂಕ:25-03-2011ರಂದು ಕೆಲವೊಂದು ಪ್ರದೇಶಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವುದಾಗಿ ತಿಳಿಸಿದ್ದರೂ ಸಹ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಜಾಹೀರಾತು ಶುಲ್ಕವನ್ನು ದಿನಾಂಕ:01-12-2007ರಿಂದಲೇ ಪಾವತಿಸುವಂತೆ ಡಿಮ್ಯಾಂಡ್ ನೋಟೀಸ್ ನೀಡಿರುವುದು ಕಂಡು ಬರುತ್ತದೆ.

ಸಂಬಂಧಪಟ್ಟ ಅಧಿಕಾರಿಗಳು ರೈಲ್ವೆ ಇಲಾಖೆಯವರು ಜಾಹೀರಾತು ಪ್ರದರ್ಶಿಸಲು ಟೆಂಡರ್ ಕರೆದಿದ್ದು ನಗರ ಪಾಲಿಕೆಯ ಗಮನಕ್ಕೆ ತಂದಿರುವುದಿಲ್ಲ, ರೈಲ್ವೆ ಸ್ವತ್ತಿನಲ್ಲಿ ತಪಾಸಣೆ ಮಾಡಲು ಅವಕಾಶ ನೀಡುವುದಿಲ್ಲ ಹಾಗೂ ಬೈಲಾ ನಿಯಮಗಳನ್ನು ಪಾಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ರೈಲ್ವೆಯವರು ಯಶಸ್ವಿ ಬಿಡ್ಡುದಾರರಿಗೆ ಜಾಹೀರಾತು ಅಳವಡಿಸಲು



ಹಂಚಿಕೆಯಾಗಿರುವ ಸ್ಥಳಗಳ ಬಗ್ಗೆ ನಗರ ಪಾಲಿಕೆಗೆ ದಿನಾಂಕ:29-11-2007ರಂದು ಪತ್ರ ಬರೆದಿರುವುದು ಕಡತದಲ್ಲಿ ಲಗತ್ತಿಸಿರುವ ಪುಟ ಸಂಖ್ಯೆ:7ರಿಂದ ಸ್ಪಷ್ಟವಾಗಿರುತ್ತದೆ. ಜಾಹೀರಾತು ಬೈಲಾ ನಿಯಮ 3.ಎ 26ರಂತೆ ಮಾಹಿತಿ ನೀಡಿರುವುದಾಗಿ ದಿನಾಂಕ:03-03-2008ರ ಕಛೇರಿ ಆದೇಶದಿಂದ ಕಂಡು ಬರುತ್ತದೆ. ರೈಲ್ವೆಯವರು ರೈಲ್ವೆ ಸ್ವತ್ತಿನಲ್ಲಿ ಸ್ಥಳ ಪರಿಶೀಲನೆ ಮಾಡಲು ಅವಕಾಶ ನೀಡದಿದ್ದಲ್ಲಿ ಅದನ್ನು ಆಯುಕ್ತರು ಮತ್ತು ಮಾನ್ಯ ಆಡಳಿತಗಾರರ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಬೇಕಾಗಿದ್ದು ಆ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡಿರುವ ಬಗ್ಗೆ ಕಡತದಲ್ಲಿ ಯಾವುದೇ ಮಾಹಿತಿಗಳು ಲಭ್ಯವಿರುವುದಿಲ್ಲ.

ಮೇಲ್ಮನವಿದಾರರು ಯಾವಯಾವ ಸ್ಥಳದಲ್ಲಿ ಜಾಹೀರಾತು ಫಲಕಗಳನ್ನು ಹಾಕಲಾಗಿದೆ ಎಂಬ ಬಗ್ಗೆ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ 2 ವರ್ಷಗಳು ಕಳೆದ ನಂತರ ನಿಗಧಿತ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ. ಆದರೆ ಮೇಲ್ಮನವಿದಾರರು ದಿನಾಂಕ:14-12-2007ರಂದೇ ಜಾಹೀರಾತುದಾರರು ಫಲಕಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ನಗರ ಪಾಲಿಕೆಗೆ ಪತ್ರ ಮುಖೇನ ತಿಳಿಸಿರುವುದು ಕಂಡು ಬರುತ್ತದೆ. ಜಾಹೀರಾತುದಾರರು ಪತ್ರ ಬರೆದ ತಕ್ಷಣವೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡದಿರುವುದು ಸ್ಪಷ್ಟವಾಗಿರುತ್ತದೆ. ಒಂದು

ವೇಳೆ ನಿಗಧಿತ ಅರ್ಜಿಯನ್ನು ಸಲ್ಲಿಸದಿದ್ದ ಪಕ್ಷದಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸಬಹುದಾಗಿರುತ್ತದೆ. ಹಾಗೂ ಯಾವ ಯಾವ ವೇಳೆಗೆ ಎಷ್ಟು ಅಳತೆಯ ಫಲಕಗಳನ್ನು ಅಳವಡಿಸಿಕೊಳ್ಳಲಾಗಿತ್ತೆಂಬ ಬಗ್ಗೆ ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಿರುವುದಿಲ್ಲ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ಜಾಹೀರಾತುದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆಂದು ಸಮಿತಿಯು ಅಭಿಪ್ರಾಯ ಪಟ್ಟಿರುತ್ತದೆ. ಅಲ್ಲದೆ ದಿನಾಂಕ:03-03-2008ರ ಕಛೇರಿ ಆದೇಶದಲ್ಲಿ 2006ರ ಜಾಹೀರಾತು ಬೈಲಾ ನಿಯಮವನ್ನು ಪಾಲಿಸಿರುವುದಾಗಿ ತಿಳಿಸಲಾಗಿರುತ್ತದೆ. ಆದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಕಾಲಮಿತಿಯಲ್ಲಿ ಮೇಲ್ಮನವಿದಾರರು ಅರ್ಜಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿರುವುದು ಸಮಂಜಸವಾಗಿರುವುದಿಲ್ಲ. ಮೇಲ್ಮನವಿದಾರರು ಜಾಹೀರಾತು ಬೈಲಾ ನಿಯಮವನ್ನು ಪಾಲಿಸದಿದ್ದಲ್ಲಿ ಮೇಲ್ಮನವಿದಾರರು ನಗರ ಪಾಲಿಕೆಗೆ ಪಾವತಿಸಿದ್ದ ಜಾಹೀರಾತು ತೆರಿಗೆಯನ್ನು ತಿರಸ್ಕರಿಸಬಹುದಾಗಿತ್ತು. ಆದರೆ ಜಾಹೀರಾತು ತೆರಿಗೆಯನ್ನು ನಗರ ಪಾಲಿಕೆಯ ಬೊಕ್ಕಸಕ್ಕೆ ಜಮಾ ಮಾಡಿಕೊಂಡಿರುವುದು ಸ್ಪಷ್ಟವಾಗಿರುತ್ತದೆ.

ದಿನಾಂಕ:11-02-2010ರ ಆಂತರಿಕ ಕಛೇರಿ ಟಿಪ್ಪಣಿಯಂತೆ ಮೇಲ್ಮನವಿದಾರರು ದಿನಾಂಕ:01-12-2007ರಿಂದ 30-11-2010ರವರೆಗೆ ಒಟ್ಟು 56 ಜಾಹೀರಾತು ಫಲಕಗಳನ್ನು ಅಳವಡಿಸಿರುವುದು ಸ್ಥಳ ತನಿಖೆಯಿಂದ ಕಂಡು ಬಂದಿರುವುದಾಗಿ ವರದಿಸಲಾಗಿರುತ್ತದೆ. ಆದರೆ ದಿನಾಂಕ:28-05-2009ರಂದು ನೀಡಿರುವ ನೋಟೀಸ್‌ನಲ್ಲಿ ದಿನಾಂಕ:18-05-2009, 19-05-2009 ಮತ್ತು 20-05-2009ರಂದು ತಪಾಸಣೆ ಮಾಡಿರುವುದಾಗಿ ನಮೂದಿಸಲಾಗಿದ್ದು, ವಿಸ್ತೀರ್ಣವನ್ನಾಗಲೀ ಫಲಕಗಳ ಸಂಖ್ಯೆಗಳನ್ನಾಗಲೀ ನಮೂದಿಸಿರುವುದಿಲ್ಲ. ಬದಲಾಗಿ ಜಾಹೀರಾತುದಾರರು ನೀಡಿರುವ ಅಳತೆಯನ್ನೇ ನಮೂದಿಸಿರುವುದು ಸ್ಪಷ್ಟವಾಗಿರುತ್ತದೆ. ಆದರೆ ದಿನಾಂಕ:22-10-2009ರಂದು ರೈಲ್ವೆಯವರು ಮೇಲ್ಮನವಿದಾರರಿಗೆ ಪತ್ರ ಬರೆದು ನವೆಂಬರ್-2008ಕ್ಕೆ 26 ಫಲಕಗಳು ಮತ್ತು ಅಕ್ಟೋಬರ್-2009ರ ಕೊನೆಗೆ 22 ಫಲಕಗಳನ್ನು ಅಳವಡಿಸಿರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ಕಾಲಕಾಲಕ್ಕೆ ಸರಿಯಾಗಿ ಕ್ರಮ ಕೈಗೊಳ್ಳದೆ ವಿಳಂಭನೀತಿ ಅನುಸರಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈ ಬಗ್ಗೆ ಸಮಿತಿಯು ಇನ್ನು ಮುಂದೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಸಂಖ್ಯೆ ಮತ್ತು ಅಳತೆಯ ಬಗ್ಗೆ ಸ್ಪಷ್ಟವಾಗಿ ನಮೂದಿಸುವಂತೆ ಕ್ರಮಕೈಗೊಳ್ಳುವುದು. ಜಾಹೀರಾತುದಾರರಿಗೆ ದಿನಾಂಕ:01-12-2007ರಿಂದಲೇ ಒಟ್ಟು 56 ಜಾಹೀರಾತು ಫಲಕಗಳನ್ನು ಅಳವಡಿಸಿರುವುದಾಗಿ ನೋಟೀಸ್ ನೀಡಿದ್ದು, ಒಟ್ಟು 56 ಜಾಹೀರಾತು ಫಲಕಗಳನ್ನು ಒಂದೇ ಸಲ ಅಳವಡಿಸಿರುವ ಬಗ್ಗೆ ಯಾವುದೇ ಪುರಾವೆಗಳನ್ನು ಒದಗಿಸಿರುವುದು ಕಡತದಲ್ಲಿ ಕಂಡು ಬರುವುದಿಲ್ಲ. ಹಾಗೂ ರೈಲ್ವೆಯವರು ತಪಾಸಣೆ ಮಾಡಲು ಅವಕಾಶ ನೀಡಿರುವುದಿಲ್ಲವೆಂದು ಸಮಿತಿಯ ಮುಂದೆ ತಿಳಿಸಿದ್ದು ದಿನಾಂಕ:28-05-2009ರ ನೋಟೀಸ್‌ನಲ್ಲಿ ತಪಾಸಣೆ ಮಾಡಿರುವುದಾಗಿ ತಿಳಿಸಿರುವುದು ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವುದಾಗಿ ತಿಳಿಸಿದ್ದರೂ ಸಹ ಎಲ್ಲಾ ಫಲಕಗಳಿಗೂ ಸೇರಿಸಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ಡಿಮ್ಯಾಂಡ್ ನೋಟೀಸ್ ನೀಡಿರುವುದು ಸಮಂಜಸವಾಗಿರುವುದಿಲ್ಲ. ದಿನಾಂಕ:28-05-2009ರಂದು ನೀಡಿರುವ ನೋಟೀಸ್‌ನಲ್ಲಿ ತಪಾಸಣೆ ಮಾಡಿರುವ ಬಗ್ಗೆ ವರದಿಸಿದ್ದು ಸದರಿ ವರದಿಯಲ್ಲಿ ಕಂದಾಯ ಪರಿವೀಕ್ಷಕರು ಫಲಗಳ ಅಳತೆಯನ್ನಾಗಲೀ ಅಥವಾ ಸಂಖ್ಯೆಗಳನ್ನಾಗಲೀ ನಮೂದಿಸದೇ ಮೇಲ್ಮನವಿದಾರರು ನೀಡಿರುವ ಅಳತೆಯನ್ನೇ ನಮೂದಿಸಿರುವುದರಿಂದ ಸಮಿತಿಯು ಸ್ಥಳ ಪರಿಶೀಲನೆ ಮಾಡಿರುವುದಿಲ್ಲವೆಂದು ಭಾವಿಸುತ್ತದೆ. ರೈಲ್ವೆ ಇಲಾಖೆಯವರು ಮೇಲ್ಮನವಿದಾರರಿಗೆ ನವೆಂಬರ್-2008 ಮತ್ತು ಅಕ್ಟೋಬರ್-2009ರ ಕೊನೆಗೆ ಎಷ್ಟೆಷ್ಟು ಫಲಕಗಳನ್ನು ಜಾಹೀರಾತುದಾರರು ಅಳವಡಿಸಿದ್ದಾರೆಂಬ ಬಗ್ಗೆ ಪತ್ರ ಮುಖೇನ ತಿಳಿಸಿರುವುದನ್ನು ಗಣನೆಗೆ ತೆಗೆದುಕೊಂಡು ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ವಸೂಲು ಮಾಡುವುದು ನ್ಯಾಯ ಸಮ್ಮತವಾಗಿರುತ್ತದೆ. ಆದರೆ ಮೇಲ್ಮನವಿದಾರರು ಟೆಂಡರ್ ಪಡೆದ ತಿಂಗಳಿಂದಲೇ 56 ಫಲಕಗಳಿಗೆ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿರುವುದು ಸ್ವಭಾವಸಿದ್ಧ ನ್ಯಾಯಕ್ಕುನುಗುಣವಾಗಿರುದಿಲ್ಲ. ಅಲ್ಲದೆ ಮೇಲ್ಮನವಿದಾರರು ಯಾವ ಯಾವ ತಿಂಗಳಲ್ಲಿ ಹಂತ ಹಂತವಾಗಿ ಎಷ್ಟೆಷ್ಟು ಫಲಕಗಳನ್ನು ಅಳವಡಿಸಿಕೊಂಡಿದ್ದರೆಂಬ ಬಗ್ಗೆ ಮಾಹಿತಿಯನ್ನು ದಿನಾಂಕ:13-11-2010ರಂದು ಒದಗಿಸಿರುವುದು ಕಡತದಲ್ಲಿ ಲಗತ್ತಿಸಿರುವ ದಾಖಲೆಯಿಂದ ಕಂಡು ಬಂದಿದ್ದು, ಸದರಿ ಮಾಹಿತಿಯ ಆದಾರದ ಮೇಲೆ



ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ವಸೂಲು ಮಾಡುವುದು ಮತ್ತು 01-12-2007ರಿಂದ ರೈಲ್ವೆಯವರು ನೀಡಿರುವ ದಿನಾಂಕ:22-10-2009ರ ಪತ್ರ ಹಾಗೂ ಜಾಹೀರಾತುದಾರರು ನೀಡಿರುವ ಅಳತೆ ಮತ್ತು ಫಲಕಗಳ ಸಂಖ್ಯೆಯನ್ನು ಪರಿಗಣಿಸಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸುವುದೆಂದು ಹಾಗೂ ಇನ್ನು ಮುಂದೆ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಅಳತೆ ಮತ್ತು ಸಂಖ್ಯೆಗಳನ್ನು ಕಡತದಲ್ಲಿ ಕಡ್ಡಾಯವಾಗಿ ನಮೂದಿಸುವಂತೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2010-11</u>

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ವಕೀಲರ ಮುಖಾಂತರ ಹಾಜರಾಗಿರುತ್ತಾರೆ. ಹೆಚ್ಚಿನ ಚರ್ಚೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

04.ವಿಷಯ:ಸಂಖ್ಯೆ:ಅಸ್ತಾಸ/(ಖಾತ)/12/2010-11

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರ ಪರವಾಗಿ ಶ್ರೀ.ಸುರೇಶ್ ಕುಮಾರ್, ಕಂದಾಯ ಪರಿವೀಕ್ಷಕರು ಹಾಜರಾಗಿರುತ್ತಾರೆ. ಆದರೆ ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಿರುವುದಿಲ್ಲ ನನಗೇನು ತಿಳಿದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಮಿತಿಯು ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ) ಮತ್ತು ಕಂದಯ ಪರಿವೀಕ್ಷಕರಿಗೆ ಕಾರಣ ಕೇಳಿ ಪತ್ರ ನೀದುವುದೆಂದು ತೀರ್ಮಾನಿಸುತ್ತಾ ಪ್ರಕರಣವನ್ನು ಪ್ರಕರಣವನ್ನು ಮುಂದೂಡಲಾಯಿತು.

05. ವಿಷಯ:ಸಂಖ್ಯೆ:ಅಸ್ತಾಸ/(ತೆ)/13/2010-11

ಶ್ರೀಮತಿ.ಪಿ.ಶಕುಂತಲ, ಸಂಖ್ಯೆ:13, ವೀರಭದ್ರನಾಯಕ ಲೇನ್. ಕಾಟನ್ ಪೇಟೆ ಈ ಸ್ವತ್ತಿನ ಕಂದಾಯವನ್ನು ಪರಿಷ್ಕರಿಸಿ ವಸತಿ ರೂ.47600/- ಮತ್ತು ವಸತಿಯೇತರ ರೂ.57120/- ವಾರ್ಷಿಕ ಮೌಲ್ಯಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವುದನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವುದರ ವಿರುದ್ಧ, ಸ್ವತ್ತಿನ ಮಾಲೀಕರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-05-2011ರ ಟಿಪ್ಪಣಿ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ಅವರ ಪತಿಯವರಾದ ಶ್ರೀ.ಜಯಪಾಲ್‌ರವರು ಮತ್ತು ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಿಕ್ಕಪೇಟೆ)ರವರು ಹಾಜರಾಗಿರುತ್ತಾರೆ.

ಮೇಲ್ಮನವಿದಾರರು 2006-07ನೇ ಸಾಲಿನಲ್ಲಿ ಕಂದಾಯವನ್ನು ನಿಗಧಿಪಡಿಸಿದ್ದು, ಸದರಿ ಕಂದಾಯದ ವಿರುದ್ಧ ಪ್ರಥಮ ಅಪೀಲು ಅಧಿಕಾರಿಗಳ ಮುಂದೆ ಅಪೀಲು ಸಲ್ಲಿದ್ದು, ಪ್ರಥಮ ಅಪೀಲು ಅಧಿಕಾರಿಗಳು ತೆರಿಗೆ ನಿಗಧಿಪಡಿಸಿರುವುದನ್ನು ಸ್ಥಿರೀಕರಿಸಿರುತ್ತಾರೆ. ಸ್ವತ್ತಿನ ಪೂರ್ಣಭಾಗವನ್ನು ವಾಣಿಜ್ಯಕ್ಕಾಗಿ ತೆಗೆದುಕೊಂಡು ಕಂದಾಯವನ್ನು ನಿಗಧಿಪಡಿಸಿರುವುದು ಸರಿಯಿರುವುದಿಲ್ಲ. ಕಂದಾಯ ಪ್ರಾಧಿಕಾರ ಸ್ವತ್ತಿನ ಮೌಲ್ಯವರ್ಧನೆಯನ್ನು ಸರಿಯಾಗಿ ಗುರುತಿಸಲು ವಿಫಲವಾಗಿರುತ್ತದೆ.

ಹಾಜರಿದ್ದ ಪ್ರತಿವಾದಿಗಳು ಮೇಲ್ಮನವಿದಾರರು ಮಾಡುತ್ತಿರುವ ಅಪಾದನೆಗಳನ್ನು ನಿರಾಕರಿಸುತ್ತಾ, ನಾನೇ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿದ್ದು ಸ್ವತ್ತನ್ನು ಬಾಡಿಗೆಗೆ ನೀಡಿರುವುದು ಕಂಡು ಬಂದಿರುತ್ತದೆ. ಸ್ವತ್ತಿನ ಮಾಲೀಕರು ನೆಲಮಹಡಿಯಲ್ಲಿ ತಾಂತ್ರಿಕ ಉದ್ದೇಶದ ಅಂಗಡಿಯನ್ನು ನಡೆಸುತ್ತಿರುತ್ತಾರೆ. ಸದರಿ ಸ್ವತ್ತಿನ ವಿಸ್ತೀರ್ಣವನ್ನು ಪೂರ್ಣವಾಗಿ ಉಪಯೋಗಿಸಿಕೊಂಡಿದ್ದು, ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ನಿಗಧಿಪಡಿಸಿರುವ ಕಂದಾಯವನ್ನು ಮೇಲ್ಮನವಿದಾರರು ಪಾವತಿಸಿರುತ್ತಾರೆ. ಮೇಲ್ಮನವಿದಾರರು ತಮ್ಮ ಹೆಸರಿನಲ್ಲಿ ಟ್ರೇಡ್ ಪರವಾನಗಿಯನ್ನು ಹೊಂದಿರುತ್ತಾರೆಂದು ತಿಳಿಸಿರುತ್ತರೆ.

ಮೇಲ್ಮನವಿದಾರರು ಈಗಾಗಲೇ ನಾನು ಹೆಚ್ಚಿನ ಕಂದಾಯ ಪಾವತಿಸಿದ್ದು, ಸದರಿ ಹೆಚ್ಚಿನ ಕಂದಾಯವನ್ನು ಮುಂದಿನ ವರ್ಷದಲ್ಲಿ ಪಾವತಿಸುವ ಕಂದಾಯಕ್ಕೆ ಹೊಂದಾಣಿಕೆ ಮಾಡಿಕೊಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸ್ಥಳ ಪರಿಶೀಲನೆ ಮತ್ತು ಆದೇಶಕ್ಕಾಗಿ ಕಾಯ್ದಿರಿಸಿದೆ

06.ವಿಷಯ:ಸಂಖ್ಯೆ:ಅಸ್ತಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು

-4-

ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ

ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

**<u>ಪ್ರಸ್ತಾವನೆ:</u>**-ಪ್ರಕರಣವನ್ನು ಕರೆಯಲಾಯಿತು. ಸೇರ್ಪಡೆಗೊಳಿಸಿಕೊಳ್ಳಲು ಸಲ್ಲಿಸಿರುವ ಅರ್ಜಿಯನ್ನು ಅನುಮತಿಸಲಾಯಿತು. ಆದರೆ ಸೇರ್ಪಡೆಗೊಳಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದ ಅರ್ಜಿದಾರರು ಸೇರ್ಪಡೆಗೊಳಿಸಲು ಕೋರಿಕೊಂಡಿದ್ದ ಅರ್ಜಿಯನ್ನು ಹಿಂಪಡೆಯಲು ಅರ್ಜಿ ಸಲ್ಲಿಸಿರುವ ಮೇರೆಗೆ ಹಿಂಪಡೆಲಯ ಅನುಮತಿಸಲಾಗಿರುತ್ತದೆ. 6ನೇ ಮೇಲ್ಮನವಿದಾರರು ಹಾಜರಿದ್ದು ಈಗಾಗಲೇ ನಡೆದಿರುವ ನಡವಳಿಗಳ ಬಗ್ಗೆ ಏನೂ ಅರಿವಿಗೆ ಬಂದಿರುವುದಿಲ್ಲ. ಆದ್ದರಿಂದ ಈಗ ನಾನು ಒಂದು ವಕಾಲತ್ತು ಮತ್ತು ಪ್ರಮಾಣ ಪತ್ರ ಸಲ್ಲಿಸಲು ಬಯಸುತ್ತೇನೆಂದು ತಿಳಿಸಿದರು.

3ನೇ (ಎ-2) ಮತ್ತು ಪ್ರತಿವಾದಿಗಳು 4ನೇ ಪ್ರತಿವಾದಿಗಳ ಪರವಾಗಿ ವಕೀಲರು ಹಾಜರಾಗಿರುತ್ತಾರೆ.

7ನೇ ಮೇಲ್ಮನವಿದಾರರು ಸಮಿತಿಯ ಮುಂದೆ ಹಾಜರಾಗಲು ನೋಟೀಸ್ ನೀಡುವುದೆಂದು ಹಾಗೂ ಆದೇಶಕ್ಕಾಗಿ ಕಾಯ್ದಿರಿಸುತ್ತಾ, ವಿಷಯವನ್ನು ಮುಂದೂಡಲಾಯಿತು.

<u>07. ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2011-12</u>

ಸಂಖ್ಯೆ:1028/402/3, 19ನೇ ಹೆಚ್ ಮುಖ್ಯರಸ್ತೆ, 1ನೇ ಎನ್. ಬ್ಲಾಕ್, ರಾಜಾಜಿನಗರ, ವಾರ್ಡ್-62 ಈ ಸ್ವತ್ತಿನ ಖಾತೆದಾರರಾದ ಶ್ರೀ.ಗೋಕಲ್‌ದಾಸ್ ಪೈರವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.13,450/-(ವಸತಿ) ಮತ್ತು ರೂ.1,02,400/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗದಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ಟಿಪ್ಪಣಿ.

**<u>ಪ್ರಸ್ತಾವನೆ:</u>**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಗಳಿಗೆ ಮತ್ತೊಮ್ಮೆ ನೋಟೀಸ್ ಜಾರಿ ಮಾಡಲು ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**<u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>**

**<u>ಅಪೀಲು ಸ್ಥಾಯಿ ಸಮಿತಿಯ ದಿನಾಂಕ:09-09-2011ರಂದು ನಡೆದ ಸಭೆಯ ನಡವಳಿಗಳು</u>**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|

| | | | |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ನಿರ್ದೇಶಕರು ನಗರ ಯೋಜನೆ(ಪಶ್ಚಿಮ/ಮಹದೇವಪುರ) |
| 04 | ಬಿ.ಎಸ್.ಆನಂದ | ಸದಸ್ಯರು | ಸಹಾಯಕ ನಿರ್ದೇಶಕರು (ಪಶುಪಾಲನೆ/ಯಲಹಂಕ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸ.ಕಂ.ಅ.(ಚಾಮರಾಜಪೇಟೆ/ವಿಜಯನಗರ/ಹೆಬ್ಬಾಳ/ವಸಂತನಗರ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/03/2011-12

ಚಂದ್ರೋದಯ ಕನ್ವೆಷನ್ ಸೆಂಟರ್‌ನ ಮಾಲೀಕರು ದಿನಾಂಕ:11-02-2009ರಂದು ನ್ಯಾಯಾಲಯದಲ್ಲಿ ಚಂದ್ರ ಸಾಗರ್ ಎಂಟರ್‌ಪ್ರೈಸಸ್‌ರವರ ಮಾಲೀಕತ್ವದಲ್ಲಿ ನಡೆಸುತ್ತಿರುವ ಚಂದ್ರೋದಯ ಕನ್ವೆಷನ್ ಸೆಂಟರ್‌ನ ತೆರಿಗೆ ವಿಷಯವನ್ನು ನಗರ ಪಾಲಿಕೆಯ ಅಪೀಲು ಸಮಿತಿಗೆ ವಾಪಸ್ ಕಳುಹಿಸಿ ಮತ್ತೊಮ್ಮೆ ನಮ್ಮ ಸಂಸ್ಥೆಗೆ ಅವಕಾಶ ನೀಡಿ ವಿಚಾರಣೆ ನಡೆಸಿ ತೀರ್ಮಾನ ತೆಗೆದುಕೊಳ್ಳಲು ಆದೇಶಿಸಿದ್ದು, 6 ತಿಂಗಳು ಕಳೆದಿದ್ದರೂ ಸಹ ಇದುವರೆವಿಗೂ ನಗರ ಪಾಲಿಕೆ ವತಿಯಿಂದ ನಮ್ಮನ್ನು ವಿಚಾರಣೆಗೆ ಕರೆದಿರುವುದಿಲ್ಲವೆಂದು ತಿಳಿಸಿ ನ್ಯಾಯಾಲಯದ ಆದೇಶದಂತೆ ವಿಚಾರಣೆ ಮಾಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ಪ್ರಸ್ತಾವನೆ:-**ಪ್ರಕರಣವನ್ನು ಕರೆಯಲಾಯಿತು. ನ್ಯಾಯಾಲಯವು ಚಂದ್ರ ಸಾಗರ್ ಎಂಟರ್‌ಪ್ರೈಸಸ್‌ರವರ ಮಾಲೀಕತ್ವದಲ್ಲಿ ನಡೆಯುತ್ತಿರುವ ಚಂದ್ರೋದಯ ಕನ್ವೆಷನ್ ಸೆಂಟರ್‌ನ ತೆರಿಗೆ ವಿಷಯವನ್ನು ನಗರ ಪಾಲಿಕೆಯ ಅಪೀಲು ಸಮಿತಿಗೆ ವಾಪಸ್ ಕಳುಹಿಸಿ ಮತ್ತೊಮ್ಮೆ ಸದರಿ ಸಂಸ್ಥೆಗೆ ಅವಕಾಶ ನೀಡಿ ವಿಚಾರಣೆ ನಡೆಸಿ ಕಾನೂನಿನ ಚೌಕಟ್ಟಿನಲ್ಲಿ ತೀರ್ಮಾನ ಕೈಗೊಳ್ಳುವಂತೆ ಆದೇಶಿಸುತ್ತಾ, ಸದರಿ ಪ್ರಕರಣವನ್ನು ಅಂತಿಮಗೊಳಿಸಿರುವುದು ಕಂಡು ಬರುತ್ತದೆ. ಹಾಗೂ ದಿನಾಂಕ:25-06-2011ರ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿ (ಬಿ.ಟಿ.ಎಂ. ಬಡಾವಣೆ)ರವರು ನೋಟೀಸ್ ತಡವಾಗಿ ಬಂದಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಸದರಿಯವರ ಕಛೇರಿಯಲ್ಲಿ ನೋಟೀಸ್‌ನ್ನು ದಿನಾಂಕ:17-06-2011ರಂದೇ ಸ್ವೀಕರಿಸಿದ್ದರೂ ಸಹ ಮೂಲ ಕಡತವನ್ನು ಸಮಿತಿಯ ಮುಂದೆ ಸಲ್ಲಿಸಲು ವಿಫಲರಾಗಿದ್ದು, ದಿನಾಂಕ:2-07-2011ರಂದು ಟಿಪ್ಪಣಿಯೊಂದಿಗೆ ಮೂಲ ಕಡತವನ್ನು ಮಂಡಿಸಿರುತ್ತಾರೆ. 200 ದಿನಗಳಿಗೆ ಕಂದಾಯವನ್ನು ಯಾವ ಲೆಕ್ಕಾಚಾರದ ಮೇಲೆ ನಿಗಧಿಪಡಿಸಲಾಗಿದೆ ಎಂಬುದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ. ಕೇವಲ ಕಂದಾಯ ಪರಿವೀಕ್ಷಕರು ಮತ್ತು ಮೌಲ್ಯಮಾಪಕರ ವರದಿಯ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸಿರುವುದಾಗಿ ತಿಳಿಸಿರುತ್ತಾರೆ.

**ನಿರ್ಣಯ**:- ದಿನಾಂಕ:21-07-2011ರ ಜಂಟಿ ಆಯುಕ್ತರು (ದಕ್ಷಿಣ)ರವರ ಟಿಪ್ಪಣಿ ಮತ್ತು ಎಂ.ಎ.ಸಂಖ್ಯೆ:34/1997ರಲ್ಲಿ ನ್ಯಾಯಾಲಯವು ದಿನಾಂಕ:11-02-2009ರಂದು ನೀಡಿರುವ ಆದೇಶ ದಿನಾಂಕ:24-06-2011 ಮತ್ತು ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. 200 ದಿನಗಳ ಕಾಲ ವಿವಾಹಗಳು ನಡೆದಿರುವ ಬಗ್ಗೆ ಬಿಲ್‌ಗಳನ್ನಾಗಲಿ, ವಿದ್ಯುತ್ಶಕ್ತಿ ಬಿಲ್‌ನ್ನಾಗಲಿ ಹಾಗೂ ಇನ್ನಿತರೆ ದಾಖಲೆಗಳನ್ನು ಒದಗಿಸಲು ಅಧಿಕಾರಿಗಳು ವಿಫಲರಾಗಿರುತ್ತಾರೆ.

1995ರಲ್ಲಿ ಚಂದ್ರೋದಯ ಕನ್ವೆಷನ್ ಸೆಂಟರ್ ಹೊಸ ಸಂಸ್ಥೆಯಾಗಿರುವುದು ಸ್ಪಷ್ಟವಾಗಿರುತ್ತದೆ. ಸದರಿ ಸಂಸ್ಥೆಯು ವರ್ಷಕ್ಕೆ ಎಷ್ಟು ಮದುವೆಗಳನ್ನು ನಡೆಸಿರುತ್ತಾರೆಂಬ ಬಗ್ಗೆ ಮಾಹಿತಿಗಳನ್ನು ದಾಖಲಿಸಲು ಅಧಿಕಾರಿಗಳು ಕ್ರಮ ಕೈಗೊಂಡಿರುವುದು ಕಂಡು ಬರುವುದಿಲ್ಲ. ಹಾಗೂ ಸದರಿ ಸಂಸ್ಥೆಯವರು ವಾಣಿಜ್ಯ ತೆರಿಗೆ ಇಲಾಖೆಗೆ ಲಕ್ಸುರಿ ತೆರಿಗೆಯನ್ನು 114 ದಿನಗಳಿಗೆ ಲೆಕ್ಕ ಹಾಕಿ ಪಾವತಿಸಿಕೊಂಡಿರುವುದು ಕಂಡು ಬರುವುದಲ್ಲದೆ ನ್ಯಾಯಾಲಯದಲ್ಲಿ ದಾಖಲಿಸಿರುವ ದಾವೆಯಲ್ಲೂ ಸಹ 107 ದಿನಗಳಿಗೆ ಲೆಕ್ಕಾಚಾರ ಮಾಡಿ ತೆರಿಗೆಯನ್ನು ನಿಗಧಿಪಡಿಸುವಂತೆ ಕೋರಿಕೊಂಡಿರುವುದು ಕಂಡು ಬರುತ್ತದೆ.



ಮೇಲ್ಕಂಡ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಚಂದ್ರೋದಯ ಕನ್ವೆಷನ್ ಸೆಂಟರ್ ಸಂಸ್ಥೆಗೆ ಈಗಾಗಲೇ 200 ದಿನಗಳಿಗೆ ಲೆಕ್ಕಾಚಾರ ಮಾಡಿ ಕಂದಾಯವನ್ನು ವಿಧಿಸಿರುವುದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿಲ್ಲದಿರುವ ಹಿನ್ನೆಲೆಯಲ್ಲಿ ಈಗಾಗಲೇ 200 ದಿನಗಳಿಗೆ ಲೆಕ್ಕಾಚಾರ ಮಾಡಿ ಕಂದಾಯವನ್ನು ವಿಧಿಸಿರವ ಆಧಾರದ ಮೇಲೆಯೇ 114 ದಿನಗಳಿಗೆ

ಲೆಕ್ಕಾಚಾರ ಮಾಡಿ ದಿನಾಂಕ:01-04-1995ರಿಂದ ಜಾರಿಗೆ ಬರುವಂತೆ ತೆರಿಗೆಯನ್ನು ವಿಧಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>02.ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12</u>

ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

**<u>ಪ್ರಸ್ತಾವನೆ:-</u>** ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಹಾಜರಾಗಿದ್ದು, ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ತಮ್ಮ ನ್ಯಾಯವಾದಿಗಳು ಬೇರೊಂದು ಪ್ರಕರಣದಲ್ಲಿ ತೊಡಗಿಸಿಕೊಂಡಿರುವ ಮೇರೆಗೆ ಕಾಲಾವಕಾಶ ಕೋರಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

<u>03.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/10/2010-11</u>

ಶ್ರೀಮತಿ.ಡಿ.ಆರ್.ಶಿಲ್ಪಶ್ರೀ, ನಂ.207, 4ನೇ ಅಡ್ಡರಸ್ತೆ, ಮಾರೇನಹಳ್ಳಿ ಟ್ಯಾಂಕ್ ಬಂಡ್ ರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು-41 ಇವರು ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟದ ಪಾರ್ಲರ್ ಪ್ರಾರಂಭಿಸಲು ಸ್ಥಳ ಮಂಜೂರು ಮಾಡಲು ವಾರ್ಡ್ ಸಂಖ್ಯೆ:170ರ ಬಿ.ಟಿ.ಎಂ. 1ನೇ ಹಂತ, 1ನೇ ಕ್ರಾಸ್, 9ನೇ ಮುಖ್ಯರಸ್ತೆಯ ಪಾರ್ಕ್‌ನಲ್ಲಿ ನಿರ್ಮಾಣ ಮಾಡುತ್ತಿರುವ ಶೌಚಾಲಯದ ಹಿಂಭಾಗದಲ್ಲಿರುವ 10x10 ಅಡಿಗಳ ಜಾಗವನ್ನು ಮಂಜೂರು ಮಾಡಲು ಕೋರಿದ್ದು, ಸದರಿಯವರ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದ್ದು, ಸದರಿಯವರು ನಿರುದ್ಯೋಗಿಯಾಗಿದ್ದು ಜೀವನೋಪಯೋಗಕ್ಕಾಗಿ ಬೇರೆ ಯಾವುದೇ ಉದ್ಯೋಗವಿಲ್ಲದಿರುವುದರಿಂದ ಸದರಿ ಜಾಗವನ್ನು ಮಂಜೂರು ಮಾಡಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:21-06-2011ರ ಟಿಪ್ಪಣಿ

**<u>ನಿರ್ಣಯ:-</u>**ಮೇಲ್ಮನವಿದಾರರು 10x10 ಅಡಿಗಳ ಜಾಗವನ್ನು ನಂದಿನಿ ಹಾಲಿನ ಪಾರ್ಲರ್ ನಡೆಸಲು ಅನುಮತಿ ಕೋರಲಾಗಿದ್ದು, ಸದರಿಯವರ ಕೋರಿಕೆಯಂತೆ ದಿನಾಂಕ:07-02-2011ರಂದು ಆಯುಕ್ತರು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದ್ದು, ಸದರಿ ಟಿಪ್ಪಣಿಯಲ್ಲಿ ಉದ್ಯಾನವನದಲ್ಲಿ ಎಂದು ನಮೂದಿಸಲಾಗಿರುತ್ತದೆ. ಸದರಿ ಟಿಪ್ಪಣಿಯ ಆಧಾರದ ಮೇಲೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:22-02-2011ರಂದು ಆಯುಕ್ತರ ಟಿಪ್ಪಣಿ ಬಗ್ಗೆ ಸ್ಥಳ ತನಿಖೆ ನಡೆಸಿ ತಿರಸ್ಕರಿಸಲಾಗಿರುತ್ತದೆಂದು ನಿರ್ಣಯಿಸಲಾಗಿರುತ್ತದೆ. ಈ ಬಗ್ಗೆ ಸಮಿತಿಯು ದಿನಾಂಕ:30-07-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಪಾಸಣೆ ಮಾಡಲಾಗಿ ಸದರಿ ಸ್ಥಳದಲ್ಲಿ ಉದ್ಯಾನವನವೇ ಇಲ್ಲದಿರುವುದನ್ನು ಕಂಡು ಆಶ್ಚರ್ಯಗೊಂಡಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಲಾಗಿ ನಾವು ಯಾರೂ ಉದ್ಯಾನವನವಿದೆಯೆಂದು ಟಿಪ್ಪಣಿಯನ್ನು ಮಂಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಮಿತಿಯು ದಿನಾಂಕ:02-08-2011ರಂದು ಉಪ ಆಯುಕ್ತರು (ಆಸ್ತಿಗಳು)ರವರಿಗೆ ಪತ್ರ ಬರೆದು ದಿನಾಂಕ:05-08-2011ರೊಳಗಾಗಿ ಮೇಲ್ಕಂಡ ಸ್ವತ್ತಿನಲ್ಲಿ ಉದ್ಯಾನವನವಿದೆಯೇ ಇಲ್ಲವೇ ಹಾಗೂ ಸದರಿ ಸ್ವತ್ತು ಯಾವು ಉದ್ದೇಶಕ್ಕಾಗಿ ಮೀಸಲಿಟ್ಟಿದೆ ಎಂಬ ಬಗ್ಗೆ ವಿವರವಾದ ವರದಿಯನ್ನು ಸಮಿತಿಯ ಮುಂದೆ ಮಂಡಿಸುವಂತೆ ಕೋರಲಾಗಿತ್ತು. ಆದರೆ ಉಪ ಆಯುಕ್ತರು (ಆಸ್ತಿಗಳು) ಇವರು ದಿನಾಂಕ: 09-08-2011ರಂದು ಸಹಾಯಕ ಕಂದಾಯ ಅಧಿಕಾರಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜಯನಗರ)ರವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಸಮಿತಿಗೆ ಸಲ್ಲಿಸಿ ''ಮೂಲ ಕಡತವನ್ನು ಪರಿಶೀಲನೆಗೆ ಸಲ್ಲಿಸಲು ಕೋರಿದೆ'' ಎಂದು ತಿಳಿಸಿರುತ್ತಾರೆ. ಆದರೆ ಉದ್ಯಾನವನದ ವಿಷಯವಾಗಿರುವುದರಿಂದ ತೋಟಗಾರಿ ಇಲಾಖೆಗೆ ಪತ್ರವನ್ನೇ ಬರೆದಿರುವುದಿಲ್ಲ. ಹಾಗೂ ಸಮಿತಿಯಲ್ಲಿರುವ ಕಡತವನ್ನು ಪರಿಶೀಲಿಸಿದಾಗ ಸಹಾಯಕ ಕಂದಾಯ ಅಧಿಕಾರಿ (ಜಯನಗರ)ರವರು ಕಂಡಿಕೆ 12ರಿಂದ 18ರವರೆಗಿನ ತಮ್ಮ ವರದಿಯಲ್ಲಿ ಉದ್ಯಾನವನವೆಂದು ಎಲ್ಲೂ ನಮೂದಿಸಿರುವುದಿಲ್ಲ. ಹಾಗೂ ಆಟದ ಮೈದಾನವಿದ್ದು ಸದರಿ ಮೈದಾನಕ್ಕೆ ತಂತಿ ಬೇಲಿ ಅಳವಡಿಸಿ ರಕ್ಷಿಸಲಾಗಿದ್ದು, ಆಟದ ಮೈದಾನವನ್ನು ಹೊರತು ಪಡಿಸಿ ಅದರ ಪಕ್ಕದಲ್ಲಿ 9ನೇ ಮುಖ್ಯರಸ್ತೆಗೆ ಅಭಿಮುಖವಾಗಿ 10x10 ಅಡಿಗಳ ಖಾಲಿ ನಿವೇಶನವಿರುವುದಾಗಿ ತಿಳಿಸಿರುವುದು ಸ್ಪಷ್ಟವಾಗಿರುತ್ತದೆ.

ಆದರೆ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜಯನಗರ), ಕಂದಾಯ ಪರಿವೀಕ್ಷಕರು, ವಾರ್ಡ್-170 ಮತ್ತು ಕಂದಾಯ ಅಧಿಕಾರಿ ಜಯನಗರ ವಲಯ, ಉಪ ಆಯುಕ್ತರು (ಆಸ್ತಿಗಳು)ರವರುಗಳು ಮಾತ್ರ ತಮ್ಮ ವರದಿಯಲ್ಲಿ ಉದ್ಯಾನವನವೆಂದು ನಮೂದಿಸಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದು ಕಂಡು ಬರುತ್ತದೆ. ಈ ಅಧಿಕಾರಿಗಳು ಮಾಡಿರುವ ತಪ್ಪಿನಿಂದಾಗಿ ಮೇಲಾಧಿಕಾರಿಗಳು ಸಮಿತಿಯ ಮುಂದೆ ತಪ್ಪು ಟಿಪ್ಪಣಿಯನ್ನು ಮಂಡಿಸಲು ಅವಕಾಶ ಕಲ್ಪಿಸಿದಂತಾಗಿರುತ್ತದೆ.

ಸಮಿತಿಯೇ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಸ್ಥಾಯಿ ಸಮಿತಿಗಳು ಸಾರ್ವಜನಿಕರಿಗೆ ನ್ಯಾಯ ಒದಗಿಸಿಕೊಡದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದಾಗಿ ಅಭಿಪ್ರಾಯಪಟ್ಟಿರುತ್ತದೆ. ಮೇಲ್ಮನವಿದಾರರು ಕೋರಿರುವ ಜಾಗದ ಪಕ್ಕದಲ್ಲಿ ಬೆಸ್ಕಾಂರವರು ಟ್ರಾನ್ಸ್‌ಫಾರಂ ಅಳವಡಿಸಿಕೊಂಡಿದ್ದು ಪಕ್ಕದಲ್ಲಿ ಇನ್ನೂ ಖಾಲಿ ಜಾಗ ಉಳಿದಿದ್ದು ಆ ಜಾಗದಲ್ಲಿ ಸಾರ್ವಜನಿಕರು ಮಲ ಮೂತ್ರ ವಿಸರ್ಜನೆ ಮಾಡುತ್ತಿರುವುದು ತಪಾಸಣಾ ಸಮಯದಲ್ಲಿ ಕಂಡು ಬಂದಿರುತ್ತದೆ. ಸಮಿತಿಯು ಮಹಿಳಾ ಸದಸ್ಯರೊಂದಿಗೆ ಸ್ಥಳದಲ್ಲಿ ತಪಾಸಣೆ ಮಾಡುತ್ತಿರುವಾಗಲೇ ಕೆಲವು ಸಾರ್ವಜನಿಕರು ತಮ್ಮ ಪಾಡಿಗೆ ತಾವು ಮೂತ್ರ ವಿಸರ್ಜನೆ ಮಾಡಿ ಹೋಗುತ್ತಿರುವ ದೃಶ್ಯ ಕಂಡು ಆಘಾತಗೊಂಡಿರುತ್ತದೆ. ಅಲ್ಲಿನ ಸುತ್ತ ಮುತ್ತಲಿನ ಸಾರ್ವಜನಿಕರು ಪಕ್ಕದಲ್ಲೇ ಬಸ್ಸು ನಿಲ್ದಾಣವಿರುವುದರಿಂದ ಸಾರ್ವಜನಿಕರು ಮಲ ಮೂತ್ರ ವಿಸರ್ಜನೆ ಮಾಡುತ್ತಿರುವುದರಿಂದ ಹೆಣ್ಣು ಮಕ್ಕಳು ಮುಜುಗರ ಪಡುವಂತಾಗಿರುತ್ತದೆ. ಹಾಗೂ ಕೆಟ್ಟ ವಾಸನೆಯಿಂದಾಗಿ ಈ ರಸ್ತೆಯಲ್ಲಿ ಓಡಾಡಲೂ ಸಾಧ್ಯವಾಗುತ್ತಿಲ್ಲದೆ ರೋಗ ರುಜಿನಗಳು ಹರಡಲು ಕಾರಣವಾಗಿರುತ್ತದೆ. ಆದ್ದರಿಂದ ಈ ದೃಶ್ಯವನ್ನು ತಪ್ಪಿಸಿ ಸದರಿ ಪ್ರದೇಶವನ್ನು ಸ್ವಚ್ಛವಾಗಿಡುವಂತೆ ಸಂಬಂಧಪಟ್ಟವರಿಗೆ ಆದೇಶಿಸಬೇಕೆಂದು ಕೋರಿಕೊಂಡಿರುತ್ತಾರೆ. ವಾರ್ಡಿನ ಸದಸ್ಯರೂ ಕೂಡ ಸದರಿ ಪ್ರದೇಶದಲ್ಲಿ ಯಾವುದೇ ಹಾಲು ಮಾರಾಟ ಕೇಂದ್ರವಿಲ್ಲದಿರುವುದರಿಂದ ಹಾಗೂ ಅಲ್ಲಿ ಸ್ವಚ್ಛತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಮೇಲ್ಮನವಿದಾರರು ಕೋರಿರುವಂತೆ 10x10 ಅಡಿಗಳ ಜಾಗವನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಿರುವುದು ಸಹ ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಮೇಲ್ಮನವಿದಾರರು ಕೋರಿರುವ ಜಾಗವು ನಗರ ಪಾಲಿಕೆಯ ಉಪಯೋಗಕ್ಕೆ ಅವಶ್ಯಕವಿಲ್ಲದಿರುವುದನ್ನು ಮತ್ತು ಅಲ್ಲಿ ಸ್ವಚ್ಛತೆಯನ್ನು ಕಾಪಾಡುವ ಹಿತದೃಷಿಯಿಂದ ಹಾಗೂ ನಗರ ಪಾಲಿಕೆಗೆ ಆರ್ಥಿಕ ಆಧಾಯವು ಬರುವುದನ್ನು ಮನಗಂಡು ಮೇಲ್ಮನವಿದಾರುರು ಕೋರಿರುವಂತೆ 10x10 ಅಡಿಗಳ ಜಾಗವನ್ನು ಹಾಲಿನ ಮಾರಾಟ ಮಾಡಲು ತಿಂಗಳಿಗೆ ರೂ.1000/-(ರೂಪಾಯಿ ಒಂದು ಸಾವಿರಗಳು ಮಾತ್ರ) ಗುತ್ತಿಗೆ ಹಣವನ್ನು ನಿಗಧಿಪಡಿಸಿ ಮಂಜೂರು ಮಾಡುವುದೆಂದು ಹಾಗೂ ಮೇಲಾಧಿಕಾರಿಗಳು ಮತ್ತು ಸಮಿತಿಯು ಮುಜುಗರಕ್ಕೊಳಗಾಗುವಂತೆ ಟಿಪ್ಪಣಿ ಮಂಡಿಸಿರುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಮೇಲೆ ಕಾನೂನಿನಂತೆ ಸೂಕ್ತ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2010-11</u>

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

**<u>ಪ್ರಸ್ತಾವನೆ</u>**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ವಕೀಲರ ಮುಖಾಂತರ ಹಾಜರಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸದರಿ ಸ್ವತ್ತನ್ನು ಗುತ್ತಿಗೆ ಆದಾರದ ಮೇಲೆ ಪಡೆದಿದ್ದು ಸದರಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಅನುಮತಿ ನೀಡಲಾಗಿರುತ್ತದೆ ಮತ್ತು ಗುತ್ತಿಗೆ ಅವಧಿಯು 2016ಕ್ಕೆ ಮುಕ್ತಾಯಗೊಳ್ಳುತ್ತದೆ. ಕಂದಾಯ ಪ್ರಾಧಿಕಾರವು ಕಾನೂನು ಬದ್ಧವಲ್ಲದ ತೆರಿಗೆಯನ್ನು ನಿಗಧಿಪಡಿಸಿ ಸಹಾಯಕ ಕಂದಾಯ ಅಧಿಕಾರಿಯವರು ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸ್‌ಗೆ ಟ್ರಸ್ಟ್ ವಿವರವನ್ನು ಕೋರಿರುತ್ತದೆ. ಸದರಿ ಸ್ವತ್ತನ್ನು 2000ನೇ ಸಾಲಿನಲ್ಲಿ ಟ್ರಸ್ಟ್‌ನ ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ. ಸಹಾಯಕ ಕಂದಾಯ ಅಧಿಕಾರಿಯವರು ಬಾಕಿ ಇರುವ ತೆರಿಗೆಗೆ ಬಡ್ಡಿಯನ್ನು ಪಾವತಿಸುವಂತೆ ತಿಳಿಸಿರುವುದು ಸಮಂಜಸವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಿರುವುದಿಲ್ಲ. ಸದರಿಯವರಿಗೆ ನೋಟೀಸ್ ಜಾರಿ ಮಾಡಲು ನಿರ್ದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು.

<u>05.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2010-11</u>

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**<u>ಪ್ರಸ್ತಾವನೆ</u>**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರು ಹಾಜರಿದ್ದು, ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸಮಿತಿಯ ಸಂಬಂಧಪಟ್ಟ ಅಧಿಕಾರಿಗೆ ನಿಮಗೆ ಇದು ಕೊನೆ ಅವಕಾಶ ಒಂದು ವೇಳೆ ನೋಟೀಸ್ ನೀಡಲು ವಿಫಲರಾದಲ್ಲಿ ನಿಮ್ಮ ಮೇಲೆ ಸೂಕ್ತ ಶಿಸ್ತಿನ ಕ್ರಮ ಜರುಗಿಸಲು ಆಯುಕ್ತರು ಕ್ರಮ ಕೈಗೊಳ್ಳುವಂತೆ

ನಿರ್ಣಯ ಕೈಗೊಳ್ಳಲಾಗುವುದೆಂದು ನಿರ್ದೇಶಿಸುತ್ತಾ, ಕೂಡಲೇ ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡುವಂತೆ ತಿಳಿಸಿ ಪ್ರಕರಣವನ್ನು ಮುಂದೂಡಲಾಯಿತು.



06.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರಾದ ಶ್ರೀ.ಸತ್ಯನಾರಾಯಣ ಮತ್ತು 6ನೇ ಮತ್ತು 7ನೇ ಮೇಲ್ಮನವಿದಾರರು ಹಾಜರಾಗಿದ್ದರು. ಪ್ರತಿವಾದಿಗಳು ಹಾಜರಾಗಿರುವುದಿಲ್ಲ ಸಹಾಯಕ ನಿರ್ದೇಶಕರು, ನಗರಯೋಜನೆ (ಪಶ್ಚಿಮ)ರವರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಒಂದು ತಿಂಗಳ ಕಾಲಾವಕಾಶ ಕೋರಿಕೊಂಡಿರುತ್ತಾರೆ. 6ನೇ ಮೇಲ್ಮನವಿದಾರರಾದ ಶ್ರೀಮತಿ.ಇಂದಿರಮ್ಮರವರು ತಮ್ಮ ವಕೀಲರೊಂದಿಗೆ ಹಾಜರಿದ್ದು ತಾವು ಹೊಸದಾಗಿ ಶ್ರೀ.ಟಿ.ಶೇಷಗಿರಿ ರಾಂ, ವಕೀಲರನ್ನು ನನ್ನ ಪರವಾಗಿ ವಾದಿಸಲು ಪ್ರತಿನಿಧಿಸುತ್ತಾರೆಂದು ತಿಳಿಸಿರುತ್ತಾರೆ. ವಾದ ಮಂಡನೆಗಾಗಿ ಪ್ರಕರಣವನ್ನು ಮುಂದೂಡಿದೆ.

07. ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2010-11

ಸಂಖ್ಯೆ:1028/402/3, 19ನೇ ಹೆಚ್ ಮುಖ್ಯರಸ್ತೆ, 1ನೇ ಎನ್. ಬ್ಲಾಕ್, ರಾಜಾಜಿನಗರ, ವಾರ್ಡ್-62 ಈ ಸ್ವತ್ತಿನ ಖಾತೆದಾರರಾದ ಶ್ರೀ.ಗೋಕಲ್‌ದಾಸ್ ಪೈರವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.13,450/-(ವಸತಿ) ಮತ್ತು ರೂ.1,02,400/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಮತ್ತು ಸಹಾಯಕ ಕಂದಾಯ ಅಧಿಕಾರಿ(ನಾಗಪುರ)ರವರ ಪರವಾಗಿ ಕಂದಾಯ ಪರಿವೀಕ್ಷಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಕಂದಾಯ ಇಲಾಖೆಯವರು ಮಾಡಿರುವ ಕಂದಾಯ ಪರಿಷ್ಕರಣೆಯು ನ್ಯಾಯ ಸಮ್ಮತವಾಗಿರುವುದಿಲ್ಲ. ಸದರಿ ಸ್ವತ್ತನ್ನು ಸ್ವಂತಕ್ಕೆ ಉಪಯೋಗಿಸುತ್ತಿದ್ದು ವಾಣಿಜ್ಯ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಭಾಗಕ್ಕೆ ನಗರ ಪಾಲಿಕೆಯು ನಿಗಧಿಪಡಿಸಿರುವ ಮಾದರಿಯಲ್ಲಿಯೇ ಕಂದಾಯವನ್ನು ಪಾವತಿಸಿರುತ್ತೇನೆ. ಆದರೆ ಕಂದಾಯ ಅಧಿಕಾರಿಗಳು ಭಾಡಿಗೆಗೆ ನೀಡಿರುವುದಾಗಿ ಭಾವಿಸಿ ಕಂದಾಯ ನಿಗಧಿಪಡಿಸಿರುವುದು ತಪ್ಪಾಗಿರುತ್ತದೆ. ಆದ್ದರಿಂದ ತಾವು ಪರಿಶೀಲಿಸಿ ನನಗೆ ನ್ಯಾಯ ಸಮ್ಮತವಾದ ಕಂದಾಯಾವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ.

08.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದು ಮೇಲ್ಮನವಿದಾರರಿಗೆ ನೋಟೀಸ್ ಜಾರಿಮಾಡಿರುವ ಬಗ್ಗೆ ಸ್ವೀಕೃತಿಯನ್ನು ಒದಗಿಸಿರುವುದಿಲ್ಲ. ಮತ್ತೊಮ್ಮೆ ಮೇಲ್ಮನವಿದಾರರಿಗೆ ಹೊಸದಾಗಿ ನೋಟೀಸ್ ಜಾರಿ ಮಾಡುವುದೆಂದು ನಿರ್ದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು.



09.ವಿಷಯ:ಸಂಖ್ಯೆ:ಅಸ್ಥಾಸ/(ಆ)/21/2011-12

ಶ್ರೀ.ಎಸ್.ಆರ್.ಬಸವರಾಜು, ರವರು ಮೇಲ್ಕಂಡ ವಿಳಾಸದಲ್ಲಿ ಚಿಕನ್ ಸ್ಟಾಲ್ ತೆರೆಯಲು ಪರವಾನಗಿ ಅರ್ಜಿಯನ್ನು ಸಲ್ಲಿಸಿ ಪರವಾನಗಿ ಶುಲ್ಕವನ್ನು ಸಹ ಪಾವತಿಸಿರುತ್ತೇನೆ. ಅಲ್ಲದೆ ದಿನಾಂಕ:26-06-2011ರಂದು ಉದ್ದಿಮೆಯನ್ನು ತೆರೆದು ವ್ಯಾಪಾರವನ್ನು ಮಾಡುತ್ತಿದ್ದೇನೆ. ಆದರೆ ನೆರೆಹೊರೆಯವರ ಆಕ್ಷೇಪಣೆ ಸಲ್ಲಿಸಿರುತ್ತಾರೆಂದು ತಿಳಿಸಿ ನನ್ನ ಪರವಾನಗಿ ಅರ್ಜಿಯನ್ನು ತಿರಸ್ಕರಿಸಿ ಸಹಾಯಕ ನಿರ್ದೇಶಕರು (ಪಶುಪಾಲನೆ)ರವರು ದಿನಾಂಕ:27-06-2011ರಂದು ನೋಟೀಸ್ ನೀಡಿರುತ್ತಾರೆ. ಈಗಾಗಲೇ ನಾನು ತುಂಬಾ ಹಣವನ್ನು ವ್ಯಾಪಾರಕ್ಕಾಗಿ ವಿನಿಯೋಗಿಸಿರುತ್ತೇನೆ. ಹಾಗೂ ನಾನು ಚಿಕನ್ ಸ್ಟಾಲ್ ತೆರೆಯುತ್ತಿರುವ ಅಕ್ಕ ಪಕ್ಕದಲ್ಲಿ ಯಾವುದೇ ನಿವಾಸದ ಮನೆಗಳಿರುವುದಿಲ್ಲ ಬದಲಾಗಿ ಅಂಗಡಿಗಳಿರುತ್ತವೆ. ಇದರಿಂದಾಗಿ ಯಾರು ಆಕ್ಷೇಪಣೆ ಮಾಡಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ. ಆದುದರಿಂದ ನಾನು ಈಗಾಗಲೇ ವ್ಯಾಪಾರಕ್ಕಾಗಿ ಹಣವನ್ನು ವಿನಿಯೋಗಿಸಿರುವುದರಿಂದ ನನಗೆ ಪರವಾನಗಿಯನ್ನು ನೀಡುವಂತೆ ಸಂಬಂಧಪಟ್ಟವರಿಗೆ ಆದೇಶಿಸಬೇಕೆಂದು ಹಾಗೂ ಪರವಾನಗಿ ನೀಡುವವರೆವಿಗೂ ನಾನು ವ್ಯಾಪಾರ ನಡೆಸಲು ಅನುಮತಿ ನೀಡುವಂತೆ ಇಲ್ಲದಿದ್ದಲ್ಲಿ ನನಗೆ ಬಹಳ ಲುಕ್ಸಾನ್ ಆಗುವುದೆಂದು ತಿಳಿಸಿ ಸದರಿ ನೋಟಿಸ್ ವಿರುದ್ಧ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-07-2011ರಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದು ಮೇಲ್ಮನವಿದಾರರು ಪ್ರಕರಣವನ್ನು ಹಿಂಪಡೆಯುವುದಾಗಿ ತಿಳಿಸಿರುವ ಮೇರೆಗೆ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸುವುದೆಂದು ತೀರ್ಮಾನಿಸಲಾಯಿತು.
**ನಿರ್ಣಯ:**- ಮೇಲ್ಮನವಿದಾರರು ಪ್ರಕರಣವನ್ನು ಹಿಂಪಡೆದಿರುವುದರಿಂದ ಪ್ರಕರಣವನ್ನು ವಜಾಗೊಳಿಸಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಮತ್ತೊಮ್ಮೆ ನೋಟೀಸ್ ಜಾರಿ ಮಾಡುವುದೆಂದು ಪ್ರಕರಣವನ್ನು ಮುಂದೂಡಲಾಯಿತು.

11. ವಿಷಯ:ಸಂಖ್ಯೆ:ಅಸ್ಥಾಸ/(ಆ)/23/2011-12

ನಂ.632, 12ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-45 ಈ ವಿಳಾಸದಲ್ಲಿ ನಡೆಯುತ್ತಿರುವ ಹಿಟ್ಟಿನಗಿರಣಿ ಉದ್ದಿಮೆ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ನೀಡಿದ ದೂರಿನನ್ವಯ ಉದ್ದಿಮೆಗೆ ನೀಡಿರುವ ಪರವಾನಗಿಯನ್ನು ಹಿಂಪಡೆಯಲಾಗಿತ್ತು. ದಿನಾಂಕ:01-04-2011ರಂದು ಅಪೀಲು ಸ್ಥಾಯಿ ಸಮಿತಿಯ ಸಭೆಯ ನಡುವಳಿಯಲ್ಲಿ ಸದರಿ ಹಿಟ್ಟಿನ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಉದ್ದಿಮೆಗೆ ರದ್ದುಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ವಿಷಯದ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ಮತ್ತೊಮ್ಮೆ ಪತ್ರ ಬರೆದು ನಮ್ಮ ಹೇಳಿಕೆಯನ್ನು ಪಡೆಯದೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ನಮಗೆ ಹೇಳಿಕೆ ನೀಡಲು ಅವಕಾಶ ನೀಡುವಂತೆ ಕೋರಿಕೊಂಡಿರುವ ಮೇರೆಗೆ ಸದರಿಯವರ ದೂರಿನ ಜೊತೆಗೆ ಶ್ರೀ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು ಇವರಿಗೆ ವೈದ್ಯರು ಸಹ ದೃಢೀಕರಣ ಪತ್ರ ನೀಡಿ ಮೆಣಸಿನ ಪುಡಿ ಇನ್ನಿತರೆ ಗಾಟು ಮತ್ತು ದೂಳು ಬರುವ ಸ್ಥಳದಲ್ಲಿ ಕಾರ್ಯನಿರ್ವಹಿಸಬಾರದೆಂದು ತಿಳಿಸಿರುವುದನ್ನು ಮನಗಂಡು ಉದ್ದಿಮೆದಾರರನ್ನು ಹಾಗೂ ದೂರುದಾರರನ್ನು ಪುನಃ ಕರೆಸಿ ವಿಚಾರಣೆ ನಡೆಸಬಹುದೆಂದು ಮಂಡಿಸಿರುವ ಆಯುಕ್ತರ ದಿನಾಂಕ:02-08-2011ರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಶ್ರೀ.ಗಣೇಶ್ ಹಾಜರಿದ್ದು ತಮ್ಮ ವಕೀಲರು ಇಲ್ಲದಿರುವುದರಿಂದ ಕಾಲಾವಕಾಶ ಕೋರಿಕೊಂಡಿರುತ್ತಾರೆ. ಆಕ್ಷೇಪಣೆದಾರರಾದ ಶ್ರೀ.ವಿನೋದ ವಿ. ಮೂರ್ತಿ, ಶ್ರೀಮತಿ.ನಿರ್ಮಲ, ಶ್ರೀಮತಿ.ಇಂದಿರಾ ದೇವಿ ಮತ್ತು

ಶ್ರೀಮತಿ.ವಿಜಯರಾಣಿ ಇವರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು. ಶ್ರೀ.ಗಣೇಶ್‌ರವರು ಮೊದಲಿಗೆ ಸಹಿ ಮಾಡಲು ನಿರಾಕರಿಸಿದ್ದು ನಂತರ ಸಹಿ ಮಾಡಿರುತ್ತಾರೆ.

ಸಂಬಂಧಪಟ್ಟ ಅಧಿಕಾರಿಗಳಾದ ಉಪ ಆರೋಗ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿಯವರು ಹಾಜರಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಯಾವುದೇ ಕ್ರಮ ಜರುಗಿಸಲು ಸಾಧ್ಯವಾಗಿರುವುದಿಲ್ಲವಾದ್ದರಿಂದ ಆಯುಕ್ತರ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ತಮ್ಮ ಹೇಳಿಕೆಗಳನ್ನು ಸಲ್ಲಿಸುವಂತೆ ನೋಟೀಸ್ ಜಾರಿ ಮಾಡುವುದೆಂದು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.



12. ವಿಷಯ:ಸಂಖ್ಯೆ:ಅಸ್ಥಾಸ/(ತೆ)/24/2011-12

ಶ್ರೀ.ವಿ.ನಾರಾಯಣಗೌಡ ಇವರು ವಾರ್ಡ್-123, ನಂ.826/ಎ ನಿವೇಶನದ ಪಕ್ಕದ 5ನೇ ಮುಖ್ಯರಸ್ತೆ ಮತ್ತು ಸರ್ವೀಸ್ ರಸ್ತೆ ಸಂದಿಸುವ ಸ್ಥಳದಲ್ಲಿ 103.6 ಅಡಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.700/-ಗಳ ಗುತ್ತಿಗೆ ಹಣ ಪಾವತಿಸಿ ಅಂಗಡಿಯನ್ನು ನಡೆಸುತ್ತಿದ್ದು, ಸದರಿ ಅಂಗಡಿಗೆ ದಿನಾಂಕ:06-12-2005ರಿಂದ ಜಾರಿಗೆ ಬರುವಂತೆ ಗುತ್ತಿಗೆ ಹಣವನ್ನು ರೂ.4,230/-ಗಳಿಗೆ ಹೆಚ್ಚಿಸಿ ದಿನಾಂಕ:26-05-2011ರಂದು ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಜರಿರುತ್ತಾರೆ. ಮೇಲ್ಮನವಿದಾರರು ತಮ್ಮ ಅಂಗಡಿಗೆ ಸಹಾಯಕ ಕಂದಾಯ ಅಧಿಕಾರಿಗಳು ನಿಗಧಿಪಡಿಸಿರುವ ಬಾಡಿಗೆಯು ದುಭಾರಿಯಾಗಿದ್ದು ಕಡಿಮೆ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿಗಳು ಈಗ ನಿಗಧಿಪಡಿಸಿರುವ ಬಾಡಿಗೆಯು ನ್ಯಾಯಸಮ್ಮತವಾಗಿರುತ್ತದೆಂದು ತಿಳಿಸಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ.

13.ವಿಷಯ:ಸಂಖ್ಯೆ:ಅಸ್ಥಾಸ/(ತೆ)/25/2011-12

ರಾಜ್ಯಾಧ್ಯಕ್ಷರು, ದಲಿತ ಸಂಘರ್ಷ ಸಮಿತಿ (ರಿ), ನಂ.19, ಎ.ಕೆ.(ನ್ಯೂ) ಕಾಲೋನಿ, ಕಾಕ್ಸ್ ಟೌನ್, ಜೀವನಹಳ್ಳಿ, ಬೆಂಗಳೂರು-05 ಇವರಿಗೆ ಸುಭಾಶ್‌ನಗರ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆ ಸಂಖ್ಯೆ:01ನ್ನು ಹಂಚಿಕೆ ಮಾಡಿದ್ದು, ಸದರಿ ಮಳಿಗೆಗೆ ಚದರಡಿ ಒಂದಕ್ಕೆ ರೂ.15/-ಗಳಂತೆ ನಿಗಧಿಪಡಿಸಿ 100 ಚದರಡಿಗೆ ರೂ.1500/-ಗಳಂತೆ ನಿಗಧಿಪಡಿಸಿ ದಿನಾಂಕ:21-03-2011ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹಕ್ಕೆ ಉತ್ತರವಾಗಿ ಸದರಿ ಸಂಸ್ಥೆಯವರು ಮಾನ್ಯ ಮುಖ್ಯ ಮಂತ್ರಿರವರಿಗೆ ಬಾಡಿಗೆಯನ್ನು ಕಡಿಮೆ ಮಾಡಲು ಕೋರಿದ್ದು, ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ದಿನಾಂಕ:07-04-2011ರಂದು ಪತ್ರ ಬರೆದು ಸದರಿ ಸಂಸ್ಥೆಗೆ ಬಾಡಿಗೆ ಕಡಿಮೆ ನಿಗಧಿಪಡಿಸಿಕೊಡುವಂತೆ ತಿಳಿಸಿರುವ ಮೇರೆಗೆ ತೀರ್ಮಾನಕ್ಕಾಗಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-08-2011ರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಮತ್ತೊಮ್ಮೆ ನೋಟೀಸ್ ಜಾರಿ ಮಾಡುವುದೆಂದು ಪ್ರಕರಣವನ್ನು ಮುಂದೂಡಲಾಯಿತು.

14.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/26/2011-12

ವೈಟ್‌ಫೀಲ್ಡ್ ಗ್ರಾಮದ ಸರ್ವೆ ನಂ.64/1, 65/2ರ ಇಸಿಸಿ ರಸ್ತೆಯಲ್ಲಿ ಡೀನ್ಸ್ ಎಜುಕೇಷನ್ ಟ್ರಸ್ಟ್‌ನವರು ಶಾಲಾ ಕಟ್ಟಡ ನಿರ್ಮಿಸುವುದರ ಸಲುವಾಗಿ ನಕ್ಷೆ ಮಂಜೂರಾತಿ ಕೋರಿದ್ದು, ವಲಯ ನಿಯಮಾವಳಿ ಅನುಸಾರ 2015ರ ಪ್ರಕಾರ ರಸ್ತೆಯಗಲ ನಿಗಧಿಪಡಿಸಿರುವದಕ್ಕಿಂತ ಕಡಿಮೆ ಇರುವುದರಿಂದ ಶಾಲಾ ಕಟ್ಟಡ ನಕ್ಷೆ ಮಂಜೂರಾತಿ ಅರ್ಜಿಯನ್ನು ಪರಿಗಣಿಸಲು ಬರುವುದಿಲ್ಲವೆಂದು ಸಹಾಯಕ ನಿರ್ದೇಶಕರು ನಗರ ಯೋಜನೆ, ಮಹಾದೇವಪುರ ರವರು ನೀಡಿರುವ ದಿನಾಂಕ:19-02-2011ರಂದು ನೀಡಿರುವ ಹಿಂಬರಹದ ವಿರುದ್ಧ ಸದರಿ ಶಾಲೆಯ ಮಾಲೀಕರಾದ ಶ್ರೀ.ಪರಾಜ್ ಎಜುಕೇಷನ್ ಟ್ರಸ್ಟ್‌ರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ವಕೀಲರು ಹಾಗೂ ಸಂಬಂಧಪಟ್ಟ ಸಹಾಯಕ ನಿರ್ದೇಶಕರು, ನಗರ ಯೋಜನೆ (ಮಹದೇವಪುರ)ರವರು ಹಾಜರಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:23-09-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಆರೋಗ್ಯಾಧಿಕಾರಿಗಳು (ಪೂರ್ವ/ದಕ್ಷಿಣ) |
| 04 | ಬಿ.ಎಸ್.ಆನಂದ | ಸದಸ್ಯರು | ಸ.ಕಂ.ಅ.(ಚಾಮರಾಜಪೇಟೆ/ಮಲ್ಲೇಶ್ವರಂ/ಹೆಬ್ಬಾಳ) |
| 05 | ಎಂ.ವಸಂತಕುಮಾರಿ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪೂರ್ವ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2011-12

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ವಕೀಲರು ಹಾಜರಿದ್ದು 1995ರಿಂದಲೇ ಅಸೆಸ್‌ಮೆಂಟ್ ಮಾಡಲಾಗಿರುತ್ತದೆ. ಆದರೆ 2000ರಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತೇವೆ. ಆದುದರಿಂದ ಪ್ರತಿವಾದಿಗಳು 2000ರಿಂದ ಅಸೆಸ್‌ಮೆಂಟ್ ಮಾಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಶ್ರೀ.ಪ್ರಕಾಶ್, ಕಂದಾಯ ಪರಿವೀಕ್ಷಕರು ಮೇಲ್ಮನವಿದಾರರು ಕಟ್ಟಡವನ್ನು ಬಾಡಿಗೆಗೆ ನೀಡಿರುತ್ತಾರೆ ಅಲ್ಲದೆ ಎಸ್.ಎ.ಎಸ್.ನಲ್ಲೂ ಸಹ ತಪ್ಪಾಗಿ ಕಂದಾಯ ನಿಗಧಿಪಡಿಸಿಕೊಂಡಿರುತ್ತಾರೆ. ಈಗಾಗಲೇ ನಾವು ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದರಿಂದ ಸದರಿ ಕಂದಾಯವನ್ನೇ ಸ್ಥಿರೀಕರಿಸುವಂತೆ ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ ತಮ್ಮ ಪರವಾಗಿ ವಕಾಲತ್ತು ಸಲ್ಲಿಸಲು ಶ್ರೀ.ಕೃಷ್ಣಪ್ಪ ವಕೀಲರಿಗೆ ಅಧಿಕಾರ ನೀಡಿರುತ್ತಾರೆ. ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರು

ಕಂದಾಯ ಪರಿವೀಕ್ಷಕರಾದ ಶ್ರೀ.ಸುರೇಶ್‌ರವರೊಂದಿಗೆ ಹಾಜರಾಗಿದ್ದು ತಾವು ಹೊಸದಾಗಿ ಕರ್ತವ್ಯಕ್ಕೆ ಹಾಜರಾಗಿರುವುದರಿಂದ ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

<u>03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/13/2011-12</u>

ಶ್ರೀಮತಿ.ಪಿ.ಶಕುಂತಲ, ಸಂಖ್ಯೆ:13, ವೀರಭದ್ರನಾಯಕ ಲೇನ್. ಕಾಟನ್ ಪೇಟೆ ಈ ಸ್ವತ್ತಿನ ಕಂದಾಯವನ್ನು ಪರಿಷ್ಕರಿಸಿ ವಸತಿ ರೂ.47600/- ಮತ್ತು ವಸತಿಯೇತರ ರೂ.57120/- ವಾರ್ಷಿಕ ಮೌಲ್ಯಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವುದನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವುದರ ವಿರುದ್ಧ, ಸ್ವತ್ತಿನ ಮಾಲೀಕರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-05-2011ರ ಟಿಪ್ಪಣಿ.

<u>ನಿರ್ಣಯ:-</u>ದಿನಾಂಕ:17-09-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸ್ವತ್ತಿನ ಮಾಲೀಕರು ತಿಳಿಸಿರುವಂತೆ ನೆಲಮಹಡಿಯಲ್ಲಿ ಯಾವುದೇ ತಾಂತ್ರಿಕ ಉದ್ದೇಶಕ್ಕಾಗಿ ಅಂಗಡಿ ನಡೆಸುತ್ತಿರುವುದು ಕಂಡು ಬರುತ್ತಿಲ್ಲ. ತಮ್ಮ ಹೆಸರಿನಲ್ಲಿ ಟ್ರೇಡ್ ಪರವಾನಗಿಯನ್ನು ಹೊಂದಿದ್ದರೂ ಸಹ ವಾಣಿಜ್ಯ ಉದ್ದೇಶಕ್ಕಾಗಿ ಅಂಗಡಿಯನ್ನು ಭಾಡಿಗೆಗೆ ನೀಡಿರುವುದು ಕಂಡು ಬರುತ್ತದೆ. ಹಾಗೂ ಬಾಡಿಗೆದಾರರು ತಾವು 2 ವರ್ಷದಿಂದ ಬಾಡಿಗೆಗೆ ಇರುವುದಾಗಿ ಹಾಗೂ



ಈ ಮೊದಲು ಸುಮಾರು 10 ವರ್ಷಗಳಿಂದ ಬೇರೆಯವರು ಬಾಡಿಗೆಗೆ ಅಂಗಡಿ ನಡೆಸುತ್ತಿದ್ದರೆಂದು ಹಾಲಿ ಬಾಡಿಗೆದಾರರು ತಿಳಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಸಮಿತಿಯು ಮನಗಂಡು ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪ್ರಥಮ ಅಪೀಲು ಅಧಿಕಾರಿಗಳು ಪರಿಷ್ಕರಿಸಿರುವುದನ್ನು ಸ್ಥಿರೀಕರಿಸುವುದೆಂದು ತೀರ್ಮಾನಿಸಲಾಯಿತು.

<u>04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2011-12</u>

ಸಂಖ್ಯೆ:1028/402/3, 19ನೇ ಹೆಚ್ ಮುಖ್ಯರಸ್ತೆ, 1ನೇ ಎನ್. ಬ್ಲಾಕ್, ರಾಜಾಜಿನಗರ, ವಾರ್ಡ್-62 ಈ ಸ್ವತ್ತಿನ ಖಾತೆದಾರರಾದ ಶ್ರೀ.ಗೋಕಲ್‌ದಾಸ್ ಪೈರವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.13,450/-(ವಸತಿ) ಮತ್ತು ರೂ.1,02,400/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ಟಿಪ್ಪಣಿ.

**<u>ನಿರ್ಣಯ:-</u>** ದಿನಾಂಕ:17-09-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸ್ವತ್ತಿನ ಮಾಲೀಕರು 2000-2001ರವರೆಗೆ ನೆಲ ಅಂತಸ್ತನ್ನು ವಸತಿಯೇತರಕ್ಕೆ ಬಾಡಿಗೆಗೆ ನೀಡಿದ್ದು ಆ ಸಮಯದಲ್ಲಿ ಬಾಡಿಗೆ ವಸತಿಯೇತರಕ್ಕೆ ಕಂದಾಯವನ್ನು ನಿಗಧಿಪಡಿಸಿಕೊಂಡಿರುವುದು ಸ್ಪಷ್ಟವಾಗಿರುತ್ತದೆ. ತದ ನಂತರ 2002ರಿಂದ ಸ್ವಂತಕ್ಕಾಗಿ (ವಸತಿಯೇತರ) ಉಪಯೋಗಿಸುತ್ತಿದ್ದು ಪ್ರಥಮ ಅಪೀಲು ಅಧಿಕಾರಿಗಳು ಈ ವಿಷಯವನ್ನು ಗಣನೆಗೆ ತೆಗೆದುಕೊಳ್ಳದೆ ವಸತಿಯೇತರ 1800 ಚದರ ಅಡಿಗಳ ಭಾಗಕ್ಕೆ ಬಾಡಿಗೆ ರೂ.8/-ರಂತೆ ನಿಗಧಿಪಡಿಸಿರುವುದು ಸಮಂಜಸವಾಗಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ 1800 ಚದರ ಅಡಿಗಳ ವಸತಿಯೇತರ ಭಾಗಕ್ಕೆ ಸ್ವಂತ ಉಪಯೋಗಕ್ಕಾಗಿ ರೂ.4/-ರಂತೆ ನಿಗಧಿಪಡಿಸಿ ದಿನಾಂಕ:01-04-2006ರಿಂದ ಜಾರಿಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>05.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12</u>

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

<u>ಪ್ರಸ್ತಾವನೆ:-</u>ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

<u>06.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12</u>

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/-ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ಮಗನ ಮುಖಾಂತರ ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ಆ)/23/2011-12

ನಂ.632, 12ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-45 ಈ ವಿಳಾಸದಲ್ಲಿ ನಡೆಯುತ್ತಿರುವ ಹಿಟ್ಟಿನಗಿರಣಿ ಉದ್ದಿಮೆ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ನೀಡಿದ ದೂರಿನನ್ವಯ ಉದ್ದಿಮೆಗೆ ನೀಡಿರುವ ಪರವಾನಗಿಯನ್ನು ಹಿಂಪಡೆಯಲಾಗಿತ್ತು. ದಿನಾಂಕ:01-04-2011ರಂದು ಅಪೀಲು ಸ್ಥಾಯಿ ಸಮಿತಿಯ ಸಭೆಯ ನಡುವಳಿಯಲ್ಲಿ ಸದರಿ ಹಿಟ್ಟಿನ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಉದ್ದಿಮೆಗೆ ರದ್ದುಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ವಿಷಯದ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ಮತ್ತೊಮ್ಮೆ ಪತ್ರ ಬರೆದು ನಮ್ಮ ಹೇಳಿಕೆಯನ್ನು ಪಡೆಯದೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ನಮಗೆ ಹೇಳಿಕೆ ನೀಡಲು ಅವಕಾಶ ನೀಡುವಂತೆ ಕೋರಿಕೊಂಡಿರುವ ಮೇರೆಗೆ ಸದರಿಯವರ ದೂರಿನ ಜೊತೆಗೆ ಶ್ರೀ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು ಇವರಿಗೆ ವೈದ್ಯರು ಸಹ ದೃಢೀಕರಣ ಪತ್ರ ನೀಡಿ ಮೆಣಸಿನ ಪುಡಿ ಇನ್ನಿತರೆ ಗಾಟು ಮತ್ತು ದೂಳು ಬರುವ ಸ್ಥಳದಲ್ಲಿ ಕಾರ್ಯನಿರ್ವಹಿಸಬಾರದೆಂದು ತಿಳಿಸಿರುವುದನ್ನು ಮನಗಂಡು ಉದ್ದಿಮೆದಾರರನ್ನು



ಹಾಗೂ ದೂರುದಾರರನ್ನು ಪುನಃ ಕರೆಸಿ ವಿಚಾರಣೆ ನಡೆಸಬಹುದೆಂದು ಮಂಡಿಸಿರುವ ಆಯುಕ್ತರ ದಿನಾಂಕ:02-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಶ್ರೀ.ಗಣೇಶ್ ಹಾಜರಿದ್ದು ತಮ್ಮ ಪ್ರತಿನಿಧಿಗಳು ಹಾಜರಾಗಿಲ್ಲದಿರುವುದರಿಂದ ಕಾಲಾವಕಾಶ ಕೋರಿಕೊಂಡಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

08.ವಿಷಯ:ಸಂಖ್ಯೆ:ಅಸ್ಥಾಸ/(ತೆ)/24/2011-12

ಶ್ರೀ.ವಿ.ನಾರಾಯಣಗೌಡ ಇವರು ವಾರ್ಡ್-123, ನಂ.826/ಎ ನಿವೇಶನದ ಪಕ್ಕದ 5ನೇ ಮುಖ್ಯರಸ್ತೆ ಮತ್ತು ಸರ್ವೀಸ್ ರಸ್ತೆ ಸಂದಿಸುವ ಸ್ಥಳದಲ್ಲಿ 103.6 ಅಡಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.700/-ಗಳ ಗುತ್ತಿಗೆ ಹಣ ಪಾವತಿಸಿ ಅಂಗಡಿಯನ್ನು ನಡೆಸುತ್ತಿದ್ದು, ಸದರಿ ಅಂಗಡಿಗೆ ದಿನಾಂಕ:06-12-2005ರಿಂದ ಜಾರಿಗೆ ಬರುವಂತೆ ಗುತ್ತಿಗೆ ಹಣವನ್ನು ರೂ.4,230/-ಗಳಿಗೆ ಹೆಚ್ಚಿಸಿ ದಿನಾಂಕ:26-05-2011ರಂದು ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

**ನಿರ್ಣಯ**:- ದಿನಾಂಕ:17-09-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು ಹಾಗೂ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸದರಿ ಪ್ರಕರಣದಲ್ಲಿ ಗುತ್ತಿಗೆ ಅವಧಿಯು ದಿನಾಂಕ:06-12-2005ಕ್ಕೆ ಮುಗಿದಿರುವುದು ಸ್ಪಷ್ಟವಾಗಿರುತ್ತದೆ. ಮೇಲ್ಮನವಿದಾರರು ದಿನಾಂಕ:06-12-2005ಕ್ಕೆ ಅರ್ಜಿ ನೀಡಿ ಮೂರು ವರ್ಷದ ಅವಧಿಗೆ ಮರು ನವೀಕರಿಸಿಕೊಡಲು ಕೋರಿಕೊಂಡಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡು ಬರುತ್ತದೆ. ತದ ನಂತರ ದಿನಾಂಕ:26-05-2011ರಂದು ಏಕಾಏಕಿ ಹಿಂಬರಹವನ್ನು ನೀಡಿ ದಿನಾಂಕ:06-12-2005ರಿಂದ ಮೂರು ವರ್ಷಗಳಿಗೆ ಮರು ನವೀಕರಣ ಮಾಡಿ ವಾರ್ಷಿಕ ಗುತ್ತಿಗೆ ಹಣ ರೂ.50,764-00ಗಳಾಗುತ್ತದೆಂದು ತಿಳಿಸಿ ದಿನಾಂಕ:06-12-2005ರಿಂದ ಗುತ್ತಿಗೆ ಹಣವನ್ನು ಪಾವತಿಸಿ ಎಂದು ದಿನಾಂಕ:26-05-2011ರ ಹಿಂಬರಹದಲ್ಲಿ ತಿಳಿಸಿರುವುದು ಸ್ವಭಾವಸಿದ್ಧನ್ಯಾಯಕ್ಕನುಗುಣವಾಗಿರುವುದಿಲ್ಲ. ಹಾಗೂ ಒಂದು ವೇಳೆ ಗುತ್ತಿಗೆ ಹಣವನ್ನು ಹೆಚ್ಚಿಸಬೇಕಾದಲ್ಲಿ ಮುಂದಿನ ಗುತ್ತಿಗೆ ಅವಧಿಯು ಪ್ರಾರಂಭವಾಗುವ ಮುನ್ನವೇ ಅಥವಾ ಗುತ್ತಿಗೆ ಅವಧಿಯು ಮುಗಿದ ಒಂದು ತಿಂಗಳೊಳಗಾಗಿ ಗುತ್ತಿಗೆ ಕರಾರನ್ನು ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ಮಾಡದೆ 2-3 ವರ್ಷಗಳು ಕಳೆದ ನಂತರ ಗುತ್ತಿಗೆ ಕರಾರು ಮಾಡಿಕೊಂಡು ಗುತ್ತಿಗೆ ಹಣವನ್ನು ನಿಗಧಿಪಡಿಸಿ ಹಿಂದಿನ ವರ್ಷಗಳಿಂದ ಬಾಕಿ ಗುತ್ತಿಗೆ ಹಣವನ್ನು ಪಾವತಿಸುವಂತೆ ಮೇಲ್ಮನವಿದಾರರಿಗೆ ತಿಳಿಸಿದಾಗ ಅವರುಗಳು ನ್ಯಾಯಾಲಯದ ಮೊರೆ ಹೋಗಿ ಹಾಲಿ ಪಾವತಿಸುತ್ತಿದ್ದ ಗುತ್ತಿಗೆ ಹಣಕ್ಕೂ ತಡೆಯಾಜ್ಞೆ ತಂದಿರುವುದನ್ನು ಸಾಕಷ್ಟು ಪ್ರಕರಣಗಳಲ್ಲಿ ಕಾಣಬಹುದಾಗಿರುತ್ತದೆ. ಈ ಪ್ರಕರಣದಲ್ಲಿ ಗುತ್ತಿಗೆ ಅವಧಿ ಮುಗಿದ 6 ವರ್ಷಗಳ ನಂತರ ಗುತ್ತಿಗೆ ಹಣವನ್ನು ನಿಗಧಿಪಡಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಹಾಲಿ ಪಾವತಿಸುತ್ತಿರುವ ಮಾಸಿಕ ರೂ.700/- ಗುತ್ತಿಗೆ ಹಣವನ್ನೇ ಪಾವತಿಸಿಕೊಂಡು ಇನ್ನು ಮುಂದೆ ಗುತ್ತಿಗೆ ಅವಧಿ ಮುಗಿಯುವ ತಿಂಗಳಲ್ಲೇ ಕಾನೂನಿನಂತೆ ಗುತ್ತಿಗೆ ಹಣವನ್ನು ನಿಗಧಿಪಡಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

09.ವಿಷಯ:ಸಂಖ್ಯೆ:ಅಸ್ಥಾಸ/(ತೆ)/25/2011-12

ರಾಜ್ಯಾಧ್ಯಕ್ಷರು, ದಲಿತ ಸಂಘರ್ಷ ಸಮಿತಿ (ರಿ), ನಂ.19, ಎ.ಕೆ.(ನ್ಯೂ) ಕಾಲೋನಿ, ಕಾಕ್ಸ್ ಟೌನ್, ಜೀವನಹಳ್ಳಿ, ಬೆಂಗಳೂರು-05 ಇವರಿಗೆ ಸುಭಾಷ್‌ನಗರ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆ ಸಂಖ್ಯೆ:01ನ್ನು ಹಂಚಿಕೆ ಮಾಡಿದ್ದು, ಸದರಿ ಮಳಿಗೆಗೆ ಚದರಡಿ

ಒಂದಕ್ಕೆ ರೂ.15/-ಗಳಂತೆ ನಿಗಧಿಪಡಿಸಿ 100 ಚದರಡಿಗೆ ರೂ.1500/-ಗಳಂತೆ ನಿಗಧಿಪಡಿಸಿ ದಿನಾಂಕ:21-03-2011ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹಕ್ಕೆ ಉತ್ತರವಾಗಿ ಸದರಿ ಸಂಸ್ಥೆಯವರು ಮಾನ್ಯ ಮುಖ್ಯ ಮಂತ್ರಿರವರಿಗೆ ಬಾಡಿಗೆಯನ್ನು ಕಡಿಮೆ ಮಾಡಲು ಕೋರಿದ್ದು, ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ದಿನಾಂಕ:07-04-2011ರಂದು ಪತ್ರ ಬರೆದು ಸದರಿ ಸಂಸ್ಥೆಗೆ ಬಾಡಿಗೆ ಕಡಿಮೆ ನಿಗಧಿಪಡಿಸಿಕೊಡುವಂತೆ ತಿಳಿಸಿರುವ ಮೇರೆಗೆ ತೀರ್ಮಾನಕ್ಕಾಗಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರಾದ ಶ್ರೀ.ಚಂದ್ರಯ್ಯ, ಅಧ್ಯಕ್ಷರು ಹಾಜರಿರುತ್ತಾರೆ. ಸಹಾಯಕ ಕಂದಾಯ ಅಧಿಕಾರಿಯವರು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಬಾಡಿಗೆಯನ್ನು ಕಡಿಮೆ ಮಾಡಿಕೊಡುವಂತೆ ಕೋರಿಕೊಂಡಿರುತ್ತಾರೆ. ಶ್ರೀ.ಪ್ರದೀಪ್ ಕುಮಾರ್, ಕಂದಾಯ ಪರಿವೀಕ್ಷಕರು ತಡವಾಗಿ ಹಾಜರಿದ್ದು ಈಗ ನಿಗಧಿಪಡಿಸಿರುವ ಬಾಡಿಗೆಯನ್ನು ಕಾನೂನಿನಂತೆ ನಿಗಧಿಪಡಿಸಿದ್ದು, ಅದನ್ನೆ ಮುಂದುವರೆಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಮೇಲ್ಮನವಿದಾರರು ತಮ್ಮ ಸೋಸೈಟಿಯು ದುರ್ಬಲವರ್ಗದವರಿಗಾಗಿ ಸೇವೆ ಸಲ್ಲಿಸುತ್ತಿದ್ದು ಕಂದಾಯವನ್ನು ಕಡಿಮೆ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮತ್ತು ಆದೇಶಕ್ಕಾಗಿ ಕಾಯ್ದಿರಿಸಿದೆ.

10.ವಿಷಯ:ಸಂಖ್ಯೆ:ಅಸ್ಥಾಸ/(ಆ)/26/2011-12

ಶ್ರೀ.ವಿ.ಸಂಜಯ್ಯ ನಂ.180, 9ನೇ ಕ್ರಾಸ್, ಇಂದಿರಾನಗರ, 1ನೇ ಹಂತ, ಬೆಂಗಳೂರು ಇಲ್ಲಿ ನಡೆಯುತ್ತಿರುವ ಅಕ್ಷಯ ಸಾಗರ್ ಪಾಸ್ಟ್ ಪುಡ್ ಹೋಟೆಲ್ ನಡೆಸುತ್ತಿದ್ದು, ಸದರಿ ಹೋಟೆಲ್ ಪರವಾನಗಿಯನ್ನು 2007ರಿಂದ ನವೀಕರಿಸಿಕೊಟ್ಟಿರುವುದಿಲ್ಲವೆಂದು ಹಾಗೂ ಪ್ರತಿ ವರ್ಷ ನನ್ನಿಂದ ಪರವಾನಗಿ ಶುಲ್ಕವನ್ನು ಪಾವತಿಸಿಕೊಂಡಿರುತ್ತಾರೆಂದು ತಿಳಿಸಿ

-4-

ದಿನಾಂಕ:19-03-20008ರಂದು ಆರೋಗ್ಯ ವೈದ್ಯಾಧಿಕಾರಿ (ಭಾರತಿ ನಗರ)ವಲಯರವರು ನೀಡಿರುವ ಹಿಂಬರಹದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಹಲವಾರು ವರ್ಷಗಳಿಂದ ರೆಸ್ಟೋರೆಂಟ್ ನಡೆಸುತ್ತಿದ್ದು ಪರವಾನಗಿ ಪಡೆದಿರುತ್ತೇನೆ. ಆದರೆ ಸುಮಾರು 2-3 ವರ್ಷಗಳಿಂದ ಪರವಾನಗಿ ಶುಲ್ಕವನ್ನು ಪ್ರತಿವಾದಿಗಳು ಪಾವತಿಸಿಕೊಳ್ಳುತ್ತಿದ್ದು ಪರವಾನಗಿಯನ್ನು ನವೀಕರಿಸಿಕೊಡುತ್ತಿಲ್ಲವಾದ್ದರಿಂದ ಪರವಾನಗಿಯನ್ನು ನವೀಕರಿಸಿಕೊಡುವಂತೆ ಸಂಬಂಧಪಟ್ಟವರಿಗೆ ಆದೇಶಿಸಿಬೇಕೆಂದು ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಉಪ ಆರೋಗ್ಯಾಧಿಕಾರಿಯವರು ಹಿಂದೆ ಒಬ್ಬರು ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಆದರೆ ಆ ವ್ಯಕ್ತಿಯು ಈಗ ಇರುವುದಿಲ್ಲವಾದ್ದರಿಂದ ಹಾಗೂ ಅವರ ಆಕ್ಷೇಪಣೆ ಏನು ಎಂಬುದು ಸಹ ಸ್ಪಷ್ಟವಾಗಿರುವುದಿಲ್ಲವಾದ್ದರಿಂದ ಮೇಲ್ಮನವಿದಾರರ ಮನವಿಯನ್ನು ಪುರಷ್ಕರಿಸಬಹುದೆಂದು ತಿಳಿಸಿರುತ್ತಾರೆ.

**ನಿರ್ಣಯ**:- ಮೇಲ್ಮನವಿದಾರರ ಮತ್ತು ಪ್ರತಿವಾದಿಗಳ ಹೇಳಿಕೆಯನ್ನು ಆಲಿಸಿದ ನಂತರ ಪ್ರತಿವಾದಿಗಳ ಆಕ್ಷೇಪಣೆ ಏನು ಇಲ್ಲದಿರುವುದರಿಂದ ಹಾಗೂ ಮೇಲ್ಮನವಿದಾರರು ಕಾಲಕಾಲಕ್ಕೆ ಪಾವತಿಸಬೇಕಾದ ಪರವಾನಗಿ ಶುಲ್ಕವನ್ನು ನಗರ ಪಾಲಿಕೆಗೆ ಪಾವತಿಸಿರುವುದನ್ನು ಮನಗಂಡು ನಂ.180, 9ನೇ ಕ್ರಾಸ್, ಇಂದಿರಾನಗರ, 1ನೇ ಹಂತ, ಬೆಂಗಳೂರು ಇಲ್ಲಿ ನಡೆಯುತ್ತಿರುವ ಅಕ್ಷಯ್ ಸಾಗರ್ ಪಾಸ್ಟ್ ಪುಡ್ ಹೋಟೆಲ್‌ಗೆ ಪರವಾನಗಿಯನ್ನು ನವೀಕರಿಸಿಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-10-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಉಪ ಆಯುಕ್ತರು (ಮಾರುಕಟ್ಟೆ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 04 | ಬಿ.ಎಸ್.ಆನಂದ | ಸದಸ್ಯರು | ಆರೋಗ್ಯಾಧಿಕಾರಿಗಳು (ದಕ್ಷಿಣ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸ.ಕಂ.ಅ.((ಮಾರುಕಟ್ಟೆ/ದಕ್ಷಿಣ/ಪೂರ್ವ)/ಮಲ್ಲೇಶ್ವರಂ) |
| 06 | ಬಿ.ಗೋವಿಂದರಾಜು | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪೂರ್ವ) |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-2010ರ ಆದೇಶಗಳಂತೆ 2011-2012ನೇ ಸಾಲಿನ

ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2011ರ ಟಿಪ್ಪಣಿ.

**ಪ್ರಸ್ತಾವನೆ:**-ಶ್ರೀಮತಿ.ಪ್ರೇಮ, ಎಂಬುವವರು ಬಸವೇಶ್ವರನಗರ, 3ನೇ ಹಂತ, 3ನೇ ಬ್ಲಾಕ್, ಸ್ವತ್ತಿನ ಸಂಖ್ಯೆ:28/ಎ ತಳ ಹಾಗೂ ನೆಲಮಹಡಿ ಕಟ್ಟಡದ ಭಾಗವನ್ನು ಶ್ರೀ.ಜಿ.ದಯಾನಂದ ಎಂಬುವವರಿಗೆ ದಿನಾಂಕ:01-12-2005ರಂದು ಬಾರ್ ಮತ್ತು ರೆಸ್ಟೋರೆಂಟ್ ಉದ್ದಿಮೆ ನಡೆಸಲು 3 ವರ್ಷಗಳಿಗೆ ಗುತ್ತಿಗೆಗೆ ನೀಡಿರುವುದು ಕಂಡು ಬರುತ್ತದೆ. ಆದರೆ ಕಛೇರಿ ದಾಖಲೆಗಳ ಪ್ರಕಾರ ಸದರಿ ಸ್ವತ್ತಿನಲ್ಲಿ ಉದ್ದಿಮೆ ನಡೆಸಲು ಶ್ರೀ.ಬಾಬು ಪೂಜಾರಿ ಎಂಬುವವರ ಹೆಸರಿನಲ್ಲಿ 2004-05ನೇ ಸಾಲಿನಲ್ಲಿ ಸಂಖ್ಯೆ:793/04-05ರಲ್ಲಿ ಉದ್ದಿಮೆ ಪರವಾನಗಿ ನೀಡಲಾಗಿರುತ್ತದೆ. ಹಾಗೂ ಪರವಾನಗಿಯನ್ನು ದಿನಾಂಕ:31-03-2009ರವರೆವಿಗೂ ನವೀಕರಿಸಲಾಗಿರುತ್ತದೆ. ಶ್ರೀ.ಬಾಬು ಪೂಜಾರಿರವರು ಸದರಿ ಸ್ಥಳದಲ್ಲಿ ಸದ್ಯಕ್ಕೆ ರೆಸ್ಟೋರೆಂಟ್ ಉದ್ದಿಮೆಯನ್ನು ನಡೆಸುತ್ತಿಲ್ಲದೆ ಶ್ರೀ.ಜಿ.ದಯಾನಂದ ಎಂಬುವವರು ಉದ್ದಿಮೆ ನಡೆಸುತ್ತಿರುತ್ತಾರೆ.

ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ) ವಲಯರವರು ಸದರಿ ಉದ್ದಿಮೆಯನ್ನು ತಪಾಸಣೆ ಮಾಡಿ ಸ್ಥಳದಲ್ಲಿ ಕಂಡುಬಂದ ಕೆಲವು ನ್ಯೂನ್ಯತೆಗಳ ಬಗ್ಗೆ ದಿನಾಂಕ:11-12-2008ರಂದು ತಿಳುವಳಿಕೆ ಪತ್ರ ಜಾರಿ ಮಾಡಿರುವುದು ಕಂಡು ಬರುತ್ತದೆ. ಉದ್ದಿಮೆಯ ವ್ಯವಸ್ಥಾಪಕರು ದಿನಾಂಕ:19-12-2008ರಂದು ಸದರಿ ತಿಳುವಳಿಕೆ ಪತ್ರಕ್ಕೆ ಉತ್ತ ನೀಡಿ ಉದ್ದಿಮೆಯಲ್ಲಿ ಯಾವುದೇ ನ್ಯೂನ್ಯತೆಗಳು ಇರುವುದಿಲ್ಲವೆಂದು ಬಾಬು ಪೂಜಾರಿಯವರ ಹೆಸರನಲ್ಲಿರುವ ಉದ್ದಿಮೆಯ ಪರವಾನಗಿ ಪ್ರಮಾಣ ಪತ್ರದ ನಕಲನ್ನು ಸಲ್ಲಿಸಿ ಬಾಬು ಪೂಜಾರಿಯವರು ಅನಾರೋಗ್ಯದ ನಿಮಿತ್ತ ಊರಿಗೆ ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ಸಮಜಾಯಿಷಿಯು ಸಮಂಜಸವಾಗಿರುವುದಿಲ್ಲವೆಂದು ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ) ವಲಯರವರು ದಿನಾಂಕ:22-12-2008 ಮತ್ತು 26-12-2008ರಂದು ಜ್ಞಾಪನಾ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿ ಕೆ.ಎಂ.ಸಿ.ಕಾಯ್ದೆಯನ್ವಯ ನ್ಯೂನ್ಯತೆಗಳ ಬಗ್ಗೆ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಸದರಿ ತಿಳುವಳಿಕೆ ಪತ್ರಗಳಿಗೆ ನವ್ಯ ಬಾರ್ ಮತ್ತು ರೆಸ್ಟೋರೆಂಟ್‌ನ ವ್ಯವಸ್ಥಾಪಕರು ದಿನಾಂಕ:27-12-2008ರಂದು ಆರೋಗ್ಯ ವೈದ್ಯಾಧಿಕಾರಿಯವರಿಗೆ ಬರೆದಿರುವ ಪತ್ರದಲ್ಲಿ ನೆಲ ಮಾಳಿಗೆಯಲ್ಲಿನ ಉದ್ದಿಮೆಯನ್ನು ತಕ್ಷಣದಿಂದ ನಿಲ್ಲಿಸಿರುವುದಾಗಿ ಬಾಬು ಪೂಜಾರಿಯವರು ಅನಾರೋಗ್ಯ ಕಾರಣ ಊರಿಗೆ ಹೋಗಿರುವುದಾಗಿ ತಿಳಿಸುತ್ತಾ, ಉದ್ದಿಮೆ ನಡೆಸಲು ಶ್ರೀ.ಜಿ.ದಯಾನಂದರವರ

-2-

ಹೆಸರಿಗೆ ಪರವಾನಗಿ ನೀಡಲು ಕೋರಿಕೊಳ್ಳುತ್ತಾ, ತಪಾಸಣಾ ಪುಸ್ತಕ ಕಳೆದುಹೋಗಿರುವುದಾಗಿ ಮತ್ತು ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ.

ಶ್ರೀಮತಿ.ಪ್ರೇಮಕೃಷ್ಣಮೂರ್ತಿರವರು ಪಾಲಿಕೆ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:16124/2009 ಶ್ರೀ.ಜಿ.ದಯಾನಂದ ಎಂಬುವವರು ನಗರ ಪಾಲಿಕೆ ಮತ್ತು ಶ್ರಿಮತಿ.ಪ್ರೇಮರವರ ವಿರುದ್ಧ ಮೂಲಾ ದಾವಾ ಸಂಖ್ಯೆ:1251/2009ನ್ನು ದಾಖಲಿಸಿ ಪ್ರಸ್ತುತ ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನತೆ ಮತ್ತು ಅನುಭವ ಹಾಗೂ ಕಾನೂನು ಬಾಹಿರವಾಗಿ ಖಾಲಿ ಮಾಡಿಸುವ ಪ್ರಯತ್ನ ಅಥವಾ ದಾವಾ ಸ್ವತ್ತಿನ ನೆಲಮಾಳಿಗೆಯನ್ನು ಒಡೆದುಹಾಕಿ ವಾದಿಯನ್ನು ಕಾನೂನು ಬಾಹಿರವಾಗಿ ಹೊರಹಾಕದಂತೆ ಶಾಶ್ವತ ತಡೆಯಾಜ್ಞೆ ಕೋರಿಕೊಂಡಿರುತ್ತಾರೆ.

ಕಟ್ಟಡದ ಮಾಲೀಕರು ಆರೋಗ್ಯಾಧಿಕಾರಿಗಳಿಗೆ ತಕರಾರು ಸಲ್ಲಿಸಿ ಸದರಿ ಸ್ವತ್ತಿನ ಗುತ್ತಿಗೆ ಕರಾರು ಅವಧಿಯು ದಿನಾಂಕ:01-12-2008ಕ್ಕೆ ಅಂತ್ಯಗೊಂಡಿದ್ದು, ಬಾಡಿಗೆದಾರರಾದ ಶ್ರೀ.ಜಿ.ದಯಾನಂದರವರಿಗೆ ಸ್ವತ್ತಿಲ್ಲಿ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇಲ್ಲದೆ ಸ್ವತ್ತಿನ ಸ್ವಾಧೀನತೆಯನ್ನು ತಕ್ಷಣವೇ ಬಿಟ್ಟುಕೊಟ್ಟಿರುವುದಿಲ್ಲವೆಂದು ತಳಿಸುತ್ತಾ, ಅನಧಿಕೃತವಾಗಿ ಮತ್ತು ಕಾನೂನು ಬಾಹಿರವಾಗಿ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುತ್ತಾರೆಂದು ಅನಧಿಕೃತವಾಗಿ ಬಾರ್ ಮತ್ತು ರೆಸ್ಟೋರೆಂಟ್‌ನ್ನು ಕಾನೂನು ಬಾಹಿರವಾಗಿ ಶ್ರೀ.ಜಿ.ದಯಾನಂದರವರು ನ್ಯಾಯಸಮ್ಮತವಾದ ಪರವಾನಗಿ ಇಲ್ಲದೆ ನಡೆಸುತ್ತಿರುವ ಸದರಿ ಉದ್ದಿಮೆಯನ್ನು ತಕ್ಷಣವೇ ಮುಚ್ಚಿಸಲು ಕೋರಿಕೊಂಡಿರುತ್ತಾರೆ.

ಮುಂದುವರೆದಂತೆ ಶ್ರೀ.ಜಿ.ದಯಾನಂದರವರು ಸ್ವತ್ತಿನ ಮಾಲೀಕರಾದ ಶ್ರೀಮತಿ.ಪ್ರೇಮಾರವರ ವಿರುದ್ಧ ಮೂಲಾ ದಾವಾ ಸಂಖ್ಯೆ:7446/2008ನ್ನು ಸಲ್ಲಿಸಿ ವಾದಿಯನ್ನು ದಾವಾ ಸ್ವತ್ತಿನಿಂದ ಕಾನೂನು ಬಾಹಿರವಾಗಿ ಹೊರಹಾಕದಂತೆ ತಡೆಯಾಜ್ಞೆ ಕೋರಲಾಗಿದ್ದು, ದಿನಾಂಕ:11-11-2008ರಂದು ಘನ ನ್ಯಾಯಾಲಯವು ವಾದಿಯವರನ್ನು ಕಾನೂನು ಬಾಹಿರವಾಗಿ ದಾವಾ ಸ್ವತ್ತಿನಿಂದ ಹೊರಹಾಕಬಾರದೆಂದು ಪ್ರತಿವಾದಿ ವಿರುದ್ಧ ಏಕ ಪಕ್ಷೀಯ ಮಧ್ಯಂತರ ಆದೇಶ ನೀಡಿರುವುದು ಕಂಡು ಬರುತ್ತದೆ.

ಸದರಿ ಸ್ವತ್ತಿನಲ್ಲಿ ಉದ್ದಿಮೆ ನಡೆಸಲು ಬಾಬು ಪೂಜಾರಿಯವರಿಗೆ ಯಾವ ಆಧಾರದಮೇಲೆ ಉದ್ದಿಮೆ ಪರವಾನಗಿ ನೀಡಲಾಗಿರುತ್ತದೆಂಬ ಬಗ್ಗೆ ಸ್ಪಷ್ಟೀಕರಣ ಇರುವುದಿಲ್ಲ. ಹಾಗೂ ವಾಹನ ನಿಲುಗಡೆಗೆ ಮಾತ್ರ ಸೀಮಿತವಾಗಿರುವ ನೆಲಮಾಳಿಗೆಯಲ್ಲಿ ಉದ್ದಿಮೆಯನ್ನು ವಿಸ್ತರಿಸಿ ಶ್ರೀ.ದಯಾನಂದ ಎಂಬುವವರು ಪರವಾನಗಿ ಇಲ್ಲದೆ ಅನಧಿಕೃತವಾಗಿ ಉದ್ದಿಮೆ ನಡೆಸುತ್ತಿದ್ದು ಸ್ವತ್ತಿನ ಗುತ್ತಿಗೆ ಅವಧಿಯು ಮುಗಿದ ನಂತರ ಸದರಿ ಉದ್ದಿಮೆ ನಡೆಸಲು ಪರವಾನಗಿಯನ್ನು ತಮ್ಮ ಹೆಸರಿಗೆ

ನೀಡಲು ಕೋರಿಕೊಂಡಿರುವುದು ಕಂಡು ಬರುತ್ತದೆ. ಶ್ರೀ.ಜಿ.ದಯಾನಂದರವರು ನಗರ ಪಾಲಿಕೆ ಹಾಗೂ ಸ್ವತ್ತಿನ ಮಾಲೀಕರ ವಿರುದ್ಧ ಸಲ್ಲಿಸಲಾಗಿರುವ ದಾವೆಯಲ್ಲಿ ಮುಂದಿನ ದಿನಾಂಕದವರೆಗೆ ಘನ ನ್ಯಾಯಾಲಯವು ಯತಾಸ್ಥಿತಿ ಕಾಪಾಡುವಂತೆ ದಾವಾ ಸಂಖ್ಯೆ:1251/2009ರಲ್ಲಿ ನೀಡಿರುವ ಆದೇಶವು ಸ್ವತ್ತಿನಿಂದ ಹೊರ ಹಾಕದಂತೆ ಮಾತ್ರ ಯಾತಾಸ್ಥಿತಿ ಇದ್ದು, ಪರವಾನಗಿ ಇಲ್ಲದೆ ಉದ್ದಿಮೆ ನಡೆಸುವ ಬಗ್ಗೆ ತೆಗೆದುಕೊಳ್ಳುವ ಕ್ರಮಕ್ಕೆ ಯಾವುದೇ ಬಾದಕವಿರುವುದಿಲ್ಲದಿರುವುದು ಕಂಡು ಬರುತ್ತದೆ.

ಮುಂದುವರೆದಂತೆ ಬಾರ್ ವ್ಯವಸ್ಥಾಪಕರಾದ ಶ್ರೀ.ಬಾಬು ಪೂಜರ್ ಎಂಬುವವರು ಪರವಾನಗಿ ಸ್ಥಳದಲ್ಲಿ ರೆಸ್ಟೋರೆಂಟ್ ನಡೆಸಲು 2004-05ನೇ ಸಾಲಿನಲ್ಲಿ 3 ವರ್ಷಗಳವರೆಗೆ ರೆಸ್ಟೋರೆಂಟ್ ಉದ್ದಿಮೆ ಪರವಾನಗಿ ನೀಡಲಾಗಿದ್ದು, ಸದರಿ ಬಾಬು ಪೂಜಾರ್ ಎಂಬುವವರು ಉದ್ದಿಮೆ ಸ್ಥಳದಿಂದ ಕಾರಣಾಂತರದಿಂದ ಬಿಟ್ಟು ಹೋಗಿದ್ದು, ಈಗ ಅವರು ಎಲ್ಲಿ ವಾಸವಾಗಿದ್ದಾರೆಂದು ತಿಳಿಯದ ಕಾರಣ ತಮ್ಮ ಹೆಸರಿಗೆ ಹೊಸದಾಗಿ ರೆಸ್ಟೋರೆಂಟ್ ಉದ್ದಿಮೆ ಪರವಾನಗಿ ನೀಡಲು ಕೋರಿಕೊಳ್ಳುತ್ತಾ, ಕಟ್ಟಡದ ಮಾಲೀಕರು ಕಾನೂನು ಬಾಹಿರವಾಗಿ ತಮ್ಮನ್ನು ಹೊರಹಾಕಲು ಯತ್ನಿಸುತ್ತಿರುವ ವಿರುದ್ಧ ಘನ ನ್ಯಾಯಾಲಯದಲ್ಲಿ ಮೂಲ ದಾವಾ ಸಂಖ್ಯೆ:7446/2008ನ್ನು ಸಲ್ಲಿಸಿ ಮಧ್ಯಂತರ ತಡೆಯಾಜ್ಞೆ ಪಡೆದಿರುವುದಾಗಿ ತಿಳಿಸುತ್ತಾ, ರೆಸ್ಟೋರೆಂಟ್ ಪರವಾನಗಿ ಅವಧಿ ಮುಕ್ತಾಯವಾಗಿರುವುದರಿಂದ ಸದರಿ ರೆಸ್ಟೋರೆಂಟ್ ಉದ್ದಿಮೆಯನ್ನು ಸ್ಥಗಿತಗೊಳಿಸಿರುವುದಾಗಿ ಹಾಗೂ ಅಬಕಾರಿ ಇಲಾಖೆಯಿಂದ ಬಾರ್ ಪರವಾನಗಿ ನೀಡಿರುವ ಮೇರೆಗೆ ಸದರಿ ಸ್ಥಳದಲ್ಲಿ ಬಾರ್ ವ್ಯಾಪಾರ ಮಾತ್ರ ಮುಂದುವರೆಸುತ್ತಿದ್ದು, ರೆಸ್ಟೋರೆಂಟ್ ಪರವಾನಗಿ ಇಲ್ಲದೆ ತಮಗೆ ಅಪಾರ ನಷ್ಟವುಂಟಾಗುತ್ತಿರುವುದಾಗಿ ತಿಳಿಸುತ್ತಾ, ಆದಷ್ಟು ಬೇಗೆ ರೆಸ್ಟೋರೆಂಟ್ ಪರವಾನಗಿ ನೀಡಲು ಕೋರಿಕೊಂಡಿರುತ್ತಾರೆ. ಈ ಮೊದಲು ದಿನಾಂಕ:08-04-2099ರಂದು ಶ್ರೀ.ಜಿ.ದಯಾನಂದ ಎಂಬುವವರು ಕೆಲವು ದಾಖಲೆಗಳೊಂದಿಗೆ ಸಲ್ಲಿಸಿರುವ ಮನವಿಯಲ್ಲಿ ಮಾಲೀಕರಿಗೂ ಹಾಗೂ ತಮ್ಮ ನಡುವೆ ಘನ ನ್ಯಾಯಾಲಯದ ಮುಂದೆ ವ್ಯಾಜ್ಯಗಳು ನಡೆಯುತ್ತಿದ್ದು, ದಿನಾಂಕ:01-12-2005ರಂದು ಮಾಡಿಕೊಟ್ಟಿರುವ ಭೋಗ್ಯ ಪತ್ರದ 17ನೇ ಪಂಕ್ತಿಯಲ್ಲಿ ನಗರ ಪಾಲಿಕೆ ಅಥವಾ ಅಬಕಾರಿ ಇಲಾಖೆಯಿಂದ ಪರವಾನಗಿ ಪಡೆಯಲು ತಮ್ಮ ನಿರಾಕ್ಷೇಪಣೆ ನಿಡಿರುತ್ತಾರೆಂದು, ಇದಲ್ಲದೆ ಕಟ್ಟಡದ ಮಾಲೀಕರು ಪ್ರತ್ಯೇಕವಾಗಿ ಬೇರೆ ಯಾವುದೇ ನಿರಾಕ್ಷೇಪಣೆ ಪತ್ರ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಕಡತದ ಪುಟ 31ರಲ್ಲಿ ಲಗತ್ತಿಸಿರುವ ದಾಖಲೆಯಂತೆ ಮನವಿದಾರರು ಸದರಿ ಉದ್ದಿಮೆ ನಡೆಸಲು ಕಟ್ಟಡದ ಮಾಲೀಕರು 3 ವರ್ಷಗಳ ಅವಧಿಗೆ ಸದರಿ ಕಟ್ಟಡವನ್ನು ಭೋಗ್ಯಕ್ಕೆ ನೀಡಲಾಗಿದ್ದು, ಸದರಿ ಭೋಗ್ಯದ ಅವಧಿಯು ದಿನಾಂಕ:01-12-2008ಕ್ಕೆ ಅಂತ್ಯಗೊಂಡಿರುತ್ತದೆ. ಮತ್ತು ಭೋಗ್ಯದ ನವೀಕರಣದ ಬಗ್ಗೆ ಕಡತದಲ್ಲಿ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ. ಈ ಮಧ್ಯ ಮನವಿದಾರರಾದ ಶ್ರೀ.ಜಿ.ದಯಾನಂದ ಎಂಬುವವರು ಶಫಥ ಪತ್ರ ಸಲ್ಲಿಸಿ ದಿನಾಂಕ:31-01-2009ರಂದು ಸಂಖ್ಯೆ:ಉಆ(ಆ)ಪಿಆರ್/1302/2008-09ರಲ್ಲಿ ನಗರ ಪಾಲಿಕೆ ಹೊರಡಿಸಿರುವ

-3-

ಸುತ್ತೋಲೆಯಲ್ಲಿ ವಿಧಿಸಿರುವ ಷರತ್ತುಗಳನ್ವಯ ಪಾಲಿಕೆಯು ವಿಧಿಸಬಹುದಾದ ಷರತ್ತಿಗೊಳಪಡಿಸಿ ರೆಸ್ಟೋರೆಂಟ್ ಉದ್ದಿಮೆ ಪರವಾನಗಿ ನೀಡಲು ಕೋರಿಕೊಂಡಿರುವುದು ಕಂಡು ಬರುತ್ತದೆ. ಶ್ರೀ.ದಯಾನಂದರವರ ಹತ್ತಿರ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರೆಂದು ತಿಳಿಸಿ ಶ್ರೀ.ಬಾಬು ಪೂಜಾರ್‌ರವರು ದಿನಾಂಕ:19-04-2009ರಂದು ನೀಡಿರುವ ತಮ್ಮ ಅರ್ಜಿಯಲ್ಲಿ ತಮಗೆ ಕೆಲಸ ಮಾಡಲು ಆರೋಗ್ಯ ಸರಿಯಿಲ್ಲದ ಕಾರಣದ ರೆಸ್ಟೋರೆಂಟ್ ಪರವಾನಗಿಯನ್ನು ಶ್ರೀ.ಜಿ.ದಯಾನಂದ ಎಂಬುವವರ ಹೆಸರಿಗೆ ವರ್ಗಾಯಿಸಬೇಕೆಂದು ಕೋರಿರುತ್ತಾರೆ. ಮತ್ತು ದಿನಾಂಕ:31-01-2009ರಂದು ಹೊರಡಿಸಿರುವ ಸುತ್ತೋಲೆ ಮೇರೆಗೆ ಮನವಿದಾರರ ಕೋರಿಕೆಯನ್ನು ಪರಗಣಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ)ರವರು ಕ್ರಮವಹಿಸಬೇಕಾಗಿರುತ್ತದೆ. ವಿವಿಧ ನ್ಯಾಯಾಲಯಗಳ ಆದೇಶಗಳನ್ವಯ ಪರವಾನಗಿ ಇಲ್ಲದೆ ರೆಸ್ಟೋರೆಂಟ್ ನಡೆಸುವುದು ಕಾನೂನು ಬಾಹಿರ ಎಂದು ಆದೇಶ ಮಾಡಿರುವುದು ಸಮಂಜಷವಾಗಿರುತ್ತದೆಂದು ತಿಳಿಸುತ್ತಾ, ವ್ಯವಸ್ಥಾಪಕರ ಹೆಸರಿನಲ್ಲಿರುವ ಪರವಾನಗಿಯನ್ನು ರದ್ದು ಪಡಿಸಿ ಶ್ರೀ.ಜಿ.ದಯಾನಂದರವರ ಹೆಸರಿನಲ್ಲಿ ಪರವಾನಗಿ ನೀಡುವ ಬಗ್ಗೆ ಇನ್ನೊಂದುಗ ಪ್ರಕರಣದಲ್ಲಿ ದಿನಾಂಕ:14-05-2009ರಂದು ಸಂಖ್ಯೆ:ಬಿಬಿಎಂಪಿ/ಎಲ್‌ಸಿ/ಆರ್‌ಆರ್/124/2009-10ರಲ್ಲಿ ನೀಡಿರುವು ಅಭಿಪ್ರಾಯವನ್ನು ಅಳವಡಿಸಿಕೊಂಡು ಷರತ್ತಿಗೊಳಪಡಿಸಿ ಶ್ರೀ.ಜಿ.ದಯಾನಂದರವರ ಹೆಸರಿನಲ್ಲಿ ಉದ್ದಿಮೆ ಪರವಾನಗಿಯನ್ನು ದಿನಾಂಕ:27-05-2009ರಂದು ಹೊಸದಾಗಿ ವಿತರಿಸಲಾಗಿರುತ್ತದೆ.

ಆದರೆ ದಿನಾಂಕ:31-01-2009ರಂದು ಹೊರಡಿಸಿರುವ ಸುತ್ತೋಲೆಗೆ ಪ್ರತಿಯಾಗಿ ದಿನಾಂಕ:25-02-2009ರಂದು ಮತ್ತೊಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆಯನ್ವಯ ಹೊಸದಾಗಿ ಪರವಾನಗಿ ಪಡೆಯಬೇಕಾದಲ್ಲಿ ನಿಗಧಿತ ಅರ್ಜಿನಮೂನೆಯಲ್ಲಿ ಮಾಲೀಕರ ನಿರಾಕ್ಷೇಪಣೆ, ಮಾಲೀಕತ್ವ ದೃಢೀಕರಣ ಬಗ್ಗೆ ಖಾತಾ ದೃಢೀಕರಣ ಪತ್ರ, ಕಂದಾಯ ರಶೀದಿ ಅಥವಾ ಕ್ರಮ ಪತ್ರ ಹಾಗೂ ಅಕ್ಕಪಕ್ಕದ ನಿವಾಸಿಗಳ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ.

ಶ್ರೀ.ದಯಾನಂದ ಎಂಬುವವರು ಪರವಾನಗಿ ಪಡೆಯದೆ ತಳಮಾಳಿಗೆಯಲ್ಲಿ ನಡೆಸುತ್ತಿರುವ ನವ್ಯ ಬಾರ್ ಮತ್ತು ರೆಸ್ಟೋರೆಂಟ್ ಉದ್ದಿಮೆ ಬಗ್ಗೆ ಮೂಲಾ ದಾವಾ ಸಂಖ್ಯೆ:1251/2009ರಲ್ಲಿ ಘನ ನ್ಯಾಯಾಲಯವು ನೀಡಿರುವ ಯಥಾಸ್ಥಿತಿ ಆದೇಶವು ನಗರ ಪಾಲಿಕೆಯು ಕೆ.ಎಂ.ಸಿ.ಕಾಯ್ದೆ ಕಲಂ 343ರಡಿಯಲ್ಲಿ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಯಾವುದೇ ಬಾಧಕವಿರುವುದಿಲ್ಲವೆಂದು ಕಾನೂನು ಅಭಿಪ್ರಾಯ ನೀಡಲಾಗಿರುವ ಮೇರೆಗೆ ಹಾಗೂ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:11133/2009ರಲ್ಲಿ ದಿನಾಂಕ:24-04-2009ರಂದು ನೀಡಿರುವ ಆದೇಶದನ್ವಯ ಪೋಲಿಸ್ ಇಲಾಖೆಯ ನೆರವಿನೊಂದಿಗೆ ಇಲಾಖಾ ವತಿಯಿಂದ ಸದರಿ ಉದ್ದಿಮೆಯನ್ನು ಮುಚ್ಚಿಸಿರುವುದು ಕಂಡು ಬರುತ್ತದೆ.

ಶ್ರೀ.ಜಿ.ದಯಾನಂದ್‌ರವರು ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಎಂಬ ಹೆಸರಿನಲ್ಲಿ ಸ್ವತ್ತಿನ ಸಂಖ್ಯೆ:28-ಎ, 2ನೇ ಹಂತ, 3ನೇ ಬ್ಲಾಕ್, 1ನೇ ಮುಖ್ಯ ರಸ್ತೆ, ಬಸವೇಶ್ವರನಗರ, ವಾರ್ಡ್-19ರಲ್ಲಿ ಹೋಟೆಲ್ ಉದ್ದಿಮೆಯನ್ನು ನಡೆಸುತ್ತಿದ್ದು, ಸದರಿ ಸ್ವತ್ತಿನ ಗುತ್ತಿಗೆಯನ್ನು ನೀಡಿರುವ ಸ್ವತ್ತಿನ ಮಾಲೀಕರಾದ ಶ್ರೀಮತಿ.ಪ್ರೇಮಾರವರು ತಕರಾರು ತೆಗೆದ ಪ್ರಯುಕ್ತ ಶ್ರೀ.ಜಿ.ದಯಾನಂದ್‌ರವರು ನ್ಯಾಯಾಲಯದ ಮೊರೆ ಹೋಗಿ ಘನ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ:ಓ.ಎಸ್.ಸಂಖ್ಯೆ:7446/2008ರಲ್ಲಿ ತಡೆಯಾಜ್ಞೆ/ನಿರ್ಬಂಧಿಕ ಆಜ್ಞೆಯನ್ನು ಪಡೆದುಕೊಂಡಿರುತಾರೆ. ಸದರಿ ಆಜ್ಞೆಯು ಚಾಲ್ತಿಯಲ್ಲಿರುತ್ತದೆ.

ದಿನಾಂಕ:31-03-2009ರಲ್ಲಿ ಸದರಿ ಹೋಟೆಲ್ ಉದ್ದಿಮೆಯ ನಗರ ಪಾಲಿಕೆ ಆರೋಗ್ಯ ಪರವಾನಗಿ ಅವಧಿ ಮುಗಿದಿದ್ದು, ಮತ್ತು ಸ್ವತ್ತಿನ ಮಾಲೀಕರಾದ ಶ್ರೀಮತಿ.ಪ್ರೇಮಾರವರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:11133/2009ರಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಆದೇಶದಲ್ಲಿ ನ್ಯಾಯಾಲಯವು ದಿನಾಂಕ:24-04-2009ರಂದು ಆದೇಶ ಮಾಡಿ ಪರವಾನಗಿ ಇಲ್ಲದೆ ಹೋಟೆಲ್ ಉದ್ದಿಮೆಯನ್ನು ನಡೆಸುತ್ತಿರುವುದನ್ನು ಮುಚ್ಚಿಸಬೇಕೆಂದು ಆದೇಶಿಸಿದ್ದು, ಅದರಂತೆ ನಗರ ಪಾಲಿಕೆ ಪಶ್ಚಿಮ ವಲಯದ ಆರೋಗ್ಯ ವೈದ್ಯಾಧಿಕಾರಿ(ರಾಜಾಜಿನಗರ)ವಲಯರವರು ದಿನಾಂಕ:14-05-2009ರಂದು ಸದರಿ ರೆಸ್ಟೋರೆಂಟ್ ಉದ್ದಿಮೆಯನ್ನು ಮುಚ್ಚಿಸಿರುತ್ತಾರೆ. ಉದ್ದಿಮೆ ಮುಚ್ಚಿರುವುದು ಕಾನೂನು ರೀತ್ಯ ಇರುತ್ತದೆ.

ದಿನಾಂಕ:31-12-2008ರಂದು ಶ್ರೀ.ಜಿ.ದಯಾನಂದ್‌ರವರು ಸದರಿ ರೆಸ್ಟೋರೆಂಟ್ ಪರವಾನಗಿಯನ್ನು ತಮ್ಮ ಹೆಸರಿಗೆ ಕೊಡಬೇಕೆಂದು ಆರೋಗ್ಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ಪರವಾನಗಿಗೆ ಸಂಬಂಧಪಟ್ಟಂತೆ ಪಾಲಿಕೆಗ ಸಲ್ಲಿಸಬೇಕಾದಂತಹ ಶುಲ್ಕವನ್ನು ಪಾವತಿಸಿರುತ್ತಾರೆ. ಹಾಗೂ ದಿನಾಂಕ:19-04-2009ರಲ್ಲಿ ಶ್ರೀ.ಬಾಬುಪೂಜಾರ್‌ರವರು ಅರ್ಜಿ ನೀಡಿ ತಮ್ಮ ಹೆಸರಿನಲ್ಲಿರುವ ರೆಸೋಟರೆಂಟ್ ಪರವಾನಗಿಯನ್ನು ಶ್ರೀ.ಜಿ.ದಯಾನಂದರವರ ಹೆಸರಿಗೆ ವರ್ಗಾಯಿಸಬೇಕೆಂದು ಹಾಗೂ ಶ್ರೀ.ದಯಾನಂದರವರ ಹತ್ತಿರ ಮ್ಯಾನೇಜರ್ ಆಗಿ ಕೆಲಸ ಮಾಡಲು ಆರೋಗ್ಯ ಸರಿ ಇಲ್ಲದ ಕಾರಣವನ್ನು ಸಹ ನೀಡಿ, ಲೈಸನ್ಸ್ ವರ್ಗಾವಣೆ ಮಾಡಲು ಕೋರಿರುತ್ತಾರೆ.

ಉಪ ಆಯುಕ್ತರು (ಆರೋಗ್ಯ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಸುತ್ತೋಲೆ ಸಂಖ್ಯೆ:ಡಿಸಿ(ಹೆಚ್)ಪಿಆರ್/1302/08-09, ದಿನಾಂಕ:31-01-2009ರಲ್ಲಿ ಹೊಸ ಟ್ರೇಡ್ ಲೈಸೆನ್ಸ್ ನೀಡುವ ಬಗ್ಗೆ ಹೊರಡಿಸಿರುವ ಮಾರ್ಗ ಸೂಚಿಗಳ ರೀತ್ಯಾ, ಶ್ರೀ.ಜಿ.ದಯಾನಂದ್‌ರವರು ಸಲ್ಲಿಸಿರುವ ಅರ್ಜಿ ದಿನಾಂಕ:31-12-2008ರಲ್ಲಿ



ನೀಡಿರುವ ಹಾಗೂ ಶುಲ್ಕ ಪಾವತಿ ಜೊತೆ ಸಲ್ಲಿಸಿರುವ ಅರ್ಜಿ ಮೆ:ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ವ್ಯವಸ್ಥಾಪಕರು ಸಲ್ಲಿಸಿರುವ ದಿನಾಂಕ:19-04-2009ರ ಅರ್ಜಿಯನ್ನು ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ)ವಲಯರವರು ಪರಿಗಣಿಸಿ ಟ್ರೇಡ್ ಲೈಸೆನ್ಸ್ ನೀಡಲು ಕ್ರಮ ವಹಿಸಬೇಕಾಗಿತ್ತು. ಆದರೆ ಇವರ ಅರ್ಜಿ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲ. ಪರವಾನಗಿ ಇಲ್ಲದೇ ಇದ್ದುದರಿಂದ ಶ್ರೀ.ಜಿ.ದಯಾನಂದರವರು ರೆಸ್ಟೋರೆಂಟ್ ಮುಚ್ಚಿರುವುದಾಗಿ ದಿನಾಂಕ:16-04-2009ರಂದು ಅರ್ಜಿ ನೀಡಿದ್ದು, ತದ ನಂತರ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ರೀತ್ಯಾ ದಿನಾಂಕ:14-05-2009ರಂದು ಸದರಿ ರೆಸ್ಟೋರೆಂಟ್‌ನ್ನು ಸೀಜ್ ಮಾಡಲಾಗಿರುತ್ತದೆ.

ಕಟ್ಟಡದ ಮಾಲೀಕರಾದ ಶ್ರೀಮತಿ.ಪ್ರೇಮಾರವರು ದಿನಾಂಕ:06-05-2009 ಹಾಗೂ 25-05-2009ರಂದು ಅಹವಾಲನನು ಸಲ್ಲಿಸಿ ರಿಟ್ ಪಿಟಿಷನ್ ಸಂಖ್ಯೆ:11133/2009 ದಿನಾಂಕ:24-04-2009ರಂತೆ ಹಾಗೂ ಓ.ಎಸ್.ಸಂಖ್ಯೆ:1251/2009ರಂತೆ ಕ್ರಮ ಜರುಗಿಸಲು ಕೋರಿ ಯಾವುದೇ ಕಾರಣಕ್ಕೆ ಪರವಾನಗಿಯನ್ನು ನೀಡದಂತೆ ಒತ್ತಾಯಿಸಿರುತ್ತಾರೆ. ರಿಟ್ ಪಿಟಿಷನ್ ಸಂಖ್ಯೆ:11133/2009ರ ರೀತ್ಯಾ ರೆಸ್ಟೋರೆಂಟ್‌ನ್ನು ದಿನಾಂಕ:14-05-2009ರಂದು ಸೀಜ್ ಮಾಡಿರುವುದು ಕ್ರಮ ಬದ್ದವಾಗಿರುತ್ತದೆ. ಆದರೆ ಓ.ಎಸ್. ಸಂಖ್ಯೆ:1251/2009ರಲ್ಲಿ ಪರವಾನಗಿಯನ್ನು ನೀಡುವ ಬಗ್ಗೆ ಯಾವುದೇ ರೀತಿಯ ನಿರ್ಭಂದಕಾಜ್ಞೆ ಇರುವುದಿಲ್ಲ. ಆದರೆ ಓ.ಎಸ್. ಸಂಖ್ಯೆ:7446/2008ರಲ್ಲಿ ದಿನಾಂಕ:04-03-2009ರಂತೆ ಕಟ್ಟಡ ಮಾಲೀಕರ ವಿರುದ್ಧ ನ್ಯಾಯಾಲಯದ ನಿರ್ಭಂದಕಾಜ್ಞೆ ಜಾರಿಯಲ್ಲಿರುತ್ತದೆ. ಈ ಸಿವಿಲ್ ದಾವೆ ಇನ್ನೂ ಇತ್ಯರ್ಥವಾಗಿರುವುದಿಲ್ಲ ಹಾಗೂ ವಿಚಾರಣೆ ಹಂತದಲ್ಲಿರುತ್ತದೆ. ಪರವಾನಗಿ ಇಲ್ಲದೇ ರೆಸ್ಟೋರೆಂಟ್ ನಡೆಸುವುದು ಕಾನೂನು ಬಾಹಿರ ಎಂದು ನ್ಯಾಯಾಲಯಗಳಲ್ಲಿ ಆದೇಶ ಮಾಡಿರುವುದು ಸಮಂಜಸವಾಗಿದೆ. ಆದರೆ ವ್ಯವಸ್ಥಾಪಕರ ಹೆಸರಿನಲ್ಲಿರುವ ಪರವಾನಗಿಯನ್ನು ರದ್ದುಪಡಿಸಿ ಶ್ರೀ.ಜಿ.ದಯಾನಂದರವರ ಹೆಸರಿಗೆ ಟ್ರೇಡ್ ಲೈಸೆನ್ಸ್ ನೀಡುವುದನ್ನು ಪರಿಶೀಲಿಸಿದಾಗ ಮಾಲೀಕರು ಮತ್ತು ಬಾಡಿಗೆದಾರರ ಮಧ್ಯೆ ನ್ಯಾಯಾಲಯದಲ್ಲಿ ದಾವೆ ಇದ್ದು ಇಲಾಖೆ ವತಿಯಿಂದ ಪರವಾನಗಿ ನವೀಕರಿಸುವ ಕುರಿತು ಕಾನೂನು ಕೋಶದ ಮುಖ್ಯಸ್ಥರು ಬೇರೆ ಪ್ರಕರಣದಲ್ಲಿ ನೀಡಿರುವ ಕಾನೂನು ಅಭಿಪ್ರಾಯವನ್ನು ಈ ಪ್ರಕರಣಕ್ಕೆ ಅಳವಡಿಸಿಕೊಂಡು ಪರವಾನಗಿ ನವೀಕರಿಸಲಾಗಿರುತ್ತದೆ.

ಹೊಸದಾಗಿ ಪರವಾನಗಿಯನ್ನು ನೀಡಿರುವುದನ್ನು ಪ್ರಶ್ನಿಸಿ ರಿಟ್ ಅಪೀಲು ಸಂಖ್ಯೆ:2570/2009ನ್ನು ದಾಖಲಿಸಿರುವುದು ಕಂಡು ಬರುತ್ತದೆ. ಸದರಿ ರಿಟ್ ಅಪೀಲಿನಲ್ಲಿ ಪರವಾನಗಿದಾರರು ಯಾವುದಾದರೂ ಉಲ್ಲಂಘನೆಗಳನ್ನು ಮಾಡಿರುವುದಾಗಿ ಶಾಸನಬದ್ಧ ಪ್ರಾಧಿಕಾರದವರು ವರದಿ ಮಾಡಿದಲ್ಲಿ ಪರವಾನಗಿಯನ್ನು ರದ್ದು ಪಡಿಸಿರುವ ಷರತ್ತಿಗೊಳಪಡಿಸಿ ದಿನಾಂಕ:04-11-2009ರಂದು ಮಧ್ಯಂತರ ಆದೇವಿತ್ತಿರುತ್ತದೆ. ಈ ಬಗ್ಗೆ ಪರವಾನಗಿದಾರರು ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದಾಗಿ ಅಬಕಾರಿ ನಿರೀಕ್ಷಕರು ದಿನಾಂಕ:18-12-2009 ಮತ್ತು 06-01-2010ರಂದು ವರದಿ ನೀಡಿರುತ್ತಾರೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಪರವಾನಗಿಯನ್ನು ರದ್ದು ಪಡಿಸದೆ ಅವರಿಗೆ ನೋಟೀಸ್ ಜಾರಿ ಮಾಡಿ ಉಲ್ಲಂಘನೆಗಳನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಿರುವುದು ಕಂಡು ಬರುತ್ತದೆ. ನಂತರ ರಿಟ್ ಅಪೀಲು ಸಂಖ್ಯೆ:2570/2009ರಲ್ಲಿ ದಿನಾಂಕ:25-01-2011ರಂದು ಅಂತಿಮ ಆದೇಶ ನೀಡುತ್ತಾ, ಮಧ್ಯಂತರ ಆದೇಶವನ್ನು ವಜಾಗೊಳಿಸುತ್ತಾ, ಈ ಬಗ್ಗೆ ಆಯುಕ್ತರೇ ಕ್ರಮ ಕೈಗೊಳ್ಳುವ ಅಧಿಕಾರವನ್ನು ನೀಡಿರುವುದು ಕಡತದಲ್ಲಿ ಲಗತ್ತಿಸಿರುವ ನ್ಯಾಯಾಲಯದ ಆದೇಶದ ಪ್ರತಿಯಿಂದ ಕಂಡು ಬರುತ್ತದೆ.

ಅರ್ಜಿದಾರರಾದ ಶ್ರೀಮತಿ.ಪ್ರೇಮಾ ಕೃಷ್ಣಮೂರ್ತಿಯವರು ಅಧ್ಯಕ್ಷರು, ಸಾರ್ವಜನಿಕರ ಆರೋಗ್ಯ ಸ್ಥಾಯಿಸಮಿತಿ ಮತ್ತು ಅಪೀಲು ಸ್ಥಾಯಿ ಸಮಿತಿಯವರಿಗೆ ಅರ್ಜಿ ಸಲ್ಲಿಸಿ ಸದರಿ ಉದ್ದಿಮೆಯ ಆರೋಗ್ಯ ಪರವಾನಗಿಯನ್ನು ನವೀಕರಿಸದಂತೆ ಕೋರಕೊಂಡಿರುವುದು ಕಂಡು ಬರುತ್ತದೆ. ಸದರಿಯವರ ಮನವಿಯ ಮೇರೆಗೆ ಸದರಿ ಉದ್ದಿಮೆಯ ಪರವಾನಗಿಯನ್ನು ನವೀಕರಿಸದಂತೆ 2 ಸಮಿತಿಯವರು ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದಿರುತ್ತಾರೆ.

ಈ ಬಗ್ಗೆ ಆರೋಗ್ಯಾಧಿಕಾರಿ ಪಶ್ಚಿಮರವರು ಉದ್ದಿಮೆಯ ಪರವಾನಗಿಯನ್ನು ನವೀಕರಿಸದಂತೆ ಎಲ್ಲಾ ಕಡೆಗೂ ಪತ್ರ ಬರೆಯಲಾಗಿರುತ್ತದೆ ಹಾಗೂ ಇದುವರೆವಿಗೂ ಸದರಿ ಉದ್ದಿಮೆಯ ಪರವಾನಗಿ ನವೀಕರಣದ ಬಗ್ಗೆ 3 ನವೀಕರಣದ ಘಟಕಗಳಿಂದಾಗಲೀ (ಎಫ್‌ಕೆಸಿಸಿಐ ಶೇಷಾದ್ರಿಪುರಂ) ಈ ಕಛೇರಿಗೆ ಪತ್ರ ಬಂದಿರುವುದಿಲ್ಲವೆಂದು ದಿನಾಂಕ:02-04-2011ರಂದು ಆರೋಗ್ಯ ಸ್ಥಾಯಿ ಸಮಿತಿಗೆ ತಿಳಿಸಿರುವುದನ್ನು ನೋಡಬಹುದಾಗಿರುತ್ತದೆ. ಹಾಗೂ ಅಪೀಲು ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯಲ್ಲಿ ಸದರಿ ಮೇಲ್ಮನವಿ ತೀರ್ಮಾನವಾಗುವವರೆವಿಗೂ ಉದ್ದಿಮೆಯ ಪರವಾನಗಿಯನ್ನು ನವೀಕರಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ಅಂದು ರೆಕಾರ್ಡ್ ಮಾಡಿರುವುದನ್ನು ಕಡತದಲ್ಲಿ ನೋಡಬಹುದಾಗಿರುತ್ತದೆ.

ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯು ಪರವಾನಗಿ ಇಲ್ಲದೆ ನಡೆಯುತ್ತಿದೆ ಹಾಗೂ ತುಂಬಾ ಗಲೀಜಾಗಿರುತ್ತದೆ, ಅಲ್ಲದೆ ತಳಮಹಡಿಯಲ್ಲೂ ರಾತ್ರಿ 11-00ಗಂಟೆಯವರೆಗೆ ರೆಸ್ಟೋರೆಂಟ್ ನಡೆಯುತ್ತಿರುತ್ತದೆಂದು ಶ್ರೀ.ಎಂ.ರಮೇಶ್ ಎಂಬುವವರು ದಿನಾಂಕ:20-06-2011ರಂದು ದೂರನ್ನು ಸಮಿತಿಗೆ ಸಲ್ಲಿಸಿರುತ್ತಾರೆ. ಸದರಿಯವರ ದೂರಿನನ್ವಯ ದಿನಾಂಕ:02-07-2011ರಂದು ತಪಾಸಣಾ ಕಾರ್ಯವನ್ನು ಹಮ್ಮಿಕೊಂಡು ಸಂಬಂಧಪಟ್ಟ ಅಧಿಕಾರಿಯವರಿಗೆ ತಪಾಸಣಾ ತಿಳುವಳಿಕೆ ಪತ್ರವನ್ನು ನೀಡಲಾಗಿತ್ತು. ಸದರಿಯವರು ಸಮಿತಿಗೆ ವರದಿ ನೀಡುತ್ತಾ, ಸದರಿ ಉದ್ದಿಮೆಯ ಪರವಾನಗಿ ನವೀಕರಣಗೊಂಡಿರುತ್ತದೆಂದು ಪರವಾನಗಿ ನವೀಕರಣಗೊಂಡಿರುವ ಬಗ್ಗೆ ಜೆರಾಕ್ಸ್ ಪ್ರತಿಯನ್ನು ಸಲ್ಲಸುತ್ತಾ, ನವ್ಯ ಬಾರ್

-5-

ಅಂಡ್ ರೆಸ್ಟೋರೆಂಟ್‌ರವರ ನ್ಯೂನ್ಯತೆಗಳ ಬಗ್ಗೆ ತಿಳುವಳಿಕೆ ಪತ್ರ ನೀಡಿರುತ್ತಾರೆ. ಸಮಿತಿಯ ತಪಾಸಣಾ ನೋಟೀಸ್‌ನ್ನು ಅವರಿಗೆ ನೀಡಿ ತಪಾಸಣೆಗೆ ಬರುವುದನ್ನು ಮೊದಲೇ ತಿಳಿಸಿ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ರವರಿಗೆ ಸಹಕರಿಸುತ್ತಿರುವುದು ಕಂಡು ಬರುತ್ತದೆ. ಆದರೂ ಸಹ ನೆಲ ಮಾಳಿಗೆಯಲ್ಲಿ ಉದ್ದಿಮೆ ಕಾರ್ಯಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಸಮಿತಿಯು ಗಮನಿಸಿರುತ್ತದೆ. ಡೈನಿಂಗ್ ಟೇಬಲ್ ಜೋಡಿಸಿರುವುದು ಹಾಗೆ ಇರುತ್ತದೆ. ಮೊದಲೇ ಅವರಿಗೆ ತಿಳಿಸಿರುವುದರಿಂದ ಸಮಿತಿಯ ತಪಾಸಣೆ ಮಾಡುವ ವೇಳೆಗೆ ಆದಷ್ಟು ಸ್ವಚ್ಛವಾಗಿ ಇಟ್ಟು ನೆಲ ಮಾಳಿಗೆಯನ್ನು ಖಾಲಿ ಮಾಡಲು ಹವಣಿಸಿರುವುದು ಸ್ಪಷ್ಟವಾಗಿರುತ್ತದೆ.

ದಿನಾಂಕ:24-04-2009ರಲ್ಲಿ ರಿಟ್ ಪಿಟಿಷನ್ ಸಂಖ್ಯೆ:11133/2009ರಲ್ಲಿ ನ್ಯಾಯಾಲಯವು ನೀಡಿದ ಆದೇಶದ ಮೇಲೆ ಆಯುಕ್ತರು ಸದರಿ ಉದ್ದಿಮೆಯನ್ನು ಮುಚ್ಚುವಂತೆ ದಿನಾಂಕ:7-5-2009ರಂದು ಆದೇಶಿಸಿರುವ ಮೇರೆಗೆ ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ)ವಲಯರವರು ದಿನಾಂಕ:14-05-2009ರಂದು ಮಧ್ಯಾಹ್ನ 3-30ಗಂಟೆಗೆ ಪೋಲಿಸ್ ಇಲಾಖೆಯ ಸಹಾಯ ಪಡೆದು ಬೀಗ ಹಾಕಿರುತ್ತಾರೆ. ಆದರೆ ಜಂಟಿ ಆಯುಕ್ತರು ಯಾವುದೇ ಆದೇಶವನ್ನು ಪಡೆಯದೆ ಹೊಸದಾಗಿ ಉದ್ದಿಮೆ ಪರವಾನಗಿಯನ್ನು ನೀಡಿರುವುದರಿಂದ ಉದ್ದಿಮೆದಾರರು ಬೀಗ ಹಾಕಿರುವುದನ್ನು ತೆರವುಗೊಳಿಸಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಹೊಸದಾಗಿ ಪರವಾನಗಿ ಮಾಡಿರುವುದೇ ಕಾನೂನು ಬಾಹಿರವಾಗಿರುತ್ತದೆ.

ಇನ್ನು ನವೀಕರಿಸಿರುವ ಬಗ್ಗೆ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗೂ ಘನ ನ್ಯಾಯಾಲಯವು ರಿಟ್ ಅಪೀಲ್‌ನಲ್ಲಿ ನೀಡಿರುವ ಮಧ್ಯಂತರ ಆದೇಶದ ರೀತ್ಯ ಈಗಲೂ ಸಹ ಸಮಿತಿಗೆ ವರದಿ ನೀಡಿರುವ ಪ್ರಕಾರ ಪರವಾನಗಿ ನವೀಕರಿಸಿರುವುದು ತನ್ನಷ್ಟಕ್ಕೆ ತಾನೇ ರದ್ದುಗೊಂಡಂತ್ತಾಗುತ್ತದೆ.

**ನಿರ್ಣಯ:-**ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸಮಿತಿಯು ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯು ಪರವಾನಗಿ ಇಲ್ಲದೇ ನಡೆಯುತ್ತಿರುವುದಾಗಿ ಭಾವಿಸುತ್ತದೆ. ಅಲ್ಲದೆ ಸ್ವತ್ತಿನ ಗುತ್ತಿಗೆಯು ಬೇರೆಯವರ ಹೆಸರಿನಲ್ಲಿದ್ದು ಉದ್ದಿಮೆಯ ಪರವಾನಗಿಯು ಇನ್ನೊಬ್ಬರ ಹೆಸರಿನಲ್ಲಿರುವುದು ಈ ಪ್ರಕರಣದಲ್ಲಿ ಸ್ಪಷ್ಟವಾಗಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಣನೆಗೇ ತೆಗೆದುಕೊಂಡಿಲ್ಲದೆ ಕೆ.ಎಂ.ಸಿ.ಕಾಯ್ದೆಯನ್ನು ಗಾಳಿಗೆ ತೂರಿದ್ದು, ಆಯುಕ್ತರು ಆದೇಶ ನೀಡಿ ಸೀಜ್ ಮಾಡಿರುವ ಉದ್ದಿಮೆಯನ್ನು ಆಯುಕ್ತರ ಕೆಳಹಂತದ ಅಧಿಕಾರಿಗಳು ಆಯುಕ್ತರಿಂದ ಆದೇಶ ಪಡೆಯದೆ ತೆರೆಯಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಮೇಲ್ಮನವಿದಾರರು ದಿನಾಂಕ:09-08-2011ರಂದು ಸಲ್ಲಿಸಿರುವ ಮನವಿಯಲ್ಲಿನ ಅಡಕಗಳನ್ನು ಪರಿಶೀಲಿಸಿದಾಗ ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ) ಉಪ ಆರೋಗ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿ(ಪಶ್ಚಿಮ)ರವರ ಶೀಪಾರಸ್ಸನ್ನು ಪಡೆಯದೆ ಸದರಿ ಉದ್ದಿಮೆಯ ಪರವಾನಗಿಯನ್ನು ಮಾನ್ಯ ಶ್ರೀ.ಶ್ರೀರಾಮರೆಡ್ಡಿ, ಕೆ.ಎ.ಎಸ್. ಅಪರ ಆಯುಕ್ತರು (ಪಶ್ಚಿಮ)ರವರು ಶ್ರೀ.ಜಿ.ದಯಾನಂದ್‌ರವರಿಗೆ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯನ್ನು ನಡೆಸಲು ಪರವಾನಗಿಯನ್ನು ಮಂಜೂರು ಮಾಡಿಕೊಟ್ಟಿರುತ್ತಾರೆಂದು ಹಾಗೂ ಸದರಿ ಉದ್ದಿಮೆಯ ಪರವಾನಗಿಯನ್ನು ನವೀಕರಿಸಬಾರದಾಗಿತ್ತೆಂದು ತಿಳಿಸಿರುತ್ತಾರೆ. ನಂತರ ಜಂಟಿ ಆಯುಕ್ತರು (ಪಶ್ಚಿಮ)ರವರು ಕಾನೂನಿನಂತೆ ಕ್ರಮ ವಹಿಸುವಂತೆ ದಿನಾಂಕ:08-08-2011ರಂದು ಆರೋಗ್ಯಾಧಿಕಾರಿ (ಪಶ್ಚಿಮ)ರವರಿಗೆ ನಿರ್ದೇಶನ ನೀಡಿರುತ್ತಾರೆ. ಆದರೆ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಗಮನಿಸಿದಾಗ ಸಂಬಂಧಪಟ್ಟ ಅಧಿಕಾರಿಗಳು ಕೆ.ಎಂ.ಸಿ. ಕಾಯ್ದೆಗೆ ವಿರುದ್ಧವಾಗಿ ಕಾರ್ಯನಿರ್ವಹಿಸಿತ್ತಿರುವುದಾಗಿ ಸಮಿತಿಯು ಅಭಿಪ್ರಾಯ ಪಡುತ್ತಾ, ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಪರವಾನಗಿಯನ್ನು ರದ್ದು ಪಡಿಸುವ ಬಗ್ಗೆ ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಆ)/45/2010-11

ಶ್ರೀ.ಸಿ.ಪಯಾಜ್ ಪಾಷ, ನಂ.22/68 ಬಿ ಉಕ್ಬಾ ಮಸೀದಿ ರಸ್ತೆ, ಹೋಲಿ ಕ್ರೈಸ್ಟ್ ಶಾಲೆ ಎದುರು, ಅಶ್ವಥ್ನನಗರ, ಥಣೀಸಂದ್ರ, ಬೆಂಗಳೂರು-77 ಇಲ್ಲಿ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ರದ್ದುಗೊಳಿಸುವಂತೆ ಆರೋಗ್ಯ ವೈದ್ಯಾಧಿಕಾರಿ (ಬ್ಯಾಟರಾಯನಪುರ)ರವರು ದಿನಾಂಕ:12-10-2011ರಂದು ನೀಡಿರುವ ನೋಟೀಸಿನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

**ನಿರ್ಣಯ**:- ಮೇಲ್ಮನವಿದಾರರು ನಡೆಸುತ್ತಿದ್ದ ಹೆಚ್‌ಎಂಎಸ್ ಇಂಜನಿಯರಿಂಗ್ ವರ್ಕ್ಸ್ ನಾಮಾಂಕಿತದ ವೆಲ್ಡಿಂಗ್ ಉದ್ದಿಮೆಯನ್ನು ಮುಚ್ಚಿರುವುದರಿಂದ ಪ್ರಕರಣವನ್ನು ಮುಕ್ತಾಯಗೊಳಿಸುವುದೆಂದು ದಿನಾಂಕ:03-10-2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2011-12

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

**ನಿರ್ಣಯ:-** ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:22-10-2011ರಂದು ಸ್ಥಳ ಪರಿಶೀಲನೆ ಮಾಡಿದಾಗ ಕಟ್ಟಡವು ಹಳೆಯ ಕಟ್ಟಡವಾಗಿರುವುದು ಹಾಗೂ ಮೇಲ್ಮನವಿದಾರರು ತಿಳಿಸಿರುವ ಅಳತೆಗಿಂತ ಹೆಚ್ಚು ಅಳತೆ ಇರುವುದು ಕಂಡು

-6-

ಬಂದಿರುತ್ತದೆ. ಅಲ್ಲದೆ ಮೇಲ್ಮನವಿದಾರರು ಕಂದಾಯವನ್ನು ಕಡಿಮೆ ಮಾಡಿಕೊಡುವಂತೆ ಕೋರಿಕೊಂಡಿರುತ್ತಾರೆಯೇ ವಿನಃ ಸಂಬಂಧಪಟ್ಟ ಅಧಿಕಾರಿಗಳು ನಿಗಧಿಪಡಿಸಿರುವ ಕಂದಾಯವು ಯಾವ ರೀತಿಯಲ್ಲಿ ಸರಿ ಇರುವುದಿಲ್ಲವೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಲು ವಿಫಲರಾಗಿರುತ್ತಾರೆ. ಅಲ್ಲದೆ ಸ್ವತ್ತಿಗೆ ಸಂಬಂಧಪಟ್ಟಂತ ಮೂಲ ದಾಖಲೆಗಳನ್ನು ಒದಗಿಸಲು ತಿಳಿಸಿದಾಗ್ಯೂ ಒದಗಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈಗಾಗಲೇ ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವ ಕಂದಾಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ಪರವಾಗಿ ಹಾಜರಿರುವ ವಕೀಲರಿಗೆ ವಕಾಲತ್ತು ಸಲ್ಲಿಸಲು ಅಧಿಕಾರವ ನೀಡಿ ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

05.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು ಕಾಲಾವಕಾಶ ಕೋರಿಕೊಂಡಿರುತ್ತಾರೆ. ಇತರೆ ಪ್ರತಿವಾದಿಗಳು ತಮ್ಮ ವಕೀಲರೊಂದಿಗೆ ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಿದೆ.

<u>06.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12</u>
ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುವುದಿಲ್ಲ. ಪ್ರತಿವಾದಿಗಳಿಗೆ ಹೊಸದಾಗಿ ನೋಟೀಸ್‌ನ್ನು ನೀಡುವುದೆಂದು ನೀಡುವುದು. ಹಾಗೂ ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ನೋಟೀಸ್ ಜಾರಿ ಮಾಡಲು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12</u>
ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ:

-7-

01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಾಗಿದ್ದು ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಿರುವ ಬಗ್ಗೆ ಸ್ವೀಕೃತಿಯನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ. ಆದುದರಿಂದ ಮೇಲ್ಮನವಿದಾರರಿಗೆ ಹೊಸದಾಗಿ ನೋಟೀಸ್ ನೀಡುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

<u>08.ವಿಷಯ:ಸಂಖ್ಯೆ:ಅಸ್ಥಾಸ/(ತೆ)/25/2011-12</u>
ರಾಜ್ಯಾಧ್ಯಕ್ಷರು, ದಲಿತ ಸಂಘರ್ಷ ಸಮಿತಿ (ರಿ), ನಂ.19, ಎ.ಕೆ.(ನ್ಯೂ) ಕಾಲೋನಿ, ಕಾಕ್ಸ್ ಟೌನ್, ಜೀವನಹಳ್ಳಿ, ಬೆಂಗಳೂರು-05 ಇವರಿಗೆ ಸುಭಾಶ್‌ನಗರ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆ ಸಂಖ್ಯೆ:01ನ್ನು ಹಂಚಿಕೆ ಮಾಡಿದ್ದು, ಸದರಿ ಮಳಿಗೆಗೆ ಚದರಡಿ ಒಂದಕ್ಕೆ ರೂ.15/-ಗಳಂತೆ ನಿಗಧಿಪಡಿಸಿ 100 ಚದರಡಿಗೆ ರೂ.1500/-ಗಳಂತೆ ನಿಗಧಿಪಡಿಸಿ ದಿನಾಂಕ:21-03-2011ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹಕ್ಕೆ ಉತ್ತರವಾಗಿ ಸದರಿ ಸಂಸ್ಥೆಯವರು ಮಾನ್ಯ ಮುಖ್ಯ ಮಂತ್ರಿರವರಿಗೆ ಬಾಡಿಗೆಯನ್ನು ಕಡಿಮೆ ಮಾಡಲು ಕೋರಿದ್ದು, ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ದಿನಾಂಕ:07-04-

2011ರಂದು ಪತ್ರ ಬರೆದು ಸದರಿ ಸಂಸ್ಥೆಗೆ ಬಾಡಿಗೆ ಕಡಿಮೆ ನಿಗಧಿಪಡಿಸಿಕೊಡುವಂತೆ ತಿಳಿಸಿರುವ ಮೇರೆಗೆ ತೀರ್ಮಾನಕ್ಕಾಗಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರಾದ ಶ್ರೀ.ಚಂದ್ರಯ್ಯ, ಅಧ್ಯಕ್ಷರು ಹಾಜರಿರುತ್ತಾರೆ. ಸಹಾಯಕ ಕಂದಾಯ ಅಧಿಕಾರಿಯವರು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಬಾಡಿಗೆಯನ್ನು ಕಡಿಮೆ ಮಾಡಿಕೊಡುವಂತೆ ಕೋರಿಕೊಂಡಿರುತ್ತಾರೆ. ಶ್ರೀ.ಪ್ರದೀಪ್ ಕುಮಾರ್, ಕಂದಾಯ ಪರಿವೀಕ್ಷಕರು ತಡವಾಗಿ ಹಾಜರಿದ್ದು ಈಗ ನಿಗಧಿಪಡಿಸಿರುವ ಬಾಡಿಗೆಯನ್ನು ಕಾನೂನಿನಂತೆ ನಿಗಧಿಪಡಿಸಿದ್ದು, ಅದನ್ನೆ ಮುಂದುವರೆಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಮೇಲ್ಮನವಿದಾರರು ತಮ್ಮ ಸೋಸೈಟಿಯು ದುರ್ಬಲವರ್ಗದವರಿಗಾಗಿ ಸೇವೆ ಸಲ್ಲಿಸುತ್ತಿದ್ದು ಕಂದಾಯವನ್ನು ಕಡಿಮೆ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮತ್ತು ಆದೇಶಕ್ಕಾಗಿ ಕಾಯ್ದಿರಿಸಿದೆ.

**ನಿರ್ಣಯ:-** ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:22-10-2011ರಂದು ಸ್ಥಳ ಹಾಗೂ ಆಯುಕ್ತರ ದಿನಾಂಕ:23-08-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಈಗಾಗಲೇ ಆಯುಕ್ತರು ಲೋಕೋಪಯೋಗಿ ಇಲಾಖೆಯಲ್ಲಿರುವ ದರಕ್ಕಿಂತ ಕಡಿಮೆ ನಿಗಧಿಪಡಿಸಿರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಮಳಿಗೆಯ ಬಾಡಿಗೆಯನ್ನು ಕಡಿಮೆ ಮಾಡುವುದು ಸಮಂಜಸವಾಗಿಲ್ಲದಿರುವುದರಿಂದ ಹಾಲಿ ನಿಗಧಿಪಡಿಸಿರುವ ಬಾಡಿಗೆಯನ್ನು ಸ್ಥಿರೀಕರಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

09. ವಿಷಯ:ಸಂಖ್ಯೆ:ಅಸ್ಥಾಸ/(ಆ)/29/2011-12

ಮೆ||ಹಾರ್ಡ್ ಕಾಸ್ಟೆಲ್ ರೆಸ್ಟೋರೆಂಟ್ ಪ್ರೈ.ಲಿ., ರವರು ನಂ.2466, 24ನೇ ಕ್ರಾಸ್, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು-70 ಇಲ್ಲಿ ಎ/ಸಿ ರೆಸ್ಟೋರೆಂಟ್ ನಡೆಸಲು ಉದ್ದಿಮೆ ಪರವಾನಗಿಯನ್ನು ಕೋರಿ ದಿನಾಂಕ:27-06-2011ರಂದು ಅರ್ಜಿ ಸಲ್ಲಿಸಿದ್ದು, ಸದರಿಯವರ ಅರ್ಜಿಯನ್ನು ಪರಿಶೀಲಿಸಿದ ನಂತರ 2011-12ನೇ ಸಾಲಿನ ಕದಾಯ ರಶೀದಿ ಮತ್ತು ವಸತಿಯೇತರ ಖಾತ ನಕಲು ಸಲ್ಲಿಸುವಂತೆ ದಿನಾಂಕ:30-06-2011ರಂದು ಉಪ ಆರೋಗ್ಯಾಧಿಕಾರಿ(ದಕ್ಷಿಣ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿ ವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಪರವಾನಗಿ ಕೋರಿ ಅರ್ಜಿ ಸಲ್ಲಿಸಿದ್ದು ಪರವಾನಗಿಯನ್ನು ನೀಡಿರುವುದಿಲ್ಲದಿರುವುದರಿಂದ ಮೇಲ್ಮನವಿದಾರರು ಅಪೀಲು ಸ್ಥಾಯಿ ಸಮಿತಿಯ ಮುಂದೆ ಅಪೀಲು ಸಲ್ಲಿಸಿಕೊಂಡಿರುವ ಮೇರೆಗೆ ಮಧ್ಯಂತರ ಆದೇಶವನ್ನು ಜಾರಿಗೊಳಿಸಲಾಗಿರುತ್ತದೆ. ಆದಾಗ್ಯೂ ಸಹ ವೈದ್ಯಾಧಿಕಾರಿಯವರು ಪರವಾನಗಿ ನೀಡುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ನಮಗೆ ಪರವಾನಗಿಯನ್ನು ನೀಡುವಂತೆ ಆದೇಶಿಸಬೇಕೆಂದು ಕೋರಿಕೊಂಡಿರುತ್ತಾರೆ.

ಹಾಜರಿದ್ದ ಪ್ರತಿವಾದಿಗಳು ಕಾಮಗಾರಿ ಇಲಾಖೆಯವರು ಸದರಿ ಕಟ್ಟಡಕ್ಕೆ ಯಾವುದೇ ಪರವಾನಗಿಯನ್ನು ನೀಡಬಾರದೆಂದು ಸುತ್ತೋಲೆಯ ಮುಖಾಂತರ ತಿಳಿಸಿರುವ ಮೇರೆಗೆ ಮೇಲ್ಮನವಿದಾರರಿಗೆ ಹಿಂಬರಹ ನೀಡಲಾಗಿರುತ್ತದೆ. ಸದರಿ ಹಿಂಬರಹದ ವಿರುದ್ಧ ನಿಮ್ಮ ಮುಂದೆ ಮೇಲ್ಮನವಿದಾರರು ಕೋರಿಕೊಂಡಾಗ ಮಧ್ಯಂತರ ಆದೇಶವನ್ನು ನೀಡಲಾಗಿರುತ್ತದೆ. ಈ ಮಧ್ಯೆ ಮೇಲ್ಮನವಿದಾರರು ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.ಸಂಖ್ಯೆ:6419/2011ನ್ನು ದಾಖಲಿಸಿ ಮಧ್ಯೆಂತರ ತಡೆಯಾಜ್ಞೆ ಪಡೆದುಕೊಂಡಿರುತ್ತಾರೆ. ಆದೇಶಕ್ಕಾಗಿ ಕಾಯ್ದಿರಿಸಿದೆ.



10. ವಿಷಯ:ಸಂಖ್ಯೆ:ಅಸ್ಥಾಸ/(ತೆ/30/2011-12

ಶ್ರೀ.ಸಿ.ಲೋಕೇಶ್‌ರವರು ಮಾಗಡಿ ಮುಖ್ಯರಸ್ತೆ, ಕೆ.ಹೆಚ್.ಬಿ.ಕಾಲೋನಿಯ ಬಸ್ ನಿಲ್ದಾಣದ ಶೌಚಾಲಯದ ಪಕ್ಕದಲ್ಲಿನ 10 ಅಡಿಗಳ ಖಾಲಿ ನಿವೇಶವನ್ನು ತಿಂಗಳಿಗೆ ರೂ.1000/-ಗಳ ಆದಾರದ ಮೇಲೆ ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಹಣವನ್ನು ಏಕಾಏಕಿ ರೂ.2009/-ಗಳಿಗೆ ಹೆಚ್ಚಿಸಿ ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ)ಇವರು ದಿನಾಂಕ:25-05-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರರವರ ದಿನಾಂಕ:07-09-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು, ಪ್ರತಿ ವಾದಿಗಳು ಗೈರು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿಗಧಿಪಡಿಸಿರುವ ಬಾಡಿಗೆ ದುಭಾರಿಯಾಗಿರುತ್ತದೆ. ಸದರಿ ಬಾಡಿಗೆಯನ್ನು ಕಡಿಮೆ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಸ್ತಿಗಳು)ರವರು ಈಗ ಬಾಡಿಗೆಯನ್ನು ಸರ್ಕಾರದ ಮಾರ್ಗಸೂಚಿಯಂತೆ ನಿಗಧಿಪಡಿಸಲಾಗಿರುತ್ತದೆ.

ಹಾಗೂ ಬಾಡಿಗೆಯನ್ನು ನಿಗಧಿಪಡಿಸಿ ನೀಡಿರುವ ಆದೇಶವು ಸಮಂಜಸವಾಗಿರುವುದರಿಂದ ಸದರಿ ನಿಗಧಿಪಡಿಸಿರುವ ಬಾಡಿಗೆಯನ್ನೇ ಸ್ಥಿರೀಕರಿಸುವಂತೆ ತಿಳಿಸಿರುತ್ತಾರೆ. ಆದೇಶಕ್ಕಾಗಿ ಕಾಯ್ದಿರಿಸಿದೆ.

11. ವಿಷಯ:ಸಂಖ್ಯೆ:ಅಸ್ಥಾಸ/(ತೆ/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ||ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟರ್ನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ||ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಸ್ಟಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಫ್ಯಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ||ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಪ್ರತಿ ವಾದಿಗಳು ಹಾಜರಿದ್ದು, ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಿರುವ ಬಗ್ಗೆ ಸ್ವೀಕೃತಿಯನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ. ಆದುದರಿಂದ ಪ್ರತಿವಾದಿಗಳಿಗೆ ಹೊಸದಾಗಿ ನೋಟೀಸ್ ನೀಡುವಂತೆ ಸೂಚಿಸಿ ಪ್ರಕರಣವನ್ನು ಮುಂದೂಡಲಾಯಿತು.



12. ವಿಷಯ:ಸಂಖ್ಯೆ:ಅಸ್ಥಾಸ/(ತೆ/32/2011-12

ಶ್ರೀ. ಯೋಗೇಶ್ ದೇಸಾಯಿ, ಉಪಾಧ್ಯಕ್ಷರು, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಶಾಂಪಿಂಗ್ ಕಾಂಪ್ಲೆಕ್ಸ್ ಟ್ರೇಡರ್ಸ್ ಅಸೋಸಿಯೇಷನ್ (ರಿ), ರವರು ದಿನಾಂಕ:19-08-2011ರಂದು ಮೇಲ್ಮನವಿ ಸಲ್ಲಿಸಿ ಪಿ.ಯು.ಬಿ.ಯಲ್ಲಿ ಸುಮಾರು 75 ಅಂಗಡಿಗಳನ್ನು ಹೊಂದಿದ್ದು, ನಗರ ಪಾಲಿಕೆಯು ಕಾಲಕಾಲಕ್ಕೆ ವಿಧಿಸುವ ಬಾಡಿಗೆಯನ್ನು ಪಾವತಿಸಿಕೊಂಡು ಬರುತ್ತಿದ್ದೆವು. ಆದರೆ 2006ರಲ್ಲಿ ನಮಗೆ ಯಾವುದೇ ಅವಕಾಶವನ್ನು ನೀಡದೆ ಅಂಗಡಿಗಳ ಬಾಡಿಗೆಯನ್ನು ಸುಮಾರು ಶೇಕಡಾ 600ರಷ್ಟು ಹೆಚ್ಚಿಸಿ 2008ರಲ್ಲಿ ಹೆಚ್ಚಿಸಿರುವ ಬಾಡಿಗೆಯನ್ನು ಪಾವತಿಸುವಂತೆ ನೋಟಿಸ್ ನೀಡಲಾಗಿತ್ತು. ಸದರಿ ನೋಟಿಸ್‌ನ್ನು ಪ್ರಶ್ನಿಸಿ ನಾವುಗಳು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ:23-06-2010ರಂದು ಆದೇಶ ನೀಡಿ ಪ್ರತಿ ವಾದಿಗಳು 1 ತಿಂಗಳೊಳಗಾಗಿ ವಾದಿಗಳಿಗೆ ನೋಟೀಸ್ ನೀಡಿ ಅವರ ಹೇಳಿಕೆಯನ್ನು ಪಡೆದು ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಇದುವರೆವಿಗೂ ನಮಗೆ ಯಾವುದೇ ನೋಟೀಸ್

ನೀಡಿ ಹೇಳಿಕೆಗಳನ್ನು ಪಡೆದಿರುವುದಿಲ್ಲ ಹಾಗೂ ಅಂಗಡಿ ಬಾಡಿಗೆಯನ್ನು ನಿಗಧಿಪಡಿಸಿಕೊಟ್ಟಿರುವುದಿಲ್ಲ. ಆದ್ದರಿಂದ ನಮಗೆ ಹೇಳಿಕೆಯನ್ನು ನೀಡಲು ಅವಕಾಶ ನೀಡಿ ಅಂಗಡಿಗಳಿಗೆ ನ್ಯಾಯಯುತವಾದ ಬಾಡಿಗೆಯನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುವ ಮೇರೆಗೆ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಕಟ್ಟಡದ ದರ ಪರಿಷ್ಕರಣೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-10-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ನಮಗೆ ಯಾವುದೇ ನೋಟೀಸ್ ನೀಡದೆ ಮತ್ತು ನಮಗೆ ಹೇಳಿಕೆಯನ್ನು ನೀಡಲು ಅವಕಾಶ ನೀಡದೆ ಮಳಿಗೆಗಳ ಬಾಡಿಗೆಯನ್ನು ಹೆಚ್ಚಿಸಿರುತ್ತಾರೆ. ಈ ಬಗ್ಗೆ ನಾವು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆವು ನ್ಯಾಯಾಲಯವು ಸದರಿ ವಿಷಯವನ್ನು ನಗರ ಪಾಲಿಕೆಗೆ ಹಿಂದಿರುಗಿಸುತ್ತಾ, ಹೊಸದಾಗಿ ಮೇಲ್ಮನವಿದಾರರ ಮನವಿಯನ್ನು ಪರಿಶೀಲಿಸುವಂತೆ ತಿಳಿಸಿರುತ್ತದೆ. ನಾವು ಶೇಕಡ 25%ರಷ್ಟು ಭಾಡಿಗೆಯನ್ನು ಹೆಚ್ಚು ಕೊಡಲು ಸಿದ್ದರಿರುತ್ತೇವೆ. ಕಟ್ಟಡವೆಲ್ಲಾ ಸೋರುತ್ತಿರುತ್ತದೆ, ಸರಿಯಾದ ಗಾಳಿ ಬೆಳಕು ಇರುವುದಿಲ್ಲ ಮಳಿಗೆಗೆಳಿಗೆ ಬರುವ ಸಾರ್ವಜನಿಕರಿಗೆ ಸರಿಯಾದ ರಸ್ತೆಗಳಿಲ್ಲದಿರುವುದರಿಂದ ಹಾಗೂ ಮೆಟ್ರೋ ಕಾಮಗಾರಿ ನಡೆಯುತ್ತಿರುವುದರಿಂದ ನಮ್ಮ ವ್ಯಾಪಾರಕ್ಕೆ ತೊಂದರೆಯಾಗಿರುತ್ತದೆ. ಕಟ್ಟಡವನ್ನು ಸರಿಯಾದ ರೀತಿಯಲ್ಲಿ ದುರಸ್ಥಿಗೊಳಿಸಿ ಎಲ್ಲಾ ವ್ಯವಸ್ಥೆಗಳನ್ನು ಒದಗಿಸಿದಲ್ಲಿ ಬಾಡಿಗೆಯನ್ನು ಪಾವತಿಸಲು ಸಿದ್ದರಿರುತ್ತೇವೆ. ಹಾಗೂ ಇದುವರೆವಿಗೂ ಯಾವುದೇ ಬಾಡಿಗೆಯನ್ನು ನಿಲ್ಲಿಸದೆ ಪ್ರತಿ ತಿಂಗಳು ಪಾವತಿಸಿಕೊಂಡು ಬಂದಿರುತ್ತೇವೆ. ಆದ್ದರಿಂದ ಈಗ ನಿಗಧಿಪಡಿಸಿರುವ ಕಂದಾಯವನ್ನು ಪಾವತಿಸಲು ನಮಗೆ ಸಾಧ್ಯವಾಗುತ್ತಿಲ್ಲವಾದ್ದರಿಂದ ನಮ್ಮ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ ಕಾನೂನು ಬದ್ಧ ಬಾಡಿಗೆಯನ್ನು ನಿಗಧಿಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

ಹಾಜರಿದ್ದ ಪ್ರತಿವಾದಿಗಳು ಕಾನೂನಿನಂತೆ ಕಂದಾಯವನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಕಂದಾಯವನ್ನು ಮೇಲ್ಮನವಿದಾರರು ಪಾವತಿಸಿದೆ ಅಪೀಲು ಸಲ್ಲಿಸಿರುತ್ತಾರೆ. ಅಪೀಲಿನ ನಿರ್ಣಯದಂತೆ ಮುಂದಿನ ಕ್ರಮ ಕೈಗೊಳ್ಳಲಾಗವುದೆಂದು ತಿಳಿಸಿರುತ್ತಾರೆ.

ನಿರ್ಣಯ:- ಆಯುಕ್ತರ ದಿನಾಂಕ:07-10-2011ರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಆಯುಕ್ತರ ಟಿಪ್ಪಣಿಯಲ್ಲಿ ಮಹಾತ್ಮಗಾಂಧಿ ರಸ್ತೆಯಲ್ಲಿರುವ ಖಾಸಗಿ ಸ್ವತ್ತಿನ ಸಂಖ್ಯೆ:25/2ರ ಕಟ್ಟಡದ ಬಾಡಿಗೆಯನ್ನು ಹೋಲಿಕೆ ಮಾಡಿ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಶಾಂಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಗಳಿಗೆ ಬಾಡಿಗೆ ನಿಗಧಿಪಡಿಸಿರುವುದು ಕಂಡು ಬರುತ್ತದೆ. ಹಾಗೂ 1ನೇ ಅಂತಸ್ತಿನಲ್ಲಿರುವ ಮಳಿಗೆಗಳ ಬಗ್ಗೆ ಯಾವುದೇ ಮಾಹಿತಿಯನ್ನು ಟಿಪ್ಪಣಿಯಲ್ಲಿ ಒದಗಿಸಿರುವುದಿಲ್ಲ. ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದಾಗ ದಿನಾಂಕ:30-10-2006ರ ಮಹಾನಗರ ಪಾಲಿಕೆಯ ಸಭೆಯ ನಿರ್ಣಯದಲ್ಲಿ ಸುಭಾಷ್‌ಚಂದ್ರ ಬೋಸ್ ವಾಣಿಜ್ಯ ಸಂಕೀರ್ಣ (ಪಿಯುಬಿ) ಪಾಲಿಕೆಯ ಪ್ರಮುಖ ಆಸ್ತಿಯಾಗಿದ್ದು, ಈ ಕಟ್ಟಡದಿಂದ ಹೆಚ್ಚಿನ ಆದಾಯ ತರುವ ದೃಷ್ಟಿಯಿಂದ ಈ ಕಟ್ಟಡವನ್ನು ಸಂಪೂರ್ಣವಾಗಿ ನವೀಕರಣಗೊಳಿಸಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನಂತರ ಪ್ರಸಕ್ತ ಮಾರುಕಟ್ಟೆ ದರದಲ್ಲಿ ಕಂದಾಯ ಹಾಗೂ ಪರವಾನಗಿ ಶುಲ್ಕವನ್ನು ಪಾರದರ್ಶಕ ಕಾಯ್ದೆಯನ್ವಯ ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಗಿರುತ್ತದೆ. ಆದರೆ ಸದರಿ ಮಹಾನಗರ ಪಾಲಿಕೆಯ ತೀರ್ಮಾನವನ್ನು ಜಾರಿಗೊಳಿಸದೆ ಆಯುಕ್ತರೇ ಮಾರ್ಪಾಡು ಮಾಡಿಕೊಂಡು ದಿನಾಂಕ:02-07-2007ರಂದು ಆಡಳಿತಗಾರರ ಮುಂದೆ ಮಂಡಿಸಿ 30-10-2006ರ ನಗರ ಪಾಲಿಕೆ ಸಭೆಯ ತೀರ್ಮಾನವನ್ನು ಮಾರ್ಪಡಿಸಿಕೊಂಡಿರುವುದು ಕಂಡುಬರುತ್ತದೆ. ಸಂವಿಧಾನ (74ನೇ ತಿದ್ದುಪಡಿ) ಅಧಿನಿಯಮ, 1992ರಲ್ಲಿ ಜನ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದ್ದು ಜನ ಪ್ರತಿನಿಧಿಗಳು ಸರ್ವಾನುಮತದಿಂದ ತೀರ್ಮಾನಿಸಿರುವ ವಿಷಯವನ್ನು ಬದಲಾಯಿಸಬೇಕಾದಲ್ಲಿ ರೂಲ್-51 ಅಡಿಯಲ್ಲಿ ಮಹಾನಗರ ಪಾಲಿಕೆಯ ಸಭೆಯ ಮುಂದೆ ಮರು ಮಂಡಿಸಲು ಅವಕಾಶವಿದ್ದು ಈ ಪ್ರಕರಣದಲ್ಲಿ ರೂಲ್-51ರಡಿ ಮಂಡಿಸಿರುವುದು ಕಂಡು ಬರುತ್ತಿಲ್ಲ. ಒಂದು ವೇಳೆ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನವನ್ನು ಮಾರ್ಪಡಿಸಿಕೊಳ್ಳಬೇಕಿದ್ದಲ್ಲಿ ಸರ್ಕಾರದ ಮುಂದೆ ಮಂಡಿಸಬೇಕಾಗಿತ್ತು. ಆದರೆ ಈ ಪ್ರಕರಣದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಂಡಿಸದೆ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನವನ್ನು ಮತ್ತೆ ಮಹಾನಗರ ಪಾಲಿಕೆಯ ಸಭೆಯಲ್ಲೇ (ಆಡಳಿತಗಾರರು) ತೀರ್ಮಾನ ಕೈಗೊಂಡಿರುವುದು ಕೆ.ಎಂ.ಸಿ.ಕಾಯ್ದೆಗೆ ವಿರುದ್ಧವಾಗಿರುತ್ತದೆ.

-10-

ಆಡಳಿಗಾರರ ನಿರ್ಣಯದಂತೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಬಾಡಿಗೆ ನಿಗಧಿಪಡಿಸಿ ದಿನಾಂಕ:14-08-2007ರಂದು ಜಾರಿ ಮಾಡಿರುವ ನೋಟೀಸ್‌ನಂತೆ ಬಾಡಿಗೆಯನ್ನು ಪಾವತಿಸಿಕೊಳ್ಳಬೇಕಾಗಿತ್ತು. ಆದರೆ ಈ ಪ್ರಕರಣದಲ್ಲಿ ಹೊಸ ಬಾಡಿಗೆಯನ್ನು ವಸೂಲು ಮಾಡದೆ ಹಳೆಯ ಬಾಡಿಗೆಯನ್ನೇ ಪಾವತಿಸಿಕೊಂಡಿರುವುದನ್ನು ಗಮನಿಸಿದಾಗ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಎದ್ದು ಕಾಣುವುದಲ್ಲದೆ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿರುತ್ತದೆ. ಹಾಗೂ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಬಾಡಿಗೆಯನ್ನು ನಿಗಧಿಪಡಿಸಿ ದಿನಾಂಕ:14-08-2007ರಂದು ನೋಟೀಸ್ ಜಾರಿ ಮಾಡಿರುವುದು ಸ್ವಭಾವ ಸಿದ್ಧನ್ಯಾಯಕ್ಕನುಗುಣವಾಗಿರುವುದಿಲ್ಲ.

ಸದರಿ ಕಟ್ಟಡಕ್ಕೆ ನೀರಿನ ಸೌಲಭ್ಯ, ಶೌಚಾಲಯದ ನಿರ್ವಹಣೆ, ವಾಹನ ನಿಲುಗಡೆಗೆ ವ್ಯವಸ್ಥೆ ಹಾಗೂ ಇನ್ನಿತರೆ ಯಾವುದೇ ಮೂಲ ಸೌಲಭ್ಯಗಳನ್ನು ಒದಗಿಸದೆ ಏಕಾ ಏಕಿ ಖಾಸಗಿ ಸ್ವತ್ತಿನ ಕಟ್ಟಡಕ್ಕೆ ಹೋಲಿಸಿ ಕಂದಾಯವನ್ನು ನಿಗಧಿಪಡಿಸಿರುವುದು ನ್ಯಾಯ ಸಮ್ಮತವಾಗಿ ಕಂಡುಬರುತ್ತಿಲ್ಲ. ಅಲ್ಲದೆ ಮೇಲ್ಮನವಿದಾರರು ಸಮಿತಿಯ ಸಭೆಯಲ್ಲಿ ಹಾಗೂ ತಮ್ಮ ಲಿಖಿತ ಹೇಳಿಕೆಗಳಲ್ಲಿ ಮಹಾನಗರ ಪಾಲಿಕೆಯ ಸಭೆಯ ದಿನಾಂಕ:30-10-2006ರ ತೀರ್ಮಾನದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿಗಧಿ ಪಡಿಸುವ ಬಾಡಿಗೆಯನ್ನು ಪಾವತಿಸಲು ಸಿದ್ಧರಿರುವುದಾಗಿ ಮತ್ತು ಈಗಾಗಲೇ ಹಾಲಿ ಪಾವತಿಸುತ್ತಿರುವ (ಹಳೆ) ಬಾಡಿಗೆಯನ್ನೇ ಅಕ್ಟೋಬರ್-2011ರ ಮಾಹೆಯವರೆವಿಗೂ ಪಾವತಿಸಿರುವುದಾಗಿ ತಿಳಿಸಿರುವ ಅಂಶಗಳನ್ನು ಸಮಿತಿಯು ಪರಿಗಣನೆಗೆ ತೆಗೆದುಕೊಂಡು ಸುಭಾಷ್‌ಚಂದ್ರ ಬೋಸ್ ವಾಣಿಜ್ಯ ಸಂಕೀರ್ಣ (ಪಿಯುಬಿ) ಕಟ್ಟಡದಲ್ಲಿನ ತಳ, ನೆಲ ಮತ್ತು 1ನೇ ಅಂತಸ್ತುಗಳಲ್ಲಿರುವ ಮಳಿಗೆಗಳಿಗೆ ಹಾಲಿ ಪಾವತ್ತಿಸುತ್ತಿರುವ ಬಾಡಿಗೆಯ ಮೇಲೆ ಶೇಕಡ 100ರಷ್ಟನ್ನು ಹೆಚ್ಚಿಸಿ 3 ವರ್ಷಗಳಿಗೊಮ್ಮೆ ಶೇಕಡ 25ರಷ್ಟನ್ನು ಹೆಚ್ಚಿಸಿ ದಿನಾಂಕ:01-10-2011ರಿಂದ ಜಾರಿಗೆ ಬರುವಂತೆ ಬಾಡಿಗೆಯನ್ನು ನಿಗಧಿಪಡಿಸುವುದೆಂದು ಹಾಗೂ ಸದರಿ ಕಟ್ಟಡಕ್ಕೆ ದಿನಾಂಕ:30-10-2006ರ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನದಂತೆ ನವೀಕರಣಗೊಳಿಸಿ ಎಲ್ಲಾ ಮೂಲ ಭೂತ ಸೌಲಭ್ಯಗಳನ್ನು ಒದಗಿಸಿದ ನಂತರ ಪಾರದರ್ಶಕ ಪರವಾನಗಿ ಶುಲ್ಕ ಹಾಗೂ ಬಾಡಿಗೆಯನ್ನು ನಿಗಧಿಪಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

13.ವಿಷಯ:ಸಂಖ್ಯೆ:ಅಸ್ಥಾಸ/33/2010-11

**ನಿರ್ಣಯ:**- ದೇಶದ ಪ್ರಮುಖ ನಗರಗಳಲ್ಲಿನ ಕಂದಾಯ, ಆರೋಗ್ಯ, ಜಾಹೀರಾತು ಮತ್ತು ಇತರೇ ಕ್ಷೇತ್ರಗಳಲ್ಲಿ ಅಳವಡಿಸಿಕೊಂಡಿರುವ ಆಧುನಿಕತೆಯ ಪ್ರಚಲಿತ ವಿದ್ಯಾಮಾನಗಳನ್ನು ಮತ್ತು ಪ್ರಗತಿಪರ ತಂತ್ರಜ್ಞಾನಗಳ ಮಾದರಿಗಳನ್ನು ಒಳಗೊಂಡಂತೆ ಹಾಗೂ ಜನಪ್ರತಿನಿಧಿಗಳ ಕಾರ್ಯನಿರ್ವಹಣಾ ಶೈಲಿಯ ಬಗ್ಗೆ ಅಧ್ಯಯನ ಮಾಡಲು ಅಪೀಲು ಸ್ಥಾಯಿ ಸಮಿತಿಯು, ಅಧ್ಯಕ್ಷರು, ಸಮಿತಿಯ ಎಲ್ಲಾ ಸದಸ್ಯರು, ಒಬ್ಬರು ಅಧಿಕಾರಿ ಹಾಗೂ ಸಮಿತಿಯ ಆಪ್ತ ಸಹಾಯಕರುಗಳನ್ನೊಳಗೊಂಡಂತೆ 2011ನೇ ಸಾಲಿನ ನವೆಂಬರ್ ಮಾಹೆಯಲ್ಲಿ ದೆಹಲಿ, ಚಂಡೀಘಡ್, ಸಿಮ್ಲಾ ಮತ್ತು ಜಮ್ಮು ನಗರಗಳಿಗೆ ಭೇಟಿ ನೀಡಲು ಉದ್ದೇಶಿಸಿದ್ದು, ಪ್ರವಾಸವನ್ನು ವಿಮಾನದಲ್ಲಿ ಕೈಗೊಳ್ಳು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

:ಸಹಿ:
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಅಪೀಲು ಸ್ಥಾಯಿ ಸಮಿತಿಯ ದಿನಾಂಕ:25-11-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|

| | | | |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಆರೋಗ್ಯಾಧಿಕಾರಿಗಳು (ದಕ್ಷಿಣ) |
| 04 | ಬಿ.ಎಸ್.ಆನಂದ | ಸದಸ್ಯರು | ಸ.ಕಂ.ಅ.((ಮಾರುಕಟ್ಟೆ-ದಕ್ಷಿಣ/ಯಶವಂತಪುರ/ಹೆಬ್ಬಾಳ/ಮಲ್ಲೇಶ್ವರಂ) |
| 05 | ಎಂ.ವಸಂತಕುಮಾರಿ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪಶ್ಚಿಮ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಪ್ರಕರಣವನ್ನು ಮುಂದೂಡಿದೆ.

02.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. 6 ಮತ್ತು 7 ಹಾಗೂ 1ರಿಂದ 5ನೇ ಮೇಲ್ಮನವಿದಾರುರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಪ್ರಕರಣವನ್ನು ಮುಂದೂಡಿದೆ.

03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಪ್ರಕರಣದ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.



04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/-

ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ: 01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣದ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

05. ವಿಷಯ:ಸಂಖ್ಯೆ:ಅಸ್ಥಾಸ/(ತೆ/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ॥ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟರ್ನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ॥ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಸ್ಟಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಫ್ಯಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ॥ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣದ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/34/2011-12

ಮೆ॥ ಜೈ ಜವಾನ್ ಜಾಹೀರಾತುದಾರರಿಗೆ ಪೈಲೆಟ್ ಯೋಜನೆಯಡಿಯಲ್ಲಿ ಪಾಲಿಕೆಯ ವಿವಿಧ 04 ಸ್ಥಳಗಳಲ್ಲಿ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ 24*12 ಅಡಿ ಅಳತೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು 05 ವರ್ಷಗಳ ಕಾಲಾವಧಿಗೆ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು ದಿನಾಂಕ:16-02-2011ರಂದು ಅವಧಿಯು ಮುಕ್ತಾಯಗೊಂಡಿದ್ದು ಮತ್ತೆ ಮುಂದಿನ 05 ವರ್ಷಗಳ ಅವಧಿಗೆ 24x12 ಅಡಿ ಅಳತೆಯಿಂದ 15x30 ಅಡಿ ಅಳತೆಗೆ ಹೆಚ್ಚಿಸಿಕೊಳ್ಳಲು ಅನುಮತಿ ನೀಡುವಂತೆ ಜಾಹೀರಾತುದಾರರು ಕೋರಿಕೊಂಡಿರುತ್ತಾರೆ. ಅನುಮತಿ ನೀಡಲಾಗಿದ್ದ 04 ರಸ್ತೆಗಳಲ್ಲಿ ರಾಜ್‌ಭವನ್ ರಸ್ತೆಯು ಜಾಹೀರಾತು ಬೈಲಾ-2006ರ ಪ್ರಕಾರ "ಎ" ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳಲು ತಿಳಿಸಿದ್ದು, ಸದರಿಯವರು ಬದಲಿ ಸ್ಥಳದಲ್ಲಿ ನೀರಿನ ಕಾರಂಜಿಯನ್ನು ಅಳವಡಿಸಿಕೊಳ್ಳದೆ ಉಲ್ಲಂಘನೆ ಮಾಡಿರುವುದರಿಂದ ಸದರಿಯವರ ಮನವಿಯನ್ನು ತಿರಸ್ಕರಿಸುತ್ತಾ, ಅವಧಿ ಮುಗಿದ ನಂತರ ಜಾಹೀರಾತು ಪ್ರದರ್ಶಿಸುತ್ತಿರುವ ಅವಧಿಗೆ ದಿನಾಂಕ:17-02-2011ರಿಂದ 20-08-2011ರವರೆಗೂ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು

ರೂ.2,08,998/-ಗಳನ್ನು ಪಾವತಿಸುವಂತೆದಿನಾಂಕ:24-08-2011ರಂದು ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:20-08-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2011-12

ನಂ.301, 66ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಈ ಉದ್ದಿಮೆಯ ಮಾಲೀಕರಾದ ಶ್ರೀ.ಇ.ಹೆಚ್.ಟೋಪಿಸಾಹೇಬ್‌ರವರು ದಿನಾಂಕ:17-09-2011ರಂದು ಉಪ ಆರೋಗ್ಯಾಧಿಕಾರಿ (ಪಶ್ಚಿಮ)ರವರು ನೀಡಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ, ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣ ನಡೆಯುವ ದಿನಾಂಕವನ್ನು ತಿಳಿಸುವುದೆಂದು ತಿಳಿಸುತ್ತಾ, ಮುಂದೂಡಲಾಯಿತು.

08. ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2011-12

ಸಾಯಿ ಎಂಟರ್ ಪ್ರೈಸಸ್, ನಂ.159/1, ಸುಖನಿವಾಸ ಎದುರು, ಲಿಟಲ್ ಆಂಜಲ್ಸ್ ಶಾಲೆ ರಸ್ತೆ, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ಹೆಚ್.ಆರ್.ವಿನಾಯಕ್‌ರವರು ಸಾಯಿ ಎಂಟರ್ ಪ್ರೈಸಸ್ (ಆಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 35 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:09-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

09. ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2011-12

ಸಾಯಿ ಬಕ್ಕಲ್, ನಂ.159, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ರಮೇಶ್‌ರವರು ಸಾಯಿ ಬಕ್ಕಲ್ (ಆಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 25 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:08-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/38/2011-12

ಶ್ರೀ.ಜೆ.ನಾಗರಾಜು, ನಂ.59, 7ನೇ ಬ್ಲಾಕ್, ಭವಾನಿ ಹೆಚ್.ಬಿ.ಸಿ.ಎಸ್. ಕತ್ತರುಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ಇವರು ತಮ್ಮ ಕಟ್ಟಡಕ್ಕೆ ನೀರು ಒಳಚರಂಡಿ, ವಿದ್ಯುತ್ ಸೌಲಭ್ಯಗಳನ್ನು ಒದಗಿಸುವಂತೆ ಕೋರಿಕೊಂಡಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬನಶಂಕರಿ ಉಪ ವಿಭಾಗರವರು ದಿನಾಂಕ:08-11-2011ರಂದು ನೀಡಿರುವ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

11.ವಿಷಯ:ಸಂಖ್ಯೆ:ಅಸ್ಥಾಸ/(ತೆ)/39/2011-12

ಶ್ರೀ.ಜಿ.ಶ್ರೀನಿವಾಸ್, ನಂ.23, 6ನೇ ಅಡ್ಡರಸ್ತೆ, ಗೋಕುಲ 1ನೇ ಹಂತ, 1ನೇ ಮುಖ, ವಾರ್ಡ್-17 ಈ ಸ್ವತ್ತಿಗೆ ಕಂದಾಯವನ್ನು ವಾಣಿಜ್ಯ ದರದಲ್ಲಿ ನಿಗಧಿಪಡಿಸಿದ್ದು, ವಸತಿ ದರದಲ್ಲಿ ನಿಗಧಿಪಡಿಸಿಕೊಡುವಂತೆ ಕೋರಿ ದಿನಾಂಕ:20-10-2001ರಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಅರ್ಜಿ ನೀಡಿದ್ದರೂ ಸಹ ನನ್ನ ಮನವಿಯನ್ನು ಪರಿಗಣಿಸದೆ ಹಾಲಿ ನಿಗಧಿಪಡಿಸಿರುವ ಕಂದಾಯವು ಸಮಂಜಷವಾಗಿರುತ್ತದೆಂದು ಸಹಾಯಕ ಕಂದಾಯ ಅಧಿಕಾರಿ (ಯಶವಂತಪುರ)ರವರು ದಿನಾಂಕ:10-11-2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ

ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:30-12-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಉಪ ಆರೋಗ್ಯಾಧಿಕಾರಿಗಳು (ಪಶ್ಚಿಮ/ಮಹದೇವಪುರ) |
| 04 | ಬಿ.ಎಸ್.ಆನಂದ | ಸದಸ್ಯರು | ಕಂದಾಯ ಅಧಿಕಾರಿ (ಬೊಮ್ಮನಹಳ್ಳಿ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸಹಾಯ ಕಾರ್ಯಪಾಲಕ ಅಭಿಯಂತರರು(ಬನಶಂಕರಿ) |
| 06 | ಬಿ.ಗೋವಿಂದರಾಜು | ಸದಸ್ಯರು | ಸ.ಕಂ.ಅ.((ಮಾರುಕಟ್ಟೆ-ದಕ್ಷಿಣ/ಶಾಂತಿನಗರ/ಪೀಣ್ಯ ಕೈಗಾರಿಕಾ ಪ್ರದೇಶ/ ಕೋರಮಂಗಲ) |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11

ಮೆ॥ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ನಿರ್ಣಯ:-** ದಿನಾಂಕ:28-10-2011ರ ಆಯುಕ್ತರ ಟಿಪ್ಪಣಿಯನ್ನು ಸಮಿತಿಗೆ ದಿನಾಂಕ:29-10-2011ರಂದು ಮಂಡಿಸಿರುತ್ತಾರೆ. ಸದರಿ ಟಿಪ್ಪಣಿಯಲ್ಲಿನ ಅಂಶಗಳು ಹಾಗೂ ಮೇಲ್ಮನವಿದಾರರ ಹೇಳಿಕೆಗಳನ್ನು ಪರಿಶೀಲಿಸಿದ ನಂತರ, ಆಯುಕ್ತರ ಟಿಪ್ಪಣಿಯಂತೆ ಮುಂದಿನ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು, ಪ್ರತಿವಾದಿಗಳ ಪರವಾಗಿ ಶ್ರೀ.ಪ್ರವೀಣ್ ಕುಮಾರ್, ಪ್ರಥಮ ದರ್ಜೆ ಸಹಾಯಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರ ವಾದಗಳನ್ನು ಆಲಿಸಿದ ನಂತರ ಆದೇಶಕ್ಕಾಗಿ ಪ್ರಕರಣವನ್ನು ಕಾಯ್ದಿರಿಸಿದೆ.

03.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/14/2010-11

ಶ್ರೀ.ಎ.ಪ್ರಕಾಶ್, ಕನ್ಸರ್‌ವೆನ್ಸಿ ಲೇನ್, ಎಂ.ಎಂ.ರಸ್ತೆ, ಸರ್ವಜ್ಞ ನಗರ ಈ ಸ್ವತ್ತಿನಲ್ಲಿ ಒಂದು ಚಿಕ್ಕ ಪೆಟ್ಟಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದು, ಸದರಿ ಅಂಗಡಿಯನ್ನು ಖಾಲಿ ಮಾಡುವಂತೆ ಜಂಟಿ ಆಯುಕ್ತರು (ಪೂರ್ವ)ರವರು ಕೆ.ಪಿ.ಪಿ.ಕಾಯ್ದೆ ಕಲಂ 5(1)ರ ಅಡಿಯಲ್ಲಿ ದಿನಾಂಕ:03-01-2011ರಲ್ಲಿ ಗುತ್ತಿಗೆದಾರರಿಗೆ ನೀಡಿರುವ ನೋಟೀಸ್ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:01-07-2011ರ ಟಿಪ್ಪಣಿ.

**ನಿರ್ಣಯ:-** ಮೇಲ್ಮನವಿದಾರರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಸಮಿತಿಯು ಮೇಲ್ಮನವಿದಾರರ ಮೇಲ್ಮನವಿಯನ್ನು ತಿರಸ್ಕರಿಸುತ್ತಾ, ದಿನಾಂಕ:01-07-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು



ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. 6 ಮತ್ತು 7 ಹಾಗೂ 1ರಿಂದ 5ನೇ ಮೇಲ್ಮನವಿದಾರುರು ಮತ್ತು ಪ್ರತಿವಾದಿಗಳ ಪರವಾಗಿ ಎ ಇಂದ ಎಫ್ ಶ್ರೀ.ಕೆ.ಎಸ್.ಕೆ.,ರವರು 6 ಮತ್ತು 7ರ ಪರವಾಗಿ ಶ್ರೀ.ಟಿ.ಎಸ್.ಆರ್., ರವರು ಹಾಜರಿರುತ್ತಾರೆ. ಪ್ರತಿವಾದಿಗಳು ತಕರಾರು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿರುತ್ತಾರೆ. ಈಗಾಗಲೇ ಬಹಳಷ್ಟು ಕಾಲಾವಕಾಶವನ್ನು ನೀಡಲಾಗಿದ್ದರೂ ಸಹ ಮತ್ತೊಮ್ಮೆ ಕಾಲಾವಕಾಶವನ್ನು ಕೇಳಿದ ಬಗ್ಗೆ ಸಮಿತಿಯು ಅಸಮಾಧಾನವನ್ನು ವ್ಯಕ್ತ ಪಡಿಸುತ್ತಾ, ಕೊನೆಯ ಬಾರಿಯಾಗಿ ಕಾಲಾವಕಾಶವನ್ನು ನೀಡಿ ಪ್ರಕರಣವನ್ನು ಮುಂದೂಡಿದೆ.

05. ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು, ಪ್ರತಿವಾದಿಯಾದ ಸಹಾಯ ಕಂದಾಯ ಅಧಿಕಾರಿಯ ಪರವಾಗಿ ಶ್ರೀ.ರಾಮಕೃಷ್ಣ, ಕಂದಾಯ ಪರಿವೀಕ್ಷಕರು, ವಾರ್ಡ್-19 ಹಾಜರಿರುತ್ತಾರೆ. ಮೇಲ್ಮನವಿದಾರರ ವಾದಗಳನ್ನು ಕೇಳಲಾಯಿತು. ಪ್ರತಿವಾದಿಗಳು ಕಾನೂನು ರೀತಿ ಕಂದಾಯವನ್ನು ನಿಗಧಿಪಡಿಸಿರುವುದಿಲ್ಲ ಹಾಗೂ 2009ರಲ್ಲಿ ಸ್ವತ್ತಿನ ಖಾತಾ ವಿಭಜನೆಯಾಗಿರುತ್ತದೆ. ಈ ಬಗ್ಗೆ ವಿಶೇಷ ಸೂಚನಾ ಪತ್ರ ಹಾಗೂ ಅವಶ್ಯವಿರುವ ದಾಖಲೆಗಳನ್ನು ಹಾಜರುಪಡಿಸುತ್ತಾ, ಕಾನೂನು ಬದ್ಧ ಕಂದಾಯವನ್ನು ನಿಗಧಿಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆ ಮಾಡಿ ಆದೇಶ ನೀಡಲು ಪ್ರಕರಣವನ್ನು ಕಾಯ್ದಿರಿಸಿದೆ.

06.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ: 01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಮಲ್ಲೇಶ್ವರಂ)ರವರು ಹಾಜರಿರುವುದಿಲ್ಲ. ಈ ಪ್ರಕರಣದಲ್ಲಿ ಈಗಾಗಲೇ ಬಹಳಷ್ಟು ಸಭೆಗಳು ನಡೆದಿರುವುದರಿಂದ ಪ್ರತ ಬಾರಿಯೂ ಪ್ರತಿವಾದಿಗಳು ಹಾಜರಾಗುತ್ತಿಲ್ಲದಿರುವುದರಿಂದ, ಪ್ರತಿವಾದಿಗಳ ಹೇಳಿಕೆಗಳೂ ಏನೂ ಇಲ್ಲವೆಂದು ಭಾವಿಸಿ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

07.ವಿಷಯ:ಸಂಖ್ಯೆ:ಅಸ್ಥಾಸ/(ಆ)/23/2011-12

ನಂ.632, 12ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-45 ಈ ವಿಳಾಸದಲ್ಲಿ ನಡೆಯುತ್ತಿರುವ ಹಿಟ್ಟಿನಗಿರಣಿ ಉದ್ದಿಮೆ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ನೀಡಿದ ದೂರಿನನ್ವಯ ಉದ್ದಿಮೆಗೆ ನೀಡಿರುವ ಪರವಾನಗಿಯನ್ನು ಹಿಂಪಡೆಯಲಾಗಿತ್ತು. ದಿನಾಂಕ:01-04-2011ರಂದು ಅಪೀಲು ಸ್ಥಾಯಿ ಸಮಿತಿಯ ಸಭೆಯ ನಡುವಳಿಯಲ್ಲಿ ಸದರಿ ಹಿಟ್ಟಿನ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಉದ್ದಿಮೆಗೆ ರದ್ದುಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮ

ಕೈಗೊಳ್ಳುವುದೆಂದು ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ವಿಷಯದ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ಮತ್ತೊಮ್ಮೆ ಪತ್ರ ಬರೆದು ನಮ್ಮ ಹೇಳಿಕೆಯನ್ನು ಪಡೆಯದೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ನಮಗೆ ಹೇಳಿಕೆ ನೀಡಲು ಅವಕಾಶ ನೀಡುವಂತೆ ಕೋರಿಕೊಂಡಿರುವ ಮೇರೆಗೆ ಸದರಿಯವರ ದೂರಿನ ಜೊತೆಗೆ ಶ್ರೀ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು ಇವರಿಗೆ ವೈದ್ಯರು ಸಹ ದೃಢೀಕರಣ ಪತ್ರ ನೀಡಿ ಮೆಣಸಿನ ಪುಡಿ ಇನ್ನಿತರೆ ಗಾಟು ಮತ್ತು ದೂಳು ಬರುವ ಸ್ಥಳದಲ್ಲಿ ಕಾರ್ಯನಿರ್ವಹಿಸಬಾರದೆಂದು ತಿಳಿಸಿರುವುದನ್ನು ಮನಗಂಡು ಉದ್ದಿಮೆದಾರರನ್ನು ಹಾಗೂ ದೂರುದಾರರನ್ನು ಪುನಃ ಕರೆಸಿ ವಿಚಾರಣೆ ನಡೆಸಬಹುದೆಂದು ಮಂಡಿಸಿರುವ ಆಯುಕ್ತರ ದಿನಾಂಕ:02-08-2011ರ ಟಿಪ್ಪಣಿ.

ನಿರ್ಣಯ:- ಸದರಿ ಪ್ರಕರಣದಲ್ಲಿ ಅಪೀಲು ಸ್ಥಾಯಿ ಸಮಿತಿಯು ಈಗಾಗಲೇ ದಿನಾಂಕ:01-04-2011ರಂದು ನಿರ್ಣಯ ಕೈಗೊಂಡಿದ್ದು, ಸದರಿ ನಿರ್ಣಯದಂತೆ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.



08. ವಿಷಯ:ಸಂಖ್ಯೆ:ಅಸ್ಥಾಸ/(ಖಾ)/28/2011-12

ಶ್ರೀ.ಕೆ.ವಿಜಯಕುಮಾರ್, ನಂ.171/2, ತೂಬರಹಳ್ಳಿ, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು-66 ಇವರು ದಿನಾಂಕ:16-09-2011ರಂದು ಸಮಿತಿಯ ಮುಂದೆ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರು ದಿನಾಂಕ:08-08-2011ರಂದು ಹೊರಡಿಸಿರುವ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಗೂ ಪ್ರತಿವಾದಿಗಳಾದ ಆರ್-4 ಮತ್ತು ಆರ್-3 ಪರವಾಗಿ ವಕೀಲರು ಹಾಜರಿರುತ್ತಾರೆ. 5ನೇ ಪ್ರತಿವಾದಿಗಳ ಪರವಾಗಿ ಹಾಜರಿದ್ದ ವಕೀಲರು ನನಗೆ ಅಪೀಲು ಪ್ರತಿ ಸಿಕ್ಕಿರುವುದಿಲ್ಲವಾದ್ದರಿಂದ ತಕರಾರು ಸಲ್ಲಿಸಲು ಅಪೀಲು ಪ್ರತಿಯನ್ನು ನೀಡುವಂತೆ ಕೋರಿರುತ್ತಾರೆ. ಪ್ರತಿವಾದಿಗಳಿಗೆ ಅಪೀಲು ಪ್ರತಿಯನ್ನು ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

09.ವಿಷಯ:ಸಂಖ್ಯೆ:ಅಸ್ಥಾಸ/(ಆ)/29/2011-12

ಮೆ॥ಹಾರ್ಡ್ ಕಾಸ್ಟಲ್ ರೆಸ್ಟೋರೆಂಟ್ ಪ್ರೈ.ಲಿ., ರವರು ನಂ.2466, 24ನೇ ಕ್ರಾಸ್, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು-70 ಇಲ್ಲಿ ಎ/ಸಿ ರೆಸ್ಟೋರೆಂಟ್ ನಡೆಸಲು ಉದ್ದಿಮೆ ಪರವಾನಗಿಯನ್ನು ಕೋರಿ ದಿನಾಂಕ:27-06-2011ರಂದು ಅರ್ಜಿ ಸಲ್ಲಿಸಿದ್ದು, ಸದರಿಯವರ ಅರ್ಜಿಯನ್ನು ಪರಿಶೀಲಿಸಿದ ನಂತರ 2011-12ನೇ ಸಾಲಿನ ಕದಾಯ ರಶೀದಿ ಮತ್ತು ವಸತಿಯೇತರ ಖಾತ ನಕಲು ಸಲ್ಲಿಸುವಂತೆ ದಿನಾಂಕ:30-06-2011ರಂದು ಉಪ ಆರೋಗ್ಯಾಧಿಕಾರಿ(ದಕ್ಷಿಣ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

**ನಿರ್ಣಯ**:- ಕಡತವನ್ನು ಪರಿಶೀಲಿಸಲಾಯಿತು. ಓ.ಎಸ್.ಸಂಖ್ಯೆ:6419/2011ರಲ್ಲಿ ಮಧ್ಯಂತರ ತಡೆಯಾಜ್ಞೆಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಆದರೆ ಮಧ್ಯಂತರ ತಡೆಯಾಜ್ಞೆ ಪ್ರತಿಯನ್ನು ಸಮಿತಿಯು ಪರಿಶೀಲಿಸಲು ಕೇಳಿದಾಗ ಒದಗಿಸಿರುವುದಿಲ್ಲ. ಇದರಿಂದಾಗಿ ಸಿವಿಲ್ ನ್ಯಾಯಾಲಯವು ಯಾವ ಅಂಶಗಳಿಗೆ ತಡೆಯಾಜ್ಞೆ ನೀಡಿರುತ್ತದೆಂಬ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಅಲ್ಲದೆ ಟ್ರೇಡ್ ಪರವಾನಗಿಯನ್ನು ಪಡೆಯದಿದ್ದಲ್ಲಿ ಆಹಾರ ಪರವಾನಗಿಯನ್ನು ಸಹ ನೀಡಲು ಬರುವುದಿಲ್ಲ. ಒಂದು ವೇಳೆ ಆಹಾರ ಪರವಾನಗಿ ಇಲ್ಲದೆ ರೆಸ್ಟೋರೆಂಟ್ ನಡೆಸುತ್ತಿದ್ದಲ್ಲಿ, ರೆಸ್ಟೋರೆಂಟ್‌ರವರು ತಯಾರಿಸುವ ಅಹಾರ ಪದಾರ್ಥಗಳ ಗುಣ ಮಟ್ಟದ ವಿವಾಧ ಉಂಟಾದಲ್ಲಿ ಅಥವಾ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾದಲ್ಲಿ ನಗರ ಪಾಲಿಕೆಯ ಜವಾಬ್ದಾರಿಯಾಗಬೇಕಾಗಿರುತ್ತದೆಂಬ ಅಂಶವನ್ನು ಸಮಿತಿಯು ಮನಗಂಡು ದಿನಾಂಕ:29-07-2011ರಂದು ಸಮಿತಿಯು ಬರೆದ ಪತ್ರವನ್ನು ರದ್ದುಪಡಿಸುತ್ತಾ, ಉದ್ದಿಮೆ ಪರವಾನಗಿ ಹಾಗೂ ಆಹಾರ ಪರವಾನಗಿ ಇಲ್ಲದೇ ನಡೆಯುತ್ತಿರುವ ಮೆ॥ಹಾರ್ಡ್ ಕಾಸ್ಟಲ್ ರೆಟ್ಟೋರೆಂಟ್ ಪ್ರೈ.ಲಿ. ನಂ.2466, 24ನೇ ಕ್ರಾಸ್, ಬಿ.ಎಸ್.ಕೆ. 2ನೇ ಹಂತ ಬೆಂಗಳೂರು ಈ ಉದ್ದಿಮೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ನ್ಯಾಯಾಲಯದ ತಡೆಯಾಜ್ಞೆಯನ್ನು ಪರಿಶೀಲಿಸಿಕೊಂಡು ಪರವಾನಗಿ ಇಲ್ಲದೆ ನಡೆಯುತ್ತಿರುವ ಉದ್ದಿಮೆಯು ತಯಾರಿಸುತ್ತಿರುವ ಆಹಾರ ಪದಾರ್ಥಗಳ ತಯಾರಿಕೆಯನ್ನು ಸ್ಥಗಿತಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ತೆ/30/2011-12

ಶ್ರೀ.ಸಿ.ಲೋಕೇಶ್‌ರವರು ಮಾಗಡಿ ಮುಖ್ಯರಸ್ತೆ, ಕೆ.ಹೆಚ್.ಬಿ.ಕಾಲೋನಿಯ ಬಸ್ ನಿಲ್ದಾಣದ ಶೌಚಾಲಯದ ಪಕ್ಕದಲ್ಲಿನ 10 ಅಡಿಗಳ ಖಾಲಿ ನಿವೇಶವನ್ನು ತಿಂಗಳಿಗೆ ರೂ.1000/-ಗಳ ಆದಾರದ ಮೇಲೆ ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಹಣವನ್ನು ಏಕಾಏಕಿ ರೂ.2009/-ಗಳಿಗೆ ಹೆಚ್ಚಿಸಿ ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ)ಇವರು ದಿನಾಂಕ:25-05-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರರವರ ದಿನಾಂಕ:07-09-2011ರ ಟಿಪ್ಪಣಿ.

**ನಿರ್ಣಯ**:- ಕಡತ ಮತ್ತು ಮೇಲ್ಮನವಿದಾರರ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಅರ್ಜಿದಾರರು ಗುತ್ತಿಗೆ ಅವಧಿ ಮುಗಿದ ತಕ್ಷಣವೇ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿಕೊಂಡಿರುವುದು ಕಂಡು ಬರುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಅರ್ಜಿದಾರರಿಗೆ ಯಾವುದೇ ಉತ್ತರವನ್ನು ನೀಡದೆ, ಗುತ್ತಿಗೆ ಅವಧಿಯನ್ನೂ ಸಹ ನವೀಕರಿಸಿರುವುದು ಕಂಡುಬರುತ್ತಿಲ್ಲ. ಹಾಗೂ ಕಡತದ ಪುಟ ಸಂಖ್ಯೆ:84ರಲ್ಲಿ ಲಗತ್ತಿಸಿರುವ ಪ್ರಸ್ತಾಪಿತ ಸ್ವತ್ತಿನ ಪರಿಷ್ಕತ ದರವು ರೂ.2500/-ಗಳಾಗಿದ್ದು, ಸದರಿ ಮಾರುಕಟ್ಟೆ ದರದ ಆಧಾರದ ಮೇಲೆ ಶೇ.10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಿ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಜಾರಿ ಮಾಡುವುದು. ಹಾಗೂ ಬಾಕಿ ಇರುವ ಗುತ್ತಿಗೆ ಹಣವನ್ನು ಹಿಂದೆ ನಿಗಧಿಪಡಿಸಿರುವ ರೂ.1000/-ಗಳ ಆಧಾರದ ಮೇಲೆ ವಸೂಲು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

11. ವಿಷಯ:ಸಂಖ್ಯೆ:ಅಸ್ಥಾಸ/(ತೆ/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ॥ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ



ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ॥ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಚ್ಛೇತನ ಕಾರ್ಯಕ್ರಮಗಳನ್ನು ಅನುಸ್ಥಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಪ್ರಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ॥ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳಾದ ಶ್ರೀ.ಶಾಂತೇಶ್, ಸಹಾಯಕ ಕಂದಾಯ ಅಧಿಕಾರಿ (ಪ್ರಭಾರ)ರವರು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಲಿಖಿತ ಹೇಳಿಕೆಗಳನ್ನು ಸಲ್ಲಿಸುತ್ತೇವೆ. ಅದರಂತೆ ನಮ್ಮ ಮನವಿಯನ್ನು ಪರಿಗಣಿಸಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಈಗ ನಿಗಧಿಪಡಿಸಿರುವ ಕಂದಾಯವನ್ನು ಸಮಂಜಸವಾಗಿದ್ದು ಮೇಲ್ಮನವಿದಾರರು ಮನವಿಯನ್ನು ವಜಾಗೊಳಿಸಬೇಕೆಂದು ಸಮಿತಿಯನ್ನು ಕೋರಿರುತ್ತಾರೆ. ಸದರಿ ಪ್ರಕರಣವನ್ನು ತಪಾಸಣೆ ಮಾಡಿ ಆದೇಶ ನೀಡಲು ಕಾಯ್ದಿರಿಸಿದೆ.

12.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/34/2011-12

ಮೆ॥ ಜೈ ಜವಾನ್ ಜಾಹೀರಾತುದಾರರಿಗೆ ಪೈಲೆಟ್ ಯೋಜನೆಯಡಿಯಲ್ಲಿ ಪಾಲಿಕೆಯ ವಿವಿಧ 04 ಸ್ಥಳಗಳಲ್ಲಿ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ 24*12 ಅಡಿ ಅಳತೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು 05 ವರ್ಷಗಳ ಕಾಲಾವಧಿಗೆ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು ದಿನಾಂಕ:16-02-2011ರಂದು ಅವಧಿಯು ಮುಕ್ತಾಯಗೊಂಡಿದ್ದು ಮತ್ತೆ ಮುಂದಿನ 05 ವರ್ಷಗಳ ಅವಧಿಗೆ 24X12 ಅಡಿ ಅಳತೆಯಿಂದ 15X30 ಅಡಿ ಅಳತೆಗೆ ಹೆಚ್ಚಿಸಿಕೊಳ್ಳಲು ಅನುಮತಿ ನೀಡುವಂತೆ ಜಾಹೀರಾತುದಾರರು ಕೋರಿಕೊಂಡಿರುತ್ತಾರೆ. ಅನುಮತಿ ನೀಡಲಾಗಿದ್ದ 04 ರಸ್ತೆಗಳಲ್ಲಿ ರಾಜ್‌ಭವನ್ ರಸ್ತೆಯು ಜಾಹೀರಾತು ಬೈಲಾ-2006ರ ಪ್ರಕಾರ "ಎ" ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳಲು ತಿಳಿಸಿದ್ದು, ಸದರಿಯವರು ಬದಲಿ ಸ್ಥಳದಲ್ಲಿ ನೀರಿನ ಕಾರಂಜಿಯನ್ನು ಅಳವಡಿಸಿಕೊಳ್ಳದೆ ಉಲ್ಲಂಘನೆ ಮಾಡಿರುವುದರಿಂದ ಸದರಿಯವರ ಮನವಿಯನ್ನು ತಿರಸ್ಕರಿಸುತ್ತಾ, ಅವಧಿ ಮುಗಿದ ನಂತರ ಜಾಹೀರಾತು ಪ್ರದರ್ಶಿಸುತ್ತಿರುವ ಅವಧಿಗೆ ದಿನಾಂಕ:17-02-2011ರಿಂದ 20-08-2011ರವರೆಗೂ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು ರೂ.2,08,998/-ಗಳನ್ನು ಪಾವತಿಸುವಂತೆದಿನಾಂಕ:24-08-2011ರಂದು ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:20-08-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಪ್ರತಿವಾದಿಗಳ ಪರವಾಗಿ ಶ್ರೀ.ಶ್ರೀನಿವಾಸಮೂರ್ತಿ, ಎರಡನೇ ದರ್ಜೆ ಸಹಾಯಕರು ಹಾಜರಿರುತ್ತಾರೆ. ಮೇಲ್ಮನವಿದಾರರಿ ನೋಟೀಸ್ ನೀಡಿರುವ ಬಗ್ಗೆ ಸ್ವೀಕೃತಿಯನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿಗಳು ಸದರಿಯವರಿಗೆ ತಿಳಿದಿರುವುದಿಲ್ಲ.

ಆದುದರಿಂದ ಸದರಿ ಪ್ರಕಣದಲ್ಲಿ ಮೇಲ್ಮನವಿದಾರರಿಗೆ ಸಹಾಯಕ ಕಂದಾಯ ಅಧಿಕಾರಿಗಳ ಮುಖಾಂತರ ಮತ್ತೊಮ್ಮೆ ನೋಟೀಸ್ ಜಾರಿ ಮಾಡಲು ಪ್ರಕರಣವನ್ನು ಮುಂದೂಡಲಾಯಿತು.

13.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2011-12

ನಂ.301, 66ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಈ ಉದ್ದಿಮೆಯ ಮಾಲೀಕರಾದ ಶ್ರೀ.ಇ.ಹೆಚ್.ಟೋಪಿಸಾಹೇಬ್‌ರವರು ದಿನಾಂಕ:17-09-2011ರಂದು ಉಪ ಆರೋಗ್ಯಾಧಿಕಾರಿ (ಪಶ್ಚಿಮ)ರವರು ನೀಡಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ.ಗೌರಮ್ಮ ಎಂಬುವವರು ಸೇರ್ಪಡೆ ಅರ್ಜಿಯನ್ನು ಸಲ್ಲಿಸಿದ್ದು, ಮೇಲ್ಮನವಿದಾರರು ಸದರಿ ಸೇರ್ಪಡೆ ಅರ್ಜಿಯ ಮೇಲೆ ತಕರಾರರು ಸಲ್ಲಿಸಲು ಸೇರ್ಪಡೆ ಅರ್ಜಿಯ ಪ್ರತಿಯನ್ನು ಪಡೆದು 2 ತಿಂಗಳ ಕಾಲಾವಕಾಶ ಕೋರಿಕೊಂಡಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

-5-

14.ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2011-12

ಸಾಯಿ ಎಂಟರ್ ಪ್ರೈಸಸ್, ನಂ.159/1, ಸುಖನಿವಾಸ ಎದುರು, ಲಿಟಲ್ ಆಂಜಲ್ಸ್ ಶಾಲೆ ರಸ್ತೆ, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ಹೆಚ್.ಆರ್.ವಿನಾಯಕ್‌ರವರು ಸಾಯಿ ಎಂಟರ್ ಪ್ರೈಸಸ್ (ಅಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಫ್ಸ್) ಉದ್ದಿಮೆ ನಡೆಸಲು 35 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:09-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಸದರಿ ಪ್ರದೇಶವು ವಸತಿ ಪ್ರದೇಶದಲ್ಲಿದ್ದು, ಈ ಬಗ್ಗೆ ಕರ್ನಾಟಕ ರಾಜ್ಯ ವಾಯ ಮಾಲಿನ್ಯ ನಿಯಂತ್ರಣಾ ಮಂಡಳಿಯವರು ನೀಡಿರುವ ನಿರ್ದೇಶನದ ರೀತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

15.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2011-12

ಸಾಯಿ ಬಕ್ಕಲ್, ನಂ.159, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ರಮೇಶ್‌ರವರು ಸಾಯಿ ಬಕ್ಕಲ್ (ಅಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಫ್ಸ್) ಉದ್ದಿಮೆ ನಡೆಸಲು 25 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:08-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಸದರಿ ಪ್ರದೇಶವು ವಸತಿ ಪ್ರದೇಶದಲ್ಲಿದ್ದು, ಈ ಬಗ್ಗೆ ಕರ್ನಾಟಕ ರಾಜ್ಯ ವಾಯ ಮಾಲಿನ್ಯ ನಿಯಂತ್ರಣಾ ಮಂಡಳಿಯವರು ನೀಡಿರುವ ನಿರ್ದೇಶನದ ರೀತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

16.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/38/2011-12

ಶ್ರೀ.ಜಿ.ನಾಗರಾಜು, ನಂ.59, 7ನೇ ಬ್ಲಾಕ್, ಭವಾನಿ ಹೆಚ್.ಬಿ.ಸಿ.ಎಸ್. ಕತ್ತರುಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ಇವರು ತಮ್ಮ ಕಟ್ಟಡಕ್ಕೆ ನೀರು ಒಳಚರಂಡಿ, ವಿದ್ಯುತ್ ಸೌಲಭ್ಯಗಳನ್ನು ಒದಗಿಸುವಂತೆ ಕೋರಿಕೊಂಡಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬನಶಂಕರಿ ಉಪ ವಿಭಾಗರವರು ದಿನಾಂಕ:08-11-2011ರಂದು ನೀಡಿರುವ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳಾದ ಶ್ರೀ.ಆರ್.ಮಧು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಜರಿರುತ್ತಾರೆ. ಪ್ರತಿವಾದಿಗಳು ಮೇಲ್ಮನವಿದಾರರ ಸ್ವತ್ತಿನ ಬಗ್ಗೆ ಸಿವಿಲ್ ನ್ಯಾಯಾಲಯ ಮತ್ತು ಟ್ರಿಬಿನಲ್ ಮುಂದ ವಿವಾಧವಿರುವುದರಿಂದ ರಸ್ತೆ ಕಡಿತವನ್ನು ತಿರಸ್ಕರಿಸಿ ಹಿಂಬರಹ ನೀಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರು ಮೂಲ ಭೂತ ಸೌಲಭ್ಯಗಳನ್ನು ನೀಡುವಂತೆ ಕೋರಿಕೊಂಡಿರುತ್ತಾರೆ.

ನಿರ್ಣಯ:- ಮೇಲ್ಮನವಿದಾರರ ಮತ್ತು ಪ್ರತಿವಾದಿಗಳ ಹೇಳಿಕೆಗಳನ್ನು ಸಮಿತಿಯು ಕೂಲಂಕಷವಾಗಿ ಆಲಿಸಲಾಯಿತು. ಪ್ರತಿವಾದಿಗಳು ಮೂಲ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ವಿಫಲರಾಗಿರುತ್ತಾರೆ. ಸಮಿತಿಯು ಈ ಬಗ್ಗೆ ಕಾರಣವನ್ನು ಕೇಳಲಾಗಿ ಸಂಬಂಧಪಟ್ಟ ಅಧಿಕಾರಿಗಳು ಸದರಿ ಉಪವಿಭಾಗಕ್ಕೆ ಒಂದು ವಾರದ ಹಿಂದೆ ನೇಮಕಗೊಂಡಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಸದರಿ ಅಧಿಕಾರಿಯ ಹೇಳಿಕೆಯನ್ನು ಪರಿಗಣಿಸಿ ಸಮಿತಿಯು ಇನ್ನು ಮುಂದೆ ಈ ರೀತಿಯಾಗದಂತೆ ಎಚ್ಚರ ವಹಿಸುವಂತೆ ಸೂಚಿಸಿರುತ್ತದೆ. ಹಾಗೂ ಮೇಲ್ಮನವಿದಾರರು ಸಲ್ಲಿಸಿರುವ ರಿಟ್ ಪಿಟಿಷನ್ ಸಂಖ್ಯೆ:25924/2011ನ್ನು ಪರಿಶೀಲಿಸಿದಾಗ ಸದರಿ

ಪ್ರಕರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿವಾದಿಯಾಗಿರುವುದಿಲ್ಲ. ಹಾಗೂ ಮೇಲ್ಮನವಿದಾರರು ನಕ್ಷೆಯ ವಿರುದ್ಧ ಕಟ್ಟಡವನ್ನು ನಿರ್ಮಿಸಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸದರಿ ಪ್ರಕರಣದಲ್ಲಿ ಮೇಲ್ಮನವಿದಾರರು ಯಾವುದೇ ನಕ್ಷೆ ಉಲಂಘನೆ ಮಾಡಿಲ್ಲದಿರುವುದರಿಂದ ಹಾಗೂ ನಗರ ಪಾಲಿಕೆಯು ಈ ಪ್ರಕರಣದಲ್ಲಿ ಪ್ರತಿವಾದಿಯಾಗಿಲ್ಲದೇ ಇರುವುದನ್ನು ಮನಗಂಡು ನಂ.59, 7ನೇ ಬ್ಲಾಕ್, ಭವಾನಿ ಹೆಚ್.ಬಿ.ಸಿ.ಎಸ್. ಕತ್ತರುಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ಇಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ನೀರು ಒಳಚರಂಡಿ, ವಿದ್ಯುತ್ ಸೌಲಭ್ಯಗಳನ್ನು ಪಡೆದುಕೊಳ್ಳಲು ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಇದೊಂದು ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>17.ವಿಷಯ:ಸಂಖ್ಯೆ:ಅಸ್ಥಾಸ/(ತೆ)/39/2011-12</u>

ಶ್ರೀ.ಜಿ.ಶ್ರೀನಿವಾಸ್, ನಂ.23, 6ನೇ ಅಡ್ಡರಸ್ತೆ, ಗೋಕುಲ 1ನೇ ಹಂತ, 1ನೇ ಮುಖ, ವಾರ್ಡ್-17 ಈ ಸ್ವತ್ತಿಗೆ ಕಂದಾಯವನ್ನು ವಾಣಿಜ್ಯ ದರದಲ್ಲಿ ನಿಗಧಿಪಡಿಸಿದ್ದು, ವಸತಿ ದರದಲ್ಲಿ ನಿಗಧಿಪಡಿಸಿಕೊಡುವಂತೆ ಕೋರಿ ದಿನಾಂಕ:20-10-2001ರಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಅರ್ಜಿ ನೀಡಿದ್ದರೂ ಸಹ ನನ್ನ ಮನವಿಯನ್ನು ಪರಿಗಣಿಸದೆ ಹಾಲಿ ನಿಗಧಿಪಡಿಸಿರುವ ಕಂದಾಯವು

-6-

ಸಮಂಜಷವಾಗಿರುತ್ತದೆಂದು ಸಹಾಯಕ ಕಂದಾಯ ಅಧಿಕಾರಿ (ಯಶವಂತಪುರ)ರವರು ದಿನಾಂಕ:10-11-2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಹಾಜರಿದ್ದು ಪ್ರತಿವಾದಿಗಳ ಪರವಾಗಿ ಶ್ರೀ.ವೆಂಕಟೇಶ್, ಕಂದಾಯ ಪರಿವೀಕ್ಷಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ತಮ್ಮ ಹೇಳಿಕೆಗಳನ್ನು ಲಿಖಿತವಾಗಿ ನೀಡಿದ್ದು ಅದರಂತೆ ಕಂದಾಯವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

<u>ನಿರ್ಣಯ:</u>- ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳು ಹಾಗೂ ಅಪರ ಆಯುಕ್ತರು (ರಾಜರಾಜೇಶ್ವರಿನಗರ)ರವರ ದಿನಾಂಕ:24-11-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಟಿಪ್ಪಣಿಯಲ್ಲಿ ವಿವರಿಸಿರುವಂತೆ ಪೇಯಿಂಗ್ ಗೆಸ್ಟ್ ನಡೆಸುತ್ತಿರುವುದರಿಂದ ವಸತಿಯೇತರ ಬಾಡಿಗೆ ದರ ನಿಗಧಿಪಡಿಸಿರುವುದು ಕಂಡು ಬರುತ್ತದೆ. ಆದರೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಕೈಪಿಡಿ ಪುಸ್ತಕ 2008-09ನ್ನು ಪರಿಶೀಲಿಸಿದಾಗ ಅನುಭಂದ-1 ಕಲಂ (7)ರಲ್ಲಿ ಪೇಯಿಂಗ್ ಗೆಸ್ಟ್ ನಡೆಸುತ್ತಿದ್ದಲ್ಲಿ ವಸತಿ ವಲಯದ ಬಾಡಿಗೆ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸಬಹುದಾಗಿರುತ್ತದೆ. ಅಲ್ಲದೆ ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:23-12-2011ರಂದು ತಪಾಸಣೆ ಮಾಡಿದಾಗ ಪೇಯಿಂಗ್ ಗೆಸ್ಟಾಗಲಿ, ಅಡಿಗೆ ತಯಾರಿಸುವ ಕೋಣೆಯಾಗಲಿ ಕಂಡು ಬಂದಿರುವುದಿಲ್ಲ. ಹಾಗೂ ತಪಾಸಣಾ ಸಮಯದಲ್ಲಿ ಅಲ್ಲಿ ವಾಸಿಸುತ್ತಿರುವ ಬಾಡಿಗೆದಾರರಲ್ಲಿ ಒಬ್ಬರು ಇಲ್ಲಿ ವಾಸಿಸುತ್ತಿರುವ ಬಾಡಿಗೆದಾರರಲ್ಲಿ ಯಾರದ್ದಾದರು ಹುಟ್ಟಹಬ್ಬ ಇದ್ದಲ್ಲಿ ಸಂದರ್ಶಕರ ಕೊಠಡಿಯಲ್ಲಿ ಆಚರಿಸಿಕೊಳ್ಳುತ್ತಿದ್ದು, ಅಂತಹ ಸಂದರ್ಭಗಳಲ್ಲಿ ಮಾತ್ರ ತಿಂಡಿ ತಿನಿಸುಗಳನ್ನು ಬೇರೆ ಕಡೆಯಿಂದ ತರಿಸಿಕೊಂಡು ಉಪಯೋಗಿಸಿರುತ್ತೇವೆಂಬ ವಿಷಯವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಆದರೆ ಸ್ಥಳದಲ್ಲಿ ಹಾಜರಿದ್ದ ಮೌಲ್ಯ ಮಾಪಕರು ಟೋಕನ್‌ಗಳನ್ನು ವಿತರಿಸಿ ಊಟ/ತಿಂಡಿಗಳನ್ನು ನೀಡುತ್ತಿದ್ದರೆಂಬ ಅಂಶವನ್ನು ತಿಳಿಸಿರುತ್ತಾರೆ. ಆದರೆ ಊಟ/ತಿಂಡಿಯನ್ನು ಅಲ್ಲೇ ತಯಾರಿಸಿ ವಿತರಿಸುತ್ತಿರುವ ಬಗ್ಗೆ ಪುಷ್ಟೀಕರಿಸುವಂತ ಯಾವುದೇ ವಿವರಗಳನ್ನು/ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕಡತದಲ್ಲಾಗಲೀ, ಸಭೆಯಲ್ಲಾಗಲೀ ಮಂಡಿಸಿರುವುದಿಲ್ಲ. ಇದರಿಂದಾಗಿ ಸಮಿತಿಯು ಸದರಿ ಕಟ್ಟಡದಲ್ಲಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿಲ್ಲವೆಂದು ಭಾವಿಸುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಆಸ್ತಿ ಸಂಖ್ಯೆ:23, 6ನೇ ಅಡ್ಡರಸ್ತೆ, ಗೋಕುಲ 1ನೇ ಹಂತ, 1ನೇ ಮುಖ, ವಾರ್ಡ್-17 ಈ ಸ್ವತ್ತಿನ ಅಳತೆ 11025 ಚದರಡಿಗಳಿಗೆ ವಸತಿ ಬಾಡಿಗೆ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>18. ವಿಷಯ:ಸಂಖ್ಯೆ:ಅಸ್ಥಾಸ/(ತೆ)/40/2011-12</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ಮಾನ್ಯ ಆಡಳಿತಗಾರರು ತೆಗೆದುಕೊಂಡ ತೀರ್ಮಾನದಂತೆ ಮಳಿಗೆದಾರರಿಗೆ ಈ ಕಛೇರಿಯಿಂದ ನೋಟೀಸ್ ನೀಡಿರುವ ವಿರುದ್ಧ ವರ್ತಕರ ಸಂಘದವರು ನ್ಯಾಯಾಲಯದಲ್ಲಿ ಮೊರೆ ಹೋದ ಕಾರಣ ನ್ಯಾಯಾಲಯವು ದಿನಾಂಕ:19-12-2007ರಂದು ನೀಡಿರುವ ಆದೇಶದಲ್ಲಿ ಸದರಿ ನೋಟೀಸ್‌ಗೆ ತಡೆಯಾಜ್ಞೆಯನ್ನು ನೀಡಿ ನಗರ ಪಾಲಿಕೆಯು ಕಕ್ಷಿದಾರರಿಗೆ ಯಾವುದೇ ಅವಕಾಶವನ್ನು ನೀಡದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುವುದನ್ನು ತಡೆದು ಅವಕಾಶವನ್ನು ಕಲ್ಪಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು

-7-

ಸೂಚಿಸಿರುವ ಮೇರೆಗೆ ಪರವಾನಗಿದಾರರುಗಳನ್ನು ದಿನಾಂಕ:08-06-2011ರಂದು ಅವರ ಅಹವಾಲುಗಳನ್ನು ಆಯುಕ್ತರ ಮುಂದೆ ಹೇಳಿಕೊಳ್ಳಲು ಅವಕಾಶ ನೀಡಲಾಗಿತ್ತು. ಸದರಿಯವರು ಮೌಖಿಕವಾಗಿ ದರವನ್ನು ಕಡಿಮೆ ಮಾಡಲು ಕೋರಿದ ಮೇರೆಗೆ ಲಿಖಿತ ಹೇಳಿಕೆಗಳನ್ನು ನೀಡಲು ಸೂಚಿಸಲಾಯಿತು. ಆದರೆ ಈವರೆವಿಗೂ ಸದರಿಯವರುಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ದರ ಪರಿಷ್ಕರಣೆಯ ವಿಷಯದ ಬಗ್ಗೆ ಜರೂರಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:26-11-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರುಗಳು ಮತ್ತು ಪ್ರತಿವಾದಿಯಾದ ಶ್ರೀ.ಶಾಂತೇಶ್, ಸಹಾಯಕ ಕಂದಾಯ ಅಧಿಕಾರಿ (ಪ್ರಭಾರ)ರವರು ಹಾಜರಿರುತ್ತಾರೆ. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ಅಹವಾಲುಗಳನ್ನು ಕೇಳಿದ ನಂತರ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

19. ವಿಷಯ:ಸಂಖ್ಯೆ:ಅಸ್ಥಾಸ/(ತೆ)/41/2011-12

ಪೀಣ್ಯ ಕೈಗಾರಿಕಾ ಬಡಾವಣೆ, 2ನೇ ಹಂತ ಷೆಡ್ ನಂ.ಬಿ-202, ಡಿವಿಷನ್ ನಂ.41 ಈ ಸ್ವತ್ತಿನ ಮಾಲೀಕರಾದ ಶ್ರೀ.ಎಸ್.ಬಸವರಾಜಯ್ಯರವರು ಪ್ರಥಮ ಅಪೀಲು ಅಧಿಕಾರಿಗಳು ನಿಗಧಿಪಡಿಸಿ ದಿನಾಂಕ:03-09-2010ರಂದು ಸಂಖ್ಯೆ:ವಾಲೆ/ಪಿಆರ್/ಕೆಟಿಆರ್/89/2010-11, ಎಂ.ಆರ್.50/2010-11ರಲ್ಲಿ ಕಂದಾಯ ಅಧಿಕಾರಿ, ದಾಸರಹಳ್ಳಿ ವಲಯರವರು ನೀಡಿರುವ ವಿಶೇಷ ಸೂಚನಾ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಾಸರಹಳ್ಳಿ)ರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಸ್ವತ್ತಿಗೆ ಕಂದಾಯ ನಿಗಧಿಪಡಿಸಿ ನೀಡಿರುವ ಆದೇಶವ ಕಾನೂನು ಬದ್ಧವಾಗಿರುವುದಿಲ್ಲ. ಕಾನೂನು ರೀತಿ ಕಂದಾಯವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಈಗ ಕಂದಾಯ ನಿಗಧಿಪಡಿಸಿ ನೀಡಿರುವ ಆದೇಶವು ಸಮಂಜಸವಾಗಿರುವುದರಿಂದ ಸದರಿ ಕಂದಾಯವನ್ನೇ ಮುಂದುವರೆಸುವುದೆಂದು ತಿಳಿಸಿರುತ್ತಾರೆ. ಎರಡೂ ಕಡೆಯ ವಾದವನ್ನು ಆಲಿಸಿದ ನಂತರ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.



20. ವಿಷಯ:ಸಂಖ್ಯೆ:ಅಸ್ಥಾಸ/(ತೆ)/42/2011-12

ನಂ.75, ರೆಸಿಡೆನ್ಸಿ ರಸ್ತೆ, ವಾರ್ಡ್-111ರ ಶಿವಶರಣ್ ಇನ್ ಕಾರ್ಪೋರೇಟ್ಸ್‌ನ ಮಾಲೀಕರು ಸದರಿ ಸ್ವತ್ತಿಗೆ ಕಂದಾಯವನ್ನು ಯಾವ ರೀತಿ ನಿಗಧಿಪಡಿಸಿದ್ದಾರೆಂಬ ಬಗ್ಗೆ ನಮಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಹಾಗೂ ನಾವು ಹಲವಾರು ಬಾರಿ ಕಂದಾಯ ಕಡಿಮೆ ಮಾಡಿಕೊಡುವಂತೆ ಮನವಿಯನ್ನು ಸಲ್ಲಿಸಿದ್ದರೂ ಸಹ ಇದುವರೆವಿಗೂ ನಮಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲವೆಂದು ತಿಳಿಸಿ ನ್ಯಾಯಬದ್ಧವಾದ ಕಂದಾಯವನ್ನು ನಿಗಧಿಪಡಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಮೇಲ್ಮನವಿದಾರರ ಪರವಾಗಿ ಹಾಜರಿದ್ದ ಶ್ರೀ.ನಿಖಿಲ್ ರಾಯ್‌ರವರು ಲಿಖಿತವಾಗಿ ಹೇಳಿಕೆಗಳನ್ನು ನೀಡಿದ್ದು, ಅದರಂತೆ ಕಂದಾಯವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಮೇಲ್ಮನವಿದಾರರು ಸದರಿ ಕಟ್ಟಡ ಅಳತೆ 19800 ಚದರ ಅಡಿಗಳಿರುವುದಾಗಿ ಘೋಷಿಸಿಕೊಂಡಿರುತ್ತಾರೆ. ಹಾಗೂ 1997ರಿಂದ ಕಂದಾಯ ಬಾಕಿ ಇರುವುದಾಗಿ ತಿಳಿಸಿರುತ್ತಾರೆ. ಎರಡೂ ಕಡೆಯ ವಾದವನ್ನು ಆಲಿಸಿದ ನಂತರ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

21. ವಿಷಯ:ಸಂಖ್ಯೆ:ಅಸ್ಥಾಸ/(ಕಾ)/43/2011-12

ಶ್ರೀ.ಎಫ್.ಎ.ಜಾಲಗಾರ್, ನಂ.545, 22ನೇ ಎ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70 ಈ ಸ್ವತ್ತಿನಲ್ಲಿ ನಿರ್ಮಾಣ ಮಾಡಿರುವ ಕಟ್ಟಡಕ್ಕೆ ನೀರು, ಒಳಚರಂಡಿ ಸೌಲಭ್ಯ ಮತ್ತು ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಳ್ಳಲು ರಸ್ತೆ ಕಡಿತಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬನಶಂಕರಿ) ಉಪ ವಿಭಾಗರವರು ದಿನಾಂಕ:02-08-2011ರಂದು ಸದರಿಯವರ ಮನವಿಯನ್ನು ತಿರಸ್ಕರಿಸಿದ್ದು, ಸದರಿ ನೋಟೀಸ್‌ನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ಪ್ರತಿನಿಧಿಯಾದ ಶ್ರೀ.ಉಮೇಶ್‌ರವರೊಂದಿಗೆ ಹಾಗೂ ಪ್ರತಿವಾದಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ)ರವರು ಹಾಜರಾಗಿರುತ್ತಾರೆ.

ಮೇಲ್ಮನವಿದಾರರು ತಮ್ಮ ಹೇಳಿಕೆಯಲ್ಲಿ ದಿನಾಂಕ:11-11-2009ರಲ್ಲಿ ರಸ್ತೆ ಕಡಿತಕ್ಕಾಗಿ ಅರ್ಜಿ ಸಲ್ಲಿಸಿರುತ್ತೇವೆ. ಇದುವರೆವಿಗೂ ನಮ್ಮ ಅರ್ಜಿಯ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲ. ಕೆ.ಎಂ.ಸಿ. ಕಾಯ್ದೆ ಕಲಂ 199ರನ್ವಯ ನೀರು ಸರಬರಾಜು ಕೊಳವೆಗಳನ್ನು ಅಳವಡಿಸಿಕೊಳ್ಳಲ್ಲು ಅವಕಾಶ ಕಲ್ಪಿಸಲಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆಯಲ್ಲಿ ರಸ್ತೆ ಅಗೆತಕ್ಕೆ ಅನುಮತಿ ಕೊಡಬಾರದೆಂದು ಎಲ್ಲೂ ನಮೂಡಿಸಿರುವುದಿಲ್ಲ. ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಈಗಾಗಲೇ ಕೆ.ಎ.ಟಿ.ಯಲ್ಲಿ ಪ್ರಕರಣ ಬಾಕಿ ಇರುತ್ತದೆ. ಹಾಗೂ ರಿಟ್ ಪಿಟಿಷನ್ ಸಂಖ್ಯೆ:30529/2004 ಮತ್ತು 12022/2008ಗಳಲ್ಲಿ ಆದೇಶಿಸಿರುವಂತೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ಅನುಮತಿ ನೀಡಬಹುದಾಗಿರುತ್ತದೆ. ಆದುದರಿಂದ ಕೆ.ಎ.ಟಿ.ಯಲ್ಲಿರುವ ಪ್ರಕರಣದ ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ರಸ್ತೆ ಅಗೆತಕ್ಕೆ ಅನುಮತಿ ನೀಡುವಂತೆ ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಉಪ ಕಾನೂನು ಅಧಿಕಾರಿಗಳು ಪ್ರಕರಣವು ನ್ಯಾಯಾಲದಲ್ಲಿರುವುದರಿಂದ ಹಾಗೂ ರಿಟ್ ಪಿಟಿಷನ್ 11578/2008ರಂತೆ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಉಪ ಕಾನೂನು ಅಧಿಕಾರಿಗಳು ನ್ಯಾಯಾಲಯದಲ್ಲಿ ಪ್ರಕರಣವು ದಾಖಲಾಗಿದ್ದಾಗ ಯಾವ ಕಾಯ್ದೆಯಡಿ ರಸ್ತೆ ಅಗೆತಕ್ಕೆ ಪರವಾನಗಿ ನೀಡಲು ಬರುವುದಿಲ್ಲವೆಂದು ತಿಳಿಸಿರುವುದಿಲ್ಲ. ಹಾಗೂ

ಅಪೀಲುದಾರರಿಗೆ ರಸ್ತೆ ಅಗೆತವನ್ನು ತಿರಸ್ಕರಿಸಲಾಗಿದೆಂದು ನೀಡಿರುವ ಪತ್ರದಲ್ಲೂ ಸಹ ಸಕಾರಣಗಳನ್ನು ನೀಡದೆ ನ್ಯಾಯಾಲದಯಲ್ಲಿ ದಾವೆ ಇರುವುದರಿಂದ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿರಸ್ಕರಿಸಿರುವುದನ್ನು ಸಮಿತಿಯು ಗಮನಿಸಿರುತ್ತದೆ.

ನಿರ್ಣಯ:-ದಿನಾಂಕ:03-08-2011ರಂದು ವಿವರವಾದ ಟಿಪ್ಪಣಿಯನ್ನು ಸಮಿತಿಯ ಮುಂದೆ ಮಂಡಿಸುವಂತೆ ತಿಳಿಸಲಾಗಿರುತ್ತದೆ. ಆದರೆ ಇದುವರೆವಿಗೂ ಸಂಬಂಧಪಟ್ಟ ಅಧಿಕಾರಿಗಳು ಟಿಪ್ಪಣಿಯನ್ನು ಸಮಿತಿಯ ಮುಂದೆ ಮಂಡಿಸಲು ವಿಫಲರಾಗಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದಾಗ ಈ ಉಪ ವಿಭಾಗಕ್ಕೆ ನಾನು ಹೊಸದಾಗಿ ನೇಮಕಗೊಂಡಿರುತ್ತೇನೆ. ಹಾಗೂ ಹಿಂದೆ ಇದ್ದಂತಹ ಅಧಿಕಾರಿಯು ಟಿಪ್ಪಣಿಯನ್ನು ತಯಾರಿಸಿ ಕಳುಹಿಸಿರುತ್ತಾರೆ. ಸದರಿ ಟಿಪ್ಪಣಿಯು ಆಕಸ್ಮಿಕವಾಗಿ ಕಾನೂನು ಕೋಶಕ್ಕೆ ಹೋಗಿರುತ್ತದೆಂಬ ವಿಷಯವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಸದರಿ ಅಧಿಕಾರಿಯ ಮನವಿಯನ್ನು ಪರಿಗಣಿಸಿ ಇನ್ನು ಮುಂದೆ ಪುನರಾರ್ತನೆಯಾಗದಂತೆ ಎಚ್ಚರಿಕೆ ನೀಡಿ ಕಾಲಮಿತಿಯಲ್ಲಿ ಸಮಿತಿಯ ಮುಂದೆ ಕಡತವನ್ನು ಮಂಡಿಸುವಂತೆ ಸೂಚಿಸುತ್ತಾ, ಸಮಿತಿಯು ಮೇಲ್ಮನವಿದಾರರ ವಾದ ಹಾಗೂ ರಿಟ್ ಪಿಟಿಷನ್ ಸಂಖ್ಯೆ:30529/2004 ಮತ್ತು 12022/2008ಗಳ ಆದೇಶವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಒದಗಿಸುವುದು ಅತಿ ಅವಶ್ಯಕವಾಗಿದ್ದು ಅಪೀಲುದಾರರು ನಂ.545, 22ನೇ ಎ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70 ಈ ಸ್ವತ್ತಿನಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಕೆ.ಎ.ಟಿ.ಯಲ್ಲಿರುವ ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಈ ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.



22. ವಿಷಯ:ಸಂಖ್ಯೆ:ಅಸ್ಥಾಸ/(ಖಾ)/44/2011-12

ಶ್ರೀ.ಪಿ.ವಿನ್ಸೆಂಟ್‌ರವರು ಸ್ವತ್ತಿನ ಸಂಖ್ಯೆ:13, 13/1, 13/2 ಮತ್ತು 13/3, 1ನೇ ಮುಖ್ಯರಸ್ತೆ, ಜಕ್ಕಸಂದ್ರ, ವಾರ್ಡ್-151ರ ಸ್ವತ್ತುಗಳ ಖಾತಾ ರದ್ದುಪಡಿಸಲು ಕೋರಿದ್ದು, ಸದರಿಯವರ ಮನವಿಯನ್ನು ಸಹ ಕಂದಾಯ ಅಧಿಕಾರಿ, ಕೋರಮಂಗಲ ಉಪ ವಲಯರವರು ತಿರಸ್ಕರಿಸಿ ದಿನಾಂಕ:24-10-2011ರಂದು ನೀಡಿರುವ ಹಿಂಬರಹದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಮೇಲ್ಮನವಿದಾರರು ತಮ್ಮ ಹೇಳಿಕೆಗಳನ್ನು ನೀಡುತ್ತಾ ಪ್ರತಿವಾದಿಗಳು ನೀಡಿರುವ ಹಿಂಬರಹವು ಕಾನೂನು ಬದ್ಧವಾಗಿರುವುದಿಲ್ಲ ಹಾಗೂ ಪ್ರತಿವಾದಿಗಳು ಹಿಂಬರಹದಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ತೀರ್ಮಾನಿಸಿಕೊಳ್ಳಿ ಎಂದು ತಿಳಿಸಿರುವುದು ಸರಿಯಿರುವುದಿಲ್ಲ.

ಪ್ರತಿವಾದಿಗಳು ತಮ್ಮ ಹೇಳಿಕೆಗಳನ್ನು ನೀಡುತ್ತಾ, ಮೇಲ್ಮನವಿದಾರರು ಕೆ.ಎಂ.ಸಿ.ಕಾಯ್ದೆ ಕಲಂ114ಎ ರಡಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದು, ಅದರಂತೆ ಆದೇಶವನ್ನು ಹೊರಡಿಸಲಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ ಕಲಂ 114ಎ ರಡಿಯಾಗಿರುವ ಆದೇಶವನ್ನು ಈ ಪ್ರಾಧಿಕಾರವು ತೆಗೆದುಕೊಳ್ಳಲು ಅಧಿಕಾರವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ಪ್ರಕರಣವನ್ನು ಹೆಚ್ಚಿನ ವಾದ ಮಂಡನೆಗಾಗಿ ಮುಂದೂಡುತ್ತಾ, ಮೇಲ್ಮನವಿದಾರರ ಮನವಿಯ ಮೇರೆಗೆ ಮಧ್ಯಂತರ ಆದೇಶವನ್ನು ಹೊರಡಿಸಲು ಕಾಯ್ದಿರಿಸಿದೆ.

**ನಿರ್ಣಯ**:- ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ಹೇಳಿಕೆಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಮೇಲ್ಮನವಿದಾರರು ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸದೇ ಇದ್ದರೂ ಸಹ ಸಂಬಂಧಪಟ್ಟ ಪ್ರಾಧಿಕಾರವು ತನ್ನಷ್ಟಕ್ಕೆ ತಾನೇ ಪುನರ್ ಪರಿಶೀಲನೆ ನಡೆಸಿ ಖಾತಾ ವರ್ಗಾಯಿಸಿರುವುದಾಗಿ ಸಮಿತಿಯು ಅಭಿಪ್ರಾಯಕ್ಕೆ ಬಂದಿರುತ್ತದೆ. ಅಲ್ಲದೆ ಕೆ.ಎಂ.ಸಿ.ಕಾಯ್ದೆ ಕಲಂ 114ಎ ರಡಿ ಪುನರ್ ಪರೀಲನೆ ಮಾಡುವಾಗ ವಾದಿ ಮತ್ತು ಪ್ರತಿವಾದಿಗಳಿಗೆ ಹೇಳಿಕೆಗಳನ್ನು ನೀಡಲು ಅವಕಾಶವನ್ನು ಕಲ್ಪಿಸಿ ನಂತರ ಆದೇಶ ಹೊರಡಿಸಬೇಕಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸಮಿತಿಯ ಮುಂದೆ ಮೂಲ ಕಡತವನ್ನು ಮಂಡಿಸಲು ವಿಫಲರಾಗಿರುತ್ತಾರೆ. ಆದುದರಿಂದ ಆಯುಕ್ತರು ಸಮಿತಿಯ ಮುಂದೆ ಮೂಲ ಕಡತವನ್ನು ಮಂಡಿಸಿ ಸಮಿತಿಯು ಅಂತಿಮ ತೀರ್ಮಾನ ಕೈಗೊಳ್ಳುವವರೆಗೂ ಖಾತಾ ಬದಲಾವಣೆ ಮಾಡಿ ದಿನಾಂಕ:24-10-2011ರಂದು ನೀಡಿರುವ ಹಿಂಬರಹಕ್ಕೆ ತಡೆಯಾಜ್ಞೆ ನೀಡುತ್ತಾ, ಸದರಿ ಸ್ವತ್ತಿನ ಖಾತಾವನ್ನು 2004ರಲ್ಲಿರುವಂತೆ ಶ್ರೀ.ಪಿ.ವಿನ್ಸೆಂಟ್‌ರವರ ಹೆಸರಿನಲ್ಲೇ ಮುಂದುವರೆಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

23. ವಿಷಯ:ಸಂಖ್ಯೆ:ಅಸ್ಥಾಸ/(ಕಾ)/45/2011-12

ಎಸ್.ವಿ.ಸಿ.ಕೆ. ಎಜುಕೇಷನ್ ಇನ್‌ಸ್ಟಿಟ್ಯೂಷನ್‌ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬನಶಂಕರಿ ಉಪ ವಿಭಾಗರವರು ದಿನಾಂಕ:18-08-2011ರಂದು ನೀಡಿರುವ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಸದರಿ ಪ್ರಕರಣವನ್ನು ಆಯುಕ್ತರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಮತ್ತು ಸಂಬಂಧಪಟ್ಟ ವಾರ್ಡಿನ ಸದಸ್ಯರೊಂದಿಗೆ ಚರ್ಚಿ ತೀರ್ಮಾನ ಕೈಗೊಳ್ಳುವುದೆಂದು ತೀರ್ಮಾನಿಸಿ ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:27-01-2012ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ) |
| 04 | ಬಿ.ಎಸ್.ಆನಂದ | ಸದಸ್ಯರು | |
| 05 | ಎಂ.ವಸಂತಕುಮಾರಿ | ಸದಸ್ಯರು | |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12
ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

**ನಿರ್ಣಯ**:-ಆಯುಕ್ತರ ದಿನಾಂಕ:19-03-2011ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ ಸದರಿ ಪ್ರಕರಣದಲ್ಲಿ ಈಗಾಗಲೇ ಸರ್ಕಾರ ಹಂತದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಆದೇಶವಾಗಿರುವ ಹಿನ್ನೆಲೆಯಲ್ಲಿ ಮೇಲ್ಮನವಿದಾರರ ಮೇಲ್ಮನವಿಯನ್ನು ವಜಾಗೊಳಿಸುತ್ತಾ, ನಿಯಮಾನುಸಾರ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ನಿರ್ಣಯ:- ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಯಾವುದೇ ಸಭೆಗೆ ಹಾಜರಾಗಿರುವುದಿಲ್ಲ ಹಾಗೂ ತಮ್ಮ ಪರವಾಗಿ ಪ್ರಥಮ ದರ್ಜೆ ಸಹಾಯಕರು ಅಥವಾ ಕಂದಾಯ ಪರಿವೀಕ್ಷಕರನ್ನು ಕಳುಹಿಸಿರುತ್ತಾರೆ. ಅಧಿಕಾರಿಗಳ ಪರವಾಗಿ ಹಾಜರಿರುವವರು ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ವಿವರವನ್ನು ನೀಡಲು ವಿಫಲರಾಗಿರುವುದಲ್ಲದೆ ನಮಗೇನು ತಿಳಿದಿರುವುದಿಲ್ಲವೆಂದು ಸಭೆಯ ಮುಂದೆ ತಿಳಿಸಿರುತ್ತಾರೆ. ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಮೂಲ ಕಡತವನ್ನು ಇದುವರೆವಿಗೂ ಸಮಿತಿಯ ಮುಂದೆ ಮಂಡಿಸಲು ವಿಫಲರಾಗಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಿ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳುವುದು. ಹಾಗೂ ಸದರಿ ಸ್ವತ್ತಿನ ಖಾತಾವನ್ನು ಶ್ರೀಮತಿ.ಲಕ್ಷ್ಮಿದೇವಮ್ಮನವರ ಹೆಸರಿಗೆ ನೋಂದಾಯಿಸಿಕೊಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ

-2-

ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. 1, 6 ಮತ್ತು 7ನೇ ಮೇಲ್ಮನವಿದಾರರಗಳು ಪರವಾಗಿ ಅವರ ವಕೀಲರಗಳು ಹಾಜರಾಗಿರುತ್ತಾರೆ. ಸಹಾಯಕ ನಿರ್ದೇಶಕರು, ನಗರ ಯೋಜನೆ (ಪಶ್ಚಿಮ)ರವರು ಹಾಜರಾಗಿರುತ್ತಾರೆ. ಹಾಜರಿದ್ದ 3 ಮತ್ತು 4ನೇ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿರುತ್ತಾರೆ. ಹಾಜರಿದ್ದ 6 ಮತ್ತು 7ನೇ ಮೇಲ್ಮನವಿದಾರರು ತಕರಾರನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿರುತ್ತಾರೆ. 6 ಮತ್ತು 7ನೇ ಮೇಲ್ಮನವಿದಾರರುಗಳು ತಕರಾರನ್ನು ಸಲ್ಲಿಸಲು ಹಿಂದಿನ ವಕೀಲರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯದೇ ಇರುವುದರಿಂದ ತಕರಾರರು ಸಲ್ಲಿಸಲು ಕಾನೂನಿನಲ್ಲಿ ಅವಕಾಶವಿಲ್ಲದಿರುವುದರಿಂದ ಅವರಿಗೆ ತಕರಾರರು ಸಲ್ಲಿಸಲು ಅವಕಾಶ ನೀಡಬಾರದೆಂದು 1ನೇ ಮೇಲ್ಮನವಿದಾರರು ಮನವಿ ಮಾಡಿಕೊಂಡಿರುತ್ತಾರೆ. ವಾದ ಮಂಡನೆಗಾಗಿ ಪ್ರಕರಣವನ್ನು ಮುಂದೂಡಿದೆ.

04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ: 01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ನಿರ್ಣಯ:- ಕಡತವನ್ನು ಹಾಗೂ ಮೇಲ್ಮನವಿದಾರರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳು ಸಮಿತಿಯ ಸಭೆಗೆ ಹಾಜರಾಗಿ ಯಾವುದೇ ಹೇಳಿಕೆಗಳನ್ನು ನೀಡಲು ವಿಫಲರಾಗಿರುವುದರಿಂದ ಪ್ರತಿ ವಾದಿಗಳ ಹೇಳಿಕೆಗಳು ಏನೂ ಇಲ್ಲವೆಂದು ಸಮಿತಿಯು ಭಾವಿಸಿ ಮೇಲ್ಮನವಿದಾರರು ತಮ್ಮ ಲಿಖಿತ ಹೇಳಿಕೆಗಳಲ್ಲಿ ಕೋರಿಕೊಂಡಿರುವಂತೆ 1050 ಚದರಡಿಗಳನ್ನು ಸ್ವಂತಕ್ಕೆ (ವಸತಿಯೇತರ), 100 ಚದರಡಿಗಳನ್ನು

ಬಾಡಿಗೆಗೆ (ವಸತಿಯೇತರ) ಹಾಗೂ 700 ಚರಡಿಗಳನ್ನು ಸ್ವಂತಕ್ಕೆ (ವಸತಿ) ಆಧಾರದ ಮೇಲೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಕಂದಾಯವನ್ನು ಪುನರ್ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

05. ವಿಷಯ:ಸಂಖ್ಯೆ:ಅಸ್ಥಾಸ/(ಖಾ)/28/2011-12

ಶ್ರೀ.ಕೆ.ವಿಜಯಕುಮಾರ್, ನಂ.171/2, ತೂಬರಹಳ್ಳಿ, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು-66 ಇವರು ದಿನಾಂಕ:16-09-2011ರಂದು ಸಮಿತಿಯ ಮುಂದೆ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರು ದಿನಾಂಕ:08-08-2011ರಂದು ಹೊರಡಿಸಿರುವ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಗೂ 3ನೇ ಪ್ರತಿವಾದಿಯ ಪರವಾಗಿ ವಕೀಲರು ಹಾಜರಿದ್ದು ತಕರಾರರನ್ನು ಸಲ್ಲಿಸಿರುತ್ತಾರೆ. 4ನೇ ಪ್ರತಿವಾದಿಗಳು ತಮ್ಮ ವಕೀಲರೊಂದಿಗೆ ಹಾಜರಿದ್ದು ತಕಾರರನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿರುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಮುಂದಿನ ಸಭೆಗೆ ಗೈರು ಹಾಜರಾದಲ್ಲಿ ಆಯುಕ್ತರ ಮುಖಾಂತರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು.

06. ವಿಷಯ:ಸಂಖ್ಯೆ:ಅಸ್ಥಾಸ/(ಜಾ)/34/2011-12

ಮೆ॥ ಜೈ ಜವಾನ್ ಜಾಹೀರಾತುದಾರರಿಗೆ ಪೈಲೆಟ್ ಯೋಜನೆಯಡಿಯಲ್ಲಿ ಪಾಲಿಕೆಯ ವಿವಿಧ 04 ಸ್ಥಳಗಳಲ್ಲಿ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ 24*12 ಅಡಿ ಅಳತೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು 05 ವರ್ಷಗಳ ಕಾಲಾವಧಿಗೆ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು ದಿನಾಂಕ:16-02-2011ರಂದು ಅವಧಿಯು ಮುಕ್ತಾಯಗೊಂಡಿದ್ದು ಮತ್ತೆ ಮುಂದಿನ 05 ವರ್ಷಗಳ ಅವಧಿಗೆ 24x12 ಅಡಿ ಅಳತೆಯಿಂದ 15x30 ಅಡಿ ಅಳತೆಗೆ ಹೆಚ್ಚಿಸಿಕೊಳ್ಳಲು ಅನುಮತಿ ನೀಡುವಂತೆ ಜಾಹೀರಾತುದಾರರು ಕೋರಿಕೊಂಡಿರುತ್ತಾರೆ. ಅನುಮತಿ ನೀಡಲಾಗಿದ್ದ 04 ರಸ್ತೆಗಳಲ್ಲಿ ರಾಜ್‌ಭವನ್ ರಸ್ತೆಯು ಜಾಹೀರಾತು ಬೈಲಾ-2006ರ ಪ್ರಕಾರ ''ಎ" ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳಲು ತಿಳಿಸಿದ್ದು, ಸದರಿಯವರು ಬದಲಿ ಸ್ಥಳದಲ್ಲಿ ನೀರಿನ ಕಾರಂಜಿಯನ್ನು ಅಳವಡಿಸಿಕೊಳ್ಳದೆ ಉಲ್ಲಂಘನೆ ಮಾಡಿರುವುದರಿಂದ ಸದರಿಯವರ ಮನವಿಯನ್ನು ತಿರಸ್ಕರಿಸುತ್ತಾ, ಅವಧಿ ಮುಗಿದ ನಂತರ ಜಾಹೀರಾತು ಪ್ರದರ್ಶಿಸುತ್ತಿರುವ ಅವಧಿಗೆ ದಿನಾಂಕ:17-02-2011ರಿಂದ 20-08-2011ರವರೆಗೂ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು ರೂ.2,08,998/-ಗಳನ್ನು ಪಾವತಿಸುವಂತೆದಿನಾಂಕ:24-08-2011ರಂದು ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:20-08-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿದ್ದು, ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಇದುವರೆವಿಗೂ ನನಗೆ ನೋಟೀಸ್ ಜಾರಿ ಮಾಡಿಲ್ಲದೆ ಇರುವುದರಿಂದ ಹಿಂದೆ ನಡೆದಿರುವ ವಿಚಾರಣಾ ದಿನಾಂಕಗಳಂದು ಹಾಜರಾಗಲು ನನಗೆ ಸಾಧ್ಯವಾಗಿರುವುದಿಲ್ಲ. ಈ ವಿಚಾರಣೆಗೂ ಕೂಡ ನನಗೆ ಸಂಬಂಧಪಟ್ಟ ಅಧಿಕಾರಿಗಳು



ನೋಟೀಸ್ ನೀಡಿರುವುದಿಲ್ಲ. ನಾನೇ ಖುದ್ದಾಗಿ ಬಂದು ಸಮಿತಿಯಲ್ಲಿ ವಿಚಾರಿಸಿದಾಗ ದಿನಾಂಕ:27-01-2012ರಂದು ಮಧ್ಯಾಹ್ನ 3-00ಗಂಟೆಗೆ ವಿಚಾರಣೆ ನಡೆಯುತ್ತದೆಂದು ತಿಳಿಸಿರುವ ಮೇರೆಗೆ ಇಂದಿನ ಸಭೆಗೆ ಹಾಜರಾಗಿರುತ್ತೇನೆಂದು ತಿಳಿಸುತ್ತಾ, ನಾನು ನಿವೃತ್ತ ಮಾಜಿ ಸೈನಿಕಾನಗಿದ್ದು, ಜೀವನೋಪಾಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 4 ಸ್ಥಳಗಳಲ್ಲಿ ಪೈಲೆಟ್ ಯೋಜನೆಯಡಿ ನೀರಿನ ಜಲಪಾತಗಳನ್ನು ನಿರ್ಮಿಸಿ ಅದರ ಮೇಲೆ ಜಾಹೀರಾತು ಮಾಡಲು 5 ವರ್ಷಗಳ ಅವಧಿಗೆ ಪಡೆದಿದ್ದೆನು. ಆದರೆ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ನನ್ನ ಮನವಿಯನ್ನು ತಿರಸ್ಕರಿಸಿ ಟೆಂಡರ್ ಮುಖೇನ ನೀಡುವಂತೆ ತೀರ್ಮಾನಿಸಿರುತ್ತದೆ. ಆದರೆ ನಾನು ನನ್ನ ಎಲ್ಲಾ ಸಂಪಾದನೆಯನ್ನು ಸದರಿ ಯೋಜನೆಗೆ ತೊಡಗಿಸಿದ್ದು ಇದುವರೆವಿಗೂ ನನಗೆ ನಾನು ತೊಡಗಿಸಿರುವ ಹಣವೂ ಸಹ ಬಂದಿರುವುದಿಲ್ಲ. ಆದುದರಿಂದ ನನಗೆ ಮತ್ತೆ 5 ವರ್ಷಗಳ ಅವಧಿಗೆ ನೀರಿನ ಕಾರಂಜಿಯನ್ನು ಅಳವಡಿಸಿ ಅದರ ಮೇಲೆ ಜಾಹೀರಾತು ಫಲಕಗಳನ್ನು ಪ್ರದರ್ಶಿಲು ನವೀಕರಿಸಿಕೊಡುವಂತೆ ಹಾಗೂ ನಾನು ಹೇಳಿಕೆಗಳನ್ನು ಲಿಖಿತವಾಗಿ ನೀಡುತ್ತಿದ್ದು ಅದರಂತೆ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡ ಹಿನ್ನೆಲೆಯಲ್ಲಿ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

**ನಿರ್ಣಯ**:- ಆಯುಕ್ತರ ಟಿಪ್ಪಣಿ ಮತ್ತು ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಲಾಯಿತು. ದಿನಾಂಕ:20-08-2011ರಂದು ನೀಡಿರುವ ಹಿಂಬರಹದಲ್ಲಿ ತಿಳಿಸಿರುವ ಜಾಹೀರಾತು ತೆರಿಗೆಯನ್ನು ಈಗಾಗಲೇ ಮೇಲ್ಮನವಿದಾರರು ಪಾವತಿಸಿರುವುದು ಹಾಗೂ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:18-10-2011ರ ನಿರ್ಣಯದಲ್ಲಿ ಕೆಲವೊಂದು ಜಾಹೀರಾತುದಾರರುಗಳು ಪ್ರದರ್ಶಿಸಿರುವ ಜಾಹೀರಾತು ಫಲಕಗಳನ್ನು ಮುಂದುವರೆಸಲು ನಿರ್ಣಯಿಸಿರುವುದು ಕಂಡು ಬರುತ್ತದೆ. ಅಲ್ಲದೆ ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿ ತಮ್ಮ ಪ್ರತಿವಾದಗಳನ್ನು ಮಂಡಿಸಿಲ್ಲದಿರುವುದನ್ನು ಗಮನಿಸಿದಾಗ ಪ್ರತಿವಾದಿಗಳ ಹೇಳಿಕೆಗಳು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಏನೂ ಇರುವುದಿಲ್ಲವೆಂದು ಸಮಿತಿಯು ನಿರ್ಧರಿಸುತ್ತದೆ.

ಮೇಲ್ಮನವಿದಾರರು ನಿವೃತ್ತ ಮಾಜಿ ಸೈನಿಕರಾಗಿದ್ದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ಸರ್ಕಾರದ ಅಧೀನ ಸಂಸ್ಥೆಗಳು ಮಾಜಿ ಸೈನಿಕರಿಗೆ ಹಲವಾರು ವಿಶೇಷ ಯೋಜನೆಗಳು ಹಾಗೂ ಕೆಲವೊಂದು ಯೋಜನೆಗಳಲ್ಲಿ ರಿಯಾಯಿತಿ ನೀಡಿ ಸ್ವಂತ ಉದ್ಯೋಗ ಕಲ್ಪಿಸಿಕೊಳ್ಳಲು ನೆರವು ನೀಡುತ್ತಿರುವುದು ತಿಳಿದ ವಿಷಯವಾಗಿರುತ್ತದೆ. ಅಲ್ಲದೆ ಮೇಲ್ಮನವಿದಾರರು

ಇದುವರೆವಿಗೂ ಸಮರ್ಪಕವಾಗಿ ಜಾಹೀರಾತು ತೆರಿಗೆಯನ್ನು ಪಾವತಿಸಿರುವುದಲ್ಲದೆ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:18-10-2011ರ ನಿರ್ಣಯದಲ್ಲಿ ಸದರಿ ಪ್ರದೇಶದಲ್ಲಿ ಪ್ರದರ್ಶಿಸಿರುವ ಜಾಹೀರಾತು ಫಲಕಗಳನ್ನು ಟೆಂಡರ್ ಇಲ್ಲದೆ ಮುಂದುವರೆಸುವಂತೆ ನಿರ್ಣಯಿಸಿರುವುದು ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳಲ್ಲಿ ಕಂಡು ಬರುತ್ತದೆ. ಹಾಗೂ ರಾಜ್‌ಭವನ್ ರಸ್ತೆಯಲ್ಲಿರುವ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ಥಳಾಂತರಿಸಿಕೊಳ್ಳುವುದಾಗಿ ಮೇಲ್ಮನವಿದಾರರು ಒಪ್ಪಿಕೊಂಡಿರುತ್ತಾರೆ. ಆದುದರಿಂದ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಈಗಾಗಲೇ ನಿಗಧಿಪಡಿಸಿರುವ ನೆಲ ಬಾಡಿಗೆಯ ಆಧಾರದ ಮೇಲೆಯೇ ಮುಂದೆ ಹೊಸ ಜಾಹೀರಾತು ಬೈಲಾ ನೀತಿಗೆ ಬದ್ಧರಾಗುವ ಷರತ್ತಿಗೊಳಪಡಿಸಿ ದಿನಾಂಕ:27-01-2011ರಿಂದ ಮುಂದಿನ 3 ವರ್ಷಗಳ ಅವಧಿಗೆ ಮುಂದುವರೆಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ಅ)/36/2011-12

ಸಾಯಿ ಎಂಟರ್ ಪ್ರೈಸಸ್, ನಂ.159/1, ಸುಖನಿವಾಸ ಎದುರು, ಲಿಟಲ್ ಆಂಜಲ್ಸ್ ಶಾಲೆ ರಸ್ತೆ, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ಹೆಚ್.ಆರ್.ವಿನಾಯಕ್‌ರವರು ಸಾಯಿ ಎಂಟರ್ ಪ್ರೈಸಸ್ (ಅಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 35 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:09-11-2011ರ ಟಿಪ್ಪಣಿ.

**ನಿರ್ಣಯ**:- ಆಯುಕ್ತರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಪ್ರತಿವಾದಿಗಳು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರ ವರದಿಯ ಪ್ರಕಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರ ಲಿಖಿತ ಹೇಳಿಕೆಗಳ ಪ್ರಕಾರ ಸದರಿ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಬಂದ ಪ್ರದೇಶವಾಗಿದ್ದು, ಈ ಹಿಂದೆ ಸಿ.ಎಂ.ಸಿ. ವ್ಯಾಪ್ತಿಯಲ್ಲಿರುವಾಗಲೇ ಪರವಾನಗಿ ಪಡೆದು ಉದ್ದಿಮೆಯನ್ನು ನಡೆಸುತ್ತಿರುವುದು ಹಾಗೂ ಕಡತದಲ್ಲಿ ಲಗತ್ತಿಸಿರುವ ಪರವಾನಗಿ ಪ್ರತಿಯನ್ನು ಪರಿಶೀಲಿಸಿದಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬಂದ ನಂತರವೂ ಸಹ ಪರವಾನಗಿಯನ್ನು ನಗರ ಪಾಲಿಕೆಯು ನವೀಕರಿಸಿಕೊಟ್ಟಿರುವುದು ಕಂಡು ಬರುತ್ತದೆ. ಸದರಿ ಸಂಸ್ಥೆಯು ಪ್ರಾರಂಭವಾಗಿ ಸುಮಾರು 10 ವರ್ಷಗಳು ಕಳೆದಿದ್ದು ಹಾಲಿ 30 ಜನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಏಕಾಏಕಿ ಸ್ಥಳಾಂತರಿಸಿಕೊಳ್ಳಿ ಎಂದರೆ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಹಾಗೂ ನಾವು ಹೂಡಿರುವ ಬಂಡವಾಳಕ್ಕೆ ಧಕ್ಕೆ ಉಂಟಾಗುವುದರಿಂದ ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಕನಿಷ್ಠ 5 ವರ್ಷಗಳ ಕಾಲಾವಕಾಶವನ್ನು ನೀಡುವಂತೆ ಹಾಗೂ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ನ್ಯೂನ್ಯತೆಗಳನ್ನು ಸರಿಪಡಿಕೊಡಿರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ.



ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ ಆಗ್ಗಿಂದಾಗ್ಗೆ ಪರಿಶೀಲನೆ ಮಾಡುವುದು. ಹಾಗೂ ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮುಚ್ಚಳಿಕೆ ಬರೆದುಕೊಟ್ಟಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಹಿತದೃಷ್ಟಿಯನ್ನು ಸಮಿತಿಯು ಗಣನೆಗೆ ತೆಗೆದುಕೊಂಡು ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಮೇಲ್ಮನವಿದಾರರಿಗೆ 5 ವರ್ಷಗಳ ಕಾಲಾವಕಾಶವನ್ನು ನೀಡಿ ಅಲ್ಲಿಯವರೆಗೆ ಪರವಾನಗಿಯನ್ನು ನವೀಕರಿಸಿಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

08.ವಿಷಯ:ಸಂಖ್ಯೆ:ಅಸ್ಥಾಸ/(ಅ)/37/2011-12

ಸಾಯಿ ಬಕ್ಕಲ್, ನಂ.159, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ರಮೇಶ್‌ರವರು ಸಾಯಿ ಬಕ್ಕಲ್ (ಅಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 25 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:08-11-2011ರ ಟಿಪ್ಪಣಿ.

**ನಿರ್ಣಯ**:- ಆಯುಕ್ತರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಪ್ರತಿವಾದಿಗಳು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರ ವರದಿಯ ಪ್ರಕಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರ ಲಿಖಿತ ಹೇಳಿಕೆಗಳ ಪ್ರಕಾರ ಸದರಿ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಬಂದ ಪ್ರದೇಶವಾಗಿದ್ದು, ಈ ಹಿಂದೆ ಸಿ.ಎಂ.ಸಿ. ವ್ಯಾಪ್ತಿಯಲ್ಲಿರುವಾಗಲೇ ಪರವಾನಗಿ ಪಡೆದು ಉದ್ದಿಮೆಯನ್ನು ನಡೆಸುತ್ತಿರುವುದು ಹಾಗೂ ಕಡತದಲ್ಲಿ ಲಗತ್ತಿಸಿರುವ ಪರವಾನಗಿ

ಪ್ರತಿಯನ್ನು ಪರಿಶೀಲಿಸಿದಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬಂದ ನಂತರವೂ ಸಹ ಪರವಾನಗಿಯನ್ನು ನಗರ ಪಾಲಿಕೆಯು ನವೀಕರಿಸಿಕೊಟ್ಟಿರುವುದು ಕಂಡು ಬರುತ್ತದೆ. ಸದರಿ ಸಂಸ್ಥೆಯು ಪ್ರಾರಂಭವಾಗಿ ಸುಮಾರು 10 ವರ್ಷಗಳು ಕಳೆದಿದ್ದು ಹಾಲಿ 30 ಜನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಏಕಾಏಕಿ ಸ್ಥಳಾಂತರಿಸಿಕೊಳ್ಳಿ ಎಂದರೆ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಹಾಗೂ ನಾವು ಹೂಡಿರುವ ಬಂಡವಾಳಕ್ಕೆ ಧಕ್ಕೆ ಉಂಟಾಗುವುದರಿಂದ ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಕನಿಷ್ಠ 5 ವರ್ಷಗಳ ಕಾಲಾವಕಾಶವನ್ನು ನೀಡುವಂತೆ ಹಾಗೂ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ನ್ಯೂನ್ಯತೆಗಳನ್ನು ಸರಿಪಡಿಕೊಡಿರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ ಆಗ್ಗಿಂದಾಗ್ಗೆ ಪರಿಶೀಲನೆ ಮಾಡುವುದು. ಹಾಗೂ ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮುಚ್ಚಳಿಕೆ ಬರೆದುಕೊಟ್ಟಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಹಿತದೃಷ್ಟಿಯನ್ನು ಸಮಿತಿಯು ಗಣನೆಗೆ ತೆಗೆದುಕೊಂಡು ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಮೇಲ್ಮನವಿದಾರರಿಗೆ 5 ವರ್ಷಗಳ ಕಾಲಾವಕಾಶವನ್ನು ನೀಡಿ ಅಲ್ಲಿಯವರೆಗೆ ಪರವಾನಗಿಯನ್ನು ನವೀಕರಿಸಿಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

09. ವಿಷಯ:ಸಂಖ್ಯೆ:ಅಸ್ಥಾಸ/(ತೆ)/41/2011-12

ಪೀಣ್ಯ ಕೈಗಾರಿಕಾ ಬಡಾವಣೆ, 2ನೇ ಹಂತ ಷೆಡ್ ನಂ.ಬಿ-202, ಡಿವಿಷನ್ ನಂ.41 ಈ ಸ್ವತ್ತಿನ ಮಾಲೀಕರಾದ ಶ್ರೀ.ಎಸ್.ಬಸವರಾಜಯ್ಯರವರು ಪ್ರಥಮ ಅಪೀಲು ಅಧಿಕಾರಿಗಳು ನಿಗಧಿಪಡಿಸಿ ದಿನಾಂಕ:03-09-2010ರಂದು ಸಂಖ್ಯೆ:ವಾಲೆ/ಪಿಆರ್/ಕೆಟಿಆರ್/89/2010-11, ಎಂ.ಆರ್.50/2010-11ರಲ್ಲಿ ಕಂದಾಯ ಅಧಿಕಾರಿ, ದಾಸರಹಳ್ಳಿ ವಲಯರವರು ನೀಡಿರುವ ವಿಶೇಷ ಸೂಚನಾ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಾಸರಹಳ್ಳಿ)ರವರ ಟಿಪ್ಪಣಿ.

**ನಿರ್ಣಯ**:- ಕಡತವನ್ನು ಪರಿಶೀಲಿಸಲಾಯಿತು. ಹಾಗೂ ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ವಾದಗಳನ್ನು ಆಲಿಸಿದ ನಂತರ ಸದರಿ ಪ್ರಕರಣದಲ್ಲಿ ಅಧಿಕಾರಿಗಳು ಕಂದಾಯವನ್ನು ನಿಗಧಿಪಡಿಸುವಾಗ ಮಾನದಂಡಗಳನ್ನು ಗಾಳಿಗೆ ತೂರಿ ಕಂದಾಯವನ್ನು ನಿಗಧಿಪಡಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೆ ಪ್ರಥಮ ಅಪೀಲು ಅಧಿಕಾರಿಗಳು ಸಹ ವಿಚಾರಣೆ ನಡೆಸಿ 17 ವರ್ಷಗಳಿಗೆ ಕಂದಾಯ ನಿಗಧಿಪಡಿಸಿರುವುದು ಹಾಸ್ಯಾಸ್ಪದಾವಗಿ ಕಂಡು ಬರುತ್ತದೆ. ಕೆ.ಎಂ.ಸಿ.ಕಾಯ್ದೆ ಕಲಂ 143ರ ಪ್ರಕಾರ ಕಂದಾಯವನ್ನು ನಿಗಧಿಪಡಿಸದೆ ತಮಗಿಷ್ಟ ಬಂದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿದಾಗ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯನ್ನೇ ಮರೆತಿರುವುದಾಗಿ ಸಮಿತಿಯು ಭಾವಿಸುತ್ತದೆ. ಆ ಬಗ್ಗೆ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದೆಂದು ಹಾಗೂ ಈ ಪ್ರಕರಣದಲ್ಲಿ ಕೆ.ಎಂ.ಸಿ.ಕಾಯ್ದೆ ಕಲಂ 143ರ ಪ್ರಕಾರ ಕಂದಾಯವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.



10. ವಿಷಯ:ಸಂಖ್ಯೆ:ಅಸ್ಥಾಸ/(ತೆ)/42/2011-12

ನಂ.75, ರೆಸಿಡೆನ್ಸಿ ರಸ್ತೆ, ವಾರ್ಡ್-111ರ ಶಿವಶರಣ್ ಇನ್ ಕಾರ್ಪೋರೇಟ್ಸ್‌ನ ಮಾಲೀಕರು ಸದರಿ ಸ್ವತ್ತಿಗೆ ಕಂದಾಯವನ್ನು ಯಾವ ರೀತಿ ನಿಗಧಿಪಡಿಸಿದ್ದಾರೆಂಬ ಬಗ್ಗೆ ನಮಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಹಾಗೂ ನಾವು ಹಲವಾರು ಬಾರಿ ಕಂದಾಯ ಕಡಿಮೆ ಮಾಡಿಕೊಡುವಂತೆ ಮನವಿಯನ್ನು ಸಲ್ಲಿಸಿದ್ದರೂ ಸಹ ಇದುವರೆವಿಗೂ ನಮಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲವೆಂದು ತಿಳಿಸಿ ನ್ಯಾಯಬದ್ಧವಾದ ಕಂದಾಯವನ್ನು ನಿಗಧಿಪಡಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಜಂಟಿ ಆಯುಕ್ತರ ದಿನಾಂಕ:21-12-2011ರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಸದರಿ ಸ್ವತ್ತಿಗೆ ವಸತಿಯೇತರ ಎಸ್.ಎ.ಎಸ್. ಆಧಾರದಡಿಯಲ್ಲಿ ಕಂದಯವನ್ನು 19800ಚದರ ಅಡಿಗಳಿಗೆ ನಿಗಧಿಪಡಿಸಿ ದಿನಾಂಕ:01-04-1997ರಿಂದ ಜಾರಿಗೆ ಬರುವಂತೆ ತಿಳಿಸಿ ವಿಶೇಷ ಸೂಚನಾ ಪತ್ರವನ್ನು ದಿನಾಂಕ:19-07-2004ರಂದು ಜಾರಿಗೊಳಿಸಿರುವುದು ಕಂಡು ಬರುತ್ತದೆ. ಹಾಗೂ ಮುಂದುವರೆದಂತೆ 28-10-2006 ಹಾಗೂ 29-01-2011ರಂದು ಕಂದಾಯ ಕಡಿಮೆ ಮಾಡಿಕೊಡಲು ಮಾಲೀಕರು ಅರ್ಜಿ ಸಲ್ಲಿಸಿರುವುದಾಗಿ ವರದಿಸಲಾಗಿರುವುದು ಜಂಟಿ ಆಯುಕ್ತರ ಟಿಪ್ಪಣಿಯಿಂದ ಕಂಡು ಬರುತ್ತದೆ. ಮೇಲ್ಮನವಿದಾರರು ನಾವು ಕಾಲಮಿತಿಯಲ್ಲೇ ಅರ್ಜಿ ಸಲ್ಲಿಸಿರುತ್ತೇವೆ. ಆದರೆ ಇದುವರೆವಿಗೂ ನಮಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಹಾಗೂ ನಾವು ಸದರಿ ಸ್ವತ್ತನ್ನು 1990ರಲ್ಲಿ ಕ್ರಯಕ್ಕೆ ಪಡೆದಿರುತ್ತೇವೆ. ನಾವು ಕಟ್ಟಡವನ್ನು ಕ್ರಯಕ್ಕೆ ಪಡೆದಾಗಿನಿಂದಲೂ ಕಟ್ಟಡದ ಕಾಮಗಾರಿ ಇನ್ನೂ ಪೂರ್ಣಗೊಂಡಿರುವುದಿಲ್ಲ. ಹಾಗೂ ಕಟ್ಟಡದ ಪೂರ್ಣಭಾಗವನ್ನು ಸ್ವಂತಕ್ಕೆ ವಸತಿಯೇತರಕ್ಕೆ ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾರೆ.

**ನಿರ್ಣಯ**:-ಸಮಿತಿಯು ದಿನಾಂಕ:23-12-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು. ಆ ಸಮಯದಲ್ಲಿ ಕಟ್ಟಡದ ಬಹುತೇಕ ಭಾಗವು ಖಾಲಿ ಇರುವುದಾಗಿ ಕಂಡು ಬಂದಿರುತ್ತದೆ. ಹಾಗೂ ಮೇಲ್ಮನವಿದಾರರು ಸ್ವಂತ ವಸತಿಯೇತರಕ್ಕೆ ಉಪಯೋಗಿಸುತ್ತಿರುವುದನ್ನು ಸಮಿತಿಯು ಮನಗಂಡಿರುತ್ತದೆ. ಆದರೆ ಜಂಟಿ ಆಯುಕ್ತರ ಟಿಪ್ಪಣಿಯಲ್ಲಿ

ವರದಿಸಿರುವಂತೆ ಭಾಡಿಗೆಗೆ ನೀಡಿರುವುದು ಕಂಡು ಬಂದಿರುವುದಿಲ್ಲ ಹಾಗೂ ಕಡತದಲ್ಲಿ ಬಾಡಿಗೆಗೆ ನೀಡಿರುವ ಬಗ್ಗೆ ಯಾವುದೇ ದೃಢೀಕೃತ ದಾಖಲೆಗಳನ್ನು ಒದಗಿಸಿರುವುದಿಲ್ಲ. ಮೇಲ್ಮನವಿದಾರರ ಮನವಿಯು ಕಾಲಮಿತಿಯಲ್ಲಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಮೇಲ್ಮನವಿದಾರರು ಸಲ್ಲಿಸಿರುವ ಅರ್ಜಿಯ ಮೂಲ ಪ್ರತಿಯನ್ನು ಒದಗಿಸಿರುವುದಿಲ್ಲ ಹಾಗೂ ಅರ್ಜಿದಾರರಿಗೆ ಮೇಲ್ಮನವಿಯು ಕಾಲಮಿತಿಯಲ್ಲಿಲ್ಲದ ಕಾರಣ ನಿಮ್ಮ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆಂದು ಹಿಂಬರಹವನ್ನು ನೀಡಿ ಕಂದಾಯವನ್ನು ವಸೂಲಿ ಮಾಡಲು ಕ್ರಮ ಕೈಗೊಂಡಿರುವುದು ಸಹ ಕಂಡು ಬರುತ್ತಿಲ್ಲ. ಅಲ್ಲದೆ ಮೇಲ್ಮನವಿದಾರರು ತಮ್ಮ ಕಟ್ಟಡವು 1992ರ ನಿರ್ಮಾಣದ ಕಟ್ಟಡವಾಗಿದ್ದು ಒಟ್ಟು 21260 ಚದರ ಅಡಿಗಳಾಗಿರುತ್ತದೆ. ಅದರಲ್ಲಿ 4000 ಚದರಡಿ ನೆಲ ಮಾಳಿಗಯನ್ನು ವಾಹನ ನಿಲ್ದಾಣಕ್ಕಾಗಿ ಉಪಯೋಗಿಸುತ್ತಿರುವುದಾಗಿ ಘೋಷಿಸಿಕೊಂಡಿರುವುದನ್ನು ಕಡತದಲ್ಲಿ ಲಗತ್ತಿಸಿರುವ 2008-09ನೇ ಸಾಲಿನ ಸ್ವಯಂಃ ಘೋಷಿತ ಆಸ್ತಿ ತೆರಿಗೆ ಅರ್ಜಿ ನಂ-1ರಲ್ಲಿ ನೋಡಬಹುದಾಗಿರುತ್ತದೆ. ಆದಾಗ್ಯೂ ಸಹ ದಿನಾಂಕ:09-07-2004ರ ವಿಶೇಷ ಸೂಚನಾ ಪತ್ರದಲ್ಲಿ ಒಟ್ಟು ಕಟ್ಟಡದ ಅಳತೆ 19800 ಚದರ ಅಡಿಗಳೆಂದು ನಮೂದಿಸಿರುವುದು ಆಸ್ವಾಸ್ಪದವಾಗಿರುತ್ತದೆ. ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯನ್ನು ಸದರಿ ಕಟ್ಟಡದಿಂದ ಒಟ್ಟು ಎಷ್ಟು ಬಾಡಿಗೆ ಬಾಕಿ ಬರಬೇಕೆಂದು ಕೇಳಿದಾಗ ಸದರಿ ಅಧಿಕಾರಿಯು ತನಗೆ ತಿಳಿದಿರುವುದಿಲ್ಲವೆಂದು ಸಮಿತಿಯ ಮುಂದೆ ತಿಳಿಸಿರುತ್ತಾರೆ. ಇದರಿಂದಾಗಿ ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳು ಸದರಿ ಸ್ವತ್ತಿನ ಕಂದಾಯ ನಿಗಧಿಪಡಿಸುವಾಗ ಕಟ್ಟಡದ ಸರಿಯಾದ ಅಳತೆಯನ್ನಾಗಲೀ, ಬಾಡಿಗೆಗೆ ನೀಡಿರುವ ಬಗ್ಗೆ ದಾಖಲೆಗಳನ್ನಾಗಲೀ ಪರಿಶೀಲಿಸದೆ ಹಾಗೂ ನೀತಿ ನಿಯಮಗಳನ್ನು ಪಾಲಿಸದೆ ಬೇಜವಾಬ್ದಾರಿತನದಿಂದ ಕಂದಾಯವನ್ನು ನಿಗಧಿಪಡಿಸಿರುವುದಾಗಿ ಭಾವಿಸಿಸುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅರ್ಜಿದಾರರು ಕಾಲಮಿತಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದಾಗಿ ಸಮಿತಿಯು ಪರಿಗಣಿಸುತ್ತದೆ. ಕಾರಣ ಒಂದು ವೇಳೆ ಅರ್ಜಿದಾರರು ಕಾಲಮಿತಿಯಲ್ಲಿ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ಕಂದಾಯವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬಹುದಾಗಿತ್ತು. ಇದುವರೆವಿಗೂ ಕಂದಾಯವನ್ನು ವಸೂಲಿ ಮಾಡವುದಾಗಲೀ ಅಥವಾ ವಿಚಾರಣೆಯನ್ನು ನಡೆಸುವ ಪ್ರಕ್ರಿಯೆಯನ್ನಾಗಲೀ ಕೈಗೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಸ್ವತ್ತಿಗೆ ಒಟ್ಟು 17620 ಚದರಡಿ ವಸತಿಯೇತರ (ಸ್ವಂತ ಉಪಯೋಗಕ್ಕೆ) ಚದರಡಿ 1ಕ್ಕೆ ರೂ.5-00ಗಳನ್ನು ಹಾಗೂ 4000 ಚದರಡಿ ನೆಲಮಾಳಿಗೆಗೆ ವಾಹನ ಉಪಯೋಗದ ಆಧಾರದ ಮೇಲೆ ದಿನಾಂಕ:01-04-1997ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಿಸುವುದು ಹಾಗೂ 2000ನೇ ಸಾಲಿನಿಂದ ಎಸ್.ಎ.ಎಸ್. ದರದಂತೆ ವಸತಿಯೇತರ ಸ್ವಂತ ಉಪಯೋಗದ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸಿ ವಸೂಲಿ ಮಾಡುವುದೆಂದು ಸಮಿತಿಯು ತೀಮಾನಿಸಲಾಯಿತು.

11. ವಿಷಯ:ಸಂಖ್ಯೆ:ಅಸ್ಥಾಸ/(ಅ)/46/2011-12

ಶ್ರೀ.ಅಲಿಜಾನ್‌ರವರು ಬೆಂಗಳೂರು ನರಸಿಂಹರಾಜು ರಸ್ತೆ, ನ್ಯೂ ಬಂಬೂಬಜಾರ್ ಚರಂಡಿಯ ಪಕ್ಕದಲ್ಲಿರುವ 6X4 ಅಡಿಗಳ ಜಾಗವನ್ನು ನಗರ ಪಾಲಿಕೆಯಿಂದ ಗುತ್ತಿಗೆಗೆ ನೀಡಿದ್ದು, ನಂತರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಡವಳಿಕೆಯಂತೆ 8X20 ಅಡಿಗಳ ಜಾಗವನ್ನು ನನ್ನ ಪತ್ನಿಯ ಹೆಸರಿಗೆ ಮಾರಾಟ ಮಾಡಲು ದಿನಾಂಕ:31-12-1998ರಲ್ಲಿ ತೀರ್ಮಾನಿಸಿದ್ದು, ಇದುವರೆವಿಗೂ ಕ್ರಯ ಮಾಡಿಕೊಟ್ಟಿರುವುದಿಲ್ಲ. ಆದುದರಿಂದ ಸದರಿ ಸ್ವತ್ತನ್ನು ನನ್ನ ಪತ್ನಿಯ ಹೆಸರಿಗೆ ಕ್ರಯಕ್ಕಾಗಲೀ ಅಥವಾ ನನ್ನ ಹೆಸರಿಗೆ ಗುತ್ತಿಗೆಯನ್ನಾಗಲೀ ಮುಂದುವರೆಸಿಕೊಡಬೇಕೆಂದು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:31-12-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಸದರಿ ಸ್ವತ್ತಿನಿಂದಲೇ ನನ್ನ ಜೀವನ ಸಾಗುತ್ತಿರುತ್ತದೆ. ಅದನ್ನು ಬಿಟ್ಟು ನನಗೆ ಬೇರೆ ಯಾವುದೇ ಸ್ವತ್ತು ಇರುವುದಿಲ್ಲ. ಆದುದರಿಂದ ನನಗೆ ಬಾಡಿಗೆಗಾಗಲೀ ಅಥವಾ ಕ್ರಯಕ್ಕಾಗಲೀ ಸದರಿ ಸ್ವತ್ತನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ಕಾರಣ ಕೇಳುವ ನೋಟೀಸ್ ಜಾರಿ ಮಾಡಲು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.



12.ವಿಷಯ:ಸಂಖ್ಯೆ:ಅಸ್ಥಾಸ/(ತೆ/47/2011-12

ಎಂ.ರಾಜ ಎಂಬುವವರು ಸಹಾಯಕ ಕಂದಾಯ ಅಧಿಕಾರಿ (ಗೋವಿಂದ ರಾಜನಗರ)ರವರು ಸಂಖ್ಯೆ:547/50/1, 10ನೇ ಸಿ ಮುಖ್ಯರಸ್ತೆ, 6ನೇ ಬ್ಲಾಕ್, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು ಈ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಿಸಿ ನೀಡಿರುವ ದಿನಾಂಕ:25-06-2011ರ ನೋಟೀಸಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-11-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತು ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

13. ವಿಷಯ:ಸಂಖ್ಯೆ:ಅಸ್ಥಾಸ/(ಜಾ/48/2011-12

ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:10-01-2012ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳ ಪರವಾಗಿ ಶ್ರೀ.ಎನ್.ರವಿಕುಮಾರ್, ಪ್ರಥಮ ದರ್ಜೆ ಸಹಾಯಕರು ಹಾಜರಿರುತ್ತಾರೆ. ಮೇಲ್ಮನವಿದಾರರು ಕಾಲಾವಕಾಶ ಕೋರಿಕೊಂಡ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

:ಸಹಿ:
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:24-02-2012ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ) |
| 04 | ಬಿ.ಎಸ್.ಆನಂದ | ಸದಸ್ಯರು | |
| 05 | ಎಂ.ವಸಂತಕುಮಾರಿ | ಸದಸ್ಯರು | |

| | | | |
|---|---|---|---|
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಮಧ್ಯಂತರ ಅರ್ಜಿಯ ಮೇಲೆ ಆದೇಶಕ್ಕಾಗಿ ಕಾಯ್ದಿರಿಸಿದೆ.

02.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

**ನಿರ್ಣಯ**:- ಮೇಲ್ಮನವಿದಾರರು ಹೇಳಿಕೆಗಳು ಹಾಗೂ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಹಾಗೂ ದಿನಾಂಕ:04-02-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಪೂರ್ಣ ಕಟ್ಟಡವನ್ನು ಮೇಲ್ಮನವಿದಾರರು ಸ್ವಂತ ಉಪಯೋಗಕ್ಕಾಗಿ ಉಪಯೋಗಿಸುತ್ತಿದ್ದು, ಕಂದಾಯವನ್ನು ನಿಗಧಿಪಡಿಸುವಾಗ ಕೈತಪ್ಪಿನಿಂದಾಗಿ ಬಾಡಿಗೆ ಉಪಯೋಗಕ್ಕೆಂದು ನಿಗಧಿಪಡಿಸಿರುವುದಾಗಿ ತಿಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಮೇಲ್ಮನವಿದಾರರ ಮೇಲ್ಮನವಿಯಲ್ಲಿ ಕೋರಿಕೊಂಡಿರುವ ಕಟ್ಟಡಕ್ಕೆ ಪೂರ್ಣವಾಗಿ ಸ್ವಂತ ಉಪಯೋಗದ ಆಧಾರದ ಮೇಲೆ ಕಂದಾಯವನ್ನು ಮರು ನಿಗಧಿಪಡಿಸಿ ಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.



03. ವಿಷಯ:ಸಂಖ್ಯೆ:ಅಸ್ಥಾಸ/(ಖಾ)/28/2011-12

ಶ್ರೀ.ಕೆ.ವಿಜಯಕುಮಾರ್, ನಂ.171/2, ತೂಬರಹಳ್ಳಿ, ವೈಟ್ ಪೀಲ್ಡ್ ರಸ್ತೆ, ಬೆಂಗಳೂರು-66 ಇವರು ದಿನಾಂಕ:16-09-2011ರಂದು ಸಮಿತಿಯ ಮುಂದೆ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರು ದಿನಾಂಕ:08-08-2011ರಂದು ಹೊರಡಿಸಿರುವ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಡವಾಗಿ ಹಾಜರಾಗಿದ್ದು ಲಿಖಿತ ಹೇಳಿಕೆಗಳನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ. 5ನೇ ಪ್ರತಿವಾದಿ ಹಾಜರಿದ್ದು ತಕರಾರರನ್ನು ಸಲ್ಲಿಸಿರುತ್ತಾರೆ. 3ನೇ ಪ್ರತಿವಾದಿಗಳು ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಆದೇಶಕ್ಕಾಗಿ ಪ್ರಕರಣವನ್ನು ಕಾಯ್ದಿರಿಸಿದೆ.

**ನಿರ್ಣಯ**:- ಪ್ರಕರಣವನ್ನು ಕೆ.ಎಂ.ಸಿ.ಕಾಯ್ದೆ 1976 ಕಲಂ 61ಎ (ಐ)ರಡಿ ಕೈಗೆತ್ತಿಕೊಳ್ಳಲಾಯಿತು. ಮೇಲ್ಮನವಿದಾರರ ಹಾಗೂ ಪ್ರತಿವಾದಿಗಳ ಹೇಳಿಕೆ/ಲಿಖಿತ ಹೇಳಿಕೆ ಹಾಗೂ ಸಲ್ಲಿಸಿರುವ ತಕರಾರುಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರ ದಿನಾಂಕ:23-01-2012ರ ಟಿಪ್ಪಣಿಯನ್ನು ಪರಿಶೀಲಿಸಿದಾಗ ಖಾತಾವನ್ನು ವಿಜಯಕುಮಾರ್‌ರವರ ಹೆಸರಿಗೆ ನೋಂದಾಯಿಸಿದ್ದು, ತದನಂತರ ಶ್ರೀ.ಮುನಿರೆಡ್ಡಿಯವರು ಕರ್ನಾಟಕ ಮುನಿಸಿಫಲ್ ಕಾಯ್ದೆ ಕಲಂ 114ಎ ಕೆಳಗೆ ಪುನರ್ ಪರಿಶೀಲನೆ ಅರ್ಜಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಶ್ರೀ.ವಿಜಯ್ ಕುಮಾರ್‌ರವರ ಹೆಸರಿಗೆ ಮಾಡಿರುವ ಖಾತಾವನ್ನು ರದ್ದು ಮಾಡಿ ಶ್ರೀಮತಿ.ಚಿಕ್ಕತಾಯಮ್ಮನವರ ಹೆಸರಿನಲ್ಲಿ ಖಾತಾ ಮುಂದುವರೆಸಿರುವುದಾಗಿ ವರದಿಸಲಾಗಿರುತ್ತದೆ. ಆದರೆ ಶ್ರೀ.ಮುನಿರೆಡ್ಡಿಯವರು ಕರ್ನಾಟಕ ಮುನಿಸಿಫಲ್ ಕಾಯ್ದೆಯಡಿ ಪುನರ್ ಪರಿಶೀಲನಾ ಅರ್ಜಿಯಡಿ ಸಲ್ಲಿಸಿದ್ದು ಖಾತಾವನ್ನು ಶ್ರೀ.ಮುನಿರೆಡ್ಡಿಯವರ ಹೆಸರಿನಲ್ಲಿ ಮುಂದುವರೆಸದೆ ಶ್ರೀಮತಿ.ಚಿಕ್ಕತಾಯಮ್ಮರವರ ಹೆಸರಿನಲ್ಲಿ ಮುಂದುವರೆಸಲಾಗಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಯಾವುದೇ ಹೇಳಿಕೆಗಳನ್ನು ನೀಡಲು ವಿಫಲರಾಗಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಉಪ ಕಾನೂನು ಅಧಿಕಾರಿಗಳು ಕಲಂ 114ಎ ರಡಿ ನಡೆದಿರುವ ನಡವಳಿಕೆಗಳ ಮೇಲೆ ಪ್ರಕರಣವನ್ನು ನಡೆಸಲು ಅಪೀಲುಗಳ ಸ್ಥಾಯಿ ಸಮಿತಿಗೆ ಕೆ.ಎಂ.ಸಿ. ಕಾಯ್ದೆಯಡಿಯಲ್ಲಿ ಅಧಿಕಾರವನ್ನು ಕಲ್ಪಿಸಿಲ್ಲದಿರುವುದರಿಂದ ಮೇಲ್ಮನವಿದಾರರು ಕರ್ನಾಟಕ ಘನ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿಕೊಳ್ಳುವಂತೆ ಸೂಚಿಸಬಹುದಾಗಿರುತ್ತದೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೇಲ್ಮನವಿದಾರರು ಜಂಟಿ ಆಯುಕ್ತರು (ಬೊಮ್ಮನಹಳ್ಳಿ)ವಲಯರವರು ದಿನಾಂಕ:08-08-2011ರಂದು ಕೆ.ಎಂ.ಸಿ.ಕಾಯ್ದೆ ಕಲಂ 114ಎ ರಡಿ ಮಾಡಿರುವ ಆದೇಶವನ್ನು ಕರ್ನಾಟಕ ಘನ ಉಚ್ಚನ್ಯಾಯಾಲಯದಲ್ಲಿ ಪಶ್ನಿಸಿಕೊಳ್ಳಬಹುದೆಂದು ತಿಳಿಸುತ್ತಾ, ಮೇಲ್ಮನವಿಯನ್ನು ವಜಾಗೊಳಿಸುವುದೆಂದು ತೀರ್ಮಾನಿಸಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ತೆ/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ||ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟರ್ನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ||ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಸ್ಟಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಪ್ರಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.



ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ||ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

**ನಿರ್ಣಯ:-** ಮೇಲ್ಮನವಿದಾರರ ಹೇಳಿಕೆಗಳು ಹಾಗೂ ದಿನಾಂಕ:16-09-2011ರ ಆಯುಕ್ತರ ಟಿಪ್ಪಣಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಯಿತು. ದಿನಾಂಕ:04-02-2012ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಈಗಾಗಲೇ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಇತರೆ ಸಂಸ್ಥೆಗಳಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ ಮತ್ತು ಆಪ್ಕೋ ಫ್ಯಾಬ್ರಿಕ್ಸ್‌ರವರು ನಗರ ಪಾಲಿಕೆಯು ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿರುವುದು ಕಂಡು ಬರುತ್ತದೆ. ಅಲ್ಲದೆ ಈ ಹಂತದಲ್ಲಿ ಮೆ॥ ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಮಾತ್ರ ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿದಲ್ಲಿ, ಹಾಲಿ ಪರವಾನಗಿ ಶುಲ್ಕವನ್ನು ಪಾವತಿಸುತ್ತಿರುವ ಎಲ್ಲಾ ಸಂಸ್ಥೆಗಳು ಸಹ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವಂತೆ ಅರ್ಜಿ ಸಲ್ಲಿಸುವ ಸಂಭವವಿರುವುದಾಗಿ ಸಮಿತಿಯು ಭಾವಿಸುತ್ತದೆ. ಅಲ್ಲದೆ ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿ ಬಾಕಿ ಮೊತ್ತವನ್ನು ಮನ್ನಾ ಮಾಡುತ್ತಾ ಹೋದಲ್ಲಿ ನಗರ ಪಾಲಿಕೆಯು ಆರ್ಥಿಕ ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ನಿರ್ಮಾಣವಾಗುವ ಹಿನ್ನೆಲೆಯಲ್ಲಿ ಮೇಲ್ಮನವಿದಾರರ ಮೇಲ್ಮನವಿಯನ್ನು ವಜಾಗೊಳಿಸುತ್ತಾ ದಿನಾಂಕ:16-09-2011ರ ಆಯುಕ್ತರ ಟಿಪ್ಪಣಿಯಂತೆ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

05.ವಿಷಯ:ಸಂಖ್ಯೆ:ಅಸ್ಥಾಸ/(ತೆ)/40/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ಮಾನ್ಯ ಆಡಳಿತಗಾರರು ತೆಗೆದುಕೊಂಡ ತೀರ್ಮಾನದಂತೆ ಮಳಿಗೆದಾರರಿಗೆ ಈ ಕಛೇರಿಯಿಂದ ನೋಟೀಸ್ ನೀಡಿರುವ ವಿರುದ್ಧ ವರ್ತಕರ ಸಂಘದವರು ನ್ಯಾಯಾಲಯದಲ್ಲಿ ಮೊರೆ ಹೋದ ಕಾರಣ ನ್ಯಾಯಾಲಯವು ದಿನಾಂಕ:19-12-2007ರಂದು ನೀಡಿರುವ ಆದೇಶದಲ್ಲಿ ಸದರಿ ನೋಟೀಸ್‌ಗೆ ತಡೆಯಾಜ್ಞೆಯನ್ನು ನೀಡಿ ನಗರ ಪಾಲಿಕೆಯು ಕಕ್ಷಿದಾರರಿಗೆ ಯಾವುದೇ ಅವಕಾಶವನ್ನು ನೀಡದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುವುದನ್ನು ತಡೆದು ಅವಕಾಶವನ್ನು ಕಲ್ಪಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು ಸೂಚಿಸಿರುವ ಮೇರೆಗೆ ಪರವಾನಗಿದಾರರುಗಳನ್ನು ದಿನಾಂಕ:08-06-2011ರಂದು ಅವರ ಅಹವಾಲುಗಳನ್ನು ಆಯುಕ್ತರ ಮುಂದೆ ಹೇಳಿಕೊಳ್ಳಲು ಅವಕಾಶ ನೀಡಲಾಗಿತ್ತು. ಸದರಿಯವರು ಮೌಖಿಕವಾಗಿ ದರವನ್ನು ಕಡಿಮೆ ಮಾಡಲು ಕೋರಿದ ಮೇರೆಗೆ ಲಿಖಿತ ಹೇಳಿಕೆಗಳನ್ನು ನೀಡಲು ಸೂಚಿಸಲಾಯಿತು. ಆದರೆ ಈವರೆವಿಗೂ ಸದರಿಯವರುಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ದರ ಪರಿಷ್ಕರಣೆಯ ವಿಷಯದ ಬಗ್ಗೆ ಜರೂರಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:26-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರುಗಳು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಸದರಿ ಪ್ರಕರಣವನ್ನು ಈಗಾಗಲೇ ಆದೇಶಕ್ಕಾಗಿ ಕಾಯ್ದಿರಿಸಲಾಗಿತ್ತು. ಆದರೆ ಉಪ ಆಯುಕ್ತರು (ಮಾರುಕಟ್ಟೆ)ರವರ ಕೋರಿಕೆಯ ಮೇರೆಗೆ ಮತ್ತೊಮ್ಮೆ ಪ್ರಕರಣವನ್ನು ವಿಚಾರಣೆಗಾಗಿ ಕರೆಯಲಾಯಿತು. ಆದರೆ ಉಪ ಆಯುಕ್ತರು (ಮಾರುಕಟ್ಟೆ)ರವರು ಸಮಯಕ್ಕೆ ಸರಿಯಾಗಿ ಹಾಜರಾಗಿರುವುದಿಲ್ಲ. ನಂತರ ತಡವಾಗಿ ಹಾಜರಾಗಿ ಮಾರುಕಟ್ಟೆಯ ಬಗ್ಗೆ ಸಮರ್ಪಕವಾದ ಪ್ರತಿವಾದಗಳನ್ನು/ಹೇಳಿಕೆಗಳನ್ನು

ಮಂಡಿಸಿರುವುದಿಲ್ಲ. ಇದರಿಂದಾಗಿ ಸಮಿತಿಯು ಉಪ ಆಯುಕ್ತರು (ಮಾರುಕಟ್ಟೆ)ರವರ ಹೇಳಿಕೆಗಳು ಏನೂ ಇಲ್ಲವೆಂದು ಭಾವಿಸುತ್ತಾ, ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕರ ಬಹುಪಯೋಗಕ್ಕಾಗಿ ತರಕಾರಿ ಮಾರುಕಟ್ಟೆ, ಬ್ಯಾಂಕ್‌ಗಳು, ಹೋಟೆಲ್‌ಗಳು, ಚಿತ್ರಮಂದಿರ, ಡಿಪಾರ್ಟ್‌ಮೆಂಟಲ್ ಸ್ಟೋರ್ಸ್ ಹಾಗೂ ಇತರೇ ಸರ್ಕಾರಿ ಕಛೇರಿಗಳ ಉಪಯೋಗಕ್ಕಾಗಿ 1974-75ನೇ ಸಾಲಿನಿಂದ 1979-80ನೇ ಸಾಲಿನ ಅವಧಿಯಲ್ಲಿ ನಿರ್ಮಿಸಲಾಗಿರುತ್ತದೆ. ಈ ವಾಣಿಜ್ಯ ಸಂಕೀರ್ಣದ ಪೂರ್ವದ ಕಡೆ ಬರುವ 10ನೇ ಮುಖ್ಯರಸ್ತೆ ಕಡೆ ಕೆಲವು ಮಳಿಗೆಗಳನ್ನು ಹಂಚಿಕೆ ಮಾಡಲಾಗಿದ್ದು, ಚದರ ಅಡಿ ಒಂದಕ್ಕೆ ರೂ.4/-ಗಳ ಪರವಾನಗಿ ಶುಲ್ಕವನ್ನು ನಿಗಧಿಪಡಿಸಿರುವುದು ತಿಳಿದು ಬಂದಿರುತ್ತದೆ. ಚದರ ಅಡಿ ಒಂದಕ್ಕೆ ರೂ.4/-ಗಳನ್ನು ನಿಗಧಿಪಡಿಸಿದ್ದ ಹಿನ್ನೆಲೆಯಲ್ಲಿ ನಿಗಧಿಪಡಿಸಿರುವ ಶುಲ್ಕವು ಅತೀ ಹೆಚ್ಚಾಗಿರುವುದನ್ನು ಮನಗಂಡು ಪಾಲಿಕೆಯ ಅಂದಿನ ಆಡಳಿತಗಾರರು ವಿಷಯಕ್ಕೆ ಸಂಬಂಧಿಸಿದಂತೆ ಈ ಬಗ್ಗೆ ಕಾಮಗಾರಿ ಇಲಾಖೆ ಹಾಗೂ ಹಣಕಾಸು ಇಲಾಖೆಯವರನ್ನು ಆಗಿನ ನಗರಾಭಿವೃದ್ಧಿ ಸಚಿವರ ಕಛೇರಿಯಲ್ಲಿ ಸಭೆ ಕರೆದು ಯಾವ ಆಧಾರದ ಮೇಲೆ ರೂ.4/-ಗಳನ್ನು ಚದರ ಅಡಿ ಒಂದಕ್ಕೆ ನಿಗಧಿಪಡಿಸಲಾಗಿದೆ ಎಂಬ ಬಗ್ಗೆ ಚರ್ಚೆಯಲ್ಲಿ ಕೇಳಲಾದ ಮೇರೆಗೆ, ಜಯನಗರ ವಾಣಿಜ್ಯ ಸಂಕೀರ್ಣ ಹಾಗೂ ಎಂ.ಜಿ.ರಸ್ತೆಯಲ್ಲಿರುವ ಪಿ.ಯು.ಬಿ. ಕಟ್ಟಡದ ನಿರ್ಮಾಣದ ಒಟ್ಟಾರೆ ವೆಚ್ಚಗಳನ್ನು 10 ವರ್ಷಗಳಲ್ಲಿ ಹಿಂದಕ್ಕೆ ಪಡೆಯುವ ಸಲುವಾಗಿ ಸದರಿ ಶುಲ್ಕವನ್ನು ನಿಗಧಿಪಡಿಸಿದ್ದಾಗಿ ತಿಳಿದು ಬಂದಿರುತ್ತದೆ. ನಿಗಧಿಪಡಿಸಿರುವ ಶುಲ್ಕವು ಹೆಚ್ಚಾಗಿದೆಯೆಂದು ಹಾಗೂ ವ್ಯಾಪಾರ ವಹಿವಾಟು ಸುಧಾರಿಸುವವರೆವಿಗೂ ನಿಗಧಿತ ಶುಲ್ಕಕ್ಕೆ ಶೇಕಡ 30% ರಿಯಾಯಿತಿ ನೀಡಿ ಶುಲ್ಕವನ್ನು ಮರು ನಿಗಧಿಪಡಿಸಲಾಗಿರುತ್ತದೆ.

ತದನಂತರ 1980ನೇ ಸಾಲಿನಲ್ಲಿ ಅಂದಿನ ಆಡಳಿತಗಾರರು ಜಯನಗರ ವಾಣಿಜ್ಯ ಸಂಕೀರ್ಣವನ್ನು ಬಹಳ ಬೆಲೆಬಾಳುವ ನಗರಪಾಲಿಕೆ ಸ್ವತ್ತಿನಲ್ಲಿ ಹೆಚ್ಚಿನ ಬಂಡವಾಳ ಹೂಡಿ ನಿರ್ಮಿಸಿರುವ ಹಾಗೂ ನಿರ್ವಹಣೆ ಮಾಡುತ್ತಿರುವ, ಈ ಪ್ರತಿಷ್ಠಿತ ಕಟ್ಟಡದ ವರಮಾನವು ಕಡಿಮೆಯಾಗಿರುತ್ತದೆಂದು ಭಾವಿಸಿ, ಶೇಕಡ 30 ರಷ್ಟು ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿದ್ದ ಆದೇಶವನ್ನು ದಿನಾಂಕ:12.11.1980ರ ಆಯುಕ್ತರ ಆದೇಶದಂತೆ ಹಿಂಪಡೆದು ಚದರ ಅಡಿ ಒಂದಕ್ಕೆ ರೂ.4/-ಗಳಂತೆ ಪಾವತಿಸಲು ಪರವಾನಗಿದಾರರುಗಳಿಗೆ ಪಾಲಿಕೆವತಿಯಿಂದ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ-1976ರ ನಿಯಮ 470 ರಂತೆ ನೋಟಿಸ್‌ಗಳನ್ನು ಜಾರಿ ಮಾಡಲಾಗಿದ್ದು, ಈ ಬಗ್ಗೆ ಪರವಾನಗಿದಾರರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮಿಸ್‌ಲೇನಿಯಸ್ ದಾವೆ ಸಂಖ್ಯೆ. 304,323,341,342,343, 694,714,715,716,717/84, 705,706,720/85 ಮತ್ತು 779,782/86 ರಲ್ಲಿ ದಾವೆ ಹೂಡಲಾಗಿದ್ದು, ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

"Accordingly, for the reasons stated supra, that demand notices/bills issued by corporation calling upon the petitioners to pay the amount as arrears of fee as stated in the tabula are treated as invalid, as not According to law and consequently they are cancelled. Further it is hereby ordered the respondent corporation is at liberty to collect the rent as per the terms of agreement entered in to by them with petitioners and further the respondent corporation is at liberty to enhance the rent of the shops in occupation of petitioners by giving notices and following the procedure laid down in the Municipal Corporation Act".

17-02-1994 ರ ವಿಷಯದ ಸಂಖ್ಯೆ 261 ರಂದು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ರೂ. 4/-ರ ಶೇಕಡ 70% ಅಂದರೆ ರೂ. 2-80 ಗಳಿಗೆ ಶೇಕಡ 40 ರಷ್ಟನ್ನು ದಿನಾಂಕ: 01-06-1993 ರಿಂದ ಜಾರಿಗೆ ಬರುವಂತೆ ಹೆಚ್ಚುವರಿ ಮಾಡಿ ಪ್ರತಿ 5 ವರ್ಷಗಳಿಗೊಮ್ಮೆ ಶೇಕಡ 10 ರಷ್ಟು ಪರವಾನಗಿ ಶುಲ್ಕವನ್ನು ಹೆಚ್ಚಿಸುವುದೆಂದು ತೀರ್ಮಾನಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ). ಈ ನಿರ್ಣಯವನ್ನು ದಿನಾಂಕ: 27-9-1994ರ ವಿಷಯದ ಸಂಖ್ಯೆ 20(99)ರಲ್ಲಿ ಮಹಾನಗರ ಪಾಲಿಕೆ ಸಭೆಯು ಒಪ್ಪಿರುವುದು ಕಂಡು ಬರುತ್ತದೆ.

ದಿನಾಂಕ: 26-9-1997ರ ವಿಷಯದ ಸಂಖ್ಯೆ. 18(230) ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ಈ ಹಿಂದೆ ತೆರಿಗೆ, ಆರ್ಥಿಕ ಮತ್ತು ಮೇಲ್ಮನವಿ ಸಮಿತಿಯವರು ದಿನಾಂಕ: 26-8-1997 ರಲ್ಲಿ ತೆಗೆದುಕೊಂಡಂತಹ ನಿರ್ಣಯದಲ್ಲಿ ಮಂಡಿಸಿದಂತಹ ವಿಷಯವನ್ನು ಅಂದರೆ ವಾಣಿಜ್ಯ ಸಂಕೀರ್ಣಗಳು ಹಾಗೂ ಮಾರುಕಟ್ಟೆಗಳನ್ನು ಎ.ಬಿ.ಸಿ.ಡಿ. ಎಂಬುದಾಗಿ ನಾಲ್ಕು ವರ್ಗಗಳಾಗಿ ಅವುಗಳು ಇರುವ ಪ್ರದೇಶ ಕಟ್ಟಡ ಪೂರ್ಣ ವರ್ಷ ಮತ್ತು ಅಲ್ಲಿ ನಡೆಯುತ್ತಿರುವ ವ್ಯಾಪಾರ ವಹಿವಾಟುಗಳ ಆಧಾರದ ಮೇಲೆ ವಿಂಗಡಿಸಲಾಗಿದೆ. ಪ್ರತಿ ವರ್ಗದ ಮಳಿಗೆಗಳನ್ನು ಶೇಕಡವಾರು ಪರವಾನಗಿ ಶುಲ್ಕ ಹೆಚ್ಚಳ ಮಾಡುವುದರೊಂದಿಗೆ ಪ್ರತಿ ಮೂರು ವರ್ಷಕ್ಕೆ ನಿರಂತರವಾಗಿ ಪರವಾನಗಿಗಳನ್ನು ನವೀಕರಿಸಲು ತೀರ್ಮಾನಿಸಿರುವುದು ಕಂಡು ಬರುತ್ತದೆ.

ದಿನಾಂಕ:14-6-2000 ವಿಷಯದ ಸಂಖ್ಯೆ. 36/00-01ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಗರ ಪಾಲಿಕೆಯ ದಿನಾಂಕ: 26-6-97ರ ವಿಷಯದ ಸಂಖ್ಯೆ. 18(230) ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ದಿನಾಂಕ:1-4-98 ರಿಂದ ಕನಿಷ್ಠ ರೂ.100 ಮತ್ತು ಎ,ಬಿ,ಸಿ,ಡಿ ಎಂಬುದಾಗಿ 4 ವರ್ಗಗಳಾಗಿ ವಿಂಗಡಿಸಿ ಶೇಕಡ 25,20,15 ಮತ್ತು 10 ರಂತೆ ಪರವಾನಗಿ ಶುಲ್ಕವನ್ನು ಹೆಚ್ಚಿಸಲಾಗಿದೆ. ಈ ರೀತಿ ಹೆಚ್ಚಳ ಪ್ರತಿ ಮೂರು

ವರ್ಷಕ್ಕೊಮ್ಮೆ ಪರವಾನಗಿ ನವೀಕರಿಸಿ ಹೆಚ್ಚಿಸಲಾಗುವುದು. ಈ ಹೆಚ್ಚಳ ದಿನಾಂಕ:1-4-2001 ರಿಂದ ಮತ್ತೆ ತಾನೇ ತಾನಾಗಿ ಜಾರಿಗೆ ಬರುವುದು. ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಈ ನಿರ್ಣಯದ ಜೊತೆಗೆ ಅಡಕಗೊಳಿಸಲಾಗಿರುವ ಪಟ್ಟಿಯಂತೆ ಪರವಾನಗಿ ಶುಲ್ಕ ಪರಿಷ್ಕರಣೆ ಮಾಡಲು ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.

ದಿನಾಂಕ:16-11-2006ರಂದು ಅಪೀಲು ಸ್ಥಾಯಿ ಸಮಿತಿಯಲ್ಲಿ ನಡೆದ ವಿಷಯದ ಸಂಖ್ಯೆ:ಅ.ಸ್ಥಾ.ಸ(ತೆ)186/06-07ರ ನಡವಳಿಕೆಗಳು ಈ ಕೆಳಕಂಡಂತೆ ಇರುತ್ತದೆ.

ದಿನಾಂಕ:26-09-1997ರಂದು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ:18(230)ರಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಮಾರುಕಟ್ಟೆಗಳನ್ನು ಆಯಾ ಪ್ರದೇಶಗಳಿಗೆ ಅನುಗುಣವಾಗಿ ಹಾಗೂ ವ್ಯಾಪಾರ ವಹಿವಾಟು ಆಧಾರದ ಮೇಲೆ ಎ,ಬಿ,ಸಿ ಮತ್ತು ಡಿ ಎಂಬುದಾಗಿ ನಾಲ್ಕು ವರ್ಗೀಕರಣಗಳನ್ನು ಮಾಡಲಾಗಿದ್ದು, ಇವುಗಳಿಗೆ ಕ್ರಮವಾಗಿ ಶೇಕಡ 25,20,15 ಮತ್ತು 10 ಪ್ರತಿ ಮೂರು ವರ್ಷಗಳಿಗೊಮ್ಮೆ ಪ್ರಸ್ತುತ ಪಾವತಿಸುತ್ತಿರುವ ಪರವಾನಗಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ. ಆದರೆ ಶ್ರೀ ಜಯಚಾಮರಾಜೇಂದ್ರ ಸಗಟು ತರಕಾರಿ ಮಾಟುಕಟ್ಟೆ, ಕಲಾಸಿಪಾಳ್ಯದ ಸಗಟು ತರಕಾರಿ ಮತ್ತು ಹಣ್ಣು ವರ್ತಕರ ಸಂಘರವರು ಈ ಮಾರುಕಟ್ಟೆಗಳಿಗೆ ವಿಧಿಸಿರುವ ತೆರಿಗೆ ಬಗ್ಗೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಅದರಲ್ಲಿ ಕಲಾಸಿಪಾಳ್ಯ ಸಗಟು ತರಕಾರಿ ಮತ್ತು ಹಣ್ಣು ಮಾರುಕಟ್ಟೆಯನ್ನು ಎ.ಪಿ.ಎಂ.ಸಿ. ರವರಿಗೆ ವಹಿಸಿದ್ದು, ಸದರಿಯವರು ಮಾರುಕಟ್ಟೆಯನ್ನು ಸಮರ್ಪಕವಾದ ನಿರ್ವಹಣೆ ಮತ್ತು ಸ್ವಚ್ಚತೆ ಇಲ್ಲದಿರುವುದರಿಂದ ಎ ವರ್ಗಕ್ಕೆ ಸೇರಿಸಿರುವುದನ್ನು ತೆಗೆದು ಡಿ ವರ್ಗಕ್ಕೆ ಸೇರಿಸಿಕೊಂಡು ಶೇಕಡ 10ರಷ್ಟನ್ನು ಪರಿಷ್ಕರಿಸಲು ಕೋರಿರುವ ಮೇರೆಗೆ ಸದರಿ ಸಮಿತಿಯು ಸಂಘನ ಮೇಲ್ಮನವಿಯನ್ನು ಒಪ್ಪಿ ತೀರ್ಮಾನಿಸಿರುತ್ತಾರೆ. ಶ್ರೀ ಜಯಚಾಮರಾಜೇಂದ್ರ ಸಗಟು ತರಕಾರಿ ಮಾರುಕಟ್ಟೆಯು ನಗರ ಮಧ್ಯಭಾಗದಲ್ಲಿದ್ದು, ಹೆಚ್ಚಿನ ವ್ಯಾಪಾರ ವಹಿವಾಟು ನಡೆಸುತ್ತಿರುವುದರಿಂದ ಸದರಿ ಮಾರುಕಟ್ಟೆಯನ್ನು ಎ ವರ್ಗದಲ್ಲಿಯೇ ಮುಂದುವರೆಸಬೇಕೆಂದು ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರಿಗೆ ದಿನಾಂಕ:31-1-2009, 30-08-2010 ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದಶಿ, ನಗರಾಭಿವೃದ್ಧಿ ಇಲಾಖೆಯವರಿಗೆ ದಿನಾಂಕ:30-6-2011ರಂದು ಪತ್ರವನ್ನು ಬರೆದು ದಿನಾಂಕ:16-11-2006ರ ವಿಷಯದ ಸಂಖ್ಯೆ:ಅಸ್ಥಾಸ(ತೆ)186/2006-07ನ್ನು ರದ್ದುಪಡಿಸುವಂತೆ ಕೋರಿರುವುದು ಕಂಡು ಬರುತ್ತದೆ.

ದಿನಾಂಕ: 21-3-2001 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ದಿನಾಂಕ:1-1-81ರಿಂದ 1-6-93 ರವರೆವಿಗೂ ಶೇಕಡ 30ರ ಪರವಾನಗಿ ಶುಲ್ಕ ನಗರಪಾಲಿಕೆಗೆ ಬರಬೇಕಾಗಿದ್ದ ಹಣ ಕೈತಪ್ಪಿ ಹೋಗುವ ಸಂಬಂಧದಲ್ಲಿ ಪಾಲಿಕೆ ಸಭೆಯು 17-2-94 ರ ಸ್ಥಾಯಿ ಸಮಿತಿ ನಿರ್ಣಯವನ್ನು ಅನುಮೋದಿಸಿತ್ತು. ಸದರಿ ನಿರ್ಣಯದಿಂದ ಪಾಲಿಕೆಗೆ ಆರ್ಥಿಕ ನಷ್ಟವಾಗುವ ಹಿನ್ನೆಲೆಯಲ್ಲಿ ದಿ:17-2-1994 ರ ಸ್ಥಾಯಿ ಸಮಿತಿ ನಿರ್ಣಯವನ್ನು ರದ್ದುಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ. ಈ ಬಗ್ಗೆ ಪಾಲಿಕೆ ಸಭೆಯು ವಿಷಯದ ಸಂಖ್ಯೆ. 22(343) ರಲ್ಲಿ ದಿನಾಂಕ:1-1-81 ರಿಂದ 1-6-93 ರವರೆಗಿನ ಶೇಕಡ 30 ರಷ್ಟು ಪರವಾನಗಿ ಶುಲ್ಕ ಕೈಬಿಟ್ಟಿರುವುದನ್ನು ಕೂಡಲೇ ಆಯುಕ್ತರು ಪರವಾನಗಿದಾರರಿಂದ ವಸೂಲಿ ಮಾಡುವಂತೆ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿರುತ್ತದೆ.

ಈ ಮೇಲ್ಕಂಡ ಮಹಾನಗರ ಪಾಲಿಕೆ ಸಭೆಯ ನಿರ್ಣಯದ ವಿರುದ್ಧ ಜಯನಗರ ವಾಣಿಜ್ಯ ಸಂಕೀರ್ಣದ ಪರವಾನಗಿದಾರರು ಮತ್ತೊಮ್ಮೆ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಎಂ.ಎ.ನಂ.86/2002 ದಾವೆ ಹೂಡಿರುತ್ತಾರೆ. ಘನ ನ್ಯಾಯಾಲಯವು ಈ ಬಗ್ಗೆ ಈ ಕೆಳಕಂಡ ರೀತಿಯಲ್ಲಿ ಆದೇಶವಿತ್ತಿರುತ್ತದೆ.

The impugned notices in the above mentioned appeals, mentioned in the tabular form supra are hereby set aside. The Respondents are hereby directed to afford an opportunity to the Appellants before enhancement of rent/license fee in respect of their respective shop premises as provided in the above mentioned decisions and then to consider the objections if any, filed by the Appellants and thereafter to proceed further in accordance with law.

The Appellants are not entitled to declaratory relief or for refund of any money as prayed in the appeal. Original of this Judgment shall be kept in M.A.No.86/2002 and the copies of the same shall be kept in the remaining cases for reference.

ಮಾನ್ಯ ಆಡಳಿತಗಾರರು ತೋಟಗಾರಿಕೆ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರು ದಿನಾಂಕ: 2-7-2007 ರ ವಿಷಯದ ಸಂಖ್ಯೆ. 51/2007-08 ರಲ್ಲಿ ಜಯನಗರ ವಾಣಿಜ್ಯ ಸಂಕೀರ್ಣದ ಪರವಾನಗಿ ಶುಲ್ಕದ ಪರಿಷ್ಕರಣೆಯನ್ನು ನೆಲಅಂತಸ್ತಿಗೆ ಪ್ರತಿ ಚದರ ಅಡಿಗೆ ರೂ. 40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರ ಅಡಿಗೆ ರೂ. 30/- ರಂತೆ ಹಾಗೂ 2ನೇ ಮಹಡಿಯಿಂದ 9ನೇ ಮಹಡಿಯವರೆಗೂ ಚದರ ಅಡಿ ಒಂದಕ್ಕೆ ರೂ. 20/- ನ್ನು ದಿನಾಂಕ: 1-4-2007 ರಿಂದ ಜಾರಿಗೆ

ಬರುವಂತೆ ಪರಿಷ್ಕರಿಸಲಾಗಿದ್ದು, ಪರಿಷ್ಕರಿಸಿರುವ ಮೊತ್ತದ ಬಗ್ಗೆ ನೋಟೀಸುಗಳನ್ನು ಪರವಾನಗಿದಾರರಿಗೆ ಜಾರಿ ಮಾಡಿರುವುದು ಕಂಡು ಬರುತ್ತದೆ.

ಈ ಮೇಲ್ಕಂಡ ಮಾನ್ಯ ಆಡಳಿತಗಾರರ ನಿರ್ಣಯದ ವಿರುದ್ದ ಜಯನಗರ ವಾಣಿಜ್ಯ ಸಂಕೀರ್ಣದ ವರ್ತಕರ ಸಂಘದವರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮತ್ತೊಮ್ಮೆ ಮಿಸ್‌ಲೇನಿಯಸ್ ನಂ. 628/2008 ರಲ್ಲಿ ದಾವೆ ಹೂಡಿರುತ್ತಾರೆ. ಘನ ನ್ಯಾಯಾಲಯವು ಈ ಕೆಳಕಂಡಂತೆ ಆದೇಶವಿತ್ತಿರುತ್ತದೆ.

The petition filed by the petitioner is allowed. The impugned notice issued by the respondents dated 22.7.2008 is hereby set aside. However, the respondents are at liberty to enhance reasonable rate of license fee with effect from 1.4.2007 in accordance with law and service charges of the shop premises of the petitioner after giving notice and giving an opportunity to the petitioner before enhancing the above said license fee and service charges.

Further it is directed to the respondents to issue notice to the petitioner within one month from the date of this order and collect objections from the petitioner within one month from the date of issue of notice. In case the petitioner failed to file objections and failed to appear before the Corporation to say about his grievance, then the respondent is at liberty to pass order for revising or enhancing the rate of rent of the shop within three months from the date of this order.

<u>ನಿರ್ಣಯ:</u>- ಮೇಲ್ಕಂಡ ಎಲ್ಲಾ ಅಂಶಗಳಿಂದ ಪ್ರಕರಣವು ಬಹಳ ವರ್ಷಗಳಿಂದ ಬಾಕಿ ಉಳಿದಿರುವುದು ಕಂಡು ಬರುತ್ತದೆ. ಅಲ್ಲದೆ ಪ್ರತಿ ಬಾರಿ ನಗರ ಪಾಲಿಕೆಯು ಪರವಾನಗಿ ಶುಲ್ಕವನ್ನು ಪರಿಷ್ಕರಿಸಿ ನಿಗಧಿಪಡಿಸಿ ನೋಟೀಸ್ ಜಾರಿಮಾಡಿರುವ ಸಂದರ್ಭಗಳಲ್ಲಿ ಮೇಲ್ಮನವಿದಾರರು ನ್ಯಾಯಾಲಯದಲ್ಲಿ ದಾವೆ ಹೂಡಿದಾಗ ನ್ಯಾಯಾಲಯವು ಪ್ರತಿ ಬಾರಿಯೂ ನಗರ ಪಾಲಿಕೆಗೆ ಪ್ರಕರಣವನ್ನು ಹಿಂದಿರುಗಿಸುತ್ತಾ, ನಗರ ಪಾಲಿಕೆಯ ಹಂತದಲ್ಲೇ ಕಾನೂನು ಚೌಕಟ್ಟಿನಲ್ಲಿ ತೀರ್ಮಾನ ಕೈಗೊಳ್ಳಲು ಸೂಚಿಸಿರುವುದು ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಯೊಂದಿಗೆ ಲಗತ್ತಿಸಿರುವ ಅಡಕಗಳಿಂದ ಕಂಡುಬರುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಮಳಿಗೆದಾರರನ್ನು ಕರೆದು ಚರ್ಚಿಸಿ ತೀರ್ಮಾನ ಕೈಗೊಂಡಿರುವುದು ಕಂಡು ಬಂದಿರುವುದಿಲ್ಲ. ಹಾಗೂ ದಿನಾಂಕ:02-07-2007ರಂದು ಮಾನ್ಯ ಆಡಳಿತಗಾರರು ಮಳಿಗೆದಾರರನ್ನು ವಿಚಾರಣೆಗೆ ಕರೆಯದೆ ಪರವಾನಗಿ ಶುಲ್ಕವನ್ನು ಪರಿಷ್ಕರಿಸಿ ನಿಗಧಿಪಡಿಸಿರುತ್ತಾರೆ. ಆದರೆ ದಿನಾಂಕ:26-09-1997ರಂದು ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾರುಕಟ್ಟೆಗಳನ್ನು ಎ.ಬಿ.ಸಿ.ಡಿ ಎಂದು ವರ್ಗಗಳನ್ನಾಗಿ ವಿಂಗಡಿಸಿ ನಿರ್ಣಯಿಸಿರುವುದು ಕಂಡುಬರುತ್ತದೆ. ನಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:14-06-2000ರ ನಿರ್ಣಯದಲ್ಲಿ ಈಗಾಗಲೇ ಮಹಾನಗರ ಪಾಲಿಕೆಯಲ್ಲಿ ನಿರ್ಣಯವಾಗಿದ್ದು ಅದರಂತೆ ಎ.ಬಿ.ಸಿ.ಡಿ ವರ್ಗಗಳ ಆಧಾರದ ಮೇಲೆ ದಿನಾಂಕ:01-04-1998ರಿಂದ ಜಾರಿಗೆ ಬರುವಂತೆ ಕನಿಷ್ಠ ರೂ.100/-(ಒಂದು ನೂರು ರೂಪಾಯಿಗಳಂತೆ ಮಾತ್ರ) ಮತ್ತು ಎ.ಬಿ.ಸಿ.ಡಿ ವರ್ಗಗಳಿಗೆ ಶೇ.25, 20, 15, 10ನ್ನು ಹೆಚ್ಚಿಸಿರುವುದು 3 ವರ್ಷಗಳಿಗೊಮ್ಮೆ ತಾನೇ ತಾನಾಗಿ ಜಾರಿಗೆ ಬರುವುದಾಗಿ ನಿರ್ಣಯಿಸಿರುವುದು ಕಂಡು ಬರುತ್ತದೆ. ಅಲ್ಲದೆ ಜಯನಗರ ವಾಣಿಜ್ಯ ಸಂಕೀರ್ಣದ ಪರವಾನಗಿದಾರರು ವರ್ಗವನ್ನು ಬದಲಾಯಿಸಿಕೊಡುವಂತೆ ಕೋರಿಕೊಂಡಿರುವುದು ಎಲ್ಲೂ ಕಂಡು ಬರುವುದಿಲ್ಲ.

ಮೇಲ್ಕಂಡ ಎಲ್ಲಾ ಕಾರಣಗಳಿಂದ ಹಾಗೂ ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯನ್ನು ಮತ್ತು ಆಯುಕ್ತರು ಸರ್ಕಾರಕ್ಕೆ ಬರೆದಿರುವ ಪತ್ರಗಳನ್ನು ಸಮಿತಿಯು ಗಮನದಲ್ಲಿಟ್ಟುಕೊಂಡು ಹಿಂದಿನ ಎಲ್ಲಾ ನೋಟೀಸ್‌ಗಳನ್ನು ರದ್ದುಪಡಿಸುತ್ತಾ, ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ತರಕಾರಿ ಮಾರುಕಟ್ಟೆಯ ಒಳಭಾಗದಲ್ಲಿರುವ ನೆಲ ಅಂತಸ್ತು ಮತ್ತು ಮೆಜನೈನ್ ಪ್ಲೋರಿನಲ್ಲಿರುವ ಮಳಿಗೆಗಳು, ಬ್ಯಾಂಕುಗಳು, ಸರ್ಕಾರಿ ಕಛೇರಿಗಳು ಕೋಲ್ಡ್ ಸ್ಟೋರೇಜ್ ಮತ್ತು ಫಿಶ್ ಮಾರ್ಕೆಟ್‌ನ್ನು ಹೊರತುಪಡಿಸಿ ದಿನಾಂಕ:26-09-1997ರ ನಗರ ಪಾಲಿಕೆಯ ನಿರ್ಣಯದಂತೆ ಜಯನಗರ ವಾಣಿಜ್ಯ ಸಂಕೀರ್ಣವು ಯಾವ ವರ್ಗಕ್ಕೆ ಬರುತ್ತದೆಂದು ಸಂಬಂಧ ಪಟ್ಟ ಅಧಿಕಾರಿಗಳು ದೃಢಪಡಿಸಿಕೊಂಡು ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆದಾರರು ದಿನಾಂಕ:01-04-1998ರಲ್ಲಿ ಪಾವತಿಸುತ್ತಿದ್ದ ಪರವಾನಗಿ ಶುಲ್ಕದ ಮೇಲೆ ಶೇಕಡ 25, 20, 15 ಮತ್ತು 10ರಂತೆ ನಿಗಧಿಪಡಿಸಿ ದಿನಾಂಕ:01-04-1998ರಿಂದ ಜಾರಿಗೆ ನೀಡಿ ವಸೂಲು ಮಾಡುವುದೆಂದು, ಹಾಗೂ ಜಾರಿಯಲ್ಲಿರುವ ಶುಲ್ಕದ ಮೇಲೆ ಶೇ.25, 20, 15, 10ರಂತೆ ಪ್ರತಿ 3 ವರ್ಷಗಳಿಗೊಮ್ಮೆ ಪರವಾನಗಿ ಶುಲ್ಕವನ್ನು ಹೆಚ್ಚಿಸಿ ವಸೂಲು ಮಾಡಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>06.ವಿಷಯ:ಸಂಖ್ಯೆ:ಅಸ್ಥಾಸ/(ಆ)/46/2011-12</u>

ಶ್ರೀ.ಅಲಿಜಾನ್‌ರವರು ಬೆಂಗಳೂರು ನರಸಿಂಹರಾಜು ರಸ್ತೆ, ನ್ಯೂ ಬಂಬೂಬಜಾರ್ ಚರಂಡಿಯ ಪಕ್ಕದಲ್ಲಿರುವ 6X4 ಅಡಿಗಳ ಜಾಗವನ್ನು ನಗರ ಪಾಲಿಕೆಯಿಂದ ಗುತ್ತಿಗೆಗೆ ನೀಡಿದ್ದು, ನಂತರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಡವಳಿಕೆಯಂತೆ 8X20 ಅಡಿಗಳ ಜಾಗವನ್ನು ನನ್ನ ಪತ್ನಿಯ ಹೆಸರಿಗೆ ಮಾರಾಟ ಮಾಡಲು ದಿನಾಂಕ:31-12-1998ರಲ್ಲಿ

ತೀರ್ಮಾನಿಸಿದ್ದು, ಇದುವರೆವಿಗೂ ಕ್ರಯ ಮಾಡಿಕೊಟ್ಟಿರುವುದಿಲ್ಲ. ಆದುದರಿಂದ ಸದರಿ ಸ್ವತ್ತನ್ನು ನನ್ನ ಪತ್ನಿಯ ಹೆಸರಿಗೆ ಕ್ರಯಕ್ಕಾಗಲೀ ಅಥವಾ ನನ್ನ ಹೆಸರಿಗೆ ಗುತ್ತಿಗೆಯನ್ನಾಗಲೀ ಮುಂದುವರೆಸಿಕೊಡಬೇಕೆಂದು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:31-12-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರತಿವಾದಿಗಳು ಸದರಿ ಜಾಗವು ಬೃಹತ್ ನೀರು ಗಾಲುವೆ ಪಕ್ಕವಿದ್ದು ರಸ್ತೆ ಅಗಲೀಕರಣಕ್ಕಾಗಿ ಉಪಯೋಗಿಸಿಕೊಳ್ಳಬೇಕಾಗಿರುವುದರಿಂದ ಮೇಲ್ಮನವಿದಾರರು ಕೋರಿರುವಂತೆ ಹಮಚಿಕೆ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರು ಸದರಿ ಪ್ರದೇಶದಲ್ಲಿ ಅನಧಿಕೃತವಾಗಿ ಸಾಕಷ್ಟು ಅಂಗಡಿಗಳನ್ನು ದೊಡ್ಡ ಮಳೆ ನೀರಿನ ಮೋರಿಯ ಮೇಲೆ ನಿರ್ಮಿಸಿಕೊಂಡು ವ್ಯಪಾರ ವಹಿವಾಟು ನಡೆಸುತ್ತಿದ್ದರೂ ಸಹ ಅವರನ್ನು ತೆರವುಗೊಳಿಸದೆ ನನ್ನ ಅಂಗಡಿಗೆ ಮಾತ್ರ ನೋಟೀಸ್ ನೀಡಿರುತ್ತಾರೆ. ಇದು ನ್ಯಾಯ ಸಮ್ಮತವಾಗಿರುವುದಿಲ್ಲದಿರುವುದರಿಂದ ಸದರಿ ಅಂಗಡಿಯನ್ನು ನನ್ನ ಹೆಸರಿಗಾಗಲೀ ಅಥವಾ ನನ್ನ ಹೆಂಡತಿಯ ಹೆಸರಿಗಾಗಲೀ ಕ್ರಯಕ್ಕೆ ಅಥವಾ ಗುತ್ತಿಗೆ ಅವಧಿಯನ್ನು ಮುಂದುವರೆಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

<u>**ನಿರ್ಣಯ**</u>:- ಮೇಲ್ಮನವಿದಾರರ, ಪ್ರತಿವಾದಿಗಳ ಹಾಗೂ ಕಡತದಲ್ಲಿರುವ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಹಾಗೂ ಸಮಿತಿಯು ದಿನಾಂಕ:04-02-2012ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿದಾಗ ನ್ಯೂ ಬಂಬೂ

-4-

ಬಜಾರ್ ಚರಂಡಿಯ ಮೇಲೆಯೇ ಸುಮಾರು ಮಳಿಗೆಗಳನ್ನು ನಿರ್ಮಿಸಿಕೊಂಡು ಹಾಗೂ ರಸ್ತೆಗಾಗಿ ಮೀಸಲಿಟ್ಟಿರುವ ಜಾಗವನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸದರಿ ಮಳಿಗೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಂಡಿರುವುದು ಕಂಡುಬರುತ್ತಿಲ್ಲ. ಮೇಲ್ಮನವಿದಾರರು ಕೋರಿರುವ ಜಾಗದ ಬಗ್ಗೆ ಈಗಾಗಲೇ ದಿನಾಂಕ:26-10-2004ರಂದು ಮಹಾನಗರ ಪಾಲಿಕೆಯ ಸಭೆಯಲ್ಲಿ ಫಲಾನುಭವಿಗೆ ಬದಲಿ ನಿವೇಶನವನ್ನು ಗುರುತಿಸಿ ನೀಡುವ ಬಗ್ಗೆ ಆಯುಕ್ತರು ಕ್ರಮ ತೆಗೆದುಕೊಳ್ಳಲು ಒಪ್ಪುವುದೆಂದು ತೀರ್ಮಾನಿಸಲಾಗಿರುವುದು ಕಂಡು ಬಂದಿರುತ್ತದೆ.

ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳು ಅನಧಿಕೃತವಾಗಿ ನಡೆಯುತ್ತಿರುವ ಮಳಿಗೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದಿರುವುದನ್ನು ಗಂಭೀರವಾಗಿ ಪರಿಗಣಿಸುತ್ತದೆ. ಹಾಗೂ ಮೇಲ್ಮನವಿದಾರರು ಕೋರಿರುವ ಜಾಗದ ಬಗ್ಗೆ ಈಗಾಗಲೇ ದಿನಾಂಕ:26-10-2004ರ ಮಹಾನಗರ ಪಾಲಿಕೆಯ ನಿರ್ಣಯದಂತೆ ಆಯುಕ್ತರು ಮೇಲ್ಮನವಿದಾರರಾದ ಶ್ರೀ.ಆಲಿಜಾನ್‌ರವರಿಗೆ ಬದಲಿ ಜಾಗವನ್ನು ನೀಡಲು ಹಾಗೂ ಅನಧಿಕೃತ ಮಳಿಗೆಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ತೆ/47/2011-12</u>

ಎಂ.ರಾಜ ಎಂಬುವವರು ಸಹಾಯಕ ಕಂದಾಯ ಅಧಿಕಾರಿ (ಗೋವಿಂದ ರಾಜನಗರ)ರವರು ಸಂಖ್ಯೆ:547/50/1, 10ನೇ ಸಿ ಮುಖ್ಯರಸ್ತೆ, 6ನೇ ಬ್ಲಾಕ್, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು ಈ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಿಸಿ ನೀಡಿರುವ ದಿನಾಂಕ:25-06-2011ರ ನೋಟೀಸಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-11-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಸಂಬಂಧಪಟ್ಟ ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ನೋಟೀಸ್ ನೀಡಲು ಸೂಚಿಸಿ ಪ್ರಕರಣವನ್ನು ಮುಂದೂಡಲಾಯಿತು.

<u>08.ವಿಷಯ:ಸಂಖ್ಯೆ:ಅಸ್ಥಾಸ/(ಜಾ/48/2011-12</u>

ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:10-01-2012ರ ಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ನೋಟೀಸ್ ಜಾರಿ ಮಾಡಲು ಸೂಚಿಸಿ, ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ.

<u>09.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/49/2011-12</u>

ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:03ರ) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-01-2012ರ ಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

<u>10.ವಿಷಯ:ಸಂಖ್ಯೆ:ಅಸ್ಥಾಸ/(ಖಾ)/50/2011-12</u>

ಶ್ರೀ.ಪಿ.ವಿನ್ಸೆಂಟ್‌ರವರು ಸ್ವತ್ತಿನ ಸಂಖ್ಯೆ:13, 13/1, 13/2 ಮತ್ತು 13/3, 1ನೇ ಮುಖ್ಯರಸ್ತೆ, ಜಕ್ಕಸಂದ್ರ, ವಾರ್ಡ್-151ರ ಸ್ವತ್ತುಗಳ ಖಾತಾ ರದ್ದುಪಡಿಸಲು ಕೋರಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹ ಕಂದಾಯ ಅಧಿಕಾರಿ,

ಕೋರಮಂಗಲ ಉಪ ವಲಯರವರು ದಿನಾಂಕ:24-10-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಕ್ಷಿಣ)ರವರ ದಿನಾಂಕ:26-11-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

11.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/51/2011-12

ಶ್ರೀ. ದಾಮೋದರ್, ಮಾಲೀಕರು, ದಾವೋದರ್ ಎಂಟರ್ ಪ್ರೈಸಸ್, ನಂ.645, 10ನೇ ಇ ಮುಖ್ಯರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ಇವರು ದಿನಾಂಕ:04-01-2012ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ದಿನಾಂಕ:18-01-2007ರಿಂದ 21-06-2007ರವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯದ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಕಾರ್ಯ ಹಾಗೂ ಮಹಾಲಕ್ಷ್ಮಿಪುರ ಉಪ-ವಿಭಾಗದ ಸರಹದ್ದುಗಳಲ್ಲಿ ಮಳೆಗಾಲದಲ್ಲಿ ಮಳೆ ನೀರಿನಿಂದ ಸಂಭವಿಸಬಹುದಾದ ಅನಾಹುತಗಳನ್ನು ತಡೆಯುವ ಕೆಲಸವನ್ನು ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:17-01-2007ರ ಕಾರ್ಯಾದೇಶದಂತೆ ದಿನಾಂಕ:18-01-2007ರಿಂದ 26-06-2007ರವರೆಗೆ ಕಾರ್ಯನಿರ್ವಹಿಸಿರುತ್ತೇವೆ. ಆದರೆ ದಿನಾಂಕ:16-12-2011ರಂದು ಪತ್ರ ನೀಡಿ ಕೆ.ಟಿ.ಪಿ.ಪಿ. ಕಾಯ್ದೆ ಉಲ್ಲಂಘನೆ ಯಾಗಿರುವುದರಿಂದ ದಿನಾಂಕ:25-11-2011ರ ಆಯುಕ್ತರ ಆದೇಶದಂತೆ ನಿಮ್ಮ ಮನವಿಯನ್ನು ಪರಿಗಣಿಸಲು



ಬರುವುದಿಲ್ಲವೆಂದು ತಿಳಿಸಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-01-2012ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ಪರವಾಗಿ ಶ್ರೀ.ಮರಳುಸಿದ್ದಪ್ಪ, ತಾಂತ್ರಿಕ ಸಹಾಯಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಗುತ್ತಿಗೆದಾರರಾಗಿದ್ದು ಪ್ರತಿವಾದಿಗಳಿಂದ ಕಾರ್ಯಾದೇಶ ಪಡೆದು ಕಾರ್ಯನಿರ್ವಹಿಸಿರುತ್ತೇನೆ. ನಂತರ ನಗರ ಪಾಲಿಕೆಯ ಹಿತದೃಷ್ಟಿಯಿಂದ ನನ್ನ ಗುತ್ತಿಗೆ ಅವಧಿಯನ್ನು ಮುಂದುವರೆಸಿಕೊಂಡು ಹೋಗುವಂತೆ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ. ಅದರಂತೆ ನಾನು ಕಾರ್ಯನಿರ್ವಹಿಸಿರುತ್ತೇನೆ. ಆದರೆ ನಾನು ಕಾರ್ಯ ನಿರ್ವಹಿಸಿರುವ ಅವಧಿಗೆ ಹಣವನ್ನು ಪಾವತಿಸಿರುವುದಿಲ್ಲ. 2 ವರ್ಷಗಳು ಕಳೆದ ನಂತರ ನನಗೆ ನೋಟೀಸ್ ನೀಡಿ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಕಾರ್ಯನಿರ್ವಹಿಸಿರುವ ಅವಧಿಗೆ ಗುತ್ತಿಗೆ ಹಣವನ್ನು ಪಾವತಿಸಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಇದರಿಂದಾಗಿ ನನಗೆ ಏನು ಮಾಡಬೇಕೆಂದು ತೋಚದೆ ತಮ್ಮ ಮುಂದೆ ನನ್ನ ಹೇಳಿಕೆಗಳನ್ನು ಲಿಖಿತವಾಗಿ ಸಲ್ಲಿಸಿರುತ್ತೇನೆ. ನನ್ನ ಲಿಖಿತ ಹೇಳಿಕೆಗಳನ್ನು ಪರಾಂಭರಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಪ್ರತಿ ವಾದಿಗಳನ್ನು ಪ್ರಶ್ನಿಸಲಾಗಿ ಈ ಬಗ್ಗೆ ನನಗೇನು ತಿಳಿದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

12. ವಿಷಯ:ಸಂಖ್ಯೆ:ಅಸ್ಥಾಸ/(ಜಾ/52/2011-12

ಮೆ|| ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01 ಮತ್ತು ಪ್ಯಾಕೇಜ್ ಸಂಖ್ಯೆ:03) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ನಿರ್ಣಯ**:-ಮೆ|| ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01 ಮತ್ತು ಪ್ಯಾಕೇಜ್ ಸಂಖ್ಯೆ:03) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ವಿಚಾರಣೆಯು ನಡೆಯುತ್ತಿರುತ್ತದೆ. ಆದುದರಿಂದ ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಣೆ ಮತ್ತು ತೀರ್ಮಾನವನ್ನು ಕಾಯ್ದಿರಿಸಿ ಜಂಟಿ ಆಯುಕ್ತರು (ಜಾಹೀರಾತು)ರವರ ಸಂಖ್ಯೆ:ಉ.ಆ(ಜಾ)/ಪಿ.ಆರ್/90/07-08 ದಿನಾಂಕ:22-09-2010ರಂದು ನೀಡಿರುವ ನೋಟೀಸ್‌ಗಳಿಗೆ ಸಮಿತಿಯು ಅಂತಿಮ ತೀರ್ಮಾನ ಕೈಗೊಳ್ಳುವವರೆವಿಗೂ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:12-11-2010ರಂದು ಬೆಳಗ್ಗೆ 11.00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಎಲ್ಲಾ ಜಂಟಿ ನಿರ್ದೇಶಕರು ನಗರ ಯೋಜನೆ |
| 03 | ಎಂ.ಮುನಿರಾಜು | ಸದಸ್ಯರು | ಎಲ್ಲಾ ಸಹಾಯಕ ನಿರ್ದೇಶಕರು ನಗರ ಯೋಜನೆ |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ವಾಣಿಜ್ಯ ಕಟ್ಟಡ, ಮಾಲ್, ಬಹು ಮಹಡಿ ಕಟ್ಟಡ ಹಾಗೂ ಇನ್ನಿತರೆ ಕಟ್ಟಡಗಳಿಗೆ ನಕ್ಷೆಗಳನ್ನು ಮಂಜೂರಾತಿ ನೀಡಲಾಗಿರುತ್ತದೆ. ಸದರಿ ನಕ್ಷೆಗಳನ್ನು ನೀಡುವಾಗ ಅನುಸರಿಸಿರುವ ಮಾನದಂಡಗಳೇನು. ಸಿ.ಡಿ.ಪಿ-2015ರ ಪ್ರಕಾರ ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆಯೇ ಅದೇ ರೀತಿ ನಕ್ಷೆ ಮಂಜೂರಾತಿ ಪಡೆದ ಮಾಲೀಕರು ಕಟ್ಟಡಗಳನ್ನು ಮಂಜೂರಾತಿ ನಕ್ಷೆಯ ಪ್ರಕಾರವೇ ನಿರ್ಮಿಸಿರುತ್ತಾರೆಯೇ. ಒಂದು ವೇಳೆ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಂತಹ ಮಾಲೀಕರ ವಿರುದ್ಧ ಎಷ್ಟು ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ. ಸಿ.ಡಿ.ಪಿ.ಯಲ್ಲಿ ನಮೂದಿಸಿರುವ ಮಾದರಿಯಲ್ಲಿಯೇ ರಸ್ತೆಗಳನ್ನು ಬಿಟ್ಟು ಕಟ್ಟಡದ ಮಾಲೀಕರು ಕಟ್ಟಡಗಳನ್ನು

ನಿರ್ಮಿಸಿರುತ್ತಾರೆಯೇ ನಕ್ಷೆಯನ್ನು ಮಂಜೂರು ಮಾಡುವಾಗ ನೀವುಗಳು ಸ್ಥಳ ಪರಿಶೀಲನೆ ಮಾಡಿ ನಕ್ಷೆ ಮಂಜೂರಾತಿ ಮಾಡಲಾಗಿರುತ್ತದೆಯೇ ಎಂಬ ಬಗ್ಗೆ ವಿವರಗಳನ್ನು ನೀಡುವುದು.

ಮುಂದುವರೆದಂತೆ ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಾಗ ಅಂತಹ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ ಕಲಂ 321(1) ಮತ್ತು (2)ರಡಿ (Provisional Order) ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ ಆದೇಶಗಳನ್ನು ಪಡೆದಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3) (Confirmation Order) ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಸದರಿ ಸ್ಥಿರೀಕರಣ ಆದೇಶವನ್ನು ಪ್ರಶ್ನಿಸಿ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ ಆದೇಶಗಳನ್ನು ಪಡೆದಿರುತ್ತಾರೆಂಬ ಬಗ್ಗೆ ವಿವಿರವಾದ ವರದಿಯನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯ ಸದಸ್ಯರು ಮಾತನಾಡುತ್ತಾ, ನಕ್ಷೆ ಮಂಜೂರಾತಿ ಪಡೆದ ಮಾಲೀಕರು ಕಟ್ಟಡವನ್ನು ಪ್ರಾರಂಭಿಸುವ ಮೊದಲು ಪ್ರಾರಂಭಿಕ ಪ್ರಮಾಣ ಪತ್ರವನ್ನು ಪಡೆಯಬೇಕಾಗಿರುತ್ತದೆ. ಹಾಗೂ ಕಟ್ಟಡಗಳನ್ನು ನಿರ್ಮಿಸಿದ ನಂತರ ಸ್ವಾಧೀನಪತ್ರ ಪಡೆಯಬೇಕಾಗಿರುತ್ತದೆ. ನಕ್ಷೆ ಮಂಜೂರಾತಿ ಪಡೆದಂತಹ ಎಷ್ಟು ಮಾಲೀಕರು ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಮತ್ತು ಸ್ವಾಧೀನಪತ್ರವನ್ನು ಪಡೆದಿರುತ್ತಾರೆಂಬ ಬಗ್ಗೆ ವಿವರಗಳನ್ನು ಒದಗಿಸುವಂತೆ ಸೂಚಿಸಿದರು.

ಸಭೆಯಲ್ಲಿ ಹಾಜರಿದ್ದ ಜಂಟಿ ನಿರ್ದೇಶಕರು-ನಗರಯೋಜನೆ ರವರು ನಕ್ಷೆ ಮಂಜೂರಾತಿಯನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಗರ ಯೋಜನೆಯವರು ನೀಡುತ್ತಿದ್ದು, ಮೇಲ್ವಿಚಾರಣೆಯನ್ನು ವಾರ್ಡ್ ಮಟ್ಟದ ಇಂಜಿನಿಯರ್‌ಗಳೇ ನಿರ್ವಹಿಸುತ್ತಿರುತ್ತಾರೆ. ಈಗ ನಕ್ಷೆ ಮಂಜೂರಾತಿ ನೀಡುವ ಅಧಿಕಾರವನ್ನು ಕೂಡ ಆಯಾ ಉಪವಿಭಾಗದ ಇಂಜಿನಿಯರ್‌ಗಳಿಗೇ ವರ್ಗಾಯಿಸಲಾಗಿರುತ್ತದೆ. ನಗರ ಯೋಜನೆಯವರ ಹಂತದಲ್ಲಿ ನಕ್ಷೆಯನ್ನು ಮಂಜೂರು ಮಾಡುವಾಗ ಯಾವುದಾದರೂ ತಂಟೆ ತಕರಾರು ಬಂದಲ್ಲಿ ಸ್ಥಳ ಪರಿಶೀಲನೆ ಮಾಡಲಾಗುತ್ತಿತ್ತು. ಇಲ್ಲದಿದ್ದ ಪಕ್ಷದಲ್ಲಿ ನಕ್ಷೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ ಮಾಲೀಕರು ಬಿಲ್ಡಿಂಗ್ ಬೈಲಾ ಪ್ರಕಾರ ಎಲ್ಲಾ ದಾಖಲೆಗಳನ್ನು ಒದಗಿಸಿದಲ್ಲಿ ನಕ್ಷೆಯನ್ನು ಮಂಜೂರು ಮಾಡಲಾಗುತ್ತಿತ್ತು. ಪ್ರಾರಂಭಿಕ ಪ್ರಮಾಣ ಪತ್ರ ಮತ್ತು ಸ್ವಾಧೀನ ಪತ್ರವನ್ನು ಪಡೆಯುವ ಬಗ್ಗೆ ಕಟ್ಟಡದ ಮಾಲೀಕರು ಉಪವಿಭಾಗದ ಇಂಜಿನಿಯರ್‌ಗಳಿಂದಲೇ ಪಡೆಯಬಹುದಾಗಿರುತ್ತದೆ. ಪ್ರಮಾಣ ಪತ್ರಗಳನ್ನು ಪಡೆಯದಂತ ಮಾಲೀಕರ ವಿರುದ್ಧ ಕಾನೂನು ಚೌಕಟ್ಟಿನಲ್ಲಿ ಕ್ರಮ ವಹಿಸಲಾಗಿರುತ್ತದೆಂದು ಸಮಿತಿಗೆ ತಿಳಿಸಿದರು.

ಕೊನೆಯದಾಗಿ ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ಅಧಿಕಾರಿಗಳಾದ ನೀವು ಸೇರಿ ಕಾನೂನಿನಗೆ ಹಾಗೂ ನಗರದ ನಾಗರೀಕರಿಗೆ ಯಾವುದೇ ಚ್ಯುತಿ ಬರದಂತೆ ಕಾರ್ಯನಿರ್ವಹಿಸೋಣ ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ

ಅಧ್ಯಕ್ಷರು,

ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:12-11-2010ರಂದು ಮಧ್ಯಾಹ್ನ 3.00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 03 | ಎಂ.ಮುನಿರಾಜು | ಸದಸ್ಯರು | ಸಹಾಯಕ ಆಯುಕ್ತರು (ಜಾಹೀರಾತು) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಎಲ್ಲಾ ವಲಯದ ಕಂದಾಯ ಅಧಿಕಾರಿಗಳು (ಜಾಹೀರಾತು) |
| 05 | ಡಾ॥ಎಸ್.ರಾಜು | ಸದಸ್ಯರು | ಎಲ್ಲಾ ವಲಯದ ಸಹಾಯಕ ಕಂದಾಯ ಅಧಿಕಾರಿಗಳು (ಜಾಹೀರಾತು) |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ಜಾಹೀರಾತು ಫಲಕಗಳನ್ನು ಅಳವಡಿಸಲಾಗಿರುತ್ತದೆ. ಅನಧಿಕೃತವಾಗಿ ಅಳವಡಿಸಿಕೊಂಡಿರುವ ಜಾಹೀರಾತುದಾರರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತು ಫಲಕಗಳು, ಬ್ಯಾನರ್‌ಗಳು ಮತ್ತು ಬಂಟಿಂಗ್ಸ್‌ಗಳನ್ನು ತೆರವುಗೊಳಿಸಲು ಅನುಸರಿಸುತ್ತಿರುವ ಕ್ರಮಗಳೇನು. ಜಾಹೀರಾತಿನಿಂದ ನಗರ ಪಾಲಿಕೆಯ ಬೊಕ್ಕಸಕ್ಕೆ ವಾರ್ಷಿಕ ಎಷ್ಟು ಆಧಾಯ ಬರುತ್ತಿದೆ. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತುಗಳ ವಿರುದ್ಧ ಇದುವರೆವಿಗೂ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ.

ಜಾಹೀರಾತು ಮಾಲೀಕರು ಪರವಾನಗಿಯನ್ನು ಪಡೆಯುವಾಗ ನೀಡುವ ಅಳತೆ ಮತ್ತು ಸಂಖ್ಯೆಗಳಿಗಿಂತ ಹೆಚ್ಚು ಅಳತೆ ಮತ್ತು ಸಂಖ್ಯೆಯ ಜಾಹೀರಾತುಗಳನ್ನು ಪ್ರದರ್ಶಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಈ ರೀತಿ ಪ್ರದರ್ಶಿತವಾಗುತ್ತಿರುವ ಎಷ್ಟು ಜಾಹೀರಾತುಗಳನ್ನು ಪತ್ತೆ ಹಚ್ಚಲಾಗಿರುತ್ತದೆ ಮತ್ತು ಅಂತಹ ಜಾಹೀರಾತುದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ. ಇದರಿಂದಾಗಿ ನಗರ ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುವುದಿಲ್ಲವೆ ಎಂಬ ಬಗ್ಗೆ ವಿವರವನ್ನು ನೀಡುವುದು.

ಮುಂದುವರೆದಂತೆ ಕೆಲವೊಂದು ಜಾಹೀರಾತುದಾರರು ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಪಡೆದಿದ್ದು ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ. ಪರವಾನಗಿ ಅವಧಿ ಮುಗಿದಿದ್ದರೂ ಸಹ



ಕಾಲಮಿತಿಯೊಳಗೆ ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ತನ್ನಷ್ಟಕ್ಕೆ ತಾನೇ ಪರವಾನಗಿಯು (ಡೀಮ್ಡ್ ಪರ್ಮಿಷನ್) ಮುಂದುವರೆಯುತ್ತದೆಂದು ಭಾವಿಸಿ ಅಳವಡಿಸಿಕೊಂಡಿರುವ ಜಾಹೀರಾತು ಫಲಕಗಳೆಷ್ಟು.

ಹಳೆಯ ಬಸ್ ನಿಲ್ದಾಣಗಳನ್ನು ಕೆಡವಿ ಅದೇ ಸ್ಥಳದಲ್ಲಿ ಎಷ್ಟು ಹೊಸ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲಾಗಿರುತ್ತದೆ. ಹಳೆಯ ಬಸ್ ನಿಲ್ದಾಣವನ್ನು ಕೆಡವಿದಾಗ, ಆ ಸ್ಥಳದಲ್ಲಿದ್ದ ಕಬ್ಬಿಣ ಮತ್ತಿತರ ವಸ್ತುಗಳನ್ನು ಬಿಬಿಎಂಪಿಗೆ ಹಸ್ತಾಂತರಿಸಲಾಗಿದೆಯೇ. ಜಾಹೀರಾತು ಬೈಲಾ 2006 ರಲ್ಲಿ ಯಾವುದೇ ಕಾರಣಕ್ಕೂ ಬಸ್ ತಂಗುದಾಣಗಳ ಸ್ಥಳ ಬದಲಾವಣೆಗೆ ಅವಕಾಶ ಇರುವುದಿಲ್ಲ. ಯಾವುದಾದರೂ ಅನಿವಾರ್ಯ ಸಂದರ್ಭದಲ್ಲಿ ಮಾನ್ಯ ಆಯುಕ್ತರ ಪೂರ್ವಾನುಮತಿ ಪಡೆದ ಸ್ಥಳ ಬದಲಾವಣೆ ಅರ್ಜಿಯನ್ನು ಪರಿಗಣಿಸಬಹುದಾಗಿರುತ್ತದೆ. ಎಷ್ಟು ಪ್ರಕರಣಗಳಲ್ಲಿ ಆಯುಕ್ತರ ಪೂರ್ವಾನಮತಿ ಪಡೆದು ಸ್ಥಳ ಬದಲಾವಣೆ ಮಾಡಿ ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿರುತ್ತದೆ. ಪ್ರಸ್ತಾಪಿತ ಟೆಂಡರ್‌ನ ನಿಯಮಗಳಿಗೆ ವಿರುದ್ಧವಾಗಿ, ಜಾಹಿರಾತುದಾರರು ಬಸ್ ತಂಗುದಾಣ ನಿರ್ಮಾಣ ಮಾಡಿದಲ್ಲಿ, ಜಾಹಿರಾತು ಒಪ್ಪಂದವು ಮುರಿದು ಹೋಗುತ್ತದೆಂದು ಷರತ್ತಿನಲ್ಲಿ ತಿಳಿಸಲಾಗಿದೆ. ಆದರೆ 85 ಬಸ್ ತಂಗುದಾಣಗಳು ಪರವಾನಗಿ ಇಲ್ಲದೆ ಬದಲಿ ಸ್ಥಳದಲ್ಲಿ ನಿರ್ಮಾಣಗೊಂಡಿರುವುದಾಗಿ ತಿಳಿದು ಬಂದಿದ್ದು, ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ. ಜಾಹೀರಾತುದಾರರೇ ಅವರ ಅನುಕೂಲಕ್ಕೆ ತಕ್ಕಂತೆ, ಅನಧಿಕೃತವಾಗಿ ಸ್ಥಳ ಬದಲಾವಣೆ ಮಾಡಿಕೊಂಡು ಬಸ್ ತಂಗುದಾಣಗಳನ್ನು ನಿರ್ಮಿಸಿದಲ್ಲಿ ಅದು ನಿಯಮ ಬಾಹೀರವಲ್ಲವೆ. ಕಿಯಾಸ್ಕ್ ಮಾದರಿಯ ಬಸ್‌ತಂಗುದಾಣದಲ್ಲಿ ಎರಡು ಚಿಕ್ಕ-ಚಿಕ್ಕ ಬೋರ್ಡ್‌ಗಳಿದ್ದು, ಅವುಗಳಲ್ಲಿ ಬಿಬಿಎಂಪಿಯ ಸಾಮಾಜಿಕ ಸುದ್ದಿ ಪ್ರಕಟಿಸಬೇಕು. ಆದರೆ ಜಾಹಿರಾತುದಾರರು ಪಾಲಿಸುತ್ತಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ. ಈ ಬಗ್ಗೆ ಜಾಹೀರಾತುದಾರರ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ. ಕರಾರು ಪತ್ರದ ಪ್ರಕಾರ 120 ದಿನಗಳಲ್ಲಿ ಬಸ್ ತಂಗುದಾಣ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸ ಬೇಕು. ಬಸ್‌ತಂಗುದಾಣ ಪೂರ್ಣಗೊಂಡ ಬಗ್ಗೆ ಎ.ಇ.ಇ.(ಜಾಹಿರಾತು) ರವರು ದೃಡೀಕರಣ ನೀಡಬೇಕು. ಆದರೆ ಬಸ್ ತಂಗುದಾಣಗಳು ಪೂರ್ಣಗೊಳ್ಳದಿದ್ದರೂ, ಪೂರ್ಣಗೊಂಡ ಬಗ್ಗೆ ದೃಡೀಕರಣ ನೀಡಿರು ವಂತಹ ಪ್ರಕರಣಗಳಿದ್ದಲ್ಲಿ ಏನು ಕ್ರಮ ಕೈಗೊಳ್ಳಲಾಗಿದೆ. ಬಿಬಿಎಂಪಿ & ರಿಪ್ಪಲ್ ಮೀಡಿಯಾರವರು ದಿನಾಂಕ:14-12-2009ರಂದು 50ಬಸ್ ತಂಗುದಾಣ ನಿರ್ಮಾಣ ಮಾಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಇವುಗಳಲ್ಲಿ 31 ಬಸ್ ತಂಗುದಾಣ ನಿರ್ಮಾಣವಾಗಿದ್ದು, ಅದರಲ್ಲಿ 19 ಬಸ್ ತಂಗುದಾಣಗಳು

ಬದಲಿ ಸ್ಥಳದಲ್ಲಿ ನಿರ್ಮಾಣಗೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆಂಬ ಬಗ್ಗೆ ವಿವಿರವನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಸಮಿತಿಯ ಸದಸ್ಯರು ಮಾತನಾಡುತ್ತಾ, ಜಾಹೀರಾತುದಾರರು ತಮಗೆ ಇಷ್ಟ ಬಂದ ರೀತಿಯಲ್ಲಿ ಜಾಹೀರಾತು ಫಲಕಗಳನ್ನು ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಇದರಿಂದಾಗಿ ನಗರ ಸೌಂದರ್ಯಕ್ಕೆ ಅಡಚಣೆಯಾಗುತ್ತಿರುವುದನ್ನು ಗಮನಿಸಬಹುದಾಗಿರುತ್ತದೆ. ಅದರಲ್ಲೂ ಇತ್ತೀಚೆಗೆ ಹುಟ್ಟುಹಬ್ಬಗಳ ನೆಪದಲ್ಲಿ ಎಲ್ಲೆಂದರಲ್ಲಿ ಬ್ಯಾನರ್ಸ್ ಮತ್ತು ಬಂಟಿಂಗ್ಸ್‌ಗಳನ್ನು ಅಳವಡಿಸುತ್ತಿರುವುದು ಸರ್ವೆ ಸಾಮಾನ್ಯವಾಗಿಬಿಟ್ಟಿದೆ. ಆದುದರಿಂದ ಯಾರದೇ ಹುಟ್ಟುಹಬ್ಬದ ಜಾಹೀರಾತಾಗಿರಲಿ ಅಥವಾ ಅನುಮತಿ ಪಡೆಯದೇ ಪ್ರದರ್ಶಿಸಿರುವ ಜಾಹೀರಾತಾಗಲಿ ಕೂಡಲೇ ತೆರವುಗೊಳಿಸುವುದು. ನಗರದ ಸೌಂದರ್ಯಕ್ಕೆ ಚ್ಯುತಿ ಅಥವಾ ನಗರ ಪಾಲಿಕೆಯ ಬೊಕ್ಕಸಕ್ಕೆ



ನಷ್ಟವುಂಟಾಗುವಂತಹ ಯಾವುದೇ ಸಂದರ್ಭದಲ್ಲೂ ಯಾವುದೇ ಒತ್ತಡಕ್ಕೆ ಮಣಿಯದೆ ಕಾರ್ಯನಿರ್ವಹಿಸುವುದೆಂದು ತಿಳಿಸಿದರು.

ಬಸ್ ತಂಗುದಾಣಗಳನ್ನು ನಿಗಧಿತ ಸ್ಥಳಗಳಲ್ಲಿಯೇ ನಿರ್ಮಿಸಲಾಗುತ್ತಿದೆ. ಒಂದು ವೇಳೆ ಬದಲಿಯಾಗಿ ನಿರ್ಮಾಣ ಮಾಡಬೇಕಾದಲ್ಲಿ ಆಯುಕ್ತರ ಅನುಮೋದನೆ ಪಡೆದು ಸ್ಥಳ ಬದಲಾವಣೆ ಮಾಡಿಕೊಳ್ಳಲಾಗುತ್ತಿದೆ. ಒಂದೊಂದು ಕಡೆ ನಿಗಧಿತ ವೇಳೆಗೆ ಬಸ್ ತಂಗುದಾಣಗಳನ್ನು ನಿರ್ಮಿಸಲು ಸಾಧ್ಯವಾಗಿರುವುದಿಲ್ಲ. ಆದಾಗ್ಯೂ ಸಹ ಟೆಂಡರ್ ಪಡೆದ ಗುತ್ತಿಗೆದಾರರಿಗೆ ಕೂಡಲೇ ಮುಗಿಸಿಕೊಡಬೇಕೆಂದು ತಿಳಿಸಲಾಗಿರುತ್ತದೆ. ಬಸ್ ತಂಗುದಾಣಗಳ ಮೇಲೆ ಬಿ.ಬಿ.ಎಂ.ಪಿ.ಯ ಸುದ್ದಿಯನ್ನು ಪ್ರಕಟಿಸದಿದ್ದವರ ಮೇಲೆ ಕಾನೂನಿನಂತೆ ಕ್ರಮ ವಹಿಸಲಾಗುತ್ತದೆಂದು ಸಭೆಗೆ ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಹೊಸ ವಲಯಗಳ ಕಂದಾಯ ಅಧಿಕಾರಿ (ಜಾಹೀರಾತು)ರವರುಗಳು ನಮ್ಮ ವಲಯಗಳಲ್ಲಿ ಪ್ರತ್ಯೇಕವಾಗಿ ಜಾಹೀರಾತುಗಳನ್ನು ನಿರ್ವಹಿಸಲು ಯಾವುದೇ ಸಿಬ್ಬಂದಿಯಿರುವುದಿಲ್ಲ. ಕಂದಾಯ ಇಲಾಖೆಯ ಜೊತೆಗೇ ಜಾಹೀರಾತು ಕೆಲಸ ಕಾರ್ಯಗಳನ್ನು ನಿರ್ವಹಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುತ್ತದೆ. ಇದರಿಂದಾಗಿ ನಮಗೆ ಕೆಲಸದ ಒತ್ತಡವುಂಟಾಗಿ ಯಾವುದೇ ಕೆಲಸ ಕಾರ್ಯಗಳನ್ನು ಕಾಲಮಿತಿಯೊಳಗೆ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವಾದ್ದರಿಂದ ಹಳೆಯ ವಲಯಗಳಲ್ಲಿರುವಂತೆ ಹೊಸ ವಲಯಗಳಿಗೂ ಪ್ರತ್ಯೇಕವಾಗಿ ಜಾಹೀರಾತುಗಳಿಗೆ ಸಿಬ್ಬಂದಿಯನ್ನು ನೇಮಿಸಿಕೊಳ್ಳುವುದು. ಹಾಗೂ ಮುಖ್ಯವಾಗಿ ಜಾಹೀರಾತು ಫಲಕಗಳು, ಬಂಟಿಂಗ್ಸ್ ಮತ್ತು ಬ್ಯಾನರ್ಸ್‌ಗಳನ್ನು ತೆರವುಗೊಳಿಸುವಾಗ ನಮ್ಮ ಸಿಬ್ಬಂದಿಗಳಿಗೆ ಸಂಬಂಧಪಟ್ಟ ಜಾಹೀರಾತುದಾರರುಗಳು ಹಲ್ಲೆ ಮಾಡುತ್ತಿರುತ್ತಾರೆ. ಅದರಲ್ಲೂ ರಾಜಕಾರಣಿಯವರ ಬಗ್ಗೆ ಹಾಕಿದಂತ ಯಾವುದೇ ಫಲಕ, ಬಂಟಿಂಗ್ಸ್, ಬ್ಯಾನರ್ಸ್



ಮತ್ತು ಪೋಸ್ಟರ್ಸ್‌ಗಳನ್ನು ತೆಗೆಯಲು ಹೋದಾಗ ಗೂಂಡಗಿರಿಯಂತೆ ವರ್ತಿಸುವ ಕೆಲವೊಂದು ಕಿಡಿಗೇಡಿಗಳು ಜೀವ ಬೆದರಿಕೆ ಹಾಕುತ್ತಿದ್ದಾರೆಂಬ ವಿಷಯವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ತಮ್ಮ ಎಲ್ಲಾ ಸಮಸ್ಯೆಗಳ ಬಗ್ಗೆ ಪೂಜ್ಯ ಮಹಾಪೌರರು, ಆಯುಕ್ತರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ಕೂಡಲೇ ಪರಿಹರಿಸಿಕೊಡುವುದಾಗಿ ತಿಳಿಸಿದರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ಅಧಿಕಾರಿಗಳಾದ ನೀವು ಸೇರಿ ಕಾನೂನಿನಗೆ ಯಾವುದೇ ಚ್ಯುತಿ ಬರದಂತೆ ಕಾರ್ಯನಿರ್ವಹಿಸಲು ಶ್ರಮಿಸೋಣ ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:15-11-2010ರಂದು ಬೆಳಗ್ಗೆ 11-00ಗಂಟೆಗೆ ನಡೆದ ಪರಸ್ಪರ ಪರಿಚಯ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಆಯುಕ್ತರು (ಕಂದಾಯ) |
| 03 | ಎಂ.ಮುನಿರಾಜು | ಸದಸ್ಯರು | ಎಲ್ಲಾ ಕಂದಾಯ ಅಧಿಕಾರಿಗಳು (ರಾಜರಾಜೇಶ್ವರಿನಗರ/ದಕ್ಷಿಣ/ಬೊಮ್ಮನಹಳ್ಳಿ/ಮಹದೇವಪುರ/ದಾಸರಹಳ್ಳಿ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | (ರಾಜರಾಜೇಶ್ವರಿನಗರ/ದಕ್ಷಿಣ/ಬೊಮ್ಮನಹಳ್ಳಿ/ಮಹದೇವಪುರ/ದಾಸರಹಳ್ಳಿ) ವಲಯಗಳ ಎಲ್ಲಾ ಸಹಾಯಕ ಕಂದಾಯ ಅಧಿಕಾರಿಗಳು |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಈ ಮೇಲ್ಕಂಡ ದೂರುಗಳನ್ನು ಹಾಗೂ ಸ್ಥಳ ಪರಿಶೀಲಿಸಿದಾಗ, ಸ್ಥಳವು ಸಿ.ಡಿ.ಪಿ.2015ರನುಸಾರ ವಸತಿ ಮುಖ್ಯ ಪ್ರದೇಶದಲ್ಲಿದ್ದು, ಕಟ್ಟಡವು ಉಪ ಆಯುಕ್ತರು (ದಕ್ಷಿಣ)ರವರು ಮಂಜೂರಾತಿ ಆದೇಶ ಸಂಖ್ಯೆ:ಡಿಸಿ.(ಎಸ್)ಎಲ್ ಪಿ 327/07-08 ದಿನಾಂಕ:0-06-08ರಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ ಮಂಜೂರಾತಿ ಪಡೆದಿರುತ್ತಾರೆ (ಶಾಪ್, ಆಫೀಸ್) ಸದರಿ ಪ್ರದೇಶದಲ್ಲಿ ಪರವಾನಗಿ ನೀಡಲು ಸುವರ್ಣ ಆರೋಗ್ಯ ಪರವಾನಗಿ-2007ರಲ್ಲಿರುವ ನಿಯಾಮಾನುಗಳನುಸಾರ ಅಕ್ಕಪಕ್ಕದವರ ನಿರಾಕ್ಷೇಪಣೆ ಅಗತ್ಯವಾಗಿರುತ್ತದೆ. (ಪ್ರತಿ ಲಗತ್ತಿಸಿದೆ) ಅಕ್ಕಪಕ್ಕದವರು ಆಕ್ಷೇಪಣೆ ಸಲ್ಲಿಸಿರುವುದರಿಂದ ಅರ್ಜಿದಾರರು ಕೋರಿರುವ ರೆಸ್ಟೋರೆಂಟ್ ಉದ್ದಿಮೆಯ ಬಗ್ಗೆ ದಿನಾಂಕ:18-09-2010ರಂದು ಈ ಕಛೇರಿಯಿಂದ ಹಿಂಬರಹ ಜಾರಿ ಮಾಡಲಾಗಿರುತ್ತದೆ. ಸಂಖ್ಯೆ:ಆ.ವೈ.(ಜ.ನ)/ಇ.ಸಿ.ಪಿ.ಆರ್/405/2010-11, ದಿನಾಂಕ:18-09-2010(ಪ್ರತಿ ಲಗತ್ತಿಸಿದೆ). ಈ ಹಿಂಬರಹದ ವಿರುದ್ಧ ಅರ್ಜಿದಾರರಾದ ಶ್ರೀ.ಶಾಂತಿಲಾಲ್ ರಿಕಬ್ ಚಾಂದ್,ರವರು ಅಪೀಲು ಸ್ಥಾಯಿ ಸಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿರುವುದರಿಂದ ಸೂಕ್ತ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

ಪ್ರಸ್ತಾವನೆ:- ಅರ್ಜಿದಾರರ ಪರವಾಗಿ ಅವರ ಅಳಿಯ ಜಂಬೂಕುಮಾರ್ ಹಾಜರಿದ್ದು, ಸದರಿ ಪ್ರದೇಶವು ಈಗ ವಾಣಿಜ್ಯ ಪ್ರದೇಶದಲ್ಲಿ ಬರುವುದಾಗಿ ತಿಳಿಸಿ ಉದ್ದಿಮೆ ಪರವಾನಗಿ ನೀಡುವಂತೆ ಕೋರಿರುತ್ತಾರೆ.

ಆಕ್ಷೇಪಣೆದಾರರ ಈ.ಸ್ಟೆಪನ್, ಎಸ್.ಬಿ.ಬಾಬು, ಶ್ರೀ.ಕೃಷ್ಣಮೂರ್ತಿ ಮತ್ತು ಇತರರು ಹಾಜರಿದ್ದು ಅವರ ಹೇಳಿಕೆಯನ್ನು ಪಡೆಯಲಾಯಿತು. ಎಸ್.ಬಿ.ಬಾಬುರವರು ತಮ್ಮ ಹೇಳಿಕೆಯಲ್ಲಿ ತಾವು ಪಕ್ಕದ ನಿವಾಸಿಯಾಗಿದ್ದು ಸದರಿ ಪ್ರದೇಶವು ಪೂರ್ಣ ವಸತಿ ಪ್ರದೇಶವಾಗಿದ್ದು ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ. ಕೃಷ್ಣಮೂರ್ತಿಯವರು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ಪೂರ್ಣ ವಸತಿ ಪ್ರದೇಶವಾಗಿದ್ದು ರೆಸ್ಟೋರೆಂಟ್ ನಡೆಸಲು ಅನುಮತಿ ನೀಡಿದರೆ ರಸ್ತೆಯು ಕಿರಿದಾಗಿದ್ದು, ವಾಹನಗಳು ಓಡಾಡುವುದರಿಂದ ಹಾಗೂ ವಾಹನಗಳ ನಿಲುಗಡೆ ಮಾಡುವುದರಿಂದ ಮಾಲಿನ್ಯ ಕಸ ಸಂಗ್ರಹಣೆ, ಬೀದಿ ನಾಯಿಗಳ ಹಾವಳಿ ಉಂಟಾಗುವುದರಿಂದ ಅನುಮತಿ ನೀಡಬಾರದಾಗಿ ತಿಳಿಸಿರುತ್ತಾರೆ.

ದಿನಾಂಕ:07-01-2011ರಂದು ಸಮಿತಿಯು ಸ್ಥಳ ಪರಿಶೀಲನೆ ಮಾಡಲಾಗಿ ಪುಷ್ಪರಾಹ್ ಎಂಬ ಹೆಸರಿನ ರೆಸ್ಟೋರೆಂಟ್ ನಡೆಸಲು ಉದ್ದೇಶಿಸಿರುವ ಕಟ್ಟಡದ ಬಲ ಭಾಗದ ಕಟ್ಟಡದಲ್ಲಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು ಕೆನರಾ ಬ್ಯಾಂಕಿನ ಎ.ಟಿ.ಎಂ.ಕೌಂಟರ್ ಮತ್ತು ಬ್ಯಾಟರಿ ಶಾಪ್ ಇರುವುದನ್ನು ಸಮಿತಿಯು ಗಮನಿಸಿರುತ್ತದೆ. ಸದರಿ ಬಲ ಭಾಗದ (ನಂ.536) ಮನೆಯ ಮಾಲೀಕರು ರೆಸ್ಟೋರೆಂಟ್ ನಡೆಸಲು ಪರವಾನಗಿ ಪಡೆಯುವಂತೆ ನಿರಾಕ್ಷೇಪಣಾ ಪತ್ರವನ್ನು ನೀಡಿರುತ್ತಾರೆ. ಆಕ್ಷೇಪಣೆದಾರರಲ್ಲಿ ಒಬ್ಬರಾದ ಶ್ರೀ.ಎಸ್.ಬಿ.ಬಾಬುರವರು ಬ್ಯಾಟರಿ ಶಾಪ್ ನಡೆಸುತ್ತಿದ್ದು ಉದ್ದಿಮೆ ಪರವಾನಗಿಯನ್ನು ಪಡೆಯದೆ ಬ್ಯಾಟರಿ ಅಂಗಡಿಯನ್ನು ನಡೆಸುತ್ತಿರುತ್ತಾರೆ. ಶ್ರೀ.ಪಿ.ವಿ.ಎಸ್.ರೆಡ್ಡಿರವರು ಆಕ್ಷೇಪಣೆದಾರರಾಗಿದ್ದು, ಪೇಯಿಂಗ್ ಗೆಸ್ಟ್ ನಡೆಸುತ್ತಿದ್ದು ನಗರ ಪಾಲಿಕೆಯಿಂದ ಪರವಾನಗಿ ಪಡೆದಿರುವುದಿಲ್ಲ. ಎಡ ಭಾಗದಲ್ಲಿ 19ನೇ ಮುಖ್ಯರಸ್ತೆಯು ಬರುತ್ತದೆ. ಅಕ್ಕ ಪಕ್ಕದಲ್ಲಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು ರಸ್ತೆಯಲ್ಲಿ ವಾಹನ ನಿಲುಗಡೆ ಹಾಗೂ ರಸ್ತೆಯಲ್ಲಿ ಸಂಚಾರವು ಸಾಮಾನ್ಯವಾಗಿರುತ್ತದೆ. ಇದರಿಂದ ಅಕ್ಕ ಪಕ್ಕದವರಿಗೆ ಯಾವುದೇ ತೊಂದರೆ ಆಗದೇ ಇದ್ದು ಅರ್ಜಿದಾರರು ನಡೆಸಲು ಉದ್ದೇಶಿಸಿರುವ ರೆಸ್ಟೋರೆಂಟ್‌ನಿಂದ ಮಾತ್ರ ತೊಂದರೆ ಉಂಟಾಗುವುದಾಗಿ ಆಕ್ಷೇಪಣೆ ವ್ಯಕ್ತಪಡಿಸಿರುವುದು ಹಾಸ್ಯಾಸ್ಪದವಾಗಿರುವುದಲ್ಲದೆ ದುರುದ್ದೇಶದಿಂದ ಕೂಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಆಕ್ಷೇಪಣೆ ವ್ಯಕ್ತಪಡಿಸಿರುವ ಆಕ್ಷೇಪಣೆದಾರರಿಗೆ ಈ ಉದ್ದಿಮೆಯಿಂದ ಯಾವುದೇ ತೊಂದರೆಯುಂಟಾಗುವ ಸಂಭವವಿರುವುದಿಲ್ಲ. ಸದರಿ ಕಟ್ಟಡವನ್ನು ನಿರ್ಮಾಣ ಮಾಡುವಾಗ ವಾಣಿಜ್ಯ ಉದ್ದೇಶಕ್ಕಾಗಿ ಮಂಜೂರಾತಿ ಪಡೆದಿದ್ದು, ನಕ್ಷೆಯಲ್ಲಿ ತಿಳಿಸಿರುವಂತೆ ತಳಮಹಡಿಯನ್ನು ವಾಹನ ನಿಲುಗಡೆಗಾಗಿ ಮೀಸಲಿಟ್ಟಿರುವುದು ಕಂಡು ಬಂದಿರುತ್ತದೆ.

<u>ನಿರ್ಣಯ:</u>- ಪುಷ್ಪ ರಾಹ್ ಎಂಬ ಹೆಸರಿನ ರೆಸ್ಟೋರೆಂಟ್ ನಡೆಸಲು ಉದ್ದೇಶಿಸಿರುವ ಕಟ್ಟಡದ ಅಕ್ಕ ಪಕ್ಕ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿದ್ದು ರಸ್ತೆಯಲ್ಲಿ ವಾಹನ ನಿಲುಗಡೆ ಹಾಗೂ ರಸ್ತೆಯಲ್ಲಿ ಸಂಚಾರವು ಸಾಮಾನ್ಯವಾಗಿರುತ್ತದೆ. ಇದರಿಂದ ಅಕ್ಕ ಪಕ್ಕದವರಿಗೆ ಯಾವುದೇ ತೊಂದರೆ ಆಗದೇ ಇದ್ದು ಅರ್ಜಿದಾರರು ನಡೆಸಲು ಉದ್ದೇಶಿಸಿರುವ ರೆಸ್ಟೋರೆಂಟ್‌ನಿಂದ ಮಾತ್ರ ತೊಂದರೆ ಉಂಟಾಗುವುದಾಗಿ ಆಕ್ಷೇಪಣೆ ವ್ಯಕ್ತಪಡಿಸಿರುವುದು ಸಮಂಜಸವಾಗಿರುವುದಿಲ್ಲ. ಅರ್ಜಿದಾರರು ರೆಸ್ಟೋರೆಂಟ್ ನಡೆಸಲು ಉದ್ದೇಶಿಸಿರುವ ಕಟ್ಟಡದಲ್ಲಿ ತಳ ಮಹಡಿಯನ್ನು ವಾಹನ ನಿಲುಗಡೆಗಾಗಿ ಮೀಸಲಿರಿಸಿರುವುದರಿಂದ ರಸ್ತೆಯಲ್ಲಿ ವಾಹನ ನಿಲುಗಡೆ ಮಾಡುವ ಅವಶ್ಯಕತೆ ಕಂಡು ಬರುವುದಿಲ್ಲ.



ಈ ಮೇಲ್ಕಂಡ ಅಂಶಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದ ನಂತರ ಆಕ್ಷೇಪಣೆದಾರರ ಆಕ್ಷೇಪಣೆಗಳನ್ನು ತಿರಸ್ಕರಿಸುತ್ತಾ, ಸುವರ್ಣ ಆರೋಗ್ಯ ಪರವಾನಗಿ 2007ರಲ್ಲಿರುವ ನಿಯಮಾನುಗಳನುಸಾರ ಉದ್ದಿಮೆ ನಡೆಸಲು ಉದ್ದೇಶಿಸಿರುವ ಕಟ್ಟಡದ ಬಲ ಭಾಗದ (ನಂ.536) ಮಾಲೀಕರು ರೆಸ್ಟೋರೆಂಟ್ ನಡೆಸಲು ಪರವಾನಗಿ ಪಡೆಯುವಂತೆ ನಿರಾಕ್ಷೇಪಣಾ ಪತ್ರ ನೀಡಿದ್ದು, ಎಡ ಭಾಗದಲ್ಲಿ ರಸ್ತೆ ಬರುವುದರಿಂದ ಪುಷ್ಪರಾಹ್ ಎಂಬ ಹೆಸರಿನ ರೆಸ್ಟೋರೆಂಟ್ ನಡೆಸಲು ಅರ್ಜಿದಾರರು ಕೋರಿರುವಂತೆ ಉದ್ದಿಮೆ ಪರವಾನಿಗಿಯನ್ನು ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

**<u>3.ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11</u>**

2ನೇ ಮುಖ್ಯರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು, ನ್ಯಾಷನಲ್ ಕಾಲೇಜ್ ಎದುರು ಅಕ್ಷಯ ವೆಜ್ ತಿಂಡೀಸ್ ಹೋಟೆಲ್ ಅನಧಿಕೃತವಾಗಿ ನಡೆಯುತ್ತಿರುವ ಬಗ್ಗೆ.

''ಹೆಚ್ಚಿನ ಮಾಹಿತಿಗಾಗಿ ಮುಂದೂಡಿದೆ''

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:21-01-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಭೂಸ್ವಾಧೀನಾಧಿಕಾರಿ |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| 05 | ಡಾ॥ಎಸ್.ರಾಜು | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಿಟಿಎಂ)/ಪದ್ಮನಾಭನಗರ) ವಲಯ |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಮುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

**1.ವಿಷಯ:ಸಂಖ್ಯೆ:ಅಸ್ಥಾಸ/(ಆ)/03/2010-11**

ಶ್ರೀ.ಅಬ್ದುಲ್ ಕಾದಿರ್ ಪಿ.ಎಂ. (ಪ್ರತಿನಿಧಿ) ಮೆ:ಹೆಲ್ತ್ ವೇ ಮಡಿಕಲ್ ಡಯಾಗ್ನೋಸ್ಟಿಕ್, ನಂ. 393, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರ-34 ರವರು ಮೆಡಿಕಲ್ ಡಯಾಗ್ನೋಸ್ಟಿಕ್‌ಗೆ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರ ನಿರಾಕರಿಸಿದ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ಟಿಪ್ಪಣಿ.

ಪ್ರಸ್ತಾವನೆ:-ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಆಕ್ಷೇಪಣೆದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ವಸತಿ ಪ್ರದೇಶವಾಗಿದ್ದು, ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

**"ಅರ್ಜಿದಾರರು ಕಾಲಾವಕಾಶ ಕೋರಿರುವುದರಿಂದ ಮುಂದೂಡಿದೆ"**

**2. ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11**

2ನೇ ಮುಖ್ಯರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು, ನ್ಯಾಷನಲ್ ಕಾಲೇಜ್ ಎದುರು ಅಕ್ಷಯ ವೆಜ್ ತಿಂಡೀಸ್ ಹೋಟೆಲ್ ಅನಧಿಕೃತವಾಗಿ ನಡೆಯುತ್ತಿರುವ ಬಗ್ಗೆ.

**"ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ)ಉಪ ವಿಭಾಗರವರ ವರದಿಗಾಗಿ ಮುಂದೂಡಿದೆ"**

**3. ವಿಷಯ:ಸಂಖ್ಯೆ:ಅಸ್ಥಾಸ/(ಆ)/07/2010-11**

ಸಂಖ್ಯೆ:27, 6ನೇ ಅಡ್ಡರಸ್ತೆ, ಸಂಪಂಗಿರಾಮನಗರ ವಾರ್ಡ್-110ರಲ್ಲಿ ಚಂದ್ರಪ್ಪ ಎಂಬುವವರು 15 ಅಶ್ವಶಕ್ತಿಗಳ ಪರವನಗಿಯನ್ನು ರದ್ದುಪಡಿಸಲು ಹಾಗೂ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ತಿಳಿಸಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ವಲಯರವರ ಟಿಪ್ಪಣಿ.

**"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"**

**4.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/08/2010-11**

ವಿಶೇಷ ಭೂಸ್ವಾಧೀನಾಧಿಕಾರಿಯವರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಬೆಂಗಳೂರು ದಕ್ಷಿಣ ತಾಲ್ಲೂಕು, ಹಲಗೇವಡೇರಹಳ್ಳಿ ಗ್ರಾಮದ ಸರ್ವೇ ನಂ–58ರ ಜಮೀನಿನಲ್ಲಿ ರಚಿಸಲಾಗಿದ್ದ ನಿವೇಶನ ಸಂಖ್ಯೆ: 8 ರ 40x60 ಅಡಿ ನಿವೇಶನವನ್ನು ಶ್ರೀಮತಿ. ಪ್ರೇಮ

–2–

ಕೋಂ. ಸತ್ಯಬೋಧರಾವ್ ಇವರು ಎಸ್.ಆರ್ ನಂ. 3318/2002–03, ದಿನಾಂಕ: 30–05–2002ರ ಮೇರೆಗೆ ನಿರ್ಮಲಜಾನ್ ಕೋಂ. ಜಾನ್‌ಕುರುವಿಲ್ಲ ಇವರ ಜಿ.ಪಿ.ಎ ಹೋಲ್ಡರ್ ಇವರಿಂದ ಕ್ರಯಕ್ಕೆ ಪಡೆದಿರುತ್ತಾರೆ.

ಕ್ರಯಕ್ಕೆ ಪಡೆದ ಈ ನಿವೇಶನದ 40x60 ಅಡಿ ವಿಸ್ತೀರ್ಣದ ಜಾಗವನ್ನು ಆಯುಕ್ತರು, ರಾಜರಾಜೇಶ್ವರಿ ನಗರ ಸಭೆ. ಇವರು ದೇವಾಡಿಗಸೌಧ ಹಾಗೂ ಬಂಗಾರಪ್ಪ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯನ್ನು ಅಗಲೀಕರಣ ಮಾಡುವ ಸಲುವಾಗಿ ಉಪಯೋಗಿಸಿಕೊಂಡಿರುತ್ತಾರೆಂದೂ, ಉಪಯೋಗಿಸಿಕೊಂಡ ಈ ಜಾಗಕ್ಕೆ ಪರಿಹಾರವನ್ನಾಗಲೀ ಅಥವಾ ಬದಲಿ ನಿವೇಶನವನ್ನಾಗಲೀ ನೀಡದೇ ಇದ್ದುದರಿಂದ ಸದರಿ ನಿವೇಶನದ ಕ್ರಯದಾರರಾದ ಶ್ರೀಮತಿ. ಪ್ರೇಮರವರು (1) ಉಪ ಆಯುಕ್ತರು, ರಾಜರಾಜೇಶ್ವರಿ ನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (2) ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ಇವರುಗಳ ವಿರುದ್ಧ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ: 18333/2007 (LA-RES) ಅನ್ನು ಸಲ್ಲಿಸಿದ್ದು, ಉಚ್ಚ ನ್ಯಾಯಾಲಯವು ದಿನಾಂಕ: 03–03–2009 ಆದೇಶದಲ್ಲಿ ಈ ಕೆಳಗೆ ಕಾಣಿಸಿರುವಂತೆ ಆದೇಶ ನೀಡಿರುತ್ತದೆ.

"Petition stands disposed of directing respondents 1 and 2 to consider the representation /legal notice within an outer limit of three months from the date of receipt of a copy of this order. The respondents shall also take note of the communication at Annexure-G in this regard. Petition stands disposed of accordingly.

ಉಚ್ಚ ನ್ಯಾಯಾಲಯದ ದಿನಾಂಕ: 03–03–2009ರ ಆದೇಶವನ್ನು ಜಾರಿಗೊಳಿಸಲಿಲ್ಲ ಎಂಬ ಕಾರಣದಿಂದ ನಿವೇಶನದ ಕ್ರಯದಾರರಾದ ಶ್ರೀಮತಿ. ಪ್ರೇಮರವರು, ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ಮತ್ತು ಉಪ ಆಯುಕ್ತರು, ರಾಜರಾಜೇಶ್ವರಿ ನಗರ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು. ಇವರ ವಿರುದ್ಧ 27–10–2009 ರಂದು ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ: ಸಿಸಿಸಿ.518/2009(ಸಿವಿಲ್) ಅನ್ನು ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ನಂತರ ಅಪರ ಆಯುಕ್ತರು, ರಾಜರಾಜೇಶ್ವರಿ ನಗರ. ಇವರು ರಸ್ತೆ ನಿರ್ಮಾಣಕ್ಕೆ ಉಪಯೋಗಿಸಿಕೊಂಡಿರುವ ಶ್ರೀಮತಿ. ಪ್ರೇಮರವರಿಗೆ ಸೇರಿರುವ ಜಾಗವನ್ನು ಅಧಿಕೃತವಾಗಿ ಸ್ವಾಧೀನ ಪಡಿಸಿಕೊಳ್ಳಲು ದಿನಾಂಕ: 06–10–2009 ರಂದು ಪ್ರಸ್ತಾವನೆ ಸಲ್ಲಿಸಿರುತ್ತಾರೆ. **ಉಚ್ಚನ್ಯಾಯಾಲಯದಲ್ಲಿ ಅಪರ ಆಯುಕ್ತರು, ರಾಜರಾಜೇಶ್ವರಿ ನಗರ. ಇವರು ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆಯನ್ನು ಪ್ರಾರಂಭ ಮಾಡಿದ್ದು, ಪರಿಹಾರ ಪಾವತಿಸಲು ಕ್ರಮಕೈಗೊಂಡಿರುವ ಬಗ್ಗೆ ನ್ಯಾಯಾಲಯದಲ್ಲಿ ಹೇಳಿಕೆ ಸಲ್ಲಿಸಿದ್ದರಿಂದ ಅದನ್ನು ಪರಿಗಣಿಸಿ, ಮಾನ್ಯ ಉಚ್ಚನ್ಯಾಯಾಲಯವು ದಿನಾಂಕ: 27–10–2009 ರಂದು ಈ ಕೆಳಕಂಡಂತೆ ಆದೇಶ ನೀಡಿರುತ್ತದೆ.**

## ORDER

The submission of the counsel appearing for the accused discloses the fact that acquisition proceedings are initiated and even determination of compensation is arrived at, but for the passing of the award the proceedings have reached finality.

Under the circumstances directing the respondent-accused to dispose of the matter within three months, the proceedings are closed.

ಉಚ್ಚ ನ್ಯಾಯಾಲಯದ ದಿನಾಂಕ: 27–10–2009 ರ ಆದೇಶದನ್ವಯ ಸ್ವತ್ತಿನ ಕ್ರಯದಾರರಿಗೆ ಪರಿಹಾರ ಪಾವತಿಸಲು 3 ತಿಂಗಳಗೊಳಗಾಗಿ ತುರ್ತು ಕ್ರಮ ಕೈಗೊಳ್ಳಲು ಆದೇಶ ನೀಡಿರುತ್ತದೆಯೇ ಹೊರತು **ಸ್ವತ್ತಿನ ಖಾತೆದಾರರಿಗೆ ಪರ್ಯಾಯ ನಿವೇಶನವನ್ನು ಮಂಜೂರು ಮಾಡುವಂತೆ ನ್ಯಾಯಾಲಯವು ನಿರ್ದೇಶನ ನೀಡಿರುವುದಿಲ್ಲ.**

ಮೇಲ್ಕಂಡ ನಿರ್ದೇಶನವನ್ನು ಅನುಸರಿಸಿ ಈ ಪ್ರಕರಣದ ಆಸ್ತಿಯನ್ನು ಭೂಸ್ವಾಧೀನಪಡಿಸಿಕೊಳ್ಳಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ, ಆಡಳಿತಗಾರರು ದಿನಾಂಕ: 14–10–2009 ರಂದು ವಿಷಯದ ಸಂಖ್ಯೆ: 348/2009–10 ರಲ್ಲಿ ನಡವಳಿ ನಡೆಸಿ, ಈ ಪ್ರಕರಣದ ಸ್ವತ್ತಿನ 2400 ಚ.ಅ ಜಾಗವನ್ನು ರಸ್ತೆ ಅಗಲೀಕರಣಕ್ಕೆ ಉಪಯೋಗಿಸಿಕೊಂಡಿರುವುದರಿಂದ ಅದನ್ನು ಭೂಸ್ವಾಧೀನ ಪಡಿಸಿಕೊಳ್ಳಲು ಹಾಗೂ ಇದರ ಪರಿಹಾರ ಇತರೆ ವೆಚ್ಚಗಳನ್ನು ಭರಿಸಲು ಒಪ್ಪಿಗೆ ನೀಡಿರುತ್ತಾರೆ. ಆಡಳಿತಗಾರರ ದಿನಾಂಕ: 14–10–2009 ರ ನಡವಳಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ, ಬೆಂಗಳೂರು ಇವರು 1976ರ ಕರ್ನಾಟಕ ಮುನಿಸಿಪಾಲ್ ಕಾರ್ಪೋರೇಷನ್ ಕಾಯ್ದೆಯ ಕಲಂ.175 ರನ್ವಯ ಪತ್ರದ ಸಂಖ್ಯೆ: ನ.ಅ.ಇ 188/ಎಮ್ಎನ್‌ಜಿ 2009 ದಿನಾಂಕ: 07–01–10 ರ ಮೇರೆಗೆ ಅನುಮೋದನೆಯನ್ನು ನೀಡಿರುತ್ತಾರೆ.



ಸರ್ಕಾರದ ಅನುಮೋದನೆಯನ್ನು ಆಧರಿಸಿ 1894 ರ ಭೂಸ್ವಾಧೀನ ಕಾಯ್ದೆಯ ಕಲಂ.4(1) ರನ್ವಯ ಪ್ರಾರಂಭಿಕ ಅಧಿಸೂಚನೆಯನ್ನು ಎಲ್ಎಕ್ಯೂ/ಸಿಆರ್/25/2009–10 ದಿನಾಂಕ: 7–1–2010 ರಂದು ಉಪ ಆಯುಕ್ತರು (ಭೂಸ್ವಾಧೀನ) ರವರು ಹೊರಡಿಸಿರುತ್ತಾರೆ.

ಪ್ರಾರಂಭಿಕ ಅಧಿಸೂಚನೆಯು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 7–1–2010 ರಂದು ಭಾಗ ಸಂಖ್ಯೆ: 3, ಪುಟ ಸಂಖ್ಯೆ: 159–160 ರಲ್ಲಿ ಪ್ರಕಟವಾಗಿರುತ್ತದೆ, ಹಾಗೂ ದಿನಾಂಕ: 12–1–2010 ರ ಕನ್ನಡ ಪ್ರಭ ಮತ್ತು ಪ್ರಜಾವಾಣಿ ದಿನ ಪತ್ರಿಕೆಗಳಲ್ಲೂ ಪ್ರಕಟವಾಗಿರುತ್ತದೆ.

1894 ರ ಭೂಸ್ವಾಧೀನ ಕಾಯ್ದೆಯ ಕಲಂ. 5 (ಎ) ರನ್ವಯ ವಿಚಾರಣೆಯನ್ನು ನಡೆಸಲಾಗಿದ್ದು, ವಿಚಾರಣೆ ಸಮಯದಲ್ಲಿ ನಿವೇಶನದ ಕ್ರಯದಾರರು ಪರಿಹಾರದ ಹಣ ಬೇಡವೆಂತಲೂ, ಬದಲಾಗಿ 40x60 ರ ನಿವೇಶನವನ್ನು ಮಂಜೂರು ಮಾಡಲು ಕೋರಿರುತ್ತಾರೆ. ಆದರೆ ಆಯುಕ್ತರು ದಿನಾಂಕ: 14–12–2009 ರಂದು ಎಲ್ಎಸಿಆರ್/22/2008–09 ರಂದು ಸುತ್ತೋಲೆಯನ್ನು ಹೊರಡಿಸಿ, ಈ ಕೆಳಗೆ ಕಾಣಿಸಿರುವಂತೆ ನಿರ್ದೇಶನ ನೀಡಿರುತ್ತಾರೆ.

5. ಯಾವುದೇ ಪ್ರಕರಣಗಳಲ್ಲಿ ಬದಲೀ ನಿವೇಶನ ನೀಡಬೇಕೆಂದು ಪಾಲಿಕೆ ವಿರುದ್ಧ ನ್ಯಾಯಾಲಯಗಳಲ್ಲಿ ದಾವೆಯನ್ನು ಹೂಡಿದ್ದಲ್ಲಿ ಇಂತಹ ಪ್ರಕರಣಗಳಲ್ಲಿ ಪಾಲಿಕೆ ಪರವಾಗಿ ಹಾಜರಾಗುವ ವಕೀಲರು ಬದಲೀ ನಿವೇಶನ ನೀಡುವ ಕೋರಿಕೆಯನ್ನು ಕಟುವಾಗಿ ತಮ್ಮ ಲಿಖಿತ ಮತ್ತು ಮೌಖಿಕ ವಾದದಲ್ಲಿ ನ್ಯಾಯಾಲಯದ ಮುಂದೆ ಮಂಡಿಸತಕ್ಕದ್ದು, ಒಂದು ವೇಳೆ ಇಷ್ಟೆಲ್ಲಾ ಲಿಖಿತ ವಾದ ಅಥವಾ ಮೌಖಿಕ ವಾದ ಮಂಡಿಸಿದ ನಂತರವೂ ಸಹ ನ್ಯಾಯಾಲಯವು ಬದಲೀ ನಿವೇಶನ ನೀಡಲು ಆದೇಶ ಮಾಡಿದ್ದಲ್ಲಿ ಈ ಆದೇಶದ ವಿರುದ್ಧ ಮೇಲ್ಮನವಿಯನ್ನು ತಕ್ಷಣವೇ ಕಾನೂನು ಕೋಶದ ಮುಖ್ಯಸ್ಥರು ದಾಖಲಿಸತಕ್ಕದ್ದು ಹಾಗೂ ಅಗತ್ಯವಿದ್ದಲ್ಲಿ ಕೇವಿಯಟ್ ದಾಖಲಿಸತಕ್ಕದ್ದು.
6. ಯಾವುದೇ ವಕೀಲರು ಆಯುಕ್ತರ ಲಿಖಿತ ಒಪ್ಪಿಗೆ ಅಥವಾ ಅನುಮೋದನೆ ಇಲ್ಲದೆ ನ್ಯಾಯಾಲಯದ ಮುಂದೆ ಬದಲೀ ನಿವೇಶನ ನೀಡುವ ಬಗ್ಗೆ ಒಪ್ಪಿಗೆ ನೀಡಿದಲ್ಲಿ ಅಂತಹ ವಕೀಲರನ್ನು ಪಾಲಿಕೆಯ ವಕೀಲರ ಹುದ್ದೆಯಿಂದ ವಜಾ ಮಾಡಲು ಕಾನೂನು ಕೋಶದ ಮುಖ್ಯಸ್ಥರು ತಕ್ಷಣವೇ ಕ್ರಮ ಜರುಗಿಸತಕ್ಕದ್ದು.
7. ಯಾವುದೇ ಕಾರಣಕ್ಕೂ ಭೂಸ್ವಾಧೀನ ಪ್ರಕರಣಗಳಲ್ಲಿ ಬದಲೀ ನಿವೇಶನ ನೀಡಲು ಅವಕಾಶವಿರುವುದಿಲ್ಲ. ಕೇವಲ ಭೂಸ್ವಾಧೀನ ಪರಿಹಾರದ ಹಣ ಅಥವಾ ಟಿ.ಡಿಆರ್ ಯೋಜನೆ ಅನ್ವಯ ಡಿ.ಆರ್.ಸಿ. ಹಕ್ಕುಗಳನ್ನು ನೀಡಲು ಮಾತ್ರ ಅವಕಾಶವಿರುತ್ತದೆ, ಬದಲೀ ನಿವೇಶನ ನೀಡಲು ಪಾಲಿಕೆಯಲ್ಲಿ ಯಾವುದೇ ನಿವೇಶನಗಳ ಲಭ್ಯತೆ ಇಲ್ಲವೆಂಬ ಅಂಶವನ್ನು

ಪಾಲಿಕೆಯ ಎಲ್ಲಾ ಅಧಿಕಾರಿಗಳು ಹಾಗೂ ಕಾನೂನುಶಾಖೆಯ ಎಲ್ಲಾ ಅಧಿಕಾರಿಗಳು ಮತ್ತು ಪಾಲಿಕೆಯ ವಕೀಲರು ಗಮನದಲ್ಲಿಟ್ಟುಕೊಳ್ಳತಕ್ಕದ್ದು.

8. ಯಾವುದೇ ಪ್ರಕರಣದಲ್ಲಿ ಬದಲೀ ನಿವೇಶನ ನೀಡಬೇಕೆಂದು ನ್ಯಾಯಾಲಯದಲ್ಲಿ ಆದೇಶವಾದಲ್ಲಿ ಅದಕ್ಕೆ ಸಂಬಂಧಪಟ್ಟಂತೆ ಕಾನೂನುಕೋಶದ ಮುಖ್ಯಸ್ಥರು, ಲಿಖಿತ ವಾದ ಮಂಡಿಸಿರುವ ವಕೀಲರು, ಕಂಡಿಕೆವಾರು ಉತ್ತರಗಳನ್ನು ಸಲ್ಲಿಸಿರುವ ಅಧಿಕಾರಿಗಳ ವಿರುದ್ಧ ಯಾವುದೇ ಕರ್ತವ್ಯ ಲೋಪ ಇದ್ದಲ್ಲಿ ಅದನ್ನು ಗಮನಿಸಿ ಶಿಸ್ತಿನ ಕ್ರಮಗಳನ್ನು ಕೈಗೊಳ್ಳಲು ಶಿಫಾರಸ್ಸು ಮಾಡುವುದು.

ಉಚ್ಚನ್ಯಾಯಾಲಯದ ದಿನಾಂಕ: 27–10–2009 ರ ಆದೇಶವನ್ನು ಅನುಸರಿಸಿ ಹಾಗೂ ದಿನಾಂಕ: 14–12–2009ರ ಸುತ್ತೋಲೆಯಲ್ಲಿ ನೀಡಿರುವ ನಿರ್ದೇಶನಗಳನ್ನು ಅನುಸರಿಸಿ ಭೂಸ್ವಾಧೀನ ಪಡಿಸಿಕೊಂಡ ನಿವೇಶನಕ್ಕೆ ಪರ್ಯಾಯವಾಗಿ ಪರಿಹಾರದ ಹಣ ಹೊರತುಪಡಿಸಿ ಬದಲೀ ನಿವೇಶನವನ್ನು ನೀಡಲು ಅವಕಾಶವಿಲ್ಲದೆವಿರುವುದರಿಂದ ತಮ್ಮ ಕೋರಿಕೆಯನ್ನು ಪರಿಗಣಿಸಲು ಅವಕಾಶವಿಲ್ಲವೆಂದು, ಪರಿಹಾರದ ಬಾಬ್ತು ಶೇಕಡ 80ರಷ್ಟು ಮೊಬಲಗು ರೂ 7,32,883 ಗಳ ಚೆಕ್‌ನ್ನು ಲಗತ್ತಿಟ್ಟು ರವಾನಿಸಲಾಗಿತ್ತು, ಆದರೆ ಅವರು ಈ ಚೆಕ್ ಸ್ವೀಕರಿಸಲು ನಿರಾಕರಿಸಿರುತ್ತಾರೆ. ಈ ವಿಚಾರದಲ್ಲಿ ಸದರಿಯವರಿಗೆ ದಿನಾಂಕ: 6–5–2010 ರಂದು ಹಿಂಬರಹ ನೀಡುವುದರ ಮೂಲಕ ತಿಳಿಸಲಾಗಿದೆ. ಒಂದು ವೇಳೆ ಉಚ್ಚನ್ಯಾಯಾಲಯದ ಆದೇಶವನ್ನು ಮತ್ತು ಆಯುಕ್ತರ ನಿರ್ದೇಶನವನ್ನು ಪರಿಗಣಿಸದೇ ನಿವೇಶನವನ್ನು ಈ ಪ್ರಕರಣದಲ್ಲಿ ನೀಡಿದಲ್ಲಿ ಮುಂದೆ ಭೂಸ್ವಾಧೀನ ಪಡಿಸಿಕೊಳ್ಳುವ ಅಸ್ತಿಗಳ ಎಲ್ಲಾ ಖಾತೆದಾರರುಗಳಿಗೂ ಇದು ಒಂದು ಪೂರ್ವ ನಿದರ್ಶನವಾಗುತ್ತದೆ. (ಪ್ರಿಸಿಡೆಂಟ್) ಹಾಗೂ ಇದರಿಂದ ಪಾಲಿಕೆಯ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಿರುತ್ತದೆ.

ಅಲ್ಲದೇ ಈ ಪ್ರಕರಣದ ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣಕ್ಕೆ ರೂ. 11,47,590/– ಗಳ ಐ–ತೀರ್ಪನ್ನು ರಚಿಸಿದ್ದು, ಈ ಐ–ತೀರ್ಪನ್ನು ಪ್ರಧಾನಕಾರ್ಯದರ್ಶಿಗಳು ಕಂದಾಯ ಇಲಾಖೆ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರು ತಮ್ಮ ಕಛೇರಿ ಪತ್ರದ ಸಂಖ್ಯೆ: ಕಂಇ 130 ಭೂ.ಸ್ವಾಬೆ 2010 ದಿನಾಂಕ: 10–12–2010ರ ಮೇರೆಗೆ ಅನುಮೋದನೆ ನೀಡಿರುತ್ತಾರೆ.

–4–

ಸರ್ಕಾರದ ಈ ಅನುಮೋದನೆಯನ್ನು ಅನುಸರಿಸಿ ಶ್ರೀಮತಿ ಪ್ರೇಮ ಕೋಂ. ಸತ್ಯಬೋಧರಾವ್ ಇವರಿಗೆ ದಿನಾಂಕ: 18–12–2010 ರಂದು ಅವಾರ್ಡ್ ತಿಳುವಳಿಕೆಯನ್ನು ನೀಡಿ ದಾಖಲಾತಿಗಳನ್ನು ಒದಗಿಸಿ, ಪರಿಹಾರದ ಮೊಬಲಗನ್ನು ಪಡೆದುಕೊಳ್ಳಲು ತಿಳಿಸಲಾಗಿರುತ್ತದೆ.

ಆದರೆ ಸದರಿಯವರು ಅಧ್ಯಕ್ಷರು ಅಪೀಲುಗಳ ಸ್ಥಾಯಿ ಸಮಿತಿ ಬಿಬಿಎಂಪಿ ಇವರಿಗೆ ಮನವಿ ಸಲ್ಲಿಸಿ ಘನ ನ್ಯಾಯಾಲಯದ ಆದೇಶದಂತೆ 40x60 ಅಡಿಗಳ ಖಾಲಿ ನಿವೇಶನವನ್ನು ಮಂಜೂರು ಮಾಡಲು ಕೋರಿರುವ ಬಗ್ಗೆ ಮೇಲ್ಮನವಿ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ ಬಗ್ಗೆ.

ಪ್ರಸ್ತಾವನೆ:-ಕಡತವನ್ನು ಪರಿಶೀಲಿಸಲಾಯಿತು. ಅಪೀಲುದಾರರ ಪರವಾಗಿ ಅವರ ಪತಿಯವರಾದ ಶ್ರೀ.ಎಸ್.ಸತ್ಯಭೋದರಾವ್ ರವರು ಹಾಜರಿದ್ದು, ನಮ್ಮ ಸ್ವತ್ತಾದ 40x60 ಭೂಸ್ವಾಧೀನ ಪಡಿಸಿಕೊಂಡಿದ್ದು, ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣಕ್ಕೆ ರೂ.11,47,590/- ಹಣಕ್ಕೆ ಬದಲಾಗಿ 30x40 ಅಡಿ ಅಳತೆಯ ಬದಲಿ ನಿವೇಶವನ್ನು ನೀಡುವಂತೆ ಕೋರಿಕೊಂಡರು.

ಸಭೆಯಲ್ಲಿ ಹಾಜರಿದ್ದ ಭೂಸ್ವಾಧೀನಾಧಿಕಾರಿಗಳು ಈಗಾಗಲೇ ಸದರಿ ಪ್ರಕರಣದಲ್ಲಿ ಸರ್ಕಾರದ ಮಟ್ಟದಲ್ಲಿ ಐ-ತೀರ್ಪಾಗಿರುವುದರಿಂದ ಸದರಿಯವರ ಮನವಿಯನ್ನು ಪರಿಗಣಿಸಲು ಬರುವುದಿಲ್ಲ. ಅವರಿಗೆ ಬೇಕಾದಲ್ಲಿ ಸಿವಿಲ್ ನ್ಯಾಯಾಲಯದಲ್ಲಿ ದಾವೆ ದಾಖಲಿಸಿಕೊಳ್ಳಬಹುದಾಗಿರುತ್ತದೆಂದು ತಿಳಿಸಿರುತ್ತಾರೆ. ಹಾಜರಿದ್ದ ಉಪ ಕಾನೂನು ಅಧಿಕಾರಿಯವರು ಈಗಾಗಲೇ ಸರ್ಕಾರದ ಮಟ್ಟದಲ್ಲಿ ಐ-ತೀರ್ಪಾಗಿರುವುದರಿಂದ ಸಮಿತಿಯು ಐ-ತೀರ್ಪಿನ ವಿರುದ್ಧ ಕ್ರಮ ಕೈಗೊಳ್ಳಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ.

**ನಿರ್ಣಯ:- ಸಮಿತಿಯು ಕಡತವನ್ನು ಹಾಗೂ ಅಪೀಲುದಾರರ ಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈಗಾಗಲೇ ಸರ್ಕಾರದ ಹಂತದಲ್ಲಿ ಭೂಸ್ವಾಧೀನ ಪಡಿಸಿಕೊಂಡಿರುವ ವಿಸ್ತೀರ್ಣಕ್ಕೆ ರೂ.11,47,590/-ಗಳ ಐ-ತೀರ್ಪಿತ್ತಿರುವುದರಿಂದ ಅಪೀಲುದಾರರ ಮನವಿಯನ್ನು ಪರಿಗಣಿಸುವ ಬಗ್ಗೆ ಸರ್ಕಾರಕ್ಕೆ ಮತ್ತೊಮ್ಮೆ ಕಡತವನ್ನು ಕಳುಹಿಸಿಕೊಡಲು ಆಯುಕ್ತರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಲಾಯಿತು.**

**5.ವಿಷಯ:ಸಂಖ್ಯೆ:ಅಸ್ಥಾಸ/(ತೆ)/09/2010-11**

ಸ್ವತ್ತಿನ ಸಂಖ್ಯೆ:86/3 ಮತ್ತು 86/4, ಕೋಲ್ಸ್ ರಸ್ತೆ, ವಾರ್ಡ್-78ರ ಸ್ವತ್ತಿನ ಕಂದಾಯ ನಿಗಧಿಪಡಿಸಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿ ಸ್ವತ್ತಿನ ಮಾಲೀಕರಾದ ಶ್ರೀ.ಎಂ.ರಾಜ್ ಬಹದ್ದೂರ್‌ರವರು ಕಂದಾಯ ಕಡಿಮೆ ಮಾಡಿಕೊಡುವ ಬಗ್ಗೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ಟಿಪ್ಪಣಿ.

**"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"**

**6.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/10/2010-11**

ವಾರ್ಡ್-ನಂ.56, ನಿವೇಶನ ನಂ.2466, 24ನೇ ಅಡ್ಡ ರಸ್ತೆ, ಬನಶಂಕರಿ 2ನೇ ಹಂತ, ಗಣೇಶ ಮಂದಿರ ಈ ಸ್ವತ್ತಿಗೆ ಸಂಬಂಧಿಸಿದಂತೆ ಸ್ವತ್ತಿನ ಮಾಲೀಕರಾದ ಶ್ರೀ.ಎಸ್.ಎಸ್.ನಾಗರಾಜ್ ಮತ್ತು ಶ್ರೀಮತಿ.ಎನ್.ಮಲ್ಲಿಕಾರವರು ನೀರು ಸರಬರಾಜು ಮತ್ತು ಒಳಚರಂಡಿ ಹಾಗೂ ವಿದ್ಯುತ್ ಸರಬರಾಜು ವ್ಯವಸ್ಥೆಗೆ ರಸ್ತೆ ಅಗೆತ ಕೋರಿದ್ದು, ಸದರಿಯವರ ಮನವಿಯನ್ನು ದಿನಾಂಕ:20-8-2010ರಂದು ತಿರಸ್ಕರಿಸಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿರುವ ಬಗ್ಗೆ ಮೇಲ್ಮನವಿ ತೀರ್ಮಾನಕ್ಕಾಗಿ ಮಂಡಿಸಿರುವ ಬಗ್ಗೆ.

<u>ಪ್ರಸ್ತಾವನೆ:</u>- ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರ ಪರವಾಗಿ ಹಾಜರಿದ್ದ ವಕೀಲರು ವಾದ ಮಂಡಿಸಿ ಅಪೀಲುದಾರರು ಮೇಲ್ಕಂಡ ಸ್ವತ್ತಿನಲ್ಲಿ ನಿರ್ಮಿಸಿರುವ ವಾಣಿಜ್ಯ ಕಟ್ಟಡಕ್ಕೆ ಮೂಲ ಭೂತ ಸೌಕರ್ಯಗಳಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜು ವ್ಯವಸ್ಥೆಗೆ ರಸ್ತೆ ಕಡಿತ ಕೋರಿ ಅರ್ಜಿ ಸಲ್ಲಿಸಲಾಗಿ, ಅಪೀಲುದಾರರು ನಿರ್ಮಿಸಿರುವ ಕಟ್ಟಡದ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇರುವುದರಿಂದ ರಸ್ತೆ ಕಡಿತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ)ವಲಯರವರು ತಿರಸ್ಕರಿಸಿರುತ್ತಾರೆ. ಆದರೆ ರಿಟ್ ಪಿಟಿಷನ್ ಸಂಖ್ಯೆ:30529/2004 ಮತ್ತು 12022/2008ಗಳಲ್ಲಿ ಆದೇಶಿಸಿರುವಂತೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ಅನುಮತಿ ನೀಡಬಹುದಾಗಿರುತ್ತದೆ. ಆದುದರಿಂದ ಸದರಿ ಪ್ರಕರಣದ



ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ರಸ್ತೆ ಅಗೆತಕ್ಕ ಅನುಮತಿ ನೀಡುವಂತೆ ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಉಪ ಕಾನೂನು ಅಧಿಕಾರಿಗಳು ಪ್ರಕರಣವು ನ್ಯಾಯಾಲದಲ್ಲಿರುವುದರಿಂದ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಉಪ ಕಾನೂನು ಅಧಿಕಾರಿಗಳು ನ್ಯಾಯಾಲಯದಲ್ಲಿ ಪ್ರಕರಣವು ದಾಖಲಾಗಿದ್ದಾಗ ಯಾವ ಕಾಯ್ದೆಯಡಿ ರಸ್ತೆ ಅಗೆತಕ್ಕೆ ಪರವಾನಗಿ ನೀಡಲು ಬರುವುದಿಲ್ಲವೆಂದು ತಿಳಿಸಿರುವುದಿಲ್ಲ. ಹಾಗೂ ಅಪೀಲುದಾರರಿಗೆ ರಸ್ತೆ ಅಗೆತವನ್ನು ತಿರಸ್ಕರಿಸಲಾಗಿದೆಂದು ನೀಡಿರುವ ಪತ್ರದಲ್ಲೂ ಸಹ ಸಕಾರಣಗಳನ್ನು ನೀಡದೆ ನ್ಯಾಯಾಲದಯಲ್ಲಿ ದಾವೆ ಇರುವುದರಿಂದ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿರಸ್ಕರಿಸಿರುವುದನ್ನು ಸಮಿತಿಯು ಗಮನಿಸಿರುತ್ತದೆ.

**<u>ನಿರ್ಣಯ:</u>**- ಸಮಿತಿಯು ವಕೀಲರ ವಾದ ಹಾಗೂ ರಿಟ್ ಪಿಟಿಷನ್‌ಗಳನ್ನು ಮತ್ತು ಕಡತದ ಟಿಪ್ಪಣಿಯಲ್ಲಿರುವ ಅಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳು ಅತಿ ಅವಶ್ಯಕವಾಗಿದ್ದು ಅಪೀಲುದಾರರು ವಾರ್ಡ್-ನಂ.56, ನಿವೇಶನ ನಂ.2466, 24ನೇ ಅಡ್ಡ ರಸ್ತೆ, ಬನಶಂಕರಿ 2ನೇ ಹಂತ, ಗಣೇಶ ಮಂದಿರ ಈ ಸ್ವತ್ತಿನಲ್ಲಿ ನಿರ್ಮಿಸಿರುವ ವಾಣಿಜ್ಯ ಕಟ್ಟಡಕ್ಕೆ ನ್ಯಾಯಾಲಯದಲ್ಲಿರುವ ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಈ ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-01-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಿಟಿಎಂ)/ಶಿವಾಜಿನಗರ) ವಲಯ |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

01.ವಿಷಯ:ಸಂಖ್ಯೆ:ಅಸ್ಥಾಸ/(ಆ)/03/2010-11

ಶ್ರೀ.ಅಬ್ದುಲ್ ಖಾದಿರ್ ಪಿ.ಎಂ. (ಪ್ರತಿನಿಧಿ), ಮೆ॥ಹೆಲ್ತ್ ವೇ ಮೆಡಿಕಲ್ ಡಯಾಗ್ನೋಸ್ಟಿಕ್, ನಂ.393, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರು-34ರವರು ಮೆಡಿಕಲ್ ಡಯಾಗ್ನೋಸ್ಟಿಕ್‌ಗೆ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರು ನಿರಾಕರಿಸಿದ ಹಿಂಬರಹದ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ಟಿಪ್ಪಣಿ.

**ಪ್ರಸ್ತಾನೆ**:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಆಕ್ಷೇಪಣೆದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ವಸತಿ ಪ್ರದೇಶವಾಗಿದ್ದು, ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

**02.ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11**

2ನೇ ಮುಖ್ಯರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು, ನ್ಯಾಷನಲ್ ಕಾಲೇಜ್ ಎದುರು ಅಕ್ಷಯ ವೆಜ್ ತಿಂಡೀಸ್ ಹೋಟೆಲ್ ಅನಧಿಕೃತವಾಗಿ ನಡೆಯುತ್ತಿರುವ ಬಗ್ಗೆ.

**ಪ್ರಸ್ತಾನೆ**:- ಹೋಟೆಲ್ ಜನರೇಟ್‌ರನ್ನು ಪಾದಚಾರಿ ರಸ್ತೆಯ ಮೇಲೆ ಅಳವಡಿಸಿಕೊಂಡಿರುತ್ತಾರೆಂದು ಸಮಿತಿಗೆ ದೂರು ಬಂದ ಹಿನ್ನೆಲೆಯಲ್ಲಿ ದಿನಾಂಕ:15-12-2010ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಆ ಸಂದರ್ಭದಲ್ಲಿ ಹೋಟೆಲ್ ಮಾಲೀಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಯಾವುದೇ ಆರೋಗ್ಯ ಪರವಾನಗಿ, ಉದ್ದಿಮೆ ಪರವಾಗಿಯನ್ನು ಪಡೆಯದೆ ಹೋಟೆಲ್ ಹಾಗೂ ಮೊದಲನೇ ಮತ್ತು ಎರಡನೇ ಮಹಡಿಯಲ್ಲಿ ಪಾರ್ಟಿ ಹಾಲ್ ನಡೆಸುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ವಾಹನ ನಿಲ್ದಾಣಕ್ಕೆ ಉಪಯೋಗಿಸಬೇಕಾಗಿರುವ ತಳಮಹಡಿಯನ್ನು ಊಟದ ಕೊಠಡಿಯಾಗಿ ಉಪಯೋಗಿಸುತ್ತಿರುವುದು ಕಂಡು ಬಂದಿರುತ್ತದೆ.

ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಯವರನ್ನು ವಿಚಾರಿಸಲಾಗಿ ಈ ವಿಷಯವು ನನಗೆ ತಿಳಿದಿರುವುದಿಲ್ಲವೆಂದು ಸ್ಥಳದಲ್ಲಿ ಉತ್ತರ ನೀಡಿರುತ್ತಾರೆ. ಈ ವಿಷಯವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಕೂಡಲೇ ಸದರಿ ಹೋಟೆಲ್ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೌಖಿಕವಾಗಿ ಸಮಿತಿಯು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಯವರಿಗೆ ಆದೇಶಿಸಲಾಗಿತ್ತು. ಸದರಿ ಆದೇಶದ ಪ್ರಕಾರ ಆರೋಗ್ಯ ವೈದ್ಯಾಧಿಕಾರಿ (ಪದ್ಮನಾಭನಗರ)ವಲಯರವರು ಸದರಿ ಹೋಟೆಲ್‌ನ್ನು ಮಧ್ಯಾಹ್ನ 2.30ರಲ್ಲಿ ಮುಚ್ಚಿಸಿರುವುದಾಗಿ ಛಾಯಾ ಚಿತ್ರಗಳ ಸಮೇತ ವರದಿಯನ್ನು ಸಮಿತಿಗೆ ಮಂಡಿಸಿದ್ದರು.

-2-

ಆದರೆ ಹೋಟೆಲ್‌ನ್ನು ಮುಚ್ಚಿದ ನಂತರ ಯಾವುದೇ ಮೇಲಾಧಿಕಾರಿಗಳ ಆದೇಶವನ್ನು ಪಡೆಯದೆ ಏಕಾಏಕಿ ಹೋಟೆಲ್ ನಡೆಯುತ್ತಿರುವುದು ಕಂಡು ಬಂದಿದ್ದು ಈ ಬಗ್ಗೆ ಸಮಿತಿಯು ಸದರಿ ವಿಷಯವನ್ನು ಸಮಿತಿಯ ಮುಂದೆ ಚರ್ಚೆಗೆ ತೆಗೆದುಕೊಂಡು ಪ್ರಕರಣವನ್ನು ಕರೆಯಲಾಯಿತು.

ಸದರಿ ವಿಚಾರಣೆಯಲ್ಲಿ ಹಾಜರಿದ್ದ ಆರೋಗ್ಯ ವೈದ್ಯಾಧಿಕಾರಿ (ಪದ್ಮನಾಭನಗರ)ರವರು ಹೇಳಿಕೆ ನಿಡಿ ನಾನು ದಿನಾಂಕ:22-10-2009ರಿಂದ ಆರೋಗ್ಯ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತೇನೆ. ದಿನಾಂಕ:15-12-2010ರಂದು ಅಪೀಲು ಸ್ಥಾಯಿ ಸಮಿತಿಯು ಅಕ್ಷಯ ವೆಜ್ ತಿಂಡೀಸ್ ಹೋಟೆಲ್‌ನ್ನು ಸ್ಥಳ ತನಿಖೆ ಮಾಡಿದಾಗ ಹಾಜರಿರುತ್ತೇನೆ. ಅಪೀಲು ಸ್ಥಾಯಿ ಸಮಿತಿಯು ಸದರಿ ಹೋಟೆಲ್ ನಡೆಯುತ್ತಿರುವ ಬಗ್ಗೆ ಉದ್ದಿಮೆ ಪರವಾನಗಿ ಪಡೆದಿರುವ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಆ ಸಮಯದಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ಸ್ಥಳದಲ್ಲಿ ವಿಚಾರಣೆ ಮಾಡಲಾಗಿ ಸದರಿ ಹೋಟೆಲ್‌ರವರು ಯಾವುದೇ ಉದ್ದಿಮೆ ಪರವಾನಗಿ ಪಡೆಯದೇ ಹೋಟೆಲ್ ಉದ್ದಿಮೆಯನ್ನು ನಡೆಸುತ್ತಿರುವುದು ನನ್ನ ಗಮನಕ್ಕೆ ಬಂದಿರುತ್ತದೆ.

ನಂತರ ಅನಧಿಕೃತವಾಗಿ ನಡೆಯುತ್ತಿದ್ದ ಹೋಟೆಲ್ ಉದ್ದಿಮೆಯ ಮಾಲೀಕರಿಗೆ ತಿಳುವಳಿಕೆ ನೀಡಿ ಹೋಟೆಲ್‌ನ್ನು ಮುಚ್ಚಿಸಿ ವರದಿಯನ್ನು ಅಪೀಲು ಸ್ಥಾಯಿ ಸಮಿತಿಗೆ ದಿನಾಂಕ:15-12-2010ರಂದು ಮಧ್ಯಾಹ್ನ 2-30ಗಂಟೆಗೆ ಛಾಯಾಚಿತ್ರ ಸಲ್ಲಿಸಿರುತ್ತೇನೆ. ತದನಂತರ ಸ್ಥಳೀಯ ನಗರ ಪಾಲಿಕೆ ಸದಸ್ಯರಾದ (ವಾರ್ಡ್-166) ಶ್ರೀಮತಿ.ಜ್ಯೋತಿ ಶ್ರೀ ಹರಿ ರೆಡ್ಡಿರವರು ಒಂದು ಪತ್ರ ನೀಡಿ ಸದರಿ ಹೋಟೆಲ್ ಉದ್ದಿಮೆಯನ್ನು ತೆರೆಯುವಂತೆ ಒತ್ತಾಯಿಸಿರುತ್ತಾರೆ. ಅವರ ಪತ್ರದ ಒಕ್ಕಣೆಯಲ್ಲಿ ಸದರಿ ಹೋಟೆಲ್‌ರವರು ಉದ್ದಿಮೆ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸಿರುವುದಾಗಿ ವಾಣಿಜ್ಯ ಕಂದಾಯವನ್ನು ಮತ್ತು ಪರವಾನಗಿ ಶುಲ್ಕವನ್ನು ಪಾವತಿಸಿರುವುದಾಗಿ ದಿನಾಂಕ:12-12-2010ರಂದು ಹೋಟೆಲ್ ಪೂಜೆ ಮಾಡಿ ಸಾರ್ವಜನಿಕರಿಗೆ ಉಚಿತ ಭೋಜನ ಮತ್ತು ತಿಂಡಿ ನೀಡಿತ್ತಿರುವುದಾಗಿ, ಸದರಿ ಹೋಟೆಲ್ ಮುಚ್ಚಿರುವುದನ್ನು ತೆರವುಗೊಳಿಸಿ ಉದ್ದಿಮೆ ನಡೆಸಲು ಅನುವು ಮಾಡಿಕೊಡಬೇಕೆಂದು ಪತ್ರದಲ್ಲಿ ತಿಳಿಸಿರುತ್ತಾರೆ. ಪಕ್ಕದ ವಾರ್ಡನ (167) ನಗರ ಪಾಲಿಕೆ ಸದಸ್ಯರಾದ ಶ್ರೀ.ರಮೇಶ್‌ರವರು ಸಹ ಒಂದು ಪತ್ರ ನೀಡಿ ಸದರಿ ಹೋಟೆಲ್‌ನ್ನು ಮುಚ್ಚಿರುವುದನ್ನು ತೆರವುಗೊಳಿಸುವಂತೆ ಸೂಚಿಸಿರುತ್ತಾರೆ. ಈ ಒತ್ತಡಗಳ ಮೇರೆಗೆ ನಾವುಗಳೂ ಮುಚ್ಚಲಾದ ಹೋಟೆಲ್‌ನ್ನು ತೆರವುಗೊಳಿಸಿ ಉದ್ದಿಮೆ ನಡೆಸಲು ಅವಕಾಶ ನೀಡಿರುತ್ತೇವೆ. ದಿನಾಂಕ:18-12-2010ರಂದು ಉದ್ದಿಮೆ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಮತ್ತು ಪರವಾನಗಿ ಶುಲ್ಕವನ್ನು ನೀಡಿರುತ್ತಾರೆ.

ಮೇಲ್ಕಂಡ ಕಾರಣಗಳಿಂದ ಉದ್ದಿಮೆ ಪರವಾನಗಿಯನ್ನು ನೀಡಿರುವುದಿಲ್ಲ ಮತ್ತು ಕಡತವನ್ನು ಮೇಲಾಧಿಕಾರಿಗಳ ಮಾರ್ಗದರ್ಶನ ಹಾಗೂ ಆದೇಶಕ್ಕೆ ಸಲ್ಲಿಸಲಾಗಿರುತ್ತದೆ. ಆದರೆ ಆರೋಗ್ಯಾಧಿಕಾರಿಗಳು ಕಡತವನ್ನು ಸ್ವೀಕರಿಸಿರುವುದಿಲ್ಲ. ಆದಾಗ್ಯೂ ಹೋಟೆಲ್ ಉದ್ದಿಮೆಯನ್ನು ಮಾಲೀಕರು ಅನಧಿಕೃತವಾಗಿ ನಡೆಸುತ್ತಿರುತ್ತಾರೆಂದು ತಿಳಿಸಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

**03.ವಿಷಯ:ಸಂಖ್ಯೆ:ಅಸ್ಥಾಸ/(ಆ)/07/2010-11**

ಸಂಖ್ಯೆ:27, 6ನೇ ಅಡ್ಡರಸ್ತೆ, ಸಂಪಂಗಿರಾಮನಗರ ವಾರ್ಡ್-110ರಲ್ಲಿ ಚಂದ್ರಪ್ಪ ಎಂಬುವವರು 15 ಅಶ್ವಶಕ್ತಿಗಳ ಪರವನಗಿಯನ್ನು ರದ್ದುಪಡಿಸಲು ಹಾಗೂ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ತಿಳಿಸಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ವಲಯರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಅಪೀಲುದಾರರು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಅದರಂತೆ ನನ್ನ ಮನವಿಯನ್ನು ಪರಿಗಣಿಸುವಂತೆ ಕೋರಿಕೊಂಡಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

**04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/09/2010-11**

ಸ್ವತ್ತಿನ ಸಂಖ್ಯೆ:86/3 ಮತ್ತು 86/4, ಕೋಲ್ಸ್ ರಸ್ತೆ, ವಾರ್ಡ್-78ರ ಸ್ವತ್ತಿನ ಕಂದಾಯ ನಿಗಧಿಪಡಿಸಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿ ಸ್ವತ್ತಿನ ಮಾಲೀಕರಾದ ಶ್ರೀ.ಎಂ.ರಾಜ್ ಬಹದ್ದೂರ್‌ರವರು ಕಂದಾಯ ಕಡಿಮೆ ಮಾಡಿಕೊಡುವ ಬಗ್ಗೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಅಪೀಲುದಾರರು ತಮ್ಮ ಹೇಳಿಕೆಯಲ್ಲಿ ಭಾಡಿಗೆಗೆ ನೀಡಿದ್ದ ಭಾಗವು ತುಂಬಾ ದಿನಗಳಿಂದ ಖಾಲಿ ಇರುತ್ತದೆ. ಹಾಗೂ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿಲ್ಲದೇ ಇರುವುದರಿಂದ ಪರಿಶೀಲಿಸಿ ಕಂದಾಯವನ್ನು ನಿಗಧಿ ಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"



05.ವಿಷಯ:ಸಂಖ್ಯೆ:ಅಸ್ಥಾಸ/(ಆ)/11/2010-11

ಸ್ವತ್ತಿನ ಸಂಖ್ಯೆ:26, ದೂಪನಹಳ್ಳಿ, ಹೆಚ್.ಎ.ಎಲ್. 2ನೇಹಂತ ಬೆಂಗಳೂರು-08 ಇಲ್ಲಿ ರೆಫ್ರೆಸ್‌ಮೆಂಟ್ (ಸ್ಟಾರಕ್ಸ್) ನಡೆಸಲು ಉದ್ದಿಮೆ ಪರವಾನಗಿ ಕೋರಿದ್ದು, ಕೆಲವೊಂದು ಕಾರಣಗಳಿಂದ ಪರವಾನಗಿಯನ್ನು ತಿರಸ್ಕರಿಸಿ ದಿನಾಂಕ:16-12-2010ರಂದು ಆರೋಗ್ಯ ವೈದ್ಯಾಧಿಕಾರಿ (ಶಾಂತಿನಗರ) ಉಪ ವಿಭಾಗರವರು ಹಿಂಬರಹ ನೀಡಿದ್ದು, ಸದರಿ ಹಿಂಬರಹದ ವಿರುದ್ಧ ರೆಫ್ರೆಸ್‌ಮೆಂಟ್ (ಸ್ಟಾರಕ್ಸ್) ಮಾಲೀಕರಾದ ಶ್ರೀ.ಕ್ರಿಸ್‌ಲೀನ್ ಕಾರ್‌ಡೋಜ್‌ರವರು ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಸದರಿ ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ವಿವರವಾದ ಟಿಪ್ಪಣಿಯೊಂದಿಗೆ ಸಮಿತಿಯ ಮುಂದೆ ಮಂಡಿಸುವಂತೆ ದಿನಾಂಕ:18-12-2010ರಂದು ಕೋರಲಾಗಿತ್ತು. ಆದರೆ ಇದುವರೆವಿಗೂ ಕಡತವು ಸಮಿತಿಯ ಮುಂದೆ ಬಂದಿರುವುದಿಲ್ಲ. ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಅಪೀಲುದಾರರು ದಿನಾಂಕ:28-01-2011ರಂದು ಮನವಿಯನ್ನು ಸಲ್ಲಿಸಿ ಈಗಾಗಲೇ ಸುಮಾರು 2 ತಿಂಗಳು ಕಳೆಯುತ್ತಾ ಬಂದರೂ ಸಹ ನಮ್ಮನ್ನು ಕರೆದು ಅಪೀಲು ನಡೆಸಿರುವುದಿಲ್ಲ ಇದರಿಂದಾಗಿ ನಮಗೆ ಆರ್ಥಿಕ ನಷ್ಟವುಂಟಾಗುತ್ತಿದ್ದು ಕೂಡಲೇ ನಮಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ನ್ಯಾಯಾಲಯದಲ್ಲಿ ಮೊಕದ್ದಮ್ಮೆ ಇರುವುದರಿಂದ ನಮಗೆ ಉದ್ದಿಮೆ ಪರವಾನಗಿ ನೀಡಲು ಬರುವುದಿಲ್ಲವೆಂದು ಹಿಂಬರಹ ನೀಡಿರುತ್ತಾರೆ. ಆದರೆ ಘನ ಉಚ್ಚನ್ಯಾಯಾಲಯದಲ್ಲಿ ಕಟ್ಟಡ ಉಲ್ಲಂಘನೆಗಳ ಬಗ್ಗೆ ಪ್ರಕರಣವಿದ್ದು ಸದರಿ ಪ್ರಕರಣದಲ್ಲಿ ಮಧ್ಯಂತರ ತಡೆಯಾಜ್ಞೆ ಪಡೆದಿರುತ್ತೇನೆ. ಹಾಗೂ ಕಟ್ಟಡ ಉಲ್ಲಂಘನೆಗೂ ಉದ್ದಿಮೆ ನಡೆಸಲು ಪರವಾನಗಿ ನೀಡುವುದಕ್ಕೂ ಸಂಬಂಧವಿರುವುದಿಲ್ಲ. ಹಾಗೂ ಪರವಾನಗಿ ಮೇಳದಲ್ಲೂ ಸಹ ಉದ್ದಿಮೆ ಪರವಾನಗಿ ನೀಡುವಂತೆ ಕೋರಿಕೊಂಡಿದ್ದರೂ ಸಹ ಪರವಾನಗೆ ನೀಡಿರುವುದಿಲ್ಲ. ಆದುದರಿಂದ ರೆಸ್ಟೋರೆಂಟ್ (ಸ್ಟಾರ್‌ಕ್ಸ್) ಉದ್ದಿಮೆ ನಡೆಸಲು ಪರವಾನಗೆ ನೀಡುವಂತೆ ಕೋರಿರುತ್ತಾರೆ.

ನಿರ್ಣಯ:- ಸಮಿತಿಯು ಹಿಂಬರಹದಲ್ಲಿ ತಿಳಿಸಿರುವ ಅಂಶಗಳನ್ನು ಹಾಗೂ ಅಪೀಲುದಾರರ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಸುಮಾರು 2 ತಿಂಗಳಾಗುತ್ತಾ ಬಂದರೂ ಸಮಿತಿಯ ಮುಂದೆ ಕಡತವನ್ನು ಮಂಡಿಸದೇ ಇರುವುದನ್ನು ಗಂಭೀರವಾಗಿ ಪರಿಗಣಿಸಲಾಯಿತು. ಹಾಗೂ ನ್ಯಾಯಾಲಯದಲ್ಲಿ ಕಟ್ಟಡ ಉಲ್ಲಂಘನೆಗಾಗಿ ಪ್ರಕರಣವು ದಾಖಲಾಗಿರುವುದನ್ನು ಕಡತದಲ್ಲಿರುವ ನ್ಯಾಯಾಲಯದ ಆರ್.ಎಫ್.ಎ. ಆದೇಶದ ಪ್ರತಿಯಿಂದ ದೃಢಪಡಿಸಿಕೊಳ್ಳಲಾಯಿತು. ಶ್ರೀ.ಕ್ರಿಷ್‌ಲೀನ್ ಕಾರ್‌ಡೋಜ್ ತಿಳಿಸಿರುವಂತೆ ಕಟ್ಟಡ ಉಲ್ಲಂಘನೆಗೂ ಉದ್ದಿಮೆ ನಡೆಸಲು ಪರವಾನಗಿ ನೀಡುವುದಕ್ಕೂ ಒಂದಕ್ಕೊಂದು ಸಂಬಂಧವಿಲ್ಲದೇ ಇರುವುದರಿಂದ ಸದರಿಯವರು ಕೋರಿರುವಂತೆ (ಸ್ಟಾರ್‌ಕ್ಸ್) ರೆಫ್ರೆಸ್‌ಮೆಂಟ್ ಉದ್ದಿಮೆ ನಡೆಸಲು ಪರವಾನಗಿ ನೀಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:11-02-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಆರೋಗ್ಯಾಧಿಕಾರಿ (ದಕ್ಷಿಣ) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಿಟಿಎಂ)/ಶಿವಾಜಿನಗರ) ವಲಯ |
| 05 | ಡಾ॥ಎಸ್.ರಾಜು | ಸದಸ್ಯರು | |
| 06 | ರಮೇಶ್ ರಾಜು ಕೆ. | ಸದಸ್ಯರು | |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

02. ವಿಷಯ:ಸಂಖ್ಯೆ:ಅಸ್ಥಾಸ/(ತೆ)/02/2010-11

ಕೆಂಪೇಗೌಡ ನಗರ ಉಪ ವಿಭಾಗದ ವಾರ್ಡ್ ಸಂಖ್ಯೆ:118(ಹಳೆ ವಾಡ್-48), ಸುಧಾಮನಗರ, 2ನೇ ಅಡ್ಡರಸ್ತೆ, ಲಾಲ್ ಬಾಗ್ ರಸ್ತೆಯಲ್ಲಿರುವ ಸ್ವತ್ತಿನ ಸಂಖ್ಯೆ:3ರ ಖಾತೆದಾರರಾದ ಶ್ರೀ.ಲೋಕೇಶ್‌ರವರು, ವಾರ್ಷಿಕ ಮೌಲ್ಯ ರೂ.3,22,560/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವ ತೆರಿಗೆ ಬಗ್ಗೆ ಸಲ್ಲಿಸಿದ್ದ ಮೇಲ್ಮನವಿಯನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿದ್ದು, ಸದರಿ ಸ್ಥಿರೀಕರಣದ ಆದೇಶದ ದಿನಾಂಕ:11-

08-2009ರ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರ(ದಕ್ಷಿಣ) ರವರ ಟಿಪ್ಪಣಿ.

ಪ್ರಸ್ತಾವನೆ:- ಅರ್ಜಿದಾರರು ಹಾಜರಿದ್ದು ಸ್ವತ್ತಿನಲ್ಲಿ ಸ್ವಲ್ಪ ಭಾಗವನ್ನು ಸ್ವಂತಕ್ಕೂ ಸ್ವಲ್ಪ ಭಾಗವನ್ನು ಬಾಡಿಗೆಗೂ ನೀಡಿರುವುದಾಗಿ, ನಿಗಧಿ ಪಡಿಸಿರುವ ಕಂದಾಯವು ಕ್ರಮ ಬದ್ಧವಾಗಿಲ್ಲವೆಂದು ತಿಳಿಸಿರುತ್ತಾರೆ. ಅರ್ಜಿದಾರರು ಹಾಗೂ ದಿನಾಂಕ:08-09-2009ರಂದು ನೀಡಿರುವ ಮೇಲ್ಮನವಿಯ ಪ್ರತಿಯನ್ನು ಸಮಿತಿಯ ಮುಂದೆ ಮಂಡಿಸಿ ಕಂದಾಯ ಕಡಿಮೆ ಮಾಡಲು ಕೋರಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಿದ್ದು ನಿಗಧಿ ಪಡಿಸಿರುವ ಕಂದಾಯವು ಕ್ರಮ ಬದ್ಧವಾಗಿದ್ದು ವಾಣಿಜ್ಯ ಭಾಗಕ್ಕೆ ಶೇಕಡ 20ರಷ್ಟು ಹೆಚ್ಚಿಸಲಾಗಿದೆ ಎಂದು ತಿಳಿಸಿರುತ್ತಾರೆ.

**ನಿರ್ಣಯ:** ಪ್ರಥಮ ಅಫೀಲು ಅಧಿಕಾರಿಗಳು ಸ್ಥಿರೀಕರಿಸಿರುವ ಕಂದಾಯವು ಸಮಂಜಸವಾಗಿರುವುದರಿಂದ ಸದರಿ ಸ್ಥಿರೀಕರಣವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಆ)/03/2010-11

ಶ್ರೀ.ಅಬ್ದುಲ್ ಖಾದಿರ್ ಪಿ.ಎಂ. (ಪ್ರತಿನಿಧಿ), ಮೆ॥ಹೆಲ್ತ್ ವೇ ಮೆಡಿಕಲ್ ಡಯಾಗ್ನೋಸ್ಟಿಕ್, ನಂ.393, 7ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, 4ನೇ ಬ್ಲಾಕ್, ಕೋರಮಂಗಲ ಬೆಂಗಳೂರು-34ರವರು ಮೆಡಿಕಲ್ ಡಯಾಗ್ನೋಸ್ಟಿಕ್‌ಗೆ ಪರವಾನಗಿ ನೀಡಲು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರು ನಿರಾಕರಿಸಿದ ಹಿಂಬರಹದ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ಟಿಪ್ಪಣಿ.

**ಪ್ರಸ್ತಾನೆ**:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಗೈರು ಹಾಜರಾಗಿರುತ್ತಾರೆ. ಆಕ್ಷೇಪಣೆದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಪ್ರದೇಶವು ವಸತಿ ಪ್ರದೇಶವಾಗಿದ್ದು, ವಾಣಿಜ್ಯ ಚಟುವಟಿಕೆ ನಡೆಸಲು ಅನುಮತಿ ನೀಡಬಾರದೆಂದು ತಿಳಿಸಿರುತ್ತಾರೆ.

-2-

**ನಿರ್ಣಯ**:- ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಅರ್ಜಿದಾರರು ತಪಾಸಣಾ ಸಮಯದಲ್ಲಿ ಹಾಜರಿರುವುದಿಲ್ಲ. ಅರ್ಜಿದಾರರು ಪರವಾನಗಿ ಕೋರಿರುವ ವಿಳಾಸದಲ್ಲಿ ಯಾವುದೇ ಉದ್ದಿಮೆಯನ್ನು ನಡೆಸಲು ಉದ್ದೇಶಿಸಿರುವುದು ಕಂಡು ಬಂದಿರುವುದಿಲ್ಲ. ಹಾಗೂ ದಿನಾಂಕ:28-01-2011ರ ಸಭೆಗೂ ಸಹ ಅರ್ಜಿದಾರರು ಹಾಜರಾಗಿರುವುದಿಲ್ಲ. ಈ ಎಲ್ಲಾ ಅಂಶಗಳನ್ನು ಸಮಿತಿ ಪರಿಶೀಲಿಸಿ ಮೆಡಿಕಲ್ ಡಯಾಗ್ನೋಸ್ಟಿಕ್ ಪರವಾನಗಿ ಕೋರಿದ್ದ ಅರ್ಜಿದಾರರ ಮನವಿಯನ್ನು ಆರೋಗ್ಯ ವೈದ್ಯಾಧಿಕಾರಿ (ಕೋರಮಂಗಲ)ರವರು ನಿರಾಕರಿಸಿರುವ ಹಿಂಬರಹವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

**03.ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11**

2ನೇ ಮುಖ್ಯರಸ್ತೆ, 7ನೇ ಬ್ಲಾಕ್, ಜಯನಗರ, ಬೆಂಗಳೂರು, ನ್ಯಾಷನಲ್ ಕಾಲೇಜ್ ಎದುರು ಅಕ್ಷಯ ವೆಜ್ ತಿಂಡೀಸ್ ಹೋಟೆಲ್ ಅನಧಿಕೃತವಾಗಿ ನಡೆಯುತ್ತಿರುವ ಬಗ್ಗೆ.

**ಪ್ರಸ್ತಾನೆ**:- ಹೋಟೆಲ್ ಜನರೇಟ್‌ರನ್ನು ಪಾದಚಾರಿ ರಸ್ತೆಯ ಮೇಲೆ ಅಳವಡಿಸಿಕೊಂಡಿರುತ್ತಾರೆಂದು ಸಮಿತಿಗೆ ದೂರು ಬಂದ ಹಿನ್ನೆಲೆಯಲ್ಲಿ ದಿನಾಂಕ:15-12-2010ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಆ ಸಂದರ್ಭದಲ್ಲಿ ಹೋಟೆಲ್ ಮಾಲೀಕರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಯಾವುದೇ ಆರೋಗ್ಯ ಪರವಾನಗಿ, ಉದ್ದಿಮೆ ಪರವಾಗಿಯನ್ನು ಪಡೆಯದೆ ಹೋಟೆಲ್ ಹಾಗೂ ಮೊದಲನೇ ಮತ್ತು ಎರಡನೇ ಮಹಡಿಯಲ್ಲಿ ಪಾರ್ಟಿ ಹಾಲ್ ನಡೆಸುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ವಾಹನ ನಿಲ್ದಾಣಕ್ಕೆ ಉಪಯೋಗಿಸಬೇಕಾಗಿರುವ ತಳಮಹಡಿಯನ್ನು ಊಟದ ಕೊಠಡಿಯಾಗಿ ಉಪಯೋಗಿಸುತ್ತಿರುವುದು ಕಂಡು ಬಂದಿರುತ್ತದೆ.

ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಯವರನ್ನು ವಿಚಾರಿಸಲಾಗಿ ಈ ವಿಷಯವು ನನಗೆ ತಿಳಿದಿರುವುದಿಲ್ಲವೆಂದು ಸ್ಥಳದಲ್ಲಿ ಉತ್ತರ ನೀಡಿರುತ್ತಾರೆ. ಈ ವಿಷಯವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಕೂಡಲೇ ಸದರಿ ಹೋಟೆಲ್ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮೌಖಿಕವಾಗಿ ಸಮಿತಿಯು ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಯವರಿಗೆ ಆದೇಶಿಸಲಾಗಿತ್ತು. ಸದರಿ ಆದೇಶದ ಪ್ರಕಾರ ಆರೋಗ್ಯ ವೈದ್ಯಾಧಿಕಾರಿ (ಪದ್ಮನಾಭನಗರ)ವಲಯರವರು ಸದರಿ ಹೋಟೆಲ್‌ನ್ನು ಮಧ್ಯಾಹ್ನ 2.30ರಲ್ಲಿ ಮುಚ್ಚಿಸಿರುವುದಾಗಿ ಛಾಯಾ ಚಿತ್ರಗಳ ಸಮೇತ ವರದಿಯನ್ನು ಸಮಿತಿಗೆ ಮಂಡಿಸಿದ್ದರು.

ಆದರೆ ಹೋಟೆಲ್‌ನ್ನು ಮುಚ್ಚಿದ ನಂತರ ಯಾವುದೇ ಮೇಲಾಧಿಕಾರಿಗಳ ಆದೇಶವನ್ನು ಪಡೆಯದೆ ಏಕಾಏಕಿ ಹೋಟೆಲ್ ನಡೆಯುತ್ತಿರುವುದು ಕಂಡು ಬಂದಿದ್ದು ಈ ಬಗ್ಗೆ ಸಮಿತಿಯು ಸದರಿ ವಿಷಯವನ್ನು ಸಮಿತಿಯ ಮುಂದೆ ಚರ್ಚೆಗೆ ತೆಗೆದುಕೊಂಡು ಪ್ರಕರಣವನ್ನು ಕರೆಯಲಾಯಿತು.

ಸದರಿ ವಿಚಾರಣೆಯಲ್ಲಿ ಹಾಜರಿದ್ದ ಆರೋಗ್ಯ ವೈದ್ಯಾಧಿಕಾರಿ (ಪದ್ಮನಾಭನಗರ)ರವರು ಹೇಳಿಕೆ ನಿಡಿ ನಾನು ದಿನಾಂಕ:22-10-2009ರಿಂದ ಆರೋಗ್ಯ ವೈದ್ಯಾಧಿಕಾರಿಯಾಗಿ ಕಾರ್ಯನಿರ್ವಹಿಸುತ್ತಿರುತ್ತೇನೆ. ದಿನಾಂಕ:15-12-2010ರಂದು ಅಪೀಲು ಸ್ಥಾಯಿ ಸಮಿತಿಯು ಅಕ್ಷಯ ವೆಜ್ ತಿಂಡೀಸ್ ಹೋಟೆಲ್‌ನ್ನು ಸ್ಥಳ ತನಿಖೇ ಮಾಡಿದಾಗ ಹಾಜರಿರುತ್ತೇನೆ. ಅಫೀಲು ಸ್ಥಾಯಿ ಸಮಿತಿಯು ಸದರಿ ಹೋಟೆಲ್ ನಡೆಯುತ್ತಿರುವ ಬಗ್ಗೆ ಉದ್ದಿಮೆ ಪರವಾನಗಿ ಪಡೆದಿರುವ ಬಗ್ಗೆ ವಿಚಾರಣೆ ಮಾಡಿರುತ್ತಾರೆ. ಆ ಸಮಯದಲ್ಲಿ ಹಿರಿಯ ಆರೋಗ್ಯ ಪರಿವೀಕ್ಷಕರೊಂದಿಗೆ ಸ್ಥಳದಲ್ಲಿ ವಿಚಾರಣೆ ಮಾಡಲಾಗಿ ಸದರಿ ಹೋಟೆಲ್‌ರವರು ಯಾವುದೇ ಉದ್ದಿಮೆ ಪರವಾನಗಿ ಪಡೆಯದೇ ಹೋಟೆಲ್ ಉದ್ದಿಮೆಯನ್ನು ನಡೆಸುತ್ತಿರುವುದು ನನ್ನ ಗಮನಕ್ಕೆ ಬಂದಿರುತ್ತದೆ.

ನಂತರ ಅನಧಿಕೃತವಾಗಿ ನಡೆಯುತ್ತಿದ್ದ ಹೋಟೆಲ್ ಉದ್ದಿಮೆಯ ಮಾಲೀಕರಿಗೆ ತಿಳುವಳಿಕೆ ನೀಡಿ ಹೋಟೆಲ್‌ನ್ನು ಮುಚ್ಚಿಸಿ ವರದಿಯನ್ನು ಅಪೀಲು ಸ್ಥಾಯಿ ಸಮಿತಿಗೆ ದಿನಾಂಕ:15-12-2010ರಂದು ಮಧ್ಯಾಹ್ನ 2-30ಗಂಟೆಗೆ ಛಾಯಾಚಿತ್ರ ಸಲ್ಲಿಸಿರುತ್ತೇನೆ. ತದನಂತರ ಸ್ಥಳೀಯ ನಗರ ಪಾಲಿಕೆ ಸದಸ್ಯರಾದ (ವಾರ್ಡ್-166) ಶ್ರೀಮತಿ.ಜ್ಯೋತಿ ಶ್ರೀ ಹರಿ ರೆಡ್ಡಿರವರು ಒಂದು ಪತ್ರ ನೀಡಿ ಸದರಿ ಹೋಟೆಲ್ ಉದ್ದಿಮೆಯನ್ನು ತೆರೆಯುವಂತೆ ಒತ್ತಾಯಿಸಿರುತ್ತಾರೆ. ಅವರ ಪತ್ರದ ಒಕ್ಕಣೆಯಲ್ಲಿ ಸದರಿ ಹೋಟೆಲ್‌ರವರು ಉದ್ದಿಮೆ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸಿರುವುದಾಗಿ ವಾಣಿಜ್ಯ ಕಂದಾಯವನ್ನು ಮತ್ತು ಪರವಾನಗಿ ಶುಲ್ಕವನ್ನು ಪಾವತಿಸಿರುವುದಾಗಿ ದಿನಾಂಕ:12-12-2010ರಂದು ಹೋಟೆಲ್ ಪೂಜೆ ಮಾಡಿ ಸಾರ್ವಜನಿಕರಿಗೆ ಉಚಿತ ಭೋಜನ ಮತ್ತು ತಿಂಡಿ ನೀಡಿತ್ತಿರುವುದಾಗಿ, ಸದರಿ ಹೋಟೆಲ್ ಮುಚ್ಚಿರುವುದನ್ನು ತೆರವುಗೊಳಿಸಿ ಉದ್ದಿಮೆ ನಡೆಸಲು ಅನುವು ಮಾಡಿಕೊಡಬೇಕೆಂದು ಪತ್ರದಲ್ಲಿ ತಿಳಿಸಿರುತ್ತಾರೆ. ಪಕ್ಕದ ವಾರ್ಡನ (167) ನಗರ ಪಾಲಿಕೆ ಸದಸ್ಯರಾದ ಶ್ರೀ.ರಮೇಶ್‌ರವರು ಸಹ ಒಂದು ಪತ್ರ ನೀಡಿ ಸದರಿ ಹೋಟೆಲ್‌ನ್ನು ಮುಚ್ಚಿರುವುದನ್ನು ತೆರವುಗೊಳಿಸುವಂತೆ ಸೂಚಿಸಿರುತ್ತಾರೆ. ಈ ಒತ್ತಡಗಳ ಮೇರೆಗೆ ನಾವುಗಳೂ ಮುಚ್ಚಲಾದ ಹೋಟೆಲ್‌ನ್ನು ತೆರವುಗೊಳಿಸಿ ಉದ್ದಿಮೆ ನಡೆಸಲು ಅವಕಾಶ ನೀಡಿರುತ್ತೇವೆ.



ದಿನಾಂಕ:18-12-2010ರಂದು ಉದ್ದಿಮೆ ಪರವಾನಗಿ ಪಡೆಯಲು ಅರ್ಜಿ ಸಲ್ಲಿಸಿರುತ್ತಾರೆ. ಮತ್ತು ಪರವಾನಗಿ ಶುಲ್ಕವನ್ನು ನೀಡಿರುತ್ತಾರೆ.

ಮೇಲ್ಕಂಡ ಕಾರಣಗಳಿಂದ ಉದ್ದಿಮೆ ಪರವಾನಗಿಯನ್ನು ನೀಡಿರುವುದಿಲ್ಲ ಮತ್ತು ಕಡತವನ್ನು ಮೇಲಾಧಿಕಾರಿಗಳ ಮಾರ್ಗದರ್ಶನ ಹಾಗೂ ಆದೇಶಕ್ಕೆ ಸಲ್ಲಿಸಲಾಗಿರುತ್ತದೆ. ಆದರೆ ಆರೋಗ್ಯಾಧಿಕಾರಿಗಳು ಕಡತವನ್ನು ಸ್ವೀಕರಿಸಿರುವುದಿಲ್ಲ. ಆದಾಗ್ಯೂ ಹೋಟೆಲ್ ಉದ್ದಿಮೆಯನ್ನು ಮಾಲೀಕರು ಅನಧಿಕೃತವಾಗಿ ನಡೆಸುತ್ತಿರುತ್ತಾರೆಂದು ತಿಳಿಸಿರುತ್ತಾರೆ.

ಸಹಾಯಕ ನಿರ್ದೇಶಕರು ನಗರ ಯೋಜನೆ (ದಕ್ಷಿಣ)ರವರ ವರದಿಯಂತೆ ಸದರಿ ದಿನಾಂಕ:16-07-2008ರಂದು ಎಲ್.ಪಿ.ಸಂಖ್ಯೆ:ಎಡಿಸಿ(ಎಸ್)132/08-09ರಲ್ಲಿ ಸಿ2 ಕ್ಯಾಟಗಿರಿಗೆ ನಕ್ಷೆ ಮಂಜೂರಾತಿ ಪಡೆದಿದ್ದು ಸ್ಟಿಲ್ಟ್ ಪಾರ್ಕಿಂಗ್ (8 ವಾಹನ ನಿಲುಗಡೆ) ನೆಲ ಮಹಡಿಯಲ್ಲಿ ಸಿ2 ಕ್ಯಾಟಗಿರಿ 9.13x4.31 ಮೀ ಅಳತೆಗೆ ಹಾಗೂ ಮೊದಲೇ ಹಾಗೂ ಎರಡನೇ ಮಹಡಿಗೆ ಹಾಸ್ಟಲ್ ಕೊಠಡಿಗೆ ನಕ್ಷೆ ಮಂಜೂರಾತಿ ಪಡೆದುಕೊಂಡಿರುವುದಾಗಿ ವರದಿಸಿರುತ್ತಾರೆ.

<u>ನಿರ್ಣಯ:-</u> ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯು ಗಂಭೀರವಾಗಿ ಪರಿಶೀಲಿಸಿದ ನಂತರ ಉದ್ದಿಮೆ ಪರವಾನಗಿ ಪಡೆಯದೆ ಹೋಟೆಲ್ ನಡೆಸಲು ಅವಕಾಶ ಮಾಡಿಕೊಟ್ಟಿರುವುದು ಹಾಗೂ ಸಮಿತಿಯು ದಿನಾಂಕ:15-12-2010ರಂದು ಸ್ಥಳ ಪರಿಶೀಲನೆ ಮಾಡಿದಾಗ ಅನಧಿಕೃತವಾಗಿ ನಡೆಯುತ್ತಿರುವ ಉದ್ದಿಮೆಯ ಬಗ್ಗೆ ಕಾನೂನಿನಂತೆ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಗಿ, ಸದರಿ ಅಧಿಕಾರಿಗಳು ಅನಧಿಕೃತವಾಗಿ ನಡೆಯುತ್ತಿದ್ದ ಉದ್ದಿಮೆಯನ್ನು ಮುಚ್ಚಿರುವುದಾಗಿ ಸಮಿತಿಗೆ ವರದಿಯನ್ನು ನೀಡಿದ್ದು, ತದನಂತರ ಮುಚ್ಚಿರುವ ಉದ್ದಿಮೆಯನ್ನು ಸಮಿತಿಯ ಅಥವಾ ಮೇಲಾಧಿಕಾರಿಗಳ ಅನುಮೋದನೆಯನ್ನು ಪಡೆಯದೆ ತೆರವುಗೊಳಿಸಲಾಗಿರುತ್ತದೆ. ಇದು ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುವುದಲ್ಲದೆ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ಲೋಪವಾಗಿರುವುದರಿಂದ ಅಂತಹ ಅಧಿಕಾರಿಗಳ ಮೇಲೆ ಕೂಲಂಕಷ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಬೇಕಾಗಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಾದ ಶ್ರೀ.ಡಾ||ಎಂ.ಎಲ್.ಪ್ರಕಾಶ್ ಬಾಬು, ಆರೋಗ್ಯ ವೈದ್ಯಾಧಿಕಾರಿ ಮತ್ತು ಶ್ರೀ.ಚಂದ್ರೇಗೌಡ, ಹಿರಿಯ ಆರೋಗ್ಯ ಪರಿವೀಕ್ಷಕರು, ಇವರ ಮೇಲೆ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳುವವರೆವಿಗೂ ಸದರಿಯವರನ್ನು ಅಮಾನತ್ತುಗೊಳಿಸುವುದು. ಹಾಗೂ ಸದರಿ ಅಕ್ಷಯ ವೆಜ್ ತಿಂಡೀಸ್ ಹೋಟೆಲ್‌ರವರು ಈಗಾಗಲೇ ಉದ್ದಿಮೆ ಪರವಾನಗಿ ಪಡೆಯದೆ ಅನಧಿಕೃತವಾಗಿ ಉದ್ದಿಮೆ ನಡೆಸಿರುವುದರಿಂದ ದಂಡವನ್ನು ವಿಧಿಸಿ, ಸಹಾಯಕ ನಿರ್ದೇಶಕರು ನಗರ ಯೋಜನೆ (ದಕ್ಷಿಣ)ರವರ ದಿನಾಂಕ:11-01-2011ರ ವರದಿಯಂತೆ ಹಾಗೂ ನಕ್ಷೆ ಮಂಜೂರಾತಿ ಪ್ರಕಾರ ಸ್ಟಿಲ್ಟ್ ಪ್ರದೇಶವನ್ನು ವಾಹನ ನಿಲುಗಡೆಗಾಗಿ ಬದಲಾವಣೆ ಮಾಡಿಕೊಂಡಲ್ಲಿ ಉದ್ದಿಮೆ ಪರವಾನಗಿ ನೀಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

04. ವಿಷಯ:ಸಂಖ್ಯೆ:ಅಸ್ಥಾಸ/(ಆ)/07/2010-11

ಸಂಖ್ಯೆ:27, 6ನೇ ಅಡ್ಡರಸ್ತೆ, ಸಂಪಂಗಿರಾಮನಗರ ವಾರ್ಡ್-110ರಲ್ಲಿ ಚಂದ್ರಪ್ಪ ಎಂಬುವವರು 15 ಅಶ್ವಶಕ್ತಿಗಳ ಪರವನಗಿಯನ್ನು ರದ್ದುಪಡಿಸಲು ಹಾಗೂ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ತಿಳಿಸಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ) ವಲಯರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಅಪೀಲುದಾರರು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಅದರಂತೆ ನನ್ನ ಮನವಿಯನ್ನು ಪರಿಗಣಿಸುವಂತೆ ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಆರೊಗ್ಯಾಧಿಕಾರಿಗಳು ಸದರಿ ವಿದ್ಯುತ್ ಮಗ್ಗ ಮತ್ತು ನೂಲಿನ ಯಂತ್ರದಿಂದ ಉಂಟಾಗುವ ಶಬ್ದವು ರಸ್ತೆಯಲ್ಲಿ ಓಡಾಡು ವಾಹನಗಳಿಂದ ಉಂಟಾಗುವ ಶಬ್ದದಷ್ಟು ಇರುವುದಿಲ್ಲವೆಂದು ಸಮಿತಿಯ ಗಮನಕ್ಕೆ ತಂದಿರುತ್ತಾರೆ.

ದಿನಾಂಕ:28-01-2011ರಂದು ಸಭೆಗೆ ಹಾಜರಾದ ಆಕ್ಷೇಪಣೆದಾರರು ಲಿಖಿತ ಆಕ್ಷೇಪಣೆಗಳನ್ನು ಅನಂತರ ಸಲ್ಲಿಸುವುದಾಗಿ ತಿಳಿಸಿದರು.

ನಿರ್ಣಯ:-ಸಮಿತಿಯು ದಿನಾಂಕ:28-01-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಮೇಲ್ಮನವಿದಾರರು ತಮ್ಮ ಲಿಖಿತ ಹೇಳಿಕೆಯಲ್ಲಿ ಸದರಿ ಪ್ರದೇಶವು ಸಿ.ಡಿ.ಪಿ. ಪ್ರಕಾರ ''ಡಿ'' ವಲಯದಲ್ಲಿ ಬರುವುದೆಂದು ತಿಳಿಸಿರುತ್ತಾರೆ. ಅಲ್ಲದೆ ಅಕ್ಕ ಪಕ್ಕದ ನಿವಾಸಿಗಳು ಯಾರು ಆಕ್ಷೇಪಣೆಯನ್ನು ವ್ಯಕ್ತ ಪಡಿಸಿರುವುದಿಲ್ಲ. ಈ ಪ್ರಕರಣದಲ್ಲಿನ ಆಕ್ಷೇಪಣೆದಾರರು ಅಕ್ಕ ಪಕ್ಕದ ನಿವಾಸಿಗಳಾಗಿರುವುದಿಲ್ಲ. ಹಾಗೂ ಸಭೆಯಲ್ಲಿ ಹಾಜರಿದ್ದಾಗ ಸರ್ವೋಚ್ಚ ನ್ಯಾಯಾಲಯದ ಆದೇಶಗಳಿರುತ್ತವೆ ಅದರಂತೆ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದ್ದು, ಸದರಿ ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಸಮಿತಿಯ ಮುಂದೆ ಮಂಡಿಸುವಂತೆ ತಿಳಿಸಿದಾಗ ಆಕ್ಷೇಪಣೆದಾರರು ಆದೇಶಗಳನ್ನು ಸಮಿತಿಯ ಮುಂದೆ

-4-

ಅನಂತರ ಮಂಡಿಸುವುದಾಗಿ ತಿಳಿಸಿದರು. ಆದರೆ 15 ದಿನಗಳು ಕಳೆದರೂ ಆಕ್ಷೇಪಣೆದಾರರು ಯಾವುದೇ ಆದೇಶಗಳನ್ನು ಸಮಿತಿಯ ಮುಂದೆ ಮಂಡಿಸಿರುವುದಿಲ್ಲ. ಇದರಿಂದಾಗಿ ಆಕ್ಷೇಪಣೆದಾರರು ಎತ್ತಿರುವ ಅಂಶಗಳಲ್ಲಿ ಯಾವುದೇ ಉರುಳಿರುವುದಿಲ್ಲವೆಂದು ಪರಿಗಣಿಸಿ ಅಕ್ಕ ಪಕ್ಕದವರು ನಿರಾಕ್ಷೇಪಣಾ ಪತ್ರವನ್ನು ನೀಡಿದಲ್ಲಿ ಉದ್ದಿಮೆಯನ್ನು ನಡೆಸಲು ಬಿಬಿಎಂಪಿ ಸುವರ್ಣ ಆರೋಗ್ಯ ಪರವಾನಗಿಯಲ್ಲಿ ಅವಕಾಶ ಕಲ್ಪಿಸಿಕೊಂಡಿರುವುದನ್ನು ಪರಿಗಣಿಸಿ ಮೇಲ್ಮನವಿದಾರರು ನಡೆಸುತ್ತಿರುವ ನಂ.27, 6ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು ಈ ವಿಳಾಸದಲ್ಲಿ 15 ಅಶ್ವಶಕ್ತಿಗಳ ಪರವಾನಗಿಯನ್ನು ಪಡೆದು ವಿದ್ಯುತ್ ಮಗ್ಗಗಳನ್ನು ನಡೆಸುತ್ತಿದ್ದು ಸದರಿ ವಿದ್ಯುತ್ ಮಗ್ಗ ಮತ್ತು ನೂಲಿನ ಯಂತ್ರಕ್ಕೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಬಾರದೆಂದು ಸಮಿತಿಯು ತೀರ್ಮಾನಿಸಲಾಯಿತು.

05. ವಿಷಯ:ಸಂಖ್ಯೆ:ಅಸ್ಥಾಸ/(ಆ)/12/2010-11

ಶ್ರೀ.ಎ.ಎಸ್.ಕಾಮತ್, ವ್ಯವಸ್ಥಾಪಕ ನಿರ್ದೇಶಕರು, ಬಸವನಗುಡಿ ವಲಯ ವಾರ್ಡ್-154, ನಂ.1, 5ನೇ ಮೈನ್, ಬಸವನಗುಡಿ ರಸ್ತೆ, ಎನ್.ಆರ್.ಕಾಲೋನಿ ಬೆಂಗಳೂರು-19 ಇಲ್ಲಿ ಕಾಮತ್ ಬ್ಯೂಗಲ್ ರಾಕ್ ಹೋಟೆಲ್ ರೆಸ್ಟೋರೆಂಟ್ ಮತ್ತು 25 ಅಶ್ವಶಕ್ತಿ ಪರವಾನಗಿಯನ್ನು 2010-11ನೇ ಸಾಲಿಗೆ ನವೀಕರಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ಬಸವನಗುಡಿ)ವಲಯರುವರು ದಿನಾಂಕ:22-02-2010ರಂದು ತಡೆ ಹಿಡಿದಿರುವ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಆಕ್ಷೇಪಣೆದಾರರು ಲಿಖಿತ ಮೂಲಕ ಹೇಳಿಕೆ ನೀಡಿರುತ್ತಾರೆ. ಇತರೆ ಪ್ರಕರಣಗಳಲ್ಲಿನ ಮಾಹಿತಿ ಕುರಿತಂತೆ ಉಲ್ಲೇಖಿಸಿರುತ್ತಾರೆ. ಹಾಲಿ ಪ್ರಕರಣವು ಲೋಕಾಯುಕ್ತದಲ್ಲಿ ಬಾಕಿ ಇರುವುದಾಗಿ ಪ್ರತಿವಾದಿಗಳು ತಿಳಿಸಿರುತ್ತಾರೆ. ಅಪೀಲುದಾರರು ತಮ್ಮ ಪ್ರತಿವಾದಿಗಳ ಲಿಖಿತ ಹೇಳಿಕೆಯ ಪ್ರತಿಯನ್ನು ಕೋರಿರುತ್ತಾರೆ. ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳು ಸಿ.ಡಿ.ಪಿ. ಪ್ರಕಾರ ಮಂಜೂರಾತಿ ನೀಡಿರುವುದಾಗಿ ತಿಳಿಸಿರುತ್ತಾರೆ.

'' ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ''

06. ವಿಷಯ:ಸಂಖ್ಯೆ:ಅಸ್ಥಾಸ/(ತೆ)/13/2010-11

ಸ್ವತ್ತಿನ ಸಂಖ್ಯೆ:21, ವಾರ್ಡ್-44, ಮಾರಪ್ಪನ ಪಾಳ್ಯ, ಇಂಡಸ್ಟ್ರಿಯಲ್ ಸಬರ್ಬ್ ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಖಾತೆದಾರರು ಪ್ರಥಮ ಅಪೀಲು ಅಧಿಕಾರಿಗಳ ತೀರ್ಮಾನದ ವಿರುದ್ದ ಕಂದಾಯ ಕಡಿಮೆ ಮಾಡಿಕೊಡಲು ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:06-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮನವಿದಾರರು ತಮ್ಮ ಹೇಳಿಕೆಯನ್ನು ನೀಡಿ ಈ ಹಿಂದೆ ಕಡಿಮೆ ಇದ್ದ ಕಂದಾಯವನ್ನು ವಿಪರೀತವಾಗಿ ಹೆಚ್ಚಿಸಿದ್ದು ಈ ಬಗ್ಗೆ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯವನ್ನು ಕಡಿಮೆ ಮಾಡಿದ್ದು ತಮಗೆ ಸಮಾದಾನವಿಲ್ಲದಿದ್ದು, ಮಾನವೀಯತೆ ದೃಷ್ಠಿಯಿಂದ ಕಡಿಮೆ ಮಾಡಲು ಕೋರಿರುತ್ತರೆ. ಈ ಆಸ್ತಿಯಲ್ಲಿ ಬಾಡಿಗೆಗೆ ನೀಡಿರುವುದಾಗಿ ತಿಳಿಸಿರುತ್ತಾರೆ.
ಸಭೆಗೆ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಾಗಿರುವುದಿಲ್ಲ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

07.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/14/2010-11

ಮೆ॥ಕ್ಲಿಯರ್ ಚಾನೆಲ್ ಔಟ್‌ಡೋರ್, ಸಂಸ್ಥೆಯವರಿಗೆ ಬಿ.ಓ.ಟಿ.ಆಧಾರದ ಮೇಲೆ ಗ್ಯಾಂಟ್ರಿಗಳನ್ನು ಅಳವಡಿಸಲು ತಿರಸ್ಕರಿಸಿ ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:28-10-2010ರಂದು ನೀಡಿರುವ ಹಿಂಬರಹದ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಮತ್ತು ಸಂಭಂಧಪಟ್ಟ ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಮುಂದೂಡಿದೆ.

08.ವಿಷಯ:ಸಂಖ್ಯೆ:ಅಸ್ಥಾಸ/(ತೆ)/15/2010-11

ನಂ.70, ವಾರ್ಡ್-51, ಗಂಗಮ್ಮನಗುಡಿ ಬಡಾವಣೆ, ಈ ಸ್ವತ್ತಿನ ಕಂದಾಯವನ್ನು 2006-07ನೇ ಸಾಲಿಗೆ ಅನ್ವಯವಾಗುವಂತೆ ಹಾಲಿ ವಾರ್ಷಿಕ ಮೌಲ್ಯ ರೂ.10800/-(ವಸತಿ)ಗಳಿಂದ ರೂ.52020/-(ವಸತಿಗಳಿಗೆ) ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಸೂಚನಾ ಪತ್ರವನ್ನು ಜಾರಿ ಮಾಡಿದ್ದು, ಸದರಿ ಕಂದಾಯ ಪರಿಷ್ಕರಣೆಯ

-5-

ವಿರುದ್ಧ ಅರ್ಜಿದಾರರಾದ ಶ್ರೀ.ಕೃಷ್ಣ ಮೂರ್ತಿಯವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:10-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರಿಗೆ ನೋಟೀಸ್ ಜಾರಿಯಾಗಿರುವುದಿಲ್ಲದಿರುವುದರಿಂದ ಸಂಭಂಧಪಟ್ಟ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡುವಂತೆ ಆದೇಶಿಸಿ ಮುಂದೂಡಿದೆ.

09.ವಿಷಯ:ಸಂಖ್ಯೆ:ಅಸ್ಥಾಸ/(ತೆ)/16/2010-11

ನಂ.132/1, ವಾರ್ಡ್-143, ವಿ.ವಿ.ಪುರಂ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಕೆಂಪೇಗೌಡನಗರ ಉಪ ವಿಭಾಗದ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳಾದ ಕಂದಾಯ ಅಧಿಕಾರಿ (ದಕ್ಷಿಣ) ವಿಭಾಗರವರು ದಿನಾಂಕ:23-12-2006ರಂದು ವಿಚಾರಣೆ ನಡೆಸಿ ನಿಗಧಿಪಡಿಸಲಾಗಿರುವ ಕಂದಾಯ ವಾರ್ಷಿಕ ಮೌಲ್ಯ ರೂ.1,12,320/-(ವಸತಿಯೇತರ)ಗಳಿಂದ ರೂ.1,02,367/-(ವಸತಿಯೇತರ)ಗಳಿಗೆ ದಿನಾಂಕ:1-4-2006ರಿಂದ ಅನ್ವಯವಾಗುವಂತೆ ಜಾರಿಗೊಳಿಸಿದ್ದು, ಪ್ರಥಮ ಅಪೀಲು ಅಧಿಕಾರಿಗಳ ತೀಮಾನದ ವಿರುದ್ಧ ಖಾತೆದಾರರಾದ ಶ್ರೀಮತಿ.ವೇದರಾಜುರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:20-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿದ್ದು, ಎಸ್.ಎ.ಎಸ್. ಪ್ರಕಾರ ಸರಿಯಾದ ಅಳತೆ ನೀಡಿರುವುದಾಗಿಯೂ ಈ ಸ್ವತ್ತನ್ನು ಬಾಡಿಗೆಗೆ ನೀಡಿದ್ದು, ಇದು ಹಳೆಯ ಕಟ್ಟಡವಾಗಿದ್ದು, ರಿಯಾಯಿತಿ ಸಮಂಜಸವಾಗಿ ನೀಡದೆ ಇದ್ದು, ಆಸ್ತಿ ಅಳತೆಯನ್ನು ತಪ್ಪಾಗಿ ನಮೂದಿಸಿ ಆಸ್ತಿ ತೆರಿಗೆಯನ್ನು ನಿಗಧಿಪಡಿಸಿರುವು ತಪ್ಪಾಗಿರುವುದಾಗಿ ತಿಳಿಸಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಆಸ್ತಿಯ ಮಾಲೀಕರು ದಾಖಲಾತಿಗಳನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

10. ವಿಷಯ:ಸಂಖ್ಯೆ:ಅಸ್ಥಾಸ/(ತೆ)/17/2010-11

ವಿರೇಶ್ ಚಿತ್ರಮಂದಿರ ಮಾಲೀಕರಾದ ಶ್ರೀ.ವೀರಣ್ಣ ಮತ್ತಿ ಶ್ರೀ.ಕೆ.ವಿ.ಚಂದ್ರಶೇಖರ್‌ರವರುಗಳು ಆಸ್ತಿ ಸಂಖ್ಯೆ:1ರಲ್ಲಿನ ವಿರೇಶ್ ಚಿತ್ರಮಂದಿರ ಹಾಗೂ ವಾಣಿಜ್ಯ ಮಳಿಗೆಗಳ ಕಟ್ಟಡದ ಕಂದಾಯದ ಪರಿಷ್ಕರಣೆಯಲ್ಲಿ ಪ್ರಥಮ ಅಪೀಲು ಅಧಿಕಾರಿಗಳು ಅವಕಾಶವನ್ನು ಕೊಡದೆ ಪರಿಸ್ಕರಿಸಿ ಕಂದಾಯವನ್ನು ಕೇವಲ ರೂ.6996/-ಗಳನ್ನು ಕಡಿಮೆ ಮಾಡಿ

ರೂ.5,58,588/-ಗಳಿಗೆ ಬದಲಾಗಿ ರೂ.5,51,592/-ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗಧಿಪಡಿಸಿರುವ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:22-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ತಮ್ಮ ಆಸ್ತಿಯಲ್ಲಿನ ವಿವರವಾದ ಮಾಹಿತಿಯನ್ನು ಎಸ್.ಎ.ಎಸ್. ಪಾರಂನಲ್ಲಿ ನಮೂದಿಸಿರುವುದಾಗಿಯೂ ಈ ಬಗ್ಗೆ ಕೂಲಂಕಷವಾಗಿ ಪರಿಶೀಲಿಸದೆ ಅಂತಿಮ ಆದೇಶ ನೀಡಿರುವು ಸಮಂಜಸವಲ್ಲವೆಂದು ತಿಳಿಸಿರುತ್ತಾರೆ. ರಿಯಾಯಿತಿ ನೀಡುವಲ್ಲಿ ಅಧಿಕಾರಿಗಳು ಪರಿಶೀಲಿಸದೆ ಆದೇಶ ಜಾರಿ ಮಾಡಿರುವುದು ಸರಿಯಿಲ್ಲವೆಂದು ತಿಳಿಸಿರುತ್ತಾರೆ. ಲೆಕ್ಕಾಚಾರ ಮಾಡುವಲ್ಲಿಯು ಸಹ ಕಡತವನ್ನು ಪರಿಶೀಲಿಸದೆ ಇರುವುದನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ. 2006-07ರ ಅವಧಿಯಲ್ಲಿ ಶೇ.20ರಷ್ಟು ಹೆಚ್ಚಿಸಿರುವುದಾಗಿ ಹೇಳಿಕೆ ನೀಡುತ್ತಾರೆ. ಪತ್ರಿಕಾ ಹೇಳಿಕೆ ರೀತ್ಯ ಯಾವುದೇ ವಿಧವಾದ ಆಸ್ತಿಯ ಕಂದಾಯವನ್ನು ಏರಿಕೆ ಮಾಡಿರುವುದು ಕಂಡು ಬರುವುದಿಲ್ಲವಾದ್ದರಿಂದ ಇದು ನಿಯಮ ಬಾಹೀರವೆಂಬುದು ನನ್ನ ಬಾವನೆ ಎಂದು ತಿಳಿಸಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಉಪ ಕಾನೂನು ಅಧಿಕಾರಿಯವರು ಮಾನ್ಯ ಆಯುಕ್ತರ ಆದೇಶದಂತೆ ಸಹ ಕಂದಾಯ ಅಧಿಕಾರಿಯವರು ಕಂದಾಯವನ್ನು ನಿಗಧಿಪಡಿಸಿದ್ದು, ಈ ಆದೇಶದ ಅನ್ವಯ ಮಾಲೀಕರು ಒಪ್ಪಿ ಕಂದಾಯವನ್ನು ಪಾವತಿಸಿರುವುದರಿಂದ ಈ ಪ್ರಕರಣವನ್ನು ಸ್ಥಿರೀಕರಿಸಬಹುದೆಂದು ಅಭಿಪ್ರಾಯಿಸಿರುತ್ತಾರೆ.

<u>ನಿರ್ಣಯ:</u> ಪ್ರಥಮ ಅಪೀಲು ಅಧಿಕಾರಿಗಳು ಪರಿಷ್ಕರಿಸಿರುವ ಕಂದಾಯವನ್ನು ಅರ್ಜಿದಾರರು ಈಗಾಗಲೇ ಪಾವತಿಸಿದ್ದು, ಆಸ್ತಿ ಕಂದಾಯವನ್ನು ಏರಿಕೆ ಮಾಡಿರುವುದು ನಿಯಮ ಬಾಹೀರವೆಂಬುದು ನನ್ನ ಬಾವನೆ ಎಂದು ಮಾತ್ರ ನಿವೇದಿಸಿಕೊಂಡಿರುತ್ತಾರೆ. ಆದರೆ ಕಂದಾಯವನ್ನು ಕಡಿಮೆ ಮಾಡಿಕೊಡುವ ಬಗ್ಗೆ ಸಮಿತಿಯ ಮುಂದೆ ಕೋರಿಕೊಂಡಿರುವುದಿಲ್ಲ. ಆದುದರಿಂದ ಪ್ರಥಮ ಅಪೀಲು ಅಧಿಕಾರಿಗಳು ಪರಿಷ್ಕರಿಸಿರುವ ಕಂದಾಯವನ್ನು ಸಮಿತಿಯು ಒಪ್ಪುವುದೆಂದು ತೀರ್ಮಾನಿಸಲಾಯಿತು.



<u>11.ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2010-11</u>

ಆಸ್ತಿ ಸಂಖ್ಯೆ:1412, 23ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತದ ವಾರ್ಡ್-165ರ ಕಂದಾಯವನ್ನು ಪರಿಷ್ಕರಿಸಿರುವ ವಿರುದ್ಧ ಮಾಲೀಕರಾದ ಶ್ರೀ.ಬಿ.ಎಸ್.ಶ್ರೀನಿವಾಸ್ ಮತ್ತು ಶ್ರೀ.ಮತಿ.ಎಸ್.ವಿಜಯಲಕ್ಷ್ಮಿರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:19-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ಮೊದಲು ನೆಲಮಹಡಿ ಇದ್ದಾಗ ಕಂದಾಯ ಕಡಿಮೆ ಇದ್ದು, ಮೊದಲ ಮಹಡಿ ಕಟ್ಟಿದ ನಂತರ ಕಂದಾಯ ಜಾಸ್ತಿಯಾಗಿರುತ್ತದೆಂದು ತಿಳಿಸಿರುತ್ತಾರೆ. ನೆಲಮಹಡಿ 848 ಚ.ಅಡಿ, ಮೊಲನೇ ಮಹಡಿ 848 ಚ.ಅಡಿ. ಶೆಡ್ 160 ಚ.ಅಡಿ ಒಟ್ಟು 1700ಚ.ಅಡಿಮನೆ ಇರುತ್ತದೆಂದು ತಿಳಿಸಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ನೆಲಮಹಡಿ ಮತ್ತು ಮೊದಲನೇ ಮಹಡಿಯ ಅಳತೆಯನ್ನು ಅರ್ಜಿದಾರರು ನೀಡಿದ ಮೇರೆಗೆ ಕಂದಾಯ ನಿಗಧಿಪಡಿಸಿರುವುದಾಗಿ ಹೇಳಿರುತ್ತಾರೆ. ಪ್ರಥಮ ಅಪೀಲಿನಲ್ಲಿ ಅರ್ಜಿದಾರರು ಗೈರು ಹಾಜರಾಗಿದ್ದ ಕಾರಣ ಹಾಲಿ ನಿಗಧಿಪಡಿಸಿರುವ ಕಂದಾಯವನ್ನು ಸ್ಥಿರೀಕರಿಸುವಂತೆ ಸಹ ಕಂದಾಯಲ ಅಧಿಕಾರಿಯವರು ತಿಳಿಸಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿಯವರು ಸ್ಥಳ ಪರಿಶೀಲಿಸಿ ವರದಿ ನೀಡುವುದೆಂದು ಆದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು.

<u>12.ವಿಷಯ:ಸಂಖ್ಯೆ:ಅಸ್ಥಾಸ/(ತೆ)/19/2010-11</u>

ನಂ.132/3, ವಾರ್ಡ್-143, ವಿ.ವಿ.ಪುರಂ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಕೆಂಪೇಗೌಡನಗರ ಉಪ ವಿಭಾಗದ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳಾದ ಕಂದಾಯ ಅಧಿಕಾರಿ (ದಕ್ಷಿಣ) ವಿಭಾಗರವರು ದಿನಾಂಕ:23-12-2006ರಂದು ವಿಚಾರಣೆ ನಡೆಸಿ ನಿಗಧಿಪಡಿಸಲಾಗಿರುವ ಕಂದಾಯ ವಾರ್ಷಿಕ ಮೌಲ್ಯ ರೂ.1,12,320/-(ವಸತಿಯೇತರ)ಗಳಿಂದ ರೂ.1,10,592/-(ವಸತಿಯೇತರ)ಗಳಿಗೆ ದಿನಾಂಕ:1-4-2006ರಿಂದ ಅನ್ವಯವಾಗುವಂತೆ ಜಾರಿಗೊಳಿಸಿದ್ದು, ಪ್ರಥಮ ಅಪೀಲು ಅಧಿಕಾರಿಗಳ ತೀಮಾನದ ವಿರುದ್ಧ ಖಾತೆದಾರರಾದ ಶ್ರೀ.ವೆಂಕಟೇಶ್‌ರಾಜುರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ರಿಯಾಯಿತಿ ನೀಡುವಲ್ಲಿ ತಪ್ಪಾಗಿರುವುದಾಗಿ ತಿಳಿಸಿ ಕೇವಲ ರಿಯಾಯಿತಿಯನ್ನು ಮಾತ್ರ ಸಮಂಜಸವಾಗಿ ನೀಡಿದರೆ ಸರಿ ಎಂದು ತಿಳಿಸಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

13.ವಿಷಯ:ಸಂಖ್ಯೆ:ಅಸ್ಥಾಸ/(ಖಾತೆ)/20/2010-11

ನಂ.71, 5ನೇ ಮುಖ್ಯರಸ್ತೆ, ಜಯನಗರ ಹೆಚ್.ಬಿ.ಸಿ.ಎಸ್. ಪದ್ಮನಾಭನಗರ ಈ ಸ್ವತ್ತಿನ ಖಾತೆಯನ್ನು ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಶ್ರೀ.ಸಂತೋಷ ಎಂಬುವವರ ಹೆಸರಿಗೆ ವರ್ಗಾಯಿಸಿದ್ದು, ಸದರಿ ಸ್ವತ್ತಿನಲ್ಲಿ ನಾವೇ ವಾಸವಾಗಿರುವುದರಿಂದ ಬೇರೆಯವರ ಹೆಸರಿಗೆ ಆಗಿರುವ ಖಾತಾವನ್ನು ರದ್ದು ಪಡಿಸಿ ತಮ್ಮ ಹೆಸರಿಗೆ ವರ್ಗಾಯಿಸಕೊಡುವಂತೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ಆಸ್ತಿಯ ಮಾಲೀಕರಿಗೆ 3 ಜನ ಮಕ್ಕಳಿಗೆ ವಿಲ್ ಮಾಡಿದ್ದು ಈ ಪೈಕಿ ಶ್ರೀ.ಸಂತೋಷ್‌ರವರು ಇಬ್ಬರು ಮಕ್ಕಳಿಗೆ ತಿಳಿಸದೆ ಅವರ ಹೆಸರಿಗೆ ಖಾತೆ ಮಾಡಿಕೊಂಡಿದ್ದು, 2ನೇ ವಿಲ್‌ನಲ್ಲಿ ಮೊದಲನೆ ವಿಲ್‌ನ ಬದಲಿಗೆ ಶ್ರೀ.ಅಶ್ವತ್ಥನಾರಾಯಣರಾವ್‌ರವರ ಹೆಸರಿಗೆ ಪೂರ್ತಿ ಖಾತೆಯನ್ನು ವರ್ಗಾಯಿಸಲು ಕೋರಿರುತ್ತಾರೆ.

ಸಂಬಂಧಪಟ್ಟ ಸಹ ಕಂದಾಯ ಅಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ಆಸ್ತಿಯ ಮಾಲೀಕರಾದ ಶ್ರೀ.ರಾಮಸ್ವಾಮಿಯವರ ಮಕ್ಕಳು ನೀಡಿದ ಎನ್.ಓ.ಸಿ. ಆಧಾರದ ಮೇಲೆ ಖಾತೆ ವರ್ಗಾಯಿಸಿರುವುದಾಗಿ ತಿಳಿಸಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲ ಇದ್ದು ಮೃತ ತಂದೆಯ ಮರಣ ಸಮರ್ಥನಾ ಪತ್ರದ ಆಧಾರ, ನ್ಯಾಯಾಲಯದ ತೀರ್ಮಾನದ ರೀತ್ಯ ಖಾತೆ ರದ್ದು ಪಡಿಸುವ ಷರತ್ತುಗೊಳಪಡಿಸಿ ಖಾತೆ ವರ್ಗಾಹಿಸಿರುವುದಾಗಿ ತಿಳಿಸಿರುತ್ತಾರೆ.



ಪ್ರಕರವು ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ತಿಳಿದು ಬಂದಿರುತ್ತದೆ. ಉಪ ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ಖಾತೆ ಕುರಿತಂತೆ ನ್ಯಾಯಾಲಯವು ಅಂತಿಮವಾಗಿ ತೀರ್ಪು ನೀಡಿದ ನಂತರ ಮುಂದಿನ ಕ್ರಮ ವಹಿಸಬಹುದೆಂದು ತಿಳಿಸಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

14. ವಿಷಯ:ಸಂಖ್ಯೆ:ಅಸ್ಥಾಸ/(ಕಾಮಗಾರಿ)/21/2010-11

ನಂ.27, ಹೊಸ ನಂ.14, 1ನೇ ಮುಖ್ಯರಸ್ತೆ, ದ್ವಾರಕನಗರ, ಸ್ಕೈಲೈನ್ ಅಪಾರ್ಟ್‌ಮೆಂಟ್, ಚಂದ್ರಾಲೇಔಟ್, ಬೆಂಗಳೂರು ಈ ಸ್ವತ್ತಿನಲ್ಲಿ ಮಂಜೂರಾದ ನಕ್ಷೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ಶ್ರೀ.ಪ್ರದೀಪ್ ಎಸ್.ವಡೆಯರ್ ರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರವಾಗಿ ವಕೀಲರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿದ್ದು, ಪ್ರತಿವಾದಿಗಳು ಸಹ ಈ ಸಂದರ್ಭದಲ್ಲಿ ತಮ್ಮ ಹೇಳಿಕೆಯನ್ನು ಸಹ ನೀಡಿರುತ್ತಾರೆ. ನಿಯಮಗಳನುಸಾರ ಪ್ರತಿವಾದಿಯು ನಿಯಬಾಹಿರವಾಗಿ ಕಟ್ಟಡ ನಿರ್ಮಿಸುತ್ತಿದ್ದು, ಇದು ತಪ್ಪು ಎಂದು ವಾದಿಸಿರುತ್ತಾರೆ.

ಪ್ರತಿ ವಾದಿಯು ತಮ್ಮ ಹೇಳಿಕೆಯಲ್ಲಿ ಪಕ್ಕದಮನೆಯವರು ಸರಿಯಾಗಿ ನಿರ್ಮಾಣ ಮಾಡಿದ್ದಲ್ಲಿ ನನ್ನ ನಿರ್ಮಾಣದ ಬಗ್ಗೆ ವಾದ ಮಾಡಲಿ ಎಂದು ತಿಳಿಸಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

15.ವಿಷಯ:ಸಂಖ್ಯೆ:ಅಸ್ಥಾಸ/(ಕಾಮಗಾರಿ)/22/2010-11

ನಂ.495, 4ನೇ ಸೆಕ್ಟರ್, ಹೆಚ್.ಎಸ್.ಆರ್.ಲೇಔಟ್, 15ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಇಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ರಸ್ತೆ ಕಡಿತವನ್ನು ತಿರಸ್ಕರಿಸಿರುವ ಬಗ್ಗೆ ಶ್ರೀ. ಶ್ರೀ.ಮೊಹಮ್ಮದ್ ಜಿಯಾ ಉಲ್ಲಾರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲರು ತಮ್ಮ ಹೇಳಿಕೆಯಲ್ಲಿ ಮನೆ ಈಗಾಗಲೇ ನಿರ್ಮಿಸಿದ್ದು ಈ ಆಸ್ತಿಯಲ್ಲಿನ ಮನೆಗೆ ರಸ್ತೆ ಕಡಿತಕ್ಕೆ ಅನುಮತಿ ಕುರಿತಂತೆ ಅಧಿಕಾರಿಗಳು ಅನುಮತಿ ನೀಡದೆ ಇರುವ ಮೇರೆಗೆ ಅನುಮತಿ ನೀಡಲು ಕೋರಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಹೇಳಿಕೆಯಲ್ಲಿ ಕಟ್ಟಡದ ನಿರ್ಮಾಣ ಕುರಿತಂತೆ ಆಕ್ಷೇಪಣೆ ಇರುವುದರಿಂದ ಅನುಮತಿ ನೀಡಲು ಅವಕಾಶವಿಲ್ಲವೆಂದು ತಿಳಿಸಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಹೇಳಿಕೆಯಲ್ಲಿ ಕಟ್ಟಡದ ನಿರ್ಮಾಣ ಕುರಿತಂತೆ ಆಕ್ಷೇಪಣೆ ಇರುವುದರಿಂದ ಎಂದು ಮಾತ್ರ ತಿಳಿಸಿದ್ದು, ವಿವರವಾದ ಟಿಪ್ಪಣಿಯೊಂದಿಗೆ ಕಡತವನ್ನು ಸಮಿತಿಯ ಮುಂದೆ ಮಂಡಿಸಲ್ಲದಿರುವುದನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿರುತ್ತದೆ. ವಕೀಲರ ವಾದವನ್ನು ಆಲಿಸಿದ ಸಮಿತಿಯು ಸಭೆಯಲ್ಲಿ ಹಾಜರಿದ್ದ ಉಪ ಕಾನೂನು ಅಧಿಕಾರಿಗಳನ್ನು ಯಾವ ಕಾಯ್ದೆಯಡಿ ರಸ್ತೆ ಕಡಿತಕ್ಕೆ ಅನುಮತಿ ನಿರಾಕರಿಸಲಾಗಿರುತ್ತದೆಂಬ ಬಗ್ಗೆ ಕೇಳಲಾಗಿ ಯಾವುದೆ ಕಾಯ್ದೆಯನ್ನು ಉಲ್ಲೇಖಿಸಿರುವುದಿಲ್ಲ.

**<u>ನಿರ್ಣಯ:-</u>** ಸಮಿತಿಯು ವಕೀಲರ ಹಾಗೂ ಸಂಬಂಧಪಟ್ಟ ಅಧಿಕಾರಿಗಳ ವಾದಗಳನ್ನು ಆಲಿಸಿದ ನಂತರ ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳು ಅತಿ ಅವಶ್ಯಕವಾಗಿದ್ದು ಅಪೀಲುದಾರರು ನಿವೇಶನ ನಂ.495, 4ನೇ ಸೆಕ್ಟರ್, ಹೆಚ್.ಎಸ್.ಆರ್. ಲೇಔಟ್, 15ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಇಲ್ಲಿ ನಿರ್ಮಿಸಿರುವ ವಸತಿ ಕಟ್ಟಡಕ್ಕೆ ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಈ ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.



<u>16. ವಿಷಯ:ಸಂಖ್ಯೆ:ಅಸ್ಥಾಸ/(ಕಾಮಗಾರಿ)/23/2010-11</u>

ನಂ.95, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560 004 ಇಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ರಸ್ತೆ ಕಡಿತವನ್ನು ತಿರಸ್ಕರಿಸಿರುವ ಬಗ್ಗೆ ಶ್ರೀಮತಿ.ಎ.ಆರ್.ಸುಧಾಮಣಿ, ರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಮತ್ತು ಸಂಭಂಧಪಟ್ಟ ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

<u>17.ವಿಷಯ:ಸಂಖ್ಯೆ:ಅಸ್ಥಾಸ/(ಕಾಮಗಾರಿ)/24/2010-11</u>

ನಂ.08, ಲೂಯಿಸ್ ರಸ್ತೆ, ಕುಕ್ ಟೌನ್, ಬೆಂಗಳೂರು ಈ ಸ್ವತ್ತಿನ ಮಾಲೀಕರು ಕೆ.ಎಂ.ಸಿ.ಕಾಯ್ದೆ 1976ರ ಕಲಂ 321(1)ರ ಪ್ರಕಾರ ಹೊರಡಿಸಿರುವ ತಾತ್ಕಾಲಿಕ ಆದೇಶದ ವಿರುದ್ಧ ಸ್ವತ್ತಿನ ಮಾಲೀಕರಾದ ಶ್ರೀಮತಿ.ಎನ್.ಪ್ರಮೀಳ ಮತ್ತು ಶ್ರೀ.ಸಿ.ಎಸ್.ಜನಾರ್ಧನರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ವಕೀಲರು ತಮ್ಮ ಹೇಳಿಕೆಯಲ್ಲಿ ಅಧಿಕಾರಿಗಳು ಪಕ್ಕದಮನೆಯವರು ನೀಡುವ ದೂರಿನ ಅನ್ವಯ ಸ್ಥಳ ಪರಿಶೀಲಿಸುತ್ತಿದ್ದು ಈ ಸಂದರ್ಭದಲ್ಲಿ ಆಸ್ತಿಯ ಮಾಲೀಕರಿಗೆ ತಿಳುವಳಿಕೆ ನೀಡದೆ ಕ್ರಮ ಜರುಗಿಸುವುದು ಸಮಂಜಸವಲ್ಲವೆಂದು ತಿಳಿಸಿ ನಿಯಮಗಳ ವಿರುದ್ಧ ನೀಡುವ ನೋಟೀಸ್ ಸಮಂಜಸವಲ್ಲವೆಂದು ತಮಗೆ ತಾತ್ಕಾಲಿಕವಾಗಿ ತಡೆಯಾಜ್ಞೆ ನೀಡಬೇಕೆಂದು ಹಾಗೂ ತಮ್ಮ ಪಕ್ಕದ ಮನೆಯವರು ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದು, ಅವರ ಮೇಲೆ ಕ್ರಮ ಜರುಗಿಸಲು ಸಹ ಕೋರಿರುತ್ತಾರೆ.

ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಹೇಳಿಕೆಯಲ್ಲಿ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಈ ಮೇರೆಗೆ ಕ್ರಮ ಕೈಗೊಂಡಿದ್ದು, ನೋಟೀಸ್ ನೀಡುವಲ್ಲಿ ಲೋಪವುಂಟಾಗಿದ್ದು ಇನ್ನು ಮುಂದೆ ಈ ರೀತಿ ಅವಕಾಶ ನೀಡುವುದಿಲ್ಲವೆಂದು ತಿಳಿಸಿರುತ್ತಾರೆ.

ಉಪ ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾದಲ್ಲಿ ಅರ್ಜಿದಾರರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಲು ತಿಳಿಸಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

18. ವಿಷಯ:ಸಂಖ್ಯೆ:ಅಸ್ಥಾಸ/(ಆ)/25/2010-11

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:111-ಶಾಂತಲ ನಗರ (ಹಳೇ ಸಂಖ್ಯೆ:79) ರೆಸಿಡೆನ್ಸಿ ರಸ್ತೆ, ಪೂರ್ವ ವಲಯದ, ಮೇಯೋಹಾಲ್ ಕಟ್ಟಡಕ್ಕೆ ಸೇರಿದ ಆವರಣದೊಳಗಿನ ಒಂದು ಬಾಗದಲ್ಲಿ ಎ.ಸಿ.ಶೀಟ್‌ವುಳ್ಳ 15.6 62.9 ಅಡಿ ಅಳತೆಯ ಕಟ್ಟಡವನ್ನು ಪ್ರಾರಂಭಿಕವಾಗಿ 12 ತಿಂಗಳ ಅವಧಿಗೆ ರೂ.1000/-ಗಳ ಮಾಸಿಕ ಗುತ್ತಿಗೆ ಹಣದ ಆಧಾರ ಉಪಹಾರ ಗೃಹ ನಡೆಸಲು ಶ್ರೀ.ಬಿ.ಸಿ.ಕೃಷ್ಣ ಎಂಬುವವರಿಗೆ ಗುತ್ತಿಗೆಗೆ ನೀಡಿದ್ದು, ತದನಂತರ ಗುತ್ತಿಗೆ ಅವಧಿಯು ದಿನಾಂಕ:22-09-2099ರಂದು ಮುಗಿದಿರುವ ಕಾರಣ ಸ್ವತ್ತನ್ನು ನಗರ ಪಾಲಿಕೆ ವಶಕ್ಕೆ ನೀಡಲು ಗುತ್ತಿಗೆದಾರರಿಗೆ 1974ರ ಕೆ.ಪಿ.ಪಿ. ಕಾಯ್ದೆ ಅಡಿಯಲ್ಲಿ ಕಲಂ 4(1)ರ ನೋಟೀಸ್‌ನ್ನು ದಿನಾಂಕ:06-08-2010ರಂದು ಮತ್ತು ಕಲಂ 5(1)ರ ನೋಟೀಸ್‌ನ್ನು 22-09-2010ರಂದು ಜಾರಿ ಮಾಡಲಾಗಿದೆ. ಸದರಿ ನೋಟೀಸ್‌ನ ವಿರುದ್ಧ ಗುತ್ತಿಗೆದಾರರು ನ್ಯಾಯಾಲಯದಲ್ಲಿ ಎಂ.ಎ.ನಂ.36/2010ನ್ನು ಹೂಡಿ ಯತಾಸ್ಥಿತಿ ಆದೇಶವನ್ನು ಮುಂದುವರೆಸಲು ನ್ಯಾಯಾಲಯವು ಆದೇಶಿಸಿದ್ದರೂ ಸಹ ಗುತ್ತಿಗೆ ಹಣವನ್ನು ಏಕಾಏಕಿ ರೂ.18,000/-ಗಳಿಂದ ರೂ.55,118/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿ, ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೂ ಸಹ ಕ್ಯಾಂಟೀನ್ ಬಾಗಿಲನ್ನು ಮುಚ್ಚಿಸಿರುವ ವಿರುದ್ಧ ಶ್ರೀ.ಬಿ.ಸಿ.ಕೃಷ್ಣರವರು ಸಲ್ಲಿಸಿರುವ ಮೇಲ್ಮನವಿ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-02-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದ ತಮ್ಮ ಹೇಳಿಕೆಯಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಬಾಡಿಗೆಯನ್ನು ಹೆಚ್ಚಿಸಿದ್ದು, ಶುಚಿತ್ವ ಕೊರತೆ ಎಂದು ಮುಚ್ಚಿರುವುದಾಗಿ ತಿಳಿಸಿರುತ್ತಾರೆ.

ಉಪ ಆಯುಕ್ತರು (ಆಸ್ತಿಗಳು) ಈ ಆಸ್ತಿಗೆ ಕೆ.ಪಿ.ಪಿ. ಪ್ರಕಾರ ತೆರವುಗೊಳಿಸಿರುವುದಾಗಿ ತಿಳಿಸಿ ಪಾಲಿಕೆಯ ನಿರ್ಣಯದ ಆಧಾರ ಬಾಡಿಗೆ ಹೆಚ್ಚಿಸಿದ್ದು, ಸಕ್ಷಮ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಲು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಅರ್ಜಿದಾರರು ಗುತ್ತಿಗೆ ಕುರಿತಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದಾಗಿ ತಿಳಿದು ಬಂದಿರುತ್ತದೆ.

ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ನಾವು ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು ಸರ್ಕಾರವು ಪಾಲಿಕೆಯ ಆದೇಶವನ್ನು ರದ್ದು ಪಡಿಸಿದ್ದು, ಮನವಿ ಪರಿಗಣಿಸಲು ಕೋರಿರುತ್ತಾರೆ.

ಸಂಬಂಧಪಟ್ಟ ಸಹ ಕಂದಾಯ ಅಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ಸರ್ಕಾರ ಈ ಹಿಂದೆ ನಿಗಧಿಪಡಿಸದ್ದ ಬಾಡಿಗೆಗೆ ಮಾತ್ರ ಆದೇಶ ನೀಡಿದ್ದು, ಇತ್ತೀಚೆಗೆ ನಿಗಧಿಪಡಿಸಿರುವ ಬಾಡಿಗೆ ಮೌಲ್ಯಕೆ ಆದೇಶವಾಗಿರುವುದಿಲ್ಲ. ಕಡತದಲ್ಲಿ ಇತ್ತೀಚಿನ ನ್ಯಾಯಾಲಯದ ಆದೇಶವಿರುವುದಿಲ್ಲ.

ಉಪ ಆಯುಕ್ತರು (ಆಸ್ತಿಗಳು)ರವರು ನ್ಯಾಯಾಲಯದ ಆದೇಶದ ವಿರುದ್ಧವಾಗಿ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

" ನಿರ್ಣಕ್ಕಾಗಿ ಕಾಯ್ದಿರಿಸಿದೆ"

19.ವಿಷಯ:ಸಂಖ್ಯೆ:ಅಸ್ಥಾಸ/(ಆ)/26/2010-11

ಮಾಲೀಕರು, ಮೆ|| ಅವಿನಾಶಿ ಆಡ್ಸ್, ಔಟ್‌ಡೋರ್‌ಅಡ್ವರ್‌ಟೈಸಿಂಗ್, ತುಳಸಿ ಹೌಸ್, ನಂ.26, ಎಸ್.ಎಫ್.ಹೆಚ್.ಎಸ್. ಏರಿಯಾ, ನಂದಿನಿ ಲೇಔಟ್, ಬೆಂಗಳೂರು-96 ಇವರು ದಿನಾಂಕ:18-01-2011ರಂದು ಸಮಿತಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಕಡತ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ವಕೀಲರು ಹಾಜರಿರುತ್ತಾರೆ ಆದರೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ. ವಕೀಲರ ಹೇಳಿಕೆಯಲ್ಲಿ ಇದು ರೈಲ್ವೆ ಆಸ್ತಿಯಲ್ಲಿದ್ದು ಕಂದಾಯ ಅಧಿಕಾರಿಗಳ ವರದಿಯ ರೀತ್ಯ ಅಳತೆಯು ಸರಿಯಿಲ್ಲವೆಂದು 56 ಬೋರ್ಡ್‌ಗಳ ಬದಲು 61 ಬೋರ್ಡುಗಳು ಇರುವುದಾಗಿ ಹಿಂದಿನ ಅವಧಿಯಿಂದ ತೆರಗೆ ನಿಗಧಿಪಡಿಸಿರುವುದಾಗಿ ತಿಳಿಸಿದ್ದು, ತಾವು ಬೋರ್ಡ್‌ಗಳನ್ನು ನಿಗಧಿಪಡಿಸಿದ್ದ ಅವಧಿಗೆ ಮಾತ್ರ ಕಂದಾಯವನ್ನು ನಿಗಧಿಪಡಿಸಬೇಕೆಂದು ಕೋರಿರುತ್ತಾರೆ.

ಅಧಿಕಾರಿಗಳು ನಿಗಧಿಪಡಿಸಿರುವ ಕಂದಾಯವು ಜಾಸ್ತಿಯಾಗಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ತಾವು ಫಲಕಗಳನ್ನು ಅಳವಡಿಸಿದ ದಿನಾಂಕಗಳನ್ನು ದಾಖಲೆ ಮೂಲಕ ನೀಡಿದ್ದರೂ ಸಹ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸದೆ ಹಿಂದಿನ ದಿನಾಂಕಗಳಲ್ಲೇ ನಿಗಧಿಪಡಿಸಿ ಡಿಮ್ಯಾಂಡ್ ನೋಟೀಸ್‌ನ್ನು ಸುಮಾರು 1 ವರ್ಷಗಳ ನಂತರ ನೀಡಿರುವುದು ಸಹ ತಪ್ಪೆಂದು ತಿಳಿಸಿರುತ್ತಾರೆ. ನಾನು ಬೋರ್ಡ್‌ಗಳನ್ನು ಅಳವಡಿಸಿದ ದಿನಾಂಕದಿಂದ ಮಾತ್ರ ನನಗೆ ತೆರಿಗೆ ವಿಧಿಸಬೇಕೆಂದು ಕೋರಿರುತ್ತಾರೆ. ನಾನು ಆಯಾ ವರ್ಷ ವರ್ಷಗಳಲ್ಲಿ ಫಲಕಗಳನ್ನು ಅಳವಡಿಸುತ್ತಿದ್ದು ಈ ಸಂಬಂಧ ಅಧಿಕಾರಿಗಳಿಗೆ ಲಿಖಿತ ಮೂಲಕ ಹೇಳಿಕೆ ನೀಡುತ್ತಿದ್ದು ಅಧಿಕಾರಿಗಳು ಗಮನ ಹರಿಸಿಲ್ಲವೆಂದು ತಿಳಿಸಿರುತ್ತಾರೆ.

" ಸಂಬಂಧಪಟ್ಟ ಅಧಿಕಾರಿಗಳು ಹಾಜರಿಲ್ಲದ ಪ್ರಯುಕ್ತ ನಿರ್ಣಯಕ್ಕಾಗಿ ಕಾಯ್ದಿರಿಸಿದೆ"

ಸಹಿ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:26-02-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಸಹಾಯಕ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಸಹಾಯಕ ಆಯುಕ್ತರು (ಜಾಹೀರಾತು) |
| 05 | ಡಾ॥ಎಸ್.ರಾಜು | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಮಲ್ಲೇಶ್ವರಂ) ವಲಯ |
| 06 | ರಮೇಶ್ ರಾಜು ಕೆ. | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಬಸವನಗುಡಿ) |
| 07 | ಮುನಿರತ್ನಮ್ಮ | ಸದಸ್ಯರು | ಕಿರಿಯ ಅಭಿಯಂತರರು ವಾರ್ಡ್-142 |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

01.ವಿಷಯ:ಸಂಖ್ಯೆ:ಅಸ್ಥಾಸ/(ಅ)/12/2010-11

ಶ್ರೀ.ಎ.ಎಸ್.ಕಾಮತ್, ವ್ಯವಸ್ಥಾಪಕ ನಿರ್ದೇಶಕರು, ಬಸವನಗುಡಿ ವಲಯ ವಾರ್ಡ್-154, ನಂ.1, 5ನೇ ಮೈನ್, ಬಸವನಗುಡಿ ರಸ್ತೆ, ಎನ್.ಆರ್.ಕಾಲೋನಿ ಬೆಂಗಳೂರು-19 ಇಲ್ಲಿ ಕಾಮತ್ ಬ್ಯೂಗಲ್ ರಾಕ್ ಹೋಟೆಲ್ ರೆಸ್ಟೋರೆಂಟ್ ಮತ್ತು 25 ಅಶ್ವಶಕ್ತಿ ಪರವಾನಗಿಯನ್ನು 2010-11ನೇ ಸಾಲಿಗೆ ನವೀಕರಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ಬಸವನಗುಡಿ)ವಲಯರುವರು ದಿನಾಂಕ:22-02-2010ರಂದು ತಡೆ ಹಿಡಿದಿರುವ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಆಕ್ಷೇಪಣೆದಾರರು ಲಿಖಿತ ಮೂಲಕ ಹೇಳಿಕೆ ನೀಡಿರುತ್ತಾರೆ. ಇತರೆ ಪ್ರಕರಣಗಳಲ್ಲಿನ ಮಾಹಿತಿ ಕುರಿತಂತೆ ಉಲ್ಲೇಖಿಸಿರುತ್ತಾರೆ. ಹಾಲಿ ಪ್ರಕರಣವು ಲೋಕಾಯುಕ್ತದಲ್ಲಿ ಬಾಕಿ ಇರುವುದಾಗಿ ಪ್ರತಿವಾದಿಗಳು ತಿಳಿಸಿರುತ್ತಾರೆ. ಅಪೀಲುದಾರರು ತಮ್ಮ ಪ್ರತಿವಾದಿಗಳ ಲಿಖಿತ ಹೇಳಿಕೆಯ ಪ್ರತಿಯನ್ನು ಕೋರಿರುತ್ತಾರೆ. ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳು ಸಿ.ಡಿ.ಪಿ. ಪ್ರಕಾರ ಮಂಜೂರಾತಿ ನೀಡಿರುವುದಾಗಿ ತಿಳಿಸಿರುತ್ತಾರೆ.

" ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ"

02.ವಿಷಯ:ಸಂಖ್ಯೆ:ಅಸ್ಥಾಸ/(ತೆ)/15/2010-11

ನಂ.70, ವಾರ್ಡ್-51, ಗಂಗಮ್ಮನಗುಡಿ ಬಡಾವಣೆ, ಈ ಸ್ವತ್ತಿನ ಕಂದಾಯವನ್ನು 2006-07ನೇ ಸಾಲಿಗೆ ಅನ್ವಯವಾಗುವಂತೆ ಹಾಲಿ ವಾರ್ಷಿಕ ಮೌಲ್ಯ ರೂ.10800/-(ವಸತಿ)ಗಳಿಂದ ರೂ.52020/-(ವಸತಿಗಳಿಗೆ) ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಸೂಚನಾ ಪತ್ರವನ್ನು ಜಾರಿ ಮಾಡಿದ್ದು, ಸದರಿ ಕಂದಾಯ ಪರಿಷ್ಕರಣೆಯ ವಿರುದ್ಧ ಅರ್ಜಿದಾರರಾದ ಶ್ರೀ.ಕೃಷ್ಣ ಮೂರ್ತಿಯವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:10-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರಿಗೆ ನೋಟೀಸ್ ಜಾರಿಯಾಗಿರುವುದಿಲ್ಲದಿರುವುದರಿಂದ ಸಂಭಂಧಪಟ್ಟ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡುವಂತೆ ಆದೇಶಿಸಿ ಮುಂದೂಡಿದೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

03.ವಿಷಯ:ಸಂಖ್ಯೆ:ಅಸ್ಥಾಸ/(ಖಾತೆ)/20/2010-11

ನಂ.71, 5ನೇ ಮುಖ್ಯರಸ್ತೆ, ಜಯನಗರ ಹೆಚ್.ಬಿ.ಸಿ.ಎಸ್. ಪದ್ಮನಾಭನಗರ ಈ ಸ್ವತ್ತಿನ ಖಾತೆಯನ್ನು ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಶ್ರೀ.ಸಂತೋಷ ಎಂಬುವವರ ಹೆಸರಿಗೆ ವರ್ಗಾಯಿಸಿದ್ದು, ಸದರಿ ಸ್ವತ್ತಿನಲ್ಲಿ ನಾವೇ ವಾಸವಾಗಿರುವುದರಿಂದ ಬೇರೆಯವರ ಹೆಸರಿಗೆ ಆಗಿರುವ ಖಾತಾವನ್ನು ರದ್ದು ಪಡಿಸಿ ತಮ್ಮ ಹೆಸರಿಗೆ ವರ್ಗಾಯಿಸಕೊಡುವಂತೆ



ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ಆಸ್ತಿಯ ಮಾಲೀಕರಿಗೆ 3 ಜನ ಮಕ್ಕಳಿಗೆ ವಿಲ್ ಮಾಡಿದ್ದು ಈ ಪೈಕಿ ಶ್ರೀ.ಸಂತೋಷ್‌ರವರು ಇಬ್ಬರು ಮಕ್ಕಳಿಗೆ ತಿಳಿಸದೆ ಅವರ ಹೆಸರಿಗೆ ಖಾತೆ ಮಾಡಿಕೊಂಡಿದ್ದು, 2ನೇ ವಿಲ್‌ನಲ್ಲಿ ಮೊದಲನೆ ವಿಲ್‌ನ ಬದಲಿಗೆ ಶ್ರೀ.ಅಶ್ವತ್ಥನಾರಾಯಣರಾವ್‌ರವರ ಹೆಸರಿಗೆ ಪೂರ್ತಿ ಖಾತೆಯನ್ನು ವರ್ಗಾಯಿಸಲು ಕೋರಿರುತ್ತಾರೆ.

ಸಂಬಂಧಪಟ್ಟ ಸಹ ಕಂದಾಯ ಅಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ಆಸ್ತಿಯ ಮಾಲೀಕರಾದ ಶ್ರೀ.ರಾಮಸ್ವಾಮಿಯವರ ಮಕ್ಕಳು ನೀಡಿದ ಎನ್.ಓ.ಸಿ. ಆಧಾರದ ಮೇಲೆ ಖಾತೆ ವರ್ಗಾಯಿಸಿರುವುದಾಗಿ ತಿಳಿಸಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲ ಇದ್ದು ಮೃತ ತಂದೆಯ ಮರಣ ಸಮರ್ಥನಾ ಪತ್ರದ ಆಧಾರ, ನ್ಯಾಯಾಲಯದ ತೀರ್ಮಾನದ ರೀತ್ಯ ಖಾತೆ ರದ್ದು ಪಡಿಸುವ ಷರತ್ತುಗೊಳಪಡಿಸಿ ಖಾತೆ ವರ್ಗಾಹಿಸಿರುವುದಾಗಿ ತಿಳಿಸಿರುತ್ತಾರೆ.

ಪ್ರಕರವು ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ತಿಳಿದು ಬಂದಿರುತ್ತದೆ. ಉಪ ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ಖಾತೆ ಕುರಿತಂತೆ ನ್ಯಾಯಾಲಯವು ಅಂತಿಮವಾಗಿ ತೀರ್ಮ ನೀಡಿದ ನಂತರ ಮುಂದಿನ ಕ್ರಮ ವಹಿಸಬಹುದೆಂದು ತಿಳಿಸಿರುತ್ತಾರೆ.

"ಈ ಪ್ರಕರಣದಲ್ಲಿ ನ್ಯಾಯಾಲಯದಲ್ಲಿ ದಾವೆ ಇದ್ದಲ್ಲಿ ಪ್ರತಿಯೊಂದಿಗೆ ಮಂಡಿಸಲು<br>ಅಂತಿಮವಾಗಿ ವಿಚಾರಣೆ ದಿನಾಂಕವನ್ನು ನಿಗಧಿಪಡಿಸಲು ಮುಂದೂಡಿದೆ"

04. ವಿಷಯ:ಸಂಖ್ಯೆ:ಅಸ್ಥಾಸ/(ಕಾಮಗಾರಿ)/23/2010-11

ನಂ.95, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560 004 ಇಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ರಸ್ತೆ ಕಡಿತವನ್ನು ತಿರಸ್ಕರಿಸಿರುವ ಬಗ್ಗೆ ಶ್ರೀಮತಿ.ಎ.ಆರ್.ಸುಧಾಮಣಿ, ರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಮತ್ತು ಸಂಭಂಧಪಟ್ಟ ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

ಪ್ರಕರಣವನ್ನು ಕರೆಯಲಾಯಿತು ಅರ್ಜಿದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದರು. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರವರು ಈ ಆಸ್ತಿಗೆ ಪಿ.ಓ. ಸಿ.ಓ. ನೀಡಿದ್ದು, ನ್ಯಾಯಾಲಯದಲ್ಲಿ ಮಾಲೀಕರು ದಾವೆ ಹೂಡಿದ್ದು ತಡೆ ಆಜ್ಞೆ ಇದ್ದು ನಿಯಮಗಳ ಪ್ರಕಾರ ರೋಡ್ ಕಂಟಿಂಗ್ ನೀಡಲು ಅವಕಾಶವಿಲ್ಲವೆಂದು ತಿಳಿಸಿರುತ್ತಾರೆ.

ಕಾನೂನು ಸಲಹೆಗಾರರು ಎಫ್‌ಎಆರ್ ರೀತ್ಯ ಮಾಡಿಫೈಡ್ ಪ್ಲಾನ್ ನೀಡಲು ಕ್ರಮ ತೆಗೆದುಕೊಳ್ಳಬಹುದೆಂದು ತಿಳಿಸಿರುತ್ತಾರೆ.

**<u>ನಿರ್ಣಯ:</u>**- ಸಂಬಂಧಪಟ್ಟ ಅಧಿಕಾರಿಗಳ ವಾದಗಳನ್ನು ಆಲಿಸಿದ ನಂತರ ಯಾವ ನಿಯಮಗಳ ಪ್ರಕಾರ ರೋಡ್ ಕಂಟಿಂಗ್ ನೀಡಲು ಅವಕಾಶವಿಲ್ಲವೆಂದು ಕೇಳಿದಾಗ ಅವರಲ್ಲಿ ಉತ್ತರವಿರುವುದಿಲ್ಲ. ಸದರಿ ಪ್ರಕರಣದಲ್ಲಿ ನ್ಯಾಯಾಲಯದಲ್ಲಿರುವ ದಾವೆಯಲ್ಲಿ ನ್ಯಾಯಾಲಯವು ನೀಡುವ ಅಂತಿಮ ತೀರ್ಮಾನಕ್ಕೆ ಒಳಪಡಿಸಿ ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳು ಅತಿ ಅವಶ್ಯಕವಾಗಿರುವುದರಿಂದ ಅಪೀಲುದಾರರು ನಂ.95, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560 004 ಈ ಸ್ವತ್ತಿನಲ್ಲಿ ನಿರ್ಮಿಸಿರುವ ವಸತಿ ಕಟ್ಟಡಕ್ಕೆ ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಈ ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>05. ವಿಷಯ:ಸಂಖ್ಯೆ:ಅಸ್ಥಾಸ(ಆ)/25/2010-11</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್ ಸಂಖ್ಯೆ:111-ಶಾಂತಲ ನಗರ (ಹಳೇ ಸಂಖ್ಯೆ:79) ರೆಸಿಡೆನ್ಸಿ ರಸ್ತೆ, ಪೂರ್ವ ವಲಯದ, ಮೇಯೋಹಾಲ್ ಕಟ್ಟಡಕ್ಕೆ ಸೇರಿದ ಆವರಣದೊಳಗಿನ ಒಂದು ಬಾಗದಲ್ಲಿ ಎ.ಸಿ.ಶೀಟ್‌ವುಳ್ಳ 15.6 62.9 ಅಡಿ ಅಳತೆಯ ಕಟ್ಟಡವನ್ನು ಪ್ರಾರಂಭಿಕವಾಗಿ 12 ತಿಂಗಳ ಅವಧಿಗೆ ರೂ.1000/-ಗಳ ಮಾಸಿಕ ಗುತ್ತಿಗೆ ಹಣದ ಆಧಾರ ಉಪಹಾರ ಗೃಹ ನಡೆಸಲು ಶ್ರೀ.ಬಿ.ಸಿ.ಕೃಷ್ಣ ಎಂಬುವವರಿಗೆ ಗುತ್ತಿಗೆಗೆ ನೀಡಿದ್ದು, ತದನಂತರ ಗುತ್ತಿಗೆ ಅವಧಿಯು ದಿನಾಂಕ:22-09-2099ರಂದು ಮುಗಿದಿರುವ ಕಾರಣ ಸ್ವತ್ತನ್ನು ನಗರ ಪಾಲಿಕೆ ವಶಕ್ಕೆ ನೀಡಲು ಗುತ್ತಿಗೆದಾರರಿಗೆ 1974ರ ಕೆ.ಪಿ.ಪಿ. ಕಾಯ್ದೆ ಅಡಿಯಲ್ಲಿ ಕಲಂ 4(1)ರ ನೋಟೀಸ್‌ನ್ನು ದಿನಾಂಕ:06-08-2010ರಂದು ಮತ್ತು ಕಲಂ 5(1)ರ ನೋಟೀಸ್‌ನ್ನು 22-09-2010ರಂದು ಜಾರಿ ಮಾಡಲಾಗಿದೆ. ಸದರಿ ನೋಟೀಸ್‌ನ ವಿರುದ್ಧ ಗುತ್ತಿಗೆದಾರರು ನ್ಯಾಯಾಲಯದಲ್ಲಿ

-3-

ಎಂ.ಎ.ನಂ.36/2010ನ್ನು ಹೂಡಿ ಯತಾಸ್ಥಿತಿ ಆದೇಶವನ್ನು ಮುಂದುವರೆಸಲು ನ್ಯಾಯಾಲಯವು ಆದೇಶಿಸಿದ್ದರೂ ಸಹ ಗುತ್ತಿಗೆ ಹಣವನ್ನು ಏಕಾಏಕಿ ರೂ.18,000/-ಗಳಿಂದ ರೂ.55,118/-ಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಿ, ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೂ ಸಹ ಕ್ಯಾಂಟೀನ್ ಬಾಗಿಲನ್ನು ಮುಚ್ಚಿಸಿರುವ ವಿರುದ್ಧ ಶ್ರೀ.ಬಿ.ಸಿ.ಕೃಷ್ಣರವರು ಸಲ್ಲಿಸಿರುವ ಮೇಲ್ಮನವಿ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-02-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದ ತಮ್ಮ ಹೇಳಿಕೆಯಲ್ಲಿ ಯಾವುದೇ ಮುನ್ಸೂಚನೆ ಇಲ್ಲದೆ ಬಾಡಿಗೆಯನ್ನು ಹೆಚ್ಚಿಸಿದ್ದು, ಶುಚಿತ್ವ ಕೊರತೆ ಎಂದು ಮುಚ್ಚಿರುವುದಾಗಿ ತಿಳಿಸಿರುತ್ತಾರೆ.

ಉಪ ಆಯುಕ್ತರು (ಆಸ್ತಿಗಳು) ಈ ಆಸ್ತಿಗೆ ಕೆ.ಪಿ.ಪಿ. ಪ್ರಕಾರ ತೆರವುಗೊಳಿಸಿರುವುದಾಗಿ ತಿಳಿಸಿ ಪಾಲಿಕೆಯ ನಿರ್ಣಯದ ಆಧಾರ ಬಾಡಿಗೆ ಹೆಚ್ಚಿಸಿದ್ದು, ಸಕ್ಷಮ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಲು ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಅರ್ಜಿದಾರರು ಗುತ್ತಿಗೆ ಕುರಿತಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುವುದಾಗಿ ತಿಳಿದು ಬಂದಿರುತ್ತದೆ.

ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ನಾವು ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಿದ್ದು ಸರ್ಕಾರವು ಪಾಲಿಕೆಯ ಆದೇಶವನ್ನು ರದ್ದು ಪಡಿಸಿದ್ದು, ಮನವಿ ಪರಿಗಣಿಸಲು ಕೋರಿರುತ್ತಾರೆ.

ಸಂಬಂಧಪಟ್ಟ ಸಹ ಕಂದಾಯ ಅಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ಸರ್ಕಾರ ಈ ಹಿಂದೆ ನಿಗಧಿಪಡಿಸದ್ದ ಬಾಡಿಗೆಗೆ ಮಾತ್ರ ಆದೇಶ ನೀಡಿದ್ದು, ಇತ್ತೀಚೆಗೆ ನಿಗಧಿಪಡಿಸಿರುವ ಬಾಡಿಗೆ ಮೌಲ್ಯಕೆ ಆದೇಶವಾಗಿರುವುದಿಲ್ಲ. ಕಡತದಲ್ಲಿ ಇತ್ತೀಚಿನ ನ್ಯಾಯಾಲಯದ ಆದೇಶವಿರುವುದಿಲ್ಲ.

ಉಪ ಆಯುಕ್ತರು (ಆಸ್ತಿಗಳು)ರವರು ನ್ಯಾಯಾಲಯದ ಆದೇಶದ ವಿರುದ್ಧವಾಗಿ ಯಾವುದೇ ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ.

**<u>ನಿರ್ಣಯ:</u>**- ಸಮಿತಿಯು ಮೇಲ್ಕಂಡ ಎಲ್ಲಾ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಆಯುಕ್ತರ ದಿನಾಂಕ:07-02-2011ರ ಟಿಪ್ಪಣಿಯಂತೆ ಒಪ್ಪುವುದೆಂದ ಸಮಿತಿಯು ತೀರ್ಮಾನಿಸಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ಆ)/26/2010-11

ಮಾಲೀಕರು, ಮೆ|| ಅವಿನಾಶಿ ಆಡ್ಸ್, ಔಟ್‌ಡೋರ್‌ಅಡ್ವರ್‌ಟೈಸಿಂಗ್, ತುಳಸಿ ಹೌಸ್, ನಂ.26, ಎಸ್.ಎಫ್.ಹೆಚ್.ಎಸ್. ಏರಿಯಾ, ನಂದಿನಿ ಲೇಔಟ್, ಬೆಂಗಳೂರು-96 ಇವರು ದಿನಾಂಕ:18-01-2011ರಂದು ಸಮಿತಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಕಡತ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ವಕೀಲರು ಹಾಜರಿರುತ್ತಾರೆ ಆದರೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ. ವಕೀಲರ ಹೇಳಿಕೆಯಲ್ಲಿ ಇದು ರೈಲ್ವೆ ಆಸ್ತಿಯಲ್ಲಿದ್ದು ಕಂದಾಯ ಅಧಿಕಾರಿಗಳ ವರದಿಯ ರೀತ್ಯ ಅಳತೆಯು ಸರಿಯಿಲ್ಲವೆಂದು 56 ಬೋರ್ಡ್‌ಗಳ ಬದಲು 61 ಬೋರ್ಡುಗಳು ಇರುವುದಾಗಿ ಹಿಂದಿನ ಅವಧಿಯಿಂದ ತೆರಿಗೆ ನಿಗಧಿಪಡಿಸಿರುವುದಾಗಿ ತಿಳಿಸಿದ್ದು, ತಾವು ಬೋರ್ಡ್‌ಗಳನ್ನು ನಿಗಧಿಪಡಿಸಿದ್ದ ಅವಧಿಗೆ ಮಾತ್ರ ಕಂದಾಯವನ್ನು ನಿಗಧಿಪಡಿಸಬೇಕೆಂದು ಕೋರಿರುತ್ತಾರೆ.

ಅಧಿಕಾರಿಗಳು ನಿಗಧಿಪಡಿಸಿರುವ ಕಂದಾಯವು ಜಾಸ್ತಿಯಾಗಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ತಾವು ಫಲಕಗಳನ್ನು ಅಳವಡಿಸಿದ ದಿನಾಂಕಗಳನ್ನು ದಾಖಲೆ ಮೂಲಕ ನೀಡಿದ್ದರೂ ಸಹ ಅಧಿಕಾರಿಗಳು ಈ ಬಗ್ಗೆ ಗಮನ ಹರಿಸದೆ ಹಿಂದಿನ ದಿನಾಂಕಗಳಲ್ಲೇ ನಿಗಧಿಪಡಿಸಿ ಡಿಮ್ಯಾಂಡ್ ನೋಟೀಸ್‌ನ್ನು ಸುಮಾರು 1 ವರ್ಷಗಳ ನಂತರ ನೀಡಿರುವುದು ಸಹ ತಪ್ಪೆಂದು ತಿಳಿಸಿರುತ್ತಾರೆ. ನಾನು ಬೋರ್ಡ್‌ಗಳನ್ನು ಅಳವಡಿಸಿದ ದಿನಾಂಕದಿಂದ ಮಾತ್ರ ನನಗೆ ತೆರಿಗೆ ವಿಧಿಸಬೇಕೆಂದು ಕೋರಿರುತ್ತಾರೆ. ನಾನು ಆಯಾ ವರ್ಷ ವರ್ಷಗಳಲ್ಲಿ ಫಲಕಗಳನ್ನು ಅಳವಡಿಸುತ್ತಿದ್ದು ಈ ಸಂಬಂಧ ಅಧಿಕಾರಿಗಳಿಗೆ ಲಿಖಿತ ಮೂಲಕ ಹೇಳಿಕೆ ನೀಡುತ್ತಿದ್ದು ಅಧಿಕಾರಿಗಳು ಗಮನ ಹರಿಸಿಲ್ಲವೆಂದು ತಿಳಿಸಿರುತ್ತಾರೆ.

"ಆದೇಶಕ್ಕಾಗಿ ಕಾಯ್ದಿರಿಸಿದೆ"

07. ವಿಷಯ:ಸಂಖ್ಯೆ:ಅಸ್ಥಾಸ/(ಜಾ)/27/2010-11

ಮೆ|| ಲಕ್ಷಾ ಮಿಡಿಯಾ ಪ್ರೈ.ಲಿ., ಸಂಸ್ಥೆಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಆಯುಕ್ತರು ದಿನಾಂಕ:07-02-2011ರ ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದ ಶ್ರೀ.ರವಿರೆಡ್ಡಿಯವರು ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ.

08.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11

ಮೆ||ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಮೂಲ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಅಧಿಕಾರಿಗಳು ವಿಫಲರಾಗಿರುತ್ತಾರೆ. ಕಾನೂನು ಸಲಹೆಗಾರರಿಗೆ ಈಗಾಗಲೇ ಸೂಚಿಸಿದ್ದು, ಅವರು ಈ ದಿವಸ ಗೈರು ಹಾಜರಿಯಾಗಿರುತ್ತಾರೆ. ಪ್ರಕರಣ ಕುರಿತಂತೆ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿದೆ.

" ಆದೇಶಕ್ಕಾಗಿ ಕಾಯ್ದಿರಿಸಿದೆ"

02.ವಿಷಯ:ಸಂಖ್ಯೆ:ಅಸ್ಥಾಸ/(ಆ)/34/2010-11

ಶ್ರೀ ಜ್ಯೋತಿ ಸ್ಟೋರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ದ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2010-11

ಎ.ಪ್ರಗಸ್ವತಿ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2010-11

ವಿ.ಗುರುಸ್ವಾಮಿ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

05.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2010-11

ಎ.ಗ್ರಹದೀರ್ರೈ, ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ಆ)/38/2010-11

ಬಿ.ವಿ.ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ಆ)/39/2010-11

ಬಿ.ದಾಮೋದರ್ ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

08.ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-201ರ ಆದೇಶಗಳಂತೆ 2011-2012ನೇ ಸಾಲಿನ

ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2001ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಹಾಜರಿದ್ದು ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ನವೀಕರಿಸಬಾರದೆಂದು ಪತ್ರ ನೀಡಿ ಕೋರಿಕೊಂಡಿದ್ದರೂ ಸಹ ನವೀಕರಿಸಿರುತ್ತಾರೆ. ಆದ್ದರಿಂದ ಸ್ವತ್ತಿನ ಮಾಲೀಕರ ಅನುಮತಿ ಇಲ್ಲದೆ ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಪರವಾನಗಿಯನ್ನು ನವೀಕರಿಸಿಕೊಡದಂತೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಆರೋಗ್ಯಾದಿಕಾರಿ (ಪಶ್ಚಿಮ)ರವರು ಸದರಿ ಉದ್ದಿಮೆಯ ಪರವಾನಗಿಯನ್ನು ಈ ವರ್ಷದಲ್ಲಿ ನವೀಕರಿಸದಂತೆ ಸಂಬಂಧಪಟ್ಟವರಿಗೆ ತಿಳಿಸಲಾಗಿರುತ್ತದೆ. ಅದರಂತೆ ಈ ವರ್ಷದಲ್ಲಿ ಸದರಿ ಉದ್ದಿಮೆಯ ಪರವಾನಗಿಯನ್ನು ನವೀಕರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಮಾಲೀಕರು ಸದರಿ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಮಾಡಿಕೊಳ್ಳಲು ಕೋರಿರುತ್ತಾರೆ. ಆದುದರಿಂದ ಮುಂದಿನ ದಿನಾಂಕಕ್ಕೆ ಪ್ರಕರವನ್ನು ಮುಂದೂಡಲಾಗಿದೆ.

09.ವಿಷಯ:ಸಂಖ್ಯೆ:ಅಸ್ಥಾಸ/(ಆ)/41/2010-11

ಶ್ರೀ.ಟಿ.ಜಿ.ಪ್ರಭಾಕರ್ ಗುಪ್ತಾರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ಆ)/42/2010-11

ನಾಗರಾಜ ಟ್ರೇಡಿಂಗ್‌ನ ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

11.ವಿಷಯ:ಸಂಖ್ಯೆ:ಅಸ್ಥಾಸ/(ಆ)/43/2010-11

ರಾಯಲ್ ಫೈರ್ ವರ್ಕ್ಸ್ ಇಂಡಸ್ಟ್ರೀಸ್ ಟ್ರೇಡಿಂಗ್ ಕಂಪನಿ, ಇವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

12.ವಿಷಯ:ಸಂಖ್ಯೆ:ಅಸ್ಥಾಸ/(ಆ)/44/2010-11

ಶ್ರೀಮತಿ.ಶಂಕರಮ್ಮ ಇವರು ದಿನಾಂಕ:ದಿನಾಂಕ:03-12-2010ರಂದು ಸಮಿತಿಗೆ ಮನವಿಯನ್ನು ಸಲ್ಲಿಸಿ ಸಂಖ್ಯೆ:12/1, 7ನೇ ಅಡ್ಡರಸ್ತೆ, ಸಂಪಂಗಿ ರಾಮನಗರ, ವಾರ್ಡ್-110 ಈ ಸ್ವತ್ತಿನಲ್ಲಿ ನಡೆಸುತ್ತಿರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳನ್ನು ನಗರ ಪಾಲಿಕೆಯಿಂದ ಪರವಾನಗಿ ಪಡೆದು ನಡೆಸುತ್ತಾ ಇರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳಿಗೆ ಪಡೆದಿರುವ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)ರವರ ಕಛೇರಿ, ಎಸ್-2 ಉಪ ವಿಭಾಗ ಇವರಿಗೆ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ)ರವರ ಪತ್ರ ಸಂಖ್ಯೆ:ಆ.ವೈ(ಶಿವ)ಪಿಆರ್/64/10-11, ದಿನಾಂಕ:6-10-2010ರ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರ ಪರವಾಗಿ ಅವರ ಪತಿಯವರಾದ ಶ್ರೀ.ರಾಜಶೇಖರ್‌ರವರು ಹಾಜರಿರುತ್ತಾರೆ. ಪ್ರತಿವಾದಿಗಳು ಈ ವಿಷಯದಲ್ಲಿ ಸ್ಪಷ್ಟವಾದ ನೋಟೀಸ್‌ನ್ನು 3 ದಿನಗಳೊಳಗಾಗಿ ಹೊರಡಿಸುವುದೆಂದು ತಿಳಿಸಿ ಪ್ರಕರಣವನ್ನು ಮುಂದೂಡಲಾಯಿತು.

13.ವಿಷಯ:ಸಂಖ್ಯೆ:ಅಸ್ಥಾಸ/(ಆ)/45/2010-11

ಶ್ರೀ.ಸಿ.ಪಯಾಜ್ ಪಾಷ, ನಂ.22/68 ಬಿ ಉಕ್ಬಾ ಮಸೀದಿ ರಸ್ತೆ, ಹೋಲಿ ಕ್ರೈಸ್ಟ್ ಶಾಲೆ ಎದುರು, ಅಶ್ವತ್ಥನಗರ, ಥಣೀಸಂದ್ರ, ಬೆಂಗಳೂರು-77 ಇಲ್ಲಿ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ರದ್ದುಗೊಳಿಸುವಂತೆ ಆರೋಗ್ಯ ವೈದ್ಯಾಧಿಕಾರಿ (ಬ್ಯಾಟರಾಯನಪುರ)ರವರು ದಿನಾಂಕ:12-10-2011ರಂದು ನೀಡಿರುವ ನೋಟೀಸಿನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಮೇಲ್ಮನವಿದಾರರಿಗೆ ಮತ್ತು ದೂರುದಾರರಿಗೆ ನೋಟೀಸ್ ಜಾರಿ ಮಾಡಿ ಮೂಲ ಕಡತದೊಂದಿಗೆ ಸಭೆಗೆ ಹಾಜರಾಗುವಂತೆ ಸೂಚಿಸಿದೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಹಾಜರಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳು ಹಾಜರಿರುತ್ತಾರೆ. 3 ಪ್ರತಿವಾದಿಯು ಹಾಜರಿಲ್ಲದ ಪ್ರಯುಕ್ತ ಸದರಿಯವರಿಗೆ ನೋಟೀಸ್ ಜಾರಿಮಾಡುವಂತೆ ತಿಳಿಸಿ ಪ್ರಕರಣವನ್ನು ಪ್ರಕರಣವನ್ನು ಮುಂದೂಡಲಾಯಿತು.

14.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/46/2010-11

ಶ್ರೀ.ಎಸ್.ಮೋಹನ್, ನಂ.48/36, 18ನೇ ಮುಖ್ಯರಸ್ತೆ, ಉದಯಸ್ಕೂಲ್ ರಸ್ತೆ, ವಿಜಯನಗರ, ಬೆಂಗಳೂರು-10 ಇವರ ನಿವೇಶನ ಸಂಖ್ಯೆ:258, 7ನೇ ಮುಖ್ಯರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ ಈ ಸ್ವತ್ತನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸುಮಾರು 35 ವರ್ಷಗಳ ಹಿಂದೆ ವಶಪಡಿಸಿಕೊಂಡಿದ್ದು, ಈ ಬಗ್ಗೆ ಸದರಿಯವರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಹಾಗೂ ಅಹವಾಲು ಹೇಳಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಿಲ್ಲವೆಂದು ಹಾಗೂ ನಿವೇಶನ ಸಂಖ್ಯೆ:73, 4ನೇ ಟಿ ಬ್ಲಾಕ್, ಜಯನಗರ, 30-31ನೇ ಅಡ್ಡರಸ್ತೆಯಲ್ಲಿ 53x40 ಅಡಿ ಅಳತೆಯ ನಿವೇಶನವನ್ನು ಬದಲಿಯಾಗಿ ನೀಡಿ ರೂ.3,91,880/-ಗಳನ್ನು ಪಾವತಿಸಲು ಸೂಚಿಸಿರುತ್ತಾರೆ. ನನ್ನ ಸ್ವತ್ತನ್ನು ವಶಪಡಿಸಿಕೊಂಡಿರುವುದಕ್ಕೆ ಬದಲಿಯಾಗಿ ನಿವೇಶನವನ್ನು ನೀಡದೆ ಹಣವನ್ನ ಪಾವತಿಸಬೇಕೆಂದು ಕೇಳಿರುವುದು ಏಕೆಂದು ನನಗೆ ತಿಳಿಯುತ್ತಿಲ್ಲ. ನನ್ನ ಸ್ವತ್ತಿಗೆ ಬದಲಿಯಾಗಿ ಸ್ವತ್ತನ್ನು ನೀಡಬೇಕೆ ಹೊರತು ಹಣವನ್ನು ಪಾವತಿಸಿ ಎಂದು ಕೇಳುವುದು ಯಾವ ನ್ಯಾಯವೆಂದು ಪ್ರಶ್ನಿಸಿ ನ್ಯಾಯ ಒದಗಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರ ಹಾಜರಾಗಿರುತ್ತಾರೆ. ನಾವು ಜಿಪಿಎ ಮುಖಾಂತರ ಅನುಮತಿ ಪಡೆದಿದ್ದು, ಸ್ವತ್ತಿನ ಭೂ ಸ್ವಾಧೀನತೆಯನ್ನು ಕಾನೂನಿನ ಪ್ರಕಾರ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಆಸ್ತಿ ವಿಭಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿ ಸಂಬಂಧಪಟ್ಟ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಪ್ರಕರಣವನ್ನು ಮುಂದೂಡಲಾಯಿತು.

:ಸಹಿ:
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:11-03-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 04 | ಶ್ರೀಧರ ರೆಡ್ಡಿ ಎನ್.ಆರ್. | ಸದಸ್ಯರು | ಆರೋಗ್ಯಾಧಿಕಾರಿ (ಪಶ್ಚಿಮ/ದಕ್ಷಿಣ) |
| 05 | ಡಾ॥ಎಸ್.ರಾಜು | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಸವನಗುಡಿ/ಮಹಾಲಕ್ಷ್ಮೀಲೇಔಟ್) ವಲಯ |
| 06 | ರಮೇಶ್ ರಾಜು ಕೆ. | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಬಸವನಗುಡಿ) |
| 07 | ಮುನಿರತ್ನಮ್ಮ | ಸದಸ್ಯರು | |
| 08 | ಶಾಹೀನ್ ತಾಜ್ | ಸದಸ್ಯರು | |
| 09 | ಎಸ್.ಕೆ.ಪುಷ್ಪ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |
| 11 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

01.ವಿಷಯ:ಸಂಖ್ಯೆ:ಅಸ್ಥಾಸ/(ಆ)/12/2010-11

ಶ್ರೀ.ಎ.ಎಸ್.ಕಾಮತ್, ವ್ಯವಸ್ಥಾಪಕ ನಿರ್ದೇಶಕರು, ಬಸವನಗುಡಿ ವಲಯ ವಾರ್ಡ್-154, ನಂ.1, 5ನೇ ಮೈನ್, ಬಸವನಗುಡಿ ರಸ್ತೆ, ಎನ್.ಆರ್.ಕಾಲೋನಿ ಬೆಂಗಳೂರು-19 ಇಲ್ಲಿ ಕಾಮತ್ ಬ್ಯೂಗಲ್ ರಾಕ್ ಹೋಟೆಲ್ ರೆಸ್ಟೋರೆಂಟ್ ಮತ್ತು 25 ಅಶ್ವಶಕ್ತಿ ಪರವಾನಗಿಯನ್ನು 2010-11ನೇ ಸಾಲಿಗೆ ನವೀಕರಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ಬಸವನಗುಡಿ)ವಲಯರುವರು ದಿನಾಂಕ:22-02-2010ರಂದು ತಡೆ ಹಿಡಿದಿರುವ ಹಿಂಬರಹ ವಿರುದ್ಧ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಆಕ್ಷೇಪಣೆದಾರರು ಲಿಖಿತ ಮೂಲಕ ಹೇಳಿಕೆ ನೀಡಿರುತ್ತಾರೆ. ಇತರೆ ಪ್ರಕರಣಗಳಲ್ಲಿನ ಮಾಹಿತಿ ಕುರಿತಂತೆ ಉಲ್ಲೇಖಿಸಿರುತ್ತಾರೆ. ಹಾಲಿ ಪ್ರಕರಣವು ಲೋಕಾಯುಕ್ತದಲ್ಲಿ ಬಾಕಿ ಇರುವುದಾಗಿ ಪ್ರತಿವಾದಿಗಳು ತಿಳಿಸಿರುತ್ತಾರೆ. ಅಪೀಲುದಾರರು ತಮ್ಮ ಪ್ರತಿವಾದಿಗಳ ಲಿಖಿತ ಹೇಳಿಕೆಯ ಪ್ರತಿಯನ್ನು ಕೋರಿರುತ್ತಾರೆ. ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳು ಸಿ.ಡಿ.ಪಿ. ಪ್ರಕಾರ ಮಂಜೂರಾತಿ ನೀಡಿರುವುದಾಗಿ ತಿಳಿಸಿರುತ್ತಾರೆ.

" ಅರ್ಜಿದಾರರು ಕಾಲಾವಕಾಶವನ್ನು ಕೋರಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ"

02. <u>ವಿಷಯ:ಸಂಖ್ಯೆ:ಅಸ್ಥಾಸ/(ತೆ)/13/2010-11</u>

ಸ್ವತ್ತಿನ ಸಂಖ್ಯೆ:21, ವಾರ್ಡ್-44, ಮಾರಪ್ಪನ ಪಾಳ್ಯ, ಇಂಡಸ್ಟ್ರಿಯಲ್ ಸಬರ್ಬ್ ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಖಾತೆದಾರರು ಪ್ರಥಮ ಅಪೀಲು ಅಧಿಕಾರಿಗಳ ತೀರ್ಮಾನದ ವಿರುದ್ಧ ಕಂದಾಯ ಕಡಿಮೆ ಮಾಡಿಕೊಡಲು ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:06-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮನವಿದಾರರು ತಮ್ಮ ಹೇಳಿಕೆಯನ್ನು ನೀಡಿ ಈ ಹಿಂದೆ ಕಡಿಮೆ ಇದ್ದ ಕಂದಾಯವನ್ನು ವಿಪರೀತವಾಗಿ ಹೆಚ್ಚಿಸಿದ್ದು ಈ ಬಗ್ಗೆ ಪ್ರಥಮ ಅಫೀಲು ಅಧಿಕಾರಿಗಳು ಕಂದಾಯವನ್ನು ಕಡಿಮೆ ಮಾಡಿದ್ದು ತಮಗೆ ಸಮಾದಾನವಿಲ್ಲದಿದ್ದು, ಮಾನವೀಯತೆ ದೃಷ್ಠಿಯಿಂದ ಕಡಿಮೆ ಮಾಡಲು ಕೋರಿರುತ್ತರೆ. ಈ ಆಸ್ತಿಯಲ್ಲಿ ಬಾಡಿಗೆಗೆ ನೀಡಿರುವುದಾಗಿ ತಿಳಿಸಿರುತ್ತಾರೆ.

<u>**ನಿರ್ಣಯ**</u>:- ದಿನಾಂಕ:05-3-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು. ಹಾಗೂ ಸ್ವತ್ತಿನ ಮಾಲೀಕರು ಪ್ರಥಮ ಅಫೀಲು ಅಧಿಕಾರಿಗಳು ಕಂದಾಯವನ್ನು ಕಡಿಮೆ ಮಾಡಿದ್ದು, ತಮಗೆ ಸಮಾಧಾನವಿಲ್ಲವೆಂದು ತಿಳಿಸುತ್ತಾ, ಮಾನವೀಯತೆ ದೃಷ್ಟಿಯಿಂದ ಕಂದಾಯ ಕಡಿಮೆ ಮಾಡುವಂತೆ ಕೋರಿಕೊಂಡಿರುತ್ತಾರೆ ಹೊರತು ಕಂದಾಯ ಕಡಿಮೆ ಮಾಡುವ ಬಗ್ಗೆ ಯಾವುದೇ ಸಕಾರಣಗಳನ್ನು ತೋರಿಸಿರುವುದಿಲ್ಲ. ಹಾಗೂ ಸ್ಥಳ ಪರಿಶೀಲನೆ ನಡೆಸಿದಾಗ ಸದರಿ ಸ್ವತ್ತನ್ನು ಪೂರ್ಣವಾಗಿ ಭಾಡಿಗೆಗೆ ನೀಡಿದ್ದು, ಇಂಡಸ್ಟ್ರೀಸ್‌ಗಾಗಿ ಉಪಯೋಗಿಸುತ್ತಿರುವುದು ಕಂಡು ಬರುತ್ತದೆ. ಆದುದರಿಂದ ಈಗಾಗಲೇ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯವನ್ನು ಕಡಿಮೆ ಮಾಡಿದ್ದು, ಸದರಿ ಕಂದಾಯವು ಸಮಂಜಸವಾಗಿದೆಂದು ಸಮಿತಿಯು ತೀರ್ಮಾನಿಸಲಾಯಿತು.

-2-

03. <u>ವಿಷಯ:ಸಂಖ್ಯೆ:ಅಸ್ಥಾಸ/(ಜಾ)/14/2010-11</u>

ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಮೆ॥ ಮೋರ್ ಗ್ರೂಪ್ (ಇಂಡಿಯಾ) ಪ್ರೈ.ಲಿ., (ಈಗ ಮೆ॥ ಕ್ಲಿಯರ್ ಚಾನೆಲ್ ಔಟ್‌ಡೋರ್ ಲಿಮಿಟೆಡ್.,) ಸಂಸ್ಥೆಯವರಿಗೆ 10 ಗ್ಯಾಂಟ್ರಿಗಳು ಮತ್ತು 03 ಕ್ಯಾಂಟಿಲೀವರ್‌ಗಳನ್ನು ಜಾಹೀರಾತು ಹಕ್ಕುಗಳ ಎದುರು ಅಳವಡಿಸಲು ಬಿ.ಓ.ಟಿ ಆಧಾರದ ಮೇರೆಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ 11 ತಿಂಗಳ ಕಾಲಾವಧಿಗೆ ಡೈರಿ ವೃತ್ತ, ರಿಂಗ್ ರಸ್ತೆ, ಮತ್ತು ಬಿ.ಟಿ.ಎಂ. ಜಂಕ್ಷನ್‌ಗಳಲ್ಲಿ ಕರರು ಪತ್ರ ದಿನಾಂಕ:08.11.2000ರಂದು ಪೈಲೆಟ್ ಯೋಜನೆ ಯಡಿಯಲ್ಲಿ ವಹಿಸಿಕೊಡಲಾಗಿದೆ. ದಿನಾಂಕ: 05.09.2005ರ ಆಯುಕ್ತರವರ ಟಿಪ್ಪಣಿಯನ್ನು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ವಿಷಯದ ಸಂಖ್ಯೆ: ನಯೋ: 053/05-06 ರ ದಿನಾಂಕ: 05.04.2006ರ ಸಮಿತಿ ಸಭೆಯ ನಡವಳಿಕೆಗಳಲ್ಲಿ **ಒಪ್ಪುತ್ತಾ ಪ್ರಸ್ತಾವನೆಯಲ್ಲಿನ ಷರತ್ತು ಮತ್ತು ಕರಾರುಗಳಿಗೆ ಒಳಪಟ್ಟು ಅಗತ್ಯ ಸ್ಥಳ ಬದಲಾವಣೆ ಮಾರ್ಪಾಟುಗಳನ್ನು ಮಾಡಿಕೊಳ್ಳಲು ಹಾಗೂ ಒಟ್ಟು 09 ಗ್ಯಾಂಟ್ರಿಗಳನ್ನು ಅಳವಡಿಸಿಕೊಳ್ಳಲು ಅನುಮತಿ ಆದೇಶ ನೀಡುವ ದಿನಾಂಕದಿಂದ ಮುಂದಿನ ಐದು ವರ್ಷಗಳಿಗೆ ಅನುಮೋದನೆ ನೀಡಲು ಸಮಿತಿಯು ತೀರ್ಮಾಸಿದೆ.** ಸದರಿ ಸಮಿತಿಯ ಪ್ರಸ್ತಾವನೆಗಳನ್ನು ಪಾಲಿಕೆಯ ಸಭೆ ಅನುಮೋದನೆ ಮಾಡಿರುವ ಬಗ್ಗೆ ಮಾಹಿತಿ ಕಡತದಲ್ಲಿ ಲಭ್ಯವಿರುವುದಿಲ್ಲ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಉಲ್ಲೇಖ (2) ರಲ್ಲಿ ಡೈರಿ ವೃತ್ತದಲ್ಲಿ ಮೇಲುಸೇತುವೆಯನ್ನು ದಿನಾಂಕ: 01.02.2003ರಂದು ಪ್ರಾರಂಭಿಸಿದೆಂದು ಹಾಗೂ ದಿನಾಂಕ: 15.09.2004ರಂದು ಮೇಲುಸೇತುವೆ ಪೂರ್ಣಗೊಳಿಸಲಾಗಿದೆಂದು ತಿಳಿಸಿರುತ್ತಾರೆ.

ಮೆ॥ ಕ್ಲಿಯರ್ ಚಾನೆಲ್ ಸಂಸ್ಥೆಯವರು ದಿನಾಂಕ: 20.10.2004ರಂದು ಮನವಿಯನ್ನು ಸಲ್ಲಿಸಿ ಡೈರಿ ವೃತ್ತದಿಂದ ಬಿ.ಎಂ.ಟಿ ಜಂಕ್ಷನ್‌ರವರೆಗೆ 5 ಗ್ಯಾಂಟ್ರಿ ಮತ್ತು 3 ಕ್ಯಾಂಟಿಲೀವರ್‌ಗಳನ್ನು ಅಳವಡಿಸಲು ಕರಾರು ಪತ್ರ ದಿನಾಂಕ: 08.11.2000ರಂದು ವಹಿಸಿಕೊಡಲಾಗಿದೆಂದು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರು ನಿರ್ಮಾಣಗೊಂಡ ಒಂದು ವರ್ಷದ ಒಳಗಾಗಿ 4 ಗ್ಯಾಂಟ್ರಿಗಳು ಮತ್ತು 1 ಕ್ಯಾಂಟಿಲೀವರ್‌ನ್ನು ತೆರವುಗೊಳಿಸಿರುತ್ತಾರೆಂದು ತಿಳಿಸುತ್ತಾ, ಬದಲಿ ಸ್ಥಳಗಳನ್ನು ಸೂಚಿಸಲು ಕೋರಿರುತ್ತಾರೆ.

ಮೆ॥ಕ್ಲಿಯರ್ ಚಾನೆಲ್ ಔಟ್‌ಡೋರ್ ಸಂಸ್ಥೆಯವರು ದಿನಾಂಕ:12.05.2005, 05.12.2007, 13.06.2008 ಮತ್ತು 13.09.2008 ರಂದು ಮನವಿಯನ್ನು ಸಲ್ಲಿಸಿ ದಿನಾಂಕ:19.03.2002ರಂದು 04 ಗ್ಯಾಂಟ್ರಿಗಳು ಮತ್ತು 02 ಕ್ಯಾಂಟಿಲೀವರ್‌ಗಳನ್ನು ಪೂರ್ಣಗೊಳಿಸಿರುವುದಾಗಿ ಹಾಗೂ ದಿನಾಂಕ:23.07.03 ರಂದು ಸದರಿ ಗ್ಯಾಂಟ್ರಿಗಳು ಮತ್ತು

ಕ್ಯಾಂಟಿಲೀವರ್‌ಗಳನ್ನು ಡೈರಿ ವೃತ್ತದಲ್ಲಿ ಮೇಲುಸೇತುವೆ ಕಾಮಗಾರಿಗಾಗಿ ತೆರವುಗೊಳಿಸಲಾಗಿದೆಂದು ತಿಳಿಸಿರುತ್ತಾರೆ. **ಅದರಂತೆ ಸಂಸ್ಥೆಯವರು ದಿನಾಂಕ: 20.10.04 ರಂದು ಮನವಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರು ನಿರ್ಮಾಣಗೊಂಡ ಒಂದು ವರ್ಷದೊಳಗಾಗಿ 04 ಗ್ಯಾಂಟ್ರಿಗಳು ಮತ್ತು 01 ಕ್ಯಾಂಟೀಲೀವರ್‌ನ್ನು ತೆರವುಗೊಳಿಸಿರುವುದಾಗಿ ತಿಳಿಸಿರುವುದು ಸೂಕ್ತವಲ್ಲವೆಂಬುದು ಸ್ಪಷ್ಟವಾಗಿರುತ್ತದೆ.**

ದಿನಾಂಕ:08.12.2008ರಂದು ಸಂಸ್ಥೆಯವರಿಗೆ ಗ್ಯಾಂಟ್ರಿಗಳು ಮತ್ತು ಕ್ಯಾಂಟಿಲೀವರ್‌ಗಳನ್ನು ದಿನಾಂಕ:19.03.2002 ರಿಂದ 23.07.2003ರವರೆಗೆ ಬಾಕಿ ಇರುವ ಜಾಹೀರಾತು ತೆರಿಗೆ ಮತ್ತು ನೆಲಬಾಡಿಗೆಯನ್ನು ಪಾವತಿಸಲು ತಿಳುವಳಿಕೆ ಪತ್ರವನ್ನು ನೀಡಲಾಗಿದೆ. ಸಂಸ್ಥೆಯವರು ದಿನಾಂಕ: 29.12.2010ರಂದು ಚೆಕ್‌ಗಳನ್ನು ನವೀಕರಿಸಿ ಬಾಕಿ ಇರುವ ರೂ. 1,58,487/-ಗಳನ್ನು ಪಾವತಿಸಿರುತ್ತಾರೆ.

ರಿಟ್‌ಪಿಟಿಷನ್ ಸಂಖ್ಯೆ: 6473/2009 ರ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಪಾಲಿಕೆಯ ವ್ಯಾಪ್ತಿಯಲ್ಲಿ ಗ್ಯಾಂಟ್ರಿಗಳನ್ನು ನಿರ್ಮಾಣ ಮಾಡುವುದನ್ನು ನಿಷೇಧಿಶಿಸಿರುವ ಹಿನ್ನೆಲೆಯಲ್ಲಿ ಬದಲಿ ಸ್ಥಳಗಳಲ್ಲಿ ಗ್ಯಾಂಟ್ರಿಗಳನ್ನು ಅಳವಡಿಸಲು ಅನುಮತಿ ನೀಡಲು ಸಾಧ್ಯವಿಲ್ಲವೆಂದು ದಿನಾಂಕ: 17.09.2009 ಮತ್ತು 19.09.2009ರಂದು ಮೆ||ಕ್ಲಿಯರ್ ಚಾನೆಲ್ ಔಟ್‌ಡೋರ್ ಸಂಸ್ಥೆಯವರಿಗೆ ಹಿಂಬರಹವನ್ನು ನೀಡಲಾಗಿದೆ. ದಿನಾಂಕ:17.09.2009ರ ಹಿಂಬರಹವನ್ನು ರದ್ದುಗೊಳಿಸಿ ಗ್ಯಾಂಟ್ರಿಗಳನ್ನು ಅಳವಡಿಸಲು ಪರವಾನಿಗೆ ನೀಡಲು ಘನ ಉಚ್ಚ ನ್ಯಾಯಾಲಯದಲ್ಲಿ ರಿಟ್‌ಪಿಟಿಷನ್ ಸಂಖ್ಯೆ: 103/2010 ನ್ನು ಮೆ||ಕ್ಲಿಯರ್ ಚಾನೆಲ್ ಔಟ್‌ಡೋರ್ ಸಂಸ್ಥೆಯವರು ಪಾಲಿಕೆಯ ವಿರುದ್ಧ ಹೂಡಿರುತ್ತಾರೆ. ಘನ ಉಚ್ಚ ನ್ಯಾಯಾಲಯವು ದಿನಾಂಕ: 19.07.2010ರಂದು ಮೆ|| ಕ್ಲಿಯರ್ ಚಾನೆಲ್ ಸಂಸ್ಥೆಯವರ ಮನವಿಯನ್ನು ಜಾಹೀರಾತು ಬೈಲಾ-2006ರ ಉಪವಿಧಿ 3ಎಲ್ (ii) ರಂತೆ ಪರಿಗಣಿಸಿ ಆದೇಶ ತಲುಪಿದ ಆರು ವಾರದೊಳಗಾಗಿ ತೀರ್ಮಾನಿಸಲು ಆದೇಶಿಸಿರುತ್ತದೆ. ಅದರಂತೆ ಈ ಕೆಳಕಂಡ ಕಾರಣಗಳಿಗಾಗಿ ಮಾನ್ಯ ಆಯುಕ್ತರವರು ಪುನಃ ವಿಮರ್ಶೆಯಿಸಿ ಸಂಸ್ಥೆಯವರ ಮನವಿಯನ್ನು ತಿರಸ್ಕರಿಸಿರುತ್ತಾರೆ.

7. ದಿನಾಂಕ: 08.11.2000 ಕರಾರು ಒಪ್ಪಂದ ಅವಧಿ 11 ತಿಂಗಳು ಮಾತ್ರ ಇರುತ್ತದೆ ಹಾಗೂ ಕರಾರಿನ ಅವಧಿ ಚಾಲ್ತಿಯಲ್ಲಿರುವುದಿಲ್ಲ. ದಿನಾಂಕ: 05.09.2005ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುತ್ತಾ, 09 ಗ್ಯಾಂಟ್ರಿಗಳನ್ನು ಅಳವಡಿಸಿಕೊಳ್ಳಲು ಆದೇಶ ನೀಡಿದ ದಿನಾಂಕದಿಂದ ಐದು ವರ್ಷಗಳ ಕಾಲಾವಧಿಗೆ ಅನುಮೋದನೆ ನೀಡಲು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ದಿನಾಂಕ: 05.04.2006ರ ಸಭೆಯ ನಡವಳಿಕೆಗಳಲ್ಲಿ ತೀರ್ಮಾನಿಸಿದ್ದರೂ ಪಾಲಿಕೆಯ ಸಭೆಯ ಅನುಮೋದನೆ ಪಡೆಯದೇ ಇರುವುದರಿಂದ ಸ್ಥಾಯಿ ಸಮಿತಿಯ ತೀರ್ಮಾನವು ಅಸಿಂಧುವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸಂಸ್ಥೆಯವರು ಪಾವತಿಸಿರುವ ರೂ. 2,16,000/-ಗಳನ್ನು ದಿನಾಂಕ: 19.09.2009ರಂದು ಹಿಂದಿರುಗಿಸಲಾಗಿದೆ.



8. ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಸಂಚಾರಿ ದಟ್ಟನೆಯು ಹೆಚ್ಚಾಗಿರುವ ಕಾರಣ ವಾಹನಗಳ ಸುಗಮ ಸಂಚಾರಕ್ಕಾಗಿ ಮೇಲುಸೇತುವೆಗಳು, ಸುರಂಗ ಮಾರ್ಗಗಳು, ಇತ್ಯಾದಿಗಳ ನಿರ್ಮಾಣ ಮಾಡುವುದು ಅವಶ್ಯಕತೆ ಇರುತ್ತದೆ. ಗ್ಯಾಂಟಿಗಳು ಮತ್ತು ಕ್ಯಾಂಟಿಲೀವರ್‌ಗಳನ್ನು ಡೈರಿ ವೃತ್ತ, ವರ್ತುಲ ರಸ್ತೆ ಮತ್ತು ಬಿ.ಟಿ.ಎಂ. ಜಂಕ್ಷನ್‌ನಲ್ಲಿ ಅಳವಡಿಸಿದರೆ ವಾಹನ ಸಂಚಾರಕ್ಕೆ ಧಕ್ಕೆಯುಂಟಾಗುವುದು ಹಾಗೂ ವಾಹನ ಚಾಲಕರ ಗಮನವನ್ನು ಅಪಾಯಕಾರಿಯಾಗಿ ಸೆಳೆಯುವ ಕಾರಣ ಅಪಘಾತಗಳಾಗುವ ಸಂಭಾವಗಳಿರುತ್ತವೆ. ಕಾರ್ಯಪಾಲಕ/ಸಹಾಯಕ ಕಾರ್ಯಪಾಲಕ ಅಭಿಯಂತರರು ಗ್ಯಾಂಟ್ರಿಗಳು ಮತ್ತು ಕ್ಯಾಂಟಿ ಲೀವರ್‌ಗಳನ್ನು ಅಳವಡಿಸಿದರೆ ಅಪಘಾತಗಳು ಉಂಟಾಗುವುದಾಗಿ ಹಾಗೂ ಪಾದಚಾರಿಗಳ ಮಾರ್ಗಕ್ಕೆ ಅಡಚಣೆಯುಂಟಾಗುವುದಾಗಿ ಹಾಗೂ ವಾಹನಗಳ ದಟ್ಟನೆ 2001ರ ಸಾಲಿನಲ್ಲಿ ಇರುವ 15.660 ಲಕ್ಷಗಳ ಸಂಖ್ಯೆಯಿಂದ 2011ನೇ ಸಾಲಿಗೆ 44.18 ಲಕ್ಷಗಳ ಸಂಖ್ಯೆಯೆಂದು ಅಂದಾಜಿಸಲಾಗಿದೆಂದು ವರದಿ ಮಾಡಿರುತ್ತಾರೆ. ರಸ್ತೆಗಳಲ್ಲಿ ಸುಗಮ ಸಂಚಾರ ವ್ಯವಸ್ಥೆ ಕಲ್ಪಿಸಲು ಹಾಗೂ ಪಾದಚಾರಿಗಳ ಸುರಕ್ಷತೆಯನ್ನು ಕಾಪಾಡುವ ಜವಾಬ್ದಾರಿ ಪಾಲಿಕೆಯದ್ದಾಗಿರುತ್ತದೆ ಹಾಗೂ ಗ್ಯಾಂಟ್ರಿ ಮತ್ತು ಕ್ಯಾಂಟಿಲೀವರ್‌ಗಳನ್ನು ಅಳವಡಿಸುವುದು ಸಾರ್ವಜನಿಕ ಹಿತದೃಷ್ಟಿಯಿಂದ ಸೂಕ್ತವಲ್ಲ.

9. ಮೂಲಭೂತ ಸೌಕರ್ಯಗಳೆಂದರೆ ಮೇಲುಸೇತುವೆಗಳು, ಸುರಂಗ ಮಾರ್ಗಗಳು, ಬಸ್ ತಂಗುದಾಣಗಳು, ಪಾದಚಾರಿ ಮೇಲುಸೇತುವೆಗಳು, ಪಾದಚಾರಿ ಮಾರ್ಗಗಳು, ಇತ್ಯಾದಿಗಳನ್ನು ನಿರ್ಮಾಣಮಾಡುವುದು. ಗ್ಯಾಂಟ್ರಿ ಮತ್ತು ಕ್ಯಾಂಟಿಲೀವರ್‌ಳನ್ನು ಅಳವಡಿಸಿದರೆ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳು ಒದಗಿಸಿದಂತೆ ಆಗುವುದಿಲ್ಲ ಹಾಗೂ ಸಂಚಾರಕ್ಕೆ ಧಕ್ಕೆ ಯುಂಟಾಗುತ್ತದೆ.

10. ಜಾಹೀರಾತು ಬೈಲಾಗಳು-2006ರ ಉಪವಿಧಿ 3 ಎಲ್(ii) ರಂತೆ ಪಾಲಿಕೆಯ ಆಯುಕ್ತರವರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಪಾಲಿಕೆಯ ಸ್ವತ್ತುಗಳಲ್ಲಿ ಬಸ್ ತಂಗುದಾಣಗಳು, ಮೇಲುಸೇತುವೆಗಳು, ಗ್ಯಾಂಟ್ರಿಗಳು, ಪೋಲೀಸ್/ಪೋನ್ ಕಿಯಾಸ್ಕ್‌ಗಳು, ಸಾರ್ವಜನಿಕ ಸೌಕರ್ಯಗಳು, ರಸ್ತೆ ವಿಭಜಕಗಳು, ಬೀದಿ ಪೀಠೋಪಕರಣಗಳು, ಇತ್ಯಾದಿಗಳನ್ನು ಅಳವಡಿಸಲು ಅನುಮತಿ ನೀಡಲು ಅವಕಾಶವಿರುತ್ತದೆ. ಗ್ಯಾಂಟ್ರಿಗಳು ಮತ್ತು ಕ್ಯಾಂಟಿಲೀವರ್‌ಗಳನ್ನು ಅಳವಡಿಸಿದರೆ ಪಾಲಿಕೆಯ ಹಿತದೃಷ್ಟಿಯಿಂದ ಮತ್ತು ಸಾರ್ವಜನಿಕರ ಬೇಡಿಕೆಗೆ ಸ್ಪಂದಿಸದಂತೆ ಆಗುವುದಿಲ್ಲ.

11. ಮೆ॥ ಕ್ಲಿಯರ್ ಚಾನೆಲ್ ಸಂಸ್ಥೆಯವರಿಗೆ ದಿನಾಂಕಃ 08.11.2000 ರಲ್ಲಿ 11 ತಿಂಗಳ ಕಾಲಾವಧಿಗೆ ವಹಿಸಿಕೊಡಲಾಗಿದ್ದು, ಈಗಿನ ಪರಿಸ್ಥಿತಿಯಲ್ಲಿ ಮುಂದುವರೆಸುವುದು ಸೂಕ್ತವಾಗಿರುವುದಿಲ್ಲ. ಪಾಲಿಕೆಯ ವ್ಯಾಪ್ತಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರರವರು ಮೇಲುಸೇತುವೆ ನಿರ್ಮಿಸಿರುವ ಕಾರಣ ಗ್ಯಾಂಟ್ರಿಗಳು ಮತ್ತು ಕ್ಯಾಂಟಿಲೀವರ್‌ಗಳನ್ನು ಸಾರ್ವಜನಿಕರ ಹಿತದೃಷ್ಟಿಯಿಂದ ಅಳವಡಿಸಲು ಸೂಕ್ತವಾಗಿರುವುದಿಲ್ಲ.

12. ಕರ್ನಾಟಕ ಮುನಿಸಿಪಲ್ ಕಾಯ್ದೆ 1976, ಸೆಕ್ಷನ್ 443 (10) ರಂತೆ ಕರಾರಿನ ಅವಧಿಯನ್ನು ವಿಸ್ತರಿಸಲು ಬರುವುದಿಲ್ಲ ಹಾಗೂ ಘನ ಉಚ್ಛ ನ್ಯಾಯಾಲಯದ ಆದೇಶದ ದಿನಾಂಕ:08.04.2009 ರಿಟ್ ಅರ್ಜಿ ಸಂಖ್ಯೆ:6473/2009 (ಎಲ್.ಬಿ-ಬಿ.ಎಂ.ಪಿ)ರನ್ವಯ ಮೆ॥ಕ್ಲಿಯರ್ ಚಾನೆಲ್ ಸಂಸ್ಥೆಯವರಿಗೆ ಕಾಲಾವಧಿಯನ್ನು ವಿಸ್ತರಿಸಿ ಬದಲಿ ಸ್ಥಳಗಳನ್ನು ನೀಡುವುದು ಸೂಕ್ತವಲ್ಲ.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಕಾರಣಗಳಿಗಾಗಿ ಮೆ॥ಕ್ಲಿಯರ್ ಚಾನೆಲ್ ಸಂಸ್ಥೆಯವರ ಮನವಿಯನ್ನು ತಿರಸ್ಕರಿಸಲಾಗಿದೆ. ಸದರಿ ಸಂಸ್ಥೆಯವರು ಕೆ.ಎಂ.ಸಿ. ಕಾಯ್ದೆ 444ರಂತೆ ಮೇಲ್ಮನವಿ ಸಲ್ಲಿಸಿದ್ದು ಕಡತವನ್ನು ಮುಂದಿನ ಕ್ರಮಕ್ಕೆ ಸಲ್ಲಿಸಿದೆ ಹಾಗೂ ತಿರಸ್ಕರಿಸಬಹುದಾಗಿದೆ. ಈ ಬಗ್ಗೆ ಅಪೀಲುಗಳ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:20-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು, 2008ರಲ್ಲಿ ಡೈರಿ ಸರ್ಕಲ್‌ನಿಂದ ಬನ್ನೇರುಘಟ್ಟ ರಸ್ತೆವರೆವಿಗೆ ಜಾಹೀರಾತು ಪ್ರದರ್ಶಿಲು ಅನುಮತಿ ನೀಡಿರುವುದಾಗಿಯು, ಈ ಅನುಮತಿಯು 7 ವರ್ಷಗಳ ಅವಧಿಗೆ ಇರುವುದಾಗಿಯು ತಿಳಿಸಿದ್ದು, ಈ ಸ್ಥಳದಲ್ಲಿ ಫ್ಲೈಓವರ್ ನಿರ್ಮಾಣವಾದ ಕಾರಣ ಬಿಡಿಎರವರು ತಮ್ಮ ಜಾಹೀರಾತುಗಳನ್ನು ತೆಗೆದುಹಾಕಿರುವುದಾಗಿ, ತಾವು ಈ ಸಂಬಂಧ ಬಹಳಷ್ಟು ಹಣ ವೆಚ್ಚಮಾಡಿರುವುದಾಗಿ ತಿಳಿಸಿದ್ದು, ತಮ್ಮೊಂದಿಗೆ ಹಂಚಿಕೆಯಾಗಿದ್ದ ಇತರೆ ಪರವಾನಗಿದಾರರು ಈಗಾಗಲೇ ಅನುಮತಿಯನ್ನು ಉಪಯೋಗಿಸುತ್ತಿದ್ದು, ತಮಗೆ ಮಾತ್ರ ಅನ್ಯಾಯವಾಗಿರುವುದಾಗಿ ತಿಳಿಸಿದ್ದು, ಈ ಸಂಬಂಧ ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ನ್ಯಾಯಾಲಯವು ಪರಿಶೀಲಿಸಲು ಆದೇಶ ನೀಡಿದ್ದು, ಈ ಮೇರೆಗೆ ಪರಿಗಣಿಸಲು ಕೋರಿರುತ್ತಾರೆ. ತಾವು ಸಾಕಷ್ಟು ಹಣವನ್ನು ವೆಚ್ಚಮಾಡಿರುವುದರಿಂದ ತಮಗೆ ಉಂಟಾಗಿರುವ ನಷ್ಟವನ್ನು ಪರಿಹರಿಸಿಕೊಡಬೇಕೆಂದು ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಹಾಯಕ ಆಯುಕ್ತರು (ಜಾಹೀರಾತು)ರವರು ಮನವಿದಾರರ ಹೇಳಿಕೆ ಸುಳ್ಳೆಂದು ತಿಳಿಸಿ ಕೇವಲ 11 ತಿಂಗಳ ಅವಧಿಗೆ ಮಾತ್ರ ನೀಡಿರುವುದಾಗಿ ತಿಳಿಸಿರುತ್ತಾರೆ. ಇವರ ಪರವಾನಗಿ ಅವಧಿ ಕೇವಲ 11 ತಿಂಗಳುಗಳು ಮಾತ್ರವಾಗಿದ್ದು, ಇವರ ನಷ್ಟಕ್ಕೆ ನಗರ ಪಾಲಿಕೆಯು ಯಾವುದೇ ವಿದವಾದ ಜವಾಬ್ದಾರಿಯಲ್ಲವೆಂದು ತಿಳಿಸಿರುತ್ತಾರೆ. ಬೈಲಾಗಳ



ಪ್ರಕಾರವಷ್ಟೆ ಅವರು ನಿರ್ಮಾಣ ಮಾಡಿರುವುದರಿಂದ ಅವರು ನಷ್ಟವುಂಟಾಗಿರುವ ಬಗ್ಗೆ ನೀಡಿರುವ ಹೇಳಿಕೆ ತಪ್ಪು ಎಂದು ತಿಳಿಸಿರುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ಪಾಲಿಕೆ ವ್ಯಾಪ್ತಿಯಲ್ಲಿರುವ ಎಲ್ಲಾ ಗ್ಯಾಂಟ್ರಿಗಳನ್ನು ತೆಗೆದುಹಾಕಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಪಾಲಿಕೆ ವತಿಯಿಂದ ಸೂಕ್ತ ಹಿಂಬರಹವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. ಜಾಹೀರಾತುಗಳ ಬೈಲ್ ಪ್ರಕಾರ ಕ್ರಮ ಜರುಗಿಸಲು ಸಹ ಕ್ರಮಕೈಗೊಳ್ಳಬಹುದೆಂದು ನ್ಯಾಯಾಲಯ ಆದೇಶ ನೀಡಿರುತ್ತದೆ. ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಪಡಿಸತಕ್ಕಂತಹ ಪ್ರಕರಣಗಳಲ್ಲಿ ಮಾತ್ರ ಅನುಮತಿ ನೀಡಲು ಪರಿಗಣಿಸಬಹುದೆಂದು ತಿಳಿಸಿರುತ್ತಾರೆ. ಮರು ಪರಿಶೀಲಿಸುವ ಸಂಬಂಧ ಅರ್ಜಿದಾರರಿಗೆ ತಿಳುವಳಿಕೆಯನ್ನು ನೀಡಲಾಗಿರುತ್ತದೆ. ಹಾಗೂ ಆಯುಕ್ತರ ಆದೇಶದ ಅನುಸಾರ ಇತ್ತೀಚಿನ ವಾಹನ ಸಂಚಾರ ದಟ್ಟಣೆಯ ಮೇರೆಗೆ ಯಾವುದೇ ವಿಧವಾದ ಜಾಹೀರಾತುಗಳ ಅನುಮತಿಯನ್ನು ಮುಂದುವರೆಸಲು ಸಾಧ್ಯವಿಲ್ಲವೆಂದು ಮನವಿಯನ್ನು ತಿರಸ್ಕರಿಸಲು ಆದೇಶಿಸಿರುತ್ತಾರೆ.

ಅರ್ಜಿದಾರರು ಗ್ಯಾಂಟ್ರೀಸ್‌ಗಳು ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲಾ ಸ್ಥಳದಲ್ಲಿಯು ಇರುವುದು ಸಾರ್ವಜನಿಕರ ಹಿತದೃಷ್ಟಿಯಿಂದ ಸೂಕ್ತವೆಂದು ತಿಳಿಸಿ ತಾವು ಕೋಟ್ಯಾಂತರ ಹಣವನ್ನು ಹೂಡಿದ್ದು 7 ವರ್ಷಗಳ ಅವಧಿಗೆ ಅನುಮತಿ ನೀಡಿ ಪ್ರಸ್ತುತ 11 ತಿಂಗಳಿಗೆ ಮಾತ್ರ ನೀಡಿರುವುದಾಗಿ ತಿಳಿಸಿರುವುದು ಸರಿಯಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಇತರೆ ಸಂಸ್ಥೆಗಳಿಗೆ 9 ವರ್ಷಗಳ ಅವಧಿಗೆ ಅನುಮತಿ ನೀಡಿದ್ದು ತಮಗೆ ಮಾತ್ರ ಅನುಮತಿ ನೀಡಿಲ್ಲವೆಂದು ತಿಳಿಸಿರುತ್ತಾರೆ. ತಮ್ಮ ಬಾಕಿ ಇರುವ ಕಂದಾಯವನ್ನು ಪಾವತಿಸಲು ಹಾಗೂ ಈ ಸಂಬಂಧ ನಕ್ಷೆಯನ್ನು ನೀಡಲು ಆಯುಕ್ತರು ಸೂಚಿಸಿದ್ದು ಈ ಮೇರೆಗೆ ತಾವ ಪ್ರತಿಕ್ರಿಯಿಸಿದ್ದು, ಆದರೆ ತಮ್ಮ ಮನವಿಯನ್ನು ಪರಿಗಣಿಸಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಬೈಲಾ ಪುಸ್ತಕದಲ್ಲಿ ಗ್ಯಾಂಟ್ರೀಸ್‌ಗೆ ಅನುಮತಿ ನೀಡಲು ಅವಕಾಶವಿರುವುದಾಗಿ ತಿಳಿಸಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಕಾನೂನು ಸಲಹೆಗಾರರು ಬೈಲಾ ಪ್ರಕಾರ ಕ್ರಮ ಜರುಗಿಸಲು ಸಲಹೆ ನೀಡಿರುತ್ತಾರೆ.

ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ಫೋಟೋವನ್ನು ಉದಾಹರಿಸುತ್ತಾ ತಾವು ನಾಮ ಫಲಕದ ಹಿಂಭಾಗದಲ್ಲಿ ಮಾತ್ರ ಜಾಹೀರಾತು ಪ್ರದರ್ಶಿಸುತ್ತಿದ್ದು, ಮುಂಭಾಗದಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಅನುಕೂಲವಾಗುತ್ತದೆಂದು ತಿಳಿಸಿದ್ದು, ಕೌನ್ಸಿಲ್ ತಮ್ಮ ಮನವಿಯನ್ನು ತಿರಸ್ಕರಿಸಿರುವುದಾಗಿ ತಿಳಿಸಿದ್ದು, ಈ ಸಂಬಂಧದ ಆದೇಶದ ಪ್ರತಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. 2008ರಲ್ಲಿ ಆದೇಶವೊಂದನ್ನು ನೀಡಿ ಬಾಕಿ ಪಾವತಿಸಲು ತಿಳಿಸಿರುತ್ತಾರೆ.

ಸಹಾಯಕ ಆಯುಕ್ತರು (ಜಾಹೀರಾತು)ರವರು ಡಬ್ಲ್ಯೂಪಿ ರೀತ್ಯ ಯಾವುದೇ ಗ್ಯಾಂಟ್ರಿಗಳಿಗೆ ಅನುಮತಿ ನೀಡಕೂಡದೆಂದು ತಿಳಿಸಿದ್ದು, ಈ ಮೇರೆಗೆ ಕ್ರಮ ಕೈಗೊಳ್ಳಲಾಗಿದೆಯೆಂದು ತಿಳಿಸಿರುತ್ತಾರೆ.

2001ರ ಅವಧಿಯಿಂದ ಇತರೆ ಸಂಸ್ಥೆಗಳಿಗೆ 9 ವರ್ಷಗಳ ಅವಧಿಯಲ್ಲಿ ಗ್ಯಾಂಟ್ರಿ ಸೌಲಭ್ಯ ಉಪಯೋಗಿಸಿರುವ ಬಗ್ಗೆ ವರದಿ ಪಡೆಯುವುದು.

**<u>ನಿರ್ಣಯ:</u>**- ಅರ್ಜಿದಾರರ ಮತ್ತು ಅಧಿಕಾರಿಗಳ ವಾದ ಮತ್ತು ಕಡತದಲ್ಲಿರುವ ವರದಿಗಳನ್ನು ಕೂಲಂಕಷವಾಗಿ ಪರಿಶೀಲಿಸಿತು. ರಿಟ್ ಪಿಟಿಷನ್ ಸಂಖ್ಯೆ:6473/2009ರ ಆದೇಶದಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿ ಗ್ಯಾಂಟ್ರಿಗಳನ್ನು ನಿರ್ಮಾಣ ಮಾಡುವುದನ್ನು ನಿಷೇಧ ಮಾಡಲಾಗಿರುವುದರಿಂದ ನಿಮ್ಮ ಸಂಸ್ಥೆಗೆ ಅನುಮತಿ ನೀಡಲು ಸಾಧ್ಯವಿಲ್ಲವೆಂದು ದಿನಾಂಕ:17-09-2009ರಂದು ನೀಡಿರುವ ಹಿಂಬರಹ ಹಾಗೂ ದಿನಾಂಕ:05-04-2006ರ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಿರ್ಣಯ ಮತ್ತು 28-04-2006ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ನಿರ್ಣಯಗಳನ್ನು ಮಹಾನಗರ ಪಾಲಿಕೆ ಸಭೆಯು ತಿರಸ್ಕರಿಸಿರುವುದಾಗಿ ದಿನಾಂಕ:28-10-2010ರಂದು ನಿಡಿರುವ ಹಿಂಬರಹವನ್ನು ಪರಿಶೀಲಿಸಲಾಗಿ ಸದರಿ ರಿಟ್ ಪಿಟಿಷನ್‌ನಲ್ಲಿ
ಆಗಿರುವ ಆದೇಶವನ್ನು ಗಮನಿಸಲಾಗಿ ಪಾಲಿಕೆಯ ವ್ಯಾಪ್ತಿಯಲ್ಲಿ ಗ್ಯಾಂಟ್ರಿಗಳನ್ನು ನಿರ್ಮಾಣ ಮಾಡುವ ಬಗ್ಗೆ ನಿಷೇಧ ಮಾಡಿರುವುದು ಕಂಡು ಬರುವುದಿಲ್ಲ ಹಾಗೂ ಸಮಿತಿಯ ನಿರ್ಣಯಗಳನ್ನು ಮಹಾನಗರ ಪಾಲಿಕೆಯ ಸಭೆಯ ಮುಂದೆ ಮಂಡಿಸಿಲ್ಲದಿದ್ದರೂ ಸಹ ತಪ್ಪಾಗಿ ಹಿಂಬರಹಗಳನ್ನು ನೀಡಿರುವುದನ್ನು ಸಮಿತಿಯು ಗಂಭೀರವೆಂದು ಪರಿಗಣಿಸಿರುತ್ತದೆ.

ಮುಂದುವರೆದಂತೆ ಮೆ॥ ಗ್ರೀನ್‌ಲೈನ್ ಸಂಸ್ಥೆಯವರು ನಗರ ಪಾಲಿಕೆಯ ವ್ಯಾಪ್ತಿಯಲ್ಲಿ 7 ವರ್ಷಗಳ ಕಾಲ ಗ್ಯಾಂಟ್ರಿಗಳನ್ನು ಅಳವಡಿಸಿಕೊಂಡು ನಂತರ ಇನ್ನೂ ಎರಡು ವರ್ಷಗಳ ಅವಧಿಯನ್ನು ಮುಂದುವರೆಸುವಂತೆ ಕೋರಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿರುವುದರಿಂದ ಮೆ॥ ಗ್ರೀನ್‌ಲೈನ್ ಸಂಸ್ಥೆಯವರು ರಿಟ್ ಪಿಟಿಷನ್ ದಾಖಲಿಸಿರುತ್ತಾರೆ. ಸದರಿ ರಿಟ್ ಪಿಟಿಷನ್‌ನಲ್ಲಿ ಸದರಿಯವರ ಗ್ಯಾಂಟ್ರಿಗಳನ್ನು ಮುಂದುವರೆಸಬಾರದೆಂದು ಆದೇಶವಿತ್ತಿರುತ್ತದೆ ಹಾಗೂ ಕಡತದಲ್ಲಿರುವ ರಿಟ್ ಪಿಟಿಷನ್ ಸಂಖ್ಯೆ:6473/2009ರ ಪ್ರತಿಯಿಂದ ಮೆ॥ ಗ್ರೀನ್‌ಲೈನ್ ಸಂಸ್ಥೆಯವರು ನಗರ ಪಾಲಿಕೆಯ ವ್ಯಾಪ್ತಿಯಲ್ಲಿ 7 ವರ್ಷಗಳ ಕಾಲ ಗ್ಯಾಂಟ್ರಿಗಳನ್ನು ಅಳವಡಿಸಿಕೊಂಡಿರುವುದು ಕಂಡು ಬರುತ್ತದೆ. ಮೆ॥ಕ್ಲಿಯರ್ ಚಾನೆಲ್ ಔಟ್‌ಡೋರ್ ಸಂಸ್ಥೆಯವರು ರಿಟ್ ಪಿಟಿಷನ್ ಸಂಖ್ಯೆ:6473/2009ರ ಆದೇಶವನ್ನು ಪ್ರಶ್ನಿಸಿ ಘನ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:103/2010ನ್ನು ದಾಖಲಿಸಿದ್ದು, ಸದರಿ ಪ್ರಕರಣದಲ್ಲಿ ಘನ ಉಚ್ಚನ್ಯಾಯಾಲಯವು ನಗರ ಪಾಲಿಕೆಯು ಸದರಿ ಸಂಸ್ಥೆಯವರಿಗೆ ಗ್ಯಾಟ್ರಿಗಳನ್ನು ಅಳವಡಿಸುವ ಬಗ್ಗೆ 6 ವಾರಗಳೊಳಗಾಗಿ ಸೂಕ್ತ ಕ್ರಮ ಕೈಗೊಳ್ಳುವಂತೆ ಆದೇಶವಿತ್ತಿರುವುದು ಕಂಡು ಬರುತ್ತದೆ. ಮೇಲ್ಕಂಡ ಎಲ್ಲಾ ಕಾರಣಗಳಿಂದ ಮೆ॥ಕ್ಲಿಯರ್ ಚಾನೆಲ್ ಔಟ್‌ಡೋರ್ ಸಂಸ್ಥೆಯವರಿಗೆ 9 ಗ್ಯಾಂಟ್ರಿಗಳನ್ನು 5 ವರ್ಷಗಳ ಕಾಲ ನಗರ ಪಾಲಿಕೆಯಲ್ಲಿ ಅಳವಡಿಸಿಕೊಳ್ಳಲು ಆಯುಕ್ತರು ಅನುಮತಿ ನೀಡಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

-5-

<u>04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/15/2010-11</u>

ನಂ.70, ವಾರ್ಡ್-51, ಗಂಗಮ್ಮನಗುಡಿ ಬಡಾವಣೆ, ಈ ಸ್ವತ್ತಿನ ಕಂದಾಯವನ್ನು 2006-07ನೇ ಸಾಲಿಗೆ ಅನ್ವಯವಾಗುವಂತೆ ಹಾಲಿ ವಾರ್ಷಿಕ ಮೌಲ್ಯ ರೂ.10800/-(ವಸತಿ)ಗಳಿಂದ ರೂ.52020/-(ವಸತಿಗಳಿಗೆ) ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿ ಸೂಚನಾ ಪತ್ರವನ್ನು ಜಾರಿ ಮಾಡಿದ್ದು, ಸದರಿ ಕಂದಾಯ ಪರಿಷ್ಕರಣೆಯ ವಿರುದ್ಧ ಅರ್ಜಿದಾರರಾದ ಶ್ರೀ.ಕೃಷ್ಣ ಮೂರ್ತಿಯವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:10-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರಿಗೆ ನೋಟೀಸ್ ಜಾರಿಯಾಗಿರುವುದಿಲ್ಲದಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

ಪ್ರಕರಣವನ್ನು ಕರೆಯಲಾಯಿತು. ಈ ಆಸ್ತಿಯು ಇ ವಲಯದಲ್ಲಿ ಬಂದಿದ್ದು ಎಸ್.ಎ.ಎಸ್. ಪ್ರಕಾರ ಕಂದಾಯವನ್ನು ನಿಗಧಿಪಡಿಸಿರುವುದಾಗಿ, ಈ ಆಸ್ತಿಯಲ್ಲಿ ಸ್ವಂತ ಹಾಗೂ ಬಾಡಿಗಗೆ ನೀಡಿದೆ. ಅರ್ಜಿದಾರರು ಈ ಆಸ್ತಿಯಲ್ಲಿ ಬಾಡಿಗೆ ನೀಡಿಲ್ಲವೆಂದು ಮೊದಲ ಮಹಡಿ ಹೆಂಚಿನ ಛಾವಣಿ ಹೊಂದಿಲ್ಲವೆಂದು ಟೈಲ್ಸ್ ಅಳವಡಿಸಿದ್ದು ಇದು ಕೇವಲ ಹಾಲ್ ಆಗಿದ್ದು ಇಲ್ಲಿ ಲೈಟ್ ಆಗಲಿ ಕಿಟಕಿಗಳಾಗಲಿ ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿಯವರು ಸ್ಥಳ ಪರಿಶೀಲಿಸಿ 2006ರಿಂದ ಕಂದಾಯವನ್ನು ಕಡಿಮೆ ಮಾಡಲು ಕೋರಿದ್ದು ಆದರೆ ಮನವಿಯನ್ನು ಸಲ್ಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ನಿರ್ಣಯ:- ದಿನಾಂಕ:05-03-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು. ಬಸವನಗುಡಿ ವಲಯದ ವಾರ್ಡ್-51ರ ಗಂಗಮ್ಮನಗುಡಿ ಬಡಾವಣೆಯಲ್ಲಿರುವ ಸ್ವತ್ತಿನ ಸಂಖ್ಯೆ:70ರ ಕಂದಾಯವನ್ನು ರೂ.52020/-(ವಸತಿ)ಗಳಿಂದ ರೂ.42100/-ಗಳಿಗೆ ಪುನರ್ ಪರಿಷ್ಕರಿಸಿ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗಧಿಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>05.ವಿಷಯ:ಸಂಖ್ಯೆ:ಅಸ್ಥಾಸ/(ತೆ)/16/2010-11</u>

ನಂ.132/1, ವಾರ್ಡ್-143, ವಿ.ವಿ.ಪುರಂ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಕೆಂಪೇಗೌಡನಗರ ಉಪ ವಿಭಾಗದ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳಾದ ಕಂದಾಯ ಅಧಿಕಾರಿ (ದಕ್ಷಿಣ) ವಿಭಾಗರವರು ದಿನಾಂಕ:23-12-2006ರಂದು ವಿಚಾರಣೆ ನಡೆಸಿ ನಿಗಧಿಪಡಿಸಲಾಗಿರುವ ಕಂದಾಯ ವಾರ್ಷಿಕ ಮೌಲ್ಯ ರೂ.1,12,320/-(ವಸತಿಯೇತರ)ಗಳಿಂದ ರೂ.1,02,367/-(ವಸತಿಯೇತರ)ಗಳಿಗೆ ದಿನಾಂಕ:1-4-2006ರಿಂದ ಅನ್ವಯವಾಗುವಂತೆ ಜಾರಿಗೊಳಿಸಿದ್ದು, ಪ್ರಥಮ ಅಫೀಲು ಅಧಿಕಾರಿಗಳ ತೀರ್ಮಾನದ ವಿರುದ್ಧ ಖಾತೆದಾರರಾದ ಶ್ರೀಮತಿ.ವೇದರಾಜುರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:20-01-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿರುತ್ತಾರೆ, ತಮ್ಮ ಹೇಳಿಕೆಯನ್ನು ನೀಡಿದ್ದು ಎಸ್.ಎ.ಎಸ್.ಪ್ರಕಾರ ಸರಿಯಾದ ಅಳತೆ ನಿಡಿರುವುದಾತಿಯು, ಈ ಸ್ವತ್ತನ್ನು ಬಾಡಿಗೆಗೆ ನೀಡಿದ್ದು, ಇದು ಹಳೆಯ ಕಟ್ಟಡವಾಗಿದ್ದು ರಿಯಾಯಿತಿ ಸಮಂಜಸವಾಗಿ ನೀಡದೆ ಇದ್ದು, ಆಸ್ತಿಯ ಅಳತೆ ತಪ್ಪಾಗಿ ನಮೂದಿಸಿ ಕಂದಾಯ ನಿಗಧಿ ಪಡಿಸಿರುವುದು ತಪ್ಪಾಗಿರುವುದಾಗಿ ತಿಳಿಸಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿರವರು ಆಸ್ತಿಯ ಮಾಲೀಕರು ದಾಖಲೆಗಳನ್ನು ನೀಡಿರುವುದಾಗಿ ತಿಳಿಸಿರುತ್ತಾರೆ.

“ ಸ್ಥಳಪರಿಶೀಲನೆಗಾಗಿ ಮುಂದೂಡಿದೆ”

<u>**ನಿರ್ಣಯ**</u>:- ದಿನಾಂಕ:05-04-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಈಗಾಗಲೇ ಪ್ರಥಮ ಅಫೀಲು ಅಧಿಕಾರಿಗಳು ದಿನಾಂಕ:23-12-2006ರಂದು ಕಟ್ಟಡದ ಅಳತೆಯ ಬಗ್ಗೆ ಸ್ಥಿರೀಕರಿಸಿದ್ದು ಸವಕಳಿ ನೀಡಬೇಕಾಗಿರುವ ಬಗ್ಗೆ ಪ್ರಸ್ತಾಪಿಸಿರುವುದಿಲ್ಲ. ಆದುದರಿಂದ ಪ್ರಥಮ ಅಫೀಲು ಅಧಿಕಾರಿಗಳು ಸ್ಥಿರೀಕರಿಸಿರುವ ಕಟ್ಟಡದ ಅಳತೆಗುನುಗುಣವಾಗಿ, ಸದರಿ ಕಟ್ಟಡವನ್ನು ಕಡತದಲ್ಲಿರುವ ದಾಖಲೆಯ ಪ್ರಕಾರ 1939ರಲ್ಲಿ ನಿರ್ಮಾಣ ಮಾಡಿರುವುದಾಗಿ ಕಂಡು ಬರುತ್ತಿರುವುದರಿಂದ ಸವಕಳಿಯನ್ನು 1939ರಿಂದ ನೀಡಿ ದಿನಾಂಕ:1-4-2006ರಿಂದ ಜಾರಿಗೆ ಬರುವಂತೆ ಕಂದಾಯವನ್ನು ಮರು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>06.ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2010-11</u>

ಆಸ್ತಿ ಸಂಖ್ಯೆ:1412, 23ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತದ ವಾರ್ಡ್-165ರ ಕಂದಾಯವನ್ನು ಪರಿಷ್ಕರಿಸಿರುವ ವಿರುದ್ಧ ಮಾಲೀಕರಾದ ಶ್ರೀ.ಬಿ.ಎಸ್.ಶ್ರೀನಿವಾಸ್ ಮತ್ತು ಶ್ರೀ.ಮತಿ.ಎಸ್.ವಿಜಯಲಕ್ಷ್ಮಿರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:19-01-2011ರ ಟಿಪ್ಪಣಿ.



ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ತಮ್ಮ ಹೇಳಿಕೆಯಲ್ಲಿ ಮೊದಲು ನೆಲಮಹಡಿ ಇದ್ದಾಗ ಕಂದಾಯ ಕಡಿಮೆ ಇದ್ದು, ಮೊದಲ ಮಹಡಿ ಕಟ್ಟಿದ ನಂತರ ಕಂದಾಯ ಜಾಸ್ತಿಯಾಗಿರುತ್ತದೆಂದು ತಿಳಿಸಿರುತ್ತಾರೆ. ನೆಲಮಹಡಿ 848 ಚ.ಅಡಿ, ಮೊಲನೇ ಮಹಡಿ 848 ಚ.ಅಡಿ. ಶೆಡ್ 160 ಚ.ಅಡಿ ಒಟ್ಟು 1700ಚ.ಅಡಿಮನೆ ಇರುತ್ತದೆಂದು ತಿಳಿಸಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ನೆಲಮಹಡಿ ಮತ್ತು ಮೊದಲನೇ ಮಹಡಿಯ ಅಳತೆಯನ್ನು ಅರ್ಜಿದಾರರು ನೀಡಿದ ಮೇರೆಗೆ ಕಂದಾಯ ನಿಗಧಿಪಡಿಸಿರುವುದಾಗಿ ಹೇಳಿರುತ್ತಾರೆ. ಪ್ರಥಮ ಅಪೀಲಿನಲ್ಲಿ ಅರ್ಜಿದಾರರು ಗೈರು ಹಾಜರಾಗಿದ್ದ ಕಾರಣ ಹಾಲಿ ನಿಗಧಿಪಡಿಸಿರುವ ಕಂದಾಯವನ್ನು ಸ್ಥಿರೀಕರಿಸುವಂತೆ ಸಹ ಕಂದಾಯಲ ಅಧಿಕಾರಿಯವರು ತಿಳಿಸಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿಯವರು ಸ್ಥಳ ಪರಿಶೀಲಿಸಿ ವರದಿ ನೀಡುವುದೆಂದು ಆದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು.

<u>**ನಿರ್ಣಯ**</u>:- ಸಹಾಯಕ ಕಂದಾಯ ಅಧಿಕಾರಿ (ಬನಶಂಕರಿ) ಉಪ ವಿಭಾಗರವರು ಆಸ್ತಿ ಸಂಖ್ಯೆ:1412, 23ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ವಾರ್ಡ್-165ರ ಕಂದಾಯ ಲೆಕ್ಕಾಚಾರ ವಿವರದ ವರದಿಯನ್ನು ನೀಡಿದ್ದು, ಸದರಿ ವರದಿಯನ್ನು ಕಡತದ ಪುಟ ಸಂಖ್ಯೆ:22ರಲ್ಲಿ ಲಗತ್ತಿಸಿದ್ದು, ಸದರಿ ವರದಿಯನ್ವಯ ಕಂದಾಯವನ್ನು ನಿಗಧಿಪಡಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ತೆ)/19/2010-11</u>

ನಂ.132/3, ವಾರ್ಡ್-143, ವಿ.ವಿ.ಪುರಂ, ರಾಷ್ಟ್ರೀಯ ವಿದ್ಯಾಲಯ ರಸ್ತೆ, ಕೆಂಪೇಗೌಡನಗರ ಉಪ ವಿಭಾಗದ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳಾದ ಕಂದಾಯ ಅಧಿಕಾರಿ (ದಕ್ಷಿಣ) ವಿಭಾಗರವರು ದಿನಾಂಕ:23-12-2006ರಂದು ವಿಚಾರಣೆ ನಡೆಸಿ ನಿಗಧಿಪಡಿಸಲಾಗಿರುವ ಕಂದಾಯ ವಾರ್ಷಿಕ ಮೌಲ್ಯ ರೂ.1,12,320/-(ವಸತಿಯೇತರ)ಗಳಿಂದ ರೂ.1,10,592/-(ವಸತಿಯೇತರ)ಗಳಿಗೆ ದಿನಾಂಕ:1-4-2006ರಿಂದ ಅನ್ವಯವಾಗುವಂತೆ ಜಾರಿಗೊಳಿಸಿದ್ದು, ಪ್ರಥಮ ಅಫೀಲು ಅಧಿಕಾರಿಗಳ

ತೀಮಾನದ ವಿರುದ್ಧ ಖಾತೆದಾರರಾದ ಶ್ರೀ.ವೆಂಕಟೇಶ್‌ರಾಜುರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ರಿಯಾಯಿತಿ ನೀಡುವಲ್ಲಿ ತಪ್ಪಾಗಿರುವುದಾಗಿ ತಿಳಿಸಿ ಕೇವಲ ರಿಯಾಯಿತಿಯನ್ನು ಮಾತ್ರ ಸಮಂಜಸವಾಗಿ ನೀಡಿದರೆ ಸರಿ ಎಂದು ತಿಳಿಸಿರುತ್ತಾರೆ.

<u>ನಿರ್ಣಯ</u>:- ದಿನಾಂಕ:05-04-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಹಾಗೂ ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಸದರಿ ಕಟ್ಟಡವನ್ನು 1979ರಲ್ಲಿ ನಿರ್ಮಾಣ ಮಾಡಿರುವುದು ಕಡತದಲ್ಲಿ ಲಗತ್ತಿಸಿರುವ ನಕ್ಷೆಯಿಂದ ಕಂಡುಬರುತ್ತದೆ. ಈಗಾಗಲೇ ಪ್ರಥಮ ಅಪೀಲು ಅಧಿಕಾರಿಗಳು ದಿನಾಂಕ:23-12-2006ರಂದು ಕಟ್ಟಡದ ಅಳತೆಯ ಬಗ್ಗೆ ಸ್ಥಿರೀಕರಿಸಿರುವುದರಿಂದ, ಸದರಿ ಅಳತೆಯನ್ನು ಮುಂದುವರೆಸುತ್ತಾ, ಕಟ್ಟಡದ ಸವಕಳಿಯನ್ನು 1979ರ ನಿರ್ಮಾಣದ ಮೇಲೆ ಪರಿಗಣಿಸಿ ದಿನಾಂಕ:1-4-2006ರಿಂದ ಜಾರಿಗೆ ಬರುವಂತೆ ಕಂದಾಯವನ್ನು ಮರು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>08.ವಿಷಯ:ಸಂಖ್ಯೆ:ಅಸ್ಥಾಸ/(ಖಾತೆ)/20/2010-11</u>

ನಂ.71, 5ನೇ ಮುಖ್ಯರಸ್ತೆ, ಜಯನಗರ ಹೆಚ್.ಬಿ.ಸಿ.ಎಸ್. ಪದ್ಮನಾಭನಗರ ಈ ಸ್ವತ್ತಿನ ಖಾತೆಯನ್ನು ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಶ್ರೀ.ಸಂತೋಷ ಎಂಬುವವರ ಹೆಸರಿಗೆ ವರ್ಗಾಯಿಸಿದ್ದು, ಸದರಿ ಸ್ವತ್ತಿನಲ್ಲಿ ನಾವೇ ವಾಸವಾಗಿರುವುದರಿಂದ ಬೇರೆಯವರ ಹೆಸರಿಗೆ ಆಗಿರುವ ಖಾತಾವನ್ನು ರದ್ದು ಪಡಿಸಿ ತಮ್ಮ ಹೆಸರಿಗೆ ವರ್ಗಾಯಿಸಕೊಡುವಂತೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ಆಸ್ತಿಯ ಮಾಲೀಕರಿಗೆ 3 ಜನ ಮಕ್ಕಳಿಗೆ ವಿಲ್ ಮಾಡಿದ್ದು ಈ ಪೈಕಿ ಶ್ರೀ.ಸಂತೋಷ್‌ರವರು ಇಬ್ಬರು ಮಕ್ಕಳಿಗೆ ತಿಳಿಸದೆ ಅವರ ಹೆಸರಿಗೆ ಖಾತೆ ಮಾಡಿಕೊಂಡಿದ್ದು, 2ನೇ ವಿಲ್‌ನಲ್ಲಿ ಮೊದಲನೆ ವಿಲ್‌ನ ಬದಲಿಗೆ ಶ್ರೀ.ಅಶ್ವತ್ಥನಾರಾಯಣರಾವ್‌ರವರ ಹೆಸರಿಗೆ ಪೂರ್ತಿ ಖಾತೆಯನ್ನು ವರ್ಗಾಯಿಸಲು ಕೋರಿರುತ್ತಾರೆ.

ಸಂಬಂಧಪಟ್ಟ ಸಹ ಕಂದಾಯ ಅಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ಆಸ್ತಿಯ ಮಾಲೀಕರಾದ ಶ್ರೀ.ರಾಮಸ್ವಾಮಿಯವರ ಮಕ್ಕಳು ನೀಡಿದ ಎನ್.ಓ.ಸಿ. ಆಧಾರದ ಮೇಲೆ ಖಾತೆ ವರ್ಗಾಯಿಸಿರುವುದಾಗಿ ತಿಳಿಸಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲ ಇದ್ದು ಮೃತ ತಂದೆಯ ಮರಣ ಸಮರ್ಥನಾ ಪತ್ರದ ಆಧಾರ, ನ್ಯಾಯಾಲಯದ ತೀರ್ಮಾನದ ರೀತ್ಯ ಖಾತೆ ರದ್ದು ಪಡಿಸುವ ಷರತ್ತುಗೊಳಪಡಿಸಿ ಖಾತೆ ವರ್ಗಾಹಿಸಿರುವುದಾಗಿ ತಿಳಿಸಿರುತ್ತಾರೆ.



ಪ್ರಕರವು ನ್ಯಾಯಾಲಯದಲ್ಲಿ ಬಾಕಿ ಇರುವುದಾಗಿ ತಿಳಿದು ಬಂದಿರುತ್ತದೆ. ಉಪ ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ಖಾತೆ ಕುರಿತಂತೆ ನ್ಯಾಯಾಲಯವು ಅಂತಿಮವಾಗಿ ತೀರ್ಪು ನೀಡಿದ ನಂತರ ಮುಂದಿನ ಕ್ರಮ ವಹಿಸಬಹುದೆಂದು ತಿಳಿಸಿರುತ್ತಾರೆ.

‘‘ಆದೇಶಕ್ಕಾಗಿ ಕಾಯ್ದಿರಿಸಿದೆ’’

<u>09.ವಿಷಯ:ಸಂಖ್ಯೆ:ಅಸ್ಥಾಸ/(ಕಾಮಗಾರಿ)/21/2010-11</u>

ನಂ.27, ಹೊಸ ನಂ.14, 1ನೇ ಮುಖ್ಯರಸ್ತೆ, ದ್ವಾರಕನಗರ, ಸ್ಕೈಲೈನ್ ಅಪಾರ್ಟ್‌ಮೆಂಟ್, ಚಂದ್ರಾಲೇಔಟ್, ಬೆಂಗಳೂರು ಈ ಸ್ವತ್ತಿನಲ್ಲಿ ಮಂಜೂರಾದ ನಕ್ಷೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ಶ್ರೀ.ಪ್ರದೀಪ್ ಎಸ್.ವಡೆಯರ್ ರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ವಾದಿ ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಅರ್ಜಿದಾರರ ಪರವಾಗಿ ವಕೀಲರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿದ್ದು, ಪ್ರತಿವಾದಿಗಳು ಸಹ ಈ ಸಂದರ್ಭದಲ್ಲಿ ತಮ್ಮ ಹೇಳಿಕೆಯನ್ನು ಸಹ ನೀಡಿರುತ್ತಾರೆ. ನಿಯಮಗಳನುಸಾರ ಪ್ರತಿವಾದಿಯು ನಿಯಬಾಹಿರವಾಗಿ ಕಟ್ಟಡ ನಿರ್ಮಿಸುತ್ತಿದ್ದು, ಇದು ತಪ್ಪು ಎಂದು ವಾದಿಸಿರುತ್ತಾರೆ.

ಪ್ರತಿ ವಾದಿಯು ತಮ್ಮ ಹೇಳಿಕೆಯಲ್ಲಿ ಪಕ್ಕದಮನೆಯವರು ಸರಿಯಾಗಿ ನಿರ್ಮಾಣ ಮಾಡಿದ್ದಲ್ಲಿ ನನ್ನ ನಿರ್ಮಾಣದ ಬಗ್ಗೆ ವಾದ ಮಾಡಲಿ ಎಂದು ತಿಳಿಸಿರುತ್ತಾರೆ.

ನಿರ್ಣಯ:- ದಿನಾಂಕ:05-3-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು. ಪ್ರತಿ ವಾದಿಯು ಕಟ್ಟಡ ನಿರ್ಮಾಣದಿಂದ ವಾದಿಯವರ ಕಟ್ಟಡಕ್ಕೆ ಯಾವುದೇ ದಕ್ಕೆಯುಂಟಾಗುತ್ತಿಲ್ಲದಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಒಂದು ವೇಳೆ ನಕ್ಷೆ ಉಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡಿದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕಾನೂನಿನಡಿಯಲ್ಲಿ ಕ್ರಮ ಜರುಗಿಸಬಹುದಾಗಿರುತ್ತದೆ. ಆದುದರಿಂದ ದಿನಾಂಕ:01-02-2011ರಂದು ತಡೆಹಿಡಿಯಲು ಸೂಚಿಸಿದ್ದ ಎಲ್.ಪಿ.ಸಂಖ್ಯೆ:1742/2010-11ರ ನಕ್ಷೆಯನ್ನು ತೆರವುಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ಕಾಮಗಾರಿ)/24/2010-11

ನಂ.08, ಲೂಯಿಸ್ ರಸ್ತೆ, ಕುಕ್ ಟೌನ್, ಬೆಂಗಳೂರು ಈ ಸ್ವತ್ತಿನ ಮಾಲೀಕರು ಕೆ.ಎಂ.ಸಿ.ಕಾಯ್ದೆ 1976ರ ಕಲಂ 321(1)ರ ಪ್ರಕಾರ ಹೊರಡಿಸಿರುವ ತಾತ್ಕಾಲಿಕ ಆದೇಶದ ವಿರುದ್ಧ ಸ್ವತ್ತಿನ ಮಾಲೀಕರಾದ ಶ್ರೀಮತಿ.ಎನ್.ಪ್ರಮೀಳ ಮತ್ತು ಶ್ರೀ.ಸಿ.ಎಸ್.ಜನಾರ್ಧನರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ವಕೀಲರು ತಮ್ಮ ಹೇಳಿಕೆಯಲ್ಲಿ ಅಧಿಕಾರಿಗಳು ಪಕ್ಕದಮನೆಯವರು ನೀಡುವ ದೂರಿನ ಅನ್ವಯ ಸ್ಥಳ ಪರಿಶೀಲಿಸುತ್ತಿದ್ದು ಈ ಸಂದರ್ಭದಲ್ಲಿ ಆಸ್ತಿಯ ಮಾಲೀಕರಿಗೆ ತಿಳುವಳಿಕೆ ನೀಡದೆ ಕ್ರಮ ಜರುಗಿಸುವುದು ಸಮಂಜಸವಲ್ಲವೆಂದು ತಿಳಿಸಿ ನಿಯಮಗಳ ವಿರುದ್ಧ ನೀಡುವ ನೋಟೀಸ್ ಸಮಂಜಸವಲ್ಲವೆಂದು ತಮಗೆ ತಾತ್ಕಾಲಿಕವಾಗಿ ತಡೆಯಾಜ್ಞೆ ನೀಡಬೇಕೆಂದು ಹಾಗೂ ತಮ್ಮ ಪಕ್ಕದ ಮನೆಯವರು ಅನಧಿಕೃತವಾಗಿ ಕಟ್ಟಡ ನಿರ್ಮಿಸಿದ್ದು, ಅವರ ಮೇಲೆ ಕ್ರಮ ಜರುಗಿಸಲು ಸಹ ಕೋರಿರುತ್ತಾರೆ.

ಸಂಬಂದಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ತಮ್ಮ ಹೇಳಿಕೆಯಲ್ಲಿ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡುತ್ತಿದ್ದು, ಈ ಮೇರೆಗೆ ಕ್ರಮ ಕೈಗೊಂಡಿದ್ದು, ನೋಟೀಸ್ ನೀಡುವಲ್ಲಿ ಲೋಪವುಂಟಾಗಿದ್ದು ಇನ್ನು ಮುಂದೆ ಈ ರೀತಿ ಅವಕಾಶ ನೀಡುವುದಿಲ್ಲವೆಂದು ತಿಳಿಸಿರುತ್ತಾರೆ.

ಉಪ ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಬೇಕಾದಲ್ಲಿ ಅರ್ಜಿದಾರರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಮುಂದೆ ಮನವಿ ಸಲ್ಲಿಸಲು ತಿಳಿಸಿರುತ್ತಾರೆ.

ನಿರ್ಣಯ:- ದಿನಾಂಕ:05-3-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು. ನಂ.9, ಲಿವೀಸ್ ರಸ್ತೆ, ಕೂಕ್ ಟೌನ್, ಬೆಂಗಳೂರು ಈ ಸ್ವತ್ತಿನ ಮಾಲೀಕರು ನಮ್ಮಲ್ಲಿ ಯಾವುದೇ ನಕ್ಷೆ ಇರುವುದಿಲ್ಲವೆಂದು ಲಿಖಿತವಾಗಿ ಹೇಳಿಕೆ ನೀಡಿರುವುದಾಗಿ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಗೂ ಕಟ್ಟಡದ ಕಂದಾಯವನ್ನು ತಪ್ಪಾಗಿ ಘೋಷಿಸಿಕೊಂಡಿರುವುದಾಗಿ ಸಹಾಯಕ ಕಂದಾಯ ಅಧಿಕಾರಿಯವರು ಸಮಿತಿಗೆ ವರದಿಸಿರುವುದನ್ನು ಗಮನಿಸಿ ಸದರಿಯವರ ಕಟ್ಟಡದ ಮೇಲೆ ಕಾನೂನಿನಂತೆ ಕ್ರಮ ತೆಗೆದುಕೊಳ್ಳುವುದು ಹಾಗೂ ಅರ್ಜಿದಾರರು ತಾತ್ಕಾಲಿಕ ಆದೇಶದ ವಿರುದ್ಧ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ವ್ಯವಹರಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.



11.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/27/2010-11

ಮೆ॥ ಲಕ್ಷಾ ಮಿಡಿಯಾ ಪ್ರೈ.ಲಿ., ಸಂಸ್ಥೆಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಆಯುಕ್ತರು ದಿನಾಂಕ:07-02-2011ರ ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದ ಶ್ರೀ.ರವಿರೆಡ್ಡಿಯವರು ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ.

" ಅರ್ಜಿದಾರರು ಕಾಲಾವಕಾಶ ಕೋರಿರುವುದರಿಂದ ವಿಚಾರಣೆಯನ್ನು ಮುಂದೂಡಿದೆ".

12.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11

ಮೆ॥ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಮೂಲ ಕಡತವನ್ನು ಸಂಬಂಧಪಟ್ಟ ಅಧಿಕಾರಿಗಳು ಮಂಡಿಸದಿರುವುದು ತಿಳಿದು ಬಂದಿರುತ್ತದೆ. ಅರ್ಜಿದಾರರು ಹಾಜರಿರುತ್ತಾರೆ.

" ಪಾಲಿಕೆಯ ವಕೀಲರು ಕಾಲಾವಕಾಶ ಕೋರಿರುವುದರಿಂದ ವಿಚಾರಣೆಯನ್ನು ಮುಂದೂಡಿದೆ".

13.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/29/2010-11

ರಿಪ್ಪಲ್ ಮಿಡಿಯಾದವರು ದಿನಾಂಕ:11-01-2011ರಂದು ಸಮಿತಿಗೆ ಅರ್ಜಿ ಸಲ್ಲಿಸಿ ಅನಧಿಕೃತವಾಗಿ ಪ್ರಚುರ ಪಡಿಸಿರುವ ಜಾಹೀರಾತುಗಳನ್ನು ತೆರವುಗೊಳಿಸುವಂತೆ ಹಿಂಬರಹ ನೀಡಿರುತ್ತಾರೆ. ಆದರೆ ಬದಲಿ ಸ್ಥಳಗಳನ್ನು ಗುರುತಿಸಿಕೊಡುವಂತೆ ಹಲವಾರು ಬಾರಿ ಪತ್ರ ಬರೆದು ಕೋರಲಾಗಿದ್ದರೂ ಸಹ ಸದರಿ ಅಧಿಕಾರಿಗಳಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಆದರೆ ಈಗ ಕೂಡಲೇ ತೆರವುಗೊಳಿಸುವಂತೆ ತಿಳಿಸಿರುತ್ತಾರೆ. ಇದರಿಂದಾಗಿ ನಾವು ಜಾಹೀರಾತುಗಳ ಮೇಲೆ ಹೂಡಿರುವ ಹಣವು ಲುಕ್ಸಾನ್ ಆಗುತ್ತದೆಂದು ತಿಳಿಸುತ್ತಾ, ನ್ಯಾಯ ದೊರಕಿಸಿಕೊಡುವಂತೆ ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದವರು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಮಾಲೀಕರು ಪರಸ್ಥಳಕ್ಕೆ ಹೋಗಿದ್ದು ವಿಚಾರಣೆಯನ್ನು ಮುಂದೂಡಲು ಕೋರಿಕೊಂಡ ಮೇರೆಗೆ ವಿಚಾರಣೆಯನ್ನು ಮುಂದೂಡಿದೆ.

''ಆದೇಶಕ್ಕಾಗಿ ಕಾಯ್ದಿರಿಸಿದೆ''

14.ಸಂಖ್ಯೆ:ಅಸ್ಥಾಸ/(ಅ)/31/2010-11

ಶ್ರೀ.ಡಿ.ಕೆ.ಬರ್ಮನ್, ಚೀಫ್‌ರೀಜಿನಲ್ ಮ್ಯಾನೇಜರ್ ಅಂಡ್ ಡ್ಯೂಲಿ ಕಾನ್‌ಸ್ಟಿಟ್ಯೂಟೆಡ್ ಅಟಾರ್ನಿ ಇವರು ಸ್ವತ್ತಿನ ಸಂಖ್ಯೆ:19, 18ನೇ ಮುಖ್ಯರಸ್ತೆ, 46ನೇ ಅಡ್ಡರಸ್ತೆ, 9ನೇ ಬ್ಲಾಕ್, ಜಯನಗರ, ವಾರ್ಡ್-168 ಈ ಸ್ವತ್ತಿನಿಂದ ಹೊರಹಾಕದಂತೆ ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ವಕೀಲರು ತಮ್ಮ ಹೇಳಿಕೆಯಲ್ಲಿ ನ್ಯಾಯಾಲಯದ ಆದೇಶದ ರೀತ್ಯ ಪಾಲಿಕೆ ನೀಡಿರುವ ಹಿಂಬರಹ ತಪ್ಪಾಗಿದ್ದು ಇದರ ಕ್ರಮವು ಸರಿ ಇಲ್ಲದಿದ್ದು ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳತಕ್ಕದೆಂದು, ವಿಚಾರಣೆ ಸರಿಯಾಗಿ ನಡೆಸಿರುವುದಿಲ್ಲ, ಸಕ್ಷಮ ಪ್ರಾಧಿಕಾರಿಯು ನೀಡಿರುವ ಹಿಂಬರಹ ಸರಿಯಲ್ಲ ಎಂದು ವಾದಿಸುತ್ತಾರೆ. ನ್ಯಾಯಾಲಯದ ಆದೇಶದ ಪ್ರಕಾರ ನಮಗೆ ವ್ಯವಹರಣೆ ನಡೆಸಲು ಅನುಮತಿ ನೀಡಬೇಕೆಂದು ಕೋರಿರುತ್ತಾರೆ. ಅಪರ ಆಯುಕ್ತರು ಕೈಗೊಂಡಿರುವ ಕ್ರಮ ಸರಿಯಲ್ಲ.

ಪಾಲಿಕೆ ವಕೀಲರು ತಮ್ಮ ಹೇಳಿಕೆಯಲ್ಲಿ ಈ ಪ್ರಕ್ರಿಯೆಯಲ್ಲಿ ಪಾಲಿಕೆಯು ಕೈಗೊಂಡಿರುವ ಕ್ರಮವು ಸರಿಯಿದೆಯೆಂದು ಪರವಾನಗಿ ಇಲ್ಲದೆಯೆ ಇವರು ವ್ಯವಹರಣೆಯನ್ನು ನಡೆಸಲು ಸಾಧ್ಯವಿಲ್ಲದಿರುವುದರಿಂದ ಇವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು, ಸರ್ಕಾರದ ಅಧಿಸೂಚನೆಯ ಪ್ರಕಾರ ಅಪರ ಆಯುಕ್ತರು ನಿರ್ಣಯ ಕೈಗೊಳ್ಳಲು ಪೂರ್ಣ ಪ್ರಮಾಣದ ಅವಕಾಶವಿರುವುದಾಗಿ ತಿಳಿಸಿರುತ್ತಾರೆ.

ಅರ್ಜಿದಾರರ ವಕೀಲರು ತಮ್ಮ ಹೇಳಿಕೆಯಲ್ಲಿ ನ್ಯಾಯಾಲಯದ ಆದೇಶದ ರೀತ್ಯ ವ್ಯವಹರಣೆ ನಡೆಸಲು ಅವಕಾಶ ನೀಡಬೇಕೆಂದು ತಿಳಿಸಿ ತಮಗೆ ಲೀಸ್ ಪಿರಿಯಡ್ ಬಗ್ಗೆ ಯಾವುದೇ ವಿಧವಾದ ಆದೇಶವಿಲ್ಲದಿದ್ದು ಕೇವಲ ವ್ಯವಹರಣೆಯನ್ನು ಮಾತ್ರ ನಡೆಸಲು ಕೋರಿರುತ್ತಾರೆ.

-9-

ಪಾಲಿಕೆಯ ವಕೀಲರು ನ್ಯಾಯಾಲಯದ ಆದೇಶವನ್ನು ವಿವರಿಸುತ್ತಾ, ಕಟ್ಟಡದ ಭಾಗವನ್ನು ಹೊಡೆಯಕೂಡದೆಂದು ಸಕ್ಷಮ ಪ್ರಾಧಿಕಾರಿಯು ವಿಚಾರಣೆ ನಡೆಸತಕ್ಕದೆಂದು, ಈ ಮೇಲ್ಮನವಿಯು ಸಮಿತಿಯ ಪ್ರಾಧಿಕಾರಕ್ಕೆ ಬರುವುದಿಲ್ಲವೆಂದು ತಿಳಿಸಿರುತ್ತಾರೆ.

ಅರ್ಜಿದಾರರ ವಕೀಲರು ನ್ಯಾಯಾಲಯದ ಆದೇಶದ ರೀತ್ಯ ವಿಚಾರಣೆ ನಡೆಸಲು ಕೋರಿರುತ್ತಾರೆ.

ನಿರ್ಣಯ:- ಅರ್ಜಿದಾರರ ಪರ ವಕೀಲರು ಮತ್ತು ಪಾಲಿಕೆಯ ಪರ ವಕೀಲರ ವಾದಗಳನ್ನು ಆಲಿಸಿದ ನಂತರ ಸಮಿತಿಯು ಹಿಂದೂಸ್ಥಾನ ಪೆಟ್ರೋಲಿಯಂ ಕಾರ್ಪೋರೇಷನ್ ಲಿಮಿಟೆಡ್‌ರವರು ಸಲ್ಲಿಸಿರುವ ದಿನಾಂಕ:24-12-2010 ಮತ್ತು 21-02-2011ರ ಮೇಲ್ಮನವಿಗಳನ್ನು ವಜಾಗೊಳಿಸುವುದೆಂದು ತೀರ್ಮಾನಿಸಲಾಯಿತು.

15. ವಿಷಯ:ಸಂಖ್ಯೆ:ಅಸ್ಥಾಸ/(ಜಾ)/33/2010-11

ನಂ.73, 7ನೇ ಅಡ್ಡರಸ್ತೆ, 60 ಅಡಿ ರಸ್ತೆ, ಜೆ.ಸಿ.ನಗರ, ಮಹಾಲಕ್ಷ್ಮಿಪುರಂ ಇಲ್ಲಿ ಶ್ರೀ.ಮುನೇಗೌಡ ಎಂಬುವವರು ಮಿನರಲ್ ವಾಟರ್ ಘಟಕ ಮತ್ತು ಮಾರಾಟ ಹಾಗೂ 20 ಅಶ್ವಶಕ್ತಿ ಉದ್ದಿಮೆ ಪರವಾನಗಿಯನ್ನು ಕೋರಿದ್ದು, ಸದರಿಯವರ ಮನವಿಯನ್ನು ದಿನಾಂಕ:02-12-2010ರಂ ಆರೋಗ್ಯ ವೈದ್ಯಾಧಿಕಾರಿ, (ಮಹಾಲಕ್ಷ್ಮೀಪುರ) ವಲಯರವರು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-02-2011ರ ಟಿಪ್ಪಣಿ.

''ಸ್ಥಳ ಪರಿಶೀಲನೆಗಾಗಿ ಕಾಯ್ದಿರಿಸಿದೆ''

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**<u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</u>**

**<u>ಅಪೀಲು ಸ್ಥಾಯಿ ಸಮಿತಿಯ ದಿನಾಂಕ:01-04-2011ರಂದು ನಡೆದ ಸಭೆಯ ನಡವಳಿಗಳು</u>**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಡಿ.ವೆಂಕಟೇಶ್ ಮೂರ್ತಿ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಎಂ.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಮುನಿರಾಜು | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 04 | ಶ್ರೀಧರರೆಡ್ಡಿ ಎನ್.ಆರ್. | ಸದಸ್ಯರು | ಅರೋಗ್ಯಾಧಿಕಾರಿ (ಪಶ್ಚಿಮ) |
| 04 | ಡಾ||ಎಸ್.ರಾಜು | ಸದಸ್ಯರು | ಆರೋಗ್ಯ ವೈದ್ಯಾಧಿಕಾರಿ(ಬಸವನಗುಡಿ/ಮಹಾಲಕ್ಷ್ಮಿಲೇಔಟ್/ಗಾಂಧಿನಗರ) ವಲಯ |
| 05 | ರಮೇಶ್ ರಾಜು ಕೆ. | ಸದಸ್ಯರು | |
| 06 | ಮುನಿರತ್ನಮ್ಮ | ಸದಸ್ಯರು | |
| 07 | ಶಾಹೀನ್ ತಾಜ್ | ಸದಸ್ಯರು | |
| 08 | ಎಸ್.ಕೆ.ಪುಷ್ಪ | ಸದಸ್ಯರು | |
| 09 | ಮುನಿಸಂಜೀವಯ್ಯ | ಸದಸ್ಯರು | |
| 10 | ಎಸ್.ಕ್ರಿಯಾ ಶೈಲಜಾ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/09/2010-11

ಸ್ವತ್ತಿನ ಸಂಖ್ಯೆ:86/3 ಮತ್ತು 86/4, ಕೋಲ್ಸ್ ರಸ್ತೆ, ವಾರ್ಡ್-78ರ ಸ್ವತ್ತಿನ ಕಂದಾಯ ನಿಗಧಿಪಡಿಸಿರುವುದಕ್ಕೆ ಅಸಮಧಾನ ವ್ಯಕ್ತಪಡಿಸಿ ಸ್ವತ್ತಿನ ಮಾಲೀಕರಾದ ಶ್ರೀ.ಎಂ.ರಾಜ್ ಬಹದ್ದೂರ್‌ರವರು ಕಂದಾಯ ಕಡಿಮೆ ಮಾಡಿಕೊಡುವ ಬಗ್ಗೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಅಪೀಲುದಾರರು ತಮ್ಮ ಹೇಳಿಕೆಯಲ್ಲಿ ಭಾಡಿಗೆಗೆ ನೀಡಿದ್ದ ಭಾಗವು ತುಂಬಾ ದಿನಗಳಿಂದ ಖಾಲಿ ಇರುತ್ತದೆ. ಹಾಗೂ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿಲ್ಲದೇ ಇರುವುದರಿಂದ ಪರಿಶೀಲಿಸಿ ಕಂದಾಯವನ್ನು ನಿಗಧಿ ಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

ನಿರ್ಣಯ:- ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಲಾಯಿತು. ಹಾಲಿ ಪ್ರಥಮ ಅಫೀಲು ಅಧಿಕಾರಿಗಳು ಮಾಡಿರುವ ಆಸ್ತಿ ತೆರಿಗೆ ಪರಿಷ್ಕರಣೆಯು ಸಮಂಜಸವಾಗಿರುವುದರಿಂದ, ಸದರಿ ತೆರಿಗೆ ಪರಿಷ್ಕರಣೆಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಆ)/12/2010-11

ಶ್ರೀ.ಎ.ಎಸ್.ಕಾಮತ್, ವ್ಯವಸ್ಥಾಪಕ ನಿರ್ದೇಶಕರು, ಬಸವನಗುಡಿ ವಲಯ ವಾರ್ಡ್-154, ನಂ.1, 5ನೇ ಮೈನ್, ಬಸವನಗುಡಿ ರಸ್ತೆ, ಎನ್.ಆರ್.ಕಾಲೋನಿ ಬೆಂಗಳೂರು-19 ಇಲ್ಲಿ ಕಾಮತ್ ಬ್ಯೂಗಲ್ ರಾಕ್ ಹೋಟೆಲ್ ರೆಸ್ಟೋರೆಂಟ್ ಮತ್ತು 25 ಅಶ್ವಶಕ್ತಿ ಪರವಾನಗಿಯನ್ನು 2010-11ನೇ ಸಾಲಿಗೆ ನವೀಕರಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ಬಸವನಗುಡಿ)ವಲಯರುವರು ದಿನಾಂಕ:22-02-2010ರಂದು ತಡೆ ಹಿಡಿದಿರುವ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಹಾಜರಿದ್ದ ಆಕ್ಷೇಪಣೆದಾರರು ಲಿಖಿತ ಮೂಲಕ ಹೇಳಿಕೆ ನೀಡಿರುತ್ತಾರೆ. ಇತರೆ ಪ್ರಕರಣಗಳಲ್ಲಿನ ಮಾಹಿತಿ ಕುರಿತಂತೆ ಉಲ್ಲೇಖಿಸಿರುತ್ತಾರೆ. ಹಾಲಿ ಪ್ರಕರಣವು ಲೋಕಾಯುಕ್ತದಲ್ಲಿ ಬಾಕಿ ಇರುವುದಾಗಿ ಪ್ರತಿವಾದಿಗಳು ತಿಳಿಸಿರುತ್ತಾರೆ. ಅಪೀಲುದಾರರು ತಮ್ಮ ಪ್ರತಿವಾದಿಗಳ ಲಿಖಿತ ಹೇಳಿಕೆಯ ಪ್ರತಿಯನ್ನು ಕೋರಿರುತ್ತಾರೆ. ಸಂಬಂಧಪಟ್ಟ ಆರೋಗ್ಯ ವೈದ್ಯಾಧಿಕಾರಿಗಳು ಸಿ.ಡಿ.ಪಿ. ಪ್ರಕಾರ ಮಂಜೂರಾತಿ ನೀಡಿರುವುದಾಗಿ ತಿಳಿಸಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"



03.ವಿಷಯ:ಸಂಖ್ಯೆ:ಅಸ್ಥಾಸ/(ಖಾತೆ)/20/2010-11

ನಂ.71, 5ನೇ ಮುಖ್ಯರಸ್ತೆ, ಜಯನಗರ ಹೆಚ್.ಬಿ.ಸಿ.ಎಸ್. ಪದ್ಮನಾಭನಗರ ಈ ಸ್ವತ್ತಿನ ಖಾತೆಯನ್ನು ನ್ಯಾಯಾಲಯದಲ್ಲಿ ದಾವೆ ಇದ್ದರೂ ಸಹ ಶ್ರೀ.ಸಂತೋಷ ಎಂಬುವವರ ಹೆಸರಿಗೆ ವರ್ಗಾಯಿಸಿದ್ದು, ಸದರಿ ಸ್ವತ್ತಿನಲ್ಲಿ ನಾವೇ ವಾಸವಾಗಿರುವುದರಿಂದ ಬೇರೆಯವರ ಹೆಸರಿಗೆ ಆಗಿರುವ ಖಾತಾವನ್ನು ರದ್ದು ಪಡಿಸಿ ತಮ್ಮ ಹೆಸರಿಗೆ ವರ್ಗಾಯಿಸಕೊಡುವಂತೆ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:25-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹೇಳಿಕೆಯಲ್ಲಿ ಆಸ್ತಿಯ ಮಾಲೀಕರು 3 ಜನ ಮಕ್ಕಳಿಗೆ ವಿಲ್ ಮಾಡಿದ್ದು, ಈ ಪೈಕಿ ಶ್ರೀ.ಸಂತೋಷ್‌ರವರು ಇಬ್ಬರು ಮಕ್ಕಳಿಗೆ ತಿಳಿಸದೆ ಅವರ ಹೆಸರಿಗೆ ಖಾತೆ ಮಾಡಿಕೊಂಡಿದ್ದು, 2ನೇ ವಿಲ್‌ನಲ್ಲಿ ಮೊದಲನೇ ವಿಲ್‌ನ ಬದಲಿಗೆ ಶ್ರೀ.ಅಶ್ವಥ್ಥನಾರಾಯಣರಾವ್‌ರವರ ಹೆಸರಿಗೆ ಪೂರ್ತಿ ಖಾತೆಯನ್ನು ವರ್ಗಾಯಿಸಲು ಕೋರಿರುತ್ತಾರೆ.

ಸಹಾಯಕ ಕಂದಾಯ ಅಧಿಕಾರಿಯವರು ತಮ್ಮ ಹೇಳಿಕೆಯಲ್ಲಿ ಆಸ್ತಿಯ ಮಾಲೀಕರಾದ ಶ್ರೀ.ರಾಮಸ್ವಾಮಿರವರ ಮಕ್ಕಳುಗಳು ನೀಡಿದ ಎನ್.ಓ.ಸಿ. ಆಧಾರದ ಮೇಲೆ ಖಾತೆ ವರ್ಗಾಹಿಸಿರುವುದಾಗಿ ತಿಳಿಸಿದ್ದು, ಈ ಪ್ರಕರಣವು ನ್ಯಾಯಾಲಯದಲ್ಲಿದ್ದು ಮೃತ ತಂದೆಯ ಮರಣ ಸಮರ್ಥನಾ ಪತ್ರದ ಆಧಾರ ನ್ಯಾಯಾಲಯದ ತೀರ್ಮಾನದ ರೀತ್ಯ ಖಾತೆ ರದ್ದುಪಡಿಸುವ ಷರತ್ತುಗೊಳಪಡಿಸಿ ಖಾತೆ ವರ್ಗಾಹಿಸಿರುವುದಾಗಿ ತಿಳಿಸಿರುತ್ತಾರೆ.

ಪ್ರಕರಣವು ನ್ಯಾಯಾಲಯದ ಮುಂದೆ ಬಾಕಿ ಇರುವುದಾಗಿ ತಿಳಿದು ಬಂದಿರುತ್ತದೆ.

ಕಾನೂನು ಅಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ಖಾತೆ ಕುರಿತಂತೆ ನ್ಯಾಯಾಲಯವು ಅಂತಿಮವಾಗಿ ತೀರ್ಪು ನೀಡಬೇಕೆಂದು ತಿಳಿಸಿರುತ್ತಾರೆ.

ನಿರ್ಣಯ:- ಅರ್ಜಿದಾರರ ಮತ್ತು ಖಾತೆದಾರರ ಹೇಳಿಕೆಗಳನ್ನು ಹಾಗೂ ಕಡತದಲ್ಲಿನ ಮತ್ತು ಖಾತೆದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಮೂಲ ಖಾತೆದಾರರಾದ ಶ್ರೀ.ಎಂ.ರಾಮಸ್ವಾಮಿರವರು ದಿನಾಂಕ:27-02-2000 ಮತ್ತು 10-01-2006ರಂದು ನೋಂದಾಯಿತವಲ್ಲದ ಎರಡು ವಿಲ್‌ಗಳನ್ನು ಮಾಡಿರುವುದು ಕಂಡು ಬರುತ್ತದೆ. ತದನಂತರ ಶ್ರೀ.ಆರ್.ಕುಮಾರ್‌ರವರ ಹೆಸರಿಗೆ ದಿನಾಂಕ:07-09-2000 ಮತ್ತು ದಿನಾಂಕ:24-11-2006ರಂದು ಖಾತಾ ವರ್ಗಾವಣೆ ಮಾಡಲಾಗಿರುವುದಾಗಿ ಅಪರ ಆಯುಕ್ತರು (ದಕ್ಷಿಣ)ರವರ ದಿನಾಂಕ:19-01-2011ರ ಟಿಪ್ಪಣಿಯಲ್ಲಿ ವರದಿಸಲಾಗಿರುತ್ತದೆ. ಹಾಗೂ ಸ್ವತ್ತು ಹಾಲಿ ಖಾತೆದಾರರ ವಶದಲ್ಲಿಲ್ಲದೆ ಅರ್ಜಿದಾರರಾದ ಶ್ರೀ.ಅಶ್ವಥನಾರಾಯಣರಾವ್‌ರವರ ಸ್ವಾಧೀನದಲ್ಲಿರುವುದನ್ನು ಖಾತೆದಾರರಾದ ಶ್ರೀ.ಸಂತೋಷ್‌ರವರು ಹಾಜರುಪಡಿಸಿರುವ ದಾಖಲಾತಿಗಳಿಂದ ಕಂಡು ಬರುತ್ತದೆ. ಈ ವಿಷಯವು ಅನುಮಾನಾಸ್ಪದಕ್ಕೆ ಕಾರಣವಾಗಿರುವುದನ್ನು ಸಮಿತಿಯು ಮನಗಂಡು ಶ್ರೀ.ಸಂತೋಷ್‌ರವರ ಹೆಸರಿಗೆ ವರ್ಗಾವಣೆ ಮಾಡಿರುವ ಖಾತೆಯನ್ನು ತಡೆಹಿಡಿದು ನ್ಯಾಯಾಲಯದಲ್ಲಿ ಪ್ರಕರಣವು ತೀರ್ಮಾನವಾದ ನಂತರ ನ್ಯಾಯಾಲಯದ ಅಂತಿಮ ತೀರ್ಮಾನದಂತೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>04. ವಿಷಯ:ಸಂಖ್ಯೆ:ಅಸ್ಥಾಸ/(ಆ)/26/2010-11</u>

ಮಾಲೀಕರು, ಮೆ।। ಅವಿನಾಶಿ ಆಡ್ಸ್, ಔಟ್‌ಡೋರ್‌ಅಡ್ವರ್‌ಟೈಸಿಂಗ್, ತುಳಸಿ ಹೌಸ್, ನಂ.26, ಎಸ್.ಎಫ್.ಹೆಚ್.ಎಸ್. ಏರಿಯಾ, ನಂದಿನಿ ಲೇಔಟ್, ಬೆಂಗಳೂರು-96 ಇವರು ದಿನಾಂಕ:18-01-2011ರಂದು ಸಮಿತಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಕಡತ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ವಕೀಲರು ಹಾಜರಿರುತ್ತಾರೆ ಆದರೆ ಸಂಬಂಧಪಟ್ಟ ಅಧಿಕಾರಿಗಳು ಹಾಜರಿರುವುದಿಲ್ಲ. ವಕೀಲರ ಹೇಳಿಕೆಯಲ್ಲಿ ಇದು ರೈಲ್ವೆ ಆಸ್ತಿಯಲ್ಲಿದ್ದು ಕಂದಾಯ ಅಧಿಕಾರಿಗಳ ವರದಿಯ ರೀತ್ಯ ಅಳತೆಯು ಸರಿಯಿಲ್ಲವೆಂದು 56 ಬೋರ್ಡ್‌ಗಳ ಬದಲು 61 ಬೋರ್ಡುಗಳು ಇರುವುದಾಗಿ ಹಿಂದಿನ ಅವಧಿಯಿಂದ ತೆರಿಗೆ ನಿಗಧಿಪಡಿಸಿರುವುದಾಗಿ ತಿಳಿಸಿದ್ದು, ತಾವು ಬೋರ್ಡ್‌ಗಳನ್ನು ನಿಗಧಿಪಡಿಸಿದ್ದ ಅವಧಿಗೆ ಮಾತ್ರ ಕಂದಾಯವನ್ನು ನಿಗಧಿಪಡಿಸಬೇಕೆಂದು ಕೋರಿರುತ್ತಾರೆ.



**<u>ನಿರ್ಣಯ:</u>**- ಸಮಿತಿಯು ಅಧಿಕಾರಿಗಳ ಮತ್ತು ವಕೀಲರ ವಾದಗಳನ್ನು ಆಲಿಸಿತು. ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ಅಧಿಕಾರಿಗಳು 8 ತಿಂಗಳ ಅವಧಿ ಮೀರಿದ ನಂತರ ಮನವಿ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ದಿನಾಂಕ:26-11-2007ರಂದೇ ಜಾಹೀರಾತುದಾರರು ಫಲಕಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ನಗರ ಪಾಲಿಕೆಗೆ ಪತ್ರ ಮುಖೇನ ತಿಳಿಸಿರುವುದು ಕಂಡು ಬರುತ್ತದೆ. ಜಾಹೀರಾತುದಾರರು ಪತ್ರ ಬರೆದ ತಕ್ಷಣವೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡದಿರುವುದು ಸ್ಪಷ್ಟವಾಗಿರುತ್ತದೆ. ಹಾಗೂ ಯಾವ ಯಾವ ವೇಳೆಗೆ ಎಷ್ಟು ಅಳತೆಯ ಫಲಕಗಳನ್ನು ಅಳವಡಿಸಿಕೊಳ್ಳಲಾಗಿತ್ತೆಂಬ ಬಗ್ಗೆ ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಿರುವುದು ಕಂಡು ಬರುವುದಿಲ್ಲ. ಇದರಿಂದಾಗಿ ಜಾಹೀರಾತುದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆ. ಈ ಬಗ್ಗೆ ಸಮಿತಿಯು ಇನ್ನು ಮುಂದೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಸಂಖ್ಯೆ ಮತ್ತು ಅಳತೆಯ ಬಗ್ಗೆ ಸ್ಪಷ್ಟವಾಗಿ ನಮೂದಿಸುವಂತೆ ಕ್ರಮಕೈಗೊಳ್ಳುವುದು ಹಾಗೂ ಜಾಹೀರಾತುದಾರರು ಈಗಾಗಲೇ ಅಳವಡಿಸಿಕೊಂಡಿರುವ ಫಲಕಗಳಿಗೆ ಡಿಮ್ಯಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವಂತೆ ರೂ.60,05,452/-ಗಳ ಜಾಹೀರಾತು ತೆರಿಗೆಯನ್ನು ಕೂಡಲೇ ಪಾವತಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>06.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/27/2010-11</u>

ಮೆ।। ಲಕ್ಷ್ಮಾ ಮಿಡಿಯಾ ಪ್ರೈ.ಲಿ., ಸಂಸ್ಥೆಯವರು ರೈಲ್ವೆ ಸ್ವತ್ತುಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳಿಗೆ ಹೆಚ್ಚಾಗಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿದ್ದು, ಸದರಿ ಜಾಹೀರಾತು ತೆರಿಗೆಯನ್ನು ನ್ಯಾಯಬದ್ಧವಾಗಿ

ನಿಗಧಿಪಡಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಆಯುಕ್ತರು ದಿನಾಂಕ:07-02-2011ರ ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದ ಶ್ರೀ.ರವಿರೆಡ್ಡಿಯವರು ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲು ಕೋರಿಕೊಂಡ ಮೇರೆಗೆ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಿದೆ.

ಪ್ರಕರಣವನ್ನು ಕರೆಯಲಾಯಿತು. ರೈಲ್ವೆ ಇಲಾಖೆಯಿಂದ ಅನುಮತಿ ದೊರಕಿದೆ. ಪಾಲಿಕೆ ವತಿಯಿಂದ ನೀಡಿರುವ ಡಿಮ್ಯಾಂಡ್ ನೋಟೀಸ್ ನಿಯಮ ಬಾಹಿರವಾಗಿರುತ್ತದೆ. ದಿನಾಂಕ:30-06-2009ರಲ್ಲಿ ಅರ್ಜಿ ಸಲ್ಲಿಸಿದೆ, ಅಧಿಕಾರಿಗಳು ಸ್ಥಳ ಪರಿಶೀಲಿಸಿರುತ್ತಾರೆ. ಡಿಮ್ಯಾಂಡ್ ನೋಟೀಸ್ ನೀಡಿರುವುದು ಹಿಂದಿನ 3 ವರ್ಷಗಳ ಅವಧಿಗೆ ನೀಡಿರುವುದು ಸರಿಯಲ್ಲ. (25-11-10ರಲ್ಲಿ ಪರಿಶೀಲನೆ) ಈಗಾಗಲೇ 60ಲಕ್ಷ ರೂಗಳನ್ನು ಪಾವತಿಸಲಾಗಿದೆ. ಆದರೆ ಹಿಂದಿನ ಅವಧಿಯಿಂದ ನಿಗಧಿಪಡಿಸಿರುವ ರೀತಿ ಸರಿ ಇಲ್ಲ. ನ್ಯಾಯಾಲಯಕ್ಕೆ ಡೀಮ್ಡ್ ಪರ್ಮಿಷನ್ ಬಗ್ಗೆ ಮನವಿ ಸಲ್ಲಿಸಿದೆ.

ಕಾನೂನು ಸಲಹೆಗಾರರು ಕೇಸ್ ನಂ. ನೀಡಲು ಕೋರಿರುತ್ತಾರೆ.

ಮನವಿದಾರರು ರೈಲ್ವೆ ಇಲಾಖೆಯವರು ನೀಡಿರುವ ಅನುಮತಿಯಷ್ಟು ಬೋರ್ಡ್‌ಗಳನ್ನು ಅಳವಡಿಸಿಲ್ಲವೆಂದು ತಿಳಿಸಿರುತ್ತಾರೆ. ಅನುಮತಿ ನೀಡಿರುವ ಸ್ಥಳಗಳಲ್ಲಿ ತಾವು ಬೋರ್ಡ್‌ಗಳನ್ನು ಹಾಕಲು ಸಾಧ್ಯವಾಗಿರುವುದಿಲ್ಲ ಇದನ್ನು ಗಮನಿಸಬೇಕೆಂದು ಕೋರಿಕೊಂಡಿರುತ್ತಾರೆ.

ಈ ಬಗ್ಗೆ ಅಧಿಕಾರಿಗಳು ಯಾವುದೇ ಹೇಳಿಕೆಯನ್ನು ಸಭೆಯ ಮುಂದೆ ಮಂಡಿಸಿರುವುದಿಲ್ಲ.

**ನಿರ್ಣಯ:**- ಸಮಿತಿಯು ಅಧಿಕಾರಿಗಳ ಮತ್ತು ವಕೀಲರ ವಾದಗಳನ್ನು ಆಲಿಸಿತು. ಕಡತದಲ್ಲಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ರೈಲ್ವೆ ಇಲಾಖೆಯವರು ದಿನಾಂಕ:29-11-2007ರಲ್ಲೇ ನಗರ ಪಾಲಿಕೆಗೆ ಪತ್ರ ಬರೆದಿದ್ದರೂ ಸಹ ದಿನಾಂಕ:15-05-2008ರವರೆಗೆ ಏಕೆ ತಪಾಸಣೆ ಮಾಡಿರುವುದಿಲ್ಲವೆಂಬ ಬಗ್ಗೆ ಸಮಿತಿಯು ಕಾರಣಗಳನ್ನು ಕೇಳಲಾಗಿ ಸಂಬಂಧಪಟ್ಟ ಅಧಿಕಾರಿಗಳು ನಿಗಧಿತ ನಮೂನೆಯೊಂದಿಗೆ ಅರ್ಜಿಯನ್ನು ಸಲ್ಲಿಸಿಲ್ಲದ ಕಾರಣ ತಪಾಸಣೆ



ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ರೈಲ್ವೆ ಇಲಾಖೆಯವರು ಪತ್ರ ಬರೆದಾಗಿನಿಂದಲೂ ಪ್ರತಿ ತಿಂಗಳಲ್ಲಿ ಜಾಹೀರಾತುದಾರರು ಅಳವಡಿಸಿರುವ ಬೋರ್ಡ್‌ಗಳ ಸಂಖ್ಯೆ ಮತ್ತು ಅಳತೆಯನ್ನು ನಮೂದು ಮಾಡಿಕೊಳ್ಳಬೇಕಾದ ಜವಾಬ್ದಾರಿಯು ಸಂಬಂಧಪಟ್ಟ ಅಧಿಕಾರಿಗಳದಾಗಿದ್ದು, ತಪಾಸಣೆ ಮಾಡದಿರುವುದು ಅಧಿಕಾರಿಗಳ ಬೇಜವಾಬ್ದಾರಿತನವಾಗಿರುತ್ತದೆ. ಇದರಿಂದಾಗಿ ಜಾಹೀರಾತುದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆ. ಈ ಬಗ್ಗೆ ಸಮಿತಿಯು ಇನ್ನು ಮುಂದೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಸಂಖ್ಯೆ ಮತ್ತು ಅಳತೆಯ ಬಗ್ಗೆ ಸ್ಪಷ್ಟವಾಗಿ ನಮೂದಿಸುವಂತೆ ಕ್ರಮಕೈಗೊಳ್ಳುವುದು ಹಾಗೂ ಜಾಹೀರಾತುದಾರರು ಈಗಾಗಲೇ ಅಳವಡಿಸಿಕೊಂಡಿರುವ ಫಲಕಗಳಿಗೆ ಡಿಮ್ಯಾಂಡ್ ನೋಟೀಸ್‌ಗಳಲ್ಲಿ ತಿಳಿಸಿರುವಂತೆ ರೂ.55,66,209/-ಗಳ ಜಾಹೀರಾತು ತೆರಿಗೆಯನ್ನು ಕೂಡಲೇ ಪಾವತಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11</u>

ಮೆ॥ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಪ್ರಸ್ತಾವನೆಗೆ ಸಂಬಂಧಿಸಿದಂತೆ ಮೂಲ ಕಡತವನ್ನು ಸಂಬಂಧಪಟ್ಟ ಅಧಿಕಾರಿಗಳು ಮಂಡಿಸದಿರುವುದು ತಿಳಿದು ಬಂದಿರುತ್ತದೆ. ಅರ್ಜಿದಾರರು ಹಾಜರಿರುತ್ತಾರೆ.

ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಮೂಲ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಅಧಿಕಾರಿಗಳುಲ ವಿಫಲರಾಗಿರುತ್ತಾರೆ. ಕಾನೂನು ಸಲಹೆಗಾರರಿಗೆ ಈಗಾಗಲೇ ಸೂಚಿಸಿದ್ದು, ಅವರು ಈ ದಿವಸ ಗೈರು ಹಾಜರಿಯಾಗಿರುತ್ತಾರೆ. ಪ್ರಕರಣ ಕುರಿತಂತೆ ಲಭ್ಯವಿರುವ ದಾಖಲೆಗಳ ಆಧಾರದ ಮೇಲೆ ತೀರ್ಮಾನ ಕೈಗೊಳ್ಳಲು ಸಮಿತಿಯು ತೀರ್ಮಾನಿಸಿದೆ.

“ ಆದೇಶಕ್ಕಾಗಿ ಕಾಯ್ದಿರಿಸಿದೆ”

<u>08.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/29/2010-11</u>

ರಿಪ್ಪಲ್ ಮಿಡಿಯಾದವರು ದಿನಾಂಕ:11-01-2011ರಂದು ಸಮಿತಿಗೆ ಅರ್ಜಿ ಸಲ್ಲಿಸಿ ಅನಧಿಕೃತವಾಗಿ ಪ್ರಚುರ ಪಡಿಸಿರುವ ಜಾಹೀರಾತುಗಳನ್ನು ತೆರವುಗೊಳಿಸುವಂತೆ ಹಿಂಬರಹ ನೀಡಿರುತ್ತಾರೆ. ಆದರೆ ಬದಲಿ ಸ್ಥಳಗಳನ್ನು ಗುರುತಿಸಿಕೊಡುವಂತೆ ಹಲವಾರು ಬಾರಿ ಪತ್ರ ಬರೆದು ಕೋರಲಾಗಿದ್ದರೂ ಸಹ ಸದರಿ ಅಧಿಕಾರಿಗಳಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಆದರೆ ಈಗ ಕೂಡಲೇ ತೆರವುಗೊಳಿಸುವಂತೆ ತಿಳಿಸಿರುತ್ತಾರೆ. ಇದರಿಂದಾಗಿ ನಾವು ಜಾಹೀರಾತುಗಳ ಮೇಲೆ ಹೂಡಿರುವ ಹಣವು ಲುಕ್ಸಾನ್ ಆಗುತ್ತದೆಂದು ತಿಳಿಸುತ್ತಾ, ನ್ಯಾಯ ದೊರಕಿಸಿಕೊಡುವಂತೆ ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ಹಾಜರಿದ್ದವರು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಮಾಲೀಕರು ಪರಸ್ಥಳಕ್ಕೆ ಹೋಗಿದ್ದು ವಿಚಾರಣೆಯನ್ನು ಮುಂದೂಡಲು ಕೋರಿಕೊಂಡ ಮೇರೆಗೆ ವಿಚಾರಣೆಯನ್ನು ಮುಂದೂಡಿದೆ.

ಮೇಲ್ಮನವಿದಾರರ ಹಾಗೂ ಅಧಿಕಾರಿಗಳ ವಾದಗಳನ್ನು ಹಾಗೂ ಕಡತವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಮೇಲ್ಮನವಿದಾರರಿಗೆ ಇ ಟೆಂಡರ್ ಮುಖೇನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಪ್ಯಾಕೇಜ್ 03

-5-

ಮತ್ತು 06ರಲ್ಲಿ ಒಟ್ಟು 50 ಸ್ಥಳಗಳಲ್ಲಿ ಬಸ್ ತಂಗುದಾಣಗಳನ್ನು ಡಿಬಿಓಓಟಿ (demolish built own operate transfer) ಆಧಾರದ ಮೇಲೆ ನಿರ್ಮಾಣ ಮಾಡಲು ದಿನಾಂಕ:14-12-2009ರಂದು ಅನುಮತಿ ನೀಡಿರುವುದು ಕಂಡು ಬರುತ್ತದೆ. ನಂತರ ಮೇಲ್ಮನವಿದಾರರು ಕರಾರಿನಂತೆ ಬಸ್ ತಂಗುದಾಣಗಳನ್ನು ನಿರ್ಮಿಸದೆ ಅನಧಿಕೃತವಾಗಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಿದ್ದು ಅವುಗಳನ್ನು ತೆರವುಗೊಳಿಸುವಂತೆ ಹಿಂಬರಹ ನೀಡಲಾಗಿರುತ್ತದೆ. ಈ ಬಗ್ಗೆ ಮೇಲ್ಮನವಿದಾರರು ತಮ್ಮ ಹೇಳಿಕೆಯಲ್ಲಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಲು ನೀಡಿರುವ ಸ್ಥಳಗಳೇ ತಪ್ಪಾಗಿರುತ್ತವೆ ಹಾಗೂ ಕೆಲವೊಂದು ಸ್ಥಳಗಳಲ್ಲಿ ಸ್ಥಳವಾಕಾಶವಿಲ್ಲದಿರುವುದಾಗಿ ತಿಳಿಸಿರುವುದನ್ನು ಕಾಣಬಹುದಾಗಿರುತ್ತದೆ. ಈ ಬಗ್ಗೆ ಮೇಲ್ಮನವಿದಾರರು ಆಯುಕ್ತರಿಗೆ ದಿನಾಂಕ:25-03-2010ರಂದು ಪತ್ರ ಬರೆದು ಸದರಿ ಜಾಗಗಳಿಗೆ ಬದಲಿಯಾಗಿ ಜಾಗಗಳನ್ನು ಗುರುತಿಸಿಕೊಡುವಂತೆ ಕೋರಿಕೊಂಡಿರುವುದು ಹಾಗೂ ಸದರಿಯವರಿಗೆ ಹಂಚಿಕೆಯಾಗಿರುವ ಸ್ಥಳಗಳಲ್ಲಿ ಓಓಹೆಚ್, ವ್ಯಾಂಟೇಜ್ ಮತ್ತು ಮೋವ್ವ ಸಂಸ್ಥೆಯವರು ಅತಿಕ್ರಮಿಸಿಕೊಂಡು ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಿಕೊಂಡಿರುವುದು ಕಂಡು ಬರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಬದಲಿಯಾಗಿ ಜಾಗಗೆಗಳನ್ನು ಗುರುತಿಸಿಕೊಟ್ಟಿರುವುದಾಗಲಿ ಬೇರೆ ಸಂಸ್ಥೆಯವರು ಅತಿಕ್ರಮಿಸಿಕೊಂಡಿರುವ ಸ್ಥಳಗಳನ್ನು ತೆರವುಗೊಳಿಸಿಕೊಟ್ಟಿರುವುದಾಗಲಿ ಕಂಡು ಬರುವುದಿಲ್ಲ. ಆದಕಾರಣ ಮೆ||ರಿಪ್ಪಲ್ ಮೀಡಿಯಾ ಸಂಸ್ಥೆಯವರು ಪೋಲಿಸ್‌ರವರ ಅನುಮತಿ ಪಡೆದು ಬೇರೆ ಜಾಗಗಳಲ್ಲಿ ಬಸ್ ತಂಗುದಾಣಗಳನ್ನು ನಿರ್ಮಾಣ ಮಾಡಿಕೊಂಡಿರುವುದು ಸ್ಪಷ್ಟವಾಗಿರುತ್ತದೆ.
<u>**ನಿರ್ಣಯ:**</u>- ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದ ನಂತರ ಸಮಿತಿಯು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಮೆ||ರಿಪ್ಪಲ್ ಸಂಸ್ಥೆಯವರು ಅನಧಿಕೃತವಾಗಿ ನಿರ್ಮಾಣ ಮಾಡಿರುವ ಎಲ್ಲಾ ಬಸ್ ತಂಗುದಾಣಗಳಿಗೆ ತೆರಿಗೆಯನ್ನು ವಿಧಿಸಿ ಅಧಿಕೃತಗೊಳಿಸುವುದೆಂದು ಹಾಗೂ ಇನ್ನು ಮುಂದೆ ಬಸ್ ತಂಗುದಾಣಗಳಿಗೆ ಜಾಗಗಳನ್ನು ಗುರುತಿಸಿಕೊಡುವಾಗ ಎಚ್ಚರಿಕೆ ವಹಿಸಿ ಸರಿಯಾದ ಸ್ಥಳಗಳನ್ನು ಗುರುತಿಸಿಕೊಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಆಯುಕ್ತರು ಸೂಚನೆ ನೀಡುವುದೆಂದು ಸಮಿತಿಯು ತೀರ್ಮಾನಿಸಿತು.

09.ವಿಷಯ:ಸಂಖ್ಯೆ:ಅಸ್ಥಾಸ/(ಆ)/34/2010-11

ಶ್ರೀ ಜ್ಯೋತಿ ಸ್ಟೋರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2010-11

ಎ.ಪ್ರಗಸ್ಪತಿ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

11.ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2010-11

ವಿ.ಗುರುಸ್ವಾಮಿ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

12.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2010-11

ಎ.ಗ್ರಹದೀರ್ಘೈ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ



ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

13.ವಿಷಯ:ಸಂಖ್ಯೆ:ಅಸ್ಥಾಸ/(ಆ)/38/2010-11

ಬಿ.ವಿ.ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಪೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

14.ವಿಷಯ:ಸಂಖ್ಯೆ:ಅಸ್ಥಾಸ/(ಆ)/39/2010-11

ಬಿ.ದಾಮೋದರ್ ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು

ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.
ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

15.ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-201ರ ಆದೇಶಗಳಂತೆ 2011-2012ನೇ ಸಾಲಿನ ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2001ರ ಟಿಪ್ಪಣಿ.
ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಹಾಜರಿದ್ದು ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ನವೀಕರಿಸಬಾರದೆಂದು ಪತ್ರ ನೀಡಿ ಕೋರಿಕೊಂಡಿದ್ದರೂ ಸಹ ನವೀಕರಿಸಿರುತ್ತಾರೆ. ಆದ್ದರಿಂದ ಸ್ವತ್ತಿನ ಮಾಲೀಕರ ಅನುಮತಿ ಇಲ್ಲದೆ ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಪರವಾನಗಿಯನ್ನು ನವೀಕರಿಸಿಕೊಡದಂತೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಆರೋಗ್ಯಾದಿಕಾರಿ (ಪಶ್ಚಿಮ)ರವರು ಸದರಿ ಉದ್ದಿಮೆಯ ಪರವಾನಗಿಯನ್ನು ಈ ವರ್ಷದಲ್ಲಿ ನವೀಕರಿಸದಂತೆ ಸಂಬಂಧಪಟ್ಟವರಿಗೆ ತಿಳಿಸಲಾಗಿರುತ್ತದೆ. ಅದರಂತೆ ಈ ವರ್ಷದಲ್ಲಿ ಸದರಿ ಉದ್ದಿಮೆಯ ಪರವಾನಗಿಯನ್ನು ನವೀಕರಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ.

ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಮಾಲೀಕರು ಸದರಿ ಪ್ರಕರಣದಲ್ಲಿ ಪ್ರತಿವಾದಿಯನ್ನಾಗಿ ಮಾಡಿಕೊಳ್ಳಲು ಕೋರಿರುತ್ತಾರೆ. ಆದುದರಿಂದ ಮುಂದಿನ ದಿನಾಂಕಕ್ಕೆ ಪ್ರಕರವನ್ನು ಮುಂದೂಡಲಾಗಿದೆ.

-7-

16.ವಿಷಯ:ಸಂಖ್ಯೆ:ಅಸ್ಥಾಸ/(ಆ)/41/2010-11

ಶ್ರೀ.ಟಿ.ಜಿ.ಪ್ರಭಾಕರ್ ಗುಪ್ತಾರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.
ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

17.ವಿಷಯ:ಸಂಖ್ಯೆ:ಅಸ್ಥಾಸ/(ಆ)/42/2010-11

ನಾಗರಾಜ ಟ್ರೇಡಿಂಗ್‌ನ ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.
ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

18.ವಿಷಯ:ಸಂಖ್ಯೆ:ಅಸ್ಥಾಸ/(ಆ)/43/2010-11

ರಾಯಲ್ ಫೈರ್ ವರ್ಕ್ಸ್ ಇಂಡಸ್ಟ್ರೀಸ್ ಟ್ರೇಡಿಂಗ್ ಕಂಪನಿ, ಇವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

19.ವಿಷಯ:ಸಂಖ್ಯೆ:ಅಸ್ಥಾಸ/(ಆ)/44/2010-11

ಶ್ರೀಮತಿ.ಶಂಕರಮ್ಮ ಇವರು ದಿನಾಂಕ:ದಿನಾಂಕ:03-12-2010ರಂದು ಸಮಿತಿಗೆ ಮನವಿಯನ್ನು ಸಲ್ಲಿಸಿ ಸಂಖ್ಯೆ:12/1, 7ನೇ ಅಡ್ಡರಸ್ತೆ, ಸಂಪಂಗಿ ರಾಮನಗರ, ವಾರ್ಡ್-110 ಈ ಸ್ವತ್ತಿನಲ್ಲಿ ನಡೆಸುತ್ತಿರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳನ್ನು ನಗರ ಪಾಲಿಕೆಯಿಂದ ಪರವಾನಗಿ ಪಡೆದು ನಡೆಸುತ್ತಾ ಇರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳಿಗೆ ಪಡೆದಿರುವ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)ರವರ ಕಛೇರಿ, ಎಸ್-2 ಉಪ ವಿಭಾಗ ಇವರಿಗೆ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ)ರವರ ಪತ್ರ ಸಂಖ್ಯೆ:ಆ.ವೈ(ಶಿವ)ಪಿಆರ್/64/10-11, ದಿನಾಂಕ:6-10-2010ರ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರ ಪರವಾಗಿ ಅವರ ಪತಿಯವರಾದ ಶ್ರೀ.ರಾಜಶೇಖರ್‌ರವರು ಹಾಜರಿರುತ್ತಾರೆ. ಪ್ರತಿವಾದಿಗಳು ಈ ವಿಷಯದಲ್ಲಿ ಸ್ಪಷ್ಟವಾದ ನೋಟೀಸ್‌ನ್ನು 3 ದಿನಗಳೊಳಗಾಗಿ ಹೊರಡಿಸುವುದೆಂದು ತಿಳಿಸಿ ಪ್ರಕರಣವನ್ನು ಮುಂದೂಡಲಾಯಿತು.

20.ವಿಷಯ:ಸಂಖ್ಯೆ:ಅಸ್ಥಾಸ/(ಆ)/45/2010-11

ಶ್ರೀ.ಸಿ.ಪಯಾಜ್ ಪಾಷ, ನಂ.22/68 ಬಿ ಉಕ್ಕಾ ಮಸೀದಿ ರಸ್ತೆ, ಹೋಲಿ ಕ್ರೈಸ್ಟ್ ಶಾಲೆ ಎದುರು, ಅಶ್ವತ್ಥನಗರ, ಥಣೀಸಂದ್ರ, ಬೆಂಗಳೂರು-77 ಇಲ್ಲಿ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ರದ್ದುಗೊಳಿಸುವಂತೆ ಆರೋಗ್ಯ ವೈದ್ಯಾಧಿಕಾರಿ (ಬ್ಯಾಟರಾಯನಪುರ)ರವರು ದಿನಾಂಕ:12-10-2011ರಂದು ನೀಡಿರುವ ನೋಟೀಸಿನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಮೇಲ್ಮನವಿದಾರರಿಗೆ ಮತ್ತು ದೂರುದಾರರಿಗೆ ನೋಟೀಸ್ ಜಾರಿ ಮಾಡಿ ಮೂಲ ಕಡತದೊಂದಿಗೆ ಸಭೆಗೆ ಹಾಜರಾಗುವಂತೆ ಸೂಚಿಸಿದೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರು ಹಾಜರಿರುತ್ತಾರೆ. 1 ಮತ್ತು 2ನೇ ಪ್ರತಿವಾದಿಗಳು ಹಾಜರಿರುತ್ತಾರೆ. 3 ಪ್ರತಿವಾದಿಯು ಹಾಜರಿಲ್ಲದ ಪ್ರಯುಕ್ತ ಸದರಿಯವರಿಗೆ ನೋಟೀಸ್ ಜಾರಿಮಾಡುವಂತೆ ತಿಳಿಸಿ ಪ್ರಕರಣವನ್ನು ಪ್ರಕರಣವನ್ನು ಮುಂದೂಡಲಾಯಿತು.



21.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/46/2010-11

ಶ್ರೀ.ಎಸ್.ಮೋಹನ್, ನಂ.48/36, 18ನೇ ಮುಖ್ಯರಸ್ತೆ, ಉದಯಸ್ಕೂಲ್ ರಸ್ತೆ, ವಿಜಯನಗರ, ಬೆಂಗಳೂರು-10 ಇವರ ನಿವೇಶನ ಸಂಖ್ಯೆ:258, 7ನೇ ಮುಖ್ಯರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ ಈ ಸ್ವತ್ತನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸುಮಾರು 35 ವರ್ಷಗಳ ಹಿಂದೆ ವಶಪಡಿಸಿಕೊಂಡಿದ್ದು, ಈ ಬಗ್ಗೆ ಸದರಿಯವರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಹಾಗೂ ಅಹವಾಲು ಹೇಳಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಿಲ್ಲವೆಂದು ಹಾಗೂ ನಿವೇಶನ ಸಂಖ್ಯೆ:73, 4ನೇ ಟಿ ಬ್ಲಾಕ್, ಜಯನಗರ, 30-31ನೇ ಅಡ್ಡರಸ್ತೆಯಲ್ಲಿ 53X40 ಅಡಿ ಅಳತೆಯ ನಿವೇಶನವನ್ನು ಬದಲಿಯಾಗಿ ನೀಡಿ ರೂ.3,91,880/-ಗಳನ್ನು ಪಾವತಿಸಲು ಸೂಚಿಸಿರುತ್ತಾರೆ. ನನ್ನ ಸ್ವತ್ತನ್ನು ವಶಪಡಿಸಿಕೊಂಡಿರುವುದಕ್ಕೆ ಬದಲಿಯಾಗಿ ನಿವೇಶನವನ್ನು ನೀಡದೆ ಹಣವನ್ನ ಪಾವತಿಸಬೇಕೆಂದು ಕೇಳಿರುವುದು ಏಕೆಂದು ನನಗೆ ತಿಳಿಯುತ್ತಿಲ್ಲ. ನನ್ನ ಸ್ವತ್ತಿಗೆ ಬದಲಿಯಾಗಿ ಸ್ವತ್ತನ್ನು ನೀಡಬೇಕೆ ಹೊರತು ಹಣವನ್ನು ಪಾವತಿಸಿ ಎಂದು ಕೇಳುವುದು ಯಾವ ನ್ಯಾಯವೆಂದು ಪ್ರಶ್ನಿಸಿ ನ್ಯಾಯ ಒದಗಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅಫೀಲುದಾರರ ಹಾಜರಾಗಿರುತ್ತಾರೆ. ನಾವು ಜಿಪಿಎ ಮುಖಾಂತರ ಅನುಮತಿ ಪಡೆದಿದ್ದು, ಸ್ವತ್ತಿನ ಭೂ ಸ್ವಾಧೀನತೆಯನ್ನು ಕಾನೂನಿನ ಪ್ರಕಾರ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಆಸ್ತಿ ವಿಭಾಗದ ಅಧಿಕಾರಿಗಳಿಗೆ ನೋಟೀಸ್ ಜಾರಿ ಮಾಡಿ ಸಂಬಂಧಪಟ್ಟ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಪ್ರಕರಣವನ್ನು ಮುಂದೂಡಲಾಯಿತು.

22.ವಿಷಯ:ಸಂಖ್ಯೆ:ಅಸ್ಥಾಸ/(ಆ)/47/2010-11

ಶ್ರೀ.ಬಿ.ವಿ.ಗಣೇಶ್, ನಂ.632, 12ನೇ ಅಡ್ಡರಸ್ತೆ, 2ನೇ ಮುಖ, ಗಿರಿನಗರ, ಬೆಂಗಳೂರು ಇಲ್ಲಿ ಶ್ರೀ.ವೇಣುಗೋಪಾಲ್‌ರವರ ಹೆಸರಿನಲ್ಲಿ ಪಾಲಿಕೆ ವತಿಯಿಂದ 10 ಅಶ್ವ ಶಕ್ತಿಗೆ ಪರವಾನಗಿ ಪಡೆದು ಪ್ಲೋರ್ ಮಿಲ್‌ನ್ನು ನಡೆಸುತ್ತಿದ್ದು, ಪಕ್ಕದ ಮನೆಯವರ ಆಕ್ಷೇಪಣೆಯಿಂದ ನನಗೆ ನೀಡಿದ ಉದ್ದಿಮೆ ಪರವಾನಗಿ ಮತ್ತು ವಿದ್ಯುತ್‌ನ್ನು ಕಡಿತಗೊಳಿಸಿರುತ್ತಾರೆ. ಆದುದರಿಂದ ನನಗೆ

ಉದ್ದಿಮೆ ಪರವಾನಗಿ ಹಾಗೂ ವಿದ್ಯುತ್ ಸಂಪರ್ಕವನ್ನು ಕೊಡಿಸಿಕೊಡಬೇಕೆಂದು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರ ಪರವಾಗಿ ವಕೀಲರು ಹಾಜರಿದ್ದು, ಸದರಿ ಉದ್ದಿಮೆಗೆ 1991ರಲ್ಲಿ ಕತ್ತರಗುಪ್ಪೆ ಗ್ರಾಮ ಪಂಚಾಯಿತಿಯಿಂದ ಪರವಾನಗಿ ಪಡೆದು ಹಿಟ್ಟಿನ ಗಿರಣಿಯನ್ನು ನಡೆಸುತ್ತಿರುತ್ತಾರೆ. ಶ್ರೀ.ಕೃಷ್ಣರಾವ್‌ರವರು 1993ರಲ್ಲಿ ಪಂಚಾಯಿತಿಗೆ ತಕರಾರು ಸಲ್ಲಿಸಿದ ಕಾರಣ ಪರವಾನಿಗೆ ನವೀಕರಿಸದೇ ವಜಾ ಮಾಡಿರುತ್ತಾರೆ. ಇದನ್ನು ಪ್ರಶ್ನಿಸಿ ಶ್ರೀ.ಗಣೇಶ್‌ರವರು, ಬೆಂಗಳೂರ ಉಪ ವಿಭಾಗಾಧಿಕಾರಿಗಳಲ್ಲಿ ವಜಾ ಮಾಡಿರುವುದನ್ನು ಪ್ರಶ್ನಿಸಿದ ಹಿನ್ನೆಲೆಯಲ್ಲಿ ದಿನಾಂಕ:24-09-1993ರಂದು ನವೀಕರಿಸುವಂತೆ ಆದೇಶ ಮಾಡಿರುತ್ತಾರೆ. ಶ್ರೀ.ಕೃಷ್ಣರಾವ್‌ರವರು ಉಪ ವಿಭಾಗಾಧಿಕಾರಿಗಳ ಆದೇಶವನ್ನು ಪ್ರಶ್ನಿಸಿ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:35656/1993ರನ್ನು ಸಲ್ಲಿಸಿದ್ದು ಸದರಿ ದಾವೆಯಲ್ಲಿ ಒಂದು ವೇಳೆ ಮಾಲಿನ್ಯ ಬಂದಲ್ಲಿ ಪರಿಸರ ಮಾಲಿನ್ಯದವರಿಗೆ ದೂರು ನೀಡಬಹುದೆಂದು ಆದೇಶಿಸಿ ವಿಭಾಗಾಧಿಕಾರಿಗಳು ಮಾಡಿರುವ ಆದೇಶವು ಸಂಜಸವಾಗಿರುತ್ತದೆಂದು ದಾವೆಯನ್ನು ವಜಾ ಮಾಡಿರುತ್ತಾರೆ. ಇಷ್ಟಾದರೂ ಸಹ ಅಂಗವಿಕಲರಾದ ಶ್ರೀ.ಬಿ.ವಿ.ಗಣೇಶ್‌ರವರು ನಡೆಸುತ್ತಿರುವ ಹಿಟ್ಟಿನ ಗಿರಣಿಯ ಪರವಾನಗಿಯನ್ನು ರದ್ದು ಪಡಿಸಿರುವುದು ಯಾವ ನ್ಯಾಯ ಸ್ವಾಮಿ. ಈ ಬಗ್ಗೆ ಉದ್ದಿಮೆದಾರರು ರಾಜ್ಯ ಅಂಗವಿಕಲ ವ್ಯಕ್ತಿಗಳ ಆಯುಕ್ತರ ಕಛೇರಿಗೆ ದೂರು ಸಲ್ಲಿಸಿದ ಹಿನ್ನೆಲೆಯಲ್ಲಿ ರದ್ದು ಪಡಿಸಿರುವ ಆದೇಶವನ್ನು ಹಿಂಪಡೆಯಲು ತಿಳಿಸಿರುತ್ತಾರೆ. ಆದುದರಿಂದ ಅಂಗವಿಕಲರಾದ ಶ್ರೀ.ಬಿ.ವಿ.ಗಣೇಶ್‌ರವರಿಗೆ ಉದ್ದಿಮೆ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

**ನಿರ್ಣಯ**:-ವಕೀಲರ ವಾದ ಮತ್ತು ದಿನಾಂಕ:19-03-2011ರ ಆಯುಕ್ತರ ಟಿಪ್ಪಣಿಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಶ್ರೀ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು, ಸುಮಾರು 20 ವರ್ಷಗಳಿಂದ ಹಿಟ್ಟಿನ ಗಿರಣಿಯನ್ನು ನಡೆಸುತ್ತಿರುವುದು ಕಂಡು ಬರುತ್ತದೆ. ಸದರಿ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಶ್ರೀ.ಬಿ.ವಿ.ಗಣೇಶ್‌ರವರ ಉದ್ದಿಮೆಗೆ ರದ್ದು ಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಡಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

::ಸಹಿ::
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:20-05-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಎಲ್ಲಾ ವಲಯಗಳ ಅಪರ/ಜಂಟಿ/ಉಪ ಆಯುಕ್ತರು |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಉಪ ಆಯುಕ್ತರು (ಆರೋಗ್ಯ/ಕಂದಾಯ/ಮಾರುಕಟ್ಟೆ/ಕಲ್ಯಾಣ/ಜಾಹೀರಾತು) |
| 04 | ಬಿ.ಎಸ್.ಆನಂದ | ಸದಸ್ಯರು | ಎಲ್ಲಾ ವಲಯಗಳ ಮುಖ್ಯ ಅಭಿಯಂತರರುಗಳು |
| 05 | ಎಂ.ವಸಂತಕುಮಾರಿ | ಸದಸ್ಯರು | ಮುಖ್ಯ ಆರೋಗ್ಯ ವೈದ್ಯಾಧಿಕಾರಿಗಳು |
| 06 | ಬಿ.ಗೋವಿಂದರಾಜು | ಸದಸ್ಯರು | ಎಲ್ಲಾ ವಲಯಗಳ ಕಂದಾಯ ಅಧಿಕಾರಿಗಳು |
| 07 | ಡಿ.ವೆಂಕಟೇಶ್ | ಸದಸ್ಯರು | ಎಲ್ಲಾ ವಲಯಗಳ ಕಾರ್ಯಪಾಲಕ ಅಭಿಯಂತರರುಗಳು |
| 08 | ಜಿ.ಎನ್.ಆರ್.ಬಾಬು | ಸದಸ್ಯರು | ಎಲ್ಲಾ ವಲಯಗಳ ಆರೋಗ್ಯ ವೈದ್ಯಾಧಿಕಾರಿಗಳು |
| 09 | ಮುನಿರತ್ನಮ್ಮ | ಸದಸ್ಯರು | ಎಲ್ಲಾ ವಲಯಗಳ ತೋಟಗಾರಿಕೆ ಅಧೀಕ್ಷಕರುಗಳು |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ಸ್ವಾಗತವನ್ನು ಕೋರುತ್ತಾ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಚುನಾಯಿತರಾಗಿ ಅಪೀಲುಗಳ ಸ್ಥಾಯಿ ಸಮಿತಿಗೆ ಆಯ್ಕೆಯಾಗಿರುವ ಸದಸ್ಯರನ್ನು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಪರಸ್ಪರ ಪರಿಚಯ ಮಾಡಿಕೊಟ್ಟರು.

ಅಧ್ಯಕ್ಷರು ಮಾತನಾಡುತ್ತಾ, ನಕ್ಷೆಗಳಿಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಾಗ ಅಂತಹ ಮಾಲೀಕರಿಗೆ ಕೆ.ಎಂ.ಸಿ.ಕಾಯ್ದೆ ಕಲಂ 321(1) ಮತ್ತು (2)ರಡಿ (Provisional Order) ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದಾಗ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ ಆದೇಶಗಳನ್ನು ಪಡೆದಿರುತ್ತಾರೆ. ಹಾಗೂ ಕೆ.ಎಂ.ಸಿ.ಕಾಯ್ದೆ ಕಲಂ 321(3) (Confirmation Order) ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದಾಗ ಸದರಿ ಸ್ಥಿರೀಕರಣ ಆದೇಶವನ್ನು ಪ್ರಶ್ನಿಸಿ ಎಷ್ಟು ಕಟ್ಟಡದ ಮಾಲೀಕರು ಸಿಟಿ ಸಿವಿಲ್ ನ್ಯಾಯಾಲಯ, ಕರ್ನಾಟಕ ಘನ ಉಚ್ಚನ್ಯಾಯಾಲಯ ಮತ್ತು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣದಲ್ಲಿ ಪ್ರಕರಣವನ್ನು ದಾಖಲಿಸಿ ತಡೆಯಾಜ್ಞೆ, ಯಥಾಸ್ಥಿತಿ ಆದೇಶಗಳನ್ನು ಪಡೆದಿರುತ್ತಾರೆಂಬ ಬಗ್ಗೆ ವಿವರವಾದ ವರದಿಯನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಮುಂದುವರೆದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ವಾಣಿಜ್ಯ ಕಟ್ಟಡ, ಮಾಲ್, ಬಹು ಮಹಡಿ ಕಟ್ಟಡ ಹಾಗೂ ಇನ್ನಿತರೆ ಕಟ್ಟಡಗಳಿಗೆ ನಕ್ಷೆಗಳನ್ನು ಮಂಜೂರಾತಿ ನೀಡಲಾಗಿರುತ್ತದೆ. ಸದರಿ ನಕ್ಷೆಗಳನ್ನು ನೀಡುವಾಗ ಅನುಸರಿಸಿರುವ ಮಾನದಂಡಗಳೇನು. ಸಿ.ಡಿ.ಪಿ-2015ರ ಪ್ರಕಾರ ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆಯೇ ಅದೇ ರೀತಿ ನಕ್ಷೆ ಮಂಜೂರಾತಿ ಪಡೆದ ಮಾಲೀಕರು ಕಟ್ಟಡಗಳನ್ನು ಮಂಜೂರಾತಿ ನಕ್ಷೆಯ ಪ್ರಕಾರವೇ ನಿರ್ಮಿಸಿರುತ್ತಾರೆಯೇ. ಒಂದು ವೇಳೆ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಂತಹ ಮಾಲೀಕರ ವಿರುದ್ಧ ಎಷ್ಟು ಪ್ರಕರಣಗಳಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗಿರುತ್ತದೆ.

-2-

ಸಿ.ಡಿ.ಪಿ.ಯಲ್ಲಿ ನಮೂದಿಸಿರುವ ಮಾದರಿಯಲ್ಲಿಯೇ ರಸ್ತೆಗಳನ್ನು ಬಿಟ್ಟು ಕಟ್ಟಡದ ಮಾಲೀಕರು ಕಟ್ಟಡಗಳನ್ನು ನಿರ್ಮಿಸಿರುತ್ತಾರೆಯೇ ನಕ್ಷೆಯನ್ನು ಮಂಜೂರು ಮಾಡುವಾಗ ನೀವುಗಳು ಸ್ಥಳ ಪರಿಶೀಲನೆ ಮಾಡಿ ನಕ್ಷೆ ಮಂಜೂರಾತಿ ಮಾಡಲಾಗಿರುತ್ತದೆಯೇ ಎಂಬ ಬಗ್ಗೆ ವಿವರಗಳನ್ನು ನೀಡುವುದು.

ವಲಯವಾರು ಅನಧಿಕೃತವಾಗಿ ನಿರ್ಮಾಣ ಮಾಡಿರುವ ಕಟ್ಟಡಗಳೆಷ್ಟು, ವಾರ್ಷಿಕ ನಿಗಧಿ ಪಡಿಸಿರುವ ಕಂದಾಯದ ಮೊತ್ತವೆಷ್ಟು, ಹಾಲಿ ವಸೂಲಾಗಿರುವ ಕಂದಾಯದ ಮೊತ್ತವೆಷ್ಟು, ವಸೂಲಾಗಿರಬೇಕಾಗಿರುವ ಕಂದಾಯದ ಮೊತ್ತವೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸನ್ ಹಾಲ್‌ಗಳೆಷ್ಟು, ಕಲ್ಯಾಣ ಮಂಟಪ ಮತ್ತು ಕನ್‌ವೆನ್ಸನ್ ಹಾಲ್‌ಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಚಿತ್ರಮಂದಿರಗಳೆಷ್ಟು ಅವುಗಳಿಂದ ಬರುತ್ತಿರುವ ಕಂದಾಯದ ಮೊತ್ತವೆಷ್ಟು, ಎಷ್ಟು ಖಾಲಿ ನಿವೇಶನಗಳಿಂದ ಕಂದಾಯ ವಸೂಲಾಗಿರುತ್ತದೆ ಹಾಗೂ ಎಷ್ಟು ಕಟ್ಟಡಗಳಿಂದ ಕಂದಾಯ ವಸೂಲಾಗಿರುತ್ತದೆ. ಕಂದಾಯವನ್ನು ನಿಗಧಿ ಪಡಿಸಿಕೊಳ್ಳದಿರುವ ಖಾಲಿ ನಿವೇಶನ ಮತ್ತು ಕಟ್ಟಡಗಳೆಷ್ಟು, ವಾಣಿಜ್ಯ ಕಟ್ಟಡ/ಮಾಲ್‌ಗಳೆಷ್ಟಿರುತ್ತವೆ, ಅವುಗಳಿಂದ ವಸೂಲಾಗುತ್ತಿರುವ ಕಂದಾಯವೆಷ್ಟು,

ಕಂದಾಯವನ್ನು ನಿಗಧಿಪಡಿಸಿಕೊಳ್ಳದಿರುವ ಹಾಗೂ ತಪ್ಪಾಗಿ ನಿಗಧಿಪಡಿಸಿಕೊಂಡಿರುವ ಸ್ವತ್ತು/ಕಟ್ಟಡದ ಮಾಲೀಕರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ವಿವಿರವನ್ನು ನೀಡುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಪ್ರತಿ ವಲಯದಲ್ಲೂ ಯಾವ ಯಾವ ಕೇಬಲ್ ಸಂಸ್ಥೆಯವರು ಎಷ್ಟು ಮೀಟರ್‌ಗಳ ಕೇಬಲ್‌ಗಳನ್ನು ಅಳವಡಿಸಿರುತ್ತಾರೆ. ಕೇಬಲ್‌ಗಳನ್ನು ಅಳವಡಿಸಿದ ನಂತರ ಫಿಟ್‌ಗಳನ್ನು ಸರಿಯಾಗಿ ಮುಚ್ಚದೆ ಡಸ್ಟ್ ಹಾಕಿ ಮೇಲೆ ಟಾರ್ ಹಾಕಿರುತ್ತಾರೆ. ಅಂತಹ ಸಂಸ್ಥೆಯವರ ಮೇಲೆ ಏನು ಕ್ರಮ ಜರುಗಿಸಲಾಗಿರುತ್ತದೆ. ಆ ರೀತಿಯ ಎಷ್ಟು ಪ್ರಕರಣಗಳಲ್ಲಿ ಇದುವರೆವಿಗೆ ಕ್ರಮ ಕೈಗೊಳ್ಳಲಾಗಿರುತ್ತದೆಂಬ ಬಗ್ಗೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಆರೋಗ್ಯ ಇಲಾಖೆಯಲ್ಲಿ ಅಪೀಲು ಕೋರಿ ಬರುತ್ತಿರುವ ಅರ್ಜಿಗಳನ್ನು ಸ್ವೀಕರಿಸುತ್ತಿರುವುದಿಲ್ಲವೆಂಬುದನ್ನು ಸಮಿತಿಯು ಗಮನಿಸಿರುತ್ತದೆ. ಹಾಗೂ ಹಲವಾರು ಸಾರ್ವಜನಿಕರು ದೂರವಾಣಿ ಮುಖಾಂತರ ನನ್ನಲ್ಲಿ ಮನವಿ ಮಾಡಿಕೊಂಡಿರುತ್ತಾರೆ. ಯಾವ ಕಾರಣಕ್ಕಾಗಿ ನೀವು ಅರ್ಜಿಗಳನ್ನು ಸ್ವೀಕರಿಸುತ್ತಿಲ್ಲ ಹಾಗೂ ಹಿಂಬರಹ ನೀಡುವಾಗ ಸ್ಪಷ್ಟವಾದ ಕಾರಣವನ್ನು ತಿಳಿಸಿ ತಿರಸ್ಕರಿಸಲಾಗಿರುತ್ತೆಂಬ ಬಗ್ಗೆಯೂ ಸಹ ನಮೂದಿಸದೆ ಹಿಂಬರಹ ನೀಡುತ್ತಿರುವುದನ್ನು ಸಮಿತಿಯು ಗಮನಿಸಿರುತ್ತದೆ. ವಾರ್ಡ್‌ವಾರು 2010-2011 ಮತ್ತು 2011-12ನೇ ಸಾಲಿನಲ್ಲಿ ಎಷ್ಟು ಐಷಾರಾಮಿ ಹೋಟೆಲ್, ಮಧ್ಯಮ ವರ್ಗದ ಹೋಟೆಲ್ ಹಾಗೂ ದರ್ಶಿನಿಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು 2010-2011 ಮತ್ತು 2011-12ನೇ ಸಾಲಿನಲ್ಲಿ ಎಷ್ಟು ಬೃಹತ್ ಮತ್ತು ಸಣ್ಣ ಉದ್ದಿಮೆಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ವಾರ್ಡ್‌ವಾರು ಎಷ್ಟು ಮೀನು ಮಾರಾಟ ಮಳಿಗೆಗಳು, ಮಾಂಸ ಮಾರಾಟ ಮಳಿಗೆಗಳು ಹಾಗೂ ಕೋಳಿ ಮಾರಾಟ ಕೇಂದ್ರಗಳಿಗೆ ಪರವಾನಗಿ ನೀಡಲಾಗಿದೆಯೆಂಬ ಬಗ್ಗೆ ವಿಳಾಸದೊಂದಿಗೆ ವಿವರವನ್ನು ಒದಗಿಸುವುದು. ದಿನಿತ್ಯದ ಕಸವನ್ನು ನಿರ್ವಹಿಸುತ್ತಿರುವ ಸ್ಥಳ ಹಾಗೂ ಗುತ್ತಿಗೆದಾರರ ವಿವಿರಗಳನ್ನು ಒದಗಿಸುವುದು. ಆರೋಗ್ಯ ಇಲಾಖೆಯು ನೀಡುತ್ತಿರುವ ಪರವಾನಗಿ ಶುಲ್ಕದಿಂದ ನಗರ ಪಾಲಿಕೆಗೆ ಬರುತ್ತಿರುವ ಆಧಾಯವೆಷ್ಟು. ದಿನ ನಿತ್ಯ



ಸಂಗ್ರಹವಾಗುವ ತ್ಯಾಜ್ಯವನ್ನು ವಿಲೇ ಮಾಡುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂಬ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಒದಗಿಸುವುದೆಂದು ಸೂಚಿಸಿದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ವಲಯವಾರು ಎಷ್ಟು ಜಾಹೀರಾತು ಫಲಕಗಳನ್ನು ಅಳವಡಿಸಲಾಗಿರುತ್ತದೆ. ಅನಧಿಕೃತವಾಗಿ ಅಳವಡಿಸಿಕೊಂಡಿರುವ ಜಾಹೀರಾತುದಾರರ ವಿರುದ್ಧ ತೆಗೆದುಕೊಂಡಿರುವ ಕ್ರಮಗಳೇನು. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತು ಫಲಕಗಳು, ಬ್ಯಾನರ್‌ಗಳು ಮತ್ತು ಬಂಟಿಂಗ್ಸ್‌ಗಳನ್ನು ತೆರವುಗೊಳಿಸಲು ಅನುಸರಿಸುತ್ತಿರುವ ಕ್ರಮಗಳೇನು. ಜಾಹೀರಾತಿನಿಂದ ನಗರ ಪಾಲಿಕೆಯ ಬೊಕ್ಕಸಕ್ಕೆ ವಾರ್ಷಿಕ ಎಷ್ಟು ಆಧಾಯ ಬರುತ್ತಿದೆ. ಅನಧಿಕೃತವಾಗಿ ಪ್ರದರ್ಶಿತವಾಗುತ್ತಿರುವ ಜಾಹೀರಾತುಗಳ ವಿರುದ್ಧ ಇದುವರೆವಿಗೂ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ.

ಜಾಹೀರಾತು ಮಾಲೀಕರು ಪರವಾನಗಿಯನ್ನು ಪಡೆಯುವಾಗ ನೀಡುವ ಅಳತೆ ಮತ್ತು ಸಂಖ್ಯೆಗಳಿಗಿಂತ ಹೆಚ್ಚು ಅಳತೆ ಮತ್ತು ಸಂಖ್ಯೆಯ ಜಾಹೀರಾತುಗಳನ್ನು ಪ್ರದರ್ಶಿಸುತ್ತಿರುವುದಾಗಿ ತಿಳಿದು ಬಂದಿರುತ್ತದೆ. ಈ ರೀತಿ

ಪ್ರದರ್ಶಿತವಾಗುತ್ತಿರುವ ಎಷ್ಟು ಜಾಹೀರಾತುಗಳನ್ನು ಪತ್ತೆ ಹಚ್ಚಲಾಗಿರುತ್ತದೆ ಮತ್ತು ಅಂತಹ ಜಾಹೀರಾತುದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ. ಇದರಿಂದಾಗಿ ನಗರ ಪಾಲಿಕೆಗೆ ಆರ್ಥಿಕ ನಷ್ಟವುಂಟಾಗುವುದಿಲ್ಲವೆ ಎಂಬ ಬಗ್ಗೆ ವಿವರವನ್ನು ನೀಡುವುದು.

ಮುಂದುವರೆದಂತೆ ಕೆಲವೊಂದು ಜಾಹೀರಾತುದಾರರು ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಪಡೆದಿದ್ದು ತಡೆಯಾಜ್ಞೆಯನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳಲಾಗಿದೆಯೇ. ಪರವಾನಗಿ ಅವಧಿ ಮುಗಿದಿದ್ದರೂ ಸಹ ಕಾಲಮಿತಿಯೊಳಗೆ ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ತನ್ನಷ್ಟಕ್ಕೆ ತಾನೇ ಪರವಾನಗಿಯು (ಡೀಮ್ಡ್ ಪರ್ಮಿಷನ್) ಮುಂದುವರೆಯುತ್ತದೆಂದು ಭಾವಿಸಿ ಅಳವಡಿಸಿಕೊಂಡಿರುವ ಜಾಹೀರಾತು ಫಲಕಗಳೆಷ್ಟು.

ಘನ ಉಚ್ಚನ್ಯಾಯಾಲಯದ ರಿಟ್ ಪಿಟಿಷನ್ ಸಂಖ್ಯೆ:5954/2011(ಎಲ್‌ಬಿ-ಬಿಎಂಪಿ-ಪಿಐಎಲ್)ರಲ್ಲಿ ದಿನಾಂಕ:08-02-2011ರಂದು ನೀಡಿರುವ ಆದೇಶದಂತೆ ಇದುವರೆವಿಗೂ ತೆಗೆದುಕೊಂಡಿರುವ ಕ್ರಮಗಳೇನು. ಎಷ್ಟು ಪ್ರಕರಣಗಳಲ್ಲಿ ಕ್ರಮ ವಹಿಸಿರುತ್ತೀರಿ, ಕ್ರಮ ವಹಿಸದಿದ್ದರೆ ಏತಕ್ಕಾಗಿ ಕ್ರಮ ವಹಿಸಿರುವುದಿಲ್ಲವೆಂಬ ಬಗ್ಗೆ ವರದಿಯನ್ನು ನೀಡುವಂತೆ ಸಮಿತಿಗೆ ಸೂಚಿಸಿದರು.

ಪ್ರತಿ ವಲಯದಲ್ಲೂ ಹೊಸದಾಗಿ ಉದ್ಭವವಾಗಿರುವ ಸ್ಲಂಗಳೆಷ್ಟು. ಆ ಸ್ಲಂಗಳಲ್ಲಿ ವಾಸಿಸುತ್ತಿರುವವರಿಗೆ ಪಟ್ಟಗಳನ್ನು ನೀಡಲಾಗಿರುತ್ತದೆಯೇ. ಕೆಲವು ಕಡೆ ಸಾರ್ವಜನಿಕರು ಕಟ್ಟಡಗಳನ್ನು ನಿರ್ಮಾಣ ಮಾಡುವಾಗ ಅಲ್ಲಿರುವ ಮರಗಳನ್ನು ಅನುಮತಿ ಪಡೆಯದೆ ಕಡೆಯುತ್ತಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಅಂತಹ ಮಾಲೀಕರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗುತ್ತಿದೆ ಎಂಬ ಬಗ್ಗೆ ಪೂರ್ಣ ವಿವರಗಳನ್ನು ನೀಡುವುದು.

ಸಭೆಯಲ್ಲಿ ಹಾಜರಿದ್ದ ಸದಸ್ಯರಾದ ಶ್ರೀ.ಗೌತಮ್ ಕುಮಾರ್‌ರವರು ಮಾತನಾಡುತ್ತಾ, ಜೋಗುಪಾಳ್ಯದ ಜಟಕಾ ಸ್ಟಾಂಡ್ ಹತ್ತಿರ ಸುಮಾರು ಹತ್ತು ಸಾವಿರ ಚದರಡಿ ನಗರ ಪಾಲಿಕೆ ಜಾಗವನ್ನು ಅನಧಿಕೃತವಾಗಿ



ಉಪಯೋಗಿಸಲಾಗುತ್ತಿದೆ. ಈ ಬಗ್ಗೆ 8-9 ತಿಂಗಳ ಹಿಂದೆಯೇ ಸಂಬಂಧಪಟ್ಟ ಅಪರ ಆಯುಕ್ತರೊಂದಿಗೆ ತಪಾಸಣೆ ಮಾಡಲಾಗಿರುತ್ತದೆ. ಆದರೆ ಅನಧಿಕೃತವಾಗಿ ಅನೈತಿಕ ಚಟುವಟಿಕೆಗಳನ್ನು ನಡೆಸುತ್ತಿರುವವರನ್ನು ಇದುವರೆವಿಗೂ ತೆರವುಗೊಳಿಸಲು ಸಾಧ್ಯವಾಗಿರುವುದಿಲ್ಲ. ಕಾರಣ ಸದರಿ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳೇ ಇರುವುದಿಲ್ಲ. ಇದರಿಂದಾಗಿ ನಗರ ಪಾಲಿಕೆಯ ಆಸ್ತಿಯು ಅನಾವಶ್ಯವಾಗಿ ಯಾರದೋ ಪಾಲಗುತ್ತಿದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮ ವಹಿಸುವುದು.

ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಕೆ.ಎ.ಟಿ. ಮುಂದೆ ಇರುವ ಪ್ರಕರಣಗಳ ಬಗ್ಗೆ ಮಾಹಿತಿಯನ್ನು ಒದಗಿಸಿರುವುದಿಲ್ಲ ಇದನ್ನು ಸಮಿತಿಯು ಗಂಭೀರವೆಂದು ಪರಿಗಣಿಸಿ ತಮ್ಮ ತಮ್ಮ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕೆ.ಎ.ಟಿ. ಮುಂದೆ ದಾಖಲಾಗಿರುವ ಪ್ರಕರಣಗಳನ್ನು ವಿಳಾಸದೊಂದಿಗೆ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿದರು.

ಅನಧಿಕೃತವಾಗಿ ಕೇಬಲ್ ಅಳವಡಿಸುವುದು ಹಾಗೂ ಫಿಟ್‌ಗಳನ್ನು ಸರಿಯಾಗಿ ಮುಚ್ಚದ ಪ್ರಕರಣಗಳು ಕಂಡು ಬಂದಲ್ಲಿ ಸಂಬಂಧಪಟ್ಟ ಸಂಸ್ಥೆಯವರಿಗೆ ದಂಡವನ್ನು ವಿಧಿಸಲಾಗುವುದೆಂದು ಹಾಗೂ ವಿವರವಾದ ವರದಿಯನ್ನು ಸಮಿತಿಯ ಮುಂದೆ ಮಂಡಿಸುವುದಾಗಿ ಸಭೆಯಲ್ಲಿ ಹಾಜರಿದ್ದ ಮುಖ್ಯ ಅಭಿಯಂತರರು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಜಾಹೀರಾತು)ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಇತ್ತೀಚೆಗೆ ಯಾವುದೇ ಹೊಸ ಜಾಹೀರಾತುಗಳಿಗೆ ಪರವಾನಗಿಯನ್ನು ನೀಡುತ್ತಿರುವುದಿಲ್ಲ; ಅನಧಿಕೃತ ಜಾಹೀರಾತುಗಳನ್ನು ಆಗ್ಗಿಂದಾಂಗ್ಗೆ ತೆರವುಗೊಳಿಸಲಾಗುತ್ತಿದೆ ಹಾಗೂ ಅನಧಿಕೃತ ಜಾಹೀರಾತು ಪಲಕಗಳು, ಬಂಟಿಂಗ್ಸ್ ಮತ್ತು ಬ್ಯಾನರ್‌ಗಳನ್ನು ತೆರವುಗೊಳಿಸುವ ಕಾರ್ಯವನ್ನು ರಾತ್ರಿ ವೇಳೆಯಲ್ಲೂ ಸಹ ನಿರ್ವಹಿಸಲಾಗುತ್ತಿದೆ. ಇತ್ತೀಚೆಗೆ ನಗರ ಪಾಲಿಕೆಯಲ್ಲಿ ಜಾಹೀರಾತು ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ಜಾಹೀರಾತುದಾರರು ನ್ಯಾಯಾಲಯಗಳಲ್ಲಿ ತಡೆಯಾಜ್ಞೆ ಪಡೆದುಕೊಂಡು ಜಾಹೀರಾತುಗಳನ್ನು ಪ್ರದರ್ಶಿಸುತ್ತಿದ್ದಾರೆ. ತಡೆಯಾಜ್ಞೆ ತೆರವುಗೊಳಿಸುವ ಬಗ್ಗೆ ಈಗಾಗಲೇ ನಗರ ಪಾಲಿಕೆಯ ಕಾನೂನು ಕೋಶದ ವತಿಯಿಂದ ಕ್ರಮ ವಹಿಸಲಾಗುತ್ತಿದೆ. ಕಾಲಮಿತಿಯೊಳಗೆ ಪರವಾನಗಿಯನ್ನು ನವೀಕರಿಸದೇ ಇರುವುದರಿಂದ ತನ್ನಷ್ಟಕ್ಕೆ ತಾನೇ ಪರವಾನಗಿಯು (ಡೀಮ್ಡ್ ಪರ್ಮಿಷನ್) ಮುಂದುವರೆಯುವುದೆಂದು ತಿಳಿಸಿ, ಪ್ರದರ್ಶಿಸುತ್ತಿರುವ ಜಾಹೀರಾತುಗಳನ್ನು ತೆರವುಗೊಳಿಸುವ ಕಾರ್ಯವು ಪ್ರಗತಿಯಲ್ಲಿರುತ್ತದೆ. ವಲಯವಾರು ಅನಧಿಕೃತ ಜಾಹೀರಾತುಗಳನ್ನು ತೆರವುಗೊಳಿಸಲು ಗುತ್ತಿಗೆದಾರರನ್ನು ನೇಮಿಸಿಕೊಂಡು ಅವರಿಂದ ಕಾರ್ಯನಿರ್ವಹಿಸಲಾಗುತ್ತಿರುವುದಲ್ಲದೆ ಪ್ರಹಾರಿಯನ್ನು ಸಹ ಬಳಸಿಕೊಂಡು ಉತ್ತಮ ಮಟ್ಟದಲ್ಲಿ ಅನಧಿಕೃತ ಜಾಹೀರಾತು, ಬಂಟಿಂಗ್ಸ್ ಮತ್ತು ಬ್ಯಾನರ್‌ಗಳ ತೆರವಿಗೆ ಕ್ರಮ ವಹಿಸಲಾಗುತ್ತಿದೆಂದು ಸಭೆಗೆ ತಿಳಿಸಿದರು.

ಜಂಟಿ ಆಯುಕ್ತರು (ಬೊಮ್ಮನಹಳ್ಳಿ)ರವರು ಸಮಿತಿಗೆ ಕೆಲವೊಂದು ಮಾರ್ಗದರ್ಶನಗಳನ್ನು ನೀಡುತ್ತಾ ನಕ್ಷೆ ಉಲ್ಲಂಘನೆ ಮಾಡಿ ಕಟ್ಟಡ ನಿರ್ಮಾಣ ಮಾಡಿದ್ದು ಕೆ.ಎಂ.ಸಿ. ಕಾಯ್ದೆಯನ್ವಯ ಸದರಿ ಕಟ್ಟಡದ ಮಾಲೀಕರ ವಿರುದ್ಧ ಕ್ರಮ ಕೈಗೊಂಡಾಗ ಸದರಿ ಮಾಲೀಕರು ಕೆ.ಎ.ಟಿ.ಯಿಂದ ತಡೆಯಾಜ್ಞೆ ಪಡೆದಿರುತ್ತಾರೆ. ನಂತರ ರಸ್ತೆ ಕಡಿತಕ್ಕಾಗಿ



ಅರ್ಜಿಯನ್ನು ಸಲ್ಲಿಸಿದಾಗ ಸದರಿಯವರ ಮನವಿಯನ್ನು ತಿರಸ್ಕರಿಸಲಾಗಿತ್ತು. ಆದರೆ ಹಿಂದಿನ ಸಮಿತಿಯು ನಮಗೆ ವಾದ ಮಂಡಿಸಲು ಅವಕಾಶ ನೀಡದೆ ರಸ್ತೆ ಕಡಿತಕ್ಕೆ ಅನುಮತಿಯನ್ನು ನೀಡಿ ಏಕ ಪಕ್ಷೀಯವಾಗಿ ನಿರ್ಣಯ ಕೈಗೊಂಡಿರುತ್ತದೆ. ಇದರಿಂದಾಗಿ ವಾರ್ಡಿನ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಅಡಚಣೆ ಉಂಟಾಗಿರುತ್ತದೆ. ಆದ್ದರಿಂದ ಸದರಿ ನಿರ್ಣಯವನ್ನು ಮರು ಪರಿಶೀಲನೆಗಾಗಿ ಆಯುಕ್ತರ ಮುಖಾಂತರ ಸಮಿತಿಗೆ ಸಲ್ಲಿಸಲಾಗಿರುತ್ತದೆ. ಸದರಿ ನಿರ್ಣಯವನ್ನು ಮರು ಪರಿಶೀಲನೆ ಮಾಡಿ ಸೂಕ್ತ ನಿರ್ಣಯವನ್ನು ಮಾಡಿಕೊಡುವಂತೆ ಹಾಗೂ ಇನ್ನು ಮುಂದೆ ಏಕ ಪಕ್ಷೀಯ ನಿರ್ಣಯಗಳನ್ನು ಕೈಗೊಳ್ಳಬಾರದೆಂದು ಸಮಿತಿಯನ್ನು ವಿನಂತಿಸಿಕೊಂಡಿರುತ್ತಾರೆ.

ಘನ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:5954/2011ರಲ್ಲಿ ನೀಡಿರುವ ಆದೇಶದ ಪ್ರತಿಯೇ ನಮಗೆ ಬಂದಿರುವುದಿಲ್ಲವೆಂದು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ತಿಳಿಸಿ ಪ್ರತಿಯನ್ನು ಕಳುಹಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

ಕೊನೆಯದಾಗಿ ಅಧ್ಯಕ್ಷರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಚುನಾಯಿತ ಪ್ರತಿನಿಧಿಗಳಾದ ನಾವು ಮತ್ತು ಅಧಿಕಾರಿಗಳಾದ ನೀವು ಸೇರಿ ಕಾನೂನಿನಗೆ ಹಾಗೂ ನಗರದ ನಾಗರೀಕರಿಗೆ ಯಾವುದೇ ಚ್ಯುತಿ ಬರದಂತೆ ಕಾರ್ಯನಿರ್ವಹಿಸೋಣ ಎಂದು ತಿಳಿಸುತ್ತಾ, ಸಭೆಯನ್ನು ಮುಕ್ತಾಯಗೊಳಿಸಿದರು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರಜ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:10-06-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ಆಯುಕ್ತರು (ಆ-2) |
| 04 | ಬಿ.ಎಸ್.ಆನಂದ | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೋರಮಂಗಲ) |
| 05 | ಎಂ.ವಸಂತಕುಮಾರಿ | ಸದಸ್ಯರು | ಆರೋಗ್ಯಾಧಿಕಾರಿ(ಪಶ್ಚಿಮ/ದಕ್ಷಿಣ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಮುನಿರತ್ನಮ್ಮ | ಸದಸ್ಯರು | |
| 09 | ಶಾಹೀನ್ ತಾಜ್ | ಸದಸ್ಯರು | |
| 10 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01. ವಿಷಯ:ಸಂಖ್ಯೆ:ಅಸ್ಥಾಸ/(ಆ)/12/2010-11

ಶ್ರೀ.ಎ.ಎಸ್.ಕಾಮತ್, ವ್ಯವಸ್ಥಾಪಕ ನಿರ್ದೇಶಕರು, ಬಸವನಗುಡಿ ವಲಯ ವಾರ್ಡ್-154, ನಂ.1, 5ನೇ ಮೈನ್, ಬಸವನಗುಡಿ ರಸ್ತೆ, ಎನ್.ಆರ್.ಕಾಲೋನಿ ಬೆಂಗಳೂರು-19 ಇಲ್ಲಿ ಕಾಮತ್ ಬ್ಯೂಗಲ್ ರಾಕ್ ಹೋಟೆಲ್ ರೆಸ್ಟೋರೆಂಟ್ ಮತ್ತು 25 ಅಶ್ವಶಕ್ತಿ ಪರವಾನಗಿಯನ್ನು 2010-11ನೇ ಸಾಲಿಗೆ ನವೀಕರಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ಬಸವನಗುಡಿ)ವಲಯರುವರು ದಿನಾಂಕ:22-02-2010ರಂದು ತಡೆ ಹಿಡಿದಿರುವ ಹಿಂಬರಹ ವಿರುದ್ದ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-01-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ, ಮೇಲ್ಮನವಿದಾರರ ಪರವಾಗಿ ವಕೀಲರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಆರೋಗ್ಯ ವೈದ್ಯಾಧಿಕಾರಿಗಳ ಆದೇಶದ ವಿರುದ್ಧ ಅಪೀಲು ಸಲ್ಲಿಸಿದ್ದೇವೆ. ವಾಹನ ನಿಲ್ದಾಣಕ್ಕೆ ಸಾಕಷ್ಟು ಸ್ಥಳವಕಾಶವಿರುತ್ತದೆಂದು ತಿಳಿಸಿ ಪರವಾನಗಿಯನ್ನು ನವೀಕರಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

" ಸ್ಥಳಪರಿಶೀಲನೆಗಾಗಿ ಮುಂದೂಡಿದೆ"

02. ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11

ಮೆ||ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಮೂಲ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ಅಧಿಕಾರಿಗಳು ವಿಫಲರಾಗಿರುತ್ತಾರೆ. ಮುಂದಿನ ಸಭೆಗೆ ಮುಂಚಿತವಾಗಿ ಕಡತವನ್ನು ಸಮಿತಿಯ ಮುಂದೆ ಮಂಡಿಸುವುದಾಗಿ ಉಪ ಆಯುಕ್ತರು (ಜಾಹೀರಾತು)ರವರು ತಿಳಿಸಿರುತ್ತಾರೆ.

" ತೀರ್ಮಾನವನ್ನು ಕಾಯ್ದಿರಿಸಿದೆ"

03.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/33/2010-11

ನಂ.73, 7ನೇ ಅಡ್ಡರಸ್ತೆ, 60 ಅಡಿ ರಸ್ತೆ, ಜೆ.ಸಿ.ನಗರ, ಮಹಾಲಕ್ಷ್ಮಿಪುರಂ ಇಲ್ಲಿ ಶ್ರೀ.ಮುನೇಗೌಡ ಎಂಬುವವರು ಮಿನರಲ್ ವಾಟರ್ ಘಟಕ ಮತ್ತು ಮಾರಾಟ ಹಾಗೂ 20 ಅಶ್ವಶಕ್ತಿ ಉದ್ದಿಮೆ ಪರವಾನಗಿಯನ್ನು ಕೋರಿದ್ದು, ಸದರಿಯವರ ಮನವಿಯನ್ನು ದಿನಾಂಕ:02-12-2010ರಂ ಆರೋಗ್ಯ ವೈದ್ಯಾಧಿಕಾರಿ, (ಮಹಾಲಕ್ಷ್ಮೀಪರು) ವಲಯರವರು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:28-02-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮನವಿದಾರರ ಪರವಾಗಿ ವಕೀಲರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿದರು. ಪ್ರಕರಣದಲ್ಲಿ ಕುಡಿಯುವ ನೀರಿನ ವಿತರಣೆ ಕುರಿತಂತೆ ಪಕ್ಕದ ಮನೆಯವರ ಆಕ್ಷೇಪಣೆ ಮೇರೆಗೆ ವಿಚಾರಣೆಗೆ ಬಂದಿರುತ್ತದೆ. ಪರವಾನಗಿ ಕುರಿತಂತೆ ನಿಯಮಾನುಸಾರ ಮನವಿ ಸಲ್ಲಿಸಲಾಗಿರುತ್ತದೆ. ಸೆಲ್ಲಾರ್‌ನಲ್ಲಿ ಸಂಪ್ ನಿರ್ಮಾಣವನ್ನು ಮಾತ್ರ ಮಾಡಿದೆ ಹಾಗೂ ಸೆಲ್ಲಾರ್‌ನಲ್ಲಿ ಕೇವಲ ಯಂತ್ರೋಪಕರಣಗಳನ್ನು ಮಾತ್ರ ಸಂಗ್ರಹಿಸಲಾಗಿದೆ. ಆದರೆ ವೈದ್ಯಾಧಿಕಾರಿಗಳು ಯಾವುದೇ ವಿಧವಾದ ಕೂಲಂಕಷ ವಿಚಾರಣೆ ನಡೆಸದೆ ಪರವಾನಗಿ ನೀಡಲು ತಿರಸ್ಕರಿಸಿರುತ್ತಾರೆ. ಇದೇ ವಲಯದಲ್ಲಿ ಕೆಲವೊಂದು

-2-

ಅನಧಿಕೃತ ಕಾರ್ಯಗಳೂ ನಡೆಯುತ್ತಿದ್ದು, ಈ ಬಗ್ಗೆ ಅಧಿಕಾರಿಗಳು ಗಮನ ಹರಿಸದೆ ಇರುವುದು ಕಂಡು ಬಂದಿರುತ್ತದೆ. ನಾನು ಕೇವಲ 3 ಚಕ್ರ ವಾಹನದ ಮೂಲಕ ಪ್ರತಿದಿನ 320 ಕ್ಯಾನ್‌ಗಳನ್ನು ಮಾತ್ರ ವಿತರಿಸುತ್ತೇನೆ.

ಆರೋಗ್ಯಾಧಿಕಾರಿವಯರು ಪರಿಶೀಲನೆಗೆ ಬಂದಾಗ ನನ್ನ ಯಾವುದೇ ಹೇಳಿಕೆ ಪಡೆಯದೆ ನನ್ನ ವಿರುದ್ಧವಾಗಿ ದೂರು ಸಲ್ಲಿಸಿರುವವರ ಬಳಿ ಮಾಹಿತಿ ಪಡೆದಿರುತ್ತಾರೆ. ವೈದ್ಯಾಧಿಕಾರಿಗಳು ನಿಡಿರುವ ತಿಳುವಳಿಕೆ ಪತ್ರ ಕ್ರಮಬದ್ಧವಲ್ಲ. ಅನಧಿಕೃತವಾಗಿ ನಡೆಯುತ್ತಿರುವ ನೀರಿನ ವಿತರಣೆ ಬಗ್ಗೆ ಕ್ರಮ ಕೈಗೊಂಡಿಲ್ಲ. ವಸತಿ ಸ್ಥಳದಲ್ಲಿ ಗುಡಿಕೈಗಾರಿಕೆ ಹಾಗೂ ಇನ್ನಿತರೆ ಇಂತಹ ಕಾರ್ಯಗಳಿಗೆ ಪರವಾನಗಿ ನೀಡಲು ಅವಕಾಶವಿರುತ್ತದೆ. ಈ ಬಗ್ಗೆ ನಿಯಮಾನುಸಾರ ಕ್ರಮ ಕೈಗೊಳ್ಳಬಹುದು. ನಿಯಮಬಾಹಿರವಾಗಿ ಅನಧಿಕೃತವಾಗಿ ಕೆಲವು ಅಂಗಡಿಗಳು ನಡೆಯುತ್ತಿರುತ್ತವೆ. ತಮ್ಮ ಮನವಿ ನ್ಯಾಯಬದ್ಧವಾಗಿದ್ದು ನನ್ನ ಅಕ್ಕಪಕ್ಕದವರಿಂದ ಮಾತ್ರ ನಿರಾಕ್ಷೇಪಣಾ ಪತ್ರ ಪಡೆಯಬಹುದಾಗಿದ್ದು ತಮ್ಮ ಮನವಿಯನ್ನು ಪರಿಗಣಿಸಲು ಕೋರಿರುತ್ತಾರೆ.

ಆರೋಗ್ಯಾಧಿಕಾರಿಗಳು ತಮ್ಮ ಹೇಳಿಕೆಯಲ್ಲಿ ಪಕ್ಕದ ಮನೆಯವರ ಆಕ್ಷೇಪಣೆ ಇದ್ದು, ಮಂಜೂರಾತಿ ನಕ್ಷೆ ನೀಡಿಲ್ಲವೆಂದು ತಿಳಿಸಿರುತ್ತಾರೆ. ಬೈಲಾ ಪ್ರಕಾರ " ಎರಿಯೇಟೆಡ್ ವಾಟರ್ " ವಾಟರ್ ತಯಾರಿಸಲು ಅವಕಾಶವಿದೆ. ಆದರೆ ಅಕ್ಕ ಪಕ್ಕದವರಿಂದ ನಿರಾಕ್ಷೇಪಣಾ ಪತ್ರ ಬೇಕಾಗುತ್ತದೆಂದು ತಿಳಿಸಿರುತ್ತಾರೆ. ನಮ್ಮ ವಲಯದಲ್ಲಿ ನಿಯಮಗಳ ಪ್ರಕಾರ ಕ್ರಮ ಕೈಗೊಳ್ಳಲಾಗುತ್ತಿದೆ.

ಅಧ್ಯಕ್ಷರು ಆರೋಗ್ಯಾಧಿಕಾರಿಗಳನ್ನು ಘನ ಉಚ್ಚ ನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:5954/2011ರಲ್ಲಿ ನೀಡಿರುವ ಆದೇಶದಂತೆ ಎಷ್ಟು ಪ್ರಕರಣಗಳಲ್ಲಿ ಕ್ರಮ ಕೈಗೊಂಡಿದ್ದೀರಿ ಎಂದು ಕೇಳಿದಾಗ ಆರೋಗ್ಯಾಧಿಕಾರಿಗಳು ದೂರು ಬಂದರೆ ಮಾತ್ರ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ. ಈ ಪ್ರಕರಣದಲ್ಲಿ ಅಪೀಲುದಾರರು ನೀಡಿರುವ ದೂರಿನ ಮೇರೆಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ.

"ಸ್ಥಳ ಪರಿಶೀಲನೆಗಾಗಿ ಕಾಯ್ದಿರಿಸಿದೆ"

04. ವಿಷಯ:ಸಂಖ್ಯೆ:ಅಸ್ಥಾಸ/(ಆ)/34/2010-11

ಶ್ರೀ ಜ್ಯೋತಿ ಸ್ಟೋರ್ಸ್ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಜ್ಯೋತಿ ಸ್ಟೋರ್ಸ್‌ನವರು ಹಾಜರಿರುತ್ತಾರೆ. ಮೇಲ್ಮನವಿದಾರರಿಗೆ ವಿಚಾರಣೆಗೆ ನೋಟಿಸ್ ಜಾರಿಯಾಗಿರುವುದಿಲ್ಲ. ಕಾಲದಿಂದಲೂ ನವೀಕರಿಸಿಕೊಂಡು ಬಂದಿರುತ್ತೇವೆ. ಈಗ ನವೀಕರಣ ಮಾಡದೆ ಇರುವುದರಿಂದ ತಾವು ಮನವಿ ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಪೋಲೀಸ್ ಇಲಾಖೆ ಹಾಗೂ ಫೈರ್ ಪೋರ್ಸ್‌ನವರು ಅನುಮತಿ ನೀಡಿರುತ್ತಾರೆ.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

05.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2010-11

ಎ.ಪ್ರಗಸ್ವತಿ ಪರವಾಗಿ ಮ್ಯಾನೇಜಿಂಗ್ ಪಾರ್ಟನರ್ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

06.ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2010-11

ವಿ.ಗುರುಸ್ವಾಮಿ ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"



07.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2010-11

ಎ.ಗ್ರಹದೀರ್ಕ್ರೈ, ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

08.ವಿಷಯ:ಸಂಖ್ಯೆ:ಅಸ್ಥಾಸ/(ಆ)/38/2010-11

ಬಿ.ವಿ.ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

09.ವಿಷಯ:ಸಂಖ್ಯೆ:ಅಸ್ಥಾಸ/(ಆ)/39/2010-11

ಬಿ.ದಾಮೋದರ್ ಭಂಡಾರ್‌ಕರ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/282/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

10.ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-201ರ ಆದೇಶಗಳಂತೆ 2011-2012ನೇ ಸಾಲಿನ ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ದೂರುದಾರರಿಗೆ ನೋಟೀಸ್ ಜಾರಿಯಾಗಿರುವುದಿಲ್ಲ. ವೈದ್ಯಾಧಿಕಾರಿಗಳು ತಿಳುವಳಿಕೆ ಪತ್ರ ಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

" ವಿಚಾರಣೆಯನ್ನು ಮುಂದೂಡಿದೆ" 11.ವಿಷಯ:ಸಂಖ್ಯೆ:ಅಸ್ಥಾಸ/(ಆ)/41/2010-11

ಶ್ರೀ.ಟಿ.ಜಿ.ಪ್ರಭಾಕರ್ ಗುಪ್ತಾರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"



12.ವಿಷಯ:ಸಂಖ್ಯೆ:ಅಸ್ಥಾಸ/(ಆ)/42/2010-11

ನಾಗರಾಜ ಟ್ರೇಡಿಂಗ್‌ನ ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

13.ವಿಷಯ:ಸಂಖ್ಯೆ:ಅಸ್ಥಾಸ/(ಆ)/43/2010-11

ರಾಯಲ್ ಫೈರ್ ವರ್ಕ್ಸ್ ಇಂಡಸ್ಟ್ರೀಸ್ ಟ್ರೇಡಿಂಗ್ ಕಂಪನಿ, ಇವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೂಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ''ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ''

14. ವಿಷಯ:ಸಂಖ್ಯೆ:ಅಸ್ಥಾಸ/(ಆ)/44/2010-11

ಶ್ರೀಮತಿ.ಶಂಕರಮ್ಮ ಇವರು ದಿನಾಂಕ:ದಿನಾಂಕ:03-12-2010ರಂದು ಸಮಿತಿಗೆ ಮನವಿಯನ್ನು ಸಲ್ಲಿಸಿ ಸಂಖ್ಯೆ:12/1, 7ನೇ ಅಡ್ಡರಸ್ತೆ, ಸಂಪಂಗಿ ರಾಮನಗರ, ವಾರ್ಡ್-110 ಈ ಸ್ವತ್ತಿನಲ್ಲಿ ನಡೆಸುತ್ತಿರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳನ್ನು ನಗರ ಪಾಲಿಕೆಯಿಂದ ಪರವಾನಗಿ ಪಡೆದು ನಡೆಸುತ್ತಾ ಇರುವ ವಿದ್ಯುತ್ ಚ್ಛಕ್ತಿ ಚಾಲಿತ ಮಗ್ಗಗಳಿಗೆ ಪಡೆದಿರುವ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)ರವರ ಕಛೇರಿ, ಎಸ್-2 ಉಪ ವಿಭಾಗ ಇವರಿಗೆ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ)ರವರ ಪತ್ರ ಸಂಖ್ಯೆ:ಆ.ವೈ(ಶಿವ)ಪಿಆರ್/64/10-11, ದಿನಾಂಕ:6-10-2010ರ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮನವಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿರುತ್ತಾರೆ. ಆರೋಗ್ಯಾಧಿಕಾರಿಗಳು ಗೈರು ಹಾಜರಾಗಿರುತ್ತಾರೆ. ಮಗ್ಗದಿಂದ ನಮ್ಮ ಜೀವನ, ಅಕ್ಕ ಪಕ್ಕದಲ್ಲಿ ಎಲ್ಲರೂ ಮಗ್ಗ ನಡೆಸುತ್ತಿದ್ದಾರೆ. ನಮಗೆ ಮಾತ್ರ ತೊಂದರೆ ನೀಡುತ್ತಿದ್ದಾರೆ. 22 ವರ್ಷಗಳಿಂದ ಮಗ್ಗ ನಡೆಯುತ್ತಿದೆ. ಇಲ್ಲಿ 110 ಮಗ್ಗಗಳು ಇವೆ ಕೇವಲ ನಮಗೆ ಮಾತ್ರ ನೋಟೀಸ್ ಜಾರಿ ಮಾಡಿದ್ದಾರೆ. ಇಲ್ಲಿ ಗುಡಿ ಕೈಗಾರಿಕೆಯಿಂದ ಸರ್ಕಾರದಿಂದ ನಮಗೆ ಶೇ.50ರಷ್ಟು ರಿಯಾಯಿತಿ ಸಹ ಇದೆ. ಇದು ಸಣ್ಣ ಗುಡಿಕೈಗಾರಿಕೆ. ನಮಗೆ ಪರವಾನಗಿಯನ್ನು ರದ್ದು ಪಡಿಸಕೂಡದು ಎಂದು ಕೇಳಿರುತ್ತಾರೆ. ನಾವು ಪಾಲಿಕೆಯ ನೀತಿ ನಿಯಮ ಪ್ರಕಾರವೇ ನಡೆಸುತ್ತಿದ್ದೇವೆ.

''ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ''

15. ವಿಷಯ:ಸಂಖ್ಯೆ:ಅಸ್ಥಾಸ/(ಆ)/45/2010-11

ಶ್ರೀ.ಸಿ.ಪಯಾಜ್ ಪಾಷ, ನಂ.22/68 ಬಿ ಉಕ್ಬಾ ಮಸೀದಿ ರಸ್ತೆ, ಹೋಲಿ ಕ್ರೈಸ್ಟ್ ಶಾಲೆ ಎದುರು, ಅಶ್ವಥ್ಥನಗರ, ಥಣೀಸಂದ್ರ, ಬೆಂಗಳೂರು-77 ಇಲ್ಲಿ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ರದ್ದುಗೊಳಿಸುವಂತೆ ಆರೋಗ್ಯ ವೈದ್ಯಾಧಿಕಾರಿ (ಬ್ಯಾಟರಾಯನಪುರ)ರವರು ದಿನಾಂಕ:12-10-2011ರಂದು ನೀಡಿರುವ ನೋಟೀಸಿನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಮತ್ತು ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

16.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/46/2010-11

ಶ್ರೀ.ಎಸ್.ಮೋಹನ್, ನಂ.48/36, 18ನೇ ಮುಖ್ಯರಸ್ತೆ, ಉದಯಸ್ಕೂಲ್ ರಸ್ತೆ, ವಿಜಯನಗರ, ಬೆಂಗಳೂರು-10 ಇವರ ನಿವೇಶನ ಸಂಖ್ಯೆ:258, 7ನೇ ಮುಖ್ಯರಸ್ತೆ, 3ನೇ ಬ್ಲಾಕ್, ತ್ಯಾಗರಾಜನಗರ ಈ ಸ್ವತ್ತನ್ನು ಸಾರ್ವಜನಿಕ ಉಪಯೋಗಕ್ಕಾಗಿ ಸುಮಾರು 35 ವರ್ಷಗಳ ಹಿಂದೆ ವಶಪಡಿಸಿಕೊಂಡಿದ್ದು, ಈ ಬಗ್ಗೆ ಸದರಿಯವರಿಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ ಹಾಗೂ ಅಹವಾಲು ಹೇಳಿಕೊಳ್ಳಲು ಅವಕಾಶ ಮಾಡಿಕೊಟ್ಟಿರುವುದಿಲ್ಲವೆಂದು ಹಾಗೂ ನಿವೇಶನ ಸಂಖ್ಯೆ:73, 4ನೇ ಟಿ ಬ್ಲಾಕ್, ಜಯನಗರ, 30-31ನೇ ಅಡ್ಡರಸ್ತೆಯಲ್ಲಿ 53X40 ಅಡಿ ಅಳತೆಯ ನಿವೇಶನವನ್ನು ಬದಲಿಯಾಗಿ ನೀಡಿ ರೂ.3,91,880/-ಗಳನ್ನು ಪಾವತಿಸಲು ಸೂಚಿಸಿರುತ್ತಾರೆ. ನನ್ನ ಸ್ವತ್ತನ್ನು ವಶಪಡಿಸಿಕೊಂಡಿರುವುದಕ್ಕೆ ಬದಲಿಯಾಗಿ ನಿವೇಶನವನ್ನು ನೀಡದೆ ಹಣವನ್ನ ಪಾವತಿಸಬೇಕೆಂದು ಕೇಳಿರುವುದು ಏಕೆಂದು ನನಗೆ ತಿಳಿಯುತ್ತಿಲ್ಲ. ನನ್ನ ಸ್ವತ್ತಿಗೆ ಬದಲಿಯಾಗಿ ಸ್ವತ್ತನ್ನು ನೀಡಬೇಕೆ ಹೊರತು ಹಣವನ್ನು ಪಾವತಿಸಿ ಎಂದು ಕೇಳುವುದು ಯಾವ ನ್ಯಾಯವೆಂದು ಪ್ರಶ್ನಿಸಿ ನ್ಯಾಯ ಒದಗಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ.

-5-

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಮತ್ತು ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

17. ವಿಷಯ:ಸಂಖ್ಯೆ:ಅಸ್ಥಾಸ/(ಇತರೆ)/01/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೇಂದ್ರೀಯ ಸಂಘದ ಅಧ್ಯಕ್ಷರಾದ ಶ್ರೀ.ಪಿ.ದಯಾನಂದ್‌ರವರು ಸಮಿತಿಗೆ ದೂರನ್ನು ಸಲ್ಲಿಸಿ ಹಿಂದಿನ ಅಧ್ಯಕ್ಷರಾದ ಶ್ರೀ.ಸುಬ್ರಮಣ್ಯಂರವರು ಸಂಘಕ್ಕೆ ನೀಡಿರುವ ಕಟ್ಟಡವನ್ನು ಹಿಂಪಡೆಯಲು ಮಾನ್ಯ ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯವರಿಗೆ ದೂರನ್ನು ನೀಡಿರುತ್ತಾರೆ. ಸದರಿಯವರ ದೂರಿನನ್ವಯ ದಿನಾಂಕ:12-01-2011ರ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ:ಸಿಆಸುಸ್ಥಾಸ/11/2010-11ರಲ್ಲಿ ಕೇಂದ್ರೀಯ ನೌಕರರ ಸಂಘಕ್ಕೆ ಚುನಾವಣೆ ನಡೆಸುವ ಬಗ್ಗೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದರೆ ಚುನಾವಣೆ ನಡೆಸಲು ಕೆಲವು ನೀತಿ ನಿಯಮಗಳನ್ನು ಪಾಲಿಸಬೇಕಾಗಿರುತ್ತದೆ. ಹಾಗೂ ಇನ್ನೂ ಚುನಾವಣೆ ನಡೆಸಲು 7-8 ತಿಂಗಳ ಕಾಲಾವಕಾಶವಿರುತ್ತದೆ. ಆದ್ದರಿಂದ ಈ ಬಗ್ಗೆ ಹಿಂದಿನ ಅಧ್ಯಕ್ಷರು ರಾಜಿನಾಮೆ ನೀಡಿರುವ ನಂತರವೂ ಸಹ ಕಾನೂನು ಭಾಹಿರವಾಗಿ ಸಂಘದ ಲೆಟರ್‌ಹೆಡ್‌ನ್ನು ಉಪಯೋಗಿಸಿ ದೂರನ್ನು ನೀಡಿರುವುದು ಸಂಶಯಾಸ್ಪದವಾಗಿರುತ್ತದೆ. ಆದುದರಿಂದ ಸದರಿ ಕಡತವನ್ನು ತರಿಸಿ ನಮ್ಮ ಅಹವಾಲನ್ನು ಕೇಳಿ ಸೂಕ್ತ ನ್ಯಾಯ

ಒದಿಗಿಸಿಕೊಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ: 18-03-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮನವಿದಾರರು ಗೈರು ಹಾಜರಾಗಿರುತ್ತಾರೆ. ಹಾಜರಿದ್ದ ಸಹಾಯಕ ಆಯುಕ್ತರು (ಆ-2)ರವರು ಮನವಿದಾರರಿಗೆ ತಿಳುವಳಿಕೆ ಪತ್ರ ಜಾರಿಯಾಗಿರುವುದಾಗಿ ತಿಳಿಸಿರುತ್ತಾರೆ.

ನಿರ್ಣಯ:- ಸಮಿತಿಯು ಆಯುಕ್ತರ ಟಿಪ್ಪಣಿಯನ್ನು ಹಾಗೂ ಸದರಿ ವಿಷಯವನ್ನು ಕೆ.ಎಂ.ಸಿ.ಕಾಯ್ದೆ 61-ಎ(1)(ಐ)ರಡಿಯಲ್ಲಿ ಕೈಗೆತ್ತಿಕೊಂಡು ಕೂಲಂಕಷವಾಗಿ ಪರಿಶೀಲಿಸಿದ ನಂತರ ಹಿಂದಿನ ಅಧ್ಯಕ್ಷರಾದ ಶ್ರೀ.ಸುಬ್ರಮಣ್ಯರವರು ರಾಜಿನಾಮೆ ನೀಡಿದ ನಂತರ ಸಂಘದ ಲೆಟರ್ ಹೆಡ್‌ನ್ನು ದುರುಪಯೋಗ ಪಡಿಸಿಕೊಂಡಿದ್ದಲ್ಲಿ ಮಾನ್ಯ ಆಯುಕ್ತರು ಕಾನೂನಿನ ಪ್ರಕಾರ ಕ್ರಮ ಕೈಗೊಳ್ಳುವುದು ಹಾಗೂ ಸಂಘಕ್ಕೆ ಚುನಾವಣೆ ನಡೆಸುವ ಬಗ್ಗೆ ಸಂಬಂಧಪಟ್ಟ ಸಂಘ ಸಂಸ್ಥೆಗಳ ನಿಬಂಧಕರಿಂದ ನೀತಿ ನಿಯಮಗಳನ್ನು ಪಡೆದು ಸದರಿ ನೀತಿ ನಿಯಮಗಳಂತೆ ಚುನಾವಣೆ ನಡೆಸುವುದು ಹಾಗೂ ಚುನಾವಣೆ ನಡೆಸುವವರೆವಿಗೂ ಹಾಲಿ ಸಂಘದ ಚಟುವಟಿಕೆಗಳಿಗೆ ಉಪಯೋಗಿಸುತ್ತಿರುವ ಕಟ್ಟಡದ ಯಥಾಸ್ಥಿತಿಯನ್ನು ಕಾಪಾಡಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>18. ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/02/2011-12</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾರ್ಡ್-168 ಮಾರೇನಹಳ್ಳಿ ಕೆರೆ ಅಂಗಳ, 20ನೇ ಅಡ್ಡರಸ್ತೆ, ಸ್ವತ್ತಿನ ಸಂಖ್ಯೆ:01, ಈ ಸ್ವತ್ತಿನ ಅಂಚಿನಲ್ಲಿರುವ ಜಾಗವನ್ನು ಹಂಚಿಕೆ ಮಾಡಿಕೊಡುವಂತೆ ಸದರಿ ಸ್ವತ್ತಿನ ಮಾಲೀಕರಾದ ಶ್ರೀಮತಿ.ಕಾಮಾಕ್ಷಿಯವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:05-04-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮನವಿದಾರರು ಹಾಜರಿರುತ್ತಾರೆ. ತಮ್ಮ ಹೇಳಿಕೆಯಲ್ಲಿ ಇದು ಮಾರ್ಜಿನಲ್ ಲ್ಯಾಂಡ್ ಪ್ರಕರಣವಾಗಿದ್ದು ಮನವಿದಾರರು ತಮ್ಮ ಮನವಿಯನ್ನು ಪರಿಗಣಿಸಲು ಕೋರಿರುತ್ತಾರೆ.

**<u>ನಿರ್ಣಯ</u>**:-ಆಯುಕ್ತರು ದಿನಾಂಕ:05-04-2011ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯ ತೀರ್ಮಾನಿಸಲಾಯಿತು.

<u>19. ವಿಷಯ:ಸಂಖ್ಯೆ:ಅಸ್ಥಾಸ/(ತೆ)/03/2011-12</u>

ಚಂದ್ರೋದಯ ಕನ್ವೆಷನ್ ಸೆಂಟರ್‌ನ ಮಾಲೀಕರು ದಿನಾಂಕ:11-02-2009ರಂದು ನ್ಯಾಯಾಲಯದಲ್ಲಿ ಚಂದ್ರ ಸಾಗರ್ ಎಂಟರ್‌ಪ್ರೈಸಸ್‌ರವರ ಮಾಲೀಕತ್ವದಲ್ಲಿ ನಡೆಸುತ್ತಿರುವ ಚಂದ್ರೋದಯ ಕನ್ವೆಷನ್ ಸೆಂಟರ್‌ನ ತೆರಿಗೆ ವಿಷಯವನ್ನು ನಗರ ಪಾಲಿಕೆಯ ಅಪೀಲು ಸಮಿತಿಗೆ ವಾಪಸ್ ಕಳುಹಿಸಿ ಮತ್ತೊಮ್ಮೆ ನಮ್ಮ ಸಂಸ್ಥೆಗೆ ಅವಕಾಶ ನೀಡಿ ವಿಚಾರಣೆ ನಡೆಸಿ ತೀರ್ಮಾನ ತೆಗೆದುಕೊಳ್ಳಲು ಆದೇಶಿಸಿದ್ದು, 6 ತಿಂಗಳು ಕಳೆದಿದ್ದರೂ ಸಹ ಇದುವರೆವಿಗೂ ನಗರ ಪಾಲಿಕೆ ವತಿಯಿಂದ ನಮ್ಮನ್ನು ವಿಚಾರಣೆಗೆ ಕರೆದಿರುವುದಿಲ್ಲವೆಂದು ತಿಳಿಸಿ ನ್ಯಾಯಾಲಯದ ಆದೇಶದಂತೆ ವಿಚಾರಣೆ ಮಾಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮನವಿದಾರರು ಗೈರು ಹಾಜರಾಗಿರುತ್ತಾರೆ. ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿರವರು ಈ ಆಸ್ತಿಯು ಬಿ.ಟಿ.ಎಂ.ವಲಯಕ್ಕೆ ಬರುವುದಾಗಿ ತಿಳಿಸಿರುತ್ತಾರೆ. ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಗೈರು ಹಾಜರಿಯಾಗಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

-6-

<u>20. ವಿಷಯ:ಸಂಖ್ಯೆ:ಅಸ್ಥಾಸ/(ಕಾ)/04/2011-12</u>

ಸ್ವತ್ತಿನ ಸಂಖ್ಯೆ:5/1, ಸರ್ವೆ ನಂ.116/3ರಲ್ಲಿ ಕಟ್ಟಿರುವ ಕಟ್ಟಡದ ವಿರುದ್ಧ ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದ್ದು, ಸದರಿ ಆದೇಶವು ಬೇರೆಯವರ ಹೆಸರಿನಲ್ಲಿದ್ದು ನನ್ನ ಮನೆಯ ಗೋಡೆಗೆ ಅಂಟಿಸಿರುತ್ತಾರೆಂದು ಮಾಲೀಕರಾದ ಶ್ರೀ.ವೇಣುಗೋಪಾಲ ರೆಡ್ಡಿರವರು ತಾತ್ಕಾಲಿಕ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು ಅಧಿಕಾರಿಗಳು ಮನವಿದಾರರಿಗೆ ನೋಟೀಸ್‌ನ್ನು ಜಾರಿಮಾಡಿಲ್ಲದಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

<u>21. ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12</u>

ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು ಅಧಿಕಾರಿಗಳು ಮನವಿದಾರರಿಗೆ ನೋಟೀಸ್‌ನ್ನು ಜಾರಿಮಾಡಿರುವುದಿಲ್ಲ ಇದರಿಂದಾಗಿ ಅರ್ಜಿದಾರರು ಗೈರು ಹಾಜರಾಗಿದ್ದು, ಎಸ್ಟೇಟ್ ಅಧಿಕಾರಿಗಳೂ ಹಾಜರಿಯಾಗಿರುತ್ತಾರೆ. ಸಹಾಯಕ ಕಂದಾಯ ಅಧಿಕಾರಿಗಳು ಗೈರುಹಾಜರಾಗಿರುವುದರಿಂದ ಪ್ರಕರಣವನ್ನು ಮುಂದಿನ ದಿನಾಂಕಕ್ಕೆ ಮುಂದೂಡಲಾಯಿತು.

22. ವಿಷಯ:ಸಂಖ್ಯೆ:ಅಸ್ಥಾಸ/(ಆ)/06/2010-11

ಮಂಜು ಟ್ರೇಡಿಂಗ್ ಕಂಪನಿಯ ಮಾಲೀಕರಾದ ಶ್ರೀ.ಎ.ಜಯಚಂದ್ರನ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

23. ವಿಷಯ:ಸಂಖ್ಯೆ:ಅಸ್ಥಾಸ/(ಆ)/07/2010-11

ಶ್ರೀ.ಕೆ.ಎಸ್.ಉದಯಶಂಕರ್, ಶ್ರೀ ಶಿವಾನಂದ ಸ್ಟೋರ್ಸ್ ಇವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೂಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ಸಂಖ್ಯೆ:ಆ.ವೈ(ಕಾ)/ಪಿಆರ್/182/10-11, ದಿನಾಂಕ 09.02.2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು.

"ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ"

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರಜ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:25-06-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಉಪ ಆಯುಕ್ತರು (ಜಾಹೀರಾತು) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ಆಯುಕ್ತರು (ಭೂಸ್ವಾಧೀನ ಮತ್ತು ಟಿಡಿಆರ್) |
| 04 | ಬಿ.ಎಸ್.ಆನಂದ | ಸದಸ್ಯರು | ಉಪ ಆರೋಗ್ಯಾಧಿಕಾರಿ(ಪಶ್ಚಿಮ/ಯಲಹಂಕ/ಪೂರ್ವ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸಹಾಯಕ ಕಂದಯ ಅಧಿಕಾರಿ (ಬಿ.ಟಿ.ಎಂ.ಬಡಾವಣೆ/ವಸಂತನಗರ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |

| | | | |
|---|---|---|---|
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

03. ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-201ರ ಆದೇಶಗಳಂತೆ 2011-2012ನೇ ಸಾಲಿನ ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಸದರಿ ಕಟ್ಟಡವನ್ನು ಶ್ರೀ.ಜಿ.ದಯಾನಂದ ಎಂಬುವವರಿಗೆ ದಿನಾಂಕ:01-12-2005ರಂದು ಬಾಡಿಗೆಗೆ ನೀಡಿದ್ದು, ಶ್ರೀ.ಜಿ.ದಯಾನಂದರವರು ಪರವಾನಗಿ ಇಲ್ಲದೆ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ನ್ನು ನಡೆಸುತ್ತಿರುತ್ತಾರೆ. ಸದರಿ ಸ್ವತ್ತಿನ ಗುತ್ತಿಗೆ ಕರಾರು ಅವಧಿಯು ದಿನಾಂಕ:01-12-2008ಕ್ಕೆ ಅಂತ್ಯಗೊಂಡಿರುತ್ತದೆ. ಪರವಾನಗಿ ಇಲ್ಲದೆ ನಡೆಸುತ್ತಿರುವ ಸದರಿ ಉದ್ದಿಮೆಯನ್ನು ತಕ್ಷಣವೇ ಮುಚ್ಚಿಸುವಂತೆ ಕೋರಿಕೊಂಡಿರುತ್ತೇನೆ. ಈ ಬಗ್ಗೆ ರಿಟ್ ಪಿಟಿಷನ್ ಸಂಖ್ಯೆ:1113/2009ರಂದು ನ್ಯಾಯಾಲಯವು ದಿನಾಂಕ:24-04-2009ರಂದು ಆದೇಶ ನೀಡಿದ್ದು, ಸದರಿ ಆದೇಶದ ಮೇರೆಗೆ ಆಯುಕ್ತರು ಪರವಾನಗಿ ಇಲ್ಲದೆ ನಡೆಯುತ್ತಿರುವ ಉದ್ದಿಮೆಯನ್ನು ಮುಚ್ಚಿಸಿ ಬೀಗ ಹಾಕಿಸಿರುತ್ತಾರೆ. ಆದರೆ ಜಂಟಿ ಆಯುಕ್ತರು ಆಯುಕ್ತರಿಂದ ಯಾವುದೇ ಆದೇಶವನ್ನು ಹಾಗೂ ಶ್ರೀ.ಜಿ.ದಯಾನಂದರವರಿಗೆ ದಾಖಲೆಗಳನ್ನು ಪಡೆಯದೆ ಹೊಸದಾಗಿ ಪರವಾನಗಿಯನ್ನು ನೀಡಿರುತ್ತಾರೆ. ಹೊಸದಾಗಿ ಪರವಾನಗಿಯನ್ನು ನೀಡಿರುವುದನ್ನು ಪ್ರಶ್ನಿಸಿ ರಿಟ್ ಅಪೀಲು ಸಂಖ್ಯೆ:2570/2009ನ್ನು ದಾಖಲಿಸಿರುತ್ತೇನೆ. ಸದರಿ ರಿಟ್ ಅಪೀಲಿನಲ್ಲಿ ಪರವಾನಗಿದಾರರು ಯಾವುದಾದರೂ ಉಲ್ಲಂಘನೆಗಳನ್ನು ಮಾಡಿರುವುದಾಗಿ ಶಾಸನಬದ್ಧ ಪ್ರಾಧಿಕಾರದವರು ವರದಿ ಮಾಡಿದಲ್ಲಿ ಪರವಾನಗಿಯನ್ನು ರದ್ದು ಪಡಿಸಿರುವ ಷರತ್ತಿಗಳೊಪಡಿಸಿ ದಿನಾಂಕ:04-11-2009ರಂದು ಆದೇವಿತ್ತಿರುತ್ತದೆ. ಈ ಬಗ್ಗೆ ಪರವಾನಗಿದಾರರು ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದಾಗಿ ಅಬಕಾರಿ ನಿರೀಕ್ಷಕರು ದಿನಾಂಕ:18-12-2009 ಮತ್ತು 06-01-2010ರಂದು ವರದಿ ನೀಡಿರುತ್ತಾರೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಪರವಾನಗಿಯನ್ನು ರದ್ದು ಪಡಿಸದೆ ಅವರಿಗೆ ನೋಟೀಸ್ ಜಾರಿ ಮಾಡಿ ಉಲ್ಲಂಘನೆಗಳನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಿರುತ್ತಾರೆ. ಹಾಗೂ ಪರವಾನಗಿಯನ್ನು ನವೀಕರಿಸಿರುತ್ತಾರೆ. ನವೀಕರಿಸಿರುವ ಬಗ್ಗೆ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗಿ ರಿಟ್ ಅಪೀಲು ಸಂಖ್ಯೆ:2570/2009ರಲ್ಲಿ ದಿನಾಂಕ:25-01-2011ರಂದು ಅಂತಿಮ ಆದೇಶ ನೀಡುತ್ತಾ, ಮಧ್ಯಂತರ ಆದೇಶವನ್ನು ವಜಾಗೊಳಿಸುತ್ತಾ, ಈ ಬಗ್ಗೆ ಆಯುಕ್ತರೇ ಕ್ರಮ ಕೈಗೊಳ್ಳವು ಅಧಿಕಾರವನ್ನು ನೀಡಲಾಗಿರುತ್ತದೆ. ಹಾಗೂ ಪರವಾನಗಿಯನ್ನು ನವೀಕರಿಸದಂತೆ ಅಪೀಲು ಸ್ಥಾಯಿ ಸಮಿತಿಗೆ ಮತ್ತು ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿಗೆ ಪತ್ರ ನೀಡಿರುತ್ತೇನೆ. ಅದರಂತೆ



2 ಸಮಿತಿಗಳು ಪರವಾನಗಿಯನ್ನು ನವೀಕರಿಸದಂತೆ ಪತ್ರ ಬರೆದಿರುತ್ತಾರೆ. ಆದಾಗ್ಯೂ ಸಹ ಪರವಾನಗಿಯನ್ನು ನವೀಕರಿಸಿರುತ್ತಾರೆ. ಸ್ವತ್ತಿನಿಂದ ಹೊರ ಹಾಕುವ ಬಗ್ಗೆ ನಾನು ಪ್ರತ್ಯೇಕವಾಗಿ ಪ್ರಕರಣವನ್ನು ದಾಖಲಿಸಿರುತ್ತೇನೆ. ಅದಕ್ಕೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೂ ಸಂಬಂಧವಿರುವುದಿಲ್ಲ. ಆದುದರಿಂದ ನವೀಕರಿಸಿರುವ ಪರವಾನಗಿಯನ್ನು ರದ್ದು ಪಡಿಸುವಂತೆ ಕೋರಿರುತ್ತಾರೆ.

ಆಕ್ಷೇಪಣೆದಾರರ ಪರವಾಗಿ ವಕೀಲರು ಹಾಜರಿದ್ದು, ಜಂಟಿ ಆಯುಕ್ತರು ಪರವಾನಗಿಯನ್ನು ನೀಡರುತ್ತಾರೆ. ನನ್ನ ದಾಖಲೆಗಳ ಜೊತೆಗೆ ಸಿಂಗಲ್ ಜಡ್ಜ್ ಡಿಸ್‌ಮಿಸ್‌ಮಾಡಿರುವ ಬಗ್ಗೆ ದಾಖಲೆಗಳನ್ನು ಒದಗಿಸಿರುತ್ತೇನೆ. ಶಾಸನಬದ್ಧ ಪ್ರಾಧಿಕಾರದವರು ಆಕ್ಷೇಪಣೆ ಮಾಡುವುದು ಕಂಪಲ್‌ಸರಿಯಲ್ಲವೆಂದು ತಿಳಿಸಿರುತ್ತಾರೆ. ಪರವಾನಗಿಯನ್ನು ನ್ಯಾಯಾಲಯದ ಷರತ್ತಿಗೊಳಪಡಿಸಿ ನೀಡಲಾಗಿರುತ್ತದೆ. ಸ್ವತ್ತಿನಿಂದ ಹೊರಗೆ ಹಾಕಲು ಸತತವಾಗಿ ಸಿವಿಲ್ ದಾವೆ ಇರುತ್ತದೆ. ಇದಕ್ಕೂ ಟ್ರೇಡ್ ಪರವಾನಗಿಗೂ ಸಂಬಂಧವಿರುವುದಿಲ್ಲ. ಸಿಂಗಲ್ ಜಡ್ಜ್ ನೀಡಿರುವ ಆದೇಶವೇ ಸರಿ ಇರುವುದರಿಂದ ಪರವಾನಗಿಯನ್ನು ನವೀಕರಿಸಲಾಗಿರುತ್ತದೆ. ಆದುದರಿಂದ ಮೇಲ್ಮನವಿದಾರರ ಅರ್ಜಿಯನ್ನು ವಜಾಗೋಳಿಸಬೇಕೆಂದು ಕೋರುತ್ತೇನೆ. ಈ ಬಗ್ಗೆ ನ್ಯಾಯಾಲಯ ಆದೇಶದಂತೆ ಯಾವುದೇ ಕ್ರಮ ಕೈಗೊಳ್ಳಲು ಬರುವುದಿಲ್ಲ. ಒಂದು ವೇಲೆ ಅದರ ವಿರುದ್ಧ ಕ್ರಮ ಕೈಗೊಂಡಲ್ಲಿ ನ್ಯಾಯಾಲಯದ ನಿಂದನೆಯಾಗುವುದರಿಂದ ಪರವಾಗಿ ರದ್ದು ಪಡಿಸುವ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಬಾರದೆಂದು ತಿಳಿಸಿರುತ್ತಾರೆ.

02. ವಿಷಯ:ಸಂಖ್ಯೆ:ಅಸ್ಥಾಸ/(ಆ)/44/2010-11

ಶ್ರೀಮತಿ.ಶಂಕರಮ್ಮ ಇವರು ದಿನಾಂಕ:ದಿನಾಂಕ:03-12-2010ರಂದು ಸಮಿತಿಗೆ ಮನವಿಯನ್ನು ಸಲ್ಲಿಸಿ ಸಂಖ್ಯೆ:12/1, 7ನೇ ಅಡ್ಡರಸ್ತೆ, ಸಂಪಂಗಿ ರಾಮನಗರ, ವಾರ್ಡ್-110 ಈ ಸ್ವತ್ತಿನಲ್ಲಿ ನಡೆಸುತ್ತಿರುವ ವಿದ್ಯುತ್ ಛಕ್ತಿ ಚಾಲಿತ ಮಗ್ಗಗಳನ್ನು ನಗರ ಪಾಲಿಕೆಯಿಂದ ಪರವಾನಗಿ ಪಡೆದು ನಡೆಸುತ್ತಾ ಇರುವ ವಿದ್ಯುತ್ ಛಕ್ತಿ ಚಾಲಿತ ಮಗ್ಗಗಳಿಗೆ ಪಡೆದಿರುವ ವಿದ್ಯುತ್ ಸರಬರಾಜನ್ನು ನಿಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿದ್ಯುತ್)ರವರ ಕಛೇರಿ, ಎಸ್-2 ಉಪ ವಿಭಾಗ ಇವರಿಗೆ ಆರೋಗ್ಯ ವೈದ್ಯಾಧಿಕಾರಿ (ಶಿವಾಜಿನಗರ)ರವರ ಪತ್ರ ಸಂಖ್ಯೆ:ಆ.ವೈ(ಶಿವ)ಪಿಆರ್/64/10-11, ದಿನಾಂಕ:6-10-2010ರ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರತಿವಾದಿಗಳು ಹಾಜರಿದ್ದು, ರೈಲ್ವೆ ಇಲಾಖೆಯವರು ಜಾಹೀರಾತು ಪ್ರದರ್ಶಸಿಲು ಟೆಂಡರ್ ಕರೆದಿದ್ದು, ಮೇಲ್ಮನವಿದಾರರು ಟಂಡರ್‌ನಲ್ಲಿ ಭಾಗವಹಿಸಿ, ಯಶಸ್ವಿ ಟೆಂಡರ್‌ದಾರರಾಗಿರುತ್ತಾರೆ. ರೈಲ್ವೆ ಇಲಾಖೆಯವರು ನಗರ ಪಾಲಿಕೆಯ ಬೈಲಾಗಳನ್ನು ಪಾಲಿಸಿರುವುದಿಲ್ಲ. ಬೈಲಾನಲ್ಲಿರುವ ಗೈಡ್‌ಲೈನ್ಸ್ ರೀತಿಯಲ್ಲಿ ನಡೆಯಬೇಕೆಂದು ಸ್ಪಷ್ಟವಾಗಿ ಬೈಲಾನಲ್ಲಿ ತಿಳಿಸಲಾಗಿದೆ. ರೈಲ್ವೆ ಇಲಾಖೆಯವರು ನಗರ ಪಾಲಿಕೆಯ ಗಮನಕ್ಕೆ ತರದೇ ರೈಲ್ವೆ ಸ್ವತ್ತಿನಲ್ಲಿ ಜಾಹೀರಾತು ಪ್ರದರ್ಶಸಿಲು ಟೆಂಡರ್ ಕರೆದಿರುತ್ತಾರೆ. ಬೈಲಾನಲ್ಲಿ ತಿಳಿಸಿರುವಂತೆ ಮೇಲ್ಮನವಿದಾರರು ಅನುಸರಿಸಿರುತ್ತಾರೆ. ಮೇಲ್ಮನವಿದಾರರು 2 ವರ್ಷಗಳ ನಂತರ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಯಾವಯಾವ ಸ್ಥಳದಲ್ಲಿ ಜಾಹೀರಾತು ಫಲಕಗಳನ್ನು ಹಾಕಲಾಗಿದೆ ಎಂಬ ಬಗ್ಗೆ ಮತ್ತು ಅಗತ್ಯವಿರುವ ತಪಸೀಲು (ಸ್ಪೇಸಿಫೀಕೇಶನ್) ಸಹ ಮೇಲ್ಮನವಿದಾರರು ನೀಡಿರುವುದಿಲ್ಲ. ನಗರ ಪಾಲಿಕೆಯವರು ಮೇಲ್ಮನವಿದಾರರಿಗೆ ಅರ್ಜಿಸಲ್ಲಿಸಲು ತಿಳಿಸಿದ್ದರು ಸಹ, ಮೇಲ್ಮನವಿದಾರರು ಅರ್ಜಿ ಸಲ್ಲಿಸಿರುವುದಿಲ್ಲ. ಈ ಬಗ್ಗೆ ಕಡತದಲ್ಲಿನ ಟಿಪ್ಪಣಿಯಲ್ಲಿ ಕಾಣಬಹುದಾಗಿದೆ. ರೈಲ್ವೆ ಅಧಿಕಾರಿಗಳಿಗೆ ಈ ಬಗ್ಗೆ ಪತ್ರ ಬರೆದಿದ್ದರೂ ಸಹ ಅವರಿಂದ ಯಾವುದೇ ಉತ್ತರ ಬಂದಿರುವುದಿಲ್ಲ. ಮೇಲ್ಮನವಿದಾರರು ಸಿಟಿ ನ್ಯಾಯಾಲಯದ ಮುಂದೆ ದಾವೆ ಹೂಡಿರುತ್ತಾರೆ. ದಿನಾಂಕ 01-12-2007 ರಿಂದ 31-12-2010ರ ವರೆವಿಗೆ ತೆರಿಗೆ ಪಾವತಿಸಲು ಬಿಬಿಎಂಪಿ ವತಿಯಿಂದ ಡಿಮ್ಯಾಂಡ್ ನೋಟಿಸ್ ಜಾರಿಮಾಡಲಾಗಿದೆ. ಈ ಬಗ್ಗೆ ನ್ಯಾಯ ಸಮ್ಮತವಾದ ನಿರ್ಣಯವನ್ನು ಕೈಗೊಳ್ಳಲು ಮನವಿಯನ್ನು ಮಾಡಿದರು.

ಮೇಲ್ಮನವಿದಾರರು ನನ್ನ ಮನವಿಯು ಬಿ.ಬಿ.ಎಂ.ಪಿ. ಅಧಿಕಾರಿಯವರ ಗಮನದಲ್ಲಿದ್ದು, ಸ್ಥಳಗಳ ಪರಿಶೀಲನೆಯನ್ನು ಮಾಡಲು ಬಿ.ಬಿ.ಎಂ.ಪಿ. ವಿಫಲರಾಗಿರುತ್ತಾರೆ. ಸಲ್ಲಿಸಿರುವ ಪಟ್ಟಿಯಂತೆ ತೆರಿಗೆಯನ್ನು ಲೆಕ್ಕಹಾಕಲು ಮನವಿ ಮಾಡಿ, ಜಾಹೀರಾತು ಪಲಕಗಳು ಅಳತೆಗೆ ಮೀರಿ ಇರುವುದಾಗಿ ತಿಳಿಸಿರುವುದು ಸರಿಯಲ್ಲವೆಂದು ತಿಳಿಸಿರುತ್ತಾರೆ.

" ಆದೇಶಕ್ಕಾಗಿ ಕಾಯ್ದಿರಿಸಿದೆ"

<u>20. ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/10/2010-11</u>

ಶ್ರೀಮತಿ.ಡಿ.ಆರ್.ಶಿಲ್ಪಶ್ರೀ, ನಂ.207, 4ನೇ ಅಡ್ಡರಸ್ತೆ, ಮಾರೇನಹಳ್ಳಿ ಟ್ಯಾಂಕ್ ಬಂಡ್ ರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು-41 ಇವರು ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟದ ಪಾರ್ಲರ್ ಪ್ರಾರಂಭಿಸಲು ಸ್ಥಳ ಮಂಜೂರು ಮಾಡಲು ವಾರ್ಡ್ ಸಂಖ್ಯೆ:170ರ ಬಿ.ಟಿ.ಎಂ. 1ನೇ ಹಂತ, 1ನೇ ಕ್ರಾಸ್, 9ನೇ ಮುಖ್ಯರಸ್ತೆಯ ಪಾರ್ಕ್‌ನಲ್ಲಿ ನಿರ್ಮಾಣ ಮಾಡುತ್ತಿರುವ ಶೌಚಾಲಯದ ಹಿಂಭಾಗದಲ್ಲಿರುವ 10x10 ಅಡಿಗಳ ಜಾಗವನ್ನು ಮಂಜೂರು ಮಾಡಲು ಕೋರಿದ್ದು, ಸದರಿಯವರ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದ್ದು, ಸದರಿಯವರು ನಿರುದ್ಯೋಗಿಯಾಗಿದ್ದು ಜೀವನೋಪಯೋಗಕ್ಕಾಗಿ ಬೇರೆ ಯಾವುದೇ ಉದ್ಯೋಗವಿಲ್ಲದಿರುವುದರಿಂದ ಸದರಿ ಜಾಗವನ್ನು ಮಂಜೂರು ಮಾಡಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:21-06-2011ರ ಟಿಪ್ಪಣಿ

**<u>ಪ್ರಸ್ತಾವನೆ</u>**:-ಪ್ರಕರಣವನ್ನು ಕರೆಯಲಾಯಿತು. ಅರ್ಜಿದಾರರು ಹಾಜರಿದ್ದರು. ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಕಾಯ್ದಿರಿಸಲಾಗಿದೆ.

21.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2010-11

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ವಕೀಲರು ಮತ್ತು ಪ್ರತಿವಾದಿಗಳು ಹಾಜರಿದ್ದರು. ಮೇಲ್ಮನವಿದಾರರು ಕಾಲಾವಕಾಶ ಕೋರಿರುವುದರಿಂದ ಪ್ರಕರಣವನ್ನು ಮುಂದೂಡಲಾಗಿದೆ.

22.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2010-11

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಉಭಯತ್ರರು ಗೈರು ಹಾಜರು. ಪ್ರಕರಣವನ್ನು ಮುಂದೂಡಲಾಯಿತು.

23.ವಿಷಯ:ಸಂಖ್ಯೆ:ಅಸ್ಥಾಸ/(ತೆ)/13/2010-11

ಶ್ರೀಮತಿ.ಪಿ.ಶಕುಂತಲ, ಸಂಖ್ಯೆ:13, ವೀರಭದ್ರನಾಯಕ ಲೇನ್. ಕಾಟನ್ ಪೇಟೆ ಈ ಸ್ವತ್ತಿನ ಕಂದಾಯವನ್ನು ಪರಿಷ್ಕರಿಸಿ ವಸತಿ ರೂ.47600/- ಮತ್ತು ವಸತಿಯೇತರ ರೂ.57120/- ವಾರ್ಷಿಕ ಮೌಲ್ಯಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವುದನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವುದರ ವಿರುದ್ಧ, ಸ್ವತ್ತಿನ ಮಾಲೀಕರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-05-2011ರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಉಭಯತ್ರರು ಗೈರು ಹಾಜರು. ನೋಟಿಸ್‌ನ್ನು ಜಾರಿ ಮಾಡಿರುವುದಿಲ್ಲ. ಪ್ರಕರಣವನ್ನು ಮುಂದೂಡಲಾಯಿತು.

24. ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/14/2010-11

ಶ್ರೀ.ಎ.ಪ್ರಕಾಶ್, ಕನ್ಸರ್‌ವೆನ್ಸಿ ಲೇನ್, ಎಂ.ಎಂ.ರಸ್ತೆ, ಸರ್ವಜ್ಞ ನಗರ ಈ ಸ್ವತ್ತಿನಲ್ಲಿ ಒಂದು ಚಿಕ್ಕ ಪೆಟ್ಟಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದು, ಸದರಿ ಅಂಗಡಿಯನ್ನು ಖಾಲಿ ಮಾಡುವಂತೆ ಜಂಟಿ ಆಯುಕ್ತರು (ಪೂರ್ವ)ರವರು ಕೆ.ಪಿ.ಪಿ.ಕಾಯ್ದೆ ಕಲಂ 5(1)ರ ಅಡಿಯಲ್ಲಿ ದಿನಾಂಕ:03-01-2011ರಲ್ಲಿ ಗುತ್ತಿಗೆದಾರರಿಗೆ ನೀಡಿರುವ ನೋಟೀಸ್ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:01-07-2011ರ ಟಿಪ್ಪಣಿ.

**ಪ್ರಸ್ತಾವನೆ**:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು ನಾನು ಶ್ರೀ.ದಿವಾಕರನ್ ಕೆ. ಪಾಲ್‌ರವರ ಜಿ.ಪಿ.ಎ. ಹೋಲ್ಡರ್ ಆಗಿರುತ್ತೇನೆ. ಪೆಟ್ಟಿಗೆ ಅಂಗಡಿಯನ್ನು ನನ್ನ ಜೀವನೋಪಯೋಗಕ್ಕಾಗಿ ನಾನೇ ನಡೆಸುತ್ತಿದ್ದೇನೆ. ನ್ಯಾಯಾಲಯದಿಂದ ಆದೇಶವನ್ನು ಪಡೆದಿರುತ್ತೇನೆ. ನಾನು ಕಾಲಕಾಲಕ್ಕೆ ಬಾಡಿಗೆ ಮತ್ತು ವಿದ್ಯುತ್ ಬಿಲ್‌ನ್ನು ಪಾವತಿಸಿಕೊಂಡು ಬರುತ್ತಿದ್ದೇನೆ. ಒಂದೇ ಸಲ ಬಾಡಿಗೆಯನ್ನು ಪಾವತಿಸಿರುತ್ತೇನೆ. ಅದಕ್ಕೆ ರಶೀದಿ ನೀಡಿರುವುದಿಲ್ಲ. ಬಿ.ಬಿ.ಎಂ.ಪಿ.ವಿರುದ್ಧ ತಡೆಯಾಜ್ಞೆ ದಾವೆಯನ್ನು ದಾಖಲಿಸಿದ್ದು, ದಾವೆಯು ಡಿಕ್ರೀಯಾಗಿದ್ದು, ಬಿಬಿಎಂಪಿಯು ನನ್ನನ್ನು ತೆರವುಗೊಳಿಸಬಾರದೆಂದು ಶಾಶ್ವತ ತಡೆಯಾಜ್ಞೆ ಪಡೆದಿರುತ್ತೇನೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಿದ್ದು, ಸದರಿ ಸ್ವತ್ತು ಮಹಾನಗರ ಪಾಲಿಕೆಯ ಸ್ವತ್ತಾಗಿರುತ್ತದೆ. ಶ್ರೀ.ದಿವಾಕರ್ ಕೆ. ಪಾಲ್‌ರವರಿಗೆ ಗುತ್ತಿಗೆಗೆ ನೀಡಿದ್ದು, ಮೇಲ್ಮನವಿದಾರರಿಗೆ ಸಬ್ ಲೀಸ್ ನೀಡಿರುತ್ತಾರೆ. ಮೇಲ್ಮನವಿದಾರರ ಮೇಲೆ ಕೆಪಿಪಿ ಕಾಯ್ದೆ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿರುತ್ತದೆ. ಮೇಲ್ಮನವಿದಾರರ ಇಲ್ಲಿ ಮೇಲ್ಮನವಿ ಸಲ್ಲಿಸಿರುವುದು ಊರ್ಜಿತವಲ್ಲವೆಂದು ತಿಳಿಸಿ ಸಂಬಂಧಪಟ್ಟ ಪ್ರಾಧಿಕಾರದ ಮುಂದೆ ಅಪೀಲು ಸಲ್ಲಿಸಬೇಕಾಗಿರುತ್ತದೆ. ಆದುದರಿಂದ ಸದರಿಯವರ ಅಪೀಲನ್ನು ತಿರಸ್ಕರಿಸಬೇಕೆಂದು ಕೋರಿರುತ್ತಾರೆ.

" ಆದೇಶಕ್ಕಾಗಿ ಕಾಯ್ದಿರಿಸಿದೆ"

25.ವಿಷಯ:ಸಂಖ್ಯೆ:ಅಸ್ಥಾಸ/(ಆ)/15/2010-11

ಟಿ.ವಿ. ಅಂಡ್ ಸನ್ಸ್, ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ತಿಳುವಳಿಕೆ ಪತ್ರ ಕಳುಹಿಸಿದ್ದು, ನಾವು ಬಹಳ ದಿವಸದಿಂದ ಪಟಾಕಿ ವ್ಯಾಪಾರವನ್ನು ಮಾಡುತ್ತಿದ್ದು ನಮಗೆ ವಾಣಿಜ್ಯ ಮತ್ತು ಕೈಗಾರಿಕಾ ಪೆಟ್ರೋಲಿಯಂ ಮತ್ತು ಎಕ್ಸ್‌ಪ್ಲೋಸಿವ್ ಸೇಫ್ಟಿ ಆರ್ಗನೈಜೇಷನ್, ಮಂಗಳೂರು ಇವರ ಕಛೇರಿಯಿಂದ ಪರವಾನಗಿ ಪಡೆದಿರುತ್ತೇವೆ. ಆದುದರಿಂದ ನಮಗೆ ಪರವಾನಗಿ ನೀಡಬೇಕೆಂದು ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ನಿರ್ಣಯ:**- ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ

ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲಿಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನೀಡುವುದೆಂದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>26.ವಿಷಯ:ಸಂಖ್ಯೆ:ಅಸ್ಥಾಸ/(ಅ)/16/2011-12</u>

ಶ್ರೀ.ಕೆ.ಎಸ್.ಮುತ್ತುರಾಜನ್‌ರವರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ತಿಳುವಳಿಕೆ ಪತ್ರ ಕಳುಹಿಸಿದ್ದು, ನಾವು ಬಹಳ ದಿವಸದಿಂದ ಪಟಾಕಿ ವ್ಯಾಪಾರವನ್ನು ಮಾಡುತ್ತಿದ್ದು ನಮಗೆ ವಾಣಿಜ್ಯ ಮತ್ತು ಕೈಗಾರಿಕಾ ಪೆಟ್ರೋಲಿಯಂ ಮತ್ತು ಎಕ್ಸ್‌ಪ್ಲೋಸಿವ್ ಸೇಫ್ಟಿ ಆರ್ಗನಲೈಜೇಷನ್, ಮಂಗಳೂರು ಇವರ ಕಛೇರಿಯಿಂದ ಪರವಾನಗಿ ಸಿಕ್ಕಿರುತ್ತದೆ. ಆದುದರಿಂದ ನಮಗೆ ಪರವಾನಗಿ ನೀಡಬೇಕೆಂದು ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**<u>ನಿರ್ಣಯ:</u>**- ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲಿಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನೀಡುವುದೆಂದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>27.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11</u>

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ

ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ಅವರ ವಕೀಲರು ಹಾಜರಿರುತ್ತಾರೆ. ಶ್ರೀ.ಎಂ.ಎ.ಜಯರಾಮ್ ಮತ್ತು ಶ್ರೀಮತಿ.ಇಂದಿರಮ್ಮರವರ ಪರವಾಗಿ ಅವರ ವಕೀಲರು ಹಾಜರಿದ್ದು ಸದರಿ ಪ್ರಕರಣದಲ್ಲಿ ಸೇರ್ಪಡೆಗೊಳಿಸಿಕೊಳ್ಳುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಶ್ರೀ.ಕೆ.ಶಶಿಕಿರಣ್‌ರವರು ಶ್ರೀ.ಎಸ್.ಎಸ್.ಜಿ.ಯವರು ಪರವಾಗಿ ವಕಾಲತ್ತು ಸಲ್ಲಿಸಿರುತ್ತಾರೆ. ಹೊಸದಾಗಿ ಸೇರ್ಪಡೆಗೊಳಿಸಿಕೊಳ್ಳಲು ಸಲ್ಲಿಸಿರುವ ಅರ್ಜಿಗೆ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಪ್ರಕರಣವನ್ನು ದಿನಾಂಕ:05-08-2011ಕ್ಕೆ ಮುಂದೂಡಲಾಗಿದೆ.

28. ವಿಷಯ:ಸಂಖ್ಯೆ:ಅಸ್ಥಾಸ/(ಅ)/19/2010-11

ಮೆ:ಸಂತೋಷ್ ಟ್ರೇಡಿಂಗ್ ಕಾರ್ಪೋರೇಷನ್, ನಂ.ಎ-11, ಬಾಲಾಜಿ ಕಾಂಪ್ಲೆಕ್ಸ್, 125, ಸುಲ್ತಾನ್ ಪೇಟೆ, ಬೆಂಗಳೂರು ಈ ಅಂಗಡಿಯ ಮಾಲೀಕರು ಆರೋಗ್ಯ ವೈದ್ಯಾಧಿಕಾರಿ ಕಾಟನ್ ಪೇಟೆ ಉಪ ವಿಭಾಗದವರು ವಾರ್ಡ್ ಸಂಖ್ಯೆ 109 ಮತ್ತು 120 ಗಳಲ್ಲಿ ಇರುವ ಪಟಾಕಿ ಅಂಗಡಿಗಳು (ದಾಸ್ತಾನು ಮತ್ತು ಮಾರಾಟ) ಪರವಾನಗಿಗಳನ್ನು ನವೀಕರಿಸಬಾರದು (ನವೀಕರಣ ಮತ್ತು ಹೊಸದು) ಹಾಗೂ ಹೊಸದಾಗಿ ಪರವಾನಗಿಗಳನ್ನು ನೀಡಬಾರದೆಂದು ತಿಳುವಳಿಕೆ ಪತ್ರ ಕಳುಹಿಸಿದ್ದು, ನಾವು ಬಹಳ ದಿವಸದಿಂದ ಪಟಾಕಿ ವ್ಯಾಪಾರವನ್ನು ಮಾಡುತ್ತಿದ್ದು ನಮಗೆ ವಾಣಿಜ್ಯ ಮತ್ತು ಕೈಗಾರಿಕಾ ಪೆಟ್ರೋಲಿಯಂ ಮತ್ತು ಎಕ್ಸ್‌ಪ್ಲೋಸಿವ್ ಸೇಫ್ಟಿ ಆರ್ಗನೈಜೇಷನ್, ಮಂಗಳೂರು ಇವರ ಕಛೇರಿಯಿಂದ ಪರವಾನಗಿ ಪಡೆದಿರುತ್ತೇವೆ. ಆದುದರಿಂದ ನಮಗೆ ಪರವಾನಗಿ ನೀಡಬೇಕೆಂದು ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ನಿರ್ಣಯ:**- ಸಂಬಂಧಪಟ್ಟ ಅಧಿಕಾರಿಗಳು ರಿಟ್ ಪಿಟಿಷನ್ ಸಂಖ್ಯೆ:10248/2008ರ ನ್ಯಾಯಾಲಯದ ಆದೇಶ ಮತ್ತು ಬಿ.ಬಿ.ಎಂ.ಪಿ./ಎಲ್‌ಸಿ/ಪಿಆರ್/8059/2008-09ರ ಮೇರೆಗೆ ಎಲ್ಲಾ ಅಂಗಡಿಗಳ ಪರವಾನಗಿಯನ್ನು ರದ್ದು ಪಡಿಸಿರುವುದಾಗಿ ಸಮಿತಿಯ ಸಭೆಯಲ್ಲಿ ತಿಳಿಸಿರುತ್ತಾರೆಯೇ ಹೊರತು ಇದುವರೆವಿಗೂ ವಿವರವಾದ ಟಿಪ್ಪಣಿಯನ್ನಾಗಲೀ, ನ್ಯಾಯಾಲಯದ ಆದೇಶದ ಪ್ರತಿಯನ್ನಾಗಲೀ ಸಮಿತಿಯ ಮುಂದೆ ಮಂಡಿಸಿಲ್ಲದಿರುವ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:02-07-2011ರಂದು ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಯಾವುದೇ ಪಟಾಕಿ ಅಂಗಡಿಗಳನ್ನು ಮುಚ್ಚಿಸಿಲ್ಲದಿರುವುದು ಹಾಗೂ ಪರವಾನಗಿಯನ್ನು ಸಹ ನವೀಕರಿಸಿಲ್ಲದಿರುವುದು ಕಂಡು ಬರುತ್ತದೆ. ಅಲ್ಲದೆ ಮಾಲೀಕರು ನಗರ ಪಾಲಿಕೆಗೆ ಯಾವುದೇ ಶುಲ್ಕವನ್ನು ಪಾವತಿಸದೆ ವ್ಯಾಪಾರ ಮಾಡುತ್ತಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ನಗರ ಪಾಲಿಕೆಗೆ ಆರ್ಥಿಕ ನಷ್ಟ ಉಂಟಾಗಲು ಅವಕಾಶ ಕಲ್ಪಿಸಿಕೊಟ್ಟಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ ದಿನಾಂಕ:15-03-2008ರ ಕಛೇರಿ ಪತ್ರದಲ್ಲಿ ಬೆಂಕಿ ಅನಾಹುತಗಳಾದಲ್ಲಿ ಅಗ್ನಿಶಾಮಕ ಇಲಾಖೆಯವರು ತುರ್ತು ನಿವಾರಣ ಕ್ರಮ ಕೈಗೊಳ್ಳಲು ಕಷ್ಟಕರವಾಗಿರುತ್ತದೆಂದು ತಿಳಿಸಿ ಪರವಾನಗಿಯನ್ನು ರದ್ದುಪಡಿಸಿರುವುದಾಗಿ ಸೂಚಿಸಿರುವುದು ಕಂಡು ಬರುತ್ತದೆ. ಆದರೆ ಡೆಪ್ಯೂಟಿ ಚೀಫ್ ಕಂಟ್ರೋಲರ್ ಆಫ್ ಎಕ್ಸ್‌ಪ್ಲೋಸಿವ್, ಮಂಗಳೂರು ಮತ್ತು ಪೋಲಿಸ್ ಆಯುಕ್ತರು, ಬೆಂಗಳೂರು ನಗರ ಇವರು ಲೈಸೆನ್ಸ್‌ನ್ನು ಕೆಲವು ಕಾರಣಗಳಿಂದ ರದ್ದುಗೊಳಿಸಿದ ಆದೇಶವನ್ನು ಮಾರ್ಪಡಿಸಿ ದಿನಾಂಕ:31-03-2012ರವರೆಗೆ ನವೀಕರಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಆಯುಕ್ತರು, ಪೋಲೀಸ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಡವಳಿಕೆಗಳು ನಡೆದಿದ್ದು ಪಟಾಕಿ ಅಂಗಡಿಗಳಿಗೆ ಲೈಸೆನ್ಸ್ ನೀಡಬಾರದೆಂದು ತೀರ್ಮಾನ ಕೈಗೊಂಡಿದ್ದು, ನಂತರ ಪೋಲೀಸ್ ಇಲಾಖೆ ಹಾಗೂ ತುರ್ತು ಕ್ರಮ ಕೈಗೊಳ್ಳಬೇಕಾದ ಅಗ್ನಿ ಶಾಮಕ ಇಲಾಖೆಯವರು ರದ್ದುಪಡಿಸಿರುವ ಲೈಸೆನ್ಸ್‌ಗಳನ್ನು ನವೀಕರಿಸಲಾಗಿರುವುದನ್ನು ಹಾಗೂ ಇತ್ತೀಚೆಗೆ ಸಾರ್ವಜನಿಕರು ಎಲ್ಲಾ ಹಬ್ಬ ಹರಿದಿನ ಹಾಗೂ ಸಭೆ ಸಮಾರಂಭಗಳಲ್ಲಿ ಪಟಾಕಿಯನ್ನು ಹೆಚ್ಚಾಗಿ ಉಪಯೋಗಿಸುವ ಸಂಪ್ರದಾಯವನ್ನು ಹೆಚ್ಚಾಗಿ ಬೆಳೆಸಿಕೊಂಡಿರುವುದನ್ನು ಸಮಿತಿಯು ಮನಗಂಡು ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಪಟಾಕಿ ಅಂಗಡಿಗೆ ಟ್ರೇಡ್ ಲೈಸೆನ್ಸ್‌ನ್ನು ನವೀಕರಿಸುವುದೆಂದು ಹಾಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುವ ಅಧಿಕಾರಿಗಳ ಮೇಲೆ ಆಯುಕ್ತರು ಕಾನೂನು ರೀತ್ಯ ಕ್ರಮ ಜರುಗಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:05-08-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು ನಗರ ಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸ.ಕಂ.ಅ.(ಮತ್ತೀಕೆರೆ/ಚಿಕ್ಕಪೇಟೆ/ವಸಂತನಗರ) |
| 04 | ಬಿ.ಎಸ್.ಆನಂದ | ಸದಸ್ಯರು | |
| 05 | ಎಂ.ವಸಂತಕುಮಾರಿ | ಸದಸ್ಯರು | |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12

ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

**ಪ್ರಸ್ತಾವನೆ:-** ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಹಾಜರಾಗಿದ್ದು, ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ತಡವಾಗಿ ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಕಾಲಾವಕಾಶ ಕೋರಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/08/2011-12

ಮಾಲೀಕರು, ಮೆ|| ಅವಿನಾಶಿ ಆಡ್ಸ್, ಔಟ್‌ಡೋರ್‌ಅಡ್ವರ್‌ಟೈಸಿಂಗ್, ತುಳಸಿ ಹೌಸ್, ನಂ.26, ಎಸ್.ಎಫ್.ಹೆಚ್.ಎಸ್. ಏರಿಯಾ, ನಂದಿನಿ ಲೇಔಟ್, ಬೆಂಗಳೂರು-96 ಇವರು ದಿನಾಂಕ:16-05-2011ರಂದು ಸಮಿತಿಗೆ ಮೇಲ್ಮನವಿ ಅರ್ಜಿ ಸಲ್ಲಿಸಿ ಸದರಿಯವರು ಜಾಹೀರಾತು ಫಲಕಗಳನ್ನು ತೆರವುಗೊಳಿಸಿದ್ದರೂ ಸಹ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ದಿನಾಂಕ:09-05-2011ರಂದು ನೀಡಿರುವ ಡಿಮ್ಯಾಂಡ್ ನೋಟೀಸ್ ವಿರುದ್ಧ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಆಯುಕ್ತರು ದಿನಾಂಕ:08-06-2011ರಂದು ಶಿಫಾರಸ್ಸು ಮಾಡಿ ಮಂಡಿಸಿರುವ ಕಡತ.

**ನಿರ್ಣಯ:-** ಸಮಿತಿಯು ಅಧಿಕಾರಿಗಳ ಮತ್ತು ವಕೀಲರ ವಾದ, ಕಡತದಲ್ಲಿರುವ ದಾಖಲೆ ಹಾಗೂ ಮೇಲ್ಮನವಿದಾರರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಈಗಾಗಲೇ ಅಧಿಕಾರಿಗಳು ಕ್ರಮ ಬದ್ಧವಾಗಿ ರೈಲ್ವೆ ಜಾಗದಲ್ಲಿ ಮೇಲ್ಮನವಿದಾರರು ಅಳವಡಿಸಿರುವ ಪ್ರಕಾಶಿತ ಹಾಗೂ ಪ್ರಕಾಶಿತವಲ್ಲದ ಜಾಹೀರಾತು ಫಲಕಗಳ ಬಗ್ಗೆ ಕಾಲಕಾಲಕ್ಕೆ ತಪಾಸಣೆ ಮಾಡದೆ ಇರುವುದರಿಂದ ಜಾಹೀರಾತುದಾರರಿಗೆ ಅಧಿಕಾರಿಗಳು ಅನುಕೂಲ ಮಾಡಿಕೊಟ್ಟಂತಾಗಿರುತ್ತದೆಂದು ಅಪಾದಿಸಿ ದಿನಾಂಕ:01-04-2011ರ ನಿರ್ಣಯದಲ್ಲಿ ಸಮಿತಿಯು ಸ್ಪಷ್ಟವಾಗಿ ನಮೂದಿಸಿರುವುದು ಕಂಡು ಬರುತ್ತದೆ. ಆದರೂ ಸಹ ಅಧಿಕಾರಿಗಳು ದಿನಾಂಕ:09-05-2011ರಂದು ಡಿಮ್ಯಾಂಡ್ ನೋಟೀಸ್ ಜಾರಿ ಮಾಡಿ ಸದರಿ ನೋಟೀಸ್‌ನಲ್ಲಿ ದಿನಾಂಕ:01-12-2007ರಿಂದ 31-12-2010ರವರೆಗಿನ ಜಾಹೀರಾತು ತೆರಿಗೆ ರೂ.55,68,156/-ಗಳನ್ನು ಪಾವತಿಸುವಂತೆ ಸೂಚಿಸಲಾಗಿರುತ್ತದೆ. ಆದರೆ ಜಾಹೀರಾತುದಾರರು ದಿನಾಂಕ:25-03-2011ರಂದು ಕೆಲವೊಂದು ಪ್ರದೇಶಗಳಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವುದಾಗಿ ತಿಳಿಸಿದ್ದರೂ ಸಹ ಅದನ್ನು ಪರಿಗಣನೆಗೆ ತೆಗೆದುಕೊಳ್ಳದೆ ಜಾಹೀರಾತು ಶುಲ್ಕವನ್ನು ದಿನಾಂಕ:01-12-2007ರಿಂದಲೇ ಪಾವತಿಸುವಂತೆ ಡಿಮ್ಯಾಂಡ್ ನೋಟೀಸ್ ನೀಡಿರುವುದು ಕಂಡು ಬರುತ್ತದೆ.

ಸಂಬಂಧಪಟ್ಟ ಅಧಿಕಾರಿಗಳು ರೈಲ್ವೆ ಇಲಾಖೆಯವರು ಜಾಹೀರಾತು ಪ್ರದರ್ಶಿಸಲು ಟೆಂಡರ್ ಕರೆದಿದ್ದು ನಗರ ಪಾಲಿಕೆಯ ಗಮನಕ್ಕೆ ತಂದಿರುವುದಿಲ್ಲ, ರೈಲ್ವೆ ಸ್ವತ್ತಿನಲ್ಲಿ ತಪಾಸಣೆ ಮಾಡಲು ಅವಕಾಶ ನೀಡುವುದಿಲ್ಲ ಹಾಗೂ ಬೈಲಾ ನಿಯಮಗಳನ್ನು ಪಾಲಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ರೈಲ್ವೆಯವರು ಯಶಸ್ವಿ ಬಿಡ್ಡುದಾರರಿಗೆ ಜಾಹೀರಾತು ಅಳವಡಿಸಲು

ಹಂಚಿಕೆಯಾಗಿರುವ ಸ್ಥಳಗಳ ಬಗ್ಗೆ ನಗರ ಪಾಲಿಕೆಗೆ ದಿನಾಂಕ:29-11-2007ರಂದು ಪತ್ರ ಬರೆದಿರುವುದು ಕಡತದಲ್ಲಿ ಲಗತ್ತಿಸಿರುವ ಪುಟ ಸಂಖ್ಯೆ:7ರಿಂದ ಸ್ಪಷ್ಟವಾಗಿರುತ್ತದೆ. ಜಾಹೀರಾತು ಬೈಲಾ ನಿಯಮ 3.ಎ 26ರಂತೆ ಮಾಹಿತಿ ನೀಡಿರುವುದಾಗಿ ದಿನಾಂಕ:03-03-2008ರ ಕಛೇರಿ ಆದೇಶದಿಂದ ಕಂಡು ಬರುತ್ತದೆ. ರೈಲ್ವೆಯವರು ರೈಲ್ವೆ ಸ್ವತ್ತಿನಲ್ಲಿ ಸ್ಥಳ ಪರಿಶೀಲನೆ ಮಾಡಲು ಅವಕಾಶ ನೀಡದಿದ್ದಲ್ಲಿ ಅದನ್ನು ಆಯುಕ್ತರು ಮತ್ತು ಮಾನ್ಯ ಆಡಳಿತಗಾರರ ಗಮನಕ್ಕೆ ತಂದು ಮುಂದಿನ ಕ್ರಮ ಕೈಗೊಳ್ಳಬೇಕಾಗಿದ್ದು ಆ ನಿಟ್ಟಿನಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಂಡಿರುವ ಬಗ್ಗೆ ಕಡತದಲ್ಲಿ ಯಾವುದೇ ಮಾಹಿತಿಗಳು ಲಭ್ಯವಿರುವುದಿಲ್ಲ.

ಮೇಲ್ಮನವಿದಾರರು ಯಾವಯಾವ ಸ್ಥಳದಲ್ಲಿ ಜಾಹೀರಾತು ಫಲಕಗಳನ್ನು ಹಾಕಲಾಗಿದೆ ಎಂಬ ಬಗ್ಗೆ ಅರ್ಜಿಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ 2 ವರ್ಷಗಳು ಕಳೆದ ನಂತರ ನಿಗಧಿತ ಅರ್ಜಿಯನ್ನು ಸಲ್ಲಿಸಿರುತ್ತಾರೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ. ಆದರೆ ಮೇಲ್ಮನವಿದಾರರು ದಿನಾಂಕ:14-12-2007ರಂದೇ ಜಾಹೀರಾತುದಾರರು ಫಲಕಗಳನ್ನು ಅಳವಡಿಸಿಕೊಳ್ಳುವ ಬಗ್ಗೆ ನಗರ ಪಾಲಿಕೆಗೆ ಪತ್ರ ಮುಖೇನ ತಿಳಿಸಿರುವುದು ಕಂಡು ಬರುತ್ತದೆ. ಜಾಹೀರಾತುದಾರರು ಪತ್ರ ಬರೆದ ತಕ್ಷಣವೇ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡದಿರುವುದು ಸ್ಪಷ್ಟವಾಗಿರುತ್ತದೆ. ಒಂದು ವೇಳೆ ನಿಗಧಿತ ಅರ್ಜಿಯನ್ನು ಸಲ್ಲಿಸದಿದ್ದ ಪಕ್ಷದಲ್ಲಿ ಅಳವಡಿಸಿರುವ ಜಾಹೀರಾತು ಫಲಕಗಳನ್ನು ತೆರವುಗೊಳಿಸಬಹುದಾಗಿರುತ್ತದೆ. ಹಾಗೂ ಯಾವ ಯಾವ ವೇಳೆಗೆ ಎಷ್ಟು ಅಳತೆಯ ಫಲಕಗಳನ್ನು ಅಳವಡಿಸಿಕೊಳ್ಳಲಾಗಿತ್ತೆಂಬ ಬಗ್ಗೆ ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ವರದಿಯನ್ನು ಸಲ್ಲಿಸಿರುವುದಿಲ್ಲ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ಜಾಹೀರಾತುದಾರರಿಗೆ ಅನುಕೂಲ ಮಾಡಿಕೊಟ್ಟಂತಾಗಿರುತ್ತದೆಂದು ಸಮಿತಿಯು ಅಭಿಪ್ರಾಯ ಪಟ್ಟಿರುತ್ತದೆ. ಅಲ್ಲದೆ ದಿನಾಂಕ:03-03-2008ರ ಕಛೇರಿ ಆದೇಶದಲ್ಲಿ 2006ರ ಜಾಹೀರಾತು ಬೈಲಾ ನಿಯಮವನ್ನು ಪಾಲಿಸಿರುವುದಾಗಿ ತಿಳಿಸಲಾಗಿರುತ್ತದೆ. ಆದರೂ ಸಹ ಸಂಬಂಧಪಟ್ಟ ಅಧಿಕಾರಿಗಳು ಕಾಲಮಿತಿಯಲ್ಲಿ ಮೇಲ್ಮನವಿದಾರರು ಅರ್ಜಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿರುವುದು ಸಮಂಜಸವಾಗಿರುವುದಿಲ್ಲ. ಮೇಲ್ಮನವಿದಾರರು ಜಾಹೀರಾತು ಬೈಲಾ ನಿಯಮವನ್ನು ಪಾಲಿಸದಿದ್ದಲ್ಲಿ ಮೇಲ್ಮನವಿದಾರರು ನಗರ ಪಾಲಿಕೆಗೆ ಪಾವತಿಸಿದ್ದ ಜಾಹೀರಾತು ತೆರಿಗೆಯನ್ನು ತಿರಸ್ಕರಿಸಬಹುದಾಗಿತ್ತು. ಆದರೆ ಜಾಹೀರಾತು ತೆರಿಗೆಯನ್ನು ನಗರ ಪಾಲಿಕೆಯ ಬೊಕ್ಕಸಕ್ಕೆ ಜಮಾ ಮಾಡಿಕೊಂಡಿರುವುದು ಸ್ಪಷ್ಟವಾಗಿರುತ್ತದೆ.

ದಿನಾಂಕ:11-02-2010ರ ಆಂತರಿಕ ಕಛೇರಿ ಟಿಪ್ಪಣಿಯಂತೆ ಮೇಲ್ಮನವಿದಾರರು ದಿನಾಂಕ:01-12-2007ರಿಂದ 30-11-2010ರವರೆಗೆ ಒಟ್ಟು 56 ಜಾಹೀರಾತು ಫಲಕಗಳನ್ನು ಅಳವಡಿಸಿರುವುದು ಸ್ಥಳ ತನಿಖೆಯಿಂದ ಕಂಡು ಬಂದಿರುವುದಾಗಿ ವರದಿಸಲಾಗಿರುತ್ತದೆ. ಆದರೆ ದಿನಾಂಕ:28-05-2009ರಂದು ನೀಡಿರುವ ನೋಟೀಸ್‌ನಲ್ಲಿ ದಿನಾಂಕ:18-05-2009, 19-05-2009 ಮತ್ತು 20-05-2009ರಂದು ತಪಾಸಣೆ ಮಾಡಿರುವುದಾಗಿ ನಮೂದಿಸಲಾಗಿದ್ದು, ವಿಸ್ತೀರ್ಣವನ್ನಾಗಲೀ ಫಲಕಗಳ ಸಂಖ್ಯೆಗಳನ್ನಾಗಲೀ ನಮೂದಿಸಿರುವುದಿಲ್ಲ. ಬದಲಾಗಿ ಜಾಹೀರಾತುದಾರರು ನೀಡಿರುವ ಅಳತೆಯನ್ನೇ ನಮೂದಿಸಿರುವುದು ಸ್ಪಷ್ಟವಾಗಿರುತ್ತದೆ. ಆದರೆ ದಿನಾಂಕ:22-10-2009ರಂದು ರೈಲ್ವೆಯವರು ಮೇಲ್ಮನವಿದಾರರಿಗೆ ಪತ್ರ ಬರೆದು ನವೆಂಬರ್-2008ಕ್ಕೆ 26 ಫಲಕಗಳು ಮತ್ತು ಅಕ್ಟೋಬರ್-2009ರ ಕೊನೆಗೆ 22 ಫಲಕಗಳನ್ನು ಅಳವಡಿಸಿರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ಕಾಲಕಾಲಕ್ಕೆ ಸರಿಯಾಗಿ ಕ್ರಮ ಕೈಗೊಳ್ಳದೆ ವಿಳಂಭನೀತಿ ಅನುಸರಿಸಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ. ಈ ಬಗ್ಗೆ ಸಮಿತಿಯು ಇನ್ನು ಮುಂದೆ ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಸಂಖ್ಯೆ ಮತ್ತು ಅಳತೆಯ ಬಗ್ಗೆ ಸ್ಪಷ್ಟವಾಗಿ ನಮೂದಿಸುವಂತೆ ಕ್ರಮಕೈಗೊಳ್ಳುವುದು. ಜಾಹೀರಾತುದಾರರಿಗೆ ದಿನಾಂಕ:01-12-2007ರಿಂದಲೇ ಒಟ್ಟು 56 ಜಾಹೀರಾತು ಫಲಕಗಳನ್ನು ಅಳವಡಿಸಿರುವುದಾಗಿ ನೋಟೀಸ್ ನೀಡಿದ್ದು, ಒಟ್ಟು 56 ಜಾಹೀರಾತು ಫಲಕಗಳನ್ನು ಒಂದೇ ಸಲ ಅಳವಡಿಸಿರುವ ಬಗ್ಗೆ ಯಾವುದೇ ಪುರಾವೆಗಳನ್ನು ಒದಗಿಸಿರುವುದು ಕಡತದಲ್ಲಿ ಕಂಡು ಬರುವುದಿಲ್ಲ. ಹಾಗೂ ರೈಲ್ವೆಯವರು ತಪಾಸಣೆ ಮಾಡಲು ಅವಕಾಶ ನೀಡಿರುವುದಿಲ್ಲವೆಂದು ಸಮಿತಿಯ ಮುಂದೆ ತಿಳಿಸಿದ್ದು ದಿನಾಂಕ:28-05-2009ರ ನೋಟೀಸ್‌ನಲ್ಲಿ ತಪಾಸಣೆ ಮಾಡಿರುವುದಾಗಿ ತಿಳಿಸಿರುವುದು ಹಾಗೂ ಜಾಹೀರಾತು ಫಲಕಗಳನ್ನು ತೆರವುಗೊಳಿಸಿರುವುದಾಗಿ ತಿಳಿಸಿದ್ದರೂ ಸಹ ಎಲ್ಲಾ ಫಲಕಗಳಿಗೂ ಸೇರಿಸಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ಡಿಮ್ಯಾಂಡ್ ನೋಟೀಸ್ ನೀಡಿರುವುದು ಸಮಂಜಸವಾಗಿರುವುದಿಲ್ಲ. ದಿನಾಂಕ:28-05-2009ರಂದು ನೀಡಿರುವ ನೋಟೀಸ್‌ನಲ್ಲಿ ತಪಾಸಣೆ ಮಾಡಿರುವ ಬಗ್ಗೆ ವರದಿಸಿದ್ದು ಸದರಿ ವರದಿಯಲ್ಲಿ ಕಂದಾಯ ಪರಿವೀಕ್ಷಕರು ಫಲಗಳ ಅಳತೆಯನ್ನಾಗಲೀ ಅಥವಾ ಸಂಖ್ಯೆಗಳನ್ನಾಗಲೀ ನಮೂದಿಸದೇ ಮೇಲ್ಮನವಿದಾರರು ನೀಡಿರುವ ಅಳತೆಯನ್ನೇ ನಮೂದಿಸಿರುವುದರಿಂದ ಸಮಿತಿಯು ಸ್ಥಳ ಪರಿಶೀಲನೆ ಮಾಡಿರುವುದಿಲ್ಲವೆಂದು ಭಾವಿಸುತ್ತದೆ. ರೈಲ್ವೆ ಇಲಾಖೆಯವರು ಮೇಲ್ಮನವಿದಾರರಿಗೆ ನವೆಂಬರ್-2008 ಮತ್ತು ಅಕ್ಟೋಬರ್-2009ರ ಕೊನೆಗೆ ಎಷ್ಟೆಷ್ಟು ಫಲಕಗಳನ್ನು ಜಾಹೀರಾತುದಾರರು ಅಳವಡಿಸಿದ್ದಾರೆಂಬ ಬಗ್ಗೆ ಪತ್ರ ಮುಖೇನ ತಿಳಿಸಿರುವುದನ್ನು ಗಣನೆಗೆ ತೆಗೆದುಕೊಂಡು ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ವಸೂಲು ಮಾಡುವುದು ನ್ಯಾಯ ಸಮ್ಮತವಾಗಿರುತ್ತದೆ. ಆದರೆ ಮೇಲ್ಮನವಿದಾರರು ಟೆಂಡರ್ ಪಡೆದ ತಿಂಗಳಿಂದಲೇ 56 ಫಲಕಗಳಿಗೆ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿರುವುದು ಸ್ವಭಾವಸಿದ್ಧ ನ್ಯಾಯಕ್ಕನುಗುಣವಾಗಿರುದಿಲ್ಲ. ಅಲ್ಲದೆ ಮೇಲ್ಮನವಿದಾರರು ಯಾವ ಯಾವ ತಿಂಗಳಲ್ಲಿ ಹಂತ ಹಂತವಾಗಿ ಎಷ್ಟೆಷ್ಟು ಫಲಕಗಳನ್ನು ಅಳವಡಿಸಿಕೊಂಡಿದ್ದರೆಂಬ ಬಗ್ಗೆ ಮಾಹಿತಿಯನ್ನು ದಿನಾಂಕ:13-11-2010ರಂದು ಒದಗಿಸಿರುವುದು ಕಡತದಲ್ಲಿ ಲಗತ್ತಿಸಿರುವ ದಾಖಲೆಯಿಂದ ಕಂಡು ಬಂದಿದ್ದು, ಸದರಿ ಮಾಹಿತಿಯ ಆದಾರದ ಮೇಲೆ

ಜಾಹೀರಾತು ತೆರಿಗೆಯನ್ನು ನಿಗಧಿಪಡಿಸಿ ವಸೂಲು ಮಾಡುವುದು ಮತ್ತು 01-12-2007ರಿಂದ ರೈಲ್ವೆಯವರು ನೀಡಿರುವ ದಿನಾಂಕ:22-10-2009ರ ಪತ್ರ ಹಾಗೂ ಜಾಹೀರಾತುದಾರರು ನೀಡಿರುವ ಅಳತೆ ಮತ್ತು ಫಲಕಗಳ ಸಂಖ್ಯೆಯನ್ನು ಪರಿಗಣಿಸಿ ಜಾಹೀರಾತು ತೆರಿಗೆಯನ್ನು ನಿಗಧಿಪಡಿಸುವುದೆಂದು ಹಾಗೂ ಇನ್ನು ಮುಂದೆ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳು ಪ್ರತಿ ತಿಂಗಳು ಸ್ಥಳ ಪರಿಶೀಲನೆ ಮಾಡಿ ಜಾಹೀರಾತು ಫಲಕಗಳ ಅಳತೆ ಮತ್ತು ಸಂಖ್ಯೆಗಳನ್ನು ಕಡತದಲ್ಲಿ ಕಡ್ಡಾಯವಾಗಿ ನಮೂದಿಸುವಂತೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2010-11

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ವಕೀಲರ ಮುಖಾಂತರ ಹಾಜರಾಗಿರುತ್ತಾರೆ. ಹೆಚ್ಚಿನ ಚರ್ಚೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2010-11

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರ ಪರವಾಗಿ ಶ್ರೀ.ಸುರೇಶ್ ಕುಮಾರ್, ಕಂದಾಯ ಪರಿವೀಕ್ಷಕರು ಹಾಜರಾಗಿರುತ್ತಾರೆ. ಆದರೆ ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಿರುವುದಿಲ್ಲ ನನಗೇನು ತಿಳಿದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಮಿತಿಯು ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ) ಮತ್ತು ಕಂದಯ ಪರಿವೀಕ್ಷಕರಿಗೆ ಕಾರಣ ಕೇಳಿ ಪತ್ರ ನೀದುವುದೆಂದು ತೀರ್ಮಾನಿಸುತ್ತಾ ಪ್ರಕರಣವನ್ನು ಪ್ರಕರಣವನ್ನು ಮುಂದೂಡಲಾಯಿತು.

05. ವಿಷಯ:ಸಂಖ್ಯೆ:ಅಸ್ಥಾಸ/(ತೆ)/13/2010-11

ಶ್ರೀಮತಿ.ಪಿ.ಶಕುಂತಲ, ಸಂಖ್ಯೆ:13, ವೀರಭದ್ರನಾಯಕ ಲೇನ್. ಕಾಟನ್ ಪೇಟೆ ಈ ಸ್ವತ್ತಿನ ಕಂದಾಯವನ್ನು ಪರಿಷ್ಕರಿಸಿ ವಸತಿ ರೂ.47600/- ಮತ್ತು ವಸತಿಯೇತರ ರೂ.57120/- ವಾರ್ಷಿಕ ಮೌಲ್ಯಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವುದನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವುದರ ವಿರುದ್ಧ, ಸ್ವತ್ತಿನ ಮಾಲೀಕರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-05-2011ರ ಟಿಪ್ಪಣಿ.

**ಪ್ರಸ್ತಾವನೆ**:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ಅವರ ಪತಿಯವರಾದ ಶ್ರೀ.ಜಯಪಾಲ್‌ರವರು ಮತ್ತು ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಿಕ್ಕಪೇಟೆ)ರವರು ಹಾಜರಾಗಿರುತ್ತಾರೆ.

ಮೇಲ್ಮನವಿದಾರರು 2006-07ನೇ ಸಾಲಿನಲ್ಲಿ ಕಂದಾಯವನ್ನು ನಿಗಧಿಪಡಿಸಿದ್ದು, ಸದರಿ ಕಂದಾಯದ ವಿರುದ್ಧ ಪ್ರಥಮ ಅಪೀಲು ಅಧಿಕಾರಿಗಳ ಮುಂದೆ ಅಪೀಲು ಸಲ್ಲಿದ್ದು, ಪ್ರಥಮ ಅಪೀಲು ಅಧಿಕಾರಿಗಳು ತೆರಿಗೆ ನಿಗಧಿಪಡಿಸಿರುವುದನ್ನು ಸ್ಥಿರೀಕರಿಸಿರುತ್ತಾರೆ. ಸ್ವತ್ತಿನ ಪೂರ್ಣಭಾಗವನ್ನು ವಾಣಿಜ್ಯಕ್ಕಾಗಿ ತೆಗೆದುಕೊಂಡು ಕಂದಾಯವನ್ನು ನಿಗಧಿಪಡಿಸಿರುವುದು ಸರಿಯಿರುವುದಿಲ್ಲ. ಕಂದಾಯ ಪ್ರಾಧಿಕಾರ ಸ್ವತ್ತಿನ ಮೌಲ್ಯವರ್ಧನೆಯನ್ನು ಸರಿಯಾಗಿ ಗುರುತಿಸಲು ವಿಫಲವಾಗಿರುತ್ತದೆ.

ಹಾಜರಿದ್ದ ಪ್ರತಿವಾದಿಗಳು ಮೇಲ್ಮನವಿದಾರರು ಮಾಡುತ್ತಿರುವ ಅಪಾದನೆಗಳನ್ನು ನಿರಾಕರಿಸುತ್ತಾ, ನಾನೇ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿದ್ದು ಸ್ವತ್ತನ್ನು ಬಾಡಿಗೆಗೆ ನೀಡಿರುವುದು ಕಂಡು ಬಂದಿರುತ್ತದೆ. ಸ್ವತ್ತಿನ ಮಾಲೀಕರು ನೆಲಮಹಡಿಯಲ್ಲಿ ತಾಂತ್ರಿಕ ಉದ್ದೇಶದ ಅಂಗಡಿಯನ್ನು ನಡೆಸುತ್ತಿರುತ್ತಾರೆ. ಸದರಿ ಸ್ವತ್ತಿನ ವಿಸ್ತೀರ್ಣವನ್ನು ಪೂರ್ಣವಾಗಿ ಉಪಯೋಗಿಸಿಕೊಂಡಿದ್ದು, ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ನಿಗಧಿಪಡಿಸಿರುವ ಕಂದಾಯವನ್ನು ಮೇಲ್ಮನವಿದಾರರು ಪಾವತಿಸಿರುತ್ತಾರೆ. ಮೇಲ್ಮನವಿದಾರರು ತಮ್ಮ ಹೆಸರಿನಲ್ಲಿ ಟ್ರೇಡ್ ಪರವಾನಗಿಯನ್ನು ಹೊಂದಿರುತ್ತಾರೆಂದು ತಿಳಿಸಿರುತ್ತರೆ.

ಮೇಲ್ಮನವಿದಾರರು ಈಗಾಗಲೇ ನಾನು ಹೆಚ್ಚಿನ ಕಂದಾಯ ಪಾವತಿಸಿದ್ದು, ಸದರಿ ಹೆಚ್ಚಿನ ಕಂದಾಯವನ್ನು ಮುಂದಿನ ವರ್ಷದಲ್ಲಿ ಪಾವತಿಸುವ ಕಂದಾಯಕ್ಕೆ ಹೊಂದಾಣಿಕೆ ಮಾಡಿಕೊಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

ಸ್ಥಳ ಪರಿಶೀಲನೆ ಮತ್ತು ಆದೇಶಕ್ಕಾಗಿ ಕಾಯ್ದಿರಿಸಿದೆ

06.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು

ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಸೇರ್ಪಡೆಗೊಳಿಸಿಕೊಳ್ಳಲು ಸಲ್ಲಿಸಿರುವ ಅರ್ಜಿಯನ್ನು ಅನುಮತಿಸಲಾಯಿತು. ಆದರೆ ಸೇರ್ಪಡೆಗೊಳಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದ ಅರ್ಜಿದಾರರು ಸೇರ್ಪಡೆಗೊಳಿಸಲು ಕೋರಿಕೊಂಡಿದ್ದ ಅರ್ಜಿಯನ್ನು ಹಿಂಪಡೆಯಲು ಅರ್ಜಿ ಸಲ್ಲಿಸಿರುವ ಮೇರೆಗೆ ಹಿಂಪಡೆಲಯ ಅನುಮತಿಸಲಾಗಿರುತ್ತದೆ. 6ನೇ ಮೇಲ್ಮನವಿದಾರರು ಹಾಜರಿದ್ದು ಈಗಾಗಲೇ ನಡೆದಿರುವ ನಡವಳಿಗಳ ಬಗ್ಗೆ ಏನೂ ಅರಿವಿಗೆ ಬಂದಿರುವುದಿಲ್ಲ. ಆದ್ದರಿಂದ ಈಗ ನಾನು ಒಂದು ವಕಾಲತ್ತು ಮತ್ತು ಪ್ರಮಾಣ ಪತ್ರ ಸಲ್ಲಿಸಲು ಬಯಸುತ್ತೇನೆಂದು ತಿಳಿಸಿದರು.

3ನೇ (ಎ-2) ಮತ್ತು ಪ್ರತಿವಾದಿಗಳು 4ನೇ ಪ್ರತಿವಾದಿಗಳ ಪರವಾಗಿ ವಕೀಲರು ಹಾಜರಾಗಿರುತ್ತಾರೆ.

7ನೇ ಮೇಲ್ಮನವಿದಾರರು ಸಮಿತಿಯ ಮುಂದೆ ಹಾಜರಾಗಲು ನೋಟೀಸ್ ನೀಡುವುದೆಂದು ಹಾಗೂ ಆದೇಶಕ್ಕಾಗಿ ಕಾಯ್ದಿರಿಸುತ್ತಾ, ವಿಷಯವನ್ನು ಮುಂದೂಡಲಾಯಿತು.

07. ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2011-12

ಸಂಖ್ಯೆ:1028/402/3, 19ನೇ ಹೆಚ್ ಮುಖ್ಯರಸ್ತೆ, 1ನೇ ಎನ್. ಬ್ಲಾಕ್, ರಾಜಾಜಿನಗರ, ವಾರ್ಡ್-62 ಈ ಸ್ವತ್ತಿನ ಖಾತೆದಾರರಾದ ಶ್ರೀ.ಗೋಕಲ್‌ದಾಸ್ ಪೈರವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.13,450/- (ವಸತಿ) ಮತ್ತು ರೂ.1,02,400/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಗಳಿಗೆ ಮತ್ತೊಮ್ಮೆ ನೋಟೀಸ್ ಜಾರಿ ಮಾಡಲು ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:09-09-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಜಂಟಿ ನಿರ್ದೇಶಕರು (ಪಶುಪಾಲನೆ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ನಿರ್ದೇಶಕರು ನಗರ ಯೋಜನೆ(ಪಶ್ಚಿಮ/ಮಹದೇವಪುರ) |
| 04 | ಬಿ.ಎಸ್.ಆನಂದ | ಸದಸ್ಯರು | ಸಹಾಯಕ ನಿರ್ದೇಶಕರು (ಪಶುಪಾಲನೆ/ಯಲಹಂಕ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸ.ಕಂ.ಅ.(ಚಾಮರಾಜಪೇಟೆ/ವಿಜಯನಗರ/ಹೆಬ್ಬಾಳ/ವಸಂತನಗರ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/03/2011-12

ಚಂದ್ರೋದಯ ಕನ್ವೆಷನ್ ಸೆಂಟರ್‌ನ ಮಾಲೀಕರು ದಿನಾಂಕ:11-02-2009ರಂದು ನ್ಯಾಯಾಲಯದಲ್ಲಿ ಚಂದ್ರ ಸಾಗರ್ ಎಂಟರ್‌ಪ್ರೈಸಸ್‌ರವರ ಮಾಲೀಕತ್ವದಲ್ಲಿ ನಡೆಸುತ್ತಿರುವ ಚಂದ್ರೋದಯ ಕನ್ವೆಷನ್ ಸೆಂಟರ್‌ನ ತೆರಿಗೆ ವಿಷಯವನ್ನು ನಗರ ಪಾಲಿಕೆಯ ಅಪೀಲು ಸಮಿತಿಗೆ ವಾಪಸ್ ಕಳುಹಿಸಿ ಮತ್ತೊಮ್ಮೆ ನಮ್ಮ ಸಂಸ್ಥೆಗೆ ಅವಕಾಶ ನೀಡಿ ವಿಚಾರಣೆ ನಡೆಸಿ ತೀರ್ಮಾನ ತೆಗೆದುಕೊಳ್ಳಲು ಆದೇಶಿಸಿದ್ದು, 6 ತಿಂಗಳು ಕಳೆದಿದ್ದರೂ ಸಹ ಇದುವರೆವಿಗೂ ನಗರ ಪಾಲಿಕೆ ವತಿಯಿಂದ ನಮ್ಮನ್ನು ವಿಚಾರಣೆಗೆ ಕರೆದಿರುವುದಿಲ್ಲವೆಂದು ತಿಳಿಸಿ ನ್ಯಾಯಾಲಯದ ಆದೇಶದಂತೆ ವಿಚಾರಣೆ ಮಾಡಬೇಕೆಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ಪ್ರಸ್ತಾವನೆ:-**ಪ್ರಕರಣವನ್ನು ಕರೆಯಲಾಯಿತು. ನ್ಯಾಯಾಲಯವು ಚಂದ್ರ ಸಾಗರ್ ಎಂಟರ್‌ಪ್ರೈಸಸ್‌ರವರ ಮಾಲೀಕತ್ವದಲ್ಲಿ ನಡೆಯುತ್ತಿರುವ ಚಂದ್ರೋದಯ ಕನ್ವೆಷನ್ ಸೆಂಟರ್‌ನ ತೆರಿಗೆ ವಿಷಯವನ್ನು ನಗರ ಪಾಲಿಕೆಯ ಅಪೀಲು ಸಮಿತಿಗೆ ವಾಪಸ್ ಕಳುಹಿಸಿ ಮತ್ತೊಮ್ಮೆ ಸದರಿ ಸಂಸ್ಥೆಗೆ ಅವಕಾಶ ನೀಡಿ ವಿಚಾರಣೆ ನಡೆಸಿ ಕಾನೂನಿನ ಚೌಕಟ್ಟಿನಲ್ಲಿ ತೀರ್ಮಾನ ಕೈಗೊಳ್ಳುವಂತೆ ಆದೇಶಿಸುತ್ತಾ, ಸದರಿ ಪ್ರಕರಣವನ್ನು ಅಂತಿಮಗೊಳಿಸಿರುವುದು ಕಂಡು ಬರುತ್ತದೆ. ಹಾಗೂ ದಿನಾಂಕ:25-06-2011ರ ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿ (ಬಿ.ಟಿ.ಎಂ. ಬಡಾವಣೆ)ರವರು ನೋಟೀಸ್ ತಡವಾಗಿ ಬಂದಿರುತ್ತದೆಂದು ತಿಳಿಸಿರುತ್ತಾರೆ. ಆದರೆ ಸದರಿಯವರ ಕಛೇರಿಯಲ್ಲಿ ನೋಟೀಸ್‌ನ್ನು ದಿನಾಂಕ:17-06-2011ರಂದೇ ಸ್ವೀಕರಿಸಿದ್ದರೂ ಸಹ ಮೂಲ ಕಡತವನ್ನು ಸಮಿತಿಯ ಮುಂದೆ ಸಲ್ಲಿಸಲು ವಿಫಲರಾಗಿದ್ದು, ದಿನಾಂಕ:2-07-2011ರಂದು ಟಿಪ್ಪಣಿಯೊಂದಿಗೆ ಮೂಲ ಕಡತವನ್ನು ಮಂಡಿಸಿರುತ್ತಾರೆ. 200 ದಿನಗಳಿಗೆ ಕಂದಾಯವನ್ನು ಯಾವ ಲೆಕ್ಕಾಚಾರದ ಮೇಲೆ ನಿಗಧಿಪಡಿಸಲಾಗಿದೆ ಎಂಬುದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿರುವುದಿಲ್ಲ. ಕೇವಲ ಕಂದಾಯ ಪರಿವೀಕ್ಷಕರು ಮತ್ತು ಮೌಲ್ಯಮಾಪಕರ ವರದಿಯ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸಿರುವುದಾಗಿ ತಿಳಿಸಿರುತ್ತಾರೆ.

**ನಿರ್ಣಯ**:- ದಿನಾಂಕ:21-07-2011ರ ಜಂಟಿ ಆಯುಕ್ತರು (ದಕ್ಷಿಣ)ರವರ ಟಿಪ್ಪಣಿ ಮತ್ತು ಎಂ.ಎ.ಸಂಖ್ಯೆ:34/1997ರಲ್ಲಿ ನ್ಯಾಯಾಲಯವು ದಿನಾಂಕ:11-02-2009ರಂದು ನೀಡಿರುವ ಆದೇಶ ದಿನಾಂಕ:24-06-2011 ಮತ್ತು ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. 200 ದಿನಗಳ ಕಾಲ ವಿವಾಹಗಳು ನಡೆದಿರುವ ಬಗ್ಗೆ ಬಿಲ್‌ಗಳನ್ನಾಗಲಿ, ವಿದ್ಯುತ್ಶಕ್ತಿ ಬಿಲ್‌ನ್ನಾಗಲಿ ಹಾಗೂ ಇನ್ನಿತರೆ ದಾಖಲೆಗಳನ್ನು ಒದಗಿಸಲು ಅಧಿಕಾರಿಗಳು ವಿಫಲರಾಗಿರುತ್ತಾರೆ.

1995ರಲ್ಲಿ ಚಂದ್ರೋದಯ ಕನ್ವೆಷನ್ ಸೆಂಟರ್ ಹೊಸ ಸಂಸ್ಥೆಯಾಗಿರುವುದು ಸ್ಪಷ್ಟವಾಗಿರುತ್ತದೆ. ಸದರಿ ಸಂಸ್ಥೆಯು ವರ್ಷಕ್ಕೆ ಎಷ್ಟು ಮದುವೆಗಳನ್ನು ನಡೆಸಿರುತ್ತಾರೆಂಬ ಬಗ್ಗೆ ಮಾಹಿತಿಗಳನ್ನು ದಾಖಲಿಸಲು ಅಧಿಕಾರಿಗಳು ಕ್ರಮ ಕೈಗೊಂಡಿರುವುದು ಕಂಡು ಬರುವುದಿಲ್ಲ. ಹಾಗೂ ಸದರಿ ಸಂಸ್ಥೆಯವರು ವಾಣಿಜ್ಯ ತೆರಿಗೆ ಇಲಾಖೆಗೆ ಲಕ್ಸುರಿ ತೆರಿಗೆಯನ್ನು 114 ದಿನಗಳಿಗೆ ಲೆಕ್ಕ ಹಾಕಿ ಪಾವತಿಸಿಕೊಂಡಿರುವುದು ಕಂಡು ಬರುವುದಲ್ಲದೆ ನ್ಯಾಯಾಲಯದಲ್ಲಿ ದಾಖಲಿಸಿರುವ ದಾವೆಯಲ್ಲೂ ಸಹ 107 ದಿನಗಳಿಗೆ ಲೆಕ್ಕಾಚಾರ ಮಾಡಿ ತೆರಿಗೆಯನ್ನು ನಿಗಧಿಪಡಿಸುವಂತೆ ಕೋರಿಕೊಂಡಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳ ಹಿನ್ನೆಲೆಯಲ್ಲಿ ಚಂದ್ರೋದಯ ಕನ್ವೆಷನ್ ಸೆಂಟರ್ ಸಂಸ್ಥೆಗೆ ಈಗಾಗಲೇ 200 ದಿನಗಳಿಗೆ ಲೆಕ್ಕಾಚಾರ ಮಾಡಿ ಕಂದಾಯವನ್ನು ವಿಧಿಸಿರವುದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸಿಲ್ಲದಿರುವ ಹಿನ್ನೆಲೆಯಲ್ಲಿ ಈಗಾಗಲೇ 200 ದಿನಗಳಿಗೆ ಲೆಕ್ಕಾಚಾರ ಮಾಡಿ ಕಂದಾಯವನ್ನು ವಿಧಿಸಿರವ ಆಧಾರದ ಮೇಲೆಯೇ 114 ದಿನಗಳಿಗೆ ಲೆಕ್ಕಾಚಾರ ಮಾಡಿ ದಿನಾಂಕ:01-04-1995ರಿಂದ ಜಾರಿಗೆ ಬರುವಂತೆ ತೆರಿಗೆಯನ್ನು ವಿಧಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12

ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

**ಪ್ರಸ್ತಾವನೆ:-** ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಹಾಜರಾಗಿದ್ದು, ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ತಮ್ಮ ನ್ಯಾಯವಾದಿಗಳು ಬೇರೊಂದು ಪ್ರಕರಣದಲ್ಲಿ ತೊಡಗಿಸಿಕೊಂಡಿರುವ ಮೇರೆಗೆ ಕಾಲಾವಕಾಶ ಕೋರಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/10/2010-11

ಶ್ರೀಮತಿ.ಡಿ.ಆರ್.ಶಿಲ್ಪಶ್ರೀ, ನಂ.207, 4ನೇ ಅಡ್ಡರಸ್ತೆ, ಮಾರೇನಹಳ್ಳಿ ಟ್ಯಾಂಕ್ ಬಂಡ್ ರಸ್ತೆ, ಜಯನಗರ 9ನೇ ಬ್ಲಾಕ್, ಬೆಂಗಳೂರು-41 ಇವರು ನಂದಿನಿ ಹಾಲು ಮತ್ತು ಉತ್ಪನ್ನಗಳ ಮಾರಾಟದ ಪಾರ್ಲರ್ ಪ್ರಾರಂಭಿಸಲು ಸ್ಥಳ ಮಂಜೂರು ಮಾಡಲು ವಾರ್ಡ್ ಸಂಖ್ಯೆ:170ರ ಬಿ.ಟಿ.ಎಂ. 1ನೇ ಹಂತ, 1ನೇ ಕ್ರಾಸ್, 9ನೇ ಮುಖ್ಯರಸ್ತೆಯ ಪಾರ್ಕ್‌ನಲ್ಲಿ ನಿರ್ಮಾಣ ಮಾಡುತ್ತಿರುವ ಶೌಚಾಲಯದ ಹಿಂಭಾಗದಲ್ಲಿರುವ 10x10 ಅಡಿಗಳ ಜಾಗವನ್ನು ಮಂಜೂರು ಮಾಡಲು ಕೋರಿದ್ದು, ಸದರಿಯವರ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದ್ದು, ಸದರಿಯವರು ನಿರುದ್ಯೋಗಿಯಾಗಿದ್ದು ಜೀವನೋಪಯೋಗಕ್ಕಾಗಿ ಬೇರೆ ಯಾವುದೇ ಉದ್ಯೋಗವಿಲ್ಲದಿರುವುದರಿಂದ ಸದರಿ ಜಾಗವನ್ನು ಮಂಜೂರು ಮಾಡಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:21-06-2011ರ ಟಿಪ್ಪಣಿ

**ನಿರ್ಣಯ:-**ಮೇಲ್ಮನವಿದಾರರು 10x10 ಅಡಿಗಳ ಜಾಗವನ್ನು ನಂದಿನಿ ಹಾಲಿನ ಪಾರ್ಲರ್ ನಡೆಸಲು ಅನುಮತಿ ಕೋರಲಾಗಿದ್ದು, ಸದರಿಯವರ ಕೋರಿಕೆಯಂತೆ ದಿನಾಂಕ:07-02-2011ರಂದು ಆಯುಕ್ತರು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಮುಂದೆ ಟಿಪ್ಪಣಿ ಮಂಡಿಸಿದ್ದು, ಸದರಿ ಟಿಪ್ಪಣಿಯಲ್ಲಿ ಉದ್ಯಾನವನದಲ್ಲಿ ಎಂದು ನಮೂದಿಸಲಾಗಿರುತ್ತದೆ. ಸದರಿ ಟಿಪ್ಪಣಿಯ ಆಧಾರದ ಮೇಲೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:22-02-2011ರಂದು ಆಯುಕ್ತರ ಟಿಪ್ಪಣಿ ಬಗ್ಗೆ ಸ್ಥಳ ತನಿಖೆ ನಡೆಸಿ ತಿರಸ್ಕರಿಸಲಾಗಿರುತ್ತದೆಂದು ನಿರ್ಣಯಿಸಲಾಗಿರುತ್ತದೆ. ಈ ಬಗ್ಗೆ ಸಮಿತಿಯು ದಿನಾಂಕ:30-07-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ತಪಾಸಣೆ ಮಾಡಲಾಗಿ ಸದರಿ ಸ್ಥಳದಲ್ಲಿ ಉದ್ಯಾನವವೇ ಇಲ್ಲದಿರುವುದನ್ನು ಕಂಡು ಆಶ್ಚರ್ಯಗೊಂಡಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳನ್ನು ವಿಚಾರಿಸಲಾಗಿ ನಾವು ಯಾರೂ ಉದ್ಯಾನವನವಿದೆಯೆಂದು ಟಿಪ್ಪಣಿಯನ್ನು ಮಂಡಿಸಿರುವುದಿಲ್ಲವೆಂದು ತಿಳಿಸಿರುತ್ತಾರೆ. ಈ ಬಗ್ಗೆ ಸಮಿತಿಯು ದಿನಾಂಕ:02-08-2011ರಂದು ಉಪ ಆಯುಕ್ತರು (ಆಸ್ತಿಗಳು)ರವರಿಗೆ ಪತ್ರ ಬರೆದು ದಿನಾಂಕ:05-08-2011ರೊಳಗಾಗಿ ಮೇಲ್ಕಂಡ ಸ್ವತ್ತಿನಲ್ಲಿ ಉದ್ಯಾನವನವಿದೆಯೇ ಇಲ್ಲವೇ ಹಾಗೂ ಸದರಿ ಸ್ವತ್ತು ಯಾವು ಉದ್ದೇಶಕ್ಕಾಗಿ ಮೀಸಲಿಟ್ಟಿದೆ ಎಂಬ ಬಗ್ಗೆ ವಿವರವಾದ ವರದಿಯನ್ನು ಸಮಿತಿಯ ಮುಂದೆ ಮಂಡಿಸುವಂತೆ ಕೋರಲಾಗಿತ್ತು. ಆದರೆ ಉಪ ಆಯುಕ್ತರು (ಆಸ್ತಿಗಳು) ಇವರು ದಿನಾಂಕ: 09-08-2011ರಂದು ಸಹಾಯಕ ಕಂದಾಯ ಅಧಿಕಾರಿ ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜಯನಗರ)ರವರಿಗೆ ಬರೆದಿರುವ ಪತ್ರದ ಪ್ರತಿಯನ್ನು ಸಮಿತಿಗೆ ಸಲ್ಲಿಸಿ ''ಮೂಲ ಕಡತವನ್ನು ಪರಿಶೀಲನೆಗೆ ಸಲ್ಲಿಸಲು ಕೋರಿದೆ'' ಎಂದು ತಿಳಿಸಿರುತ್ತಾರೆ. ಆದರೆ ಉದ್ಯಾನವನದ ವಿಷಯವಾಗಿರುವುದರಿಂದ ತೋಟಗಾರಿ ಇಲಾಖೆಗೆ ಪತ್ರವನ್ನೇ ಬರೆದಿರುವುದಿಲ್ಲ. ಹಾಗೂ ಸಮಿತಿಯಲ್ಲಿರುವ ಕಡತವನ್ನು ಪರಿಶೀಲಿಸಿದಾಗ ಸಹಾಯಕ ಕಂದಾಯ ಅಧಿಕಾರಿ (ಜಯನಗರ)ರವರು ಕಂಡಿಕೆ 12ರಿಂದ 18ರವರೆಗಿನ ತಮ್ಮ ವರದಿಯಲ್ಲಿ ಉದ್ಯಾನವನವೆಂದು ಎಲ್ಲೂ ನಮೂದಿಸಿರುವುದಿಲ್ಲ. ಹಾಗೂ ಆಟದ ಮೈದಾನವಿದ್ದು ಸದರಿ ಮೈದಾನಕ್ಕೆ ತಂತಿ ಬೇಲಿ ಅಳವಡಿಸಿ ರಕ್ಷಿಸಲಾಗಿದ್ದು, ಆಟದ ಮೈದಾನವನ್ನು ಹೊರತು ಪಡಿಸಿ ಅದರ ಪಕ್ಕದಲ್ಲಿ 9ನೇ ಮುಖ್ಯರಸ್ತೆಗೆ ಅಭಿಮುಖವಾಗಿ 10x10 ಅಡಿಗಳ ಖಾಲಿ ನಿವೇಶನವಿರುವುದಾಗಿ ತಿಳಿಸಿರುವುದು ಸ್ಪಷ್ಟವಾಗಿರುತ್ತದೆ.

ಆದರೆ ಸಂಬಂಧಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಜಯನಗರ), ಕಂದಾಯ ಪರಿವೀಕ್ಷಕರು, ವಾರ್ಡ್-170 ಮತ್ತು ಕಂದಾಯ ಅಧಿಕಾರಿ ಜಯನಗರ ವಲಯ, ಉಪ ಆಯುಕ್ತರು (ಆಸ್ತಿಗಳು)ರವರುಗಳು ಮಾತ್ರ ತಮ್ಮ ವರದಿಯಲ್ಲಿ ಉದ್ಯಾನವನವೆಂದು ನಮೂದಿಸಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಿರುವುದು ಕಂಡು ಬರುತ್ತದೆ. ಈ ಅಧಿಕಾರಿಗಳು ಮಾಡಿರುವ ತಪ್ಪಿನಿಂದಾಗಿ ಮೇಲಾಧಿಕಾರಿಗಳು ಸಮಿತಿಯ ಮುಂದೆ ತಪ್ಪು ಟಿಪ್ಪಣಿಯನ್ನು ಮಂಡಿಸಲು ಅವಕಾಶ ಕಲ್ಪಿಸಿದಂತಾಗಿರುತ್ತದೆ.

ಸಮಿತಿಯೇ ಖುದ್ದಾಗಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ನಂತರ ಸಂಬಂಧಪಟ್ಟ ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಸ್ಥಾಯಿ ಸಮಿತಿಗಳು ಸಾರ್ವಜನಿಕರಿಗೆ ನ್ಯಾಯ ಒದಗಿಸಿಕೊಡದಂತಹ ಪರಿಸ್ಥಿತಿ ನಿರ್ಮಾಣವಾಗಿರುವುದಾಗಿ ಅಭಿಪ್ರಾಯಪಟ್ಟಿರುತ್ತದೆ. ಮೇಲ್ಮನವಿದಾರರು ಕೋರಿರುವ ಜಾಗದ ಪಕ್ಕದಲ್ಲಿ ಬೆಸ್ಕಾಂರವರು ಟ್ರಾನ್ಸ್‌ಫಾರಂ ಅಳವಡಿಸಿಕೊಂಡಿದ್ದು ಪಕ್ಕದಲ್ಲಿ ಇನ್ನೂ ಖಾಲಿ ಜಾಗ ಉಳಿದಿದ್ದು ಆ ಜಾಗದಲ್ಲಿ ಸಾರ್ವಜನಿಕರು ಮಲ ಮೂತ್ರ ವಿಸರ್ಜನೆ ಮಾಡುತ್ತಿರುವುದು ತಪಾಸಣಾ ಸಮಯದಲ್ಲಿ ಕಂಡು ಬಂದಿರುತ್ತದೆ. ಸಮಿತಿಯು ಮಹಿಳಾ ಸದಸ್ಯರೊಂದಿಗೆ ಸ್ಥಳದಲ್ಲಿ ತಪಾಸಣೆ ಮಾಡುತ್ತಿರುವಾಗಲೇ ಕೆಲವು ಸಾರ್ವಜನಿಕರು ತಮ್ಮ ಪಾಡಿಗೆ ತಾವು ಮೂತ್ರ ವಿಸರ್ಜನೆ ಮಾಡಿ ಹೋಗುತ್ತಿರುವ ದೃಶ್ಯ ಕಂಡು ಆಘಾತಗೊಂಡಿರುತ್ತದೆ. ಅಲ್ಲಿನ ಸುತ್ತ ಮುತ್ತಲಿನ ಸಾರ್ವಜನಿಕರು ಪಕ್ಕದಲ್ಲೇ ಬಸ್ಸು ನಿಲ್ದಾಣವಿರುವುದರಿಂದ ಸಾರ್ವಜನಿಕರು ಮಲ ಮೂತ್ರ ವಿಸರ್ಜನೆ ಮಾಡುತ್ತಿರುವುದರಿಂದ ಹೆಣ್ಣು ಮಕ್ಕಳು ಮುಜುಗರ ಪಡುವಂತಾಗಿರುತ್ತದೆ. ಹಾಗೂ ಕೆಟ್ಟ ವಾಸನೆಯಿಂದಾಗಿ ಈ ರಸ್ತೆಯಲ್ಲಿ ಓಡಾಡಲೂ ಸಾಧ್ಯವಾಗುತ್ತಿಲ್ಲದೆ ರೋಗ ರುಜಿನಗಳು ಹರಡಲು ಕಾರಣವಾಗಿರುತ್ತದೆ. ಆದ್ದರಿಂದ ಈ ದೃಶ್ಯವನ್ನು ತಪ್ಪಿಸಿ ಸದರಿ ಪ್ರದೇಶವನ್ನು ಸ್ವಚ್ಛವಾಗಿಡುವಂತೆ ಸಂಬಂಧಪಟ್ಟವರಿಗೆ ಆದೇಶಿಸಬೇಕೆಂದು ಕೋರಿಕೊಂಡಿರುತ್ತಾರೆ. ವಾರ್ಡಿನ ಸದಸ್ಯರೂ ಕೂಡ ಸದರಿ ಪ್ರದೇಶದಲ್ಲಿ ಯಾವುದೇ ಹಾಲು ಮಾರಾಟ ಕೇಂದ್ರವಿಲ್ಲದಿರುವುದರಿಂದ ಹಾಗೂ ಅಲ್ಲಿ ಸ್ವಚ್ಛತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಮೇಲ್ಮನವಿದಾರರು ಕೋರಿರುವಂತೆ 10x10 ಅಡಿಗಳ ಜಾಗವನ್ನು ಮಂಜೂರು ಮಾಡುವಂತೆ ಶಿಫಾರಸ್ಸು ಮಾಡಿರುವುದು ಸಹ ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಮೇಲ್ಮನವಿದಾರರು ಕೋರಿರುವ ಜಾಗವು ನಗರ ಪಾಲಿಕೆಯ ಉಪಯೋಗಕ್ಕೆ ಅವಶ್ಯಕವಿಲ್ಲದಿರುವುದನ್ನು ಮತ್ತು ಅಲ್ಲಿ ಸ್ವಚ್ಛತೆಯನ್ನು ಕಾಪಾಡುವ ಹಿತದೃಷಿಯಿಂದ ಹಾಗೂ ನಗರ ಪಾಲಿಕೆಗೆ ಆರ್ಥಿಕ ಆಧಾಯವು ಬರುವುದನ್ನು ಮನಗಂಡು ಮೇಲ್ಮನವಿದಾರುರು ಕೋರಿರುವಂತೆ 10x10 ಅಡಿಗಳ ಜಾಗವನ್ನು ಹಾಲಿನ ಮಾರಾಟ ಮಾಡಲು ತಿಂಗಳಿಗೆ ರೂ.1000/-(ರೂಪಾಯಿ ಒಂದು ಸಾವಿರಗಳು ಮಾತ್ರ) ಗುತ್ತಿಗೆ ಹಣವನ್ನು ನಿಗಧಿಪಡಿಸಿ ಮಂಜೂರು ಮಾಡುವುದೆಂದು ಹಾಗೂ ಮೇಲಾಧಿಕಾರಿಗಳು ಮತ್ತು ಸಮಿತಿಯು ಮುಜುಗರಕ್ಕೊಳಗಾಗುವಂತೆ ಟಿಪ್ಪಣಿ ಮಂಡಿಸಿರುವ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳ ಮೇಲೆ ಕಾನೂನಿನಂತೆ ಸೂಕ್ತ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2010-11

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ವಕೀಲರ ಮುಖಾಂತರ ಹಾಜರಾಗಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಸದರಿ ಸ್ವತ್ತನ್ನು ಗುತ್ತಿಗೆ ಆದಾರದ ಮೇಲೆ ಪಡೆದಿದ್ದು ಸದರಿ ಸ್ವತ್ತಿನಲ್ಲಿ ಕಟ್ಟಡ ನಿರ್ಮಾಣ ಮಾಡಲು ಅನುಮತಿ ನೀಡಲಾಗಿರುತ್ತದೆ ಮತ್ತು ಗುತ್ತಿಗೆ ಅವಧಿಯು 2016ಕ್ಕೆ ಮುಕ್ತಾಯಗೊಳ್ಳುತ್ತದೆ. ಕಂದಾಯ ಪ್ರಾಧಿಕಾರವು ಕಾನೂನು ಬದ್ಧವಲ್ಲದ ತೆರಿಗೆಯನ್ನು ನಿಗಧಿಪಡಿಸಿ ಸಹಾಯಕ ಕಂದಾಯ ಅಧಿಕಾರಿಯವರು ನೋಟೀಸ್ ನೀಡಿರುತ್ತಾರೆ. ಸದರಿ ನೋಟೀಸ್‌ಗೆ ಟ್ರಸ್ಟ್ ವಿವರವನ್ನು ಕೋರಿರುತ್ತದೆ. ಸದರಿ ಸ್ವತ್ತನ್ನು 2000ನೇ ಸಾಲಿನಲ್ಲಿ ಟ್ರಸ್ಟ್‌ನ ಸ್ವಾಧೀನಕ್ಕೆ ಪಡೆಯಲಾಗಿರುತ್ತದೆ. ಸಹಾಯಕ ಕಂದಾಯ ಅಧಿಕಾರಿಯವರು ಬಾಕಿ ಇರುವ ತೆರಿಗೆಗೆ ಬಡ್ಡಿಯನ್ನು ಪಾವತಿಸುವಂತೆ ತಿಳಿಸಿರುವುದು ಸಮಂಜಸವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಿರುವುದಿಲ್ಲ. ಸದರಿಯವರಿಗೆ ನೋಟೀಸ್ ಜಾರಿ ಮಾಡಲು ನಿರ್ದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು.

05.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2010-11

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರು ಹಾಜರಿದ್ದು, ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಲು ಸಾಧ್ಯವಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಸಮಿತಿಯ ಸಂಬಂಧಪಟ್ಟ ಅಧಿಕಾರಿಗೆ ನಿಮಗೆ ಇದು ಕೊನೆ ಅವಕಾಶ ಒಂದು ವೇಳೆ ನೋಟೀಸ್ ನೀಡಲು ವಿಫಲರಾದಲ್ಲಿ ನಿಮ್ಮ ಮೇಲೆ ಸೂಕ್ತ ಶಿಸ್ತಿನ ಕ್ರಮ ಜರುಗಿಸಲು ಆಯುಕ್ತರು ಕ್ರಮ ಕೈಗೊಳ್ಳುವಂತೆ ನಿರ್ಣಯ ಕೈಗೊಳ್ಳಲಾಗುವುದೆಂದು ನಿರ್ದೇಶಿಸುತ್ತಾ, ಕೂಡಲೇ ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡುವಂತೆ ತಿಳಿಸಿ ಪ್ರಕರಣವನ್ನು ಮುಂದೂಡಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರಾದ ಶ್ರೀ.ಸತ್ಯನಾರಾಯಣ ಮತ್ತು 6ನೇ ಮತ್ತು 7ನೇ ಮೇಲ್ಮನವಿದಾರರು ಹಾಜರಾಗಿದ್ದರು. ಪ್ರತಿವಾದಿಗಳು ಹಾಜರಾಗಿರುವುದಿಲ್ಲ ಸಹಾಯಕ ನಿರ್ದೇಶಕರು, ನಗರಯೋಜನೆ (ಪಶ್ಚಿಮ)ರವರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಒಂದು ತಿಂಗಳ ಕಾಲಾವಕಾಶ ಕೋರಿಕೊಂಡಿರುತ್ತಾರೆ. 6ನೇ ಮೇಲ್ಮನವಿದಾರರಾದ ಶ್ರೀಮತಿ.ಇಂದಿರಮ್ಮರವರು ತಮ್ಮ ವಕೀಲರೊಂದಿಗೆ ಹಾಜರಿದ್ದು ತಾವು ಹೊಸದಾಗಿ ಶ್ರೀ.ಟಿ.ಶೇಷಗಿರಿ ರಾಂ, ವಕೀಲರನ್ನು ನನ್ನ ಪರವಾಗಿ ವಾದಿಸಲು ಪ್ರತಿನಿಧಿಸುತ್ತಾರೆಂದು ತಿಳಿಸಿರುತ್ತಾರೆ. ವಾದ ಮಂಡನೆಗಾಗಿ ಪ್ರಕರಣವನ್ನು ಮುಂದೂಡಿದೆ.

07. ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2010-11

ಸಂಖ್ಯೆ:1028/402/3, 19ನೇ ಹೆಚ್ ಮುಖ್ಯರಸ್ತೆ, 1ನೇ ಎನ್. ಬ್ಲಾಕ್, ರಾಜಾಜಿನಗರ, ವಾರ್ಡ್-62 ಈ ಸ್ವತ್ತಿನ ಖಾತೆದಾರರಾದ ಶ್ರೀ.ಗೋಕಲ್‌ದಾಸ್ ಪೈರವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.13,450/-(ವಸತಿ) ಮತ್ತು ರೂ.1,02,400/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಮತ್ತು ಸಹಾಯಕ ಕಂದಾಯ ಅಧಿಕಾರಿ(ನಾಗಪುರ)ರವರ ಪರವಾಗಿ ಕಂದಾಯ ಪರಿವೀಕ್ಷಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಕಂದಾಯ ಇಲಾಖೆಯವರು ಮಾಡಿರುವ ಕಂದಾಯ ಪರಿಷ್ಕರಣೆಯು ನ್ಯಾಯ ಸಮ್ಮತವಾಗಿರುವುದಿಲ್ಲ. ಸದರಿ ಸ್ವತ್ತನ್ನು ಸ್ವಂತಕ್ಕೆ ಉಪಯೋಗಿಸುತ್ತಿದ್ದು ವಾಣಿಜ್ಯ ಉದ್ದೇಶಕ್ಕಾಗಿ ಉಪಯೋಗಿಸುತ್ತಿರುವ ಭಾಗಕ್ಕೆ ನಗರ ಪಾಲಿಕೆಯು ನಿಗಧಿಪಡಿಸಿರುವ ಮಾದರಿಯಲ್ಲಿಯೇ ಕಂದಾಯವನ್ನು ಪಾವತಿಸಿರುತ್ತೇನೆ. ಆದರೆ ಕಂದಾಯ ಅಧಿಕಾರಿಗಳು ಭಾಡಿಗೆಗೆ ನೀಡಿರುವುದಾಗಿ ಭಾವಿಸಿ ಕಂದಾಯ ನಿಗಧಿಪಡಿಸಿರುವುದು ತಪ್ಪಾಗಿರುತ್ತದೆ. ಆದ್ದರಿಂದ ತಾವು ಪರಿಶೀಲಿಸಿ ನನಗೆ ನ್ಯಾಯ ಸಮ್ಮತವಾದ ಕಂದಾಯಾವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ.

08.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದು ಮೇಲ್ಮನವಿದಾರರಿಗೆ ನೋಟೀಸ್ ಜಾರಿಮಾಡಿರುವ ಬಗ್ಗೆ ಸ್ವೀಕೃತಿಯನ್ನು ಒದಗಿಸಿರುವುದಿಲ್ಲ. ಮತ್ತೊಮ್ಮೆ ಮೇಲ್ಮನವಿದಾರರಿಗೆ ಹೊಸದಾಗಿ ನೋಟೀಸ್ ಜಾರಿ ಮಾಡುವುದೆಂದು ನಿರ್ದೇಶಿಸಿ ಪ್ರಕರಣವನ್ನು ಮುಂದೂಡಲಾಯಿತು.

09.ವಿಷಯ:ಸಂಖ್ಯೆ:ಅಸ್ಥಾಸ/(ಆ)/21/2011-12

ಶ್ರೀ.ಎಸ್.ಆರ್.ಬಸವರಾಜು, ರವರು ಮೇಲ್ಕಂಡ ವಿಳಾಸದಲ್ಲಿ ಚಿಕನ್ ಸ್ಟಾಲ್ ತೆರೆಯಲು ಪರವಾನಗಿ ಅರ್ಜಿಯನ್ನು ಸಲ್ಲಿಸಿ ಪರವಾನಗಿ ಶುಲ್ಕವನ್ನು ಸಹ ಪಾವತಿಸಿರುತ್ತೇನೆ. ಅಲ್ಲದೆ ದಿನಾಂಕ:26-06-2011ರಂದು ಉದ್ದಿಮೆಯನ್ನು ತೆರೆದು ವ್ಯಾಪಾರವನ್ನು ಮಾಡುತ್ತಿದ್ದೇನೆ. ಆದರೆ ನೆರೆಹೊರೆಯವರ ಆಕ್ಷೇಪಣೆ ಸಲ್ಲಿಸಿರುತ್ತಾರೆಂದು ತಿಳಿಸಿ ನನ್ನ ಪರವಾನಗಿ ಅರ್ಜಿಯನ್ನು ತಿರಸ್ಕರಿಸಿ ಸಹಾಯಕ ನಿರ್ದೇಶಕರು (ಪಶುಪಾಲನೆ)ರವರು ದಿನಾಂಕ:27-06-2011ರಂದು ನೋಟೀಸ್ ನೀಡಿರುತ್ತಾರೆ. ಈಗಾಗಲೇ ನಾನು ತುಂಬಾ ಹಣವನ್ನು ವ್ಯಾಪಾರಕ್ಕಾಗಿ ವಿನಿಯೋಗಿಸಿರುತ್ತೇನೆ. ಹಾಗೂ ನಾನು ಚಿಕನ್ ಸ್ಟಾಲ್ ತೆರೆಯುತ್ತಿರುವ ಅಕ್ಕ ಪಕ್ಕದಲ್ಲಿ ಯಾವುದೇ ನಿವಾಸದ ಮನೆಗಳಿರುವುದಿಲ್ಲ ಬದಲಾಗಿ ಅಂಗಡಿಗಳಿರುತ್ತವೆ. ಇದರಿಂದಾಗಿ ಯಾರು ಆಕ್ಷೇಪಣೆ ಮಾಡಿರುತ್ತಾರೆಂದು ನನಗೆ ತಿಳಿದಿರುವುದಿಲ್ಲ. ಆದುದರಿಂದ ನಾನು ಈಗಾಗಲೇ ವ್ಯಾಪಾರಕ್ಕಾಗಿ ಹಣವನ್ನು ವಿನಿಯೋಗಿಸಿರುವುದರಿಂದ ನನಗೆ ಪರವಾನಗಿಯನ್ನು ನೀಡುವಂತೆ ಸಂಬಂಧಪಟ್ಟವರಿಗೆ ಆದೇಶಿಸಬೇಕೆಂದು ಹಾಗೂ ಪರವಾನಗಿ ನೀಡುವವರೆವಿಗೂ ನಾನು ವ್ಯಾಪಾರ ನಡೆಸಲು ಅನುಮತಿ ನೀಡುವಂತೆ ಇಲ್ಲದಿದ್ದಲ್ಲಿ ನನಗೆ ಬಹಳ ಲುಕ್ಸಾನ್ ಆಗುವುದೆಂದು ತಿಳಿಸಿ ಸದರಿ ನೋಟಿಸ್ ವಿರುದ್ಧ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-07-2011ರಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಜರಿದ್ದು ಮೇಲ್ಮನವಿದಾರರು ಪ್ರಕರಣವನ್ನು ಹಿಂಪಡೆಯುವುದಾಗಿ ತಿಳಿಸಿರುವ ಮೇರೆಗೆ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸುವುದೆಂದು ತೀರ್ಮಾನಿಸಲಾಯಿತು.

**ನಿರ್ಣಯ:**- ಮೇಲ್ಮನವಿದಾರರು ಪ್ರಕರಣವನ್ನು ಹಿಂಪಡೆದಿರುವುದರಿಂದ ಪ್ರಕರಣವನ್ನು ವಜಾಗೊಳಿಸಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಮತ್ತೊಮ್ಮೆ ನೋಟೀಸ್ ಜಾರಿ ಮಾಡುವುದೆಂದು ಪ್ರಕರಣವನ್ನು ಮುಂದೂಡಲಾಯಿತು.

11. ವಿಷಯ:ಸಂಖ್ಯೆ:ಅಸ್ಥಾಸ/(ಆ)/23/2011-12

ನಂ.632, 12ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-45 ಈ ವಿಳಾಸದಲ್ಲಿ ನಡೆಯುತ್ತಿರುವ ಹಿಟ್ಟಿನಗಿರಣಿ ಉದ್ದಿಮೆ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ನೀಡಿದ ದೂರಿನನ್ವಯ ಉದ್ದಿಮೆಗೆ ನೀಡಿರುವ ಪರವಾನಗಿಯನ್ನು ಹಿಂಪಡೆಯಲಾಗಿತ್ತು. ದಿನಾಂಕ:01-04-2011ರಂದು ಅಪೀಲು ಸ್ಥಾಯಿ ಸಮಿತಿಯ ಸಭೆಯ ನಡುವಳಿಯಲ್ಲಿ ಸದರಿ ಹಿಟ್ಟಿನ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಉದ್ದಿಮೆಗೆ ರದ್ದುಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ವಿಷಯದ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ಮತ್ತೊಮ್ಮೆ ಪತ್ರ ಬರೆದು ನಮ್ಮ ಹೇಳಿಕೆಯನ್ನು ಪಡೆಯದೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ನಮಗೆ ಹೇಳಿಕೆ ನೀಡಲು ಅವಕಾಶ ನೀಡುವಂತೆ ಕೋರಿಕೊಂಡಿರುವ ಮೇರೆಗೆ ಸದರಿಯವರ ದೂರಿನ ಜೊತೆಗೆ ಶ್ರೀ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು ಇವರಿಗೆ ವೈದ್ಯರು ಸಹ ದೃಢೀಕರಣ ಪತ್ರ ನೀಡಿ ಮೆಣಸಿನ ಪುಡಿ ಇನ್ನಿತರೆ ಗಾಟು ಮತ್ತು ದೂಳು ಬರುವ ಸ್ಥಳದಲ್ಲಿ ಕಾರ್ಯನಿರ್ವಹಿಸಬಾರದೆಂದು ತಿಳಿಸಿರುವುದನ್ನು ಮನಗಂಡು ಉದ್ದಿಮೆದಾರರನ್ನು ಹಾಗೂ ದೂರುದಾರರನ್ನು ಪುನಃ ಕರೆಸಿ ವಿಚಾರಣೆ ನಡೆಸಬಹುದೆಂದು ಮಂಡಿಸಿರುವ ಆಯುಕ್ತರ ದಿನಾಂಕ:02-08-2011ರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಶ್ರೀ.ಗಣೇಶ್ ಹಾಜರಿದ್ದು ತಮ್ಮ ವಕೀಲರು ಇಲ್ಲದಿರುವುದರಿಂದ ಕಾಲಾವಕಾಶ ಕೋರಿಕೊಂಡಿರುತ್ತಾರೆ. ಆಕ್ಷೇಪಣೆದಾರರಾದ ಶ್ರೀ.ವಿನೋದ ವಿ. ಮೂರ್ತಿ, ಶ್ರೀಮತಿ.ನಿರ್ಮಲ, ಶ್ರೀಮತಿ.ಇಂದಿರಾ ದೇವಿ ಮತ್ತು ಶ್ರೀಮತಿ.ವಿಜಯರಾಣಿ ಇವರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು. ಶ್ರೀ.ಗಣೇಶ್‌ರವರು ಮೊದಲಿಗೆ ಸಹಿ ಮಾಡಲು ನಿರಾಕರಿಸಿದ್ದು ನಂತರ ಸಹಿ ಮಾಡಿರುತ್ತಾರೆ.

ಸಂಬಂಧಪಟ್ಟ ಅಧಿಕಾರಿಗಳಾದ ಉಪ ಆರೋಗ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿಯವರು ಹಾಜರಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಯಾವುದೇ ಕ್ರಮ ಜರುಗಿಸಲು ಸಾಧ್ಯವಾಗಿರುವುದಿಲ್ಲವಾದ್ದರಿಂದ ಆಯುಕ್ತರ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ತಮ್ಮ ಹೇಳಿಕೆಗಳನ್ನು ಸಲ್ಲಿಸುವಂತೆ ನೋಟೀಸ್ ಜಾರಿ ಮಾಡುವುದೆಂದು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.

12. ವಿಷಯ:ಸಂಖ್ಯೆ:ಅಸ್ಥಾಸ/(ತೆ)/24/2011-12

ಶ್ರೀ.ವಿ.ನಾರಾಯಣಗೌಡ ಇವರು ವಾರ್ಡ್-123, ನಂ.826/ಎ ನಿವೇಶನದ ಪಕ್ಕದ 5ನೇ ಮುಖ್ಯರಸ್ತೆ ಮತ್ತು ಸರ್ವೀಸ್ ರಸ್ತೆ ಸಂದಿಸುವ ಸ್ಥಳದಲ್ಲಿ 103.6 ಅಡಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.700/-ಗಳ ಗುತ್ತಿಗೆ ಹಣ ಪಾವತಿಸಿ ಅಂಗಡಿಯನ್ನು ನಡೆಸುತ್ತಿದ್ದು, ಸದರಿ ಅಂಗಡಿಗೆ ದಿನಾಂಕ:06-12-2005ರಿಂದ ಜಾರಿಗೆ ಬರುವಂತೆ ಗುತ್ತಿಗೆ ಹಣವನ್ನು ರೂ.4,230/-ಗಳಿಗೆ ಹೆಚ್ಚಿಸಿ ದಿನಾಂಕ:26-05-2011ರಂದು ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಸಂಬಂಧಪಟ್ಟ ಅಧಿಕಾರಿಗಳು ಹಾಜರಿರುತ್ತಾರೆ. ಮೇಲ್ಮನವಿದಾರರು ತಮ್ಮ ಅಂಗಡಿಗೆ ಸಹಾಯಕ ಕಂದಾಯ ಅಧಿಕಾರಿಗಳು ನಿಗಧಿಪಡಿಸಿರುವ ಬಾಡಿಗೆಯು ದುಭಾರಿಯಾಗಿದ್ದು ಕಡಿಮೆ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಸಹಾಯಕ ಕಂದಾಯ ಅಧಿಕಾರಿಗಳು ಈಗ ನಿಗಧಿಪಡಿಸಿರುವ ಬಾಡಿಗೆಯು ನ್ಯಾಯಸಮ್ಮತವಾಗಿರುತ್ತದೆಂದು ತಿಳಿಸಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ.

13.ವಿಷಯ:ಸಂಖ್ಯೆ:ಅಸ್ಥಾಸ/(ತೆ)/25/2011-12

ರಾಜ್ಯಾಧ್ಯಕ್ಷರು, ದಲಿತ ಸಂಘರ್ಷ ಸಮಿತಿ (ರಿ), ನಂ.19, ಎ.ಕೆ.(ನ್ಯೂ) ಕಾಲೋನಿ, ಕಾಕ್ಸ್ ಟೌನ್, ಜೀವನಹಳ್ಳಿ, ಬೆಂಗಳೂರು-05 ಇವರಿಗೆ ಸುಭಾಶ್‌ನಗರ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆ ಸಂಖ್ಯೆ:01ನ್ನು ಹಂಚಿಕೆ ಮಾಡಿದ್ದು, ಸದರಿ ಮಳಿಗೆಗೆ ಚದರಡಿ ಒಂದಕ್ಕೆ ರೂ.15/-ಗಳಂತೆ ನಿಗಧಿಪಡಿಸಿ 100 ಚದರಡಿಗೆ ರೂ.1500/-ಗಳಂತೆ ನಿಗಧಿಪಡಿಸಿ ದಿನಾಂಕ:21-03-2011ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹಕ್ಕೆ ಉತ್ತರವಾಗಿ ಸದರಿ ಸಂಸ್ಥೆಯವರು ಮಾನ್ಯ ಮುಖ್ಯ ಮಂತ್ರಿರವರಿಗೆ ಬಾಡಿಗೆಯನ್ನು ಕಡಿಮೆ ಮಾಡಲು ಕೋರಿದ್ದು, ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ದಿನಾಂಕ:07-04-2011ರಂದು ಪತ್ರ ಬರೆದು ಸದರಿ ಸಂಸ್ಥೆಗೆ ಬಾಡಿಗೆ ಕಡಿಮೆ ನಿಗಧಿಪಡಿಸಿಕೊಡುವಂತೆ ತಿಳಿಸಿರುವ ಮೇರೆಗೆ ತೀರ್ಮಾನಕ್ಕಾಗಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-08-2011ರ ಟಿಪ್ಪಣಿ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಸಂಬಂಧಪಟ್ಟ ಅಧಿಕಾರಿಗಳು ಮತ್ತು ಮೇಲ್ಮನವಿದಾರರು ಹಾಜರಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಮತ್ತೊಮ್ಮೆ ನೋಟೀಸ್ ಜಾರಿ ಮಾಡುವುದೆಂದು ಪ್ರಕರಣವನ್ನು ಮುಂದೂಡಲಾಯಿತು.

14.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/26/2011-12

ವೈಟ್‌ಫೀಲ್ಡ್ ಗ್ರಾಮದ ಸರ್ವೆ ನಂ.64/1, 65/2ರ ಇಸಿಸಿ ರಸ್ತೆಯಲ್ಲಿ ಡೀನ್ಸ್ ಎಜುಕೇಷನ್ ಟ್ರಸ್ಟ್‌ನವರು ಶಾಲಾ ಕಟ್ಟಡ ನಿರ್ಮಿಸುವುದರ ಸಲುವಾಗಿ ನಕ್ಷೆ ಮಂಜೂರಾತಿ ಕೋರಿದ್ದು, ವಲಯ ನಿಯಮಾವಳಿ ಅನುಸಾರ 2015ರ ಪ್ರಕಾರ ರಸ್ತೆಯಗಲ ನಿಗಧಿಪಡಿಸಿರುವದಕ್ಕಿಂತ ಕಡಿಮೆ ಇರುವುದರಿಂದ ಶಾಲಾ ಕಟ್ಟಡ ನಕ್ಷೆ ಮಂಜೂರಾತಿ ಅರ್ಜಿಯನ್ನು ಪರಿಗಣಿಸಲು ಬರುವುದಿಲ್ಲವೆಂದು ಸಹಾಯಕ ನಿರ್ದೇಶಕರು ನಗರ ಯೋಜನೆ, ಮಹಾದೇವಪುರ ರವರು ನೀಡಿರುವ ದಿನಾಂಕ:19-02-2011ರಂದು ನೀಡಿರುವ ಹಿಂಬರಹದ ವಿರುದ್ಧ ಸದರಿ ಶಾಲೆಯ ಮಾಲೀಕರಾದ ಶ್ರೀ.ಪರಾಜ್ ಎಜುಕೇಷನ್ ಟ್ರಸ್ಟ್‌ರವರು ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ವಕೀಲರು ಹಾಗೂ ಸಂಬಂಧಪಟ್ಟ ಸಹಾಯಕ ನಿರ್ದೇಶಕರು, ನಗರ ಯೋಜನೆ (ಮಹದೇವಪುರ)ರವರು ಹಾಜರಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:23-09-2011ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಉಪ ಕಾನೂನು ಅಧಿಕಾರಿ |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಆರೋಗ್ಯಾಧಿಕಾರಿಗಳು (ಪೂರ್ವ/ದಕ್ಷಿಣ) |
| 04 | ಬಿ.ಎಸ್.ಆನಂದ | ಸದಸ್ಯರು | ಸ.ಕಂ.ಅ.(ಚಾಮರಾಜಪೇಟೆ/ಮಲ್ಲೇಶ್ವರಂ/ಹೆಬ್ಬಾಳ) |
| 05 | ಎಂ.ವಸಂತಕುಮಾರಿ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪೂರ್ವ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2011-12

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ವಕೀಲರು ಹಾಜರಿದ್ದು 1995ರಿಂದಲೇ ಅಸೆಸ್‌ಮೆಂಟ್ ಮಾಡಲಾಗಿರುತ್ತದೆ. ಆದರೆ 2000ರಲ್ಲಿ ಕಟ್ಟಡವನ್ನು ನಿರ್ಮಾಣ ಮಾಡಿರುತ್ತೇವೆ. ಆದುದರಿಂದ ಪ್ರತಿವಾದಿಗಳು 2000ರಿಂದ ಅಸೆಸ್‌ಮೆಂಟ್ ಮಾಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಶ್ರೀ.ಪ್ರಕಾಶ್, ಕಂದಾಯ ಪರಿವೀಕ್ಷಕರು ಮೇಲ್ಮನವಿದಾರರು ಕಟ್ಟಡವನ್ನು ಬಾಡಿಗೆಗೆ ನೀಡಿರುತ್ತಾರೆ ಅಲ್ಲದೆ ಎಸ್.ಎ.ಎಸ್.ನಲ್ಲೂ ಸಹ ತಪ್ಪಾಗಿ ಕಂದಾಯ ನಿಗಧಿಪಡಿಸಿಕೊಂಡಿರುತ್ತಾರೆ. ಈಗಾಗಲೇ ನಾವು ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದರಿಂದ ಸದರಿ ಕಂದಾಯವನ್ನೇ ಸ್ಥಿರೀಕರಿಸುವಂತೆ ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಪ್ರಕರಣವನ್ನು ಮುಂದೂಡಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ ತಮ್ಮ ಪರವಾಗಿ ವಕಾಲತ್ತು ಸಲ್ಲಿಸಲು ಶ್ರೀ.ಕೃಷ್ಣಪ್ಪ ವಕೀಲರಿಗೆ ಅಧಿಕಾರ ನೀಡಿರುತ್ತಾರೆ. ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರು ಕಂದಾಯ ಪರಿವೀಕ್ಷಕರಾದ ಶ್ರೀ.ಸುರೇಶ್‌ರವರೊಂದಿಗೆ ಹಾಜರಾಗಿದ್ದು ತಾವು ಹೊಸದಾಗಿ ಕರ್ತವ್ಯಕ್ಕೆ ಹಾಜರಾಗಿರುವುದರಿಂದ ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/13/2011-12

ಶ್ರೀಮತಿ.ಪಿ.ಶಕುಂತಲ, ಸಂಖ್ಯೆ:13, ವೀರಭದ್ರನಾಯಕ ಲೇನ್. ಕಾಟನ್ ಪೇಟೆ ಈ ಸ್ವತ್ತಿನ ಕಂದಾಯವನ್ನು ಪರಿಷ್ಕರಿಸಿ ವಸತಿ ರೂ.47600/- ಮತ್ತು ವಸತಿಯೇತರ ರೂ.57120/- ವಾರ್ಷಿಕ ಮೌಲ್ಯಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಿರುವುದನ್ನು ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವುದರ ವಿರುದ್ಧ, ಸ್ವತ್ತಿನ ಮಾಲೀಕರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-05-2011ರ ಟಿಪ್ಪಣಿ.

ನಿರ್ಣಯ:-ದಿನಾಂಕ:17-09-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸ್ವತ್ತಿನ ಮಾಲೀಕರು ತಿಳಿಸಿರುವಂತೆ ನೆಲಮಹಡಿಯಲ್ಲಿ ಯಾವುದೇ ತಾಂತ್ರಿಕ ಉದ್ದೇಶಕ್ಕಾಗಿ ಅಂಗಡಿ ನಡೆಸುತ್ತಿರುವುದು ಕಂಡು ಬರುತ್ತಿಲ್ಲ. ತಮ್ಮ ಹೆಸರಿನಲ್ಲಿ ಟ್ರೇಡ್ ಪರವಾನಗಿಯನ್ನು ಹೊಂದಿದ್ದರೂ ಸಹ ವಾಣಿಜ್ಯ ಉದ್ದೇಶಕ್ಕಾಗಿ ಅಂಗಡಿಯನ್ನು ಭಾಡಿಗೆಗೆ ನೀಡಿರುವುದು ಕಂಡು ಬರುತ್ತದೆ. ಹಾಗೂ ಬಾಡಿಗೆದಾರರು ತಾವು 2 ವರ್ಷದಿಂದ ಬಾಡಿಗೆಗೆ ಇರುವುದಾಗಿ ಹಾಗೂ

ಈ ಮೊದಲು ಸುಮಾರು 10 ವರ್ಷಗಳಿಂದ ಬೇರೆಯವರು ಬಾಡಿಗೆಗೆ ಅಂಗಡಿ ನಡೆಸುತ್ತಿದ್ದರೆಂದು ಹಾಲಿ ಬಾಡಿಗೆದಾರರು ತಿಳಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಸಮಿತಿಯು ಮನಗಂಡು ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಪ್ರಥಮ ಅಪೀಲು ಅಧಿಕಾರಿಗಳು ಪರಿಷ್ಕರಿಸಿರುವುದನ್ನು ಸ್ಥಿರೀಕರಿಸುವುದೆಂದು ತೀರ್ಮಾನಿಸಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/18/2011-12

ಸಂಖ್ಯೆ:1028/402/3, 19ನೇ ಹೆಚ್ ಮುಖ್ಯರಸ್ತೆ, 1ನೇ ಎನ್. ಬ್ಲಾಕ್, ರಾಜಾಜಿನಗರ, ವಾರ್ಡ್-62 ಈ ಸ್ವತ್ತಿನ ಖಾತೆದಾರರಾದ ಶ್ರೀ.ಗೋಕಲ್‌ದಾಸ್ ಪೈರವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.13,450/-(ವಸತಿ) ಮತ್ತು ರೂ.1,02,400/-(ವಸತಿಯೇತರ)ಗಳಿಗೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ಟಿಪ್ಪಣಿ.

**ನಿರ್ಣಯ:-** ದಿನಾಂಕ:17-09-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಸ್ವತ್ತಿನ ಮಾಲೀಕರು 2000-2001ರವರೆಗೆ ನೆಲ ಅಂತಸ್ತನ್ನು ವಸತಿಯೇತರಕ್ಕೆ ಬಾಡಿಗೆಗೆ ನೀಡಿದ್ದು ಆ ಸಮಯದಲ್ಲಿ ಬಾಡಿಗೆ ವಸತಿಯೇತರಕ್ಕೆ ಕಂದಾಯವನ್ನು ನಿಗಧಿಪಡಿಸಿಕೊಂಡಿರುವುದು ಸ್ಪಷ್ಟವಾಗಿರುತ್ತದೆ. ತದ ನಂತರ 2002ರಿಂದ ಸ್ವಂತಕ್ಕಾಗಿ (ವಸತಿಯೇತರ) ಉಪಯೋಗಿಸುತ್ತಿದ್ದು ಪ್ರಥಮ ಅಪೀಲು ಅಧಿಕಾರಿಗಳು ಈ ವಿಷಯವನ್ನು ಗಣನೆಗೆ ತೆಗೆದುಕೊಳ್ಳದೆ ವಸತಿಯೇತರ 1800 ಚದರ ಅಡಿಗಳ ಭಾಗಕ್ಕೆ ಬಾಡಿಗೆ ರೂ.8/-ರಂತೆ ನಿಗಧಿಪಡಿಸಿರುವುದು ಸಮಂಜಸವಾಗಿ ಕಂಡುಬರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ 1800 ಚದರ ಅಡಿಗಳ ವಸತಿಯೇತರ ಭಾಗಕ್ಕೆ ಸ್ವಂತ ಉಪಯೋಗಕ್ಕಾಗಿ ರೂ.4/-ರಂತೆ ನಿಗಧಿಪಡಿಸಿ ದಿನಾಂಕ:01-04-2006ರಿಂದ ಜಾರಿಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

05.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/-ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ಮಗನ ಮುಖಾಂತರ ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ಆ)/23/2011-12

ನಂ.632, 12ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-45 ಈ ವಿಳಾಸದಲ್ಲಿ ನಡೆಯುತ್ತಿರುವ ಹಿಟ್ಟಿನಗಿರಣಿ ಉದ್ದಿಮೆ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ನೀಡಿದ ದೂರಿನನ್ವಯ ಉದ್ದಿಮೆಗೆ ನೀಡಿರುವ ಪರವಾನಗಿಯನ್ನು ಹಿಂಪಡೆಯಲಾಗಿತ್ತು. ದಿನಾಂಕ:01-04-2011ರಂದು ಅಪೀಲು ಸ್ಥಾಯಿ ಸಮಿತಿಯ ಸಭೆಯ ನಡುವಳಿಯಲ್ಲಿ ಸದರಿ ಹಿಟ್ಟಿನ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಉದ್ದಿಮೆಗೆ ರದ್ದುಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ವಿಷಯದ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ಮತ್ತೊಮ್ಮೆ ಪತ್ರ ಬರೆದು ನಮ್ಮ ಹೇಳಿಕೆಯನ್ನು ಪಡೆಯದೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ನಮಗೆ ಹೇಳಿಕೆ ನೀಡಲು ಅವಕಾಶ ನೀಡುವಂತೆ ಕೋರಿಕೊಂಡಿರುವ ಮೇರೆಗೆ ಸದರಿಯವರ ದೂರಿನ ಜೊತೆಗೆ ಶ್ರೀ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು ಇವರಿಗೆ ವೈದ್ಯರು ಸಹ ದೃಢೀಕರಣ ಪತ್ರ ನೀಡಿ ಮೆಣಸಿನ ಪುಡಿ ಇನ್ನಿತರೆ ಗಾಟು ಮತ್ತು ದೂಳು ಬರುವ ಸ್ಥಳದಲ್ಲಿ ಕಾರ್ಯನಿರ್ವಹಿಸಬಾರದೆಂದು ತಿಳಿಸಿರುವುದನ್ನು ಮನಗಂಡು ಉದ್ದಿಮೆದಾರರನ್ನು

ಹಾಗೂ ದೂರುದಾರರನ್ನು ಪುನಃ ಕರೆಸಿ ವಿಚಾರಣೆ ನಡೆಸಬಹುದೆಂದು ಮಂಡಿಸಿರುವ ಆಯುಕ್ತರ ದಿನಾಂಕ:02-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಶ್ರೀ.ಗಣೇಶ್ ಹಾಜರಿದ್ದು ತಮ್ಮ ಪ್ರತಿನಿಧಿಗಳು ಹಾಜರಾಗಿಲ್ಲದಿರುವುದರಿಂದ ಕಾಲಾವಕಾಶ ಕೋರಿಕೊಂಡಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

08.ವಿಷಯ:ಸಂಖ್ಯೆ:ಅಸ್ಥಾಸ/(ತೆ)/24/2011-12

ಶ್ರೀ.ವಿ.ನಾರಾಯಣಗೌಡ ಇವರು ವಾರ್ಡ್-123, ನಂ.826/ಎ ನಿವೇಶನದ ಪಕ್ಕದ 5ನೇ ಮುಖ್ಯರಸ್ತೆ ಮತ್ತು ಸರ್ವೀಸ್ ರಸ್ತೆ ಸಂದಿಸುವ ಸ್ಥಳದಲ್ಲಿ 103.6 ಅಡಿ ಜಾಗವನ್ನು ಗುತ್ತಿಗೆ ಆಧಾರದ ಮೇಲೆ ಮಾಹೆಯಾನ ರೂ.700/-ಗಳ ಗುತ್ತಿಗೆ ಹಣ ಪಾವತಿಸಿ ಅಂಗಡಿಯನ್ನು ನಡೆಸುತ್ತಿದ್ದು, ಸದರಿ ಅಂಗಡಿಗೆ ದಿನಾಂಕ:06-12-2005ರಿಂದ ಜಾರಿಗೆ ಬರುವಂತೆ ಗುತ್ತಿಗೆ ಹಣವನ್ನು ರೂ.4,230/-ಗಳಿಗೆ ಹೆಚ್ಚಿಸಿ ದಿನಾಂಕ:26-05-2011ರಂದು ಸಹಾಯಕ ಕಂದಾಯ ಅಧಿಕಾರಿ (ವಿಜಯನಗರ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

**ನಿರ್ಣಯ**:- ದಿನಾಂಕ:17-09-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು ಹಾಗೂ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಸದರಿ ಪ್ರಕರಣದಲ್ಲಿ ಗುತ್ತಿಗೆ ಅವಧಿಯು ದಿನಾಂಕ:06-12-2005ಕ್ಕೆ ಮುಗಿದಿರುವುದು ಸ್ಪಷ್ಟವಾಗಿರುತ್ತದೆ. ಮೇಲ್ಮನವಿದಾರರು ದಿನಾಂಕ:06-12-2005ಕ್ಕೆ ಅರ್ಜಿ ನೀಡಿ ಮೂರು ವರ್ಷದ ಅವಧಿಗೆ ಮರು ನವೀಕರಿಸಿಕೊಡಲು ಕೋರಿಕೊಂಡಿದ್ದರೂ ಸಹ ಯಾವುದೇ ಕ್ರಮ ಕೈಗೊಳ್ಳದಿರುವುದು ಕಂಡು ಬರುತ್ತದೆ. ತದ ನಂತರ ದಿನಾಂಕ:26-05-2011ರಂದು ಏಕಾಏಕಿ ಹಿಂಬರಹವನ್ನು ನೀಡಿ ದಿನಾಂಕ:06-12-2005ರಿಂದ ಮೂರು ವರ್ಷಗಳಿಗೆ ಮರು ನವೀಕರಣ ಮಾಡಿ ವಾರ್ಷಿಕ ಗುತ್ತಿಗೆ ಹಣ ರೂ.50,764-00ಗಳಾಗುತ್ತದೆಂದು ತಿಳಿಸಿ ದಿನಾಂಕ:06-12-2005ರಿಂದ ಗುತ್ತಿಗೆ ಹಣವನ್ನು ಪಾವತಿಸಿ ಎಂದು ದಿನಾಂಕ:26-05-2011ರ ಹಿಂಬರಹದಲ್ಲಿ ತಿಳಿಸಿರುವುದು ಸ್ವಭಾವಸಿದ್ಧನ್ಯಾಯಕ್ಕನುಗುಣವಾಗಿರುವುದಿಲ್ಲ. ಹಾಗೂ ಒಂದು ವೇಳೆ ಗುತ್ತಿಗೆ ಹಣವನ್ನು ಹೆಚ್ಚಿಸಬೇಕಾದಲ್ಲಿ ಮುಂದಿನ ಗುತ್ತಿಗೆ ಅವಧಿಯು ಪ್ರಾರಂಭವಾಗುವ ಮುನ್ನವೇ ಅಥವಾ ಗುತ್ತಿಗೆ ಅವಧಿಯು ಮುಗಿದ ಒಂದು ತಿಂಗಳೊಳಗಾಗಿ ಗುತ್ತಿಗೆ ಕರಾರನ್ನು ಮಾಡಿಕೊಳ್ಳಬೇಕಾಗುತ್ತದೆ. ಹಾಗೆ ಮಾಡದೆ 2-3 ವರ್ಷಗಳು ಕಳೆದ ನಂತರ ಗುತ್ತಿಗೆ ಕರಾರು ಮಾಡಿಕೊಂಡು ಗುತ್ತಿಗೆ ಹಣವನ್ನು ನಿಗಧಿಪಡಿಸಿ ಹಿಂದಿನ ವರ್ಷಗಳಿಂದ ಬಾಕಿ ಗುತ್ತಿಗೆ ಹಣವನ್ನು ಪಾವತಿಸುವಂತೆ ಮೇಲ್ಮನವಿದಾರರಿಗೆ ತಿಳಿಸಿದಾಗ ಅವರುಗಳು ನ್ಯಾಯಾಲಯದ ಮೊರೆ ಹೋಗಿ ಹಾಲಿ ಪಾವತಿಸುತ್ತಿದ್ದ ಗುತ್ತಿಗೆ ಹಣಕ್ಕೂ ತಡೆಯಾಜ್ಞೆ ತಂದಿರುವುದನ್ನು ಸಾಕಷ್ಟು ಪ್ರಕರಣಗಳಲ್ಲಿ ಕಾಣಬಹುದಾಗಿರುತ್ತದೆ. ಈ ಪ್ರಕರಣದಲ್ಲಿ ಗುತ್ತಿಗೆ ಅವಧಿ ಮುಗಿದ 6 ವರ್ಷಗಳ ನಂತರ ಗುತ್ತಿಗೆ ಹಣವನ್ನು ನಿಗಧಿಪಡಿಸಿರುವುದು ನ್ಯಾಯ ಸಮ್ಮತವಾಗಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ಹಾಲಿ ಪಾವತಿಸುತ್ತಿರುವ ಮಾಸಿಕ ರೂ.700/- ಗುತ್ತಿಗೆ ಹಣವನ್ನೇ ಪಾವತಿಸಿಕೊಂಡು ಇನ್ನು ಮುಂದೆ ಗುತ್ತಿಗೆ ಅವಧಿ ಮುಗಿಯುವ ತಿಂಗಳಲ್ಲೇ ಕಾನೂನಿನಂತೆ ಗುತ್ತಿಗೆ ಹಣವನ್ನು ನಿಗಧಿಪಡಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

09.ವಿಷಯ:ಸಂಖ್ಯೆ:ಅಸ್ಥಾಸ/(ತೆ)/25/2011-12

ರಾಜ್ಯಾಧ್ಯಕ್ಷರು, ದಲಿತ ಸಂಘರ್ಷ ಸಮಿತಿ (ರಿ), ನಂ.19, ಎ.ಕೆ.(ನ್ಯೂ) ಕಾಲೋನಿ, ಕಾಕ್ಸ್ ಟೌನ್, ಜೀವನಹಳ್ಳಿ, ಬೆಂಗಳೂರು-05 ಇವರಿಗೆ ಸುಭಾಶ್‌ನಗರ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆ ಸಂಖ್ಯೆ:01ನ್ನು ಹಂಚಿಕೆ ಮಾಡಿದ್ದು, ಸದರಿ ಮಳಿಗೆಗೆ ಚದರಡಿ ಒಂದಕ್ಕೆ ರೂ.15/-ಗಳಂತೆ ನಿಗಧಿಪಡಿಸಿ 100 ಚದರಡಿಗೆ ರೂ.1500/-ಗಳಂತೆ ನಿಗಧಿಪಡಿಸಿ ದಿನಾಂಕ:21-03-2011ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹಕ್ಕೆ ಉತ್ತರವಾಗಿ ಸದರಿ ಸಂಸ್ಥೆಯವರು ಮಾನ್ಯ ಮುಖ್ಯ ಮಂತ್ರಿರವರಿಗೆ ಬಾಡಿಗೆಯನ್ನು ಕಡಿಮೆ ಮಾಡಲು ಕೋರಿದ್ದು, ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ದಿನಾಂಕ:07-04-2011ರಂದು ಪತ್ರ ಬರೆದು ಸದರಿ ಸಂಸ್ಥೆಗೆ ಬಾಡಿಗೆ ಕಡಿಮೆ ನಿಗಧಿಪಡಿಸಿಕೊಡುವಂತೆ ತಿಳಿಸಿರುವ ಮೇರೆಗೆ ತೀರ್ಮಾನಕ್ಕಾಗಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರಾದ ಶ್ರೀ.ಚಂದ್ರಯ್ಯ, ಅಧ್ಯಕ್ಷರು ಹಾಜರಿರುತ್ತಾರೆ. ಸಹಾಯಕ ಕಂದಾಯ ಅಧಿಕಾರಿಯವರು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಬಾಡಿಗೆಯನ್ನು ಕಡಿಮೆ ಮಾಡಿಕೊಡುವಂತೆ ಕೋರಿಕೊಂಡಿರುತ್ತಾರೆ. ಶ್ರೀ.ಪ್ರದೀಪ್ ಕುಮಾರ್, ಕಂದಾಯ ಪರಿವೀಕ್ಷಕರು ತಡವಾಗಿ ಹಾಜರಿದ್ದು ಈಗ ನಿಗಧಿಪಡಿಸಿರುವ ಬಾಡಿಗೆಯನ್ನು ಕಾನೂನಿನಂತೆ ನಿಗಧಿಪಡಿಸಿದ್ದು, ಅದನ್ನೆ ಮುಂದುವರೆಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಮೇಲ್ಮನವಿದಾರರು ತಮ್ಮ ಸೋಸೈಟಿಯು ದುರ್ಬಲವರ್ಗದವರಿಗಾಗಿ ಸೇವೆ ಸಲ್ಲಿಸುತ್ತಿದ್ದು ಕಂದಾಯವನ್ನು ಕಡಿಮೆ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮತ್ತು ಆದೇಶಕ್ಕಾಗಿ ಕಾಯ್ದಿರಿಸಿದೆ.

10.ವಿಷಯ:ಸಂಖ್ಯೆ:ಅಸ್ಥಾಸ/(ಆ)/26/2011-12

ಶ್ರೀ.ವಿ.ಸಂಜಯ್ಯ ನಂ.180, 9ನೇ ಕ್ರಾಸ್, ಇಂದಿರಾನಗರ, 1ನೇ ಹಂತ, ಬೆಂಗಳೂರು ಇಲ್ಲಿ ನಡೆಯುತ್ತಿರುವ ಅಕ್ಷಯ ಸಾಗರ್ ಫಾಸ್ಟ್ ಫುಡ್ ಹೋಟೆಲ್ ನಡೆಸುತ್ತಿದ್ದು, ಸದರಿ ಹೋಟೆಲ್ ಪರವಾನಗಿಯನ್ನು 2007ರಿಂದ ನವೀಕರಿಸಿಕೊಟ್ಟಿರುವುದಿಲ್ಲವೆಂದು ಹಾಗೂ ಪ್ರತಿ ವರ್ಷ ನನ್ನಿಂದ ಪರವಾನಗಿ ಶುಲ್ಕವನ್ನು ಪಾವತಿಸಿಕೊಂಡಿರುತ್ತಾರೆಂದು ತಿಳಿಸಿ

ದಿನಾಂಕ:19-03-20008ರಂದು ಆರೋಗ್ಯ ವೈದ್ಯಾಧಿಕಾರಿ (ಭಾರತಿ ನಗರ)ವಲಯರವರು ನೀಡಿರುವ ಹಿಂಬರಹದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ಪ್ರಸ್ತಾವನೆ:**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಹಲವಾರು ವರ್ಷಗಳಿಂದ ರೆಸ್ಟೋರೆಂಟ್ ನಡೆಸುತ್ತಿದ್ದು ಪರವಾನಗಿ ಪಡೆದಿರುತ್ತೇನೆ. ಆದರೆ ಸುಮಾರು 2-3 ವರ್ಷಗಳಿಂದ ಪರವಾನಗಿ ಶುಲ್ಕವನ್ನು ಪ್ರತಿವಾದಿಗಳು ಪಾವತಿಸಿಕೊಳ್ಳುತ್ತಿದ್ದು ಪರವಾನಗಿಯನ್ನು ನವೀಕರಿಸಿಕೊಡುತ್ತಿಲ್ಲವಾದ್ದರಿಂದ ಪರವಾನಗಿಯನ್ನು ನವೀಕರಿಸಿಕೊಡುವಂತೆ ಸಂಬಂಧಪಟ್ಟವರಿಗೆ ಆದೇಶಿಸಿಬೇಕೆಂದು ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಉಪ ಆರೋಗ್ಯಾಧಿಕಾರಿಯವರು ಹಿಂದೆ ಒಬ್ಬರು ಆಕ್ಷೇಪಣೆ ವ್ಯಕ್ತಪಡಿಸಿದ್ದರು. ಆದರೆ ಆ ವ್ಯಕ್ತಿಯು ಈಗ ಇರುವುದಿಲ್ಲವಾದ್ದರಿಂದ ಹಾಗೂ ಅವರ ಆಕ್ಷೇಪಣೆ ಏನು ಎಂಬುದು ಸಹ ಸ್ಪಷ್ಟವಾಗಿರುವುದಿಲ್ಲವಾದ್ದರಿಂದ ಮೇಲ್ಮನವಿದಾರರ ಮನವಿಯನ್ನು ಪುರಸ್ಕರಿಸಬಹುದೆಂದು ತಿಳಿಸಿರುತ್ತಾರೆ.

**ನಿರ್ಣಯ**:- ಮೇಲ್ಮನವಿದಾರರ ಮತ್ತು ಪ್ರತಿವಾದಿಗಳ ಹೇಳಿಕೆಯನ್ನು ಆಲಿಸಿದ ನಂತರ ಪ್ರತಿವಾದಿಗಳ ಆಕ್ಷೇಪಣೆ ಏನು ಇಲ್ಲದಿರುವುದರಿಂದ ಹಾಗೂ ಮೇಲ್ಮನವಿದಾರರು ಕಾಲಕಾಲಕ್ಕೆ ಪಾವತಿಸಬೇಕಾದ ಪರವಾನಗಿ ಶುಲ್ಕವನ್ನು ನಗರ ಪಾಲಿಕೆಗೆ ಪಾವತಿಸಿರುವುದನ್ನು ಮನಗಂಡು ನಂ.180, 9ನೇ ಕ್ರಾಸ್, ಇಂದಿರಾನಗರ, 1ನೇ ಹಂತ, ಬೆಂಗಳೂರು ಇಲ್ಲಿ ನಡೆಯುತ್ತಿರುವ ಅಕ್ಷಯ್ ಸಾಗರ್ ಪಾಸ್ಟ್ ಪುಡ್ ಹೋಟೆಲ್‌ಗೆ ಪರವಾನಗಿಯನ್ನು ನವೀಕರಿಸಿಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-10-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಉಪ ಆಯುಕ್ತರು (ಮಾರುಕಟ್ಟೆ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 04 | ಬಿ.ಎಸ್.ಆನಂದ | ಸದಸ್ಯರು | ಆರೋಗ್ಯಾಧಿಕಾರಿಗಳು (ದಕ್ಷಿಣ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸ.ಕಂ.ಅ.((ಮಾರುಕಟ್ಟೆ/ದಕ್ಷಿಣ/ಪೂರ್ವ)/ಮಲ್ಲೇಶ್ವರಂ) |
| 06 | ಬಿ.ಗೋವಿಂದರಾಜು | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪೂರ್ವ) |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಜಿ.ಎನ್.ಆರ್.ಬಾಬು | ಸದಸ್ಯರು | |
| 09 | ಮುನಿರತ್ನಮ್ಮ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಮುನಿಸಂಜೀವಯ್ಯ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಆ)/40/2010-11

ಪ್ರೇಮ ಕೃಷ್ಣಮೂರ್ತಿ, ನಂ.714, 3ನೇ ಹಂತ, 3ನೇ ಬ್ಲಾಕ್, 8ನೇ ಮುಖ್ಯರಸ್ತೆ, ಬಸವೇಶ್ವರ ನಗರ ಬೆಂಗಳೂರು-79 ಇವರು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಂ.28/ಎ, 1ನೇ ಮುಖ್ಯರಸ್ತೆ, 3ನೇ ಬ್ಲಾಕ್, 3ನೇ ಹಂತ ಬಸವೇಶ್ವರನಗರ, ಬೆಂಗಳೂರು-79 ಈ ಸ್ವತ್ತಿನಲ್ಲಿ ನಡೆಯುತ್ತಿರುವ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ಗೆ ಪರವಾನಗಿಯನ್ನು ನವೀಕರಿಸಬಾರದೆಂದು ಹಲವಾರು ಬಾರಿ ಕೋರಿಕೊಂಡಿದ್ದರೂ ಸಹ ನವೀಕರಿಸುತ್ತಿರುತ್ತಾರೆ. ಈ ಬಗ್ಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕಾನೂನು ಕೋಶವು ಸಹ ನವೀಕರಿಸದಂತೆ ಅಭಿಪ್ರಾಯವನ್ನು ನೀಡಲಾಗಿರುತ್ತದೆ. ಆರೋಗ್ಯ ಬೈಲಾ ಪ್ರಕಾರ ಯಾವುದೇ ನಿರಾಕ್ಷೇಪಣಾ ಪತ್ರವನ್ನು ಸದರಿ ರೆಸ್ಟೋರೆಂಟ್‌ನವರು ಪಡೆದಿರುವುದಿಲ್ಲ. ಈ ಬಗ್ಗೆ ಘನ ನ್ಯಾಯಲಯವು ಆರೋಗ್ಯ ವೈದ್ಯಾಧಿಕಾರಿ ರಾಜಾಜಿನಗರ ವಲಯರವರು ನೀಡಿರುವ ಉದ್ದಿಮೆ ಪರವಾನಗಿ ಸಂಖ್ಯೆ:795/2009-10ನ್ನು ಘನ ಉಚ್ಚನ್ಯಾಯಾಲಯವು ರಿಟ್ ಪಿಟಿಷನ್ ಸಂಖ್ಯೆ:ಸಿಜೆ & ಎಂಎಸ್.ಜಿಜೆ ಡಬ್ಲ್ಯೂಎ ಸಂಖ್ಯೆ:2570/2009 ದಿನಾಂಕ:04-11-2009, ರಿಟ್ ಅಪೀಲು ಸಂಖ್ಯೆ:2570/2009 ದಿನಾಂಕ:30-07-2010ರ ಆದೇಶಗಳಂತೆ 2011-2012ನೇ ಸಾಲಿನ ಪರವಾನಗಿಯನ್ನು ನವೀಕರಿಸಬಾರದೆಂದು ಕೋರಿ ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:22-03-2011ರ ಟಿಪ್ಪಣಿ.

**ಪ್ರಸ್ತಾವನೆ:**-ಶ್ರೀಮತಿ.ಪ್ರೇಮ, ಎಂಬುವವರು ಬಸವೇಶ್ವರನಗರ, 3ನೇ ಹಂತ, 3ನೇ ಬ್ಲಾಕ್, ಸ್ವತ್ತಿನ ಸಂಖ್ಯೆ:28/ಎ ತಳ ಹಾಗೂ ನೆಲಮಹಡಿ ಕಟ್ಟಡದ ಭಾಗವನ್ನು ಶ್ರೀ.ಜಿ.ದಯಾನಂದ ಎಂಬುವವರಿಗೆ ದಿನಾಂಕ:01-12-2005ರಂದು ಬಾರ್ ಮತ್ತು ರೆಸ್ಟೋರೆಂಟ್ ಉದ್ದಿಮೆ ನಡೆಸಲು 3 ವರ್ಷಗಳಿಗೆ ಗುತ್ತಿಗೆಗೆ ನೀಡಿರುವುದು ಕಂಡು ಬರುತ್ತದೆ. ಆದರೆ ಕಛೇರಿ ದಾಖಲೆಗಳ ಪ್ರಕಾರ ಸದರಿ ಸ್ವತ್ತಿನಲ್ಲಿ ಉದ್ದಿಮೆ ನಡೆಸಲು ಶ್ರೀ.ಬಾಬು ಪೂಜಾರಿ ಎಂಬುವವರ ಹೆಸರಿನಲ್ಲಿ 2004-05ನೇ ಸಾಲಿನಲ್ಲಿ ಸಂಖ್ಯೆ:793/04-05ರಲ್ಲಿ ಉದ್ದಿಮೆ ಪರವಾನಗಿ ನೀಡಲಾಗಿರುತ್ತದೆ. ಹಾಗೂ ಪರವಾನಗಿಯನ್ನು ದಿನಾಂಕ:31-03-2009ರವರೆವಿಗೂ ನವೀಕರಿಸಲಾಗಿರುತ್ತದೆ. ಶ್ರೀ.ಬಾಬು ಪೂಜಾರಿರವರು ಸದರಿ ಸ್ಥಳದಲ್ಲಿ ಸದ್ಯಕ್ಕೆ ರೆಸ್ಟೋರೆಂಟ್ ಉದ್ದಿಮೆಯನ್ನು ನಡೆಸುತ್ತಿಲ್ಲದೆ ಶ್ರೀ.ಜಿ.ದಯಾನಂದ ಎಂಬುವವರು ಉದ್ದಿಮೆ ನಡೆಸುತ್ತಿರುತ್ತಾರೆ.

ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ) ವಲಯರವರು ಸದರಿ ಉದ್ದಿಮೆಯನ್ನು ತಪಾಸಣೆ ಮಾಡಿ ಸ್ಥಳದಲ್ಲಿ ಕಂಡುಬಂದ ಕೆಲವು ನ್ಯೂನ್ಯತೆಗಳ ಬಗ್ಗೆ ದಿನಾಂಕ:11-12-2008ರಂದು ತಿಳುವಳಿಕೆ ಪತ್ರ ಜಾರಿ ಮಾಡಿರುವುದು ಕಂಡು ಬರುತ್ತದೆ. ಉದ್ದಿಮೆಯ ವ್ಯವಸ್ಥಾಪಕರು ದಿನಾಂಕ:19-12-2008ರಂದು ಸದರಿ ತಿಳುವಳಿಕೆ ಪತ್ರಕ್ಕೆ ಉತ್ತ ನೀಡಿ ಉದ್ದಿಮೆಯಲ್ಲಿ ಯಾವುದೇ ನ್ಯೂನ್ಯತೆಗಳು ಇರುವುದಿಲ್ಲವೆಂದು ಬಾಬು ಪೂಜಾರಿಯವರ ಹೆಸರನಲ್ಲಿರುವ ಉದ್ದಿಮೆಯ ಪರವಾನಗಿ ಪ್ರಮಾಣ ಪತ್ರದ ನಕಲನ್ನು ಸಲ್ಲಿಸಿ ಬಾಬು ಪೂಜಾರಿಯವರು ಅನಾರೋಗ್ಯದ ನಿಮಿತ್ತ ಊರಿಗೆ ಹೋಗಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ಸಮಜಾಯಿಷಿಯು ಸಮಂಜಸವಾಗಿರುವುದಿಲ್ಲವೆಂದು ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ) ವಲಯರವರು ದಿನಾಂಕ:22-12-2008 ಮತ್ತು 26-12-2008ರಂದು ಜ್ಞಾಪನಾ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿ ಕೆ.ಎಂ.ಸಿ.ಕಾಯ್ದೆಯನ್ವಯ ನ್ಯೂನ್ಯತೆಗಳ ಬಗ್ಗೆ ಕ್ರಮ ಜರುಗಿಸಲಾಗುವುದೆಂದು ತಿಳಿಸಲಾಗಿರುತ್ತದೆ. ಸದರಿ ತಿಳುವಳಿಕೆ ಪತ್ರಗಳಿಗೆ ನವ್ಯ ಬಾರ್ ಮತ್ತು ರೆಸ್ಟೋರೆಂಟ್‌ನ ವ್ಯವಸ್ಥಾಪಕರು ದಿನಾಂಕ:27-12-2008ರಂದು ಆರೋಗ್ಯ ವೈದ್ಯಾಧಿಕಾರಿಯವರಿಗೆ ಬರೆದಿರುವ ಪತ್ರದಲ್ಲಿ ನೆಲ ಮಾಳಿಗೆಯಲ್ಲಿನ ಉದ್ದಿಮೆಯನ್ನು ತಕ್ಷಣದಿಂದ ನಿಲ್ಲಿಸಿರುವುದಾಗಿ ಬಾಬು ಪೂಜಾರಿಯವರು ಅನಾರೋಗ್ಯ ಕಾರಣ ಊರಿಗೆ ಹೋಗಿರುವುದಾಗಿ ತಿಳಿಸುತ್ತಾ, ಉದ್ದಿಮೆ ನಡೆಸಲು ಶ್ರೀ.ಜಿ.ದಯಾನಂದರವರ

ಹೆಸರಿಗೆ ಪರವಾನಗಿ ನೀಡಲು ಕೋರಿಕೊಳ್ಳುತ್ತಾ, ತಪಾಸಣಾ ಪುಸ್ತಕ ಕಳೆದುಹೋಗಿರುವುದಾಗಿ ಮತ್ತು ವೈದ್ಯಕೀಯ ಪ್ರಮಾಣ ಪತ್ರಗಳನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ.

ಶ್ರೀಮತಿ.ಪ್ರೇಮಕೃಷ್ಣಮೂರ್ತಿರವರು ಪಾಲಿಕೆ ವಿರುದ್ಧ ಮಾನ್ಯ ಉಚ್ಚನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:16124/2009 ಶ್ರೀ.ಜಿ.ದಯಾನಂದ ಎಂಬುವವರು ನಗರ ಪಾಲಿಕೆ ಮತ್ತು ಶ್ರೀಮತಿ.ಪ್ರೇಮರವರ ವಿರುದ್ಧ ಮೂಲಾ ದಾವಾ ಸಂಖ್ಯೆ:1251/2009ನ್ನು ದಾಖಲಿಸಿ ಪ್ರಸ್ತುತ ದಾವಾ ಸ್ವತ್ತಿನ ಶಾಂತಿಯುತ ಸ್ವಾಧೀನತೆ ಮತ್ತು ಅನುಭವ ಹಾಗೂ ಕಾನೂನು ಬಾಹಿರವಾಗಿ ಖಾಲಿ ಮಾಡಿಸುವ ಪ್ರಯತ್ನ ಅಥವಾ ದಾವಾ ಸ್ವತ್ತಿನ ನೆಲಮಾಳಿಗೆಯನ್ನು ಒಡೆದುಹಾಕಿ ವಾದಿಯನ್ನು ಕಾನೂನು ಬಾಹಿರವಾಗಿ ಹೊರಹಾಕದಂತೆ ಶಾಶ್ವತ ತಡೆಯಾಜ್ಞೆ ಕೋರಿಕೊಂಡಿರುತ್ತಾರೆ.

ಕಟ್ಟಡದ ಮಾಲೀಕರು ಆರೋಗ್ಯಾಧಿಕಾರಿಗಳಿಗೆ ತಕರಾರು ಸಲ್ಲಿಸಿ ಸದರಿ ಸ್ವತ್ತಿನ ಗುತ್ತಿಗೆ ಕರಾರು ಅವಧಿಯು ದಿನಾಂಕ:01-12-2008ಕ್ಕೆ ಅಂತ್ಯಗೊಂಡಿದ್ದು, ಬಾಡಿಗೆದಾರರಾದ ಶ್ರೀ.ಜಿ.ದಯಾನಂದರವರಿಗೆ ಸ್ವತ್ತಿಲ್ಲಿ ಯಾವುದೇ ಹಕ್ಕು ಅಥವಾ ಹಿತಾಸಕ್ತಿ ಇಲ್ಲದೆ ಸ್ವತ್ತಿನ ಸ್ವಾಧೀನತೆಯನ್ನು ತಕ್ಷಣವೇ ಬಿಟ್ಟುಕೊಟ್ಟಿರುವುದಿಲ್ಲವೆಂದು ತಳಿಸುತ್ತಾ, ಅನಧಿಕೃತವಾಗಿ ಮತ್ತು ಕಾನೂನು ಬಾಹಿರವಾಗಿ ಸ್ವತ್ತಿನ ಸ್ವಾಧೀನತೆಯನ್ನು ಹೊಂದಿರುತ್ತಾರೆಂದು ಅನಧಿಕೃತವಾಗಿ ಬಾರ್ ಮತ್ತು ರೆಸ್ಟೋರೆಂಟ್‌ನ್ನು ಕಾನೂನು ಬಾಹಿರವಾಗಿ ಶ್ರೀ.ಜಿ.ದಯಾನಂದರವರು ನ್ಯಾಯಸಮ್ಮತವಾದ ಪರವಾನಗಿ ಇಲ್ಲದೆ ನಡೆಸುತ್ತಿರುವ ಸದರಿ ಉದ್ದಿಮೆಯನ್ನು ತಕ್ಷಣವೇ ಮುಚ್ಚಿಸಲು ಕೋರಿಕೊಂಡಿರುತ್ತಾರೆ.

ಮುಂದುವರೆದಂತೆ ಶ್ರೀ.ಜಿ.ದಯಾನಂದರವರು ಸ್ವತ್ತಿನ ಮಾಲೀಕರಾದ ಶ್ರೀಮತಿ.ಪ್ರೇಮಾರವರ ವಿರುದ್ಧ ಮೂಲಾ ದಾವಾ ಸಂಖ್ಯೆ:7446/2008ನ್ನು ಸಲ್ಲಿಸಿ ವಾದಿಯನ್ನು ದಾವಾ ಸ್ವತ್ತಿನಿಂದ ಕಾನೂನು ಬಾಹಿರವಾಗಿ ಹೊರಹಾಕದಂತೆ ತಡೆಯಾಜ್ಞೆ ಕೋರಲಾಗಿದ್ದು, ದಿನಾಂಕ:11-11-2008ರಂದು ಘನ ನ್ಯಾಯಾಲಯವು ವಾದಿಯವರನ್ನು ಕಾನೂನು ಬಾಹಿರವಾಗಿ ದಾವಾ ಸ್ವತ್ತಿನಿಂದ ಹೊರಹಾಕಬಾರದೆಂದು ಪ್ರತಿವಾದಿ ವಿರುದ್ಧ ಏಕ ಪಕ್ಷೀಯ ಮಧ್ಯಂತರ ಆದೇಶ ನೀಡಿರುವುದು ಕಂಡು ಬರುತ್ತದೆ.

ಸದರಿ ಸ್ವತ್ತಿನಲ್ಲಿ ಉದ್ದಿಮೆ ನಡೆಸಲು ಬಾಬು ಪೂಜಾರಿಯವರಿಗೆ ಯಾವ ಆಧಾರದಮೇಲೆ ಉದ್ದಿಮೆ ಪರವಾನಗಿ ನೀಡಲಾಗಿರುತ್ತದೆಂಬ ಬಗ್ಗೆ ಸ್ಪಷ್ಟೀಕರಣ ಇರುವುದಿಲ್ಲ. ಹಾಗೂ ವಾಹನ ನಿಲುಗಡೆಗೆ ಮಾತ್ರ ಸೀಮಿತವಾಗಿರುವ ನೆಲಮಾಳಿಗೆಯಲ್ಲಿ ಉದ್ದಿಮೆಯನ್ನು ವಿಸ್ತರಿಸಿ ಶ್ರೀ.ದಯಾನಂದ ಎಂಬುವವರು ಪರವಾನಗಿ ಇಲ್ಲದೆ ಅನಧಿಕೃತವಾಗಿ ಉದ್ದಿಮೆ ನಡೆಸುತ್ತಿದ್ದು ಸ್ವತ್ತಿನ ಗುತ್ತಿಗೆ ಅವಧಿಯು ಮುಗಿದ ನಂತರ ಸದರಿ ಉದ್ದಿಮೆ ನಡೆಸಲು ಪರವಾನಗಿಯನ್ನು ತಮ್ಮ ಹೆಸರಿಗೆ ನೀಡಲು ಕೋರಿಕೊಂಡಿರುವುದು ಕಂಡು ಬರುತ್ತದೆ. ಶ್ರೀ.ಜಿ.ದಯಾನಂದರವರು ನಗರ ಪಾಲಿಕೆ ಹಾಗೂ ಸ್ವತ್ತಿನ ಮಾಲೀಕರ ವಿರುದ್ಧ ಸಲ್ಲಿಸಲಾಗಿರುವ ದಾವೆಯಲ್ಲಿ ಮುಂದಿನ ದಿನಾಂಕದವರೆಗೆ ಘನ ನ್ಯಾಯಾಲಯವು ಯತಾಸ್ಥಿತಿ ಕಾಪಾಡುವಂತೆ ದಾವಾ ಸಂಖ್ಯೆ:1251/2009ರಲ್ಲಿ ನೀಡಿರುವ ಆದೇಶವು ಸ್ವತ್ತಿನಿಂದ ಹೊರ ಹಾಕದಂತೆ ಮಾತ್ರ ಯಾತಾಸ್ಥಿತಿ ಇದ್ದು, ಪರವಾನಗಿ ಇಲ್ಲದೆ ಉದ್ದಿಮೆ ನಡೆಸುವ ಬಗ್ಗೆ ತೆಗೆದುಕೊಳ್ಳುವ ಕ್ರಮಕ್ಕೆ ಯಾವುದೇ ಬಾದಕವಿರುವುದಿಲ್ಲದಿರುವುದು ಕಂಡು ಬರುತ್ತದೆ.

ಮುಂದುವರೆದಂತೆ ಬಾರ್ ವ್ಯವಸ್ಥಾಪಕರಾದ ಶ್ರೀ.ಬಾಬು ಪೂಜರ್ ಎಂಬುವವರು ಪರವಾನಗಿ ಸ್ಥಳದಲ್ಲಿ ರೆಸ್ಟೋರೆಂಟ್ ನಡೆಸಲು 2004-05ನೇ ಸಾಲಿನಲ್ಲಿ 3 ವರ್ಷಗಳವರೆಗೆ ರೆಸ್ಟೋರೆಂಟ್ ಉದ್ದಿಮೆ ಪರವಾನಗಿ ನೀಡಲಾಗಿದ್ದು, ಸದರಿ ಬಾಬು ಪೂಜಾರ್ ಎಂಬುವವರು ಉದ್ದಿಮೆ ಸ್ಥಳದಿಂದ ಕಾರಣಾಂತರದಿಂದ ಬಿಟ್ಟು ಹೋಗಿದ್ದು, ಈಗ ಅವರು ಎಲ್ಲಿ ವಾಸವಾಗಿದ್ದಾರೆಂದು ತಿಳಿಯದ ಕಾರಣ ತಮ್ಮ ಹೆಸರಿಗೆ ಹೊಸದಾಗಿ ರೆಸ್ಟೋರೆಂಟ್ ಉದ್ದಿಮೆ ಪರವಾನಗಿ ನೀಡಲು ಕೋರಿಕೊಳ್ಳುತ್ತಾ, ಕಟ್ಟಡದ ಮಾಲೀಕರು ಕಾನೂನು ಬಾಹಿರವಾಗಿ ತಮ್ಮನ್ನು ಹೊರಹಾಕಲು ಯತ್ನಿಸುತ್ತಿರುವ ವಿರುದ್ಧ ಘನ ನ್ಯಾಯಾಲಯದಲ್ಲಿ ಮೂಲ ದಾವಾ ಸಂಖ್ಯೆ:7446/2008ನ್ನು ಸಲ್ಲಿಸಿ ಮಧ್ಯಂತರ ತಡೆಯಾಜ್ಞೆ ಪಡೆದಿರುವುದಾಗಿ ತಿಳಿಸುತ್ತಾ, ರೆಸ್ಟೋರೆಂಟ್ ಪರವಾನಗಿ ಅವಧಿ ಮುಕ್ತಾಯವಾಗಿರುವುದರಿಂದ ಸದರಿ ರೆಸ್ಟೋರೆಂಟ್ ಉದ್ದಿಮೆಯನ್ನು ಸ್ಥಗಿತಗೊಳಿಸಿರುವುದಾಗಿ ಹಾಗೂ ಅಬಕಾರಿ ಇಲಾಖೆಯಿಂದ ಬಾರ್ ಪರವಾನಗಿ ನೀಡಿರುವ ಮೇರೆಗೆ ಸದರಿ ಸ್ಥಳದಲ್ಲಿ ಬಾರ್ ವ್ಯಾಪಾರ ಮಾತ್ರ ಮುಂದುವರೆಸುತ್ತಿದ್ದು, ರೆಸ್ಟೋರೆಂಟ್ ಪರವಾನಗಿ ಇಲ್ಲದೆ ತಮಗೆ ಅಪಾರ ನಷ್ಟವುಂಟಾಗುತ್ತಿರುವುದಾಗಿ ತಿಳಿಸುತ್ತಾ, ಆದಷ್ಟು ಬೇಗೆ ರೆಸ್ಟೋರೆಂಟ್ ಪರವಾನಗಿ ನೀಡಲು ಕೋರಿಕೊಂಡಿರುತ್ತಾರೆ. ಈ ಮೊದಲು ದಿನಾಂಕ:08-04-2099ರಂದು ಶ್ರೀ.ಜಿ.ದಯಾನಂದ ಎಂಬುವವರು ಕೆಲವು ದಾಖಲೆಗಳೊಂದಿಗೆ ಸಲ್ಲಿಸಿರುವ ಮನವಿಯಲ್ಲಿ ಮಾಲೀಕರಿಗೂ ಹಾಗೂ ತಮ್ಮ ನಡುವೆ ಘನ ನ್ಯಾಯಾಲಯದ ಮುಂದೆ ವ್ಯಾಜ್ಯಗಳು ನಡೆಯುತ್ತಿದ್ದು, ದಿನಾಂಕ:01-12-2005ರಂದು ಮಾಡಿಕೊಟ್ಟಿರುವ ಭೋಗ್ಯ ಪತ್ರದ 17ನೇ ಪಂಕ್ತಿಯಲ್ಲಿ ನಗರ ಪಾಲಿಕೆ ಅಥವಾ ಅಬಕಾರಿ ಇಲಾಖೆಯಿಂದ ಪರವಾನಗಿ ಪಡೆಯಲು ತಮ್ಮ ನಿರಾಕ್ಷೇಪಣೆ ನಿಡಿರುತ್ತಾರೆಂದು, ಇದಲ್ಲದೆ ಕಟ್ಟಡದ ಮಾಲೀಕರು ಪ್ರತ್ಯೇಕವಾಗಿ ಬೇರೆ ಯಾವುದೇ ನಿರಾಕ್ಷೇಪಣೆ ಪತ್ರ ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಕಡತದ ಪುಟ 31ರಲ್ಲಿ ಲಗತ್ತಿಸಿರುವ ದಾಖಲೆಯಂತೆ ಮನವಿದಾರರು ಸದರಿ ಉದ್ದಿಮೆ ನಡೆಸಲು ಕಟ್ಟಡದ ಮಾಲೀಕರು 3 ವರ್ಷಗಳ ಅವಧಿಗೆ ಸದರಿ ಕಟ್ಟಡವನ್ನು ಭೋಗ್ಯಕ್ಕೆ ನೀಡಲಾಗಿದ್ದು, ಸದರಿ ಭೋಗ್ಯದ ಅವಧಿಯು ದಿನಾಂಕ:01-12-2008ಕ್ಕೆ ಅಂತ್ಯಗೊಂಡಿರುತ್ತದೆ. ಮತ್ತು ಭೋಗ್ಯದ ನವೀಕರಣದ ಬಗ್ಗೆ ಕಡತದಲ್ಲಿ ಯಾವುದೇ ದಾಖಲೆಗಳು ಲಭ್ಯವಿರುವುದಿಲ್ಲ. ಈ ಮಧ್ಯ ಮನವಿದಾರರಾದ ಶ್ರೀ.ಜಿ.ದಯಾನಂದ ಎಂಬುವವರು ಶಫಥ ಪತ್ರ ಸಲ್ಲಿಸಿ ದಿನಾಂಕ:31-01-2009ರಂದು ಸಂಖ್ಯೆ:ಉಆ(ಆ)ಪಿಆರ್/1302/2008-09ರಲ್ಲಿ ನಗರ ಪಾಲಿಕೆ ಹೊರಡಿಸಿರುವ

ಸುತ್ತೋಲೆಯಲ್ಲಿ ವಿಧಿಸಿರುವ ಷರತ್ತುಗಳನ್ವಯ ಪಾಲಿಕೆಯು ವಿಧಿಸಬಹುದಾದ ಷರತ್ತಿಗೊಳಪಡಿಸಿ ರೆಸ್ಟೋರೆಂಟ್ ಉದ್ದಿಮೆ ಪರವಾನಗಿ ನೀಡಲು ಕೋರಿಕೊಂಡಿರುವುದು ಕಂಡು ಬರುತ್ತದೆ. ಶ್ರೀ.ದಯಾನಂದರವರ ಹತ್ತಿರ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದರೆಂದು ತಿಳಿಸಿ ಶ್ರೀ.ಬಾಬು ಪೂಜಾರ್‌ರವರು ದಿನಾಂಕ:19-04-2009ರಂದು ನೀಡಿರುವ ತಮ್ಮ ಅರ್ಜಿಯಲ್ಲಿ ತಮಗೆ ಕೆಲಸ ಮಾಡಲು ಆರೋಗ್ಯ ಸರಿಯಿಲ್ಲದ ಕಾರಣದ ರೆಸ್ಟೋರೆಂಟ್ ಪರವಾನಗಿಯನ್ನು ಶ್ರೀ.ಜಿ.ದಯಾನಂದ ಎಂಬುವವರ ಹೆಸರಿಗೆ ವರ್ಗಾಯಿಸಬೇಕೆಂದು ಕೋರಿರುತ್ತಾರೆ. ಮತ್ತು ದಿನಾಂಕ:31-01-2009ರಂದು ಹೊರಡಿಸಿರುವ ಸುತ್ತೋಲೆ ಮೇರೆಗೆ ಮನವಿದಾರರ ಕೋರಿಕೆಯನ್ನು ಪರಗಣಿಸುವ ಬಗ್ಗೆ ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ)ರವರು ಕ್ರಮವಹಿಸಬೇಕಾಗಿರುತ್ತದೆ. ವಿವಿಧ ನ್ಯಾಯಾಲಯಗಳ ಆದೇಶಗಳನ್ವಯ ಪರವಾನಗಿ ಇಲ್ಲದೆ ರೆಸ್ಟೋರೆಂಟ್ ನಡೆಸುವುದು ಕಾನೂನು ಬಾಹಿರ ಎಂದು ಆದೇಶ ಮಾಡಿರುವುದು ಸಮಂಜಷವಾಗಿರುತ್ತದೆಂದು ತಿಳಿಸುತ್ತಾ, ವ್ಯವಸ್ಥಾಪಕರ ಹೆಸರಿನಲ್ಲಿರುವ ಪರವಾನಗಿಯನ್ನು ರದ್ದು ಪಡಿಸಿ ಶ್ರೀ.ಜಿ.ದಯಾನಂದರವರ ಹೆಸರಿನಲ್ಲಿ ಪರವಾನಗಿ ನೀಡುವ ಬಗ್ಗೆ ಇನ್ನೊಂದುಗ ಪ್ರಕರಣದಲ್ಲಿ ದಿನಾಂಕ:14-05-2009ರಂದು ಸಂಖ್ಯೆ:ಬಿಬಿಎಂಪಿ/ಎಲ್‌ಸಿ/ಆರ್‌ಆರ್/124/2009-10ರಲ್ಲಿ ನೀಡಿರುವು ಅಭಿಪ್ರಾಯವನ್ನು ಅಳವಡಿಸಿಕೊಂಡು ಷರತ್ತಿಗೊಳಪಡಿಸಿ ಶ್ರೀ.ಜಿ.ದಯಾನಂದರವರ ಹೆಸರಿನಲ್ಲಿ ಉದ್ದಿಮೆ ಪರವಾನಗಿಯನ್ನು ದಿನಾಂಕ:27-05-2009ರಂದು ಹೊಸದಾಗಿ ವಿತರಿಸಲಾಗಿರುತ್ತದೆ.

ಆದರೆ ದಿನಾಂಕ:31-01-2009ರಂದು ಹೊರಡಿಸಿರುವ ಸುತ್ತೋಲೆಗೆ ಪ್ರತಿಯಾಗಿ ದಿನಾಂಕ:25-02-2009ರಂದು ಮತ್ತೊಂದು ಸುತ್ತೋಲೆಯನ್ನು ಹೊರಡಿಸಲಾಗಿರುತ್ತದೆ. ಸದರಿ ಸುತ್ತೋಲೆಯನ್ವಯ ಹೊಸದಾಗಿ ಪರವಾನಗಿ ಪಡೆಯಬೇಕಾದಲ್ಲಿ ನಿಗಧಿತ ಅರ್ಜಿನಮೂನೆಯಲ್ಲಿ ಮಾಲೀಕರ ನಿರಾಕ್ಷೇಪಣೆ, ಮಾಲೀಕತ್ವ ದೃಢೀಕರಣ ಬಗ್ಗೆ ಖಾತಾ ದೃಢೀಕರಣ ಪತ್ರ, ಕಂದಾಯ ರಶೀದಿ ಅಥವಾ ಕ್ರಮ ಪತ್ರ ಹಾಗೂ ಅಕ್ಕಪಕ್ಕದ ನಿವಾಸಿಗಳ ನಿರಾಕ್ಷೇಪಣಾ ಪತ್ರವನ್ನು ಸಲ್ಲಿಸಬೇಕಾಗಿರುತ್ತದೆ.

ಶ್ರೀ.ದಯಾನಂದ ಎಂಬುವವರು ಪರವಾನಗಿ ಪಡೆಯದೆ ತಳಮಾಳಿಗೆಯಲ್ಲಿ ನಡೆಸುತ್ತಿರುವ ನವ್ಯ ಬಾರ್ ಮತ್ತು ರೆಸ್ಟೋರೆಂಟ್ ಉದ್ದಿಮೆ ಬಗ್ಗೆ ಮೂಲಾ ದಾವಾ ಸಂಖ್ಯೆ:1251/2009ರಲ್ಲಿ ಘನ ನ್ಯಾಯಾಲಯವು ನೀಡಿರುವ ಯಥಾಸ್ಥಿತಿ ಆದೇಶವು ನಗರ ಪಾಲಿಕೆಯು ಕೆ.ಎಂ.ಸಿ.ಕಾಯ್ದೆ ಕಲಂ 343ರಡಿಯಲ್ಲಿ ತೆಗೆದುಕೊಳ್ಳಬಹುದಾದ ಕ್ರಮದ ಬಗ್ಗೆ ಯಾವುದೇ ಬಾಧಕವಿರುವುದಿಲ್ಲವೆಂದು ಕಾನೂನು ಅಭಿಪ್ರಾಯ ನೀಡಲಾಗಿರುವ ಮೇರೆಗೆ ಹಾಗೂ ಉಚ್ಚನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ:11133/2009ರಲ್ಲಿ ದಿನಾಂಕ:24-04-2009ರಂದು ನೀಡಿರುವ ಆದೇಶದನ್ವಯ ಪೋಲಿಸ್ ಇಲಾಖೆಯ ನೆರವಿನೊಂದಿಗೆ ಇಲಾಖಾ ವತಿಯಿಂದ ಸದರಿ ಉದ್ದಿಮೆಯನ್ನು ಮುಚ್ಚಿಸಿರುವುದು ಕಂಡು ಬರುತ್ತದೆ.

ಶ್ರೀ.ಜಿ.ದಯಾನಂದ್‌ರವರು ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಎಂಬ ಹೆಸರಿನಲ್ಲಿ ಸ್ವತ್ತಿನ ಸಂಖ್ಯೆ:28-ಎ, 2ನೇ ಹಂತ, 3ನೇ ಬ್ಲಾಕ್, 1ನೇ ಮುಖ್ಯ ರಸ್ತೆ, ಬಸವೇಶ್ವರನಗರ, ವಾರ್ಡ್-19ರಲ್ಲಿ ಹೋಟೆಲ್ ಉದ್ದಿಮೆಯನ್ನು ನಡೆಸುತ್ತಿದ್ದು, ಸದರಿ ಸ್ವತ್ತಿನ ಗುತ್ತಿಗೆಯನ್ನು ನೀಡಿರುವ ಸ್ವತ್ತಿನ ಮಾಲೀಕರಾದ ಶ್ರೀಮತಿ.ಪ್ರೇಮಾರವರು ತಕರಾರು ತೆಗೆದ ಪ್ರಯುಕ್ತ ಶ್ರೀ.ಜಿ.ದಯಾನಂದ್‌ರವರು ನ್ಯಾಯಾಲಯದ ಮೊರೆ ಹೋಗಿ ಘನ ನ್ಯಾಯಾಲಯದಲ್ಲಿ ಮೊಕದ್ದಮೆ ಸಂಖ್ಯೆ:ಒ.ಎಸ್.ಸಂಖ್ಯೆ:7446/2008ರಲ್ಲಿ ತಡೆಯಾಜ್ಞೆ/ನಿರ್ಬಂಧಿಕ ಆಜ್ಞೆಯನ್ನು ಪಡೆದುಕೊಂಡಿರುತಾರೆ. ಸದರಿ ಆಜ್ಞೆಯು ಚಾಲ್ತಿಯಲ್ಲಿರುತ್ತದೆ.

ದಿನಾಂಕ:31-03-2009ರಲ್ಲಿ ಸದರಿ ಹೋಟೆಲ್ ಉದ್ದಿಮೆಯ ನಗರ ಪಾಲಿಕೆ ಆರೋಗ್ಯ ಪರವಾನಗಿ ಅವಧಿ ಮುಗಿದಿದ್ದು, ಮತ್ತು ಸ್ವತ್ತಿನ ಮಾಲೀಕರಾದ ಶ್ರೀಮತಿ.ಪ್ರೇಮಾರವರು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ:11133/2009ರಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದು, ಸದರಿ ಆದೇಶದಲ್ಲಿ ನ್ಯಾಯಾಲಯವು ದಿನಾಂಕ:24-04-2009ರಂದು ಆದೇಶ ಮಾಡಿ ಪರವಾನಗಿ ಇಲ್ಲದೆ ಹೋಟೆಲ್ ಉದ್ದಿಮೆಯನ್ನು ನಡೆಸುತ್ತಿರುವುದನ್ನು ಮುಚ್ಚಿಸಬೇಕೆಂದು ಆದೇಶಿಸಿದ್ದು, ಅದರಂತೆ ನಗರ ಪಾಲಿಕೆ ಪಶ್ಚಿಮ ವಲಯದ ಆರೋಗ್ಯ ವೈದ್ಯಾಧಿಕಾರಿ(ರಾಜಾಜಿನಗರ)ವಲಯರವರು ದಿನಾಂಕ:14-05-2009ರಂದು ಸದರಿ ರೆಸ್ಟೋರೆಂಟ್ ಉದ್ದಿಮೆಯನ್ನು ಮುಚ್ಚಿಸಿರುತ್ತಾರೆ. ಉದ್ದಿಮೆ ಮುಚ್ಚಿರುವುದು ಕಾನೂನು ರೀತ್ಯ ಇರುತ್ತದೆ.

ದಿನಾಂಕ:31-12-2008ರಂದು ಶ್ರೀ.ಜಿ.ದಯಾನಂದ್‌ರವರು ಸದರಿ ರೆಸ್ಟೋರೆಂಟ್ ಪರವಾನಗಿಯನ್ನು ತಮ್ಮ ಹೆಸರಿಗೆ ಕೊಡಬೇಕೆಂದು ಆರೋಗ್ಯ ಇಲಾಖೆಗೆ ಅರ್ಜಿಯನ್ನು ಸಲ್ಲಿಸಿ ಪರವಾನಗಿಗೆ ಸಂಬಂಧಪಟ್ಟಂತೆ ಪಾಲಿಕೆಗ ಸಲ್ಲಿಸಬೇಕಾದಂತಹ ಶುಲ್ಕವನ್ನು ಪಾವತಿಸಿರುತ್ತಾರೆ. ಹಾಗೂ ದಿನಾಂಕ:19-04-2009ರಲ್ಲಿ ಶ್ರೀ.ಬಾಬುಪೂಜಾರ್‌ರವರು ಅರ್ಜಿ ನೀಡಿ ತಮ್ಮ ಹೆಸರಿನಲ್ಲಿರುವ ರೆಸೋಟರೆಂಟ್ ಪರವಾನಗಿಯನ್ನು ಶ್ರೀ.ಜಿ.ದಯಾನಂದರವರ ಹೆಸರಿಗೆ ವರ್ಗಾಯಿಸಬೇಕೆಂದು ಹಾಗೂ ಶ್ರೀ.ದಯಾನಂದರವರ ಹತ್ತಿರ ಮ್ಯಾನೇಜರ್ ಆಗಿ ಕೆಲಸ ಮಾಡಲು ಆರೋಗ್ಯ ಸರಿ ಇಲ್ಲದ ಕಾರಣವನ್ನು ಸಹ ನೀಡಿ, ಲೈಸನ್ಸ್ ವರ್ಗಾವಣೆ ಮಾಡಲು ಕೋರಿರುತ್ತಾರೆ.

ಉಪ ಆಯುಕ್ತರು (ಆರೋಗ್ಯ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆರವರ ಸುತ್ತೋಲೆ ಸಂಖ್ಯೆ:ಡಿಸಿ(ಹೆಚ್)ಪಿಆರ್/1302/08-09, ದಿನಾಂಕ:31-01-2009ರಲ್ಲಿ ಹೊಸ ಟ್ರೇಡ್ ಲೈಸೆನ್ಸ್ ನೀಡುವ ಬಗ್ಗೆ ಹೊರಡಿಸಿರುವ ಮಾರ್ಗ ಸೂಚಿಗಳ ರೀತ್ಯಾ, ಶ್ರೀ.ಜಿ.ದಯಾನಂದ್‌ರವರು ಸಲ್ಲಿಸಿರುವ ಅರ್ಜಿ ದಿನಾಂಕ:31-12-2008ರಲ್ಲಿ

ನೀಡಿರುವ ಹಾಗೂ ಶುಲ್ಕ ಪಾವತಿ ಜೊತೆ ಸಲ್ಲಿಸಿರುವ ಅರ್ಜಿ ಮೆ:ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ವ್ಯವಸ್ಥಾ,ಪಕರು ಸಲ್ಲಿಸಿರುವ ದಿನಾಂಕ:19-04-2009ರ ಅರ್ಜಿಯನ್ನು ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ)ವಲಯರವರು ಪರಿಗಣಿಸಿ ಟ್ರೇಡ್ ಲೈಸೆನ್ಸ್ ನೀಡಲು ಕ್ರಮ ವಹಿಸಬೇಕಾಗಿತ್ತು. ಆದರೆ ಇವರ ಅರ್ಜಿ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲ. ಪರವಾನಗಿ ಇಲ್ಲದೇ ಇದ್ದುದರಿಂದ ಶ್ರೀ.ಜಿ.ದಯಾನಂದರವರು ರೆಸ್ಟೋರೆಂಟ್ ಮುಚ್ಚಿರುವುದಾಗಿ ದಿನಾಂಕ:16-04-2009ರಂದು ಅರ್ಜಿ ನೀಡಿದ್ದು, ತದ ನಂತರ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ರೀತ್ಯಾ ದಿನಾಂಕ:14-05-2009ರಂದು ಸದರಿ ರೆಸ್ಟೋರೆಂಟ್‌ನ್ನು ಸೀಜ್ ಮಾಡಲಾಗಿರುತ್ತದೆ.

ಕಟ್ಟಡದ ಮಾಲೀಕರಾದ ಶ್ರೀಮತಿ.ಪ್ರೇಮಾರವರು ದಿನಾಂಕ:06-05-2009 ಹಾಗೂ 25-05-2009ರಂದು ಅಹವಾಲನನು ಸಲ್ಲಿಸಿ ರಿಟ್ ಪಿಟಿಷನ್ ಸಂಖ್ಯೆ:11133/2009 ದಿನಾಂಕ:24-04-2009ರಂತೆ ಹಾಗೂ ಓ.ಎಸ್.ಸಂಖ್ಯೆ:1251/2009ರಂತೆ ಕ್ರಮ ಜರುಗಿಸಲು ಕೋರಿ ಯಾವುದೇ ಕಾರಣಕ್ಕೆ ಪರವಾನಗಿಯನ್ನು ನೀಡದಂತೆ ಒತ್ತಾಯಿಸಿರುತ್ತಾರೆ. ರಿಟ್ ಪಿಟಿಷನ್ ಸಂಖ್ಯೆ:11133/2009ರ ರೀತ್ಯಾ ರೆಸ್ಟೋರೆಂಟ್‌ನ್ನು ದಿನಾಂಕ:14-05-2009ರಂದು ಸೀಜ್ ಮಾಡಿರುವುದು ಕ್ರಮ ಬದ್ಧವಾಗಿರುತ್ತದೆ. ಆದರೆ ಓ.ಎಸ್. ಸಂಖ್ಯೆ:1251/2009ರಲ್ಲಿ ಪರವಾನಗಿಯನ್ನು ನೀಡುವ ಬಗ್ಗೆ ಯಾವುದೇ ರೀತಿಯ ನಿರ್ಭಂದಕಾಜ್ಞೆ ಇರುವುದಿಲ್ಲ. ಆದರೆ ಓ.ಎಸ್. ಸಂಖ್ಯೆ:7446/2008ರಲ್ಲಿ ದಿನಾಂಕ:04-03-2009ರಂತೆ ಕಟ್ಟಡ ಮಾಲೀಕರ ವಿರುದ್ಧ ನ್ಯಾಯಾಲಯದ ನಿರ್ಭಂದಕಾಜ್ಞೆ ಜಾರಿಯಲ್ಲಿರುತ್ತದೆ. ಈ ಸಿವಿಲ್ ದಾವೆ ಇನ್ನೂ ಇತ್ಯರ್ಥವಾಗಿರುವುದಿಲ್ಲ ಹಾಗೂ ವಿಚಾರಣೆ ಹಂತದಲ್ಲಿರುತ್ತದೆ. ಪರವಾನಗಿ ಇಲ್ಲದೇ ರೆಸ್ಟೋರೆಂಟ್ ನಡೆಸುವುದು ಕಾನೂನು ಬಾಹಿರ ಎಂದು ನ್ಯಾಯಾಲಯಗಳಲ್ಲಿ ಆದೇಶ ಮಾಡಿರುವುದು ಸಮಂಜಸವಾಗಿದೆ. ಆದರೆ ವ್ಯವಸ್ಥಾಪಕರ ಹೆಸರಿನಲ್ಲಿರುವ ಪರವಾನಗಿಯನ್ನು ರದ್ದುಪಡಿಸಿ ಶ್ರೀ.ಜಿ.ದಯಾನಂದರವರ ಹೆಸರಿಗೆ ಟ್ರೇಡ್ ಲೈಸೆನ್ಸ್ ನೀಡುವುದನ್ನು ಪರಿಶೀಲಿಸಿದಾಗ ಮಾಲೀಕರು ಮತ್ತು ಬಾಡಿಗೆದಾರರ ಮಧ್ಯೆ ನ್ಯಾಯಾಲಯದಲ್ಲಿ ದಾವೆ ಇದ್ದು ಇಲಾಖೆ ವತಿಯಿಂದ ಪರವಾನಗಿ ನವೀಕರಿಸುವ ಕುರಿತು ಕಾನೂನು ಕೋಶದ ಮುಖ್ಯಸ್ಥರು ಬೇರೆ ಪ್ರಕರಣದಲ್ಲಿ ನೀಡಿರುವ ಕಾನೂನು ಅಭಿಪ್ರಾಯವನ್ನು ಈ ಪ್ರಕರಣಕ್ಕೆ ಅಳವಡಿಸಿಕೊಂಡು ಪರವಾನಗಿ ನವೀಕರಿಸಲಾಗಿರುತ್ತದೆ.

ಹೊಸದಾಗಿ ಪರವಾನಗಿಯನ್ನು ನೀಡಿರುವುದನ್ನು ಪ್ರಶ್ನಿಸಿ ರಿಟ್ ಅಪೀಲು ಸಂಖ್ಯೆ:2570/2009ನ್ನು ದಾಖಲಿಸಿರುವುದು ಕಂಡು ಬರುತ್ತದೆ. ಸದರಿ ರಿಟ್ ಅಪೀಲಿನಲ್ಲಿ ಪರವಾನಗಿದಾರರು ಯಾವುದಾದರೂ ಉಲ್ಲಂಘನೆಗಳನ್ನು ಮಾಡಿರುವುದಾಗಿ ಶಾಸನಬದ್ಧ ಪ್ರಾಧಿಕಾರದವರು ವರದಿ ಮಾಡದಲ್ಲಿ ಪರವಾನಗಿಯನ್ನು ರದ್ದು ಪಡಿಸಿರುವ ಷರತ್ತಿಗೊಳಪಡಿಸಿ ದಿನಾಂಕ:04-11-2009ರಂದು ಮಧ್ಯಂತರ ಆದೇವಿತ್ತಿರುತ್ತದೆ. ಈ ಬಗ್ಗೆ ಪರವಾನಗಿದಾರರು ಷರತ್ತುಗಳನ್ನು ಉಲ್ಲಂಘನೆ ಮಾಡಿರುವುದಾಗಿ ಅಬಕಾರಿ ನಿರೀಕ್ಷಕರು ದಿನಾಂಕ:18-12-2009 ಮತ್ತು 06-01-2010ರಂದು ವರದಿ ನೀಡಿರುತ್ತಾರೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಪರವಾನಗಿಯನ್ನು ರದ್ದು ಪಡಿಸದೆ ಅವರಿಗೆ ನೋಟೀಸ್ ಜಾರಿ ಮಾಡಿ ಉಲ್ಲಂಘನೆಗಳನ್ನು ಸರಿಪಡಿಸಿಕೊಳ್ಳುವಂತೆ ತಿಳಿಸಿರುವುದು ಕಂಡು ಬರುತ್ತದೆ. ನಂತರ ರಿಟ್ ಅಪೀಲು ಸಂಖ್ಯೆ:2570/2009ರಲ್ಲಿ ದಿನಾಂಕ:25-01-2011ರಂದು ಅಂತಿಮ ಆದೇಶ ನೀಡುತ್ತಾ, ಮಧ್ಯಂತರ ಆದೇಶವನ್ನು ವಜಾಗೊಳಿಸುತ್ತಾ, ಈ ಬಗ್ಗೆ ಆಯುಕ್ತರೇ ಕ್ರಮ ಕೈಗೊಳ್ಳುವ ಅಧಿಕಾರವನ್ನು ನೀಡಿರುವುದು ಕಡತದಲ್ಲಿ ಲಗತ್ತಿಸಿರುವ ನ್ಯಾಯಾಲಯದ ಆದೇಶದ ಪ್ರತಿಯಿಂದ ಕಂಡು ಬರುತ್ತದೆ.

ಅರ್ಜಿದಾರರಾದ ಶ್ರೀಮತಿ.ಪ್ರೇಮಾ ಕೃಷ್ಣಮೂರ್ತಿಯವರು ಅಧ್ಯಕ್ಷರು, ಸಾರ್ವಜನಿಕರ ಆರೋಗ್ಯ ಸ್ಥಾಯಿಸಮಿತಿ ಮತ್ತು ಅಪೀಲು ಸ್ಥಾಯಿ ಸಮಿತಿಯವರಿಗೆ ಅರ್ಜಿ ಸಲ್ಲಿಸಿ ಸದರಿ ಉದ್ದಿಮೆಯ ಆರೋಗ್ಯ ಪರವಾನಗಿಯನ್ನು ನವೀಕರಿಸದಂತೆ ಕೋರಕೊಂಡಿರುವುದು ಕಂಡು ಬರುತ್ತದೆ. ಸದರಿಯವರ ಮನವಿಯ ಮೇರೆಗೆ ಸದರಿ ಉದ್ದಿಮೆಯ ಪರವಾನಗಿಯನ್ನು ನವೀಕರಿಸದಂತೆ 2 ಸಮಿತಿಯವರು ಸಂಬಂಧಪಟ್ಟ ಅಧಿಕಾರಿಗಳಿಗೆ ಪತ್ರ ಬರೆದಿರುತ್ತಾರೆ.

ಈ ಬಗ್ಗೆ ಆರೋಗ್ಯಾಧಿಕಾರಿ ಪಶ್ಚಿಮರವರು ಉದ್ದಿಮೆಯ ಪರವಾನಗಿಯನ್ನು ನವೀಕರಿಸದಂತೆ ಎಲ್ಲಾ ಕಡೆಗೂ ಪತ್ರ ಬರೆಯಲಾಗಿರುತ್ತದೆ ಹಾಗೂ ಇದುವರೆವಿಗೂ ಸದರಿ ಉದ್ದಿಮೆಯ ಪರವಾನಗಿ ನವೀಕರಣದ ಬಗ್ಗೆ 3 ನವೀಕರಣದ ಘಟಕಗಳಿಂದಾಗಲೀ (ಎಫ್‌ಕೆಸಿಸಿಐ ಶೇಷಾದ್ರಿಪುರಂ) ಈ ಕಛೇರಿಗೆ ಪತ್ರ ಬಂದಿರುವುದಿಲ್ಲವೆಂದು ದಿನಾಂಕ:02-04-2011ರಂದು ಆರೋಗ್ಯ ಸ್ಥಾಯಿ ಸಮಿತಿಗೆ ತಿಳಿಸಿರುವುದನ್ನು ನೋಡಬಹುದಾಗಿರುತ್ತದೆ. ಹಾಗೂ ಅಪೀಲು ಸ್ಥಾಯಿ ಸಮಿತಿಯಲ್ಲಿ ನಡೆದ ಸಭೆಯಲ್ಲಿ ಸದರಿ ಮೇಲ್ಮನವಿ ತೀರ್ಮಾನವಾಗುವವರೆವಿಗೂ ಉದ್ದಿಮೆಯ ಪರವಾನಗಿಯನ್ನು ನವೀಕರಿಸುವುದಿಲ್ಲವೆಂದು ತಿಳಿಸಿರುತ್ತಾರೆ. ಈ ವಿಷಯವನ್ನು ಅಂದು ರೆಕಾರ್ಡ್ ಮಾಡಿರುವುದನ್ನು ಕಡತದಲ್ಲಿ ನೋಡಬಹುದಾಗಿರುತ್ತದೆ.

ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯು ಪರವಾನಗಿ ಇಲ್ಲದೆ ನಡೆಯುತ್ತಿದೆ ಹಾಗೂ ತುಂಬಾ ಗಲೀಜಾಗಿರುತ್ತದೆ, ಅಲ್ಲದೆ ತಳಮಹಡಿಯಲ್ಲೂ ರಾತ್ರಿ 11-00ಗಂಟೆಯವರೆಗೆ ರೆಸ್ಟೋರೆಂಟ್ ನಡೆಯುತ್ತಿರುತ್ತದೆಂದು ಶ್ರೀ.ಎಂ.ರಮೇಶ್ ಎಂಬುವವರು ದಿನಾಂಕ:20-06-2011ರಂದು ದೂರನ್ನು ಸಮಿತಿಗೆ ಸಲ್ಲಿಸಿರುತ್ತಾರೆ. ಸದರಿಯವರ ದೂರಿನನ್ವಯ ದಿನಾಂಕ:02-07-2011ರಂದು ತಪಾಸಣಾ ಕಾರ್ಯವನ್ನು ಹಮ್ಮಿಕೊಂಡು ಸಂಬಂಧಪಟ್ಟ ಅಧಿಕಾರಿಯವರಿಗೆ ತಪಾಸಣಾ ತಿಳುವಳಿಕೆ ಪತ್ರವನ್ನು ನೀಡಲಾಗಿತ್ತು. ಸದರಿಯವರು ಸಮಿತಿಗೆ ವರದಿ ನೀಡುತ್ತಾ, ಸದರಿ ಉದ್ದಿಮೆಯ ಪರವಾನಗಿ ನವೀಕರಣಗೊಂಡಿರುತ್ತದೆಂದು ಪರವಾನಗಿ ನವೀಕರಣಗೊಂಡಿರುವ ಬಗ್ಗೆ ಜೆರಾಕ್ಸ್ ಪ್ರತಿಯನ್ನು ಸಲ್ಲಸುತ್ತಾ, ನವ್ಯ ಬಾರ್

ಅಂಡ್ ರೆಸ್ಟೋರೆಂಟ್‌ರವರ ನ್ಯೂನ್ಯತೆಗಳ ಬಗ್ಗೆ ತಿಳುವಳಿಕೆ ಪತ್ರ ನೀಡಿರುತ್ತಾರೆ. ಸಮಿತಿಯ ತಪಾಸಣಾ ನೋಟೀಸ್‌ನ್ನು ಅವರಿಗೆ ನೀಡಿ ತಪಾಸಣೆಗೆ ಬರುವುದನ್ನು ಮೊದಲೇ ತಿಳಿಸಿ ನವ್ಯ ಬಾರ್ ಅಂಡ್ ರೆಸ್ಟೋರೆಂಟ್‌ರವರಿಗೆ ಸಹಕರಿಸುತ್ತಿರುವುದು ಕಂಡು ಬರುತ್ತದೆ. ಆದರೂ ಸಹ ನೆಲ ಮಾಳಿಗೆಯಲ್ಲಿ ಉದ್ದಿಮೆ ಕಾರ್ಯಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ ಸಮಿತಿಯು ಗಮನಿಸಿರುತ್ತದೆ. ಡೈನಿಂಗ್ ಟೇಬಲ್ ಜೋಡಿಸಿರುವುದು ಹಾಗೆ ಇರುತ್ತದೆ. ಮೊದಲೇ ಅವರಿಗೆ ತಿಳಿಸಿರುವುದರಿಂದ ಸಮಿತಿಯ ತಪಾಸಣೆ ಮಾಡುವ ವೇಳೆಗೆ ಆದಷ್ಟು ಸ್ವಚ್ಛವಾಗಿ ಇಟ್ಟು ನೆಲ ಮಾಳಿಗೆಯನ್ನು ಖಾಲಿ ಮಾಡಲು ಹವಣಿಸಿರುವುದು ಸ್ಪಷ್ಟವಾಗಿರುತ್ತದೆ.

ದಿನಾಂಕ:24-04-2009ರಲ್ಲಿ ರಿಟ್ ಪಿಟಿಷನ್ ಸಂಖ್ಯೆ:11133/2009ರಲ್ಲಿ ನ್ಯಾಯಾಲಯವು ನೀಡಿದ ಆದೇಶದ ಮೇಲೆ ಆಯುಕ್ತರು ಸದರಿ ಉದ್ದಿಮೆಯನ್ನು ಮುಚ್ಚವಂತೆ ದಿನಾಂಕ:7-5-2009ರಂದು ಆದೇಶಿಸಿರುವ ಮೇರೆಗೆ ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ)ವಲಯರವರು ದಿನಾಂಕ:14-05-2009ರಂದು ಮಧ್ಯಾಹ್ನ 3-30ಗಂಟೆಗೆ ಪೋಲಿಸ್ ಇಲಾಖೆಯ ಸಹಾಯ ಪಡೆದು ಬೀಗ ಹಾಕಿರುತ್ತಾರೆ. ಆದರೆ ಜಂಟಿ ಆಯುಕ್ತರು ಯಾವುದೇ ಆದೇಶವನ್ನು ಪಡೆಯದೆ ಹೊಸದಾಗಿ ಉದ್ದಿಮೆ ಪರವಾನಗಿಯನ್ನು ನೀಡಿರುವುದರಿಂದ ಉದ್ದಿಮೆದಾರರು ಬೀಗ ಹಾಕಿರುವುದನ್ನು ತೆರವುಗೊಳಿಸಿಕೊಂಡಿರುತ್ತಾರೆ. ಈ ಪ್ರಕರಣದಲ್ಲಿ ಹೊಸದಾಗಿ ಪರವಾನಗಿ ಮಾಡಿರುವುದೇ ಕಾನೂನು ಬಾಹಿರವಾಗಿರುತ್ತದೆ.

ಇನ್ನು ನವೀಕರಿಸಿರುವ ಬಗ್ಗೆ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಾಗೂ ಘನ ನ್ಯಾಯಾಲಯವು ರಿಟ್ ಅಪೀಲ್‌ನಲ್ಲಿ ನೀಡಿರುವ ಮಧ್ಯಂತರ ಆದೇಶದ ರೀತ್ಯ ಈಗಲೂ ಸಹ ಸಮಿತಿಗೆ ವರದಿ ನೀಡಿರುವ ಪ್ರಕಾರ ಪರವಾನಗಿ ನವೀಕರಿಸಿರುವುದು ತನ್ನಷ್ಟಕ್ಕೆ ತಾನೇ ರದ್ದುಗೊಂಡಂತ್ತಾಗುತ್ತದೆ.

**<u>ನಿರ್ಣಯ:</u>**-ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸಮಿತಿಯು ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯು ಪರವಾನಗಿ ಇಲ್ಲದೇ ನಡೆಯುತ್ತಿರುವುದಾಗಿ ಭಾವಿಸುತ್ತದೆ. ಅಲ್ಲದೆ ಸ್ವತ್ತಿನ ಗುತ್ತಿಗೆಯು ಬೇರೆಯವರ ಹೆಸರಿನಲ್ಲಿದ್ದು ಉದ್ದಿಮೆಯ ಪರವಾನಗಿಯು ಇನ್ನೊಬ್ಬರ ಹೆಸರಿನಲ್ಲಿರುವುದು ಈ ಪ್ರಕರಣದಲ್ಲಿ ಸ್ಪಷ್ಟವಾಗಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈ ವಿಷಯವನ್ನು ಗಣನೆಗೇ ತೆಗೆದುಕೊಂಡಿಲ್ಲದೆ ಕೆ.ಎಂ.ಸಿ.ಕಾಯ್ದೆಯನ್ನು ಗಾಳಿಗೆ ತೂರಿದ್ದು, ಆಯುಕ್ತರು ಆದೇಶ ನೀಡಿ ಸೀಜ್ ಮಾಡಿರುವ ಉದ್ದಿಮೆಯನ್ನು ಆಯುಕ್ತರ ಕೆಳಹಂತದ ಅಧಿಕಾರಿಗಳು ಆಯುಕ್ತರಿಂದ ಆದೇಶ ಪಡೆಯದೆ ತೆರೆಯಲು ಅವಕಾಶ ಮಾಡಿಕೊಟ್ಟಿರುತ್ತಾರೆ. ಮೇಲ್ಮನವಿದಾರರು ದಿನಾಂಕ:09-08-2011ರಂದು ಸಲ್ಲಿಸಿರುವ ಮನವಿಯಲ್ಲಿನ ಅಡಕಗಳನ್ನು ಪರಿಶೀಲಿಸಿದಾಗ ಆರೋಗ್ಯ ವೈದ್ಯಾಧಿಕಾರಿ (ರಾಜಾಜಿನಗರ) ಉಪ ಆರೋಗ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿ(ಪಶ್ಚಿಮ)ರವರ ಶೀಪಾರಸ್ಸನ್ನು ಪಡೆಯದೆ ಸದರಿ ಉದ್ದಿಮೆಯ ಪರವಾನಗಿಯನ್ನು ಮಾನ್ಯ ಶ್ರೀ.ಶ್ರೀರಾಮರೆಡ್ಡಿ, ಕೆ.ಎ.ಎಸ್. ಅಪರ ಆಯುಕ್ತರು (ಪಶ್ಚಿಮ)ರವರು ಶ್ರೀ.ಜಿ.ದಯಾನಂದ್‌ರವರಿಗೆ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯನ್ನು ನಡೆಸಲು ಪರವಾನಗಿಯನ್ನು ಮಂಜೂರು ಮಾಡಿಕೊಟ್ಟಿರುತ್ತಾರೆಂದು ಹಾಗೂ ಸದರಿ ಉದ್ದಿಮೆಯ ಪರವಾನಗಿಯನ್ನು ನವೀಕರಿಸಬಾರದಾಗಿತ್ತೆಂದು ತಿಳಿಸಿರುತ್ತಾರೆ. ನಂತರ ಜಂಟಿ ಆಯುಕ್ತರು (ಪಶ್ಚಿಮ)ರವರು ಕಾನೂನಿನಂತೆ ಕ್ರಮ ವಹಿಸುವಂತೆ ದಿನಾಂಕ:08-08-2011ರಂದು ಆರೋಗ್ಯಾಧಿಕಾರಿ (ಪಶ್ಚಿಮ)ರವರಿಗೆ ನಿರ್ದೇಶನ ನೀಡಿರುತ್ತಾರೆ. ಆದರೆ ಇದುವರೆವಿಗೂ ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ಗಮನಿಸಿದಾಗ ಸಂಬಂಧಪಟ್ಟ ಅಧಿಕಾರಿಗಳು ಕೆ.ಎಂ.ಸಿ. ಕಾಯ್ದೆಗೆ ವಿರುದ್ಧವಾಗಿ ಕಾರ್ಯನಿರ್ವಹಿಸಿತ್ತಿರುವುದಾಗಿ ಸಮಿತಿಯು ಅಭಿಪ್ರಾಯ ಪಡುತ್ತಾ, ನವ್ಯ ಬಾರ್ ಅಂಡ್ ರೆಸ್ಟೋರೆಂಟ್ ಉದ್ದಿಮೆಯ ಪರವಾನಗಿಯನ್ನು ರದ್ದು ಪಡಿಸುವ ಬಗ್ಗೆ ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>02.ವಿಷಯ:ಸಂಖ್ಯೆ:ಅಸ್ಥಾಸ/(ಆ)/45/2010-11</u>

ಶ್ರೀ.ಸಿ.ಪಯಾಜ್ ಪಾಷ, ನಂ.22/68 ಬಿ ಉಕ್ಬಾ ಮಸೀದಿ ರಸ್ತೆ, ಹೋಲಿ ಕ್ರೈಸ್ಟ್ ಶಾಲೆ ಎದುರು, ಅಶ್ವಥ್ಥನಗರ, ಥಣೀಸಂದ್ರ, ಬೆಂಗಳೂರು-77 ಇಲ್ಲಿ ನಡೆಯುತ್ತಿರುವ ಉದ್ದಿಮೆಯ ಪರವಾನಗಿಯನ್ನು ರದ್ದುಗೊಳಿಸುವಂತೆ ಆರೋಗ್ಯ ವೈದ್ಯಾಧಿಕಾರಿ (ಬ್ಯಾಟರಾಯನಪುರ)ರವರು ದಿನಾಂಕ:12-10-2011ರಂದು ನೀಡಿರುವ ನೋಟೀಸಿನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

**<u>ನಿರ್ಣಯ</u>**:- ಮೇಲ್ಮನವಿದಾರರು ನಡೆಸುತ್ತಿದ್ದ ಹೆಚ್‌ಎಂಎಸ್ ಇಂಜನಿಯರಿಂಗ್ ವರ್ಕ್ಸ್ ನಾಮಾಂಕಿತದ ವೆಲ್ಡಿಂಗ್ ಉದ್ದಿಮೆಯನ್ನು ಮುಚ್ಚಿರುವುದರಿಂದ ಪ್ರಕರಣವನ್ನು ಮುಕ್ತಾಯಗೊಳಿಸುವುದೆಂದು ದಿನಾಂಕ:03-10-2011ರ ಆಯುಕ್ತರ ಟಿಪ್ಪಣಿಯಲ್ಲಿ ತಿಳಿಸಿರುವ ಹಿನ್ನೆಲೆಯಲ್ಲಿ ಪ್ರಕರಣವನ್ನು ಮುಕ್ತಾಯಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/11/2011-12</u>

ಶ್ರೀ.ಗುರುವಾಯೂರ ಪುರಪತಿ ಸೇವಾ ಮಂದಿರ ಟ್ರಸ್ಟ್, ನಂ.1, ಕೈಗಾರಿಕಾ ಸಬ್‌ರಬ್, ವಾರ್ಡ್-44 (ಹಳೆಯವಾರ್ಡ್-10) ಈ ಸ್ವತ್ತಿಗೆ ಕಂದಾಯ ನಿಗಧಿಪಡಿಸಿರುವ ಬಗ್ಗೆ ಆಕ್ಷೇಪಣೆ ವ್ಯಕ್ತಪಡಿಸಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-06-2011ರ ಟಿಪ್ಪಣಿ.

**<u>ನಿರ್ಣಯ:</u>**- ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:22-10-2011ರಂದು ಸ್ಥಳ ಪರಿಶೀಲನೆ ಮಾಡಿದಾಗ ಕಟ್ಟಡವು ಹಳೆಯ ಕಟ್ಟಡವಾಗಿರುವುದು ಹಾಗೂ ಮೇಲ್ಮನವಿದಾರರು ತಿಳಿಸಿರುವ ಅಳತೆಗಿಂತ ಹೆಚ್ಚು ಅಳತೆ ಇರುವುದು ಕಂಡು

ಬಂದಿರುತ್ತದೆ. ಅಲ್ಲದೆ ಮೇಲ್ಮನವಿದಾರರು ಕಂದಾಯವನ್ನು ಕಡಿಮೆ ಮಾಡಿಕೊಡುವಂತೆ ಕೋರಿಕೊಂಡಿರುತ್ತಾರೆಯೇ ವಿನಃ ಸಂಬಂಧಪಟ್ಟ ಅಧಿಕಾರಿಗಳು ನಿಗಧಿಪಡಿಸಿರುವ ಕಂದಾಯವು ಯಾವ ರೀತಿಯಲ್ಲಿ ಸರಿ ಇರುವುದಿಲ್ಲವೆಂಬ ಬಗ್ಗೆ ಯಾವುದೇ ದಾಖಲೆಗಳನ್ನು ಸಲ್ಲಿಸಲು ವಿಫಲರಾಗಿರುತ್ತಾರೆ. ಅಲ್ಲದೆ ಸ್ವತ್ತಿಗೆ ಸಂಬಂಧಪಟ್ಟಂತ ಮೂಲ ದಾಖಲೆಗಳನ್ನು ಒದಗಿಸಲು ತಿಳಿಸಿದಾಗ್ಯೂ ಒದಗಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದಾಗಿ ಈಗಾಗಲೇ ಪ್ರಥಮ ಅಪೀಲು ಅಧಿಕಾರಿಗಳು ಸ್ಥಿರೀಕರಿಸಿರುವ ಕಂದಾಯವನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>04.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12</u>
ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ಪರವಾಗಿ ಹಾಜರಿರುವ ವಕೀಲರಿಗೆ ವಕಾಲತ್ತು ಸಲ್ಲಿಸಲು ಅಧಿಕಾರವ ನೀಡಿ ಕಾಲಾವಕಾಶ ಕೋರಿಕೊಂಡಿರುವ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

<u>05.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11</u>
ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

**<u>ಪ್ರಸ್ತಾವನೆ:</u>**-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು ಕಾಲಾವಕಾಶ ಕೋರಿಕೊಂಡಿರುತ್ತಾರೆ. ಇತರೆ ಪ್ರತಿವಾದಿಗಳು ತಮ್ಮ ವಕೀಲರೊಂದಿಗೆ ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಿದೆ.

<u>06.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12</u>
ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುವುದಿಲ್ಲ. ಪ್ರತಿವಾದಿಗಳಿಗೆ ಹೊಸದಾಗಿ ನೋಟೀಸ್‌ನ್ನು ನೀಡುವುದೆಂದು ನೀಡುವುದು. ಹಾಗೂ ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ನೋಟೀಸ್ ಜಾರಿ ಮಾಡಲು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12</u>
ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ:

01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಹಾಜರಾಗಿದ್ದು ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಿರುವ ಬಗ್ಗೆ ಸ್ವೀಕೃತಿಯನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ. ಆದುದರಿಂದ ಮೇಲ್ಮನವಿದಾರರಿಗೆ ಹೊಸದಾಗಿ ನೋಟೀಸ್ ನೀಡುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

08.ವಿಷಯ:ಸಂಖ್ಯೆ:ಅಸ್ಥಾಸ/(ತೆ)/25/2011-12

ರಾಜ್ಯಾಧ್ಯಕ್ಷರು, ದಲಿತ ಸಂಘರ್ಷ ಸಮಿತಿ (ರಿ), ನಂ.19, ಎ.ಕೆ.(ನ್ಯೂ) ಕಾಲೋನಿ, ಕಾಕ್ಸ್ ಟೌನ್, ಜೀವನಹಳ್ಳಿ, ಬೆಂಗಳೂರು-05 ಇವರಿಗೆ ಸುಭಾಶ್‌ನಗರ ವಾಣಿಜ್ಯ ಸಂಕೀರ್ಣದಲ್ಲಿ ಮಳಿಗೆ ಸಂಖ್ಯೆ:01ನ್ನು ಹಂಚಿಕೆ ಮಾಡಿದ್ದು, ಸದರಿ ಮಳಿಗೆಗೆ ಚದರಡಿ ಒಂದಕ್ಕೆ ರೂ.15/-ಗಳಂತೆ ನಿಗಧಿಪಡಿಸಿ 100 ಚದರಡಿಗೆ ರೂ.1500/-ಗಳಂತೆ ನಿಗಧಿಪಡಿಸಿ ದಿನಾಂಕ:21-03-2011ರಂದು ಹಿಂಬರಹ ನೀಡಿದ್ದು, ಸದರಿ ಹಿಂಬರಹಕ್ಕೆ ಉತ್ತರವಾಗಿ ಸದರಿ ಸಂಸ್ಥೆಯವರು ಮಾನ್ಯ ಮುಖ್ಯ ಮಂತ್ರಿರವರಿಗೆ ಬಾಡಿಗೆಯನ್ನು ಕಡಿಮೆ ಮಾಡಲು ಕೋರಿದ್ದು, ಮಾನ್ಯ ಮುಖ್ಯ ಮಂತ್ರಿಯವರ ಕಾರ್ಯದರ್ಶಿಯವರು ದಿನಾಂಕ:07-04-2011ರಂದು ಪತ್ರ ಬರೆದು ಸದರಿ ಸಂಸ್ಥೆಗೆ ಬಾಡಿಗೆ ಕಡಿಮೆ ನಿಗಧಿಪಡಿಸಿಕೊಡುವಂತೆ ತಿಳಿಸಿರುವ ಮೇರೆಗೆ ತೀರ್ಮಾನಕ್ಕಾಗಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:23-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರಾದ ಶ್ರೀ.ಚಂದ್ರಯ್ಯ, ಅಧ್ಯಕ್ಷರು ಹಾಜರಿರುತ್ತಾರೆ. ಸಹಾಯಕ ಕಂದಾಯ ಅಧಿಕಾರಿಯವರು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಬಾಡಿಗೆಯನ್ನು ಕಡಿಮೆ ಮಾಡಿಕೊಡುವಂತೆ ಕೋರಿಕೊಂಡಿರುತ್ತಾರೆ. ಶ್ರೀ.ಪ್ರದೀಪ್ ಕುಮಾರ್, ಕಂದಾಯ ಪರಿವೀಕ್ಷಕರು ತಡವಾಗಿ ಹಾಜರಿದ್ದು ಈಗ ನಿಗಧಿಪಡಿಸಿರುವ ಬಾಡಿಗೆಯನ್ನು ಕಾನೂನಿನಂತೆ ನಿಗಧಿಪಡಿಸಿದ್ದು, ಅದನ್ನೆ ಮುಂದುವರೆಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಮೇಲ್ಮನವಿದಾರರು ತಮ್ಮ ಸೋಸೈಟಿಯು ದುರ್ಬಲವರ್ಗದವರಿಗಾಗಿ ಸೇವೆ ಸಲ್ಲಿಸುತ್ತಿದ್ದು ಕಂದಾಯವನ್ನು ಕಡಿಮೆ ಮಾಡಿಕೊಡಬೇಕೆಂದು ಮತ್ತೊಮ್ಮೆ ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆಗಾಗಿ ಮತ್ತು ಆದೇಶಕ್ಕಾಗಿ ಕಾಯ್ದಿರಿಸಿದೆ.

**ನಿರ್ಣಯ:-** ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:22-10-2011ರಂದು ಸ್ಥಳ ಹಾಗೂ ಆಯುಕ್ತರ ದಿನಾಂಕ:23-08-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಈಗಾಗಲೇ ಆಯುಕ್ತರು ಲೋಕೋಪಯೋಗಿ ಇಲಾಖೆಯಲ್ಲಿರುವ ದರಕ್ಕಿಂತ ಕಡಿಮೆ ನಿಗಧಿಪಡಿಸಿರುವುದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ಮಳಿಗೆಯ ಬಾಡಿಗೆಯನ್ನು ಕಡಿಮೆ ಮಾಡುವುದು ಸಮಂಜಸವಾಗಿಲ್ಲದಿರುವುದರಿಂದ ಹಾಲಿ ನಿಗಧಿಪಡಿಸಿರುವ ಬಾಡಿಗೆಯನ್ನು ಸ್ಥಿರೀಕರಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

09. ವಿಷಯ:ಸಂಖ್ಯೆ:ಅಸ್ಥಾಸ/(ಆ)/29/2011-12

ಮೆ॥ಹಾರ್ಡ್ ಕಾಸ್ಟ್ಲ್ ರೆಸ್ಟೋರೆಂಟ್ ಪ್ರೈ.ಲಿ., ರವರು ನಂ.2466, 24ನೇ ಕ್ರಾಸ್, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು-70 ಇಲ್ಲಿ ಎ/ಸಿ ರೆಸ್ಟೋರೆಂಟ್ ನಡೆಸಲು ಉದ್ದಿಮೆ ಪರವಾನಗಿಯನ್ನು ಕೋರಿ ದಿನಾಂಕ:27-06-2011ರಂದು ಅರ್ಜಿ ಸಲ್ಲಿಸಿದ್ದು, ಸದರಿಯವರ ಅರ್ಜಿಯನ್ನು ಪರಿಶೀಲಿಸಿದ ನಂತರ 2011-12ನೇ ಸಾಲಿನ ಕದಾಯ ರಶೀದಿ ಮತ್ತು ವಸತಿಯೇತರ ಖಾತ ನಕಲು ಸಲ್ಲಿಸುವಂತೆ ದಿನಾಂಕ:30-06-2011ರಂದು ಉಪ ಆರೋಗ್ಯಾಧಿಕಾರಿ(ದಕ್ಷಿಣ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿ ವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಪರವಾನಗಿ ಕೋರಿ ಅರ್ಜಿ ಸಲ್ಲಿಸಿದ್ದು ಪರವಾನಗಿಯನ್ನು ನೀಡಿರುವುದಿಲ್ಲದಿರುವುದರಿಂದ ಮೇಲ್ಮನವಿದಾರರು ಅಪೀಲು ಸ್ಥಾಯಿ ಸಮಿತಿಯ ಮುಂದೆ ಅಪೀಲು ಸಲ್ಲಿಸಿಕೊಂಡಿರುವ ಮೇರೆಗೆ ಮಧ್ಯಂತರ ಆದೇಶವನ್ನು ಜಾರಿಗೊಳಿಸಲಾಗಿರುತ್ತದೆ. ಆದಾಗ್ಯೂ ಸಹ ವೈದ್ಯಾಧಿಕಾರಿಯವರು ಪರವಾನಗಿ ನೀಡುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಆದುದರಿಂದ ನಮಗೆ ಪರವಾನಗಿಯನ್ನು ನೀಡುವಂತೆ ಆದೇಶಿಸಬೇಕೆಂದು ಕೋರಿಕೊಂಡಿರುತ್ತಾರೆ.

ಹಾಜರಿದ್ದ ಪ್ರತಿವಾದಿಗಳು ಕಾಮಗಾರಿ ಇಲಾಖೆಯವರು ಸದರಿ ಕಟ್ಟಡಕ್ಕೆ ಯಾವುದೇ ಪರವಾನಗಿಯನ್ನು ನೀಡಬಾರದೆಂದು ಸುತ್ತೋಲೆಯ ಮುಖಾಂತರ ತಿಳಿಸಿರುವ ಮೇರೆಗೆ ಮೇಲ್ಮನವಿದಾರರಿಗೆ ಹಿಂಬರಹ ನೀಡಲಾಗಿರುತ್ತದೆ. ಸದರಿ ಹಿಂಬರಹದ ವಿರುದ್ಧ ನಿಮ್ಮ ಮುಂದೆ ಮೇಲ್ಮನವಿದಾರರು ಕೋರಿಕೊಂಡಾಗ ಮಧ್ಯಂತರ ಆದೇಶವನ್ನು ನೀಡಲಾಗಿರುತ್ತದೆ. ಈ ಮಧ್ಯೆ ಮೇಲ್ಮನವಿದಾರರು ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್.ಸಂಖ್ಯೆ:6419/2011ನ್ನು ದಾಖಲಿಸಿ ಮಧ್ಯಂತರ ತಡೆಯಾಜ್ಞೆ ಪಡೆದುಕೊಂಡಿರುತ್ತಾರೆ. ಆದೇಶಕ್ಕಾಗಿ ಕಾಯ್ದಿರಿಸಿದೆ.

10. ವಿಷಯ:ಸಂಖ್ಯೆ:ಅಸ್ಥಾಸ/(ತೆ/30/2011-12

ಶ್ರೀ.ಸಿ.ಲೋಕೇಶ್‌ರವರು ಮಾಗಡಿ ಮುಖ್ಯರಸ್ತೆ, ಕೆ.ಹೆಚ್.ಬಿ.ಕಾಲೋನಿಯ ಬಸ್ ನಿಲ್ದಾಣದ ಶೌಚಾಲಯದ ಪಕ್ಕದಲ್ಲಿನ 10 ಅಡಿಗಳ ಖಾಲಿ ನಿವೇಶವನ್ನು ತಿಂಗಳಿಗೆ ರೂ.1000/-ಗಳ ಆದಾರದ ಮೇಲೆ ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಹಣವನ್ನು ಏಕಾಏಕಿ ರೂ.2009/-ಗಳಿಗೆ ಹೆಚ್ಚಿಸಿ ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ)ಇವರು ದಿನಾಂಕ:25-05-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರರವರ ದಿನಾಂಕ:07-09-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು, ಪ್ರತಿ ವಾದಿಗಳು ಗೈರು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ನಿಗಧಿಪಡಿಸಿರುವ ಬಾಡಿಗೆ ದುಭಾರಿಯಾಗಿರುತ್ತದೆ. ಸದರಿ ಬಾಡಿಗೆಯನ್ನು ಕಡಿಮೆ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಉಪ ಆಯುಕ್ತರು (ಆಸ್ತಿಗಳು)ರವರು ಈಗ ಬಾಡಿಗೆಯನ್ನು ಸರ್ಕಾರದ ಮಾರ್ಗಸೂಚಿಯಂತೆ ನಿಗಧಿಪಡಿಸಲಾಗಿರುತ್ತದೆ. ಹಾಗೂ ಬಾಡಿಗೆಯನ್ನು ನಿಗಧಿಪಡಿಸಿ ನೀಡಿರುವ ಆದೇಶವು ಸಮಂಜಸವಾಗಿರುವುದರಿಂದ ಸದರಿ ನಿಗಧಿಪಡಿಸಿರುವ ಬಾಡಿಗೆಯನ್ನೇ ಸ್ಥಿರೀಕರಿಸುವಂತೆ ತಿಳಿಸಿರುತ್ತಾರೆ. ಆದೇಶಕ್ಕಾಗಿ ಕಾಯ್ದಿರಿಸಿದೆ.

11. ವಿಷಯ:ಸಂಖ್ಯೆ:ಅಸ್ಥಾಸ/(ತೆ/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ॥ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟ್ರನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ॥ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಸ್ಟಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಫ್ಯಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ॥ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಪ್ರತಿ ವಾದಿಗಳು ಹಾಜರಿದ್ದು, ಮೇಲ್ಮನವಿದಾರರಿಗೆ ನೋಟೀಸ್ ಜಾರಿ ಮಾಡಿರುವ ಬಗ್ಗೆ ಸ್ವೀಕೃತಿಯನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ. ಆದುದರಿಂದ ಪ್ರತಿವಾದಿಗಳಿಗೆ ಹೊಸದಾಗಿ ನೋಟೀಸ್ ನೀಡುವಂತೆ ಸೂಚಿಸಿ ಪ್ರಕರಣವನ್ನು ಮುಂದೂಡಲಾಯಿತು.

12. ವಿಷಯ:ಸಂಖ್ಯೆ:ಅಸ್ಥಾಸ/(ತೆ/32/2011-12

ಶ್ರೀ. ಯೋಗೇಶ್ ದೇಸಾಯಿ, ಉಪಾಧ್ಯಕ್ಷರು, ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಶಾಂಪಿಂಗ್ ಕಾಂಪ್ಲೆಕ್ಸ್ ಟ್ರೇಡರ್ಸ್ ಅಸೋಸಿಯೇಷನ್ (ರಿ), ರವರು ದಿನಾಂಕ:19-08-2011ರಂದು ಮೇಲ್ಮನವಿ ಸಲ್ಲಿಸಿ ಪಿ.ಯು.ಬಿ.ಯಲ್ಲಿ ಸುಮಾರು 75 ಅಂಗಡಿಗಳನ್ನು ಹೊಂದಿದ್ದು, ನಗರ ಪಾಲಿಕೆಯು ಕಾಲಕಾಲಕ್ಕೆ ವಿಧಿಸುವ ಬಾಡಿಗೆಯನ್ನು ಪಾವತಿಸಿಕೊಂಡು ಬರುತ್ತಿದ್ದೆವು. ಆದರೆ 2006ರಲ್ಲಿ ನಮಗೆ ಯಾವುದೇ ಅವಕಾಶವನ್ನು ನೀಡದೆ ಅಂಗಡಿಗಳ ಬಾಡಿಗೆಯನ್ನು ಸುಮಾರು ಶೇಕಡಾ 600ರಷ್ಟು ಹೆಚ್ಚಿಸಿ 2008ರಲ್ಲಿ ಹೆಚ್ಚಿಸಿರುವ ಬಾಡಿಗೆಯನ್ನು ಪಾವತಿಸುವಂತೆ ನೋಟಿಸ್ ನೀಡಲಾಗಿತ್ತು. ಸದರಿ ನೋಟಿಸ್‌ನ್ನು ಪ್ರಶ್ನಿಸಿ ನಾವುಗಳು ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದು, ನ್ಯಾಯಾಲಯವು ದಿನಾಂಕ:23-06-2010ರಂದು ಆದೇಶ ನೀಡಿ ಪ್ರತಿ ವಾದಿಗಳು 1 ತಿಂಗಳೊಳಗಾಗಿ ವಾದಿಗಳಿಗೆ ನೋಟೀಸ್ ನೀಡಿ ಅವರ ಹೇಳಿಕೆಯನ್ನು ಪಡೆದು ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ತಿಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಇದುವರೆವಿಗೂ ನಮಗೆ ಯಾವುದೇ ನೋಟೀಸ್ ನೀಡಿ ಹೇಳಿಕೆಗಳನ್ನು ಪಡೆದಿರುವುದಿಲ್ಲ ಹಾಗೂ ಅಂಗಡಿ ಬಾಡಿಗೆಯನ್ನು ನಿಗಧಿಪಡಿಸಿಕೊಟ್ಟಿರುವುದಿಲ್ಲ. ಆದ್ದರಿಂದ ನಮಗೆ ಹೇಳಿಕೆಯನ್ನು ನೀಡಲು ಅವಕಾಶ ನೀಡಿ ಅಂಗಡಿಗಳಿಗೆ ನ್ಯಾಯಯುತವಾದ ಬಾಡಿಗೆಯನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುವ ಮೇರೆಗೆ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಕಟ್ಟಡದ ದರ ಪರಿಷ್ಕರಣೆ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:07-10-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ನಮಗೆ ಯಾವುದೇ ನೋಟೀಸ್ ನೀಡದೆ ಮತ್ತು ನಮಗೆ ಹೇಳಿಕೆಯನ್ನು ನೀಡಲು ಅವಕಾಶ ನೀಡದೆ ಮಳಿಗೆಗಳ ಬಾಡಿಗೆಯನ್ನು ಹೆಚ್ಚಿಸಿರುತ್ತಾರೆ. ಈ ಬಗ್ಗೆ ನಾವು ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದೆವು ನ್ಯಾಯಾಲಯವು ಸದರಿ ವಿಷಯವನ್ನು ನಗರ ಪಾಲಿಕೆಗೆ ಹಿಂದಿರುಗಿಸುತ್ತಾ, ಹೊಸದಾಗಿ ಮೇಲ್ಮನವಿದಾರರ ಮನವಿಯನ್ನು ಪರಿಶೀಲಿಸುವಂತೆ ತಿಳಿಸಿರುತ್ತದೆ. ನಾವು ಶೇಕಡ 25%ರಷ್ಟು ಭಾಡಿಗೆಯನ್ನು ಹೆಚ್ಚು ಕೊಡಲು ಸಿದ್ದರಿರುತ್ತೇವೆ. ಕಟ್ಟಡವೆಲ್ಲಾ ಸೋರುತ್ತಿರುತ್ತದೆ, ಸರಿಯಾದ ಗಾಳಿ ಬೆಳಕು ಇರುವುದಿಲ್ಲ ಮಳಿಗೆಗಳಿಗೆ ಬರುವ ಸಾರ್ವಜನಿಕರಿಗೆ ಸರಿಯಾದ ರಸ್ತೆಗಳಿಲ್ಲದಿರುವುದರಿಂದ ಹಾಗೂ ಮೆಟ್ರೋ ಕಾಮಗಾರಿ ನಡೆಯುತ್ತಿರುವುದರಿಂದ ನಮ್ಮ ವ್ಯಾಪಾರಕ್ಕೆ ತೊಂದರೆಯಾಗಿರುತ್ತದೆ. ಕಟ್ಟಡವನ್ನು ಸರಿಯಾದ ರೀತಿಯಲ್ಲಿ ದುರಸ್ಥಿಗೊಳಿಸಿ ಎಲ್ಲಾ ವ್ಯವಸ್ಥೆಗಳನ್ನು ಒದಗಿಸಿದಲ್ಲಿ ಬಾಡಿಗೆಯನ್ನು ಪಾವತಿಸಲು ಸಿದ್ಧರಿರುತ್ತೇವೆ. ಹಾಗೂ ಇದುವರೆವಿಗೂ ಯಾವುದೇ ಬಾಡಿಗೆಯನ್ನು ನಿಲ್ಲಿಸದೆ ಪ್ರತಿ ತಿಂಗಳು ಪಾವತಿಸಿಕೊಂಡು ಬಂದಿರುತ್ತೇವೆ. ಆದ್ದರಿಂದ ಈಗ ನಿಗಧಿಪಡಿಸಿರುವ ಕಂದಾಯವನ್ನು ಪಾವತಿಸಲು ನಮಗೆ ಸಾಧ್ಯವಾಗುತ್ತಿಲ್ಲವಾದ್ದರಿಂದ ನಮ್ಮ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿ ಕಾನೂನು ಬದ್ಧ ಬಾಡಿಗೆಯನ್ನು ನಿಗಧಿಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ.

ಹಾಜರಿದ್ದ ಪ್ರತಿವಾದಿಗಳು ಕಾನೂನಿನಂತೆ ಕಂದಾಯವನ್ನು ನಿಗಧಿಪಡಿಸಲಾಗಿರುತ್ತದೆ. ಸದರಿ ಕಂದಾಯವನ್ನು ಮೇಲ್ಮನವಿದಾರರು ಪಾವತಿಸಿದೆ ಅಪೀಲು ಸಲ್ಲಿಸಿರುತ್ತಾರೆ. ಅಪೀಲಿನ ನಿರ್ಣಯದಂತೆ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ.

ನಿರ್ಣಯ:- ಆಯುಕ್ತರ ದಿನಾಂಕ:07-10-2011ರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಆಯುಕ್ತರ ಟಿಪ್ಪಣಿಯಲ್ಲಿ ಮಹಾತ್ಮಗಾಂಧಿ ರಸ್ತೆಯಲ್ಲಿರುವ ಖಾಸಗಿ ಸ್ವತ್ತಿನ ಸಂಖ್ಯೆ:25/2ರ ಕಟ್ಟಡದ ಬಾಡಿಗೆಯನ್ನು ಹೋಲಿಕೆ ಮಾಡಿ ಪಬ್ಲಿಕ್ ಯುಟಿಲಿಟಿ ಬಿಲ್ಡಿಂಗ್ ಶಾಂಪಿಂಗ್ ಕಾಂಪ್ಲೆಕ್ಸ್‌ನಲ್ಲಿರುವ ಮಳಿಗೆಗಳಿಗೆ ಬಾಡಿಗೆ ನಿಗಧಿಪಡಿಸಿರುವುದು ಕಂಡು ಬರುತ್ತದೆ. ಹಾಗೂ 1ನೇ ಅಂತಸ್ತಿನಲ್ಲಿರುವ ಮಳಿಗೆಗಳ ಬಗ್ಗೆ ಯಾವುದೇ ಮಾಹಿತಿಯನ್ನು ಟಿಪ್ಪಣಿಯಲ್ಲಿ ಒದಗಿಸಿರುವುದಿಲ್ಲ. ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಿದಾಗ ದಿನಾಂಕ:30-10-2006ರ ಮಹಾನಗರ ಪಾಲಿಕೆಯ ಸಭೆಯ ನಿರ್ಣಯದಲ್ಲಿ ಸುಭಾಷ್‌ಚಂದ್ರ ಬೋಸ್ ವಾಣಿಜ್ಯ ಸಂಕೀರ್ಣ (ಪಿಯುಬಿ) ಪಾಲಿಕೆಯ ಪ್ರಮುಖ ಆಸ್ತಿಯಾಗಿದ್ದು, ಈ ಕಟ್ಟಡದಿಂದ ಹೆಚ್ಚಿನ ಆದಾಯ ತರುವ ದೃಷ್ಟಿಯಿಂದ ಈ ಕಟ್ಟಡವನ್ನು ಸಂಪೂರ್ಣವಾಗಿ ನವೀಕರಣಗೊಳಿಸಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ ನಂತರ ಪ್ರಸಕ್ತ ಮಾರುಕಟ್ಟೆ ದರದಲ್ಲಿ ಕಂದಾಯ ಹಾಗೂ ಪರವಾನಗಿ ಶುಲ್ಕವನ್ನು ಪಾರದರ್ಶಕ ಕಾಯ್ದೆಯನ್ವಯ ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ತೀರ್ಮಾನಿಸಲಾಗಿರುತ್ತದೆ. ಆದರೆ ಸದರಿ ಮಹಾನಗರ ಪಾಲಿಕೆಯ ತೀರ್ಮಾನವನ್ನು ಜಾರಿಗೊಳಿಸದೆ ಆಯುಕ್ತರೇ ಮಾರ್ಪಾಡು ಮಾಡಿಕೊಂಡು ದಿನಾಂಕ:02-07-2007ರಂದು ಆಡಳಿತಗಾರರ ಮುಂದೆ ಮಂಡಿಸಿ 30-10-2006ರ ನಗರ ಪಾಲಿಕೆ ಸಭೆಯ ತೀರ್ಮಾನವನ್ನು ಮಾರ್ಪಡಿಸಿಕೊಂಡಿರುವುದು ಕಂಡುಬರುತ್ತದೆ. ಸಂವಿಧಾನ (74ನೇ ತಿದ್ದುಪಡಿ) ಅಧಿನಿಯಮ, 1992ರಲ್ಲಿ ಜನ ಪ್ರತಿನಿಧಿಗಳಿಗೆ ಹೆಚ್ಚಿನ ಅಧಿಕಾರವನ್ನು ನೀಡಲಾಗಿದ್ದು ಜನ ಪ್ರತಿನಿಧಿಗಳು ಸರ್ವಾನುಮತದಿಂದ ತೀರ್ಮಾನಿಸಿರುವ ವಿಷಯವನ್ನು ಬದಲಾಯಿಸಬೇಕಾದಲ್ಲಿ ರೂಲ್-51 ಅಡಿಯಲ್ಲಿ ಮಹಾನಗರ ಪಾಲಿಕೆಯ ಸಭೆಯ ಮುಂದೆ ಮರು ಮಂಡಿಸಲು ಅವಕಾಶವಿದ್ದು ಈ ಪ್ರಕರಣದಲ್ಲಿ ರೂಲ್-51ರಡಿ ಮಂಡಿಸಿರುವುದು ಕಂಡು ಬರುತ್ತಿಲ್ಲ. ಒಂದು ವೇಳೆ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನವನ್ನು ಮಾರ್ಪಡಿಸಿಕೊಳ್ಳಬೇಕಿದ್ದಲ್ಲಿ ಸರ್ಕಾರದ ಮುಂದೆ ಮಂಡಿಸಬೇಕಾಗಿತ್ತು. ಆದರೆ ಈ ಪ್ರಕರಣದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮಂಡಿಸದೆ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನವನ್ನು ಮತ್ತೆ ಮಹಾನಗರ ಪಾಲಿಕೆಯ ಸಭೆಯಲ್ಲೇ (ಆಡಳಿತಗಾರರು) ತೀರ್ಮಾನ ಕೈಗೊಂಡಿರುವುದು ಕೆ.ಎಂ.ಸಿ.ಕಾಯ್ದೆಗೆ ವಿರುದ್ಧವಾಗಿರುತ್ತದೆ.

ಆಡಳಿಗಾರರ ನಿರ್ಣಯದಂತೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಬಾಡಿಗೆ ನಿಗಧಿಪಡಿಸಿ ದಿನಾಂಕ:14-08-2007ರಂದು ಜಾರಿ ಮಾಡಿರುವ ನೋಟೀಸ್‌ನಂತೆ ಬಾಡಿಗೆಯನ್ನು ಪಾವತಿಸಿಕೊಳ್ಳಬೇಕಾಗಿತ್ತು. ಆದರೆ ಈ ಪ್ರಕರಣದಲ್ಲಿ ಹೊಸ ಬಾಡಿಗೆಯನ್ನು ವಸೂಲು ಮಾಡದೆ ಹಳೆಯ ಬಾಡಿಗೆಯನ್ನೇ ಪಾವತಿಸಿಕೊಂಡಿರುವುದನ್ನು ಗಮನಿಸಿದಾಗ ಸಂಬಂಧಪಟ್ಟ ಅಧಿಕಾರಿಗಳ ಕರ್ತವ್ಯ ನಿರ್ಲಕ್ಷತೆ ಮತ್ತು ಬೇಜವಾಬ್ದಾರಿತನ ಎದ್ದು ಕಾಣುವುದಲ್ಲದೆ ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ವಿಫಲವಾಗಿರುವುದು ಸ್ಪಷ್ಟವಾಗಿರುತ್ತದೆ. ಹಾಗೂ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಬಾಡಿಗೆಯನ್ನು ನಿಗಧಿಪಡಿಸಿ ದಿನಾಂಕ:14-08-2007ರಂದು ನೋಟೀಸ್ ಜಾರಿ ಮಾಡಿರುವುದು ಸ್ವಭಾವ ಸಿದ್ಧನ್ಯಾಯಕ್ಕನುಗುಣವಾಗಿರುವುದಿಲ್ಲ.

ಸದರಿ ಕಟ್ಟಡಕ್ಕೆ ನೀರಿನ ಸೌಲಭ್ಯ, ಶೌಚಾಲಯದ ನಿರ್ವಹಣೆ, ವಾಹನ ನಿಲುಗಡೆಗೆ ವ್ಯವಸ್ಥೆ ಹಾಗೂ ಇನ್ನಿತರೆ ಯಾವುದೇ ಮೂಲ ಸೌಲಭ್ಯಗಳನ್ನು ಒದಗಿಸದೆ ಏಕಾ ಏಕಿ ಖಾಸಗಿ ಸ್ವತ್ತಿನ ಕಟ್ಟಡಕ್ಕೆ ಹೋಲಿಸಿ ಕಂದಾಯವನ್ನು ನಿಗಧಿಪಡಿಸಿರುವುದು ನ್ಯಾಯ ಸಮ್ಮತವಾಗಿ ಕಂಡುಬರುತ್ತಿಲ್ಲ. ಅಲ್ಲದೆ ಮೇಲ್ಮನವಿದಾರರು ಸಮಿತಿಯ ಸಭೆಯಲ್ಲಿ ಹಾಗೂ ತಮ್ಮ ಲಿಖಿತ ಹೇಳಿಕೆಗಳಲ್ಲಿ ಮಹಾನಗರ ಪಾಲಿಕೆಯ ಸಭೆಯ ದಿನಾಂಕ:30-10-2006ರ ತೀರ್ಮಾನದಂತೆ ಎಲ್ಲಾ ಸೌಲಭ್ಯಗಳನ್ನು ಒದಗಿಸಿದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನಿಗಧಿ ಪಡಿಸುವ ಬಾಡಿಗೆಯನ್ನು ಪಾವತಿಸಲು ಸಿದ್ಧರಿರುವುದಾಗಿ ಮತ್ತು ಈಗಾಗಲೇ ಹಾಲಿ ಪಾವತಿಸುತ್ತಿರುವ (ಹಳೆ) ಬಾಡಿಗೆಯನ್ನೇ ಅಕ್ಟೋಬರ್-2011ರ ಮಾಹೆಯವರೆವಿಗೂ ಪಾವತಿಸಿರುವುದಾಗಿ ತಿಳಿಸಿರುವ ಅಂಶಗಳನ್ನು ಸಮಿತಿಯು ಪರಿಗಣನೆಗೆ ತೆಗೆದುಕೊಂಡು ಸುಭಾಷ್‌ಚಂದ್ರ ಬೋಸ್ ವಾಣಿಜ್ಯ ಸಂಕೀರ್ಣ (ಪಿಯುಬಿ) ಕಟ್ಟಡದಲ್ಲಿನ ತಳ, ನೆಲ ಮತ್ತು 1ನೇ ಅಂತಸ್ತುಗಳಲ್ಲಿರುವ ಮಳಿಗೆಗಳಿಗೆ ಹಾಲಿ ಪಾವತ್ತಿಸುತ್ತಿರುವ ಬಾಡಿಗೆಯ ಮೇಲೆ ಶೇಕಡ 100ರಷ್ಟನ್ನು ಹೆಚ್ಚಿಸಿ 3 ವರ್ಷಗಳಿಗೊಮ್ಮೆ ಶೇಕಡ 25ರಷ್ಟನ್ನು ಹೆಚ್ಚಿಸಿ ದಿನಾಂಕ:01-10-2011ರಿಂದ ಜಾರಿಗೆ ಬರುವಂತೆ ಬಾಡಿಗೆಯನ್ನು ನಿಗಧಿಪಡಿಸುವುದೆಂದು ಹಾಗೂ ಸದರಿ ಕಟ್ಟಡಕ್ಕೆ ದಿನಾಂಕ:30-10-2006ರ ಮಹಾನಗರ ಪಾಲಿಕೆಯ ಸಭೆಯ ತೀರ್ಮಾನದಂತೆ ನವೀಕರಣಗೊಳಿಸಿ ಎಲ್ಲಾ ಮೂಲ ಭೂತ ಸೌಲಭ್ಯಗಳನ್ನು ಒದಗಿಸಿದ ನಂತರ ಪಾರದರ್ಶಕ ಪರವಾನಗಿ ಶುಲ್ಕ ಹಾಗೂ ಬಾಡಿಗೆಯನ್ನು ನಿಗಧಿಪಡಿಸಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>13.ವಿಷಯ:ಸಂಖ್ಯೆ:ಅಸ್ಥಾಸ/33/2010-11</u>

**ನಿರ್ಣಯ:-** ದೇಶದ ಪ್ರಮುಖ ನಗರಗಳಲ್ಲಿನ ಕಂದಾಯ, ಆರೋಗ್ಯ, ಜಾಹೀರಾತು ಮತ್ತು ಇತರೇ ಕ್ಷೇತ್ರಗಳಲ್ಲಿ ಅಳವಡಿಸಿಕೊಂಡಿರುವ ಆಧುನಿಕತೆಯ ಪ್ರಚಲಿತ ವಿದ್ಯಾಮಾನಗಳನ್ನು ಮತ್ತು ಪ್ರಗತಿಪರ ತಂತ್ರಜ್ಞಾನಗಳ ಮಾದರಿಗಳನ್ನು ಒಳಗೊಂಡಂತೆ ಹಾಗೂ ಜನಪ್ರತಿನಿಧಿಗಳ ಕಾರ್ಯನಿರ್ವಹಣಾ ಶೈಲಿಯ ಬಗ್ಗೆ ಅಧ್ಯಯನ ಮಾಡಲು ಅಪೀಲು ಸ್ಥಾಯಿ ಸಮಿತಿಯು, ಅಧ್ಯಕ್ಷರು, ಸಮಿತಿಯ ಎಲ್ಲಾ ಸದಸ್ಯರು, ಒಬ್ಬರು ಅಧಿಕಾರಿ ಹಾಗೂ ಸಮಿತಿಯ ಆಪ್ತ ಸಹಾಯಕರುಗಳನ್ನೊಳಗೊಂಡಂತೆ 2011ನೇ ಸಾಲಿನ ನವೆಂಬರ್ ಮಾಹೆಯಲ್ಲಿ ದೆಹಲಿ, ಚಂಡೀಘಡ್, ಸಿಮ್ಲಾ ಮತ್ತು ಜಮ್ಮು ನಗರಗಳಿಗೆ ಭೇಟಿ ನೀಡಲು ಉದ್ದೇಶಿಸಿದ್ದು, ಪ್ರವಾಸವನ್ನು ವಿಮಾನದಲ್ಲಿ ಕೈಗೊಳ್ಳು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:25-11-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಆರೋಗ್ಯಾಧಿಕಾರಿಗಳು (ದಕ್ಷಿಣ) |
| 04 | ಬಿ.ಎಸ್.ಆನಂದ | ಸದಸ್ಯರು | ಸ.ಕಂ.ಅ.((ಮಾರುಕಟ್ಟೆ-ದಕ್ಷಿಣ/ಯಶವಂತಪುರ/ಹೆಬ್ಬಾಳ/ಮಲ್ಲೇಶ್ವರಂ) |
| 05 | ಎಂ.ವಸಂತಕುಮಾರಿ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪಶ್ಚಿಮ) |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಪ್ರಕರಣವನ್ನು ಮುಂದೂಡಿದೆ.

02.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. 6 ಮತ್ತು 7 ಹಾಗೂ 1ರಿಂದ 5ನೇ ಮೇಲ್ಮನವಿದಾರುರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಪ್ರಕರಣವನ್ನು ಮುಂದೂಡಿದೆ.

03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಪ್ರಕರಣದ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ: 01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣದ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

05. ವಿಷಯ:ಸಂಖ್ಯೆ:ಅಸ್ಥಾಸ/(ತೆ/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ॥ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟರ್ನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ॥ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಸ್ಟಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಪ್ರಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ॥ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣದ ದಿನಾಂಕವನ್ನು ಮುಂದೆ ತಿಳಿಸಲಾಗುವುದೆಂದು ತಿಳಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/34/2011-12

ಮೆ॥ ಜೈ ಜವಾನ್ ಜಾಹೀರಾತುದಾರರಿಗೆ ಪೈಲೆಟ್ ಯೋಜನೆಯಡಿಯಲ್ಲಿ ಪಾಲಿಕೆಯ ವಿವಿಧ 04 ಸ್ಥಳಗಳಲ್ಲಿ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ 24*12 ಅಡಿ ಅಳತೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು 05 ವರ್ಷಗಳ ಕಾಲಾವಧಿಗೆ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು ದಿನಾಂಕ:16-02-2011ರಂದು ಅವಧಿಯು ಮುಕ್ತಾಯಗೊಂಡಿದ್ದು ಮತ್ತೆ ಮುಂದಿನ 05 ವರ್ಷಗಳ ಅವಧಿಗೆ 24x12 ಅಡಿ ಅಳತೆಯಿಂದ 15x30 ಅಡಿ ಅಳತೆಗೆ ಹೆಚ್ಚಿಸಿಕೊಳ್ಳಲು ಅನುಮತಿ ನೀಡುವಂತೆ ಜಾಹೀರಾತುದಾರರು ಕೋರಿಕೊಂಡಿರುತ್ತಾರೆ. ಅನುಮತಿ ನೀಡಲಾಗಿದ್ದ 04 ರಸ್ತೆಗಳಲ್ಲಿ ರಾಜ್‌ಭವನ್ ರಸ್ತೆಯು ಜಾಹೀರಾತು ಬೈಲಾ-2006ರ ಪ್ರಕಾರ "ಎ" ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳಲು ತಿಳಿಸಿದ್ದು, ಸದರಿಯವರು ಬದಲಿ ಸ್ಥಳದಲ್ಲಿ ನೀರಿನ ಕಾರಂಜಿಯನ್ನು ಅಳವಡಿಸಿಕೊಳ್ಳದೆ ಉಲ್ಲಂಘನೆ ಮಾಡಿರುವುದರಿಂದ ಸದರಿಯವರ ಮನವಿಯನ್ನು ತಿರಸ್ಕರಿಸುತ್ತಾ, ಅವಧಿ ಮುಗಿದ ನಂತರ ಜಾಹೀರಾತು ಪ್ರದರ್ಶಿಸುತ್ತಿರುವ ಅವಧಿಗೆ ದಿನಾಂಕ:17-02-2011ರಿಂದ 20-08-2011ರವರೆಗೂ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು

ರೂ.2,08,998/-ಗಳನ್ನು ಪಾವತಿಸುವಂತೆದಿನಾಂಕ:24-08-2011ರಂದು ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:20-08-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2011-12

ನಂ.301, 66ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಈ ಉದ್ದಿಮೆಯ ಮಾಲೀಕರಾದ ಶ್ರೀ.ಇ.ಹೆಚ್.ಟೋಪಿಸಾಹೇಬ್‌ರವರು ದಿನಾಂಕ:17-09-2011ರಂದು ಉಪ ಆರೋಗ್ಯಾಧಿಕಾರಿ (ಪಶ್ಚಿಮ)ರವರು ನೀಡಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ, ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣ ನಡೆಯುವ ದಿನಾಂಕವನ್ನು ತಿಳಿಸುವುದೆಂದು ತಿಳಿಸುತ್ತಾ, ಮುಂದೂಡಲಾಯಿತು.

08. ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2011-12

ಸಾಯಿ ಎಂಟರ್ ಪ್ರೈಸಸ್, ನಂ.159/1, ಸುಖನಿವಾಸ ಎದುರು, ಲಿಟಲ್ ಆಂಜಲ್ಸ್ ಶಾಲೆ ರಸ್ತೆ, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ಹೆಚ್.ಆರ್.ವಿನಾಯಕ್‌ರವರು ಸಾಯಿ ಎಂಟರ್ ಪ್ರೈಸಸ್ (ಆಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಫ್ಸ್) ಉದ್ದಿಮೆ ನಡೆಸಲು 35 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:09-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

09. ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2011-12

ಸಾಯಿ ಬಕ್ಕಲ್, ನಂ.159, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ರಮೇಶ್‌ರವರು ಸಾಯಿ ಬಕ್ಕಲ್ (ಆಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಫ್ಸ್) ಉದ್ದಿಮೆ ನಡೆಸಲು 25 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:08-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/38/2011-12

ಶ್ರೀ.ಜೆ.ನಾಗರಾಜು, ನಂ.59, 7ನೇ ಬ್ಲಾಕ್, ಭವಾನಿ ಹೆಚ್.ಬಿ.ಸಿ.ಎಸ್. ಕತ್ತರುಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ಇವರು ತಮ್ಮ ಕಟ್ಟಡಕ್ಕೆ ನೀರು ಒಳಚರಂಡಿ, ವಿದ್ಯುತ್ ಸೌಲಭ್ಯಗಳನ್ನು ಒದಗಿಸುವಂತೆ ಕೋರಿಕೊಂಡಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬನಶಂಕರಿ ಉಪ ವಿಭಾಗರವರು ದಿನಾಂಕ:08-11-2011ರಂದು ನೀಡಿರುವ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

11.ವಿಷಯ:ಸಂಖ್ಯೆ:ಅಸ್ಥಾಸ/(ತೆ)/39/2011-12

ಶ್ರೀ.ಜಿ.ಶ್ರೀನಿವಾಸ್, ನಂ.23, 6ನೇ ಅಡ್ಡರಸ್ತೆ, ಗೋಕುಲ 1ನೇ ಹಂತ, 1ನೇ ಮುಖ, ವಾರ್ಡ್-17 ಈ ಸ್ವತ್ತಿಗೆ ಕಂದಾಯವನ್ನು ವಾಣಿಜ್ಯ ದರದಲ್ಲಿ ನಿಗಧಿಪಡಿಸಿದ್ದು, ವಸತಿ ದರದಲ್ಲಿ ನಿಗಧಿಪಡಿಸಿಕೊಡುವಂತೆ ಕೋರಿ ದಿನಾಂಕ:20-10-2001ರಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಅರ್ಜಿ ನೀಡಿದ್ದರೂ ಸಹ ನನ್ನ ಮನವಿಯನ್ನು ಪರಿಗಣಿಸದೆ ಹಾಲಿ ನಿಗಧಿಪಡಿಸಿರುವ ಕಂದಾಯವು ಸಮಂಜಷವಾಗಿರುತ್ತದೆಂದು ಸಹಾಯಕ ಕಂದಾಯ ಅಧಿಕಾರಿ (ಯಶವಂತಪುರ)ರವರು ದಿನಾಂಕ:10-11-2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:30-12-2011ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಉಪ ಆರೋಗ್ಯಾಧಿಕಾರಿಗಳು (ಪಶ್ಚಿಮ/ಮಹದೇವಪುರ) |
| 04 | ಬಿ.ಎಸ್.ಆನಂದ | ಸದಸ್ಯರು | ಕಂದಾಯ ಅಧಿಕಾರಿ (ಬೊಮ್ಮನಹಳ್ಳಿ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸಹಾಯ ಕಾರ್ಯಪಾಲಕ ಅಭಿಯಂತರರು(ಬನಶಂಕರಿ) |
| 06 | ಬಿ.ಗೋವಿಂದರಾಜು | ಸದಸ್ಯರು | ಸ.ಕಂ.ಅ.((ಮಾರುಕಟ್ಟೆ-ದಕ್ಷಿಣ/ಶಾಂತಿನಗರ/ಪೀಣ್ಯ ಕೈಗಾರಿಕಾ ಪ್ರದೇಶ/ ಕೋರಮಂಗಲ) |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/28/2010-11

ಮೆ॥ಸರ್ವ ಅಂಡ್ ವಾಲಿ ಔಟ್‌ಡೋರ್ ಅಡ್ವರ್‌ಟೈಸಿಂಗ್‌ರವರು ಮೂರು ರಸ್ತೆ ವಿಭಜಕಗಳಲ್ಲಿನ ಟ್ರಾನ್ಸ್‌ಲೈಟ್ ಟ್ರಾನ್ಸ್‌ಲೈಟ್ ಬಾಕ್ಸ್‌ಗಳಲ್ಲಿ ಪ್ರದರ್ಶನವಾಗುತ್ತಿರುವ ಜಾಹೀರಾತುಗಳಿಗೆ ಜಾಹೀರಾತು ತೆರಿಗೆ ಮತ್ತು ಸೇವಾ ಶುಲ್ಕ ನಿಗಧಿಪಡಿಸಿರುವುದರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ನಿರ್ಣಯ:-** ದಿನಾಂಕ:28-10-2011ರ ಆಯುಕ್ತರ ಟಿಪ್ಪಣಿಯನ್ನು ಸಮಿತಿಗೆ ದಿನಾಂಕ:29-10-2011ರಂದು ಮಂಡಿಸಿರುತ್ತಾರೆ. ಸದರಿ ಟಿಪ್ಪಣಿಯಲ್ಲಿನ ಅಂಶಗಳು ಹಾಗೂ ಮೇಲ್ಮನವಿದಾರರ ಹೇಳಿಕೆಗಳನ್ನು ಪರಿಶೀಲಿಸಿದ ನಂತರ, ಆಯುಕ್ತರ ಟಿಪ್ಪಣಿಯಂತೆ ಮುಂದಿನ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು, ಪ್ರತಿವಾದಿಗಳ ಪರವಾಗಿ ಶ್ರೀ.ಪ್ರವೀಣ್ ಕುಮಾರ್, ಪ್ರಥಮ ದರ್ಜೆ ಸಹಾಯಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರ ವಾದಗಳನ್ನು ಆಲಿಸಿದ ನಂತರ ಆದೇಶಕ್ಕಾಗಿ ಪ್ರಕರಣವನ್ನು ಕಾಯ್ದಿರಿಸಿದೆ.

03.ವಿಷಯ:ಸಂಖ್ಯೆ:ಅಸ್ಥಾಸ/(ಆಸ್ತಿ)/14/2010-11

ಶ್ರೀ.ಎ.ಪ್ರಕಾಶ್, ಕನ್ಸರ್‌ವೆನ್ಸಿ ಲೇನ್, ಎಂ.ಎಂ.ರಸ್ತೆ, ಸರ್ವಜ್ಞ ನಗರ ಈ ಸ್ವತ್ತಿನಲ್ಲಿ ಒಂದು ಚಿಕ್ಕ ಪೆಟ್ಟಿ ಅಂಗಡಿ ಇಟ್ಟುಕೊಂಡು ಜೀವನ ಸಾಗಿಸುತ್ತಿದ್ದು, ಸದರಿ ಅಂಗಡಿಯನ್ನು ಖಾಲಿ ಮಾಡುವಂತೆ ಜಂಟಿ ಆಯುಕ್ತರು (ಪೂರ್ವ)ರವರು ಕೆ.ಪಿ.ಪಿ.ಕಾಯ್ದೆ ಕಲಂ 5(1)ರ ಅಡಿಯಲ್ಲಿ ದಿನಾಂಕ:03-01-2011ರಲ್ಲಿ ಗುತ್ತಿಗೆದಾರರಿಗೆ ನೀಡಿರುವ ನೋಟೀಸ್ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರ ದಿನಾಂಕ:01-07-2011ರ ಟಿಪ್ಪಣಿ.

**ನಿರ್ಣಯ:-** ಮೇಲ್ಮನವಿದಾರರ ಮತ್ತು ಸಂಬಂಧಪಟ್ಟ ಅಧಿಕಾರಿಗಳ ಹೇಳಿಕೆಗಳನ್ನು ಪರಿಶೀಲಿಸಿದ ನಂತರ ಸಮಿತಿಯು ಮೇಲ್ಮನವಿದಾರರ ಮೇಲ್ಮನವಿಯನ್ನು ತಿರಸ್ಕರಿಸುತ್ತಾ, ದಿನಾಂಕ:01-07-2011ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದೆಂದು ತೀರ್ಮಾನಿಸಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು

ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. 6 ಮತ್ತು 7 ಹಾಗೂ 1ರಿಂದ 5ನೇ ಮೇಲ್ಮನವಿದಾರುರು ಮತ್ತು ಪ್ರತಿವಾದಿಗಳ ಪರವಾಗಿ ಎ ಇಂದ ಎಫ್ ಶ್ರೀ.ಕೆ.ಎಸ್.ಕೆ.,ರವರು 6 ಮತ್ತು 7ರ ಪರವಾಗಿ ಶ್ರೀ.ಟಿ.ಎಸ್.ಆರ್., ರವರು ಹಾಜರಿರುತ್ತಾರೆ. ಪ್ರತಿವಾದಿಗಳು ತಕರಾರು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿರುತ್ತಾರೆ. ಈಗಾಗಲೇ ಬಹಳಷ್ಟು ಕಾಲಾವಕಾಶವನ್ನು ನೀಡಲಾಗಿದ್ದರೂ ಸಹ ಮತ್ತೊಮ್ಮೆ ಕಾಲಾವಕಾಶವನ್ನು ಕೇಳಿದ ಬಗ್ಗೆ ಸಮಿತಿಯು ಅಸಮಾಧಾನವನ್ನು ವ್ಯಕ್ತ ಪಡಿಸುತ್ತಾ, ಕೊನೆಯ ಬಾರಿಯಾಗಿ ಕಾಲಾವಕಾಶವನ್ನು ನೀಡಿ ಪ್ರಕರಣವನ್ನು ಮುಂದೂಡಿದೆ.

05. ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು, ಪ್ರತಿವಾದಿಯಾದ ಸಹಾಯ ಕಂದಾಯ ಅಧಿಕಾರಿಯ ಪರವಾಗಿ ಶ್ರೀ.ರಾಮಕೃಷ್ಣ, ಕಂದಾಯ ಪರಿವೀಕ್ಷಕರು, ವಾರ್ಡ್-19 ಹಾಜರಿರುತ್ತಾರೆ. ಮೇಲ್ಮನವಿದಾರರ ವಾದಗಳನ್ನು ಕೇಳಲಾಯಿತು. ಪ್ರತಿವಾದಿಗಳು ಕಾನೂನು ರೀತಿ ಕಂದಾಯವನ್ನು ನಿಗಧಿಪಡಿಸಿರುವುದಿಲ್ಲ ಹಾಗೂ 2009ರಲ್ಲಿ ಸ್ವತ್ತಿನ ಖಾತಾ ವಿಭಜನೆಯಾಗಿರುತ್ತದೆ. ಈ ಬಗ್ಗೆ ವಿಶೇಷ ಸೂಚನಾ ಪತ್ರ ಹಾಗೂ ಅವಶ್ಯವಿರುವ ದಾಖಲೆಗಳನ್ನು ಹಾಜರುಪಡಿಸುತ್ತಾ, ಕಾನೂನು ಬದ್ದ ಕಂದಾಯವನ್ನು ನಿಗಧಿಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಸ್ಥಳ ಪರಿಶೀಲನೆ ಮಾಡಿ ಆದೇಶ ನೀಡಲು ಪ್ರಕರಣವನ್ನು ಕಾಯ್ದಿರಿಸಿದೆ.

06.ವಿಷಯ:ಸಂಖ್ಯೆ:ಅಸ್ಥಾಸ/(ತೆ)/22/2011-12

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ: 01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಈ ಪ್ರಕರಣಕ್ಕೆ ಸಂಬಂಧಿಸಿದ ಪ್ರತಿವಾದಿಗಳಾದ ಸಹಾಯಕ ಕಂದಾಯ ಅಧಿಕಾರಿ (ಮಲ್ಲೇಶ್ವರಂ)ರವರು ಹಾಜರಿರುವುದಿಲ್ಲ. ಈ ಪ್ರಕರಣದಲ್ಲಿ ಈಗಾಗಲೇ ಬಹಳಷ್ಟು ಸಭೆಗಳು ನಡೆದಿರುವುದರಿಂದ ಪ್ರತ ಬಾರಿಯೂ ಪ್ರತಿವಾದಿಗಳು ಹಾಜರಾಗುತ್ತಿಲ್ಲದಿರುವುದರಿಂದ, ಪ್ರತಿವಾದಿಗಳ ಹೇಳಿಕೆಗಳೂ ಏನೂ ಇಲ್ಲವೆಂದು ಭಾವಿಸಿ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

07.ವಿಷಯ:ಸಂಖ್ಯೆ:ಅಸ್ಥಾಸ/(ಆ)/23/2011-12

ನಂ.632, 12ನೇ ಅಡ್ಡರಸ್ತೆ, ಗಿರಿನಗರ, ಬೆಂಗಳೂರು-45 ಈ ವಿಳಾಸದಲ್ಲಿ ನಡೆಯುತ್ತಿರುವ ಹಿಟ್ಟಿನಗಿರಣಿ ಉದ್ದಿಮೆ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ನೀಡಿದ ದೂರಿನನ್ವಯ ಉದ್ದಿಮೆಗೆ ನೀಡಿರುವ ಪರವಾನಗಿಯನ್ನು ಹಿಂಪಡೆಯಲಾಗಿತ್ತು. ದಿನಾಂಕ:01-04-2011ರಂದು ಅಪೀಲು ಸ್ಥಾಯಿ ಸಮಿತಿಯ ಸಭೆಯ ನಡುವಳಿಯಲ್ಲಿ ಸದರಿ ಹಿಟ್ಟಿನ ಗಿರಣಿಯಿಂದ ಒಂದು ವೇಳೆ ಶಬ್ದ ಅಥವಾ ವಾಯು ಮಾಲಿನ್ಯ ಉಂಟಾಗುತ್ತಿದ್ದಲ್ಲಿ ಅವುಗಳನ್ನು ತಡೆಯಲು ಸುರಕ್ಷತಾ ಸಾಧನಗಳನ್ನು ಅಳವಡಿಸಿಕೊಳ್ಳುವಂತೆ ಉದ್ದಿಮೆದಾರರಿಗೆ ನಿರ್ದೇಶನ ನೀಡುತ್ತಾ, ಉದ್ದಿಮೆಗೆ ರದ್ದುಪಡಿಸಿರುವ ಪರವಾನಗಿ ಮತ್ತು ಕಡಿತಗೊಳಿಸಿರುವ ವಿದ್ಯುತ್ ಸಂಪರ್ಕವನ್ನು ಕಲ್ಪಿಸಲು ಕ್ರಮ ಕೈಗೊಳ್ಳುವುದೆಂದು ಸಮಿತಿಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ. ಈ ವಿಷಯದ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ಮತ್ತೊಮ್ಮೆ ಪತ್ರ ಬರೆದು ನಮ್ಮ ಹೇಳಿಕೆಯನ್ನು ಪಡೆಯದೆ ನಿರ್ಣಯ ಕೈಗೊಳ್ಳಲಾಗಿರುತ್ತದೆ. ಆದ್ದರಿಂದ ನಮಗೆ ಹೇಳಿಕೆ ನೀಡಲು ಅವಕಾಶ ನೀಡುವಂತೆ ಕೋರಿಕೊಂಡಿರುವ ಮೇರೆಗೆ ಸದರಿಯವರ ದೂರಿನ ಜೊತೆಗೆ ಶ್ರೀ.ಬಿ.ವಿ.ಗಣೇಶ್‌ರವರು ಅಂಗವಿಕಲರಾಗಿದ್ದು ಇವರಿಗೆ ವೈದ್ಯರು ಸಹ ದೃಢೀಕರಣ ಪತ್ರ ನೀಡಿ ಮೆಣಸಿನ ಪುಡಿ ಇನ್ನಿತರೆ ಗಾಟು ಮತ್ತು ದೂಳು ಬರುವ ಸ್ಥಳದಲ್ಲಿ ಕಾರ್ಯನಿರ್ವಹಿಸಬಾರದೆಂದು ತಿಳಿಸಿರುವುದನ್ನು ಮನಗಂಡು ಉದ್ದಿಮೆದಾರರನ್ನು ಹಾಗೂ ದೂರುದಾರರನ್ನು ಪುನಃ ಕರೆಸಿ ವಿಚಾರಣೆ ನಡೆಸಬಹುದೆಂದು ಮಂಡಿಸಿರುವ ಆಯುಕ್ತರ ದಿನಾಂಕ:02-08-2011ರ ಟಿಪ್ಪಣಿ.

ನಿರ್ಣಯ:- ಸದರಿ ಪ್ರಕರಣದಲ್ಲಿ ಅಪೀಲು ಸ್ಥಾಯಿ ಸಮಿತಿಯು ಈಗಾಗಲೇ ದಿನಾಂಕ:01-04-2011ರಂದು ನಿರ್ಣಯ ಕೈಗೊಂಡಿದ್ದು, ಸದರಿ ನಿರ್ಣಯದಂತೆ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

08. ವಿಷಯ:ಸಂಖ್ಯೆ:ಅಸ್ಥಾಸ(ಖಾ)/28/2011-12

ಶ್ರೀ.ಕೆ.ವಿಜಯಕುಮಾರ್, ನಂ.171/2, ತೂಬರಹಳ್ಳಿ, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು-66 ಇವರು ದಿನಾಂಕ:16-09-2011ರಂದು ಸಮಿತಿಯ ಮುಂದೆ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರು ದಿನಾಂಕ:08-08-2011ರಂದು ಹೊರಡಿಸಿರುವ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಗೂ ಪ್ರತಿವಾದಿಗಳಾದ ಆರ್-4 ಮತ್ತು ಆರ್-3 ಪರವಾಗಿ ವಕೀಲರು ಹಾಜರಿರುತ್ತಾರೆ. 5ನೇ ಪ್ರತಿವಾದಿಗಳ ಪರವಾಗಿ ಹಾಜರಿದ್ದ ವಕೀಲರು ನನಗೆ ಅಪೀಲು ಪ್ರತಿ ಸಿಕ್ಕಿರುವುದಿಲ್ಲವಾದ್ದರಿಂದ ತಕರಾರು ಸಲ್ಲಿಸಲು ಅಪೀಲು ಪ್ರತಿಯನ್ನು ನೀಡುವಂತೆ ಕೋರಿರುತ್ತಾರೆ. ಪ್ರತಿವಾದಿಗಳಿಗೆ ಅಪೀಲು ಪ್ರತಿಯನ್ನು ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸುತ್ತಾ, ಪ್ರಕರಣವನ್ನು ಮುಂದೂಡಲಾಯಿತು.

09.ವಿಷಯ:ಸಂಖ್ಯೆ:ಅಸ್ಥಾಸ(ಆ)/29/2011-12

ಮೆ॥ಹಾರ್ಡ್ ಕಾಸ್ಟೆಲ್ ರೆಸ್ಟೋರೆಂಟ್ ಪ್ರೈ.ಲಿ., ರವರು ನಂ.2466, 24ನೇ ಕ್ರಾಸ್, ಬಿ.ಎಸ್.ಕೆ. 2ನೇ ಹಂತ, ಬೆಂಗಳೂರು-70 ಇಲ್ಲಿ ಎ/ಸಿ ರೆಸ್ಟೋರೆಂಟ್ ನಡೆಸಲು ಉದ್ದಿಮೆ ಪರವಾನಗಿಯನ್ನು ಕೋರಿ ದಿನಾಂಕ:27-06-2011ರಂದು ಅರ್ಜಿ ಸಲ್ಲಿಸಿದ್ದು, ಸದರಿಯವರ ಅರ್ಜಿಯನ್ನು ಪರಿಶೀಲಿಸಿದ ನಂತರ 2011-12ನೇ ಸಾಲಿನ ಕದಾಯ ರಶೀದಿ ಮತ್ತು ವಸತಿಯೇತರ ಖಾತ ನಕಲು ಸಲ್ಲಿಸುವಂತೆ ದಿನಾಂಕ:30-06-2011ರಂದು ಉಪ ಆರೋಗ್ಯಾಧಿಕಾರಿ(ದಕ್ಷಿಣ)ರವರು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-08-2011ರ ಟಿಪ್ಪಣಿ.

**ನಿರ್ಣಯ**:- ಕಡತವನ್ನು ಪರಿಶೀಲಿಸಲಾಯಿತು. ಓ.ಎಸ್.ಸಂಖ್ಯೆ:6419/2011ರಲ್ಲಿ ಮಧ್ಯಂತರ ತಡೆಯಾಜ್ಞೆಯನ್ನು ಪಡೆದಿರುವುದಾಗಿ ತಿಳಿಸಿರುತ್ತಾರೆ. ಆದರೆ ಮಧ್ಯಂತರ ತಡೆಯಾಜ್ಞೆ ಪ್ರತಿಯನ್ನು ಸಮಿತಿಯು ಪರಿಶೀಲಿಸಲು ಕೇಳಿದಾಗ ಒದಗಿಸಿರುವುದಿಲ್ಲ. ಇದರಿಂದಾಗಿ ಸಿವಿಲ್ ನ್ಯಾಯಾಲಯವು ಯಾವ ಅಂಶಗಳಿಗೆ ತಡೆಯಾಜ್ಞೆ ನೀಡಿರುತ್ತದೆಂಬ ಬಗ್ಗೆ ಸಮಿತಿಗೆ ಮಾಹಿತಿ ಇರುವುದಿಲ್ಲ. ಅಲ್ಲದೆ ಟ್ರೇಡ್ ಪರವಾನಗಿಯನ್ನು ಪಡೆಯದಿದ್ದಲ್ಲಿ ಆಹಾರ ಪರವಾನಗಿಯನ್ನು ಸಹ ನೀಡಲು ಬರುವುದಿಲ್ಲ. ಒಂದು ವೇಳೆ ಆಹಾರ ಪರವಾನಗಿ ಇಲ್ಲದೆ ರೆಸ್ಟೋರೆಂಟ್ ನಡೆಸುತ್ತಿದ್ದಲ್ಲಿ, ರೆಸ್ಟೋರೆಂಟ್‌ರವರು ತಯಾರಿಸುವ ಅಹಾರ ಪದಾರ್ಥಗಳ ಗುಣ ಮಟ್ಟದ ವಿವಾಧ ಉಂಟಾದಲ್ಲಿ ಅಥವಾ ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾದಲ್ಲಿ ನಗರ ಪಾಲಿಕೆಯ ಜವಾಬ್ದಾರಿಯಾಗಬೇಕಾಗಿರುತ್ತದೆಂಬ ಅಂಶವನ್ನು ಸಮಿತಿಯು ಮನಗಂಡು ದಿನಾಂಕ:29-07-2011ರಂದು ಸಮಿತಿಯು ಬರೆದ ಪತ್ರವನ್ನು ರದ್ದುಪಡಿಸುತ್ತಾ, ಉದ್ದಿಮೆ ಪರವಾನಗಿ ಹಾಗೂ ಆಹಾರ ಪರವಾನಗಿ ಇಲ್ಲದೇ ನಡೆಯುತ್ತಿರುವ ಮೆ॥ಹಾರ್ಡ್ ಕಾಸ್ಟಲ್ ರೆಟ್ಟೋರೆಂಟ್ ಪ್ರೈ.ಲಿ. ನಂ.2466, 24ನೇ ಕ್ರಾಸ್, ಬಿ.ಎಸ್.ಕೆ. 2ನೇ ಹಂತ ಬೆಂಗಳೂರು ಈ ಉದ್ದಿಮೆಯ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ನ್ಯಾಯಾಲಯದ ತಡೆಯಾಜ್ಞೆಯನ್ನು ಪರಿಶೀಲಿಸಿಕೊಂಡು ಪರವಾನಗಿ ಇಲ್ಲದೆ ನಡೆಯುತ್ತಿರುವ ಉದ್ದಿಮೆಯು ತಯಾರಿಸುತ್ತಿರುವ ಆಹಾರ ಪದಾರ್ಥಗಳ ತಯಾರಿಕೆಯನ್ನು ಸ್ಥಗಿತಗೊಳಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

10.ವಿಷಯ:ಸಂಖ್ಯೆ:ಅಸ್ಥಾಸ(ತೆ/30/2011-12

ಶ್ರೀ.ಸಿ.ಲೋಕೇಶ್‌ರವರು ಮಾಗಡಿ ಮುಖ್ಯರಸ್ತೆ, ಕೆ.ಹೆಚ್.ಬಿ.ಕಾಲೋನಿಯ ಬಸ್ ನಿಲ್ದಾಣದ ಶೌಚಾಲಯದ ಪಕ್ಕದಲ್ಲಿನ 10 ಅಡಿಗಳ ಖಾಲಿ ನಿವೇಶವನ್ನು ತಿಂಗಳಿಗೆ ರೂ.1000/-ಗಳ ಆದಾರದ ಮೇಲೆ ಗುತ್ತಿಗೆಗೆ ನೀಡಿದ್ದು, ಸದರಿ ಗುತ್ತಿಗೆ ಹಣವನ್ನು ಏಕಾಏಕಿ ರೂ.2009/-ಗಳಿಗೆ ಹೆಚ್ಚಿಸಿ ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ)ಇವರು ದಿನಾಂಕ:25-05-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರರವರ ದಿನಾಂಕ:07-09-2011ರ ಟಿಪ್ಪಣಿ.

**ನಿರ್ಣಯ**:- ಕಡತ ಮತ್ತು ಮೇಲ್ಮನವಿದಾರರ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಅರ್ಜಿದಾರರು ಗುತ್ತಿಗೆ ಅವಧಿ ಮುಗಿದ ತಕ್ಷಣವೇ ಗುತ್ತಿಗೆ ಅವಧಿಯನ್ನು ನವೀಕರಿಸಲು ಕೋರಿಕೊಂಡಿರುವುದು ಕಂಡು ಬರುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಅರ್ಜಿದಾರರಿಗೆ ಯಾವುದೇ ಉತ್ತರವನ್ನು ನೀಡದೆ, ಗುತ್ತಿಗೆ ಅವಧಿಯನ್ನೂ ಸಹ ನವೀಕರಿಸಿರುವುದು ಕಂಡುಬರುತ್ತಿಲ್ಲ. ಹಾಗೂ ಕಡತದ ಪುಟ ಸಂಖ್ಯೆ:84ರಲ್ಲಿ ಲಗತ್ತಿಸಿರುವ ಪ್ರಸ್ತಾಪಿತ ಸ್ವತ್ತಿನ ಪರಿಷ್ಕೃತ ದರವು ರೂ.2500/-ಗಳಾಗಿದ್ದು, ಸದರಿ ಮಾರುಕಟ್ಟೆ ದರದ ಆಧಾರದ ಮೇಲೆ ಶೇ.10ರಷ್ಟನ್ನು ವಾರ್ಷಿಕ ಗುತ್ತಿಗೆ ಹಣ ನಿಗಧಿಪಡಿಸಿ ಕರಾರು ಪತ್ರ ನೊಂದಾಯಿಸುವ ದಿನಾಂಕದಿಂದ ಜಾರಿ ಮಾಡುವುದು. ಹಾಗೂ ಬಾಕಿ ಇರುವ ಗುತ್ತಿಗೆ ಹಣವನ್ನು ಹಿಂದೆ ನಿಗಧಿಪಡಿಸಿರುವ ರೂ.1000/-ಗಳ ಆಧಾರದ ಮೇಲೆ ವಸೂಲು ಮಾಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

11. ವಿಷಯ:ಸಂಖ್ಯೆ:ಅಸ್ಥಾಸ(ತೆ/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ॥ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟ್ರನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ

ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ||ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಸ್ಠಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಫ್ಯಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ||ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳಾದ ಶ್ರೀ.ಶಾಂತೇಶ್, ಸಹಾಯಕ ಕಂದಾಯ ಅಧಿಕಾರಿ (ಪ್ರಭಾರ)ರವರು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಲಿಖಿತ ಹೇಳಿಕೆಗಳನ್ನು ಸಲ್ಲಿಸುತ್ತೇವೆ. ಅದರಂತೆ ನಮ್ಮ ಮನವಿಯನ್ನು ಪರಿಗಣಿಸಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಈಗ ನಿಗಧಿಪಡಿಸಿರುವ ಕಂದಾಯವನ್ನು ಸಮಂಜಸವಾಗಿದ್ದು ಮೇಲ್ಮನವಿದಾರರು ಮನವಿಯನ್ನು ವಜಾಗೊಳಿಸಬೇಕೆಂದು ಸಮಿತಿಯನ್ನು ಕೋರಿರುತ್ತಾರೆ. ಸದರಿ ಪ್ರಕರಣವನ್ನು ತಪಾಸಣೆ ಮಾಡಿ ಆದೇಶ ನೀಡಲು ಕಾಯ್ದಿರಿಸಿದೆ.

<u>12.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/34/2011-12</u>

ಮೆ|| ಜೈ ಜವಾನ್ ಜಾಹೀರಾತುದಾರರಿಗೆ ಪೈಲೆಟ್ ಯೋಜನೆಯಡಿಯಲ್ಲಿ ಪಾಲಿಕೆಯ ವಿವಿಧ 04 ಸ್ಥಳಗಳಲ್ಲಿ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ 24*12 ಅಡಿ ಅಳತೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು 05 ವರ್ಷಗಳ ಕಾಲಾವಧಿಗೆ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು ದಿನಾಂಕ:16-02-2011ರಂದು ಅವಧಿಯು ಮುಕ್ತಾಯಗೊಂಡಿದ್ದು ಮತ್ತೆ ಮುಂದಿನ 05 ವರ್ಷಗಳ ಅವಧಿಗೆ 24x12 ಅಡಿ ಅಳತೆಯಿಂದ 15x30 ಅಡಿ ಅಳತೆಗೆ ಹೆಚ್ಚಿಸಿಕೊಳ್ಳಲು ಅನುಮತಿ ನೀಡುವಂತೆ ಜಾಹೀರಾತುದಾರರು ಕೋರಿಕೊಂಡಿರುತ್ತಾರೆ. ಅನುಮತಿ ನೀಡಲಾಗಿದ್ದ 04 ರಸ್ತೆಗಳಲ್ಲಿ ರಾಜ್‌ಭವನ್ ರಸ್ತೆಯು ಜಾಹೀರಾತು ಬೈಲಾ-2006ರ ಪ್ರಕಾರ ''ಎ" ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳಲು ತಿಳಿಸಿದ್ದು, ಸದರಿಯವರು ಬದಲಿ ಸ್ಥಳದಲ್ಲಿ ನೀರಿನ ಕಾರಂಜಿಯನ್ನು ಅಳವಡಿಸಿಕೊಳ್ಳದೆ ಉಲ್ಲಂಘನೆ ಮಾಡಿರುವುದರಿಂದ ಸದರಿಯವರ ಮನವಿಯನ್ನು ತಿರಸ್ಕರಿಸುತ್ತಾ, ಅವಧಿ ಮುಗಿದ ನಂತರ ಜಾಹೀರಾತು ಪ್ರದರ್ಶಿಸುತ್ತಿರುವ ಅವಧಿಗೆ ದಿನಾಂಕ:17-02-2011ರಿಂದ 20-08-2011ರವರೆಗೂ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು ರೂ.2,08,998/-ಗಳನ್ನು ಪಾವತಿಸುವಂತೆದಿನಾಂಕ:24-08-2011ರಂದು ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:20-08-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಪ್ರತಿವಾದಿಗಳ ಪರವಾಗಿ ಶ್ರೀ.ಶ್ರೀನಿವಾಸಮೂರ್ತಿ, ಎರಡನೇ ದರ್ಜೆ ಸಹಾಯಕರು ಹಾಜರಿರುತ್ತಾರೆ. ಮೇಲ್ಮನವಿದಾರರಿ ನೋಟೀಸ್ ನೀಡಿರುವ ಬಗ್ಗೆ ಸ್ವೀಕೃತಿಯನ್ನು ಸಮಿತಿಗೆ ಸಲ್ಲಿಸಿರುವುದಿಲ್ಲ. ಪ್ರಕರಣದ ಬಗ್ಗೆ ಯಾವುದೇ ಮಾಹಿತಿಗಳು ಸದರಿಯವರಿಗೆ ತಿಳಿದಿರುವುದಿಲ್ಲ. ಆದುದರಿಂದ ಸದರಿ ಪ್ರಕಣದಲ್ಲಿ ಮೇಲ್ಮನವಿದಾರರಿಗೆ ಸಹಾಯಕ ಕಂದಾಯ ಅದಿಕಾರಿಗಳ ಮುಖಾಂತರ ಮತ್ತೊಮ್ಮೆ ನೋಟೀಸ್ ಜಾರಿ ಮಾಡಲು ಪ್ರಕರಣವನ್ನು ಮುಂದೂಡಲಾಯಿತು.

<u>13.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2011-12</u>

ನಂ.301, 66ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಈ ಉದ್ದಿಮೆಯ ಮಾಲೀಕರಾದ ಶ್ರೀ.ಇ.ಹೆಚ್.ಟೋಪಿಸಾಹೇಬ್‌ರವರು ದಿನಾಂಕ:17-09-2011ರಂದು ಉಪ ಆರೋಗ್ಯಾಧಿಕಾರಿ (ಪಶ್ಚಿಮ)ರವರು ನೀಡಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02-11-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ.ಗೌರಮ್ಮ ಎಂಬುವವರು ಸೇರ್ಪಡೆ ಅರ್ಜಿಯನ್ನು ಸಲ್ಲಿಸಿದ್ದು, ಮೇಲ್ಮನವಿದಾರರು ಸದರಿ ಸೇರ್ಪಡೆ ಅರ್ಜಿಯ ಮೇಲೆ ತಕರಾರರು ಸಲ್ಲಿಸಲು ಸೇರ್ಪಡೆ ಅರ್ಜಿಯ ಪ್ರತಿಯನ್ನು ಪಡೆದು 2 ತಿಂಗಳ ಕಾಲಾವಕಾಶ ಕೋರಿಕೊಂಡಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

14.ವಿಷಯ:ಸಂಖ್ಯೆ:ಅಸ್ಥಾಸ/(ಆ)/36/2011-12

ಸಾಯಿ ಎಂಟರ್ ಪ್ರೈಸಸ್, ನಂ.159/1, ಸುಖನಿವಾಸ ಎದುರು, ಲಿಟಲ್ ಆಂಜಲ್ಸ್ ಶಾಲೆ ರಸ್ತೆ, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ಹೆಚ್.ಆರ್.ವಿನಾಯಕ್‌ರವರು ಸಾಯಿ ಎಂಟರ್ ಪ್ರೈಸಸ್ (ಅಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 35 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:09-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಸದರಿ ಪ್ರದೇಶವು ವಸತಿ ಪ್ರದೇಶದಲ್ಲಿದ್ದು, ಈ ಬಗ್ಗೆ ಕರ್ನಾಟಕ ರಾಜ್ಯ ವಾಯ ಮಾಲಿನ್ಯ ನಿಯಂತ್ರಣಾ ಮಂಡಳಿಯವರು ನೀಡಿರುವ ನಿರ್ದೇಶನದ ರೀತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

15.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2011-12

ಸಾಯಿ ಬಕ್ಕಲ್, ನಂ.159, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ರಮೇಶ್‌ರವರು ಸಾಯಿ ಬಕ್ಕಲ್ (ಅಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 25 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:08-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಸದರಿ ಪ್ರದೇಶವು ವಸತಿ ಪ್ರದೇಶದಲ್ಲಿದ್ದು, ಈ ಬಗ್ಗೆ ಕರ್ನಾಟಕ ರಾಜ್ಯ ವಾಯ ಮಾಲಿನ್ಯ ನಿಯಂತ್ರಣಾ ಮಂಡಳಿಯವರು ನೀಡಿರುವ ನಿರ್ದೇಶನದ ರೀತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

16.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/38/2011-12

ಶ್ರೀ.ಜಿ.ನಾಗರಾಜು, ನಂ.59, 7ನೇ ಬ್ಲಾಕ್, ಭವಾನಿ ಹೆಚ್.ಬಿ.ಸಿ.ಎಸ್. ಕತ್ತರುಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ಇವರು ತಮ್ಮ ಕಟ್ಟಡಕ್ಕೆ ನೀರು ಒಳಚರಂಡಿ, ವಿದ್ಯುತ್ ಸೌಲಭ್ಯಗಳನ್ನು ಒದಗಿಸುವಂತೆ ಕೋರಿಕೊಂಡಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಬನಶಂಕರಿ ಉಪ ವಿಭಾಗರವರು ದಿನಾಂಕ:08-11-2011ರಂದು ನೀಡಿರುವ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳಾದ ಶ್ರೀ.ಆರ್.ಮಧು, ಸಹಾಯಕ ಕಾರ್ಯಪಾಲಕ ಅಭಿಯಂತರರು ಹಾಜರಿರುತ್ತಾರೆ. ಪ್ರತಿವಾದಿಗಳು ಮೇಲ್ಮನವಿದಾರರ ಸ್ವತ್ತಿನ ಬಗ್ಗೆ ಸಿವಿಲ್ ನ್ಯಾಯಾಲಯ ಮತ್ತು ಟ್ರಿಬಿನಲ್ ಮುಂದ ವಿವಾಧವಿರುವುದರಿಂದ ರಸ್ತೆ ಕಡಿತವನ್ನು ತಿರಸ್ಕರಿಸಿ ಹಿಂಬರಹ ನೀಡಲಾಗಿರುತ್ತದೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರು ಮೂಲ ಭೂತ ಸೌಲಭ್ಯಗಳನ್ನು ನೀಡುವಂತೆ ಕೋರಿಕೊಂಡಿರುತ್ತಾರೆ.

ನಿರ್ಣಯ:- ಮೇಲ್ಮನವಿದಾರರ ಮತ್ತು ಪ್ರತಿವಾದಿಗಳ ಹೇಳಿಕೆಗಳನ್ನು ಸಮಿತಿಯು ಕೂಲಂಕಷವಾಗಿ ಆಲಿಸಲಾಯಿತು. ಪ್ರತಿವಾದಿಗಳು ಮೂಲ ಕಡತವನ್ನು ಸಮಿತಿಯ ಮುಂದೆ ಮಂಡಿಸಲು ವಿಫಲರಾಗಿರುತ್ತಾರೆ. ಸಮಿತಿಯು ಈ ಬಗ್ಗೆ ಕಾರಣವನ್ನು ಕೇಳಲಾಗಿ ಸಂಬಂಧಪಟ್ಟ ಅಧಿಕಾರಿಗಳು ಸದರಿ ಉಪವಿಭಾಗಕ್ಕೆ ಒಂದು ವಾರದ ಹಿಂದೆ ನೇಮಕಗೊಂಡಿರುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಸದರಿ ಅಧಿಕಾರಿಯ ಹೇಳಿಕೆಯನ್ನು ಪರಿಗಣಿಸಿ ಸಮಿತಿಯು ಇನ್ನು ಮುಂದೆ ಈ ರೀತಿಯಾಗದಂತೆ ಎಚ್ಚರ ವಹಿಸುವಂತೆ ಸೂಚಿಸಿರುತ್ತದೆ. ಹಾಗೂ ಮೇಲ್ಮನವಿದಾರರು ಸಲ್ಲಿಸಿರುವ ರಿಟ್ ಪಿಟಿಷನ್ ಸಂಖ್ಯೆ:25924/2011ನ್ನು ಪರಿಶೀಲಿಸಿದಾಗ ಸದರಿ ಪ್ರಕರಣದಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಪ್ರತಿವಾದಿಯಾಗಿರುವುದಿಲ್ಲ. ಹಾಗೂ ಮೇಲ್ಮನವಿದಾರರು ನಕ್ಷೆಯ ವಿರುದ್ಧ ಕಟ್ಟವನ್ನು ನಿರ್ಮಿಸಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಸದರಿ ಪ್ರಕರಣದಲ್ಲಿ ಮೇಲ್ಮನವಿದಾರರು ಯಾವುದೇ ನಕ್ಷೆ ಉಲಂಘನೆ ಮಾಡಿಲ್ಲದಿರುವುದರಿಂದ ಹಾಗೂ ನಗರ ಪಾಲಿಕೆಯು ಈ ಪ್ರಕರಣದಲ್ಲಿ ಪ್ರತಿವಾದಿಯಾಗಿಲ್ಲದೇ ಇರುವುದನ್ನು ಮನಗಂಡು ನಂ.59, 7ನೇ ಬ್ಲಾಕ್, ಭವಾನಿ ಹೆಚ್.ಬಿ.ಸಿ.ಎಸ್. ಕತ್ತರುಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು ಇಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ನೀರು ಒಳಚರಂಡಿ, ವಿದ್ಯುತ್ ಸೌಲಭ್ಯಗಳನ್ನು ಪಡೆದುಕೊಳ್ಳಲು ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಇದೊಂದು ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

17.ವಿಷಯ:ಸಂಖ್ಯೆ:ಅಸ್ಥಾಸ/(ತೆ)/39/2011-12

ಶ್ರೀ.ಜಿ.ಶ್ರೀನಿವಾಸ್, ನಂ.23, 6ನೇ ಅಡ್ಡರಸ್ತೆ, ಗೋಕುಲ 1ನೇ ಹಂತ, 1ನೇ ಮುಖ, ವಾರ್ಡ್-17 ಈ ಸ್ವತ್ತಿಗೆ ಕಂದಾಯವನ್ನು ವಾಣಿಜ್ಯ ದರದಲ್ಲಿ ನಿಗಧಿಪಡಿಸಿದ್ದು, ವಸತಿ ದರದಲ್ಲಿ ನಿಗಧಿಪಡಿಸಿಕೊಡುವಂತೆ ಕೋರಿ ದಿನಾಂಕ:20-10-2001ರಂದು ಸಂಬಂಧ ಪಟ್ಟ ಅಧಿಕಾರಿಗಳಿಗೆ ಅರ್ಜಿ ನೀಡಿದ್ದರೂ ಸಹ ನನ್ನ ಮನವಿಯನ್ನು ಪರಿಗಣಿಸದೆ ಹಾಲಿ ನಿಗಧಿಪಡಿಸಿರುವ ಕಂದಾಯವು

ಸಮಂಜಷವಾಗಿರುತ್ತದೆಂದು ಸಹಾಯಕ ಕಂದಾಯ ಅಧಿಕಾರಿ (ಯಶವಂತಪುರ)ರವರು ದಿನಾಂಕ:10-11-2011ರಂದು ನೀಡಿರುವ ತಿಳುವಳಿಕೆ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಹಾಜರಿದ್ದು ಪ್ರತಿವಾದಿಗಳ ಪರವಾಗಿ ಶ್ರೀ.ವೆಂಕಟೇಶ್, ಕಂದಾಯ ಪರಿವೀಕ್ಷಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ತಮ್ಮ ಹೇಳಿಕೆಗಳನ್ನು ಲಿಖಿತವಾಗಿ ನೀಡಿದ್ದು ಅದರಂತೆ ಕಂದಾಯವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

ನಿರ್ಣಯ:- ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳು ಹಾಗೂ ಅಪರ ಆಯುಕ್ತರು (ರಾಜರಾಜೇಶ್ವರಿನಗರ)ರವರ ದಿನಾಂಕ:24-11-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಟಿಪ್ಪಣಿಯಲ್ಲಿ ವಿವರಿಸಿರುವಂತೆ ಪೇಯಿಂಗ್ ಗೆಸ್ಟ್ ನಡೆಸುತ್ತಿರುವುದರಿಂದ ವಸತಿಯೇತರ ಬಾಡಿಗೆ ದರ ನಿಗಧಿಪಡಿಸಿರುವುದು ಕಂಡು ಬರುತ್ತದೆ. ಆದರೆ ಸ್ವಯಃ ಘೋಷಿತ ಆಸ್ತಿ ತೆರಿಗೆ ಕೈಪಿಡಿ ಪುಸ್ತಕ 2008-09ನ್ನು ಪರಿಶೀಲಿಸಿದಾಗ ಅನುಭಂದ-1 ಕಲಂ (7)ರಲ್ಲಿ ಪೇಯಿಂಗ್ ಗೆಸ್ಟ್ ನಡೆಸುತ್ತಿದ್ದಲ್ಲಿ ವಸತಿ ವಲಯದ ಬಾಡಿಗೆ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸಬಹುದಾಗಿರುತ್ತದೆ. ಅಲ್ಲದೆ ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ದಿನಾಂಕ:23-12-2011ರಂದು ತಪಾಸಣೆ ಮಾಡಿದಾಗ ಪೇಯಿಂಗ್ ಗೆಸ್ಟಾಗಲಿ, ಅಡಿಗೆ ತಯಾರಿಸುವ ಕೋಣೆಯಾಗಲಿ ಕಂಡು ಬಂದಿರುವುದಿಲ್ಲ. ಹಾಗೂ ತಪಾಸಣಾ ಸಮಯದಲ್ಲಿ ಅಲ್ಲಿ ವಾಸಿಸುತ್ತಿರುವ ಬಾಡಿಗೆದಾರರಲ್ಲಿ ಒಬ್ಬರು ಇಲ್ಲಿ ವಾಸಿಸುತ್ತಿರುವ ಬಾಡಿಗೆದಾರರಲ್ಲಿ ಯಾರದ್ದಾದರು ಹುಟ್ಟಹಬ್ಬ ಇದ್ದಲ್ಲಿ ಸಂದರ್ಶಕರ ಕೊಠಡಿಯಲ್ಲಿ ಆಚರಿಸಿಕೊಳ್ಳುತ್ತಿದ್ದು, ಅಂತಹ ಸಂದರ್ಭಗಳಲ್ಲಿ ಮಾತ್ರ ತಿಂಡಿ ತಿನಿಸುಗಳನ್ನು ಬೇರೆ ಕಡೆಯಿಂದ ತರಿಸಿಕೊಂಡು ಉಪಯೋಗಿಸಿರುತ್ತೇವೆಂಬ ವಿಷಯವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಆದರೆ ಸ್ಥಳದಲ್ಲಿ ಹಾಜರಿದ್ದ ಮೌಲ್ಯ ಮಾಪಕರು ಟೋಕನ್‌ಗಳನ್ನು ವಿತರಿಸಿ ಊಟ/ತಿಂಡಿಗಳನ್ನು ನೀಡುತ್ತಿದ್ದರೆಂಬ ಅಂಶವನ್ನು ತಿಳಿಸಿರುತ್ತಾರೆ. ಆದರೆ ಊಟ/ತಿಂಡಿಯನ್ನು ಅಲ್ಲೇ ತಯಾರಿಸಿ ವಿತರಿಸುತ್ತಿರುವ ಬಗ್ಗೆ ಪುಷ್ಟೀಕರಿಸುವಂತ ಯಾವುದೇ ವಿವರಗಳನ್ನು/ದಾಖಲೆಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕಡತದಲ್ಲಾಗಲೀ, ಸಭೆಯಲ್ಲಾಗಲೀ ಮಂಡಿಸಿರುವುದಿಲ್ಲ. ಇದರಿಂದಾಗಿ ಸಮಿತಿಯು ಸದರಿ ಕಟ್ಟಡದಲ್ಲಿ ವಾಣಿಜ್ಯ ಚಟುವಟಿಕೆಗಳು ನಡೆಯುತ್ತಿಲ್ಲವೆಂದು ಭಾವಿಸುತ್ತದೆ.

ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಆಸ್ತಿ ಸಂಖ್ಯೆ:23, 6ನೇ ಅಡ್ಡರಸ್ತೆ, ಗೋಕುಲ 1ನೇ ಹಂತ, 1ನೇ ಮುಖ, ವಾರ್ಡ್-17 ಈ ಸ್ವತ್ತಿನ ಅಳತೆ 11025 ಚದರಡಿಗಳಿಗೆ ವಸತಿ ಬಾಡಿಗೆ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

18. ವಿಷಯ:ಸಂಖ್ಯೆ:ಅಸ್ಥಾಸ/(ತೆ)/40/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ಮಾನ್ಯ ಆಡಳಿತಗಾರರು ತೆಗೆದುಕೊಂಡ ತೀರ್ಮಾನದಂತೆ ಮಳಿಗೆದಾರರಿಗೆ ಈ ಕಛೇರಿಯಿಂದ ನೋಟೀಸ್ ನೀಡಿರುವ ವಿರುದ್ಧ ವರ್ತಕರ ಸಂಘದವರು ನ್ಯಾಯಾಲಯದಲ್ಲಿ ಮೊರೆ ಹೋದ ಕಾರಣ ನ್ಯಾಯಾಲಯವು ದಿನಾಂಕ:19-12-2007ರಂದು ನೀಡಿರುವ ಆದೇಶದಲ್ಲಿ ಸದರಿ ನೋಟೀಸ್‌ಗೆ ತಡೆಯಾಜ್ಞೆಯನ್ನು ನೀಡಿ ನಗರ ಪಾಲಿಕೆಯು ಕಕ್ಷಿದಾರರಿಗೆ ಯಾವುದೇ ಅವಕಾಶವನ್ನು ನೀಡದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುವುದನ್ನು ತಡೆದು ಅವಕಾಶವನ್ನು ಕಲ್ಪಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು


ಸೂಚಿಸಿರುವ ಮೇರೆಗೆ ಪರವಾನಗಿದಾರರುಗಳನ್ನು ದಿನಾಂಕ:08-06-2011ರಂದು ಅವರ ಅಹವಾಲುಗಳನ್ನು ಆಯುಕ್ತರ ಮುಂದೆ ಹೇಳಿಕೊಳ್ಳಲು ಅವಕಾಶ ನೀಡಲಾಗಿತ್ತು. ಸದರಿಯವರು ಮೌಖಿಕವಾಗಿ ದರವನ್ನು ಕಡಿಮೆ ಮಾಡಲು ಕೋರಿದ ಮೇರೆಗೆ ಲಿಖಿತ ಹೇಳಿಕೆಗಳನ್ನು ನೀಡಲು ಸೂಚಿಸಲಾಯಿತು. ಆದರೆ ಈವರೆವಿಗೂ ಸದರಿಯವರುಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ದರ ಪರಿಷ್ಕರಣೆಯ ವಿಷಯದ ಬಗ್ಗೆ ಜರೂರಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:26-11-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರುಗಳು ಮತ್ತು ಪ್ರತಿವಾದಿಯಾದ ಶ್ರೀ.ಶಾಂತೇಶ್, ಸಹಾಯಕ ಕಂದಾಯ ಅಧಿಕಾರಿ (ಪ್ರಭಾರ)ರವರು ಹಾಜರಿರುತ್ತಾರೆ. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ಅಹವಾಲುಗಳನ್ನು ಕೇಳಿದ ನಂತರ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

19. ವಿಷಯ:ಸಂಖ್ಯೆ:ಅಸ್ಥಾಸ/(ತೆ)/41/2011-12

ಪೀಣ್ಯ ಕೈಗಾರಿಕಾ ಬಡಾವಣೆ, 2ನೇ ಹಂತ ಷೆಡ್ ನಂ.ಬಿ-202, ಡಿವಿಷನ್ ನಂ.41 ಈ ಸ್ವತ್ತಿನ ಮಾಲೀಕರಾದ ಶ್ರೀ.ಎಸ್.ಬಸವರಾಜಯ್ಯರವರು ಪ್ರಥಮ ಅಪೀಲು ಅಧಿಕಾರಿಗಳು ನಿಗಧಿಪಡಿಸಿ ದಿನಾಂಕ:03-09-2010ರಂದು ಸಂಖ್ಯೆ:ವಾಲೆ/ಪಿಆರ್/ಕೆಟಿಆರ್/89/2010-11, ಎಂ.ಆರ್.50/2010-11ರಲ್ಲಿ ಕಂದಾಯ ಅಧಿಕಾರಿ, ದಾಸರಹಳ್ಳಿ ವಲಯರವರು ನೀಡಿರುವ ವಿಶೇಷ ಸೂಚನಾ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಾಸರಹಳ್ಳಿ)ರವರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಸ್ವತ್ತಿಗೆ ಕಂದಾಯ ನಿಗಧಿಪಡಿಸಿ ನೀಡಿರುವ ಆದೇಶವ ಕಾನೂನು ಬದ್ಧವಾಗಿರುವುದಿಲ್ಲ. ಕಾನೂನು ರೀತಿ ಕಂದಾಯವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಈಗ ಕಂದಾಯ ನಿಗಧಿಪಡಿಸಿ ನೀಡಿರುವ ಆದೇಶವು ಸಮಂಜಸವಾಗಿರುವುದರಿಂದ ಸದರಿ ಕಂದಾಯವನ್ನೇ ಮುಂದುವರೆಸುವುದೆಂದು ತಿಳಿಸಿರುತ್ತಾರೆ. ಎರಡೂ ಕಡೆಯ ವಾದವನ್ನು ಆಲಿಸಿದ ನಂತರ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

20. ವಿಷಯ:ಸಂಖ್ಯೆ:ಅಸ್ಥಾಸ/(ತೆ)/42/2011-12

ನಂ.75, ರೆಸಿಡೆನ್ಸಿ ರಸ್ತೆ, ವಾರ್ಡ್-111ರ ಶಿವಶರಣ್ ಇನ್ ಕಾರ್ಪೋರೇಟ್ಸ್‌ನ ಮಾಲೀಕರು ಸದರಿ ಸ್ವತ್ತಿಗೆ ಕಂದಾಯವನ್ನು ಯಾವ ರೀತಿ ನಿಗಧಿಪಡಿಸಿದ್ದಾರೆಂಬ ಬಗ್ಗೆ ನಮಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಹಾಗೂ ನಾವು ಹಲವಾರು ಬಾರಿ ಕಂದಾಯ ಕಡಿಮೆ ಮಾಡಿಕೊಡುವಂತೆ ಮನವಿಯನ್ನು ಸಲ್ಲಿಸಿದ್ದರೂ ಸಹ ಇದುವರೆವಿಗೂ ನಮಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲವೆಂದು ತಿಳಿಸಿ ನ್ಯಾಯಬದ್ಧವಾದ ಕಂದಾಯವನ್ನು ನಿಗಧಿಪಡಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಮೇಲ್ಮನವಿದಾರರ ಪರವಾಗಿ ಹಾಜರಿದ್ದ ಶ್ರೀ.ನಿಖಿಲ್ ರಾಯ್‌ರವರು ಲಿಖಿತವಾಗಿ ಹೇಳಿಕೆಗಳನ್ನು ನೀಡಿದ್ದು, ಅದರಂತೆ ಕಂದಾಯವನ್ನು ನಿಗಧಿಪಡಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಮೇಲ್ಮನವಿದಾರರು ಸದರಿ ಕಟ್ಟಡ ಅಳತೆ 19800 ಚದರ ಅಡಿಗಳಿರುವುದಾಗಿ ಘೋಷಿಸಿಕೊಂಡಿರುತ್ತಾರೆ. ಹಾಗೂ 1997ರಿಂದ ಕಂದಾಯ ಬಾಕಿ ಇರುವುದಾಗಿ ತಿಳಿಸಿರುತ್ತಾರೆ. ಎರಡೂ ಕಡೆಯ ವಾದವನ್ನು ಆಲಿಸಿದ ನಂತರ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

21. ವಿಷಯ:ಸಂಖ್ಯೆ:ಅಸ್ಥಾಸ/(ಕಾ)/43/2011-12

ಶ್ರೀ.ಎಫ್.ಎ.ಜಾಲಗಾರ್, ನಂ.545, 22ನೇ ಎ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70 ಈ ಸ್ವತ್ತಿನಲ್ಲಿ ನಿರ್ಮಾಣ ಮಾಡಿರುವ ಕಟ್ಟಡಕ್ಕೆ ನೀರು, ಒಳಚರಂಡಿ ಸೌಲಭ್ಯ ಮತ್ತು ವಿದ್ಯುತ್ ಸಂಪರ್ಕವನ್ನು ಕಲ್ಪಿಸಿಕೊಳ್ಳಲು ರಸ್ತೆ ಕಡಿತಕ್ಕಾಗಿ ಅರ್ಜಿಯನ್ನು ಸಲ್ಲಿಸಿದ್ದು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಬನಶಂಕರಿ) ಉಪ ವಿಭಾಗರವರು ದಿನಾಂಕ:02-08-2011ರಂದು ಸದರಿಯವರ ಮನವಿಯನ್ನು ತಿರಸ್ಕರಿಸಿದ್ದು, ಸದರಿ ನೋಟೀಸ್‌ನ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಮ್ಮ ಪ್ರತಿನಿಧಿಯಾದ ಶ್ರೀ.ಉಮೇಶ್‌ರವರೊಂದಿಗೆ ಹಾಗೂ ಪ್ರತಿವಾದಿಗಳಾದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಬನಶಂಕರಿ)ರವರು ಹಾಜರಾಗಿರುತ್ತಾರೆ.

ಮೇಲ್ಮನವಿದಾರರು ತಮ್ಮ ಹೇಳಿಕೆಯಲ್ಲಿ ದಿನಾಂಕ:11-11-2009ರಲ್ಲಿ ರಸ್ತೆ ಕಡಿತಕ್ಕಾಗಿ ಅರ್ಜಿ ಸಲ್ಲಿಸಿರುತ್ತೇವೆ. ಇದುವರೆವಿಗೂ ನಮ್ಮ ಅರ್ಜಿಯ ಬಗ್ಗೆ ಯಾವುದೇ ಕ್ರಮ ವಹಿಸಿರುವುದಿಲ್ಲ. ಕೆ.ಎಂ.ಸಿ. ಕಾಯ್ದೆ ಕಲಂ 199ರನ್ವಯ ನೀರು ಸರಬರಾಜು ಕೊಳವೆಗಳನ್ನು ಅಳವಡಿಸಿಕೊಳ್ಳಲ್ಲು ಅವಕಾಶ ಕಲ್ಪಿಸಲಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆಯಲ್ಲಿ ರಸ್ತೆ ಅಗೆತಕ್ಕೆ ಅನುಮತಿ ಕೊಡಬಾರದೆಂದು ಎಲ್ಲೂ ನಮೂಡಿಸಿರುವುದಿಲ್ಲ. ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ ಈಗಾಗಲೇ ಕೆ.ಎ.ಟಿ.ಯಲ್ಲಿ ಪ್ರಕರಣ ಬಾಕಿ ಇರುತ್ತದೆ. ಹಾಗೂ ರಿಟ್ ಪಿಟಿಷನ್ ಸಂಖ್ಯೆ:30529/2004 ಮತ್ತು 12022/2008ಗಳಲ್ಲಿ ಆದೇಶಿಸಿರುವಂತೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ಅನುಮತಿ ನೀಡಬಹುದಾಗಿರುತ್ತದೆ. ಆದುದರಿಂದ ಕೆ.ಎ.ಟಿ.ಯಲ್ಲಿರುವ ಪ್ರಕರಣದ ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಪಡೆಯಲು ರಸ್ತೆ ಅಗೆತಕ್ಕೆ ಅನುಮತಿ ನೀಡುವಂತೆ ಕೋರಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಮತ್ತು ಉಪ ಕಾನೂನು ಅಧಿಕಾರಿಗಳು ಪ್ರಕರಣವು ನ್ಯಾಯಾಲದಲ್ಲಿರುವುದರಿಂದ ಹಾಗೂ ರಿಟ್ ಪಿಟಿಷನ್ 11578/2008ರಂತೆ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಉಪ ಕಾನೂನು ಅಧಿಕಾರಿಗಳು ನ್ಯಾಯಾಲಯದಲ್ಲಿ ಪ್ರಕರಣವು ದಾಖಲಾಗಿದ್ದಾಗ ಯಾವ ಕಾಯ್ದೆಯಡಿ ರಸ್ತೆ ಅಗೆತಕ್ಕೆ ಪರವಾನಗಿ ನೀಡಲು ಬರುವುದಿಲ್ಲವೆಂದು ತಿಳಿಸಿರುವುದಿಲ್ಲ. ಹಾಗೂ ಅಪೀಲುದಾರರಿಗೆ ರಸ್ತೆ ಅಗೆತವನ್ನು ತಿರಸ್ಕರಿಸಲಾಗಿದೆಂದು ನೀಡಿರುವ ಪತ್ರದಲ್ಲೂ ಸಹ ಸಕಾರಣಗಳನ್ನು ನೀಡದೆ ನ್ಯಾಯಾಲದಯಲ್ಲಿ ದಾವೆ ಇರುವುದರಿಂದ ರಸ್ತೆ ಅಗೆತಕ್ಕೆ ಅನುಮತಿ ನೀಡಲು ಬರುವುದಿಲ್ಲವೆಂದು ತಿರಸ್ಕರಿಸಿರುವುದನ್ನು ಸಮಿತಿಯು ಗಮನಿಸಿರುತ್ತದೆ.

ನಿರ್ಣಯ:-ದಿನಾಂಕ:03-08-2011ರಂದು ವಿವರವಾದ ಟಿಪ್ಪಣಿಯನ್ನು ಸಮಿತಿಯ ಮುಂದೆ ಮಂಡಿಸುವಂತೆ ತಿಳಿಸಲಾಗಿರುತ್ತದೆ. ಆದರೆ ಇದುವರೆವಿಗೂ ಸಂಬಂಧಪಟ್ಟ ಅಧಿಕಾರಿಗಳು ಟಿಪ್ಪಣಿಯನ್ನು ಸಮಿತಿಯ ಮುಂದೆ ಮಂಡಿಸಲು ವಿಫಲರಾಗಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದಾಗ ಈ ಉಪ ವಿಭಾಗಕ್ಕೆ ನಾನು ಹೊಸದಾಗಿ ನೇಮಕಗೊಂಡಿರುತ್ತೇನೆ. ಹಾಗೂ ಹಿಂದೆ ಇದ್ದಂತಹ ಅಧಿಕಾರಿಯು ಟಿಪ್ಪಣಿಯನ್ನು ತಯಾರಿಸಿ ಕಳುಹಿಸಿರುತ್ತಾರೆ. ಸದರಿ ಟಿಪ್ಪಣಿಯು ಆಕಸ್ಮಿಕವಾಗಿ ಕಾನೂನು ಕೋಶಕ್ಕೆ ಹೋಗಿರುತ್ತದೆಂಬ ವಿಷಯವನ್ನು ಸಮಿತಿಯ ಗಮನಕ್ಕೆ ತಂದಿರುತ್ತಾರೆ. ಸದರಿ ಅಧಿಕಾರಿಯ ಮನವಿಯನ್ನು ಪರಿಗಣಿಸಿ ಇನ್ನು ಮುಂದೆ ಪುನರಾರ್ತನೆಯಾಗದಂತೆ ಎಚ್ಚರಿಕೆ ನೀಡಿ ಕಾಲಮಿತಿಯಲ್ಲಿ ಸಮಿತಿಯ ಮುಂದೆ ಕಡತವನ್ನು ಮಂಡಿಸುವಂತೆ ಸೂಚಿಸುತ್ತಾ, ಸಮಿತಿಯು ಮೇಲ್ಮನವಿದಾರರ ವಾದ ಹಾಗೂ ರಿಟ್ ಪಿಟಿಷನ್ ಸಂಖ್ಯೆ:30529/2004 ಮತ್ತು 12022/2008ಗಳ ಆದೇಶವನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಮೂಲ ಭೂತ ಸೌಕರ್ಯಗಳಲ್ಲಿ ಒಂದಾದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಮತ್ತು ವಿದ್ಯುತ್ ಸರಬರಾಜುಗಳನ್ನು ಒದಗಿಸುವುದು ಅತಿ ಅವಶ್ಯಕವಾಗಿದ್ದು ಅಪೀಲುದಾರರು ನಂ.545, 22ನೇ ಎ ಅಡ್ಡರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು-70 ಈ ಸ್ವತ್ತಿನಲ್ಲಿ ನಿರ್ಮಿಸಿರುವ ಕಟ್ಟಡಕ್ಕೆ ಕೆ.ಎ.ಟಿ.ಯಲ್ಲಿರುವ ದಾವೆಯಲ್ಲಿ ಆಗುವ ತೀರ್ಮಾನಕ್ಕೆ ಒಳಪಡಿಸಿ ರಸ್ತೆ ಅಗೆತಕ್ಕೆ ಅನುಮತಿ ನೀಡುವುದೆಂದು ಹಾಗೂ ಈ ನಿರ್ಣಯವನ್ನು ಈ ಪ್ರಕರಣಕ್ಕೆ ಮಾತ್ರ ಅಳವಡಿಸಿಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

22. ವಿಷಯ:ಸಂಖ್ಯೆ:ಅಸ್ಥಾಸ(ಖಾ)/44/2011-12

ಶ್ರೀ.ಪಿ.ವಿನ್ಸೆಂಟ್‌ರವರು ಸ್ವತ್ತಿನ ಸಂಖ್ಯೆ:13, 13/1, 13/2 ಮತ್ತು 13/3, 1ನೇ ಮುಖ್ಯರಸ್ತೆ, ಜಕ್ಕಸಂದ್ರ, ವಾರ್ಡ್-151ರ ಸ್ವತ್ತುಗಳ ಖಾತಾ ರದ್ದುಪಡಿಸಲು ಕೋರಿದ್ದು, ಸದರಿಯವರ ಮನವಿಯನ್ನು ಸಹ ಕಂದಾಯ ಅಧಿಕಾರಿ, ಕೋರಮಂಗಲ ಉಪ ವಲಯರವರು ತಿರಸ್ಕರಿಸಿ ದಿನಾಂಕ:24-10-2011ರಂದು ನೀಡಿರುವ ಹಿಂಬರಹದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಮೇಲ್ಮನವಿದಾರರು ತಮ್ಮ ಹೇಳಿಕೆಗಳನ್ನು ನೀಡುತ್ತಾ ಪ್ರತಿವಾದಿಗಳು ನೀಡಿರುವ ಹಿಂಬರಹವು ಕಾನೂನು ಬದ್ಧವಾಗಿರುವುದಿಲ್ಲ ಹಾಗೂ ಪ್ರತಿವಾದಿಗಳು ಹಿಂಬರಹದಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಹೋಗಿ ತೀರ್ಮಾನಿಸಿಕೊಳ್ಳಿ ಎಂದು ತಿಳಿಸಿರುವುದು ಸರಿಯಿರುವುದಿಲ್ಲ.

ಪ್ರತಿವಾದಿಗಳು ತಮ್ಮ ಹೇಳಿಕೆಗಳನ್ನು ನೀಡುತ್ತಾ, ಮೇಲ್ಮನವಿದಾರರು ಕೆ.ಎಂ.ಸಿ.ಕಾಯ್ದೆ ಕಲಂ114ಎ ರಡಿ ಪುನರ್ ಪರಿಶೀಲನಾ ಅರ್ಜಿ ಸಲ್ಲಿಸಿದ್ದು, ಅದರಂತೆ ಆದೇಶವನ್ನು ಹೊರಡಿಸಲಾಗಿರುತ್ತದೆ. ಕೆ.ಎಂ.ಸಿ.ಕಾಯ್ದೆ ಕಲಂ 114ಎ ರಡಿಯಾಗಿರುವ ಆದೇಶವನ್ನು ಈ ಪ್ರಾಧಿಕಾರವು ತೆಗೆದುಕೊಳ್ಳಲು ಅಧಿಕಾರವಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಸದರಿ ಪ್ರಕರಣವನ್ನು ಹೆಚ್ಚಿನ ವಾದ ಮಂಡನೆಗಾಗಿ ಮುಂದೂಡುತ್ತಾ, ಮೇಲ್ಮನವಿದಾರರ ಮನವಿಯ ಮೇರೆಗೆ ಮಧ್ಯಂತರ ಆದೇಶವನ್ನು ಹೊರಡಿಸಲು ಕಾಯ್ದಿರಿಸಿದೆ.

**ನಿರ್ಣಯ**:- ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ಹೇಳಿಕೆಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದ ನಂತರ, ಮೇಲ್ಮನವಿದಾರರು ಪುನರ್ ಪರಿಶೀಲನಾ ಅರ್ಜಿಯನ್ನು ಸಲ್ಲಿಸದೇ ಇದ್ದರೂ ಸಹ ಸಂಬಂಧಪಟ್ಟ ಪ್ರಾಧಿಕಾರವು ತನ್ನಷ್ಟಕ್ಕೆ ತಾನೇ ಪುನರ್ ಪರಿಶೀಲನೆ ನಡೆಸಿ ಖಾತಾ ವರ್ಗಾಯಿಸಿರುವುದಾಗಿ ಸಮಿತಿಯು ಅಭಿಪ್ರಾಯಕ್ಕೆ ಬಂದಿರುತ್ತದೆ. ಅಲ್ಲದೆ ಕೆ.ಎಂ.ಸಿ.ಕಾಯ್ದೆ ಕಲಂ 114ಎ ರಡಿ ಪುನರ್ ಪರೀಲನೆ ಮಾಡುವಾಗ ವಾದಿ ಮತ್ತು ಪ್ರತಿವಾದಿಗಳಿಗೆ ಹೇಳಿಕೆಗಳನ್ನು ನೀಡಲು ಅವಕಾಶವನ್ನು ಕಲ್ಪಿಸಿ ನಂತರ ಆದೇಶ ಹೊರಡಿಸಬೇಕಾಗಿರುತ್ತದೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸಮಿತಿಯ ಮುಂದೆ ಮೂಲ ಕಡತವನ್ನು ಮಂಡಿಸಲು ವಿಫಲರಾಗಿರುತ್ತಾರೆ. ಆದುದರಿಂದ ಆಯುಕ್ತರು ಸಮಿತಿಯ ಮುಂದೆ ಮೂಲ ಕಡತವನ್ನು ಮಂಡಿಸಿ ಸಮಿತಿಯು ಅಂತಿಮ ತೀರ್ಮಾನ ಕೈಗೊಳ್ಳುವವರೆಗೂ ಖಾತಾ ಬದಲಾವಣೆ ಮಾಡಿ ದಿನಾಂಕ:24-10-2011ರಂದು ನೀಡಿರುವ ಹಿಂಬರಹಕ್ಕೆ ತಡೆಯಾಜ್ಞೆ ನೀಡುತ್ತಾ, ಸದರಿ ಸ್ವತ್ತಿನ ಖಾತಾವನ್ನು 2004ರಲ್ಲಿರುವಂತೆ ಶ್ರೀ.ಪಿ.ವಿನ್ಸೆಂಟ್‌ರವರ ಹೆಸರಿನಲ್ಲೇ ಮುಂದುವರೆಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

23. ವಿಷಯ:ಸಂಖ್ಯೆ:ಅಸ್ಥಾಸ(ಕಾ)/45/2011-12

ಎಸ್.ವಿ.ಸಿ.ಕೆ. ಎಜುಕೇಷನ್ ಇನ್‌ಸ್ಟಿಟ್ಯೂಷನ್‌ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬನಶಂಕರಿ ಉಪ ವಿಭಾಗರವರು ದಿನಾಂಕ:18-08-2011ರಂದು ನೀಡಿರುವ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಸದರಿ ಪ್ರಕರಣವನ್ನು ಆಯುಕ್ತರು, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ಮತ್ತು ಸಂಬಂಧಪಟ್ಟ ವಾರ್ಡಿನ ಸದಸ್ಯರೊಂದಿಗೆ ಚರ್ಚಿ ತೀರ್ಮಾನ ಕೈಗೊಳ್ಳವುದೆಂದು ತೀರ್ಮಾನಿಸಿ ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:27-01-2012ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ) |
| 04 | ಬಿ.ಎಸ್.ಆನಂದ | ಸದಸ್ಯರು | |
| 05 | ಎಂ.ವಸಂತಕುಮಾರಿ | ಸದಸ್ಯರು | |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ತೆ)/05/2011-12

ತಿಮ್ಮಯ್ಯ ರಸ್ತೆ ಮೀನಾಕ್ಷಿ ಕೋಯಿಲ್ ಸ್ಟ್ರೀಟ್ ವಾರ್ಡ್-110 (ಹಳೆದು 78) ಇಲ್ಲಿನ ನಗರ ಪಾಲಿಕೆ ಸ್ವತ್ತಿನ ಗುತ್ತಿಗೆಯನ್ನು ಮುಂದುವರೆಸಿಕೊಡುವಂತೆ ಕೋರಿ ಶ್ರೀ. ಅಬ್ದುಲ್ ಖಲೀಲ್‌ರವರು ಸಲ್ಲಿಸಿರುವ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-03-2011ರ ಟಿಪ್ಪಣಿ.

**ನಿರ್ಣಯ**:-ಆಯುಕ್ತರ ದಿನಾಂಕ:19-03-2011ರ ಟಿಪ್ಪಣಿಯನ್ನು ಪರಿಶೀಲಿಸಲಾಗಿ ಸದರಿ ಪ್ರಕರಣದಲ್ಲಿ ಈಗಾಗಲೇ ಸರ್ಕಾರ ಹಂತದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಆದೇಶವಾಗಿರುವ ಹಿನ್ನೆಲೆಯಲ್ಲಿ ಮೇಲ್ಮನವಿದಾರರ ಮೇಲ್ಮನವಿಯನ್ನು ವಜಾಗೊಳಿಸುತ್ತಾ, ನಿಯಮಾನುಸಾರ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

02.ವಿಷಯ:ಸಂಖ್ಯೆ:ಅಸ್ಥಾಸ/(ಖಾತ)/12/2011-12

ಶ್ರೀಮತಿ.ಲಕ್ಷ್ಮಿದೇವಮ್ಮ, ನಂ.33, 3ನೇ ಬ್ಲಾಕ್, 2ನೇ ಅಂತಸ್ತು, ಹೊಸ ತಿಪ್ಪಸಂದ್ರ, ಬಿ.ಇ.ಎಂ.ಎಲ್, ಟೌನ್ ಶಿಪ್, ಬೆಂಗಳೂರು-75 ಇವರು ಮೇಲ್ಮನವಿ ಸಲ್ಲಿಸಿ ಮನೆ ನಂ.10, ಕಸ್ತೂರಿಬಾ ನಗರ, ಮೈಸೂರು ರಸ್ತೆ, ಬೆಂಗಳೂರು ಈ ಸ್ವತ್ತನ್ನು ಬೇರೊಬ್ಬರ ಹೆಸರಿಗೆ ಖಾತಾ ಮಾಡಿಕೊಟ್ಟಿರುತ್ತಾರೆ. ಸದರಿ ಖಾತಾವನ್ನು ರದ್ದುಪಡಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

**ನಿರ್ಣಯ**:- ಸದರಿ ಪ್ರಕರಣದಲ್ಲಿ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಗಳು ಯಾವುದೇ ಸಭೆಗೆ ಹಾಜರಾಗಿರುವುದಿಲ್ಲ ಹಾಗೂ ತಮ್ಮ ಪರವಾಗಿ ಪ್ರಥಮ ದರ್ಜೆ ಸಹಾಯಕರು ಅಥವಾ ಕಂದಾಯ ಪರಿವೀಕ್ಷಕರನ್ನು ಕಳುಹಿಸಿರುತ್ತಾರೆ. ಅಧಿಕಾರಿಗಳ ಪರವಾಗಿ ಹಾಜರಿರುವವರು ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ವಿವರವನ್ನು ನೀಡಲು ವಿಫಲರಾಗಿರುವುದಲ್ಲದೆ ನಮಗೇನು ತಿಳಿದಿರುವುದಿಲ್ಲವೆಂದು ಸಭೆಯ ಮುಂದೆ ತಿಳಿಸಿರುತ್ತಾರೆ. ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಮೂಲ ಕಡತವನ್ನು ಇದುವರೆವಿಗೂ ಸಮಿತಿಯ ಮುಂದೆ ಮಂಡಿಸಲು ವಿಫಲರಾಗಿರುವುದರಿಂದ ಕೂಡಲೇ ಸಂಬಂಧಪಟ್ಟ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟು ವಿಚಾರಣೆ ನಡೆಸಿ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳುವುದು. ಹಾಗೂ ಸದರಿ ಸ್ವತ್ತಿನ ಖಾತಾವನ್ನು ಶ್ರೀಮತಿ.ಲಕ್ಷ್ಮಿದೇವಮ್ಮನವರ ಹೆಸರಿಗೆ ನೋಂದಾಯಿಸಿಕೊಡಲು ಆಯುಕ್ತರು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ

ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. 1, 6 ಮತ್ತು 7ನೇ ಮೇಲ್ಮನವಿದಾರರಗಳು ಪರವಾಗಿ ಅವರ ವಕೀಲರಗಳು ಹಾಜರಾಗಿರುತ್ತಾರೆ. ಸಹಾಯಕ ನಿರ್ದೇಶಕರು, ನಗರ ಯೋಜನೆ (ಪಶ್ಚಿಮ)ರವರು ಹಾಜರಾಗಿರುತ್ತಾರೆ. ಹಾಜರಿದ್ದ 3 ಮತ್ತು 4ನೇ ಪ್ರತಿವಾದಿಗಳು ತಕರಾರನ್ನು ಸಲ್ಲಿಸಿರುತ್ತಾರೆ. ಹಾಜರಿದ್ದ 6 ಮತ್ತು 7ನೇ ಮೇಲ್ಮನವಿದಾರರು ತಕರಾರನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿರುತ್ತಾರೆ. 6 ಮತ್ತು 7ನೇ ಮೇಲ್ಮನವಿದಾರರುಗಳು ತಕರಾರನ್ನು ಸಲ್ಲಿಸಲು ಹಿಂದಿನ ವಕೀಲರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯದೇ ಇರುವುದರಿಂದ ತಕರಾರರು ಸಲ್ಲಿಸಲು ಕಾನೂನಿನಲ್ಲಿ ಅವಕಾವಿಲ್ಲದಿರುವುದರಿಂದ ಅವರಿಗೆ ತಕರಾರರು ಸಲ್ಲಿಸಲು ಅವಕಾಶ ನೀಡಬಾರದೆಂದು 1ನೇ ಮೇಲ್ಮನವಿದಾರರು ಮನವಿ ಮಾಡಿಕೊಂಡಿರುತ್ತಾರೆ. ವಾದ ಮಂಡನೆಗಾಗಿ ಪ್ರಕರಣವನ್ನು ಮುಂದೂಡಿದೆ.

<u>04.ವಿಷಯ:ಸಂಖ್ಯೆ:ಅಸ್ಥಾಸ(ತೆ)/22/2011-12</u>

ಸ್ವತ್ತಿನ ಸಂಖ್ಯೆ:63, 5ನೇ ಅಡ್ಡರಸ್ತೆ, ಲಕ್ಷ್ಮೀನಾರಾಯಣಪುರ, ಗಾಯಿತ್ರಿನಗರ, ಈ ಸ್ವತ್ತಿನ ಮಾಲೀಕರಾದ ಶ್ರೀ.ಶಿವಗಾಮಿ ಇವರು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ವಾರ್ಷಿಕ ಮೌಲ್ಯ ರೂ.6300/-ರಿಂದ 5600/- ವಸತಿಯೇತರ ಕಟ್ಟಡಕ್ಕೆ (ಬಾಡಿಗೆ ಮತ್ತು ಸ್ವಂತ) ವಾರ್ಷಿಕ ಮೌಲ್ಯ ರೂ.69120/-ರಿಂದ 51,840/-ಗಳಿಗೆ ದಿನಾಂಕ: 01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:15-07-2011ರಟಿಪ್ಪಣಿ.

<u>**ನಿರ್ಣಯ**</u>:- ಕಡತವನ್ನು ಹಾಗೂ ಮೇಲ್ಮನವಿದಾರರು ಸಲ್ಲಿಸಿರುವ ಲಿಖಿತ ಹೇಳಿಕೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಈ ಪ್ರಕರಣಕ್ಕೆ ಸಂಬಂಧಿಸಿದ ಅಧಿಕಾರಿಗಳು ಸಮಿತಿಯ ಸಭೆಗೆ ಹಾಜರಾಗಿ ಯಾವುದೇ ಹೇಳಿಕೆಗಳನ್ನು ನೀಡಲು ವಿಫಲರಾಗಿರುವುದರಿಂದ ಪ್ರತಿ ವಾದಿಗಳ ಹೇಳಿಕೆಗಳು ಏನೂ ಇಲ್ಲವೆಂದು ಸಮಿತಿಯು ಭಾವಿಸಿ ಮೇಲ್ಮನವಿದಾರರು ತಮ್ಮ ಲಿಖಿತ ಹೇಳಿಕೆಗಳಲ್ಲಿ ಕೋರಿಕೊಂಡಿರುವಂತೆ 1050 ಚದರಡಿಗಳನ್ನು ಸ್ವಂತಕ್ಕೆ (ವಸತಿಯೇತರ), 100 ಚದರಡಿಗಳನ್ನು ಬಾಡಿಗೆಗೆ (ವಸತಿಯೇತರ) ಹಾಗೂ 700 ಚರಡಿಗಳನ್ನು ಸ್ವಂತಕ್ಕೆ (ವಸತಿ) ಆಧಾರದ ಮೇಲೆ ದಿನಾಂಕ:01-04-2006ರಿಂದ ಜಾರಿಗೆ ಬರುವಂತೆ ಕಂದಾಯವನ್ನು ಪುನರ್ ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>05. ವಿಷಯ:ಸಂಖ್ಯೆ:ಅಸ್ಥಾಸ(ಖಾ)/28/2011-12</u>

ಶ್ರೀ.ಕೆ.ವಿಜಯಕುಮಾರ್, ನಂ.171/2, ತೂಬರಹಳ್ಳಿ, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು-66 ಇವರು ದಿನಾಂಕ:16-09-2011ರಂದು ಸಮಿತಿಯ ಮುಂದೆ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರು ದಿನಾಂಕ:08-08-2011ರಂದು ಹೊರಡಿಸಿರುವ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

<u>ಪ್ರಸ್ತಾವನೆ:</u>- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಗೂ 3ನೇ ಪ್ರತಿವಾದಿಯ ಪರವಾಗಿ ವಕೀಲರು ಹಾಜರಿದ್ದು ತಕರಾರರನ್ನು ಸಲ್ಲಿಸಿರುತ್ತಾರೆ. 4ನೇ ಪ್ರತಿವಾದಿಗಳು ತಮ್ಮ ವಕೀಲರೊಂದಿಗೆ ಹಾಜರಿದ್ದು ತಕಾರರನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿರುತ್ತಾರೆ. ಸಂಬಂಧಪಟ್ಟ ಅಧಿಕಾರಿಗಳು ಗೈರು ಹಾಜರಾಗಿರುವುದರಿಂದ ಮುಂದಿನ ಸಭೆಗೆ ಗೈರು ಹಾಜರಾದಲ್ಲಿ ಆಯುಕ್ತರ ಮುಖಾಂತರ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿ ವಿಷಯವನ್ನು ಮುಂದೂಡಲಾಯಿತು.

<u>06. ವಿಷಯ:ಸಂಖ್ಯೆ:ಅಸ್ಥಾಸ(ಜಾ)/34/2011-12</u>

ಮೆ॥ ಜೈ ಜವಾನ್ ಜಾಹೀರಾತುದಾರರಿಗೆ ಪೈಲೆಟ್ ಯೋಜನೆಯಡಿಯಲ್ಲಿ ಪಾಲಿಕೆಯ ವಿವಿಧ 04 ಸ್ಥಳಗಳಲ್ಲಿ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ 24*12 ಅಡಿ ಅಳತೆಯ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು 05 ವರ್ಷಗಳ ಕಾಲಾವಧಿಗೆ ಷರತ್ತಿನೊಂದಿಗೆ ಅನುಮೋದನೆ ನೀಡಿದ್ದು ದಿನಾಂಕ:16-02-2011ರಂದು ಅವಧಿಯು ಮುಕ್ತಾಯಗೊಂಡಿದ್ದು ಮತ್ತೆ ಮುಂದಿನ 05 ವರ್ಷಗಳ ಅವಧಿಗೆ 24x12 ಅಡಿ ಅಳತೆಯಿಂದ 15x30 ಅಡಿ ಅಳತೆಗೆ ಹೆಚ್ಚಿಸಿಕೊಳ್ಳಲು ಅನುಮತಿ ನೀಡುವಂತೆ ಜಾಹೀರಾತುದಾರರು ಕೋರಿಕೊಂಡಿರುತ್ತಾರೆ. ಅನುಮತಿ ನೀಡಲಾಗಿದ್ದ 04 ರಸ್ತೆಗಳಲ್ಲಿ ರಾಜ್‌ಭವನ್ ರಸ್ತೆಯು ಜಾಹೀರಾತು ಬೈಲಾ-2006ರ ಪ್ರಕಾರ ''ಎ" ವಲಯಕ್ಕೆ ಬರುವುದರಿಂದ ಈ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ವಂತ ಖರ್ಚಿನ ಮೇಲೆ ಬದಲಾಯಿಸಿಕೊಳ್ಳಲು ತಿಳಿಸಿದ್ದು, ಸದರಿಯವರು ಬದಲಿ ಸ್ಥಳದಲ್ಲಿ ನೀರಿನ ಕಾರಂಜಿಯನ್ನು ಅಳವಡಿಸಿಕೊಳ್ಳದೆ ಉಲ್ಲಂಘನೆ ಮಾಡಿರುವುದರಿಂದ ಸದರಿಯವರ ಮನವಿಯನ್ನು ತಿರಸ್ಕರಿಸುತ್ತಾ, ಅವಧಿ ಮುಗಿದ ನಂತರ ಜಾಹೀರಾತು ಪ್ರದರ್ಶಿಸುತ್ತಿರುವ ಅವಧಿಗೆ ದಿನಾಂಕ:17-02-2011ರಿಂದ 20-08-2011ರವರೆಗೂ ನೆಲಬಾಡಿಗೆ, ಜಾಹೀರಾತು ತೆರಿಗೆ ಹಾಗೂ ಸೇವಾ ತೆರಿಗೆ ಸೇರಿ ಒಟ್ಟು ರೂ.2,08,998/-ಗಳನ್ನು ಪಾವತಿಸುವಂತೆದಿನಾಂಕ:24-08-2011ರಂದು ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:20-08-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:26-10-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿದ್ದು, ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಇದುವರೆವಿಗೂ ನನಗೆ ನೋಟೀಸ್ ಜಾರಿ ಮಾಡಿಲ್ಲದೆ ಇರುವುದರಿಂದ ಹಿಂದೆ ನಡೆದಿರುವ ವಿಚಾರಣಾ ದಿನಾಂಕಗಳಂದು ಹಾಜರಾಗಲು ನನಗೆ ಸಾಧ್ಯವಾಗಿರುವುದಿಲ್ಲ. ಈ ವಿಚಾರಣೆಗೂ ಕೂಡ ನನಗೆ ಸಂಬಂಧಪಟ್ಟ ಅಧಿಕಾರಿಗಳು

ನೋಟೀಸ್ ನೀಡಿರುವುದಿಲ್ಲ. ನಾನೇ ಖುದ್ದಾಗಿ ಬಂದು ಸಮಿತಿಯಲ್ಲಿ ವಿಚಾರಿಸಿದಾಗ ದಿನಾಂಕ:27-01-2012ರಂದು ಮಧ್ಯಾಹ್ನ 3-00ಗಂಟೆಗೆ ವಿಚಾರಣೆ ನಡೆಯುತ್ತದೆಂದು ತಿಳಿಸಿರುವ ಮೇರೆಗೆ ಇಂದಿನ ಸಭೆಗೆ ಹಾಜರಾಗಿರುತ್ತೇನೆಂದು ತಿಳಿಸುತ್ತಾ, ನಾನು ನಿವೃತ್ತ ಮಾಜಿ ಸೈನಿಕಾನಗಿದ್ದು, ಜೀವನೋಪಾಯಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ 4 ಸ್ಥಳಗಳಲ್ಲಿ ಪೈಲೆಟ್ ಯೋಜನೆಯಡಿ ನೀರಿನ ಜಲಪಾತಗಳನ್ನು ನಿರ್ಮಿಸಿ ಅದರ ಮೇಲೆ ಜಾಹೀರಾತು ಮಾಡಲು 5 ವರ್ಷಗಳ ಅವಧಿಗೆ ಪಡೆದಿದ್ದೆನು. ಆದರೆ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ನನ್ನ ಮನವಿಯನ್ನು ತಿರಸ್ಕರಿಸಿ ಟೆಂಡರ್ ಮುಖೇನ ನೀಡುವಂತೆ ತೀರ್ಮಾನಿಸಿರುತ್ತದೆ. ಆದರೆ ನಾನು ನನ್ನ ಎಲ್ಲಾ ಸಂಪಾದನೆಯನ್ನು ಸದರಿ ಯೋಜನೆಗೆ ತೊಡಗಿಸಿದ್ದು ಇದುವರೆವಿಗೂ ನನಗೆ ನಾನು ತೊಡಗಿಸಿರುವ ಹಣವೂ ಸಹ ಬಂದಿರುವುದಿಲ್ಲ. ಆದುದರಿಂದ ನನಗೆ ಮತ್ತೆ 5 ವರ್ಷಗಳ ಅವಧಿಗೆ ನೀರಿನ ಕಾರಂಜಿಯನ್ನು ಅಳವಡಿಸಿ ಅದರ ಮೇಲೆ ಜಾಹೀರಾತು ಫಲಕಗಳನ್ನು ಪ್ರದರ್ಶಿಲು ನವೀಕರಿಸಿಕೊಡುವಂತೆ ಹಾಗೂ ನಾನು ಹೇಳಿಕೆಗಳನ್ನು ಲಿಖಿತವಾಗಿ ನೀಡುತ್ತಿದ್ದು ಅದರಂತೆ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡ ಹಿನ್ನೆಲೆಯಲ್ಲಿ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

**ನಿರ್ಣಯ**:- ಆಯುಕ್ತರ ಟಿಪ್ಪಣಿ ಮತ್ತು ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಲಾಯಿತು. ದಿನಾಂಕ:20-08-2011ರಂದು ನೀಡಿರುವ ಹಿಂಬರಹದಲ್ಲಿ ತಿಳಿಸಿರುವ ಜಾಹೀರಾತು ತೆರಿಗೆಯನ್ನು ಈಗಾಗಲೇ ಮೇಲ್ಮನವಿದಾರರು ಪಾವತಿಸಿರುವುದು ಹಾಗೂ ನಗರಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:18-10-2011ರ ನಿರ್ಣಯದಲ್ಲಿ ಕೆಲವೊಂದು ಜಾಹೀರಾತುದಾರರುಗಳು ಪ್ರದರ್ಶಿಸಿರುವ ಜಾಹೀರಾತು ಫಲಕಗಳನ್ನು ಮುಂದುವರೆಸಲು ನಿರ್ಣಯಿಸಿರುವುದು ಕಂಡು ಬರುತ್ತದೆ. ಅಲ್ಲದೆ ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿ ತಮ್ಮ ಪ್ರತಿವಾದಗಳನ್ನು ಮಂಡಿಸಿಲ್ಲದಿರುವುದನ್ನು ಗಮನಿಸಿದಾಗ ಪ್ರತಿವಾದಿಗಳ ಹೇಳಿಕೆಗಳು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಏನೂ ಇರುವುದಿಲ್ಲವೆಂದು ಸಮಿತಿಯು ನಿರ್ಧರಿಸುತ್ತದೆ.

ಮೇಲ್ಮನವಿದಾರರು ನಿವೃತ್ತ ಮಾಜಿ ಸೈನಿಕರಾಗಿದ್ದು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಹಾಗೂ ಸರ್ಕಾರದ ಅಧೀನ ಸಂಸ್ಥೆಗಳು ಮಾಜಿ ಸೈನಿಕರಿಗೆ ಹಲವಾರು ವಿಶೇಷ ಯೋಜನೆಗಳು ಹಾಗೂ ಕೆಲವೊಂದು ಯೋಜನೆಗಳಲ್ಲಿ ರಿಯಾಯಿತಿ ನೀಡಿ ಸ್ವಂತ ಉದ್ಯೋಗ ಕಲ್ಪಿಸಿಕೊಳ್ಳಲು ನೆರವು ನೀಡುತ್ತಿರುವುದು ತಿಳಿದ ವಿಷಯವಾಗಿರುತ್ತದೆ. ಅಲ್ಲದೆ ಮೇಲ್ಮನವಿದಾರರು ಇದುವರೆವಿಗೂ ಸಮರ್ಪಕವಾಗಿ ಜಾಹೀರಾತು ತೆರಿಗೆಯನ್ನು ಪಾವತಿಸಿರುವುದಲ್ಲದೆ ನಗರ ಯೋಜನೆ ಅಭಿವೃದ್ಧಿ ಸ್ಥಾಯಿ ಸಮಿತಿಯು ದಿನಾಂಕ:18-10-2011ರ ನಿರ್ಣಯದಲ್ಲಿ ಸದರಿ ಪ್ರದೇಶದಲ್ಲಿ ಪ್ರದರ್ಶಿಸಿರುವ ಜಾಹೀರಾತು ಫಲಕಗಳನ್ನು ಟೆಂಡರ್ ಇಲ್ಲದೆ ಮುಂದುವರೆಸುವಂತೆ ನಿರ್ಣಯಿಸಿರುವುದು ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳಲ್ಲಿ ಕಂಡು ಬರುತ್ತದೆ. ಹಾಗೂ ರಾಜ್‌ಭವನ್ ರಸ್ತೆಯಲ್ಲಿರುವ ನೀರಿನ ಕಾರಂಜಿಯನ್ನು ಮೆಮೋರಿಯಲ್ ಪಾರ್ಕ್ ರೆಸಿಡೆನ್ಸಿ ರಸ್ತೆಗೆ ಸ್ಥಳಾಂತರಿಸಿಕೊಳ್ಳುವುದಾಗಿ ಮೇಲ್ಮನವಿದಾರರು ಒಪ್ಪಿಕೊಂಡಿರುತ್ತಾರೆ. ಆದುದರಿಂದ ನೀರಿನ ಕಾರಂಜಿಗಳನ್ನು ಅಳವಡಿಸಿ ಅದರ ಮೇಲೆ ಜಾಹೀರಾತು ಫಲಕಗಳನ್ನು ಪ್ರದರ್ಶಿಸಲು ಈಗಾಗಲೇ ನಿಗಧಿಪಡಿಸಿರುವ ನೆಲ ಬಾಡಿಗೆಯ ಆಧಾರದ ಮೇಲೆಯೇ ಮುಂದೆ ಹೊಸ ಜಾಹೀರಾತು ಬೈಲಾ ನೀತಿಗೆ ಬದ್ಧರಾಗುವ ಷರತ್ತಿಗೊಳಪಡಿಸಿ ದಿನಾಂಕ:27-01-2011ರಿಂದ ಮುಂದಿನ 3 ವರ್ಷಗಳ ಅವಧಿಗೆ ಮುಂದುವರೆಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ಅ)/36/2011-12

ಸಾಯಿ ಎಂಟರ್ ಪ್ರೈಸಸ್, ನಂ.159/1, ಸುಖನಿವಾಸ ಎದುರು, ಲಿಟಲ್ ಆಂಜಲ್ಸ್ ಶಾಲೆ ರಸ್ತೆ, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ಹೆಚ್.ಆರ್.ವಿನಾಯಕ್‌ರವರು ಸಾಯಿ ಎಂಟರ್ ಪ್ರೈಸಸ್ (ಅಲ್ಯೂಮಿನಿಯಂ ಬಕ್ಕಲ್ ಫಾರ್ ಲೇಧರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 35 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:09-11-2011ರ ಟಿಪ್ಪಣಿ.

**ನಿರ್ಣಯ**:- ಆಯುಕ್ತರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಪ್ರತಿವಾದಿಗಳು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರ ವರದಿಯ ಪ್ರಕಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರ ಲಿಖಿತ ಹೇಳಿಕೆಗಳ ಪ್ರಕಾರ ಸದರಿ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಬಂದ ಪ್ರದೇಶವಾಗಿದ್ದು, ಈ ಹಿಂದೆ ಸಿ.ಎಂ.ಸಿ. ವ್ಯಾಪ್ತಿಯಲ್ಲಿರುವಾಗಲೇ ಪರವಾನಗಿ ಪಡೆದು ಉದ್ದಿಮೆಯನ್ನು ನಡೆಸುತ್ತಿರುವುದು ಹಾಗೂ ಕಡತದಲ್ಲಿ ಲಗತ್ತಿಸಿರುವ ಪರವಾನಗಿ ಪ್ರತಿಯನ್ನು ಪರಿಶೀಲಿಸಿದಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬಂದ ನಂತರವೂ ಸಹ ಪರವಾನಗಿಯನ್ನು ನಗರ ಪಾಲಿಕೆಯು ನವೀಕರಿಸಿಕೊಟ್ಟಿರುವುದು ಕಂಡು ಬರುತ್ತದೆ. ಸದರಿ ಸಂಸ್ಥೆಯು ಪ್ರಾರಂಭವಾಗಿ ಸುಮಾರು 10 ವರ್ಷಗಳು ಕಳೆದಿದ್ದು ಹಾಲಿ 30 ಜನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಏಕಾಏಕಿ ಸ್ಥಳಾಂತರಿಸಿಕೊಳ್ಳಿ ಎಂದರೆ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಹಾಗೂ ನಾವು ಹೂಡಿರುವ ಬಂಡವಾಳಕ್ಕೆ ಧಕ್ಕೆ ಉಂಟಾಗುವುದರಿಂದ ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಕನಿಷ್ಠ 5 ವರ್ಷಗಳ ಕಾಲಾವಕಾಶವನ್ನು ನೀಡುವಂತೆ ಹಾಗೂ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ನ್ಯೂನ್ಯತೆಗಳನ್ನು ಸರಿಪಡಿಕೊಡಿರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ ಆಗ್ಗಿಂದಾಗ್ಗೆ ಪರಿಶೀಲನೆ ಮಾಡುವುದು. ಹಾಗೂ ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮುಚ್ಚಳಿಕೆ ಬರೆದುಕೊಟ್ಟಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಹಿತದೃಷ್ಟಿಯನ್ನು ಸಮಿತಿಯು ಗಣನೆಗೆ ತೆಗೆದುಕೊಂಡು ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಮೇಲ್ಮನವಿದಾರರಿಗೆ 5 ವರ್ಷಗಳ ಕಾಲಾವಕಾಶವನ್ನು ನೀಡಿ ಅಲ್ಲಿಯವರೆಗೆ ಪರವಾನಗಿಯನ್ನು ನವೀಕರಿಸಿಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

08.ವಿಷಯ:ಸಂಖ್ಯೆ:ಅಸ್ಥಾಸ/(ಆ)/37/2011-12

ಸಾಯಿ ಬಕ್ಕಲ್, ನಂ.159, 5ನೇ ಕ್ರಾಸ್, ರಾಮಮೂರ್ತಿನಗರ, ಬೆಂಗಳೂರು-16 ಈ ಉದ್ದಿಮೆಯ ಮಾಲೀಕರಾದ ಶ್ರೀ.ರಮೇಶ್‌ರವರು ಸಾಯಿ ಬಕ್ಕಲ್ (ಆಲ್ಯೂಮಿನಿಯಂ ಬಕ್ಕಲ್ ಫಾರ್ ಲೇದರ್ ವಾಚ್ ಸ್ಟ್ರಾಪ್ಸ್) ಉದ್ದಿಮೆ ನಡೆಸಲು 25 ಕೆ.ವಿ. ವಿದ್ಯುತ್ ಪರವಾನಗಿ ನೀಡಲು ಕೋರಿದ್ದು, ಉಪ ಆರೋಗ್ಯಾಧಿಕಾರಿ, ಮಹದೇವಪುರ ವಲಯ ಇವರು ದಿನಾಂಕ:28-06-2011ರಂದು ಹಿಂಬರಹ ನೀಡಿ ಉದ್ದಿಮೆ ಪರವಾನಗಿಯನ್ನು ತಿರಸ್ಕರಿಸಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:08-11-2011ರ ಟಿಪ್ಪಣಿ.

**ನಿರ್ಣಯ**:- ಆಯುಕ್ತರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಸಭೆಯಲ್ಲಿ ಹಾಜರಿದ್ದ ಪ್ರತಿವಾದಿಗಳು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರ ವರದಿಯ ಪ್ರಕಾರ ಕ್ರಮ ಕೈಗೊಳ್ಳಬೇಕಾಗಿರುತ್ತದೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರ ಲಿಖಿತ ಹೇಳಿಕೆಗಳ ಪ್ರಕಾರ ಸದರಿ ಪ್ರದೇಶವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಹೊಸದಾಗಿ ಬಂದ ಪ್ರದೇಶವಾಗಿದ್ದು, ಈ ಹಿಂದೆ ಸಿ.ಎಂ.ಸಿ. ವ್ಯಾಪ್ತಿಯಲ್ಲಿರುವಾಗಲೇ ಪರವಾನಗಿ ಪಡೆದು ಉದ್ದಿಮೆಯನ್ನು ನಡೆಸುತ್ತಿರುವುದು ಹಾಗೂ ಕಡತದಲ್ಲಿ ಲಗತ್ತಿಸಿರುವ ಪರವಾನಗಿ ಪ್ರತಿಯನ್ನು ಪರಿಶೀಲಿಸಿದಾಗ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಗೆ ಬಂದ ನಂತರವೂ ಸಹ ಪರವಾನಗಿಯನ್ನು ನಗರ ಪಾಲಿಕೆಯು ನವೀಕರಿಸಿಕೊಟ್ಟಿರುವುದು ಕಂಡು ಬರುತ್ತದೆ. ಸದರಿ ಸಂಸ್ಥೆಯು ಪ್ರಾರಂಭವಾಗಿ ಸುಮಾರು 10 ವರ್ಷಗಳು ಕಳೆದಿದ್ದು ಹಾಲಿ 30 ಜನ ಕಾರ್ಮಿಕರು ಕಾರ್ಯನಿರ್ವಹಿಸುತ್ತಿದ್ದು, ಏಕಾಏಕಿ ಸ್ಥಳಾಂತರಿಸಿಕೊಳ್ಳಿ ಎಂದರೆ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ಹಾಗೂ ನಾವು ಹೂಡಿರುವ ಬಂಡವಾಳಕ್ಕೆ ಧಕ್ಕೆ ಉಂಟಾಗುವುದರಿಂದ ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಕನಿಷ್ಠ 5 ವರ್ಷಗಳ ಕಾಲಾವಕಾಶವನ್ನು ನೀಡುವಂತೆ ಹಾಗೂ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ನ್ಯೂನ್ಯತೆಗಳನ್ನು ಸರಿಪಡಿಕೊಡಿರುವುದಾಗಿ ತಿಳಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು ಕರ್ನಾಟಕ ರಾಜ್ಯ ವಾಯು ಮಾಲಿನ್ಯ ಮಂಡಳಿಯವರು ಗುರುತಿಸಿರುವ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿಕೊಂಡಿರುವ ಬಗ್ಗೆ ಆಗ್ಗಿಂದಾಗ್ಗೆ ಪರಿಶೀಲನೆ ಮಾಡುವುದು. ಹಾಗೂ ಈಗಾಗಲೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಮುಚ್ಚಳಿಕೆ ಬರೆದುಕೊಟ್ಟಿರುವ ಹಿನ್ನೆಲೆಯಲ್ಲಿ ಹಾಗೂ ಸದರಿ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರ ಹಿತದೃಷ್ಟಿಯನ್ನು ಸಮಿತಿಯು ಗಣನೆಗೆ ತೆಗೆದುಕೊಂಡು ಸಂಸ್ಥೆಯನ್ನು ವರ್ಗಾಯಿಸಿಕೊಳ್ಳಲು ಮೇಲ್ಮನವಿದಾರರಿಗೆ 5 ವರ್ಷಗಳ ಕಾಲಾವಕಾಶವನ್ನು ನೀಡಿ ಅಲ್ಲಿಯವರೆಗೆ ಪರವಾನಗಿಯನ್ನು ನವೀಕರಿಸಿಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

09. ವಿಷಯ:ಸಂಖ್ಯೆ:ಅಸ್ಥಾಸ/(ತೆ)/41/2011-12

ಪೀಣ್ಯ ಕೈಗಾರಿಕಾ ಬಡಾವಣೆ, 2ನೇ ಹಂತ ಷೆಡ್ ನಂ.ಬಿ-202, ಡಿವಿಷನ್ ನಂ.41 ಈ ಸ್ವತ್ತಿನ ಮಾಲೀಕರಾದ ಶ್ರೀ.ಎಸ್.ಬಸವರಾಜಯ್ಯರವರು ಪ್ರಥಮ ಅಪೀಲು ಅಧಿಕಾರಿಗಳು ನಿಗಧಿಪಡಿಸಿ ದಿನಾಂಕ:03-09-2010ರಂದು ಸಂಖ್ಯೆ:ವಾಲೆ/ಪಿಆರ್/ಕೆಟಿಆರ್/89/2010-11, ಎಂ.ಆರ್.50/2010-11ರಲ್ಲಿ ಕಂದಾಯ ಅಧಿಕಾರಿ, ದಾಸರಹಳ್ಳಿ ವಲಯರವರು ನೀಡಿರುವ ವಿಶೇಷ ಸೂಚನಾ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಾಸರಹಳ್ಳಿ)ರವರ ಟಿಪ್ಪಣಿ.

**ನಿರ್ಣಯ**:- ಕಡತವನ್ನು ಪರಿಶೀಲಿಸಲಾಯಿತು. ಹಾಗೂ ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ವಾದಗಳನ್ನು ಆಲಿಸಿದ ನಂತರ ಸದರಿ ಪ್ರಕರಣದಲ್ಲಿ ಅಧಿಕಾರಿಗಳು ಕಂದಾಯವನ್ನು ನಿಗಧಿಪಡಿಸುವಾಗ ಮಾನದಂಡಗಳನ್ನು ಗಾಳಿಗೆ ತೂರಿ ಕಂದಾಯವನ್ನು ನಿಗಧಿಪಡಿಸಿರುವುದು ಸ್ಪಷ್ಟವಾಗಿ ಕಂಡು ಬರುತ್ತದೆ. ಅಲ್ಲದೆ ಪ್ರಥಮ ಅಪೀಲು ಅಧಿಕಾರಿಗಳು ಸಹ ವಿಚಾರಣೆ ನಡೆಸಿ 17 ವರ್ಷಗಳಿಗೆ ಕಂದಾಯ ನಿಗಧಿಪಡಿಸಿರುವುದು ಹಾಸ್ಯಾಸ್ಪದಾವಗಿ ಕಂಡು ಬರುತ್ತದೆ. ಕೆ.ಎಂ.ಸಿ.ಕಾಯ್ದೆ ಕಲಂ 143ರ ಪ್ರಕಾರ ಕಂದಾಯವನ್ನು ನಿಗಧಿಪಡಿಸದೆ ತಮಗಿಷ್ಟ ಬಂದ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿರುವುದನ್ನು ಗಮನಿಸಿದಾಗ ಅಧಿಕಾರಿಗಳು ತಮ್ಮ ಕಾರ್ಯವ್ಯಾಪ್ತಿಯನ್ನೇ ಮರೆತಿರುವುದಾಗಿ ಸಮಿತಿಯು ಭಾವಿಸುತ್ತದೆ. ಆ ಬಗ್ಗೆ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳುವುದೆಂದು ಹಾಗೂ ಈ ಪ್ರಕರಣದಲ್ಲಿ ಕೆ.ಎಂ.ಸಿ.ಕಾಯ್ದೆ ಕಲಂ 143ರ ಪ್ರಕಾರ ಕಂದಾಯವನ್ನು ನಿಗಧಿಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

10. ವಿಷಯ:ಸಂಖ್ಯೆ:ಅಸ್ಥಾಸ/(ತೆ)/42/2011-12

ನಂ.75, ರೆಸಿಡೆನ್ಸಿ ರಸ್ತೆ, ವಾರ್ಡ್-111ರ ಶಿವಶರಣ್ ಇನ್ ಕಾರ್ಪೋರೇಟ್ಸ್‌ನ ಮಾಲೀಕರು ಸದರಿ ಸ್ವತ್ತಿಗೆ ಕಂದಾಯವನ್ನು ಯಾವ ರೀತಿ ನಿಗಧಿಪಡಿಸಿದ್ದಾರೆಂಬ ಬಗ್ಗೆ ನಮಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಹಾಗೂ ನಾವು ಹಲವಾರು ಬಾರಿ ಕಂದಾಯ ಕಡಿಮೆ ಮಾಡಿಕೊಡುವಂತೆ ಮನವಿಯನ್ನು ಸಲ್ಲಿಸಿದ್ದರೂ ಸಹ ಇದುವರೆವಿಗೂ ನಮಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲವೆಂದು ತಿಳಿಸಿ ನ್ಯಾಯಬದ್ಧವಾದ ಕಂದಾಯವನ್ನು ನಿಗಧಿಪಡಿಸಿಕೊಡುವಂತೆ ಕೋರಿ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಜಂಟಿ ಆಯುಕ್ತರ ದಿನಾಂಕ:21-12-2011ರ ಟಿಪ್ಪಣಿ ಹಾಗೂ ಮೇಲ್ಮನವಿದಾರರ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಸದರಿ ಸ್ವತ್ತಿಗೆ ವಸತಿಯೇತರ ಎಸ್.ಎ.ಎಸ್. ಆಧಾರದಡಿಯಲ್ಲಿ ಕಂದಯವನ್ನು 19800ಚದರ ಅಡಿಗಳಿಗೆ ನಿಗಧಿಪಡಿಸಿ ದಿನಾಂಕ:01-04-1997ರಿಂದ ಜಾರಿಗೆ ಬರುವಂತೆ ತಿಳಿಸಿ ವಿಶೇಷ ಸೂಚನಾ ಪತ್ರವನ್ನು ದಿನಾಂಕ:19-07-2004ರಂದು ಜಾರಿಗೊಳಿಸಿರುವುದು ಕಂಡು ಬರುತ್ತದೆ. ಹಾಗೂ ಮುಂದುವರೆದಂತೆ 28-10-2006 ಹಾಗೂ 29-01-2011ರಂದು ಕಂದಾಯ ಕಡಿಮೆ ಮಾಡಿಕೊಡಲು ಮಾಲೀಕರು ಅರ್ಜಿ ಸಲ್ಲಿಸಿರುವುದಾಗಿ ವರದಿಸಲಾಗಿರುವುದು ಜಂಟಿ ಆಯುಕ್ತರ ಟಿಪ್ಪಣಿಯಿಂದ ಕಂಡು ಬರುತ್ತದೆ. ಮೇಲ್ಮನವಿದಾರರು ನಾವು ಕಾಲಮಿತಿಯಲ್ಲೇ ಅರ್ಜಿ ಸಲ್ಲಿಸಿರುತ್ತೇವೆ. ಆದರೆ ಇದುವರೆವಿಗೂ ನಮಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ ಹಾಗೂ ನಾವು ಸದರಿ ಸ್ವತ್ತನ್ನು 1990ರಲ್ಲಿ ಕ್ರಯಕ್ಕೆ ಪಡೆದಿರುತ್ತೇವೆ. ನಾವು ಕಟ್ಟಡವನ್ನು ಕ್ರಯಕ್ಕೆ ಪಡೆದಾಗಿನಿಂದಲೂ ಕಟ್ಟಡದ ಕಾಮಗಾರಿ ಇನ್ನೂ ಪೂರ್ಣಗೊಂಡಿರುವುದಿಲ್ಲ. ಹಾಗೂ ಕಟ್ಟಡದ ಪೂರ್ಣಭಾಗವನ್ನು ಸ್ವಂತಕ್ಕೆ ವಸತಿಯೇತರಕ್ಕೆ ಉಪಯೋಗಿಸುತ್ತಿರುವುದಾಗಿ ತಿಳಿಸಿರುತ್ತಾರೆ.

**ನಿರ್ಣಯ**:-ಸಮಿತಿಯು ದಿನಾಂಕ:23-12-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳಪರಿಶೀಲಿಸಲಾಯಿತು. ಆ ಸಮಯದಲ್ಲಿ ಕಟ್ಟಡದ ಬಹುತೇಕ ಭಾಗವು ಖಾಲಿ ಇರುವುದಾಗಿ ಕಂಡು ಬಂದಿರುತ್ತದೆ. ಹಾಗೂ ಮೇಲ್ಮನವಿದಾರರು ಸ್ವಂತ ವಸತಿಯೇತರಕ್ಕೆ ಉಪಯೋಗಿಸುತ್ತಿರುವುದನ್ನು ಸಮಿತಿಯು ಮನಗಂಡಿರುತ್ತದೆ. ಆದರೆ ಜಂಟಿ ಆಯುಕ್ತರ ಟಿಪ್ಪಣಿಯಲ್ಲಿ ವರದಿಸಿರುವಂತೆ ಭಾಡಿಗೆಗೆ ನೀಡಿರುವುದು ಕಂಡು ಬಂದಿರುವುದಿಲ್ಲ ಹಾಗೂ ಕಡತದಲ್ಲಿ ಬಾಡಿಗೆಗೆ ನೀಡಿರುವ ಬಗ್ಗೆ ಯಾವುದೇ ದೃಢೀಕೃತ ದಾಖಲೆಗಳನ್ನು ಒದಗಿಸಿರುವುದಿಲ್ಲ. ಮೇಲ್ಮನವಿದಾರರ ಮನವಿಯು ಕಾಲಮಿತಿಯಲ್ಲಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಮೇಲ್ಮನವಿದಾರರು ಸಲ್ಲಿಸಿರುವ ಅರ್ಜಿಯ ಮೂಲ ಪ್ರತಿಯನ್ನು ಒದಗಿಸಿರುವುದಿಲ್ಲ ಹಾಗೂ ಅರ್ಜಿದಾರರಿಗೆ ಮೇಲ್ಮನವಿಯು ಕಾಲಮಿತಿಯಲ್ಲಿಲ್ಲದ ಕಾರಣ ನಿಮ್ಮ ಮೇಲ್ಮನವಿಯನ್ನು ತಿರಸ್ಕರಿಸಲಾಗಿದೆಂದು ಹಿಂಬರಹವನ್ನು ನೀಡಿ ಕಂದಾಯವನ್ನು ವಸೂಲಿ ಮಾಡಲು ಕ್ರಮ ಕೈಗೊಂಡಿರುವುದು ಸಹ ಕಂಡು ಬರುತ್ತಿಲ್ಲ. ಅಲ್ಲದೆ ಮೇಲ್ಮನವಿದಾರರು ತಮ್ಮ ಕಟ್ಟಡವು 1992ರ ನಿರ್ಮಾಣದ ಕಟ್ಟಡವಾಗಿದ್ದು ಒಟ್ಟು 21260 ಚದರ ಅಡಿಗಳಾಗಿರುತ್ತದೆ. ಅದರಲ್ಲಿ 4000 ಚದರಡಿ ನೆಲ ಮಾಳಿಗಯನ್ನು ವಾಹನ ನಿಲ್ದಾಣಕ್ಕಾಗಿ ಉಪಯೋಗಿಸುತ್ತಿರುವುದಾಗಿ ಘೋಷಿಸಿಕೊಂಡಿರುವುದನ್ನು ಕಡತದಲ್ಲಿ ಲಗತ್ತಿಸಿರುವ 2008-09ನೇ ಸಾಲಿನ ಸ್ವಯಃ ಘೋಷಿತ ಆಸ್ತಿ ತೆರಿಗೆ ಅರ್ಜಿ ನಂ-1ರಲ್ಲಿ ನೋಡಬಹುದಾಗಿರುತ್ತದೆ. ಆದಾಗ್ಯೂ ಸಹ ದಿನಾಂಕ:09-07-2004ರ ವಿಶೇಷ ಸೂಚನಾ ಪತ್ರದಲ್ಲಿ ಒಟ್ಟು ಕಟ್ಟಡದ ಅಳತೆ 19800 ಚದರ ಅಡಿಗಳೆಂದು ನಮೂದಿಸಿರುವುದು ಆಸ್ಯಾಸ್ಪದವಾಗಿರುತ್ತದೆ. ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯನ್ನು ಸದರಿ ಕಟ್ಟಡದಿಂದ ಒಟ್ಟು ಎಷ್ಟು ಬಾಡಿಗೆ ಬಾಕಿ ಬರಬೇಕೆಂದು ಕೇಳಿದಾಗ ಸದರಿ ಅಧಿಕಾರಿಯು ತನಗೆ ತಿಳಿದಿರುವುದಿಲ್ಲವೆಂದು ಸಮಿತಿಯ ಮುಂದೆ ತಿಳಿಸಿರುತ್ತಾರೆ. ಇದರಿಂದಾಗಿ ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳು ಸದರಿ ಸ್ವತ್ತಿನ ಕಂದಾಯ ನಿಗಧಿಪಡಿಸುವಾಗ ಕಟ್ಟಡದ ಸರಿಯಾದ ಅಳತೆಯನ್ನಾಗಲೀ, ಬಾಡಿಗೆಗೆ ನೀಡಿರುವ ಬಗ್ಗೆ ದಾಖಲೆಗಳನ್ನಾಗಲೀ ಪರಿಶೀಲಿಸದೆ ಹಾಗೂ ನೀತಿ ನಿಯಮಗಳನ್ನು ಪಾಲಿಸದೆ ಬೇಜವಾಬ್ದಾರಿತನದಿಂದ ಕಂದಾಯವನ್ನು ನಿಗಧಿಪಡಿಸಿರುವುದಾಗಿ ಭಾವಿಸುತ್ತದೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಪರಿಶೀಲಿಸಿದಾಗ ಅರ್ಜಿದಾರರು ಕಾಲಮಿತಿಯಲ್ಲಿ ಅರ್ಜಿಯನ್ನು ಸಲ್ಲಿಸಿರುವುದಾಗಿ ಸಮಿತಿಯು ಪರಿಗಣಿಸುತ್ತದೆ. ಕಾರಣ ಒಂದು ವೇಳೆ ಅರ್ಜಿದಾರರು ಕಾಲಮಿತಿಯಲ್ಲಿ ಅರ್ಜಿಯನ್ನು ಸಲ್ಲಿಸದಿದ್ದಲ್ಲಿ ಕಂದಾಯವನ್ನು ವಸೂಲಿ ಮಾಡಲು ಕ್ರಮ ಕೈಗೊಳ್ಳಬಹುದಾಗಿತ್ತು. ಇದುವರೆವಿಗೂ ಕಂದಾಯವನ್ನು ವಸೂಲಿ ಮಾಡವುದಾಗಲೀ ಅಥವಾ ವಿಚಾರಣೆಯನ್ನು ನಡೆಸುವ ಪ್ರಕ್ರಿಯೆಯನ್ನಾಗಲೀ ಕೈಗೊಂಡಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಸದರಿ ಸ್ವತ್ತಿಗೆ ಒಟ್ಟು 17620 ಚದರಡಿ ವಸತಿಯೇತರ (ಸ್ವಂತ ಉಪಯೋಗಕ್ಕೆ) ಚದರಡಿ 1ಕ್ಕೆ ರೂ.5-00ಗಳನ್ನು ಹಾಗೂ 4000 ಚದರಡಿ ನೆಲಮಾಳಿಗೆಗೆ ವಾಹನ ಉಪಯೋಗದ ಆಧಾರದ ಮೇಲೆ ದಿನಾಂಕ:01-04-1997ರಿಂದ ಜಾರಿಗೆ ಬರುವಂತೆ ನಿಗಧಿಪಡಿಸುವುದು ಹಾಗೂ 2000ನೇ ಸಾಲಿನಿಂದ ಎಸ್.ಎ.ಎಸ್. ದರದಂತೆ ವಸತಿಯೇತರ ಸ್ವಂತ ಉಪಯೋಗದ ಆಧಾರದ ಮೇಲೆ ಕಂದಾಯವನ್ನು ನಿಗಧಿಪಡಿಸಿ ವಸೂಲಿ ಮಾಡುವುದೆಂದು ಸಮಿತಿಯು ತೀಮಾನಿಸಲಾಯಿತು.

11. ವಿಷಯ:ಸಂಖ್ಯೆ:ಅಸ್ಥಾಸ/(ಅ)/46/2011-12

ಶ್ರೀ.ಅಲಿಜಾನ್‌ರವರು ಬೆಂಗಳೂರು ನರಸಿಂಹರಾಜು ರಸ್ತೆ, ನ್ಯೂ ಬಂಬೂಬಜಾರ್ ಚರಂಡಿಯ ಪಕ್ಕದಲ್ಲಿರುವ 6x4 ಅಡಿಗಳ ಜಾಗವನ್ನು ನಗರ ಪಾಲಿಕೆಯಿಂದ ಗುತ್ತಿಗೆಗೆ ನೀಡಿದ್ದು, ನಂತರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಡವಳಿಕೆಯಂತೆ 8x20 ಅಡಿಗಳ ಜಾಗವನ್ನು ನನ್ನ ಪತ್ನಿಯ ಹೆಸರಿಗೆ ಮಾರಾಟ ಮಾಡಲು ದಿನಾಂಕ:31-12-1998ರಲ್ಲಿ ತೀರ್ಮಾನಿಸಿದ್ದು, ಇದುವರೆವಿಗೂ ಕ್ರಯ ಮಾಡಿಕೊಟ್ಟಿರುವುದಿಲ್ಲ. ಆದುದರಿಂದ ಸದರಿ ಸ್ವತ್ತನ್ನು ನನ್ನ ಪತ್ನಿಯ ಹೆಸರಿಗೆ ಕ್ರಯಕ್ಕಾಗಲೀ ಅಥವಾ ನನ್ನ ಹೆಸರಿಗೆ ಗುತ್ತಿಗೆಯನ್ನಾಗಲೀ ಮುಂದುವರೆಸಿಕೊಡಬೇಕೆಂದು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:31-12-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿದ್ದು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಸದರಿ ಸ್ವತ್ತಿನಿಂದಲೇ ನನ್ನ ಜೀವನ ಸಾಗುತ್ತಿರುತ್ತದೆ. ಅದನ್ನು ಬಿಟ್ಟು ನನಗೆ ಬೇರೆ ಯಾವುದೇ ಸ್ವತ್ತು ಇರುವುದಿಲ್ಲ. ಆದುದರಿಂದ ನನಗೆ ಬಾಡಿಗೆಗಾಗಲೀ ಅಥವಾ ಕ್ರಯಕ್ಕಾಗಲೀ ಸದರಿ ಸ್ವತ್ತನ್ನು ನೀಡಬೇಕೆಂದು ಕೋರಿಕೊಂಡಿರುತ್ತಾರೆ. ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ಕಾರಣ ಕೇಳುವ ನೋಟೀಸ್ ಜಾರಿ ಮಾಡಲು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.

12.ವಿಷಯ:ಸಂಖ್ಯೆ:ಅಸ್ಥಾಸ/(ತೆ/47/2011-12

ಎಂ.ರಾಜ ಎಂಬುವವರು ಸಹಾಯಕ ಕಂದಾಯ ಅಧಿಕಾರಿ (ಗೋವಿಂದ ರಾಜನಗರ)ರವರು ಸಂಖ್ಯೆ:547/50/1, 10ನೇ ಸಿ ಮುಖ್ಯರಸ್ತೆ, 6ನೇ ಬ್ಲಾಕ್, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು ಈ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಿಸಿ ನೀಡಿರುವ ದಿನಾಂಕ:25-06-2011ರ ನೋಟೀಸಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-11-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತು ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

13. ವಿಷಯ:ಸಂಖ್ಯೆ:ಅಸ್ಥಾಸ/(ಜಾ/48/2011-12

ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:10-01-2012ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಿರುತ್ತಾರೆ. ಪ್ರತಿವಾದಿಗಳ ಪರವಾಗಿ ಶ್ರೀ.ಎನ್.ರವಿಕುಮಾರ್, ಪ್ರಥಮ ದರ್ಜೆ ಸಹಾಯಕರು ಹಾಜರಿರುತ್ತಾರೆ. ಮೇಲ್ಮನವಿದಾರರು ಕಾಲಾವಕಾಶ ಕೋರಿಕೊಂಡ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:24-02-2012ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ) |
| 04 | ಬಿ.ಎಸ್.ಆನಂದ | ಸದಸ್ಯರು | |
| 05 | ಎಂ.ವಸಂತಕುಮಾರಿ | ಸದಸ್ಯರು | |
| 06 | ಬಿ.ಗೋವಿಂದರಾಜು | ಸದಸ್ಯರು | |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಮಧ್ಯಂತರ ಅರ್ಜಿಯ ಮೇಲೆ ಆದೇಶಕ್ಕಾಗಿ ಕಾಯ್ದಿರಿಸಿದೆ.

02.ವಿಷಯ:ಸಂಖ್ಯೆ:ಅಸ್ಥಾಸ/(ತೆ)/20/2011-12

ಸ್ವತ್ತಿನ ಸಂಖ್ಯೆ:4, 4/1, ಮತ್ತು 4/2, ಸರ್ವೆ ನಂ.62/1, ನಾಗಶೆಟ್ಟಿ ಹಳ್ಳಿ, ಹೆಬ್ಬಾಳ ಉಪ ವಿಭಾಗ, ವಾರ್ಡ್-19 ಈ ಸ್ವತ್ತುಗಳ ಖಾತೆದಾರರಾದ ಶ್ರೀಮತಿ.ಸುನಂದರೆಡ್ಡಿ, ಶ್ರೀಮತಿ.ರೂಪರೆಡ್ಡಿ, ಶ್ರೀ.ಹೆಚ್.ಎನ್.ಮಂಜನಾಥರೆಡ್ಡಿ ಇವರುಗಳು ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಣೆ ಮಾಡಿ ಸ್ವತ್ತಿನ ಸಂಖ್ಯೆ:4ಕ್ಕೆ ವಾರ್ಷಿಕ ಮೌಲ್ಯ ರೂ.15400/-(ವಸತಿ)ಗಳಿಂದ ರೂ.11640/-(ವಸತಿ), ಸ್ವತ್ತಿನ ಸಂಖ್ಯೆ:4/1ಕ್ಕೆ ಈಗಾಗಲೇ ನಿಗಧಿಪಡಿಸಿರುವ ಕಂದಾಯವು ಸಮಂಜಸವಾಗಿರುವುದೆಂದು ಹಾಗೂ ಸ್ವತ್ತಿನ ಸಂಖ್ಯೆ:4/2ಕ್ಕೆ ವಾರ್ಷಿಕ ಮೌಲ್ಯ ರೂ.30270/-(ವಸತಿ)ಗಳಿಂದ ರೂ.23280/-(ವಸತಿಗಳಿಗೆ ದಿನಾಂಕ:01-04-2009ರಿಂದ ಜಾರಿಗೆ ಬರುವಂತೆ ನಿಗಧಿಪಡಿರುವ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರಟಿಪ್ಪಣಿ.

**ನಿರ್ಣಯ**:- ಮೇಲ್ಮನವಿದಾರರು ಹೇಳಿಕೆಗಳು ಹಾಗೂ ಜಂಟಿ ಆಯುಕ್ತರು (ಪೂರ್ವ)ರವರ ದಿನಾಂಕ:18-07-2011ರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಹಾಗೂ ದಿನಾಂಕ:04-02-2011ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ತಪಾಸಣಾ ಸಮಯದಲ್ಲಿ ಸಂಬಂಧಪಟ್ಟ ಸಹಾಯಕ ಕಂದಾಯ ಅಧಿಕಾರಿಯವರು ಪೂರ್ಣ ಕಟ್ಟಡವನ್ನು ಮೇಲ್ಮನವಿದಾರರು ಸ್ವಂತ ಉಪಯೋಗಕ್ಕಾಗಿ ಉಪಯೋಗಿಸುತ್ತಿದ್ದು, ಕಂದಾಯವನ್ನು ನಿಗಧಿಪಡಿಸುವಾಗ ಕೈತಪ್ಪಿನಿಂದಾಗಿ ಬಾಡಿಗೆ ಉಪಯೋಗಕ್ಕೆಂದು ನಿಗಧಿಪಡಿಸಿರುವುದಾಗಿ ತಿಳಿಸುತ್ತಾರೆ. ಈ ಹಿನ್ನೆಲೆಯಲ್ಲಿ ಮೇಲ್ಮನವಿದಾರರ ಮೇಲ್ಮನವಿಯಲ್ಲಿ ಕೋರಿಕೊಂಡಿರುವ ಕಟ್ಟಡಕ್ಕೆ ಪೂರ್ಣವಾಗಿ ಸ್ವಂತ ಉಪಯೋಗದ ಆಧಾರದ ಮೇಲೆ ಕಂದಾಯವನ್ನು ಮರು ನಿಗಧಿಪಡಿಸಿ ಕೊಡುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

03. ವಿಷಯ:ಸಂಖ್ಯೆ:ಅಸ್ಥಾಸ(ಖಾ)/28/2011-12

ಶ್ರೀ.ಕೆ.ವಿಜಯಕುಮಾರ್, ನಂ.171/2, ತೂಬರಹಳ್ಳಿ, ವೈಟ್ ಫೀಲ್ಡ್ ರಸ್ತೆ, ಬೆಂಗಳೂರು-66 ಇವರು ದಿನಾಂಕ:16-09-2011ರಂದು ಸಮಿತಿಯ ಮುಂದೆ ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರು ದಿನಾಂಕ:08-08-2011ರಂದು ಹೊರಡಿಸಿರುವ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ತಡವಾಗಿ ಹಾಜರಾಗಿದ್ದು ಲಿಖಿತ ಹೇಳಿಕೆಗಳನ್ನು ಸಲ್ಲಿಸುವುದಾಗಿ ತಿಳಿಸಿರುತ್ತಾರೆ. 5ನೇ ಪ್ರತಿವಾದಿ ಹಾಜರಿದ್ದು ತಕರಾರರನ್ನು ಸಲ್ಲಿಸಿರುತ್ತಾರೆ. 3ನೇ ಪ್ರತಿವಾದಿಗಳು ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಆದೇಶಕ್ಕಾಗಿ ಪ್ರಕರಣವನ್ನು ಕಾಯ್ದಿರಿಸಿದೆ.

**ನಿರ್ಣಯ**:- ಪ್ರಕರಣವನ್ನು ಕೆ.ಎಂ.ಸಿ.ಕಾಯ್ದೆ 1976 ಕಲಂ 61ಎ (ಐ)ರಡಿ ಕೈಗೆತ್ತಿಕೊಳ್ಳಲಾಯಿತು. ಮೇಲ್ಮನವಿದಾರರ ಹಾಗೂ ಪ್ರತಿವಾದಿಗಳ ಹೇಳಿಕೆ/ಲಿಖಿತ ಹೇಳಿಕೆ ಹಾಗೂ ಸಲ್ಲಿಸಿರುವ ತಕರಾರುಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ವಲಯರವರ ದಿನಾಂಕ:23-01-2012ರ ಟಿಪ್ಪಣಿಯನ್ನು ಪರಿಶೀಲಿಸಿದಾಗ ಖಾತಾವನ್ನು ವಿಜಯಕುಮಾರ್‌ರವರ ಹೆಸರಿಗೆ ನೋಂದಾಯಿಸಿದ್ದು, ತದನಂತರ ಶ್ರೀ.ಮುನಿರೆಡ್ಡಿಯವರು ಕರ್ನಾಟಕ ಮುನಿಸಿಫಲ್ ಕಾಯ್ದೆ ಕಲಂ 114ಎ ಕೆಳಗೆ ಪುನರ್ ಪರಿಶೀಲನೆ ಅರ್ಜಿ ಸಲ್ಲಿಸಿರುವ ಹಿನ್ನೆಲೆಯಲ್ಲಿ ಶ್ರೀ.ವಿಜಯ್ ಕುಮಾರ್‌ರವರ ಹೆಸರಿಗೆ ಮಾಡಿರುವ ಖಾತಾವನ್ನು ರದ್ದು ಮಾಡಿ ಶ್ರೀಮತಿ.ಚಿಕ್ಕತಾಯಮ್ಮನವರ ಹೆಸರಿನಲ್ಲಿ ಖಾತಾ ಮುಂದುವರೆಸಿರುವುದಾಗಿ ವರದಿಸಲಾಗಿರುತ್ತದೆ. ಆದರೆ ಶ್ರೀ.ಮುನಿರೆಡ್ಡಿಯವರು ಕರ್ನಾಟಕ ಮುನಿಸಿಫಲ್ ಕಾಯ್ದೆಯಡಿ ಪುನರ್ ಪರಿಶೀಲನಾ ಅರ್ಜಿಯಡಿ ಸಲ್ಲಿಸಿದ್ದು ಖಾತಾವನ್ನು ಶ್ರೀ.ಮುನಿರೆಡ್ಡಿಯವರ ಹೆಸರಿನಲ್ಲಿ ಮುಂದುವರೆಸದೆ ಶ್ರೀಮತಿ.ಚಿಕ್ಕತಾಯಮ್ಮರವರ ಹೆಸರಿನಲ್ಲಿ ಮುಂದುವರೆಸಲಾಗಿರುವುದು ಕಂಡು ಬಂದಿರುತ್ತದೆ. ಈ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಯಾವುದೇ ಹೇಳಿಕೆಗಳನ್ನು ನೀಡಲು ವಿಫಲರಾಗಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಉಪ ಕಾನೂನು ಅಧಿಕಾರಿಗಳು ಕಲಂ 114ಎ ರಡಿ ನಡೆದಿರುವ ನಡವಳಿಕೆಗಳ ಮೇಲೆ ಪ್ರಕರಣವನ್ನು ನಡೆಸಲು ಅಪೀಲುಗಳ ಸ್ಥಾಯಿ ಸಮಿತಿಗೆ ಕೆ.ಎಂ.ಸಿ. ಕಾಯ್ದೆಯಡಿಯಲ್ಲಿ ಅಧಿಕಾರವನ್ನು ಕಲ್ಪಿಸಿಲ್ಲದಿರುವುದರಿಂದ ಮೇಲ್ಮನವಿದಾರರು ಕರ್ನಾಟಕ ಘನ ಉಚ್ಚನ್ಯಾಯಾಲಯದಲ್ಲಿ ಪ್ರಶ್ನಿಸಿಕೊಳ್ಳುವಂತೆ ಸೂಚಿಸಬಹುದಾಗಿರುತ್ತದೆಂದು ತಿಳಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಮೇಲ್ಮನವಿದಾರರು ಜಂಟಿ ಆಯುಕ್ತರು (ಬೊಮ್ಮನಹಳ್ಳಿ)ವಲಯರವರು ದಿನಾಂಕ:08-08-2011ರಂದು ಕೆ.ಎಂ.ಸಿ.ಕಾಯ್ದೆ ಕಲಂ 114ಎ ರಡಿ ಮಾಡಿರುವ ಆದೇಶವನ್ನು ಕರ್ನಾಟಕ ಘನ ಉಚ್ಚನ್ಯಾಯಾಲಯದಲ್ಲಿ ಪಶ್ನಿಸಿಕೊಳ್ಳಬಹುದೆಂದು ತಿಳಿಸುತ್ತಾ, ಮೇಲ್ಮನವಿಯನ್ನು ವಜಾಗೊಳಿಸುವುದೆಂದು ತೀರ್ಮಾನಿಸಲಾಯಿತು.

04.ವಿಷಯ:ಸಂಖ್ಯೆ:ಅಸ್ಥಾಸ/(ತೆ)/31/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿ ಮೇ॥ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಪರವಾನಗಿ ಶುಲ್ಕದ ಆಧಾರದ ಮೇಲೆ ದಿನಾಂಕ:27-8-1981ರಿಂದ ವೆಸ್ಟ್ರನ್ ಬ್ಲಾಕ್ ಗ್ರೌಂಡ್ ಫ್ಲೋರ್ ಮಳಿಗೆ ಸಂಖ್ಯೆ:45, 46, 54, 55ನ್ನು ಹಂಚಿಕೆ ಮಾಡಲಾಗಿದ್ದು, ಸದರಿ ಮಳಿಗೆಗಳಿಗೆ ಆಡಳಿತಗಾರರು ದಿನಾಂಕ:02-07-2007ರಂದು ವಿಷಯ ಸಂಖ್ಯೆ:57/2007-08ರಲ್ಲಿ ನೆಲ ಅಂತಸ್ತಿಗೆ ರೂ.40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರಡಿ ಒಂದಕ್ಕೆ ರೂ.30/- ಮತ್ತು 2ನೇ ಅಂತಸ್ತಿನಿಂದ 9ನೇ ಅಂತಸ್ತಿನವರೆಗೆ ಇರುವ ಸರ್ಕಾರಿ ಕಛೇರಿಗಳಿಗೆ ಚದರಡಿ ಒಂದಕ್ಕೆ ರೂ.20/-ರಂತೆ ನಿಗಧಿಪಡಿಸಿ ನಿರ್ಣಯ ಹೊರಡಿಸಲಾಗಿರುತ್ತದೆ. ಸದರಿ ಮಳಿಗೆಯವರು ದಿನಾಂಕ:01-04-2007ರಿಂದ ಈ ತಹಲ್‌ವರೆವಿಗೂ ರೂ.20,92,055/-ಗಳ ಬಾಕಿ ಪರವಾನಗಿ ಶುಲ್ಕವನ್ನು ಉಳಿಸಿಕೊಂಡಿರುತ್ತಾರೆ. ಸದರಿ ಪರವಾನಗಿ ಶುಲ್ಕ ಬಾಕಿಯನ್ನು ಪಾವತಿಸುವಂತೆ 20-09-2010 ಮತ್ತು 07-03-2011ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗಳಿಗೆ ಉತ್ತರವಾಗಿ ಮಳಿಗೆದಾರರು ನಗರಾಭಿವೃದ್ಧಿ ಇಲಾಖೆ ಸಚಿವರಾದ ಮಾನ್ಯ ಎಸ್.ಸುರೇಶ್‌ಕುಮಾರ್‌ರವರಿಗೆ ಪತ್ರ ಮುಖೇನ ತಿಳಿಸಿ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ನಿಯಮಿತ ಬಾಡಿಗೆಯನ್ನು ನಿಗಧಿಪಡಿಸಬೇಕೆಂದು ಮತ್ತು ಹಿಂದಿನ ಬಾಕಿಯನ್ನು ಮನ್ನಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

ಸದರಿ ನಿಗಮದ ಆರ್ಥಿಕ ಸ್ಥಿತಿ ಹದಗೆಟ್ಟಿದ್ದು, ಕಳೆದ 8, 10 ವರ್ಷಗಳಿಂದ ನೌಕರರಿಗೆ ಪೂರ್ಣ ಪ್ರಮಾಣದಲ್ಲಿ ಸಂಬಳ ಪಾವತಿಸುವುದು ಕಷ್ಟಕರವಾಗಿದ್ದು ಹಾಗೂ ಕುಶಲಕರ್ಮಿಗಳಿಂದ ಉತ್ಪನ್ನಗಳನ್ನು ಖರೀದಿಸುವ ಕಾರ್ಯಕ್ರಮ ಮತ್ತು ಇತರ ಅಭಿವೃದ್ಧಿ ಚಟುವಟಿಕೆಗಳು ಸ್ಥಗಿತಗೊಂಡಿರುತ್ತದೆ ಹಾಗೂ ನಿಗಮದ ಹೆಸರನ್ನು ಡಾ॥ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ನಿಗಮ ನಿಯಮಿತ ಎಂದು ಮರು ನಾಮಕರಣ ಮಾಡಲಾಗಿದ್ದು, ಪುನಶ್ಚೇತನ ಕಾರ್ಯಕ್ರಮಗಳನ್ನು ಅನುಸ್ಟಾನಗೊಳಿಸಿದ್ದು, ಪರಿಸ್ಥಿತಿ ಉತ್ತಮಗೊಳ್ಳಬೇಕಾಗಿದೆ ಎಂದು ತಿಳಿಸಿರುತ್ತಾರೆ. ಸದರಿ ಮಳಿಗೆಗಳಿಗೆ ಈಗಿರುವ ಪರವಾನಗಿ ಶುಲ್ಕವನ್ನೇ ಮುಂದುವರೆಸಿ ಪ್ರತಿ 3 ವರ್ಷಕ್ಕೊಮ್ಮೆ ಶೇಕಡ 15ರಷ್ಟು ಪರವಾನಗಿ ಶುಲ್ಕ ಹೆಚ್ಚಿಸಿ ಸರ್ಕಾರಿ ಸಂಸ್ಥೆಯನನು ಉಳಿಸಿ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಪಾಲಿಕೆಯ ವಿಭಾಗದಲ್ಲಿ ಪರಿಶಿಷ್ಟ ಜಾತಿ/ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳ ಶೇಕಡ 22.75ರ ಅನುದಾನದಡಿಯಲ್ಲಿ ಈ ರೀತಿಯ ಸಂಸ್ಥೆಗಳಿಗೆ ಸಹಾಯ ಮಾಡುವ ಬಗ್ಗೆ ಯಾವುದೇ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವುದಿಲ್ಲ ಹಾಗೂ ನಿಗಧಿಪಡಿಸಿರುವುದಿಲ್ಲ. ಈಗಾಗಲೇ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ, ಆಪ್ಕೋ ಪ್ರಾಬ್ರಿಕ್ಸ್ ರವರುಗಳು ಮಾನ್ಯ ಆಡಳಿತಗಾರರ ನಿರ್ಣಯದಂತೆ ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿದ್ದಾರೆ.

ಮೇಲ್ಕಂಡ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಅಧ್ಯಕ್ಷರು ಡಾ॥ಬಾಬು ಜಗಜೀವನರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ (ಲಿಡ್‌ಕರ್) ಇವರು ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವ ಬಗ್ಗೆ ತೀರ್ಮಾನಕ್ಕಾಗಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:16-09-2011ರ ಟಿಪ್ಪಣಿ.

**ನಿರ್ಣಯ:-** ಮೇಲ್ಮನವಿದಾರರ ಹೇಳಿಕೆಗಳು ಹಾಗೂ ದಿನಾಂಕ:16-09-2011ರ ಆಯುಕ್ತರ ಟಿಪ್ಪಣಿಯಲ್ಲಿನ ಅಂಶಗಳನ್ನು ಪರಿಶೀಲಿಸಲಾಯಿತು. ದಿನಾಂಕ:04-02-2012ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಲಾಯಿತು. ಈಗಾಗಲೇ ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ಇತರೆ ಸಂಸ್ಥೆಗಳಾದ ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್, ಸಿಂಡಿಕೇಟ್ ಬ್ಯಾಂಕ್, ದಕ್ಷಿಣ ರೈಲ್ವೆ ಕಛೇರಿ, ಪ್ರಾದೇಶಿಕ ಸಾರಿಗೆ ಕಛೇರಿ, ಮಹಿಳಾ ಅಭಿವೃದ್ಧಿ ನಿಗಮ ಮತ್ತು ಆಪ್ಕೋ ಫ್ಯಾಬ್ರಿಕ್ಸ್‌ರವರು ನಗರ ಪಾಲಿಕೆಯು ನಿಗಧಿಪಡಿಸಿರುವ ಪರವಾನಗಿ ಶುಲ್ಕವನ್ನು ಪಾವತಿಸುತ್ತಿರುವುದು ಕಂಡು ಬರುತ್ತದೆ. ಅಲ್ಲದೆ ಈ ಹಂತದಲ್ಲಿ ಮೆ॥ ಲಿಡ್‌ಕರ್ ಲೆದರ್ ಎಂಪೋರಿಯಂ ನಿಗಮಕ್ಕೆ ಮಾತ್ರ ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿದಲ್ಲಿ, ಹಾಲಿ ಪರವಾನಗಿ ಶುಲ್ಕವನ್ನು ಪಾವತಿಸುತ್ತಿರುವ ಎಲ್ಲಾ ಸಂಸ್ಥೆಗಳು ಸಹ ಪರವಾನಗಿ ಶುಲ್ಕವನ್ನು ಕಡಿಮೆ ಮಾಡುವಂತೆ ಅರ್ಜಿ ಸಲ್ಲಿಸುವ ಸಂಭವವಿರುವುದಾಗಿ ಸಮಿತಿಯು ಭಾವಿಸುತ್ತದೆ. ಅಲ್ಲದೆ ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿ ಬಾಕಿ ಮೊತ್ತವನ್ನು ಮನ್ನಾ ಮಾಡುತ್ತಾ ಹೋದಲ್ಲಿ ನಗರ ಪಾಲಿಕೆಯು ಆರ್ಥಿಕ ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ನಿರ್ಮಾಣವಾಗುವ ಹಿನ್ನೆಲೆಯಲ್ಲಿ ಮೇಲ್ಮನವಿದಾರರ ಮೇಲ್ಮನವಿಯನ್ನು ವಜಾಗೊಳಿಸುತ್ತಾ ದಿನಾಂಕ:16-09-2011ರ ಆಯುಕ್ತರ ಟಿಪ್ಪಣಿಯಂತೆ ಕ್ರಮ ವಹಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

05.ವಿಷಯ:ಸಂಖ್ಯೆ:ಅಸ್ಥಾಸ/(ತೆ)/40/2011-12

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ಮಾನ್ಯ ಆಡಳಿತಗಾರರು ತೆಗೆದುಕೊಂಡ ತೀರ್ಮಾನದಂತೆ ಮಳಿಗೆದಾರರಿಗೆ ಈ ಕಛೇರಿಯಿಂದ ನೋಟೀಸ್ ನೀಡಿರುವ ವಿರುದ್ಧ ವರ್ತಕರ ಸಂಘದವರು ನ್ಯಾಯಾಲಯದಲ್ಲಿ ಮೊರೆ ಹೋದ ಕಾರಣ ನ್ಯಾಯಾಲಯವು ದಿನಾಂಕ:19-12-2007ರಂದು ನೀಡಿರುವ ಆದೇಶದಲ್ಲಿ ಸದರಿ ನೋಟೀಸ್‌ಗೆ ತಡೆಯಾಜ್ಞೆಯನ್ನು ನೀಡಿ ನಗರ ಪಾಲಿಕೆಯು ಕಕ್ಷಿದಾರರಿಗೆ ಯಾವುದೇ ಅವಕಾಶವನ್ನು ನೀಡದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುವುದನ್ನು ತಡೆದು ಅವಕಾಶವನ್ನು ಕಲ್ಪಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು ಸೂಚಿಸಿರುವ ಮೇರೆಗೆ ಪರವಾನಗಿದಾರರುಗಳನ್ನು ದಿನಾಂಕ:08-06-2011ರಂದು ಅವರ ಅಹವಾಲುಗಳನ್ನು ಆಯುಕ್ತರ ಮುಂದೆ ಹೇಳಿಕೊಳ್ಳಲು ಅವಕಾಶ ನೀಡಲಾಗಿತ್ತು. ಸದರಿಯವರು ಮೌಖಿಕವಾಗಿ ದರವನ್ನು ಕಡಿಮೆ ಮಾಡಲು ಕೋರಿದ ಮೇರೆಗೆ ಲಿಖಿತ ಹೇಳಿಕೆಗಳನ್ನು ನೀಡಲು ಸೂಚಿಸಲಾಯಿತು. ಆದರೆ ಈವರೆವಿಗೂ ಸದರಿಯವರುಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ದರ ಪರಿಷ್ಕರಣೆಯ ವಿಷಯದ ಬಗ್ಗೆ ಜರೂರಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:26-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರುಗಳು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಸದರಿ ಪ್ರಕರಣವನ್ನು ಈಗಾಗಲೇ ಆದೇಶಕ್ಕಾಗಿ ಕಾಯ್ದಿರಿಸಲಾಗಿತ್ತು. ಆದರೆ ಉಪ ಆಯುಕ್ತರು (ಮಾರುಕಟ್ಟೆ)ರವರ ಕೋರಿಕೆಯ ಮೇರೆಗೆ ಮತ್ತೊಮ್ಮೆ ಪ್ರಕರಣವನ್ನು ವಿಚಾರಣೆಗಾಗಿ ಕರೆಯಲಾಯಿತು. ಆದರೆ ಉಪ ಆಯುಕ್ತರು (ಮಾರುಕಟ್ಟೆ)ರವರು ಸಮಯಕ್ಕೆ ಸರಿಯಾಗಿ ಹಾಜರಾಗಿರುವುದಿಲ್ಲ. ನಂತರ ತಡವಾಗಿ ಹಾಜರಾಗಿ ಮಾರುಕಟ್ಟೆಯ ಬಗ್ಗೆ ಸಮರ್ಪಕವಾದ ಪ್ರತಿವಾದಗಳನ್ನು/ಹೇಳಿಕೆಗಳನ್ನು ಮಂಡಿಸಿರುವುದಿಲ್ಲ. ಇದರಿಂದಾಗಿ ಸಮಿತಿಯು ಉಪ ಆಯುಕ್ತರು (ಮಾರುಕಟ್ಟೆ)ರವರ ಹೇಳಿಕೆಗಳು ಏನೂ ಇಲ್ಲವೆಂದು ಭಾವಿಸುತ್ತಾ, ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

06.ವಿಷಯ:ಸಂಖ್ಯೆ:ಅಸ್ಥಾಸ/(ಆ)/46/2011-12

ಶ್ರೀ.ಅಲಿಜಾನ್‌ರವರು ಬೆಂಗಳೂರು ನರಸಿಂಹರಾಜು ರಸ್ತೆ, ನ್ಯೂ ಬಂಬೂಬಜಾರ್ ಚರಂಡಿಯ ಪಕ್ಕದಲ್ಲಿರುವ 6x4 ಅಡಿಗಳ ಜಾಗವನ್ನು ನಗರ ಪಾಲಿಕೆಯಿಂದ ಗುತ್ತಿಗೆಗೆ ನೀಡಿದ್ದು, ನಂತರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ನಡವಳಿಕೆಯಂತೆ 8x20 ಅಡಿಗಳ ಜಾಗವನ್ನು ನನ್ನ ಪತ್ನಿಯ ಹೆಸರಿಗೆ ಮಾರಾಟ ಮಾಡಲು ದಿನಾಂಕ:31-12-1998ರಲ್ಲಿ ತೀರ್ಮಾನಿಸಿದ್ದು, ಇದುವರೆವಿಗೂ ಕ್ರಯ ಮಾಡಿಕೊಟ್ಟಿರುವುದಿಲ್ಲ. ಆದುದರಿಂದ ಸದರಿ ಸ್ವತ್ತನ್ನು ನನ್ನ ಪತ್ನಿಯ ಹೆಸರಿಗೆ ಕ್ರಯಕ್ಕಾಗಲೀ ಅಥವಾ ನನ್ನ ಹೆಸರಿಗೆ ಗುತ್ತಿಗೆಯನ್ನಾಗಲೀ ಮುಂದುವರೆಸಿಕೊಡಬೇಕೆಂದು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:31-12-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಪ್ರತಿವಾದಿಗಳು ಸದರಿ ಜಾಗವು ಬೃಹತ್ ನೀರು ಗಾಲುವೆ ಪಕ್ಕವಿದ್ದು ರಸ್ತೆ ಅಗಲೀಕರಣಕ್ಕಾಗಿ ಉಪಯೋಗಿಸಿಕೊಳ್ಳಬೇಕಾಗಿರುವುದರಿಂದ ಮೇಲ್ಮನವಿದಾರರು ಕೋರಿರುವಂತೆ ಹಮಚಿಕೆ ಮಾಡಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಮೇಲ್ಮನವಿದಾರರು ಸದರಿ ಪ್ರದೇಶದಲ್ಲಿ ಅನಧಿಕೃತವಾಗಿ ಸಾಕಷ್ಟು ಅಂಗಡಿಗಳನ್ನು ದೊಡ್ಡ ಮಳೆ ನೀರಿನ ಮೋರಿಯ ಮೇಲೆ ನಿರ್ಮಿಸಿಕೊಂಡು ವ್ಯಾಪಾರ ವಹಿವಾಟು ನಡೆಸುತ್ತಿದ್ದರೂ ಸಹ ಅವರನ್ನು ತೆರವುಗೊಳಿಸದೆ ನನ್ನ ಅಂಗಡಿಗೆ ಮಾತ್ರ ನೋಟೀಸ್ ನೀಡಿರುತ್ತಾರೆ. ಇದು ನ್ಯಾಯ ಸಮ್ಮತವಾಗಿರುವುದಿಲ್ಲದಿರುವುದರಿಂದ ಸದರಿ ಅಂಗಡಿಯನ್ನು ನನ್ನ ಹೆಸರಿಗಾಗಲೀ ಅಥವಾ ನನ್ನ ಹೆಂಡತಿಯ ಹೆಸರಿಗಾಗಲೀ ಕ್ರಯಕ್ಕೆ ಅಥವಾ ಗುತ್ತಿಗೆ ಅವಧಿಯನ್ನು ಮುಂದುವರೆಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

**ನಿರ್ಣಯ:-** ಮೇಲ್ಮನವಿದಾರರ, ಪ್ರತಿವಾದಿಗಳ ಹಾಗೂ ಕಡತದಲ್ಲಿರುವ ಆಯುಕ್ತರ ಟಿಪ್ಪಣಿಯನ್ನು ಪರಿಶೀಲಿಸಲಾಯಿತು. ಹಾಗೂ ಸಮಿತಿಯು ದಿನಾಂಕ:04-02-2012ರಂದು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲನೆ ಮಾಡಿದಾಗ ನ್ಯೂ ಬಂಬೂ

ಬಜಾರ್ ಚರಂಡಿಯ ಮೇಲೆಯೇ ಸುಮಾರು ಮಳಿಗೆಗಳನ್ನು ನಿರ್ಮಿಸಿಕೊಂಡು ಹಾಗೂ ರಸ್ತೆಗಾಗಿ ಮೀಸಲಿಟ್ಟಿರುವ ಜಾಗವನ್ನು ಅತಿಕ್ರಮಿಸಿಕೊಂಡು ವ್ಯಾಪಾರ ಮಾಡುತ್ತಿರುವುದು ಸಮಿತಿಯ ಗಮನಕ್ಕೆ ಬಂದಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಸದರಿ ಮಳಿಗೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಂಡಿರುವುದು ಕಂಡುಬರುತ್ತಿಲ್ಲ. ಮೇಲ್ಮನವಿದಾರರು ಕೋರಿರುವ ಜಾಗದ ಬಗ್ಗೆ ಈಗಾಗಲೇ ದಿನಾಂಕ:26-10-2004ರಂದು ಮಹಾನಗರ ಪಾಲಿಕೆಯ ಸಭೆಯಲ್ಲಿ ಫಲಾನುಭವಿಗೆ ಬದಲಿ ನಿವೇಶನವನ್ನು ಗುರುತಿಸಿ ನೀಡುವ ಬಗ್ಗೆ ಆಯುಕ್ತರು ಕ್ರಮ ತೆಗೆದುಕೊಳ್ಳಲು ಒಪ್ಪುವುದೆಂದು ತೀರ್ಮಾನಿಸಲಾಗಿರುವುದು ಕಂಡು ಬಂದಿರುತ್ತದೆ.

ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಅಧಿಕಾರಿಗಳು ಅನಧಿಕೃತವಾಗಿ ನಡೆಯುತ್ತಿರುವ ಮಳಿಗೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳದಿರುವುದನ್ನು ಗಂಭೀರವಾಗಿ ಪರಿಗಣಿಸುತ್ತದೆ. ಹಾಗೂ ಮೇಲ್ಮನವಿದಾರರು ಕೋರಿರುವ ಜಾಗದ ಬಗ್ಗೆ ಈಗಾಗಲೇ ದಿನಾಂಕ:26-10-2004ರ ಮಹಾನಗರ ಪಾಲಿಕೆಯ ನಿರ್ಣಯದಂತೆ ಆಯುಕ್ತರು ಮೇಲ್ಮನವಿದಾರರಾದ ಶ್ರೀ.ಆಲಿಜಾನ್‌ರವರಿಗೆ ಬದಲಿ ಜಾಗವನ್ನು ನೀಡಲು ಹಾಗೂ ಅನಧಿಕೃತ ಮಳಿಗೆಗಳನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ತೆ/47/2011-12</u>

ಎಂ.ರಾಜ ಎಂಬುವವರು ಸಹಾಯಕ ಕಂದಾಯ ಅಧಿಕಾರಿ (ಗೋವಿಂದ ರಾಜನಗರ)ರವರು ಸಂಖ್ಯೆ:547/50/1, 10ನೇ ಸಿ ಮುಖ್ಯರಸ್ತೆ, 6ನೇ ಬ್ಲಾಕ್, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು ಈ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಿಸಿ ನೀಡಿರುವ ದಿನಾಂಕ:25-06-2011ರ ನೋಟೀಸಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-11-2011ರ ಟಿಪ್ಪಣಿ.
<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಸಂಬಂಧಪಟ್ಟ ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ನೋಟೀಸ್ ನೀಡಲು ಸೂಚಿಸಿ ಪ್ರಕರಣವನ್ನು ಮುಂದೂಡಲಾಯಿತು.

<u>08.ವಿಷಯ:ಸಂಖ್ಯೆ:ಅಸ್ಥಾಸ/(ಜಾ/48/2011-12</u>

ಮೆ|| ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:10-01-2012ರ ಟಿಪ್ಪಣಿ.
<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ನೋಟೀಸ್ ಜಾರಿ ಮಾಡಲು ಸೂಚಿಸಿ, ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಗಿದೆ.

<u>09.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/49/2011-12</u>

ಮೆ|| ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:03ರ) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-01-2012ರ ಟಿಪ್ಪಣಿ.
<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

<u>10.ವಿಷಯ:ಸಂಖ್ಯೆ:ಅಸ್ಥಾಸ/(ಖಾ)/50/2011-12</u>

ಶ್ರೀ.ಪಿ.ವಿನ್ಸೆಂಟ್‌ರವರು ಸ್ವತ್ತಿನ ಸಂಖ್ಯೆ:13, 13/1, 13/2 ಮತ್ತು 13/3, 1ನೇ ಮುಖ್ಯರಸ್ತೆ, ಜಕ್ಕಸಂದ್ರ, ವಾರ್ಡ್-151ರ ಸ್ವತ್ತುಗಳ ಖಾತಾ ರದ್ದುಪಡಿಸಲು ಕೋರಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹ ಕಂದಾಯ ಅಧಿಕಾರಿ, ಕೋರಮಂಗಲ ಉಪ ವಲಯರವರು ದಿನಾಂಕ:24-10-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಕ್ಷಿಣ)ರವರ ದಿನಾಂಕ:26-11-2011ರ ಟಿಪ್ಪಣಿ.
<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಗೈರು ಹಾಜರಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

<u>11.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/51/2011-12</u>

ಶ್ರೀ. ದಾಮೋದರ್, ಮಾಲೀಕರು, ದಾಮೋದರ್ ಎಂಟರ್ ಪ್ರೈಸಸ್, ನಂ.645, 10ನೇ ಇ ಮುಖ್ಯರಸ್ತೆ, 6ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು ಇವರು ದಿನಾಂಕ:04-01-2012ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ದಿನಾಂಕ:18-01-2007ರಿಂದ 21-06-2007ರವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪಶ್ಚಿಮ ವಲಯದ ವ್ಯಾಪ್ತಿಯಲ್ಲಿ ಅನಧಿಕೃತ ಜಾಹೀರಾತು ಫಲಕಗಳನ್ನು ತೆರವುಗೊಳಿಸುವ ಕಾರ್ಯ ಹಾಗೂ ಮಹಾಲಕ್ಷ್ಮಿಪುರ ಉಪ-ವಿಭಾಗದ ಸರಹದ್ದುಗಳಲ್ಲಿ ಮಳೆಗಾಲದಲ್ಲಿ ಮಳೆ ನೀರಿನಿಂದ ಸಂಭವಿಸಬಹುದಾದ ಅನಾಹುತಗಳನ್ನು ತಡೆಯುವ ಕೆಲಸವನ್ನು ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:17-01-2007ರ ಕಾರ್ಯಾದೇಶದಂತೆ ದಿನಾಂಕ:18-01-2007ರಿಂದ 26-06-2007ರವರೆಗೆ ಕಾರ್ಯನಿರ್ವಹಿಸಿರುತ್ತೇವೆ. ಆದರೆ ದಿನಾಂಕ:16-12-2011ರಂದು ಪತ್ರ ನೀಡಿ ಕೆ.ಟಿ.ಪಿ.ಪಿ. ಕಾಯ್ದೆ ಉಲ್ಲಂಘನೆ ಯಾಗಿರುವುದರಿಂದ ದಿನಾಂಕ:25-11-2011ರ ಆಯುಕ್ತರ ಆದೇಶದಂತೆ ನಿಮ್ಮ ಮನವಿಯನ್ನು ಪರಿಗಣಿಸಲು

ಬರುವುದಿಲ್ಲವೆಂದು ತಿಳಿಸಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-01-2012ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ಪರವಾಗಿ ಶ್ರೀ.ಮರಳುಸಿದ್ದಪ್ಪ, ತಾಂತ್ರಿಕ ಸಹಾಯಕರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಗುತ್ತಿಗೆದಾರರಾಗಿದ್ದು ಪ್ರತಿವಾದಿಗಳಿಂದ ಕಾರ್ಯಾದೇಶ ಪಡೆದು ಕಾರ್ಯನಿರ್ವಹಿಸಿರುತ್ತೇನೆ. ನಂತರ ನಗರ ಪಾಲಿಕೆಯ ಹಿತದೃಷ್ಟಿಯಿಂದ ನನ್ನ ಗುತ್ತಿಗೆ ಅವಧಿಯನ್ನು ಮುಂದುವರೆಸಿಕೊಂಡು ಹೋಗುವಂತೆ ಸಂಬಂಧಪಟ್ಟ ಅಧಿಕಾರಿಗಳು ತಿಳಿಸಿರುತ್ತಾರೆ. ಅದರಂತೆ ನಾನು ಕಾರ್ಯನಿರ್ವಹಿಸಿರುತ್ತೇನೆ. ಆದರೆ ನಾನು ಕಾರ್ಯ ನಿರ್ವಹಿಸಿರುವ ಅವಧಿಗೆ ಹಣವನ್ನು ಪಾವತಿಸಿರುವುದಿಲ್ಲ. 2 ವರ್ಷಗಳು ಕಳೆದ ನಂತರ ನನಗೆ ನೋಟೀಸ್ ನೀಡಿ ಕೆ.ಟಿ.ಪಿ.ಪಿ. ಕಾಯ್ದೆಯನ್ವಯ ಕಾರ್ಯನಿರ್ವಹಿಸಿರುವ ಅವಧಿಗೆ ಗುತ್ತಿಗೆ ಹಣವನ್ನು ಪಾವತಿಸಲು ಬರುವುದಿಲ್ಲವೆಂದು ತಿಳಿಸಿರುತ್ತಾರೆ. ಇದರಿಂದಾಗಿ ನನಗೆ ಏನು ಮಾಡಬೇಕೆಂದು ತೋಚದೆ ತಮ್ಮ ಮುಂದೆ ನನ್ನ ಹೇಳಿಕೆಗಳನ್ನು ಲಿಖಿತವಾಗಿ ಸಲ್ಲಿಸಿರುತ್ತೇನೆ. ನನ್ನ ಲಿಖಿತ ಹೇಳಿಕೆಗಳನ್ನು ಪರಾಂಭರಿಸಿ ನನಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಪ್ರತಿ ವಾದಿಗಳನ್ನು ಪ್ರಶ್ನಿಸಲಾಗಿ ಈ ಬಗ್ಗೆ ನನಗೇನು ತಿಳಿದಿರುವುದಿಲ್ಲವೆಂದು ತಿಳಿಸಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

12. ವಿಷಯ:ಸಂಖ್ಯೆ:ಅಸ್ಥಾಸ/(ಜಾ/52/2011-12

ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01 ಮತ್ತು ಪ್ಯಾಕೇಜ್ ಸಂಖ್ಯೆ:03) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ:22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ನಿರ್ಣಯ**:-ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01 ಮತ್ತು ಪ್ಯಾಕೇಜ್ ಸಂಖ್ಯೆ:03) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಪ್ರಕರಣಗಳಿಗೆ ಸಂಬಂಧಿಸಿದಂತೆ ಈಗಾಗಲೇ ವಿಚಾರಣೆಯು ನಡೆಯುತ್ತಿರುತ್ತದೆ. ಆದುದರಿಂದ ಸದರಿ ವಿಷಯಗಳಿಗೆ ಸಂಬಂಧಿಸಿದಂತೆ ವಿಚಾರಣೆ ಮತ್ತು ತೀರ್ಮಾನವನ್ನು ಕಾಯ್ದಿರಿಸಿ ಜಂಟಿ ಆಯುಕ್ತರು (ಜಾಹೀರಾತು)ರವರ ಸಂಖ್ಯೆ:ಉ.ಆ(ಜಾ)/ಪಿ.ಆರ್/90/07-08 ದಿನಾಂಕ:22-09-2010ರಂದು ನೀಡಿರುವ ನೋಟೀಸ್‌ಗಳಿಗೆ ಸಮಿತಿಯು ಅಂತಿಮ ತೀರ್ಮಾನ ಕೈಗೊಳ್ಳುವವರೆವಿಗೂ ತಾತ್ಕಾಲಿಕ ತಡೆಯಾಜ್ಞೆ ನೀಡಿದೆ.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ: 24-03-2012ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಜಂಟಿ ಆಯುಕ್ತರು (ಜಾಹೀರಾತು) |
| 04 | ಬಿ.ಎಸ್.ಆನಂದ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 05 | ಎಂ.ವಸಂತಕುಮಾರಿ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪಶ್ಚಿಮ) |
| 06 | ಬಿ.ಗೋವಿಂದರಾಜು | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ/ಕೋರಮಂಗಲ) |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/17/2010-11

ಶ್ರೀಮತಿ.ವೆಂಕಟಲಕ್ಷ್ಮಮ್ಮ ಮತ್ತು 5 ಜನ ಇತರರು ಯಶವಂತಪುರ ಹೋಬಳಿ, ಮತ್ತೀಕೆರೆ, ಬೆಂಗಳೂರು ಇವರು ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 4 ಜನ ಇತರರ ವಿರುದ್ಧ ಮಾನ್ಯ ಆಡಳಿತಗಾರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ದಿನಾಂಕ:08-09-2009ರಂದು ಅಪೀಲು ಸಲ್ಲಿಸಿದ್ದು, ಸದರಿ ಅಪೀಲಿನಲ್ಲಿ ಎಲ್.ಪಿ.ಸಂಖ್ಯೆ:ಜಿಸಿಡಬ್ಲ್ಯೂ/202/ಎಂಎಂಎಎಲ್/07-08ನ್ನು ರದ್ದು ಪಡಿಸುವಂತೆ ಹಾಗೂ ತಪ್ಪಿತಸ್ಥ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಜರುಗಿಸುವಂತೆ ಕೋರಿಕೊಂಡಿದ್ದು, ಸದರಿ ಅಪೀಲಿನ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಶ್ರೀ.ಸತ್ಯನಾರಾಯಣ ಮತ್ತು 5 ಜನ ಇತರರು ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು 7 ಜನ ಇತರರ ವಿರುದ್ಧ ರಿಟ್ ಪಿಟಿಷನ್ ಸಂಖ್ಯೆ:2189/2010ನ್ನು ದಾಖಲಿಸಿದ್ದು, ಘನ ಉಚ್ಚನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸಂಬಂಧಪಟ್ಟ ಅಪೀಲು ಪ್ರಾಧಿಕಾರವು ಅರ್ಜಿದಾರರ ಮನವಿಯನ್ನು 8 ವಾರಗಳೊಳಗಾಗಿ ಪರಿಶೀಲಿಸಿ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗಿರುತ್ತದೆ. ಆದರೆ ಸಂಬಂಧಪಟ್ಟ ಪ್ರಾಧಿಕಾರವು ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಶ್ರೀ.ಎ.ಸತ್ಯನಾರಾಯಣ ಎಂಬುವವರು ದಿನಾಂಕ:14-03-2011ರಂದು ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. 3 ಮತ್ತು 4ನೇ ಪ್ರತಿವಾದಿಗಳ ಪರವಾಗಿ ಅವರ ವಕೀಲರು ಹಾಜರಾಗಿರುತ್ತಾರೆ. ಮೇಲ್ಮನವಿದಾರರಾದ ಶ್ರೀ.ಸತ್ಯನಾರಾಯಣರವರು ಹಾಜರಾಗಿರುತ್ತಾರೆ. 3 ಮತ್ತು 4ನೇ ಪ್ರತಿವಾದಿಗಳ ಪರವಾಗಿ ಹಾಜರಿದ್ದ ವಕೀಲರು ಲಿಖಿತ ಹೇಳಿಕೆಗಳನ್ನು ಸಲ್ಲಿಸಲು ಕಾಲಾವಕಾಶವನ್ನು ಕೋರಿಕೊಂಡಿರುತ್ತಾರೆ.

ಪ್ರತಿವಾದಿಗಳಾದ ಎ.ಡಿ.ಟಿ.ಪಿ(ಪಶ್ಚಿಮ)ರವರು ಹಾಜರಿದ್ದು ತಮ್ಮ ಹೇಳಿಕೆಗಳನ್ನು ಸಲ್ಲಿಸುತ್ತಾ, ಸಂಖ್ಯೆ:12 (ಹಳೆದು-3), ಸರ್ವೆ ನಂ.4, ಮತ್ತೀಕರೆ, ಬೆಂಗಳೂರು(ಪಿಐಡಿ:4-40-12) ಈ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ:21-01-2009ರಲ್ಲಿ ಎಲ್.ಪಿ.ಸಂಖ್ಯೆ:ಜೆ.ಸಿ(ಡಬ್ಲ್ಯೂ)/ಎಂ.ಎ.ಎಲ್.ಎಲ್./202/2007-08ನ್ನು ಮಂಜೂರು ಮಾಡಲಾಗಿದ್ದು, ಸದರಿ ನಕ್ಷೆಯನ್ನು ಬಿಲ್ಡಿಂಗ್ ಬೈಲಾ ಮತ್ತು ಕೆ.ಎಂ.ಸಿ.ಕಾಯ್ದೆಯನ್ವಯವೇ ಮಂಜೂರು ಮಾಡಲಾಗಿರುತ್ತದೆ. ಆದುದರಿಂದ ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಿ, ದಿನಾಂಕ:20-01-2009ರಲ್ಲಿ ಮಂಜೂರು ಮಾಡಿರುವ ನಕ್ಷೆಯನ್ನು ಊರ್ಜಿತಗೊಳಿಸಬೇಕೆಂದು ವಿನಂತಿಸಿಕೊಂಡಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

ಎಲ್.ಪಿ.ಸಂಖ್ಯೆ:ಜೆ.ಸಿ.(ಡಬ್ಲ್ಯೂ)/ಎಂಎಎಲ್ಎಲ್/202/07-08ನ್ನು ಮೆ||ಗೋಕುಲ ಎಜುಕೇಶನ್ ಫೌಂಡೇಶನ್, ಮತ್ತಿಕೆರೆ, ಬೆಂಗಳೂರು ಇವರಿಗೆ ಮಂಜೂರಾದ ನಕ್ಷೆಯನ್ನು ರದ್ಧುಪಡಿಸುವ ಬಗ್ಗೆ ಶ್ರೀ.ಎ.ಸತ್ಯನಾರಾಯಣ, ಹಾಗೂ ಮತ್ತಿತರರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆಡಳಿತಗಾರರ ಮುಂದೆ ಮೇಲ್ಮನವಿ ಸಲ್ಲಿಸಿದ್ದು ಸದರಿ ಮೇಲ್ಮನವಿಯನ್ನು ಆಡಳಿತಗಾರರು ಇತ್ಯರ್ಥಪಡಿಸದೇ ಇರುವ ಕಾರಣ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:2189/2010 (ಎಲ್‌ಬಿ-ಬಿಎಮ್‌ಪಿ)ನ್ನು ದಾಖಲಿಸಿದ್ದು, ಸದರಿ ರಿಟ್ಟ ಅರ್ಜಿಯಲ್ಲಿ ಘನ ನ್ಯಾಯಾಲಯವು ದಿನಾಂಕ:15-06-2010ರ ಆದೇಶದಲ್ಲಿ ಸದರಿಯವರ ಮೇಲ್ಮನವಿಯನ್ನು 8 ವಾರಗಳಲ್ಲಿ ಕಾನೂನಿನ ಚೌಕಟ್ಟಿನಲ್ಲಿ ಇತ್ಯರ್ಥಪಡಿಸಲು ಆದೇಶವಿತ್ತಿರುತ್ತದೆ. ಆದರೂ ಸಹ ಇದುವರೆವಿಗೂ ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ದಿನಾಂಕ:14-03-2011ರಂದು ಮೇಲ್ಮನವಿ ಸಲ್ಲಿಸಿದ್ದ ಕಾರಣ ಸ್ಥಾಯಿ ಸಮಿತಿಯ

ಮುಂದೆ ಹಾಜರಾಗಲು ಮೇಲ್ಮನವಿ ಸಲ್ಲಿಸಿದ ಅರ್ಜಿದಾರರು ಹಾಗೂ ಪ್ರತಿವಾದಿಗಳಿಗೆ ನೋಟೀಸು ಜಾರಿಮಾಡಿ, ವಿಚಾರಣೆ ನಡೆಸಲಾಯಿತು. ಹಾಗೂ ಸಲ್ಲಿಸಿದ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

ಮೇಲ್ಮನವಿದಾರರು ತಮ್ಮ ಮನವಿಯಲ್ಲಿ, ದಿವಂಗತ ಅರ್ಚಕ ಅನಂತಯ್ಯನವರು, ಮತ್ತೀಕೆರೆಯಲ್ಲಿರುವ ಶ್ರೀ ಹನುಮಂತ ದೇವರ ದೇವಸ್ಥಾನದ ಅರ್ಚಕರಾಗಿದ್ದು ಸರ್ವೆ ನಂ. 7, ಮತ್ತೀಕೆರೆ ಗ್ರಾಮದಲ್ಲಿ 4 ಎಕರೆ 21 ಗುಂಟೆ ಜಮೀನು ಹನುಮಂತ ದೇವರ ದೇವಸ್ಥಾನಕ್ಕೆ ಸೇರಿದ್ದು, ಇನಾಮ್ ಅಬಾಲಿಷನ್ ಕಾಯ್ದೆ ಜಾರಿಗೆ ಬಂದ ನಂತರ ಕಾಯ್ದೆ ಸೆಕ್ಷನ್ 5 ರನ್ವಯ ಸದರಿ ಜಮೀನು ಸರ್ಕಾರಕ್ಕೆ ಹಿಂದಿರುಗಿಸಲ್ಪಡುತ್ತದೆ. ಇನಾಂದಾರರು ಸದರಿ ಜಮೀನಿನ ಮಂಜೂರಾತಿಗೆ ಅರ್ಜಿಸಲ್ಲಿಸಿದಲ್ಲಿ, ಪುನ: ಜಮೀನು ಮಂಜೂರು ಮಾಡಲ್ಪಡುತ್ತದೆ.  ಇದರಂತೆ, ದಿವಂಗತ ಅರ್ಚಕ ಅನಂತಯ್ಯನವರು ದಿನಾಂಕ 21/8/1958 ರಂದು ಅರ್ಜಿ ಸಲ್ಲಿಸಿದ್ದಾರೆ.  ಪ್ರಕರಣ ಸಂಖ್ಯೆ 93/1958 ರಲ್ಲಿ ವಿಶೇಷ ಜಿಲ್ಲಾಧಿಕಾರಿಗಳು (ಇನಾಂ ಅಬಾಲಿಷನ್) ಬೆಂಗಳೂರು ಇವರು ತಹಶೀಲ್ದಾರ್‌ರವರ ವರದಿ ಹಾಗೂ ಪರಿವೀಕ್ಷಣಾ ವರದಿಯನ್ನು ಪಡೆದು ದಿವಂಗತ ಅರ್ಚಕ ಅನಂತಯ್ಯನವರಿಗೆ ಈ ಜಮೀನನ್ನು ಮಂಜೂರು ಮಾಡಿರುತ್ತಾರೆ. ದಿನಾಂಕ:1-2-1959ರ ಹಿಂಬರಹದ ಮೂಲಕ ಮಂಜೂರಾತಿಯಾಗಿರುವುದು ಕಂಡು ಬರುತ್ತದೆ. ತದನಂತರ ದಿವಂಗತ ಅರ್ಚಕ ಅನಂತಯ್ಯನವರು, ತಮ್ಮ ಆಸ್ತಿಯನ್ನು ನೋಂದಣಿ ಮಾಡಿಸಿದ ವ್ಯವಸ್ಥಾ ಪತ್ರ ಸಂಖೆ:1309/1959-60 ದಿನಾಂಕ: 10-5-59ರಂತೆ, ಈ ಜಮೀನನ್ನು ಇತರ ಆಸ್ತಿಗಳೊಂದಿಗೆ ಪಾಲು ಮಾಡಿದ್ದು, ಈ ವಿವರಗಳು ಉಪನೋಂದಣಾಧಿಕಾರಿಯವರ ಋಣಬಾರ ದೃಢೀಕರಣ ಪತ್ರದಲ್ಲಿ ಸಹ ನಮೂದಾಗಿರುತ್ತದೆಂದು ತಿಳಿಸಿರುತ್ತಾರೆ.

ಅರ್ಚಕ ಅನಂತಯ್ಯನವರು ದಿನಾಂಕ 3-9-1971 ರಂದು ದೈವಾಧೀನರಾಗಿದ್ದು, ಈ ಅವಧಿಯವರೆಗೆ ಸದರಿ ಜಮೀನಿನ ಮೇಲೆ ಹಕ್ಕು ಸಾಧಿಸಿ ಬೇರೆಯವರಿಂದ ಯಾವುದೇ ಅರ್ಜಿ ಇರಲಿಲ್ಲವೆಂದು ಹಾಗೂ ದಿನಾಂಕ: 1-2-1959ರಂತೆ ಮಾಡಲಾದ ಮಂಜೂರಾತಿ ಆದೇಶವನ್ನು ಈ ವರೆವಿಗೂ ಯಾವುದೇ ನ್ಯಾಯಾಲಯಗಳಲ್ಲಾಗಲೀ, ಪ್ರಾಧಿಕಾರದಲ್ಲಾಗಲಿ ಯಾರೂ ಪ್ರಶ್ನಿಸಿಲ್ಲವೆಂದು ಹಾಗೂ ಸದರಿ ಮಂಜೂರಾತಿ ಆದೇಶ ರದ್ದಾಗಿಲ್ಲವೆಂದು ಮೇಲ್ಮನವಿದಾರರು ತಿಳಿಸಿರುತ್ತಾರೆ. ನಂತರ ಅರ್ಚಕ ಅನಂತಯ್ಯನವರ ವಾರಸುದಾರರಿಗೆ ಗೊತ್ತಿಲ್ಲದಂತೆ ಶ್ರೀಯುತ ಎಂ.ಎಸ್.ರಾಮಯ್ಯ ಛೇರ್‌ಮನ್, ಗೋಕುಲ ಎಜುಕೇಶನ್ ಫೌಂಡೇಶನ್ ಹೆಸರಿನಲ್ಲಿ ಅರ್ಜಿ ಸಲ್ಲಿಸಿ ಇದೇ ಜಮೀನನ್ನು, ತಮ್ಮ ಹೆಸರಿಗೆ ದಿನಾಂಕ:12-4-77ರ ವಿಶೇಷ ಜಿಲ್ಲಾಧಿಕಾರಿಗಳ ಆದೇಶದಂತೆ, ಮಂಜೂರಾತಿ  ಮಾಡಿಸಿಕೊಂಡಿದ್ದಾರೆಂದು ಹಾಗೂ ಈ ಪ್ರಕರಣದಲ್ಲಿ ತಮ್ಮನ್ನು ಪ್ರತಿವಾದಿ ಮಾಡದೆ ಇತ್ಯರ್ಥಗೊಳಿಸಿದ್ದು, ಈ ಆದೇಶ ಷರತ್ತುಬದ್ಧ ಆದೇಶವಾಗಿದ್ದು, ಕರ್ನಾಟಕ ಭೂ ಸುಧಾರಣಾ ಕಾಯ್ದೆ 27 ಎ ಷರತ್ತಿಗೆ ಒಳಪಟ್ಟಿರುತ್ತದೆಂದು ತಿಳಿಸಿರುತ್ತಾರೆ.

ಮೇಲ್ಮನವಿದಾರರು ದಿನಾಂಕ:3-3-89ರಂತೆ ಮಂಜೂರಾದ ಆದೇಶವನ್ನು ಪ್ರತಿವಾದಿಗಳು ರಿಟ್ ಸಂಖ್ಯೆ:39293/1992ರಲ್ಲಿ ಪ್ರಶ್ನಿಸಿದ್ದು, ಪ್ರಸ್ತುತ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಪ್ರಕರಣ ಇತ್ಯರ್ಥಗೊಳಿಸಲು ಭೂ ಸುಧಾರಣಾ ನ್ಯಾಯ ಮಂಡಳಿಗೆ ಕಳುಹಿಸಲಾಗಿದೆಯೆಂದು, ಇದನ್ನು ಪ್ರಶ್ನಿಸಿ ಪ್ರತಿವಾದಿಗಳು ರಿಟ್ ಅಪೀಲು ಸಂಖ್ಯೆ:2421/2005ನ್ನು ಸಲ್ಲಿಸಿದ್ದು, ಹಾಗೂ ಇದಕ್ಕೆ ಸಂಬಂಧಿಸಿದಂತೆ ರಿಟ್ ಅರ್ಜಿ 10141/2008 ಸಹಾ ಒಗ್ಗೂಡಿಸಲಾಗಿದ್ದು, ನ್ಯಾಯಾಲಯದಲ್ಲಿ  ಇತ್ಯರ್ಥಕ್ಕಾಗಿ ಬಾಕಿ ಇರುವುದಾಗಿ ತಿಳಿಸಿರುತ್ತಾರೆ.

ಜಮೀನಿನ ಒಡೆತನದ ತೀರ್ಮಾನದ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವಾಗ, ಮೆ.ಗೋಕುಲ ಎಜುಕೇಶನ್ ಫೌಂಡೇಶನ್ ಇವರು ಸದರಿ ಜಮೀನಿನಲ್ಲಿ ಅನಧಿಕೃತವಾಗಿ 2006ರಲ್ಲಿ ಕಟ್ಟಡ ನಿರ್ಮಿಸುತ್ತಿದ್ದಾರೆಂದು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ:10946/2006ರಲ್ಲಿ ದಾವಾ  ಸಲ್ಲಿಸಿದ್ದು, ಯಾವುದೇ ಕಟ್ಟಡ ಅನಧಿಕೃತವಾಗಿ ನಿರ್ಮಿಸಬಾರದೆಂದು ನ್ಯಾಯಾಲಯ ದಿನಾಂಕ:16-8-2006ರಲ್ಲಿ ಆದೇಶಿಸಿದ್ದರೂ ಸಹ, ಸದರಿ ಸಂಸ್ಥೆಯವರು ಆದೇಶ ಉಲ್ಲಂಘಿಸಿ ಕಟ್ಟಡ ನಿರ್ಮಿಸಿದ್ದು, ನ್ಯಾಯಾಲಯ ನಿಂದನಾ ಪ್ರಕರಣ ಸಂಖ್ಯೆ:530/2006ನ್ನು ದಾಖಲಿಸಿದ ನಂತರ, ಬೆಂಗಳೂರು ಬೃಹತ್ ಮಹಾನಗರ ಪಾಲಿಕೆಯಿಂದ ನ್ಯಾಯಾಲಯದ ಮುಂದೆ, ಕರ್ನಾಟಕ ಮುನಿಸಿಪಲ್ ಕಾಯ್ದೆ ಸೆಕ್ಷನ್ 321ರಡಿ ಅನಧಿಕೃತ ಕಟ್ಟಡ ಕೆಡವಲು ಕ್ರಮ ತೆಗೆದುಕೊಳ್ಳುವುದಾಗಿ ಮುಚ್ಚಳಿಕೆ ನೀಡಿದ್ದು, ಇದರಂತೆ ಪ್ರಕರಣ ಮುಕ್ತಾಯಗೊಳಿಸಲಾಗಿದೆಯೆಂದು ದಾಖಲಾತಿ ಸಲ್ಲಿಸಿದ್ದಾರೆ.  ನಂತರ ದಿನಾಂಕ:18-10-2006ರಂದು ಸೆಕ್ಷನ್ 321(1) ರಂತೆ ತಾತ್ಕಾಲಿಕ ಆದೇಶ ನೀಡಲಾಗಿದ್ದು ದಿನಾಂಕ:9-4-2007ರಂದು ಸೆಕ್ಷನ್ 321(3)ರಂತೆ ಆದೇಶ ಸಂಖ್ಯೆ.ಎಇಇ/ಓಓ/ಅಎ 06/ ಹಾಗೂ 07/2005-06 ರಲ್ಲಿ, ಸ್ಥಿರೀಕರಿಸಲಾಗಿದೆ ಎಂದು ತಿಳಿಸಿರುತ್ತಾರೆ.

ಮೇಲ್ಮನವಿದಾರರು 2005ರಲ್ಲಿ ಖಾತಾ ಬದಲಾವಣೆಗೆ ಸಲ್ಲಿಸಿದ ಅರ್ಜಿಯ ಮೇಲೆ, 6 ಮತ್ತು 7 ರಲ್ಲಿರುವ ಮೇಲ್ಮನವಿದಾರರ ಹೆಸರಿಗೆ ದಿನಾಂಕ:26-8-2005ರಂದು, ಖಾತಾ ನೋಂದಣಿ ಮಾಡಲಾಗಿದ್ದು, ಬೆಟರ್‌ಮೆಂಟ್ ಛಾರ್ಜಸ್ ಪಾವತಿಸಿದ್ದು, ಈ ಖಾತಾವನ್ನು ಜಂಟಿ ಆಯುಕ್ತರು (ಪಶ್ಚಿಮ) ಇವರು ದಿನಾಂಕ:15-1-2009ರಂದು ವಜಾಗೊಳಿಸಿ, ಮೆ||ಗೋಕುಲ ಎಜುಕೇಶನ್ ಫೌಂಡೇಶನ್ ಹೆಸರಿಗೆ ಅನುಭವದಾರ ಖಾತಾ ಮಾಡಲು ಆದೇಶಿಸಿದ್ದು ಈ ಆದೇಶವನ್ನು ಪ್ರಶ್ನಿಸಿ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿರುವ ಅರ್ಜಿ ಇತ್ಯರ್ಥವಾಗಬೇಕಾಗಿದೆಯೆಂದು ತಿಳಿಸಿದ್ದಾರೆ.

ಸದರಿ ಆಸ್ತಿಗೆ ಸಂಬಂಧಿಸಿದಂತೆ, ಪ್ರತಿವಾದಿಗಳು ನಕಲಿ ನಕ್ಷೆ ಮಂಜೂರಾತಿಯನ್ನು ಸೃಷ್ಟಿಸಿರುವ ಬಗ್ಗೆ ಜಂಟಿ ನಿರ್ದೇಶಕರು ನಗರ ಯೋಜನೆ, ಬೆಂಗಳೂರು ಬೃಹತ್ ಮಹಾನಗರ ಪಾಲಿಕೆ ಇವರು ಹಲಸೂರು ಗೇಟ್ ಪೋಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದು ಪ್ರಕರಣ ಬಾಕಿ ಇರುವುದಾಗಿ ತಿಳಿಸಿದ್ದು, ಹೀಗಿದ್ದಾಗ್ಯೂ ಪ್ರತಿವಾದಿಗಳು ಬೃಹತ್

ಬೆಂಗಳೂರು ಮಹಾನಗರ ಪಾಲಿಕೆಗೆ 2007ರಲ್ಲಿ ಆಸ್ತಿ ಸಂಖ್ಯೆ 3ಕ್ಕೆ ನಕ್ಷೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿದ್ದು, ಆಸ್ತಿ ಸಂಖ್ಯೆ 12ಕ್ಕೆ ಸಂಬಂಧಿಸಿದಂತೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲವೆಂದು ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಅರ್ಜಿಯ ಪ್ರತಿ ಹಾಗೂ ದಾಖಲಾತಿಗಳನ್ನು ಮೇಲ್ಮನವಿಯೊಂದಿಗೆ ಸಲ್ಲಿಸಿರುತ್ತಾರೆ. ನಕ್ಷೆ ಮಂಜೂರಾತಿ ಪ್ರಶ್ನಿಸಿ ರಿಟ್ ಅರ್ಜಿ ಸಂಖ್ಯೆ:5082/2009ನ್ನು ಸಲ್ಲಿಸಿದ್ದು, ಪ್ರತಿವಾದಿಗಳು ಕಟ್ಟಡದ ನಿರ್ವಹಣೆ ಬಗ್ಗೆ ಯಾವುದೇ ಹಕ್ಕು ಪ್ರತಿಪಾದಿಸದಂತೆ ಆದೇಶಿಸಲಾಗಿದೆಯೆಂದು, ಈ ಹಿನ್ನೆಲೆಯಲ್ಲಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿ ನಕ್ಷೆ ಮಂಜೂರಾತಿಯನ್ನು ರದ್ದುಪಡಿಸಲು ಕೋರಿಕೊಂಡಿರುತ್ತಾರೆ.

ಪ್ರತಿವಾದಿಗಳು ಈ ಮೇಲ್ಮನವಿಗೆ ಆಕ್ಷೇಪಣೆ ಸಲ್ಲಿಸಿದ್ದು, ಅದರಂತೆ ಮೂಲತ: ಸದರಿ ಜಮೀನು 4 ಎಕರೆ 39 ಗುಂಟೆ ಇನಾಂ ಜಮೀನಾಗಿದ್ದು, ಶ್ರೀ ಹನುಮಂತ ದೇವಸ್ಥಾನಕ್ಕೆ ಸೇರಿದೆಯೆಂದು, ರಸ್ತೆ ನಿರ್ಮಾಣಕ್ಕೆ ಸ್ವಲ್ಪ ಜಮೀನನ್ನು ಉಪಯೋಗಿಸಿಕೊಳ್ಳಲಾಗಿದೆಯೆಂದು ತಿಳಿಸಿ, ಅರ್ಚಕ ಅನಂತಯ್ಯನವರು ದೇವಸ್ಥಾನದ ಅರ್ಚಕರಾಗಿದ್ದು, ಇವರು ಕೃಷಿಕರಲ್ಲವೆಂದು ಯಾವುದೇ ಸಮಯದಲ್ಲಿ ಕೃಷಿ ಮಾಡುತ್ತಿರಲಿಲ್ಲವೆಂದು ತಿಳಿಸಿ, ದಿವಂಗತ ಎಂ.ಎಸ್.ರಾಮಯ್ಯನವರು ದಿನಾಂಕ:20-2-1962ರ ಗುತ್ತಿಗೆ ಕರಾರಿನಂತೆ, ಗುತ್ತಿಗೆ ಆದಾರದ ಮೇಲೆ ಅರ್ಚಕ ಅನಂತಯ್ಯನವರಿಂದ ಪಡೆದಿದ್ದು, ಇವರ ಸ್ವಾಧೀನದಲ್ಲಿ ಹಾಗೂ ಇವರ ನಂತರ ಇವರ ಮಕ್ಕಳು ಹಾಗೂ ಗೋಕುಲ ಎಜುಕೇಶನ್ ಟ್ರಸ್ಟನ ದತ್ತೀದಾರರ ಅನುಭವದಲ್ಲಿದೆಯೆಂದು ತಿಳಿಸಿದ್ದಾರೆ. ದಿವಂಗತ ಎಂ.ಎಸ್.ರಾಮಯ್ಯನವರು ದಿನಾಂಕ:24-12-74ರಂದು ಸದರಿ ಜಮೀನನ್ನು, ಕರ್ನಾಟಕ ಇನಾಂ ಅಬಾಲಿಶನ್ (ರಿಲೀಜಿಯಸ್ ಮತ್ತು ಚಾರಿಟೆಬಲ್) ಕಾಯ್ದೆಯಂತೆ ಮಂಜೂರು ಮಾಡಲು ಅರ್ಜಿ ಸಲ್ಲಿಸಿದ್ದು ದಿನಾಂಕ:12-4-77ರಂದು ವಿಶೇಷ ಜಿಲ್ಲಾಧಿಕಾರಿಗಳು ಬೆಂಗಳೂರು ಇವರು ವಿಚಾರಣೆಯ ನಂತರ ಸದರಿ ಜಮೀನನ್ನು ಮಂಜೂರು ಮಾಡಿರುತ್ತಾರೆಂದು ತಿಳಿಸಿರುತ್ತಾರೆ. ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿದಾರರು ಕರ್ನಾಟಕ ಭೂ ನ್ಯಾಯಾಧಿಕರಣದ ಮುಂದೆ ಸಲ್ಲಿಸಿದ್ದ ಮೇಲ್ಮನವಿ ಸಂಖ್ಯೆ:264/2002ನ್ನು (25 ವರ್ಷಗಳ ನಂತರ ಸಲ್ಲಿಸಿದ್ದು) ದಿನಾಂಕ:10-6-2008ರಂದು ವಜಾ ಆಗಿದೆಯೆಂದು ಹಾಗೂ ಇದನ್ನು ಪ್ರಶ್ನಿಸಿ ಮೇಲ್ಮನವಿದಾರರು ರಿಟ್ ಅರ್ಜಿ ಸಂಖ್ಯೆ:10141/2008 ದಾಖಲಿಸಿದ್ದು, ಈ ಅರ್ಜಿ ರಿಟ್ ಅಪೀಲು ಸಂಖ್ಯೆ:2421/2005ರೊಂದಿಗೆ ಒಂದುಗೂಡಿಸಿ ವಿಚಾರಣೆಗೆ ಬಾಕಿ ಇದೆಯೆಂದು ತಿಳಿಸಿದ್ದಾರೆ. ಹಾಗೂ ಕರ್ನಾಟಕ ಇನಾಂ ಅಬಾಲಿಶನ್ ತಿದ್ದುಪಡಿ ಕಾಯ್ದೆ 1979ರಂತೆ ಭೂ ನ್ಯಾಯ ಮಂಡಳಿಗಳು ಈ ರೀತಿಯ ಪ್ರಕರಣ ಇತ್ಯರ್ಥಗೊಳಿಸಲು ಸ್ಥಾಪಿಸಿದ್ದು, ಇಲ್ಲಿಯೂ ಸಹ ದಿನಾಂಕ:12-4-77ರಂತೆ ತಮಗೆ ಮಂಜೂರಾದ ಆದೇಶವನ್ನು ದಿನಾಂಕ:24-9-82ರಂದು ಸ್ಥಿರೀಕರಿಸಲಾಗಿದೆಯೆಂದು ತಿಳಿಸಿದ್ದಾರೆ.

ಮೆ॥ಗೋಕುಲ ಎಜುಕೇಶನ್ ಫೌಂಡೇಶನ್ ಟ್ರಸ್ಟ್ ಇವರು 18 ಶಾಲಾ ಕಾಲೇಜುಗಳನ್ನು ಸುಮಾರು 70 ಎಕರೆ ಪ್ರದೇಶದಲ್ಲಿ ಸ್ಥಾಪಿಸಲಾಗಿದ್ದು, ಈ ಜಮೀನು ಹಾಗೂ ಪ್ರಶ್ನಿತ ಜಮೀನು ಸೇರಿ, ಸದರಿ ಸಂಸ್ಥೆಗೆ ಸರ್ಕಾರದ ಆದೇಶ ಸಂಖ್ಯೆ: ಹೆಚ್ ಯು ಡಿ /93/ಸಿಐಂತಿ/89 ಸೆಕ್ಷನ್ 29(1) (ಎ) ನಗರ (ಲ್ಯಾಂಡ್ ಸೀಲಿಂಗ್ ಅಂಡ್ ರೆಗ್ಯುಲೇಶನ್) ಕಾಯ್ದೆ 76ರಂತೆ ದಿನಾಂಕ:14-5-77ರಲ್ಲಿ ವರ್ಗಾಯಿಸಲಾಗಿದೆಯೆಂದು ತಿಳಿಸಿರುತ್ತಾರೆ. ಪ್ರಶ್ನಿತ ಜಮೀನು ಹಾಗೂ ಇತರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ದಿನಾಂಕ:24-2-77ರಲ್ಲಿ ಅಧಿಸೂಚನೆ ಹೊರಡಿಸಿ, ದಿನಾಂಕ:2-8-78ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಿದ್ದು, ಈ ದಾಖಲೆಗಳಲ್ಲಿ ಎಂ.ಎಸ್.ರಾಮಯ್ಯ ಇವರನ್ನು ಅನುಭವದಾರರಿಗೆ ನಮೂದಿಸಿದ್ದು, ಸಂಸ್ಥೆಯವರು ಸಲ್ಲಿಸಿದ ಅರ್ಜಿಯನ್ನು ಪರಿಗಣಿಸಿ, ಭೂ ಸ್ವಾಧೀನ ಪ್ರಕ್ರಿಯೆಯಿಂದ ದಿನಾಂಕ:24-7-99ರಲ್ಲಿ ಕೈ ಬಿಡಲಾಗಿದೆಯೆಂದು ತಿಳಿಸಿದ್ದಾರೆ.

ಶ್ರೀಯುತ.ಅರ್ಚಕ ಅನಂತಯ್ಯನವರು ತಮ್ಮ ಜೀವಿತಾವಧಿಯಲ್ಲಿ ಜಮೀನು ಮಂಜೂರಾತಿಗಾಗಿ ಜಿಲ್ಲಾಧಿಕಾರಿಗಳ ಮುಂದೆ ಯಾವುದೇ ಅರ್ಜಿ ಸಲ್ಲಿಸಿಲ್ಲವೆಂದು ಹಾಗೂ ಕರ್ನಾಟಕ ಇನಾಮ್ ಅಬಾಲಿಷನ್ ಆಕ್ಟ್ 1979 (ತಿದ್ದುಪಡಿ)ಯಲ್ಲಿನ ನಿಯಮಗಳ ಅನುಕೂಲತೆಯನ್ನು ಉಪಯೋಗಿಸಿಕೊಂಡು, ಅರ್ಚಕ ಅನಂತಯ್ಯನವರ ವಾರಸುದಾರರು ಭೂ ನ್ಯಾಯಾಧಿಕರಣದ ಮುಂದೆ ಅರ್ಜಿ ಸಲ್ಲಿಸಿ ದಿನಾಂಕ:3-3-1989ರಂದು ಮಂಜೂರಾತಿ ಪಡೆದಿದ್ದು, ತಮ್ಮನ್ನು ಕಕ್ಷಿದಾರರನ್ನಾಗಿ ಮಾಡದೆ, ಮಂಜೂರಾತಿ ಪಡೆದಿದ್ದಾರೆಂದು ತಿಳಿಸಿದ್ದಾರೆ. ಸದರಿ ಆದೇಶವನ್ನು ಪ್ರಶ್ನಿಸಿ, ತಾವು ರಿಟ್ ಅರ್ಜಿ ಸಂಖ್ಯೆ:39293/1992ನ್ನು ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ದಾಖಲಿಸಿದ್ದು, ದಿನಾಂಕ:26-11-2001ರಂದು ಸದರಿ ಆದೇಶವನ್ನು, ಭೂ ನ್ಯಾಯ ಮಂಡಳಿಗೆ ಜಮೀನು ಮಂಜೂರು ಮಾಡುವ ಹಕ್ಕಿಲ್ಲವೆಂದು ವಜಾಗೊಳಿಸಿರುವುದಾಗಿ ತಿಳಿಸಿರುತ್ತಾರೆ.

ಸದರಿ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿದಾರರು ರಿಟ್ ಅಪೀಲು ಸಂಖ್ಯೆ:1965/2002 ದಾಖಲಿಸಿದ್ದು, ದಿನಾಂಕ:16-1-2004ರಂದು ಮೇಲ್ಮನವಿದಾರರ ಅಪೀಲನ್ನು ಅಂಗೀಕರಿಸಿ ಅರ್ಹತೆ ಆದಾರದ ಮೇಲೆ ಪ್ರಕರಣ ಇತ್ಯರ್ಥಗೊಳಿಸಲು ಏಕ ಸದಸ್ಯ ಪೀಠಕ್ಕೆ ಕಳುಹಿಸಲಾಗಿದೆಯೆಂದು ತಿಳಿಸಿದ್ದಾರೆ. ಉಚ್ಚ ನ್ಯಾಯಾಲಯದ ಏಕ ಸದಸ್ಯ ಪೀಠವು ದಿನಾಂಕ:10-12-2004ರಂದು ಸದರಿ ಪ್ರಕರಣವನ್ನು ವಿಶೇಷ ಜಿಲ್ಲಾಧಿಕಾರಿಗಳಿಗೆ ಹಿಂದಿರುಗಿಸಿ, ನಂತರ ಭೂ ನ್ಯಾಯಾಧಿಕರಣಕ್ಕೆ ಇತ್ಯರ್ಥಗೊಳಿಸಲು ಸೂಚಿಸಿದ್ದು, ಇದನ್ನು ಪ್ರಶ್ನಿಸಿ ಮೇಲ್ಮನವಿ ಸಂಖ್ಯೆ:2421/2005ನ್ನು ದಾಖಲಿಸಿದ್ದು, ಪ್ರಕರಣ ಬಾಕಿ ಇರುವುದಾಗಿ ತಿಳಿಸಿದ್ದು, ಸಂಸ್ಥೆಯ ಹೆಸರಿಗಿರುವ ಕಂದಾಯ ದಾಖಲಾತಿಗಳನ್ನು ಸಲ್ಲಿಸಿದ್ದಾರೆ ಹಾಗೂ ಮೇಲ್ಮನವಿದಾರರಿಗೆ ಸದರಿ ಜಮೀನಿನ ಮೇಲೆ ಯಾವುದೇ ಹಕ್ಕಿಲ್ಲವೆಂದು ಎಂ.ಎಸ್.ರಾಮಯ್ಯ ನವರಿಗೆ ದಿನಾಂಕ:12-4-1977ರಂದು ಮಂಜೂರಾದ ಆದೇಶವನ್ನು 25 ವರ್ಷಗಳ ನಂತರ ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ಮುಂದೆ ಅರ್ಜಿ ಸಲ್ಲಿಸಿದ್ದಾರೆಂದು ತಿಳಿಸಿದ್ದಾರೆ.

ಮೇಲ್ಮನವಿದಾರರ, ಪೈಕಿ ಕ್ರಮ ಸಂಖ್ಯೆ:6 ಮತ್ತು 7 ರಲ್ಲಿರುವ ಶ್ರೀಯುತ ಎಂ.ಎ.ಜಯರಾಮ್ ಹಾಗೂ ಇಂದಿರಮ್ಮ ಇವರ ಹೆಸರಿನ ಖಾತಾ ತಡೆಯಲು ದಿನಾಂಕ:30-8-2005ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ನೋಟಿಸು ನೀಡಿದ್ದು ದಿನಾಂಕ:14-9-2005ರಲ್ಲಿಯೇ ಆಕ್ಷೇಪಣೆ ಸಲ್ಲಿಸಲಾಗಿದೆಯೆಂದು ತಿಳಿಸಿದ್ದಾರೆ ಹಾಗೂ ಎಂ.ಎ.ಜಯರಾಮ್ ಹಾಗೂ ಇಂದಿರಮ್ಮ ಇವರಿಗೆ ಖಾತಾ ನೋಂದಣಿ ಮಾಡಬಾರದೆಂದು ಜಮೀನು ಟ್ರಸ್ಟ್‌ನ ಸ್ವಾಧೀನದಲ್ಲಿರುವುದರಿಂದಲೂ, ಖಾತಾ ಮಾಡಬಾರದೆಂದು ಆಕ್ಷೇಪಿಸಲಾಗಿತ್ತೆಂದು ತಿಳಿಸಿದ್ದಾರೆ. ಶ್ರೀ.ಎಂ.ಎ.ಜಯರಾಮ ಹಾಗೂ ಶ್ರೀಮತಿ.ಇಂದಿರಮ್ಮ ಇವರ ಹೆಸರಿಗೆ ನೀಡಿದ ಖಾತೆಯನ್ನು ರದ್ದುಗೊಳಿಸಲು ಜಂಟಿ ಆಯುಕ್ತರು ಪಶ್ಚಿಮ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಇವರ ಮುಂದೆ ಅಪೀಲು ಸಲ್ಲಿಸಿದ್ದು ಕರ್ನಾಟಕ ಭೂ ನ್ಯಾಯಾಧಿಕರಣದ ದಿನಾಂಕ:10-6-2008ರ ಆದೇಶದಂತೆ ಮೇಲ್ಮನವಿದಾರರು ಸಲ್ಲಿಸಿದ್ದ ಅರ್ಜಿ ವಜಾ ಆದ ನಂತರ ದಿನಾಂಕ:15-1-2009ರಂದು ಟ್ರಸ್ಟ್‌ನ ಹೆಸರಿಗೆ ಖಾತಾ ಮಾಡಲಾಗಿದೆಯೆಂದು ಹಾಗೂ ಮೇಲ್ಮನವಿದಾರರು ಸಲ್ಲಿಸಿದ್ದ ರಿಟ್ ಅರ್ಜಿ ಸಂಖ್ಯೆ:5082/2009, ದಿನಾಂಕ:23-9-2010ರಂದು ವಜಾ ಆಗಿದೆಯೆಂದು ತಿಳಿಸಿದ್ದಾರೆ.

ಮೆ॥ಗೋಕುಲ ಎಜುಕೇಶನ್ ಫೌಂಡೇಶನ್ ಟ್ರಸ್ಟಿನವರು ವಿದ್ಯಾರ್ಥಿಗಳಿಗೆ ಹಾಸ್ಟೆಲ್ ನಿರ್ಮಿಸಲು ಎಲ್.ಪಿ.ಸಂಖ್ಯೆ:ಜೆ.ಸಿ.(ಡಬ್ಲ್ಯೂ)/ಎಂಎಎಲ್ಎಲ್/202/07-08, ದಿನಾಂಕ:21-2-2009ರಂದೇ ನಕ್ಷೆ ಮಂಜೂರಾತಿ ಪಡೆದಿದ್ದು, ಮೂಲತಃ ಪೂರ್ಣ ಸರ್ವೆ ಸಂಖ್ಯೆ 7 ಕ್ಕೆ ಆಸ್ತಿ ಸಂಖ್ಯೆ 3 ಎಂದು ನೀಡಲಾಗಿದ್ದು, ಸ್ಥಳ ಪರೀಕ್ಷೆಯ ಸಮಯದಲ್ಲಿ ಆಸ್ತಿಯ ಮಧ್ಯ ಭಾಗದಲ್ಲಿ ರಸ್ತೆ ಇದ್ದುದರಿಂದ, ಪಶ್ಚಿಮ ಬಾಗಕ್ಕೆ 12 ಹಾಗೂ ಪೂರ್ವ ಭಾಗಕ್ಕೆ 3 ಎಂದು ಪ್ರತ್ಯೇಕ ಸಂಖ್ಯೆ ನೀಡಲಾಗಿದೆಯೆಂದೂ ಆದ್ದರಿಂದ ಮೇಲ್ಮನವಿದಾರರು ತಿಳಿಸಿರುವಂತೆ ನಕ್ಷೆ ಮಂಜೂರಾತಿಗೆ ಸಲ್ಲಿಸಿದ ಅರ್ಜಿಯಲ್ಲಿ ಸಂಖ್ಯೆ 3 ಎಂದು ನಮೂದಿಸಿದ್ದು, ನಕ್ಷೆ ಆಸ್ತಿ ಸಂಖ್ಯೆ 12ಕ್ಕೆ ಮಂಜೂರಾಗಿದೆಯೆಂಬ ವಾದದಲ್ಲಿ ಹುರುಳಿಲ್ಲವೆಂದು ತಿಳಿಸಿರುತ್ತಾರೆ. ಗೋಕುಲ ಎಜುಕೇಶನ್ ಸಂಸ್ಥೆಗೆ, ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ ಹಾಗೂ ನ್ಯಾಯಾಲಯದ ಆದೇಶಗಳನ್ನು ಪರಿಗಣಿಸಿ ನಕ್ಷೆ ಮಂಜೂರು ಮಾಡಲಾಗಿದೆಯೆಂದೂ, ನಿಯಮಗಳನ್ನು ಯಾವುದೇ ಕೋನದಲ್ಲಿ ನೋಡಿದರೂ ಉಲ್ಲಂಘಿಸಿಲ್ಲವೆಂದು ಹಾಗೂ ಜಮೀನು ಮಂಜೂರಾತಿ ಮಾಲಿಕತ್ವ ನಿರೂಪಿಸುವ ಬಗ್ಗೆ ಮೂಲ ಅರ್ಜಿ ಇನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇದೆಯೆಂದು ತಿಳಿಸಿ, ಈ ಸಮಯದಲ್ಲಿ ಮಂಜೂರಾತಿ ನಕ್ಷೆಯನ್ನು ಪ್ರಶ್ನಿಸಿರುವ ಮೇಲ್ಮನವಿ ಇತ್ಯರ್ಥಗೊಳಿಸಿದಲ್ಲಿ, ಇನ್ನು ಹೆಚ್ಚು ನ್ಯಾಯಾಲಯದ ಪ್ರಕರಣಗಳಿಗೆ ಅವಕಾಶ ಮಾಡಿಕೊಟ್ಟಂತಾಗುವುದೆಂದು ತಿಳಿಸಿಸುತ್ತಾ, ಹಾಗೂ ಮೇಲ್ಮನವಿದಾರರು ರಿಟ್ ಅರ್ಜಿ ಸಂಖ್ಯೆ:10141/2008 ರಲ್ಲಿ ತಡೆಯಾಜ್ಞೆ ಕೋರಿ ಸಲ್ಲಿಸಿದ್ದ ಅರ್ಜಿ ವಜಾ ಆಗಿರುವ ಕಾರಣ ಸದರಿ ಮೇಲ್ಮನವಿಯನ್ನು ವಜಾಗೊಳಿಸಲು ಕೋರಿರುತ್ತಾರೆ.

ಕರ್ನಾಟಕ ಮುನಿಸಿಪಲ್ ಕಾಯ್ದೆ 1976 ರ ನಿಯಮಾವಳಿಗಳಂತೆ ನಕ್ಷೆ ಮಂಜೂರಾತಿ ಮಾಡುವಾಗ ಕಾರ್ಪೋರೇಶನ್ ಬೈಲಾನಂತೆ ದಾಖಲಾತಿಗಳನ್ನು ಪಡೆಯಬೇಕಾಗಿರುತ್ತದೆ, ಇದರಂತೆ ಅರ್ಜಿಯಲ್ಲಿ ಆಸ್ತಿ ಸಂಖ್ಯೆ 3ಕ್ಕೆ ಅರ್ಜಿ ಸಲ್ಲಿಸಿದ್ದು, ಆಸ್ತಿ ಸಂಖ್ಯೆ 12ಕ್ಕೆ ನಕ್ಷೆ ಮಂಜೂರಾಗಿರುತ್ತದೆ. ಈ ಬಗ್ಗೆ ಪ್ರತಿವಾದಿಗಳು ಸಲ್ಲಿಸಿರುವ ಆಕ್ಷೇಪಣೆಯಂತೆ ಆಸ್ತಿಯ ಮಧ್ಯೆ ರಸ್ತೆ ಇರುವುದರಿಂದ ಪ್ರತ್ಯೇಕ ಸಂಖ್ಯೆ ನೀಡಲಾಗಿದೆಯೆಂದು ತಿಳಿಸಿದ್ದಾರೆ. ಆದರೆ ಮೂಲತಃ ಅಂದರೆ 26-8-2005 ರಂದೆ, ಶ್ರೀಯುತ ಎಂ.ಎ.ಜಯರಾಮ ಹಾಗೂ ಶ್ರೀಮತಿ ಇಂದಿರಮ್ಮ ಇವರ ಹೆಸರಿಗೆ ಆಸ್ತಿ ಸಂಖ್ಯೆ 12ರ ಖಾತಾ ದಾಖಲಾಗಿತ್ತೆಂದು ಹಾಗೂ 30-8-2005 ರಲ್ಲಿಯೇ ನಗರ ಪಾಲಿಕೆ ನೀಡಿದ ನೋಟೀಸಿನಂತೆ 14-9-2005 ರಲ್ಲಿಯೇ ಆಕ್ಷೇಪಣೆ ಸಲ್ಲಿಸಲಾಗಿತ್ತೆಂದು ತಿಳಿಸಿದ್ದಾರೆ.26-8-2005 ರಲ್ಲಿಯೇ ಖಾತಾ ನೀಡಿದ್ದು, ಇದಾದ ನಂತರ ಅಂದರೆ 30-8-2005 ರಂದು ನೋಟೀಸ್ ನೀಡಲು ಸಾಧ್ಯವಿಲ್ಲ ಪ್ರತಿವಾದಿಗಳು 14-9-2005 ರಂದು ಆಕ್ಷೆಪಣೆ ಸಲ್ಲಿಸಿದ್ದಲ್ಲಿ, 2007 ರಲ್ಲಿ ನಕ್ಷೆ ಮಂಜೂರಾತಿಗೆ ಅರ್ಜಿ ಸಲ್ಲಿಸುವಾಗ ಆಸ್ತಿ ಸಂಖ್ಯೆ ನಿಖರವಾಗಿ ತಿಳಿದಿರುತ್ತಿತ್ತು. ಆದ್ದರಿಂದ ಆಕ್ಷೇಪಣೆಯನ್ನು ಪರಿಗಣಿಸಲು ಸಾಧ್ಯವಿಲ್ಲ.

ಪ್ರತಿವಾದಿಗಳೇ ಒಪ್ಪಿಕೊಳ್ಳುವಂತೆ, ಆಸ್ತಿಗೆ ಸಂಬಂದಿಸಿದ ಮಾಲೀಕತ್ವ ದೃಢೀಕರಿಸುವ ಪ್ರಕರಣ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ.2421/2005 ಹಾಗೂ 10141/2008 ಇತ್ಯರ್ಥಕ್ಕೆ ಬಾಕಿ ಇದ್ದು, ಆಸ್ತಿಗೆ ಸಂಬಂದಿಸಿದ ಮಾಲೀಕತ್ವ ನಿರೂಪಿಸುವ ದಾಖಲೆ ನೀಡದೆ ನಕ್ಷೆ ಮಂಜೂರಾತಿ ಮಾಡಿರುವುದು ಸರಿಯಲ್ಲ ಹಾಗೂ ಅರ್ಜಿಯೊಂದಿಗೆ ಸಲ್ಲಿಸಿರುವ ಖಾತಾ ದೃಢೀಕರಣ ಪತ್ರ ಪರಿಶೀಲಿಸಲಾಗಿ ಇದು ಅನುಭವದಾರ ಖಾತಾ ದೃಢೀಕರಣ ಪತ್ರವಾಗಿದ್ದು, ಅನುಭವದಾರ ಎಂದರೆ ಸ್ವತ್ತಿನ ಮಾಲೀಕತ್ವ ನಿರೂಪಿಸುವ ದಾಖಾಲಾತಿ ಒದಗಿಸಿರುವುದಿಲ್ಲ ಹಾಗೂ ಮೇಲ್ಪಟು ವೆಚ್ಚ ಪಾವತಿಸಿರುವುದಿಲ್ಲವೆಂದು ಪೂರ್ಣವಾಗಿ ನಮೂದಿಸಿಲಾಗಿದೆ. ಆದ್ದರಿಂದ ಮಾಲೀಕತ್ವ ನಿರೂಪಿಸುವ ದಾಖಲಾತಿ ಇಲ್ಲದೆ ನಕ್ಷೆ ಮಂಜೂರಾತಿ ನೀಡಿರುವುದು ಸಿಂದುವಲ್ಲ.

ಮುಂದುವರಿದು ಪ್ರತಿವಾದಿಗಳಾದ ಮೆ.ಗೋಕುಲ ಎಜುಕೇಶನ್ ಸಂಸ್ಥೆಯವರಿಗೆ ದಿನಾಂಕ:31-1-2009 ರಲ್ಲಿ ಅನುಭವದಾರರ ಖಾತಾ ನೀಡಲಾಗಿದೆ. ಮೇಲ್ಮನವಿದಾರರು, ನಗರ ಪಾಲಿಕೆಯಿಂದ ಅಧಿಕೃತವಾಗಿ ಪಡೆದು ಮೇಲ್ಮನವಿಯೊಂದಿಗೆ ಸಲ್ಲಿಸಿರುವ ಕಡತ ಎಲ್.ಪಿ.ಸಂಖ್ಯೆ:ಜೆ.ಸಿ.(ಡಬ್ಲ್ಯೂ)/ಎಂಎಎಲ್ಎಲ್/202/07-08ರ ಕಂಡಿಕೆ 6 ರಲ್ಲಿ ದಿನಾಂಕ:31-10-2008 ರಂದೇ ಪ್ರತ್ಯೇಕ ಖಾತಾ ನೀಡಿರುವುದಾಗಿ ನಮೂದಿಸಿದ್ದು, ಇದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಏಕೆಂದರೆ ದಿನಾಂಕ 31-10-2008 ರಂದು ಪ್ರಕರಣ ಜಂಟಿ ಆಯುಕ್ತರ ಮುಂದೆ ಇತ್ಯರ್ಥಕ್ಕಾಗಿ ಬಾಕಿ ಇದ್ದು ಆ ದಿನಾಂಕದಂದು ಖಾತಾ ಪ್ರಮಾಣ ಪತ್ರ ನೀಡಲು ಸಾಧ್ಯವಿಲ್ಲ. ಆದ್ದರಿಂದ ನಕ್ಷೆ ಮಂಜೂರಾತಿಗೆ ಅರ್ಜಿಯನ್ನು ನಿಯಮಾನುಸಾರ ಪರಿಗಣಿಸಿರುವುದಿಲ್ಲವೆಂಬ ಅಂಶ ಕಂಡುಬರುತ್ತದೆ. 2007ರಲ್ಲಿಯೇ ಸದರಿ ಸಂಸ್ಥೆಯವರು ನಕಲಿ ನಕ್ಷೆ ಸೃಷ್ಟಿಸಿದ್ದಾರೆಂದು, ಹಲಸೂರು ಗೇಟ್ ಆರಕ್ಷಕ ಠಾಣೆಯಲ್ಲಿ ದೂರು ದಾಖಲಿಸಿದ್ದು ಪ್ರಕರಣವನ್ನು ಪರಿಗಣಿಸದೆ ನಕ್ಷೆ

ಮಂಜೂರು ಮಾಡಿರುವುದು ಸರಿಯಾದ ಕ್ರಮವಲ್ಲ. ಹಾಗೂ ಬೈಲಾ 3.2.2 ರಂತೆ 3.2.3 ರಂತೆ ಪಡೆಯಬೇಕಾದ ದಾಖಲಾತಿ ಪಡೆದಿರುವುದಿಲ್ಲ. ಪ್ರತಿವಾದಿಗಳು ತಮ್ಮ ಆಕ್ಷೇಪಣೆಯಲ್ಲಿ, ಅರ್ಚಕ ಅನಂತಯ್ಯನವರು ವಿಶೇಷ ಜಿಲ್ಲಾಧಿಕಾರಿಗಳ ಮುಂದೆ ಭೂ ಮಂಜೂರಾತಿಗಾಗಿ ಯಾವುದೇ ಅರ್ಜಿ ಸಲ್ಲಿಸಿಲ್ಲವೆಂದು ಹಾಗೂ ಇವರು ಕೃಷಿಕರಲ್ಲವೆಂದು ತಿಳಿಸಿದ್ದಾರೆ ಹಾಗಿದ್ದಲ್ಲಿ, ಅರ್ಚಕ ಅನಂತಯ್ಯನವರಿಗೆ ಭೂಮಿಯೇ ಮಂಜೂರಾಗದೆ ಶ್ರೀ ಎಂ.ಎಸ್.ರಾಮಯ್ಯ ಇವರು ಗುತ್ತಿಗೆ ಕರಾರು ಪತ್ರ ಹೇಗೆ ಪಡೆದರು ಎಂಬುದಕ್ಕೆ ಯಾವುದೇ ಪುರಾವೆ ಸಲ್ಲಿಸಿರುವುದಿಲ್ಲ. ಅರ್ಚಕ ಅನಂತಯ್ಯನವರಿಗೆ ಭೂ ಮಂಜೂರಾತಿ ದಿನಾಂಕ:1-2-1959ರಲ್ಲಿ ಆಗಿರುವುದಕ್ಕೆ ದಾಖಲಾತಿ ಲಭ್ಯವಿದ್ದು, ಸದರಿ ಜಮೀನು ಅಂದರೆ ಸರ್ವೆ ಸಂಖ್ಯೆ.7ಕ್ಕೆ ಸಂಬಂದಿಸಿದ ಜಮೀನನ್ನು ನೋಂದಾಯಿತ ವ್ಯವಸ್ಥಾ ಪತ್ರ ಸಂಖ್ಯೆ.1309/59-60 ದಿನಾಂಕ ದಿನಾಂಕ:10-5-1959ರಲ್ಲಿಯೇ ವಾರಸುದಾರರಿಗೆ ಹಂಚಿಕೆ ಮಾಡಿದ್ದು, ಋಣ ಭಾರ ರಾಹಿತ್ಯ ದೃಢೀಕರಣ ಪತ್ರದಲ್ಲಿ ವಿವರ ನಮೂದಾಗಿರುವ ಬಗ್ಗೆ ದಾಖಲಾತಿಯನ್ನು ಮೇಲ್ಮನವಿದಾರರು ಸಲ್ಲಿಸಿದ್ದು, ಗುತ್ತಿಗೆ ಕರಾರು ಪತ್ರ ನೀಡಲು ಅನಂತಯ್ಯನವರಿಗೆ ಯಾವುದೇ ಹಕ್ಕಿರಲಿಲ್ಲವೆಂದು ದೃಡಪಟ್ಟಿರುತ್ತದೆ. ದಿನಾಂಕ:1-2-1959ರ ಹಿಂಬರಹದ ಆದೇಶವನ್ನು ಇದುವರೆವಿಗೂ ಯಾರೂ ಪ್ರಶ್ನಿಸಿಲ್ಲದಿರುವುದರಿಂದ ಸದರಿ ಆದೇಶ ರದ್ದಾಗಿಲ್ಲವೆಂದು ಸ್ಪಷ್ಟವಾಗುತ್ತದೆ.

ಪ್ರತಿವಾದಿಗಳು, ಮೇಲ್ಮನವಿದಾರರು ರಿಟ್ ಅರ್ಜಿ ಸಂಖ್ಯೆ.10141/2008ರಲ್ಲೇ ನಕ್ಷೆಗೆ ತಡೆಯಾಜ್ಞೆ ನೀಡುವ ಬಗ್ಗೆ ಮಧ್ಯಂತರ ಆಜ್ಞೆ ಆದೇಶ ಕೋರಿ ಸಲ್ಲಿಸಿದ್ದ ಅರ್ಜಿ ವಜಾ ಆಗಿರುವುದರಿಂದ ಮೇಲ್ಮನವಿದಾರರು ಘನ ಸರ್ವೋಚ್ಚ ನ್ಯಾಯಾಲಯದಲ್ಲಿ ಎಸ್.ಎಲ್.ಪಿ.ಸಂಖ್ಯೆ:32866/09ನ್ನು ದಾಖಲಿಸಿ ದಿನಾಂಕ:25-02-2011ರಂದು ತಡೆಯಾಜ್ಞೆ ಪಡೆದಿಕೊಂಡಿರುವುದು ಕಂಡುಬರುತ್ತದೆ. ಆದರೆ ಪ್ರತಿವಾದಿಗಳು ಈ ಬಗ್ಗೆ ಯಾವುದೇ ವಿಷಯವನ್ನು ತಮ್ಮ ಲಿಖಿತ ಹೇಳಿಕೆಗಳಲ್ಲಿ ನಮೂದಿಸಿರುವುದಿಲ್ಲ.

ವಿಶೇಷ ಜಿಲ್ಲಾಧಿಕಾರಿಗಳು ದಿನಾಂಕ:12-4-1977ರ ತಮ್ಮ ಆದೇಶದಲ್ಲಿ ಎಂ.ಎಸ್.ರಾಮಯ್ಯ, ಛೇರಮನ್ ಗೋಕುಲ ಎಜುಕೇಶನ್ ಫೌಂಡೇಶನ್‌ಗೆ ಜಮೀನು ಮಂಜೂರಾತಿ ನೀಡಿರುವುದು ಷರತ್ತು ಬದ್ಧ ಆದೇಶವಾಗಿರುತ್ತದೆ ಹಾಗೂ ಕೃಷಿ ಜಮೀನನ್ನು ಸಂಸ್ಥೆಗಳಿಗೆ ಇನಾಮ್ ಅಬಾಲಿಶನ್ ಕಾಯ್ದೆಯಂತೆ ಮಂಜೂರು ಮಾಡುವಂತಿಲ್ಲ. ಸದರಿ ಸ್ವತ್ತಿನ ಬಗ್ಗೆ ಮಾಲೀಕತ್ವ ನಿರೂಪಿಸುವ ಬಗ್ಗೆ ಎಲ್ಲಾ ಪ್ರಕರಣಗಲೂ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅಪೀಲು ಸಂಖ್ಯೆ 2421/05, ರಿಟ್ ಅರ್ಜಿ ಸಂಖ್ಯೆ:10141/2008 ಹಾಗೂ ಖಾತಾ ನೋಂದಣಿ ಬಗ್ಗೆ ಸಲ್ಲಿಸಿರುವ ರಿಟ್ ಅಪೀಲುಗಳು ಇತ್ಯರ್ಥಕ್ಕಾಗಿ ಬಾಕಿ ಇದ್ದು, ನ್ಯಾಯಾಲಯದ ಅದೇಶ ಹೊರ ಬರುವವರೆಗೆ ಆಸ್ತಿಯ ಮಾಲೀಕತ್ವ ದೃಢಪಡುವುದಿಲ್ಲ. ಆದ್ದರಿಂದ, ಪೂರ್ಣ ದಾಖಲಾತಿ ಪಡೆಯದೆ ನಕ್ಷೆ ಮಂಜೂರು ಮಾಡಿರುವ ಕ್ರಮ ಸಮಂಜಸವಾಗಿ ಕಂಡು ಬರುವುದಿಲ್ಲ. ಅಲ್ಲದೆ ಕರ್ನಾಟಕ ಮುನಿಸಿಪಲ್ ಕಾಯ್ದೆ 1976 ರ ನಿಯಮ 321(1) ರಂತೆ ಅನಧಿಕೃತ ಕಟ್ಟಡ ಕೆಡವಲು ತಾತ್ಕಾಲಿಕ ಆದೇಶ ದಿನಾಂಕ:18-10-2006ರಂದೇ ನೀಡಿ ಸ್ಥಿರೀಕರಣ ಆದೇಶವನ್ನು ದಿನಾಂಕ:9-4-2007 ರಂದು ನಿಯಮ 321(3) ರಂತೆ ನೀಡಿದ್ದು, ಅನಧಿಕೃತ ಕಟ್ಟಡ ಕೆಡವದೆ, ಅದೇ ಜಾಗಕ್ಕೆ ನಕ್ಷೆ ಮಂಜೂರಾತಿ ನೀಡಿ, ಅನಧಿಕೃತ ಕಟ್ಟಡವನ್ನು ಅಧಿಕೃತಗೊಳಿಸುವ ಪ್ರಯತ್ನವಾಗಿರುವುದು ಈ ಪ್ರಕರಣದಲ್ಲಿ ಕಂಡುಬರುತ್ತದೆ.

ಸರ್ಕಾರ ಹೊರಡಿಸಿರುವ ಕರ್ನಾಟಕ ಅರ್ಬನ್ ಲ್ಯಾಂಡ್ ಸೀಲಿಂಗ್ ಆಕ್ಟ್‌ನಂತೆ ದಿನಾಂಕ:14-5-1977ರಲ್ಲಿ ಸರ್ವೆ ನಂ.7ರ ಪ್ರಶ್ನಿತ ಜಮೀನು ಸೇರಿರುವ ಬಗ್ಗೆ ಪ್ರತಿವಾದಿಗಳು ಯಾವುದೇ ದಾಖಲಾತಿ ನೀಡಿರುವುದಿಲ್ಲ. ಮೇಲ್ಮನವಿದಾರರು ಅರ್ಜಿಯಲ್ಲಿ ತಿಳಿಸಿದಂತೆ ವಿಶೇಷ ಜಿಲ್ಲಾಧಿಕಾರಿಗಳು ದಿನಾಂಕ:12-4-1977ರಂದು ಸದರಿ ಜಮೀನನ್ನು ಮಂಜೂರು ಮಾಡಿ ಶ್ರೀಯುತ.ಎಂ.ಎಸ್.ರಾಮಯ್ಯ ಇವರ ಪರವಾಗಿ ನೀಡಿರುವ ಆದೇಶದಲ್ಲಿ, ನಿಯಮ 27-ಎ ಷರತ್ತಿಗೊಳಪಟ್ಟಿದ್ದು, ಪ್ರತಿವಾದಿಗಳು ತಮ್ಮ ಆಕ್ಷೇಪಣೆಯಲ್ಲಿ ತಮಗೆ 70 ಎಕರೆಗೂ ಹೆಚ್ಚು ಜಮೀನು ಇರುವುದಾಗಿ ಒಪ್ಪಿಕೊಂಡಿರುತ್ತಾರೆ. ಆಸ್ತಿಯ ಮಾಲೀಕತ್ವದ ಪ್ರಶ್ನೆಯೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಇರುವಾಗ, ಸ್ವತ್ತಿನ ಸ್ವಾಧೀನವೂ ಪ್ರಶ್ನಾರ್ಹವಾಗಿರುತ್ತದೆ. ದಿನಾಂಕ:1-2-1959 ರಲ್ಲಿ ಸ್ವಾಧೀನಾನುಭವ ದೃಢೀಕರಿಸುವ ಹಿಂಬರಹ ನೀಡಿದ್ದು, ತದನಂತರ ವ್ಯವಸ್ಥಾ ಪತ್ರ ನೋಂದಣಿ ಸಂಖ್ಯೆ:1309/1959ರ ಮೂಲಕ ವಾರಸುದಾರರಿಗೆ ಸ್ವಾಧೀನ ನೀಡಿರುವ ಬಗ್ಗೆ ದಾಖಲಾತಿಗಳಿದ್ದು, ಅವರ ಸ್ವಾಧೀನವನ್ನು ರದ್ದುಪಡಿಸಿ, ಎಂ.ಎಸ್.ರಾಮಯ್ಯನವರಿಗೆ ಸ್ವಾಧೀನ ಕೊಟ್ಟಿರುವ ಬಗ್ಗೆ ದಾಖಲಾತಿಗಳಿಲ್ಲದಿರುವುದರಿಂದ ಪ್ರತಿವಾದಿಗಳ ಸ್ವಾಧೀನ ಪ್ರಶ್ನಾರ್ಹವಾಗಿರುತ್ತದೆ. ಆದ್ದರಿಂದ ಮಾಲೀಕತ್ವ ಸ್ವಾಧೀನ ಮತ್ತು ಇತರ ದಾಖಲಾತಿ ನೀಡದ ಕಾರಣ ನಕ್ಷೆ ಮಂಜೂರಾತಿಯು ಕಾನೂನುಬಾಹಿರ ವಾಗಿರುತ್ತದೆ.

<u>**ನಿರ್ಣಯ:**</u>- ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದ ನಂತರ ಹಾಗೂ ಮೇಲ್ಮನವಿದಾರರು ಒದಗಿಸಿರುವ ಅಪರ ಆಯುಕ್ತರು (ಪಶ್ಚಿಮ ವಲಯ)ರವರು ವಿಷಯ ಸಂಖ್ಯೆ:63/2007-08ರಲ್ಲಿ ಮಾಡಿರುವ ಆದೇಶದಲ್ಲಿ ಶ್ರೀ.ಎಂ.ಎ.ಜಯರಾಂ ಮತ್ತು ಶ್ರೀಮತಿ.ಇಂದಿರಮ್ಮರವರ ಹೆಸರಿನಲ್ಲಿರುವ ಅನುಭವದಾರರ ಖಾತೆಯನ್ನು ರದ್ದುಪಡಿಸಿ ಅಪೀಲುದಾರರ ಹೆಸರಿಗೆ ಅನುಭವದಾರರ ಖಾತೆಯನ್ನು ನೋಂದಾಯಿಸಲು ಕ್ರಮ ಕೈಗೊಂಡಿರುವುದು ಕಂಡು ಬಂದಿರುತ್ತದೆ. ಆದರೆ ಕಡತದಲ್ಲಿ ಲಭ್ಯವಿರುವ 2005ರ ಖಾತಾ ಪ್ರಮಾಣ ಪತ್ರದಿಂದ ಶ್ರೀಮತಿ.ಇಂದಿರಮ್ಮ ಮತ್ತು ಶ್ರೀ.ಎಂ.ಎ.ಜಯರಾಂರವರ ಹೆಸರಿಗೆ ಖಾಯಂ ಖಾತಾ ಇರುವುದು ಸ್ಪಷ್ಟವಾಗಿರುತ್ತದೆ. ಆದಾಗ್ಯೂ ಸಹ ಅನುಭವದಾರರ ಖಾತಾವನ್ನು ಬೇರೊಬ್ಬರ ಹೆಸರಿಗೆ ವರ್ಗಾಯಿಸಲು ಕೆ.ಎಂ.ಸಿ. ಕಾಯ್ದೆಯಲ್ಲಿ ಅವಕಾಶ ಕಲ್ಪಿಸಿರುವುದಿಲ್ಲ. ಹಾಗೂ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಸಾಕಷ್ಟು ಪ್ರಕರಣಗಳು ದಾಖಲಾಗಿರುವುದು ಕಂಡು ಬರುತ್ತದೆ. ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಉಳಿದಿರುವಾಗ ನಗರ ಪಾಲಿಕೆಯು ಯಥಾಸ್ಥಿಯನ್ನು ಕಾಯ್ದುಕೊಳ್ಳಬೇಕಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಬಿಲ್ಡಿಂಗ್ ಬೈಲಾ ಮತ್ತು ಕೆ.ಎಂ.ಸಿ. ಕಾಯ್ದೆಯನ್ನು ಉಲ್ಲಂಘಿಸಿ ನಕ್ಷೆ ಮಂಜೂರಾತಿ ನೀಡಿರುವುದು

ಸ್ಪಷ್ಟವಾಗಿ ಕಂಡುಬರುತ್ತದೆ. ದಿನಾಂಕ:08-09-2009ರಂದು ಆಡಳಿತಗಾರರ ಮುಂದೆ ಸಲ್ಲಿಸಿರುವ ಮೇಲ್ಮನವಿಯಲ್ಲಿ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆಂಬ ಬಗ್ಗೆ ಇದುವರೆವಿಗೂ ಸಂಬಂಧಪಟ್ಟ ಅಧಿಕಾರಿಗಳು ಸಮಿತಿಯ ಮುಂದೆ ಯಾವುದೇ ದಾಖಲಾತಿಗಳನ್ನು ಮಂಡಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ದಿನಾಂಕ:20-02-2009ರಂದು ಎಲ್.ಪಿ.ಸಂಖ್ಯೆ:ಜೆ.ಸಿ (ಡಬ್ಲ್ಯೂ)/ಎಂಎಎಲ್‌ಎಲ್/ 202/07-08ರಲ್ಲಿ ಮಂಜೂರಾದ ನಕ್ಷೆ ಹಾಗೂ ಪರವಾನಗಿಯನ್ನು ರದ್ದುಪಡಿಸುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>02.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2011-12</u>

ನಂ.301, 66ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಈ ಉದ್ದಿಮೆಯ ಮಾಲೀಕರಾದ ಶ್ರೀ.ಇ.ಹೆಚ್.ಟೋಪಿಸಾಹೇಬ್‌ರವರು ದಿನಾಂಕ:17-09-2011ರಂದು ಉಪ ಆರೋಗ್ಯಾಧಿಕಾರಿ (ಪಶ್ಚಿಮ)ರವರು ನೀಡಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02-11-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರ ಪರವಾಗಿ ಹಾಜರಿದ್ದ ವಕೀಲರು ಪ್ರತಿವಾದಿಗಳು ಸಲ್ಲಿಸಿರುವ ಲಿಖಿತ ವಾದಗಳು ತುಂಬಾ ಇದ್ದು 10 ಪುಟಗಳು ಮಾತ್ರ ಈ ಪ್ರಕರಣಕ್ಕೆ ಸಂಬಂಧಿಸಿರುತ್ತದೆ. ಆದುದರಿಂದ ನನಗೆ ಇನ್ನೂ 2 ತಿಂಗಳು ಕಾಲಾವಕಾಶವನ್ನು ನೀಡುವಂತೆ ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ನಗರ ಪಾಲಿಕೆಯ ಕಾಯ್ದೆಯಂತೆಯೇ ಕ್ರಮ ಕೈಗೊಳ್ಳಲಾಗಿರುತ್ತದೆ. ಹಾಗೂ ಈಗಾಗಲೇ ಹೆಚ್ಚು ಕಾಲಾವಕಾಶವನ್ನು ನೀಡಿದ್ದು, ಮತ್ತೆ ಕಾಲಾವಕಾಶವನ್ನು ನೀಡಬಾರದೆಂದು ವಿನಂತಿಸಿಕೊಂಡಿರುತ್ತಾರೆ. ಮೇಲ್ಮನವಿದಾರರ ಮತ್ತು ಪ್ರತಿವಾದಿಗಳು ಹೇಳಿಕೆಗಳನ್ನು ಆಲಿಸಿದ ನಂತರ ಮುಂದಿನ ದಿನಾಂಕದವರೆಗೂ ಮೇಲ್ಮನವಿದಾರರಿಗೆ ಕಾಲಾವಕಾಶ ನೀಡಿ ಪ್ರಕರಣವನ್ನು ಮುಂದೂಡಲಾಯಿತು.

<u>01. ವಿಷಯ:ಸಂಖ್ಯೆ:ಅಸ್ಥಾಸ/(ತೆ)/40/2011-12</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆಗಳಿಗೆ ಮಾನ್ಯ ಆಡಳಿತಗಾರರು ತೆಗೆದುಕೊಂಡ ತೀರ್ಮಾನದಂತೆ ಮಳಿಗೆದಾರರಿಗೆ ಈ ಕಛೇರಿಯಿಂದ ನೋಟೀಸ್ ನೀಡಿರುವ ವಿರುದ್ಧ ವರ್ತಕರ ಸಂಘದವರು ನ್ಯಾಯಾಲಯದಲ್ಲಿ ಮೊರೆ ಹೋದ ಕಾರಣ ನ್ಯಾಯಾಲಯವು ದಿನಾಂಕ:19-12-2007ರಂದು ನೀಡಿರುವ ಆದೇಶದಲ್ಲಿ ಸದರಿ ನೋಟೀಸ್‌ಗೆ ತಡೆಯಾಜ್ಞೆಯನ್ನು ನೀಡಿ ನಗರ ಪಾಲಿಕೆಯು ಕಕ್ಷಿದಾರರಿಗೆ ಯಾವುದೇ ಅವಕಾಶವನ್ನು ನೀಡದೆ ಏಕಪಕ್ಷೀಯವಾಗಿ ತೀರ್ಮಾನ ತೆಗೆದುಕೊಂಡಿರುವುದನ್ನು ತಡೆದು ಅವಕಾಶವನ್ನು ಕಲ್ಪಿಸಿ ಕಾನೂನು ರೀತಿ ಕ್ರಮ ಕೈಗೊಳ್ಳಲು ಸೂಚಿಸಿರುವ ಮೇರೆಗೆ ಪರವಾನಗಿದಾರರುಗಳನ್ನು ದಿನಾಂಕ:08-06-2011ರಂದು ಅವರ ಅಹವಾಲುಗಳನ್ನು ಆಯುಕ್ತರ ಮುಂದೆ ಹೇಳಿಕೊಳ್ಳಲು ಅವಕಾಶ ನೀಡಲಾಗಿತ್ತು. ಸದರಿಯವರು ಮೌಖಿಕವಾಗಿ ದರವನ್ನು ಕಡಿಮೆ ಮಾಡಲು ಕೋರಿದ ಮೇರೆಗೆ ಲಿಖಿತ ಹೇಳಿಕೆಗಳನ್ನು ನೀಡಲು ಸೂಚಿಸಲಾಯಿತು. ಆದರೆ ಈವರೆವಿಗೂ ಸದರಿಯವರುಗಳು ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದುದರಿಂದ ದರ ಪರಿಷ್ಕರಣೆಯ ವಿಷಯದ ಬಗ್ಗೆ ಜರೂರಾಗಿ ಚರ್ಚಿಸಿ ತೀರ್ಮಾನ ಕೈಗೊಳ್ಳಲು ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರ ದಿನಾಂಕ:26-11-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>- ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಜಯನಗರ ವಾಣಿಜ್ಯ ಸಂಕೀರ್ಣವನ್ನು ಸಾರ್ವಜನಿಕರ ಬಹುಪಯೋಗಕ್ಕಾಗಿ ತರಕಾರಿ ಮಾರುಕಟ್ಟೆ, ಬ್ಯಾಂಕ್‌ಗಳು, ಹೋಟೆಲ್‌ಗಳು, ಚಿತ್ರಮಂದಿರ, ಡಿಪಾರ್ಟ್‌ಮೆಂಟಲ್ ಸ್ಟೋರ್ಸ್ ಹಾಗೂ ಇತರೇ ಸರ್ಕಾರಿ ಕಛೇರಿಗಳ ಉಪಯೋಗಕ್ಕಾಗಿ 1974-75ನೇ ಸಾಲಿನಿಂದ 1979-80ನೇ ಸಾಲಿನ ಅವಧಿಯಲ್ಲಿ ನಿರ್ಮಿಸಲಾಗಿರುತ್ತದೆ. ಈ ವಾಣಿಜ್ಯ ಸಂಕೀರ್ಣದ ಪೂರ್ವದ ಕಡೆ ಬರುವ 10ನೇ ಮುಖ್ಯರಸ್ತೆ ಕಡೆ ಕೆಲವು ಮಳಿಗೆಗಳನ್ನು ಹಂಚಿಕೆ ಮಾಡಲಾಗಿದ್ದು, ಚದರ ಅಡಿ ಒಂದಕ್ಕೆ ರೂ.4/-ಗಳ ಪರವಾನಗಿ ಶುಲ್ಕವನ್ನು ನಿಗಧಿಪಡಿಸಿರುವುದು ತಿಳಿದು ಬಂದಿರುತ್ತದೆ. ಚದರ ಅಡಿ ಒಂದಕ್ಕೆ ರೂ.4/-ಗಳನ್ನು ನಿಗಧಿಪಡಿಸಿದ್ದ ಹಿನ್ನೆಲೆಯಲ್ಲಿ ನಿಗಧಿಪಡಿಸಿರುವ ಶುಲ್ಕವು ಅತೀ ಹೆಚ್ಚಾಗಿರುವುದನ್ನು ಮನಗಂಡು ಪಾಲಿಕೆಯ ಅಂದಿನ ಆಡಳಿತಗಾರರು ವಿಷಯಕ್ಕೆ ಸಂಬಂಧಿಸಿದಂತೆ ಈ ಬಗ್ಗೆ ಕಾಮಗಾರಿ ಇಲಾಖೆ ಹಾಗೂ ಹಣಕಾಸು ಇಲಾಖೆಯವರನ್ನು ಆಗಿನ ನಗರಾಭಿವೃದ್ಧಿ ಸಚಿವರ ಕಛೇರಿಯಲ್ಲಿ ಸಭೆ ಕರೆದು ಯಾವ ಆಧಾರದ ಮೇಲೆ ರೂ.4/-ಗಳನ್ನು ಚದರ ಅಡಿ ಒಂದಕ್ಕೆ ನಿಗಧಿಪಡಿಸಲಾಗಿದೆ ಎಂಬ ಬಗ್ಗೆ ಚರ್ಚೆಯಲ್ಲಿ ಕೇಳಲಾದ ಮೇರೆಗೆ, ಜಯನಗರ ವಾಣಿಜ್ಯ ಸಂಕೀರ್ಣ ಹಾಗೂ ಎಂ.ಜಿ.ರಸ್ತೆಯಲ್ಲಿರುವ ಪಿ.ಯು.ಬಿ. ಕಟ್ಟಡದ ನಿರ್ಮಾಣದ ಒಟ್ಟಾರೆ ವೆಚ್ಚಗಳನ್ನು 10 ವರ್ಷಗಳಲ್ಲಿ ಹಿಂದಕ್ಕೆ ಪಡೆಯುವ ಸಲುವಾಗಿ ಸದರಿ ಶುಲ್ಕವನ್ನು ನಿಗಧಿಪಡಿಸಿದ್ದಾಗಿ ತಿಳಿದು ಬಂದಿರುತ್ತದೆ. ನಿಗಧಿಪಡಿಸಿರುವ ಶುಲ್ಕವು ಹೆಚ್ಚಾಗಿದೆಯೆಂದು ಹಾಗೂ ವ್ಯಾಪಾರ ವಹಿವಾಟು ಸುಧಾರಿಸುವವರೆವಿಗೂ ನಿಗಧಿತ ಶುಲ್ಕಕ್ಕೆ ಶೇಕಡ 30% ರಿಯಾಯಿತಿ ನೀಡಿ ಶುಲ್ಕವನ್ನು ಮರು ನಿಗಧಿಪಡಿಸಲಾಗಿರುತ್ತದೆ.

ತದನಂತರ 1980ನೇ ಸಾಲಿನಲ್ಲಿ ಅಂದಿನ ಆಡಳಿತಗಾರರು ಜಯನಗರ ವಾಣಿಜ್ಯ ಸಂಕೀರ್ಣವನ್ನು ಬಹಳ ಬೆಲೆಬಾಳುವ ನಗರಪಾಲಿಕೆ ಸ್ವತ್ತಿನಲ್ಲಿ ಹೆಚ್ಚಿನ ಬಂಡವಾಳ ಹೂಡಿ ನಿರ್ಮಿಸಿರುವ ಹಾಗೂ ನಿರ್ವಹಣೆ ಮಾಡುತ್ತಿರುವ, ಈ ಪ್ರತಿಷ್ಠಿತ ಕಟ್ಟಡದ ವರಮಾನವು ಕಡಿಮೆಯಾಗಿರುತ್ತದೆಂದು ಭಾವಿಸಿ, ಶೇಕಡ 30 ರಷ್ಟು ಪರವಾನಗಿ ಶುಲ್ಕವನ್ನು ಕಡಿಮೆ ಮಾಡಿದ್ದ ಆದೇಶವನ್ನು ದಿನಾಂಕ:12.11.1980ರ ಆಯುಕ್ತರ ಆದೇಶದಂತೆ ಹಿಂಪಡೆದು ಚದರ ಅಡಿ ಒಂದಕ್ಕೆ ರೂ.4/-ಗಳಂತೆ ಪಾವತಿಸಲು ಪರವಾನಗಿದಾರರುಗಳಿಗೆ ಪಾಲಿಕೆವತಿಯಿಂದ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ-1976ರ ನಿಯಮ 470 ರಂತೆ ನೋಟಿಸ್‌ಗಳನ್ನು ಜಾರಿ ಮಾಡಲಾಗಿದ್ದು, ಈ ಬಗ್ಗೆ ಪರವಾನಗಿದಾರರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮಿಸ್‌ಲೇನಿಯಸ್ ದಾವೆ ಸಂಖ್ಯೆ. 304,323,341,342,343, 694,714,715,716,717/84, 705,706,720/85 ಮತ್ತು 779,782/86 ರಲ್ಲಿ ದಾವೆ ಹೂಡಲಾಗಿದ್ದು, ನ್ಯಾಯಾಲಯವು ಈ ಕೆಳಕಂಡಂತೆ ಆದೇಶಿಸಿರುತ್ತದೆ.

"Accordingly, for the reasons stated supra, that demand notices/bills issued by corporation calling upon the petitioners to pay the amount as arrears of fee as stated in the tabula are treated as invalid, as not According to law and consequently they are cancelled. Further it is hereby ordered the respondent corporation is at liberty to collect the rent as per the terms of agreement entered in to by them with petitioners and further the respondent corporation is at liberty to enhance the rent of the shops in occupation of petitioners by giving notices and following the procedure laid down in the Municipal Corporation Act".

17-02-1994 ರ ವಿಷಯದ ಸಂಖ್ಯೆ 261 ರಂದು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ರೂ. 4/-ರ ಶೇಕಡ 70% ಅಂದರೆ ರೂ. 2-80 ಗಳಿಗೆ ಶೇಕಡ 40 ರಷ್ಟನ್ನು ದಿನಾಂಕ: 01-06-1993 ರಿಂದ ಜಾರಿಗೆ ಬರುವಂತೆ ಹೆಚ್ಚುವರಿ ಮಾಡಿ ಪ್ರತಿ 5 ವರ್ಷಗಳಿಗೊಮ್ಮೆ ಶೇಕಡ 10 ರಷ್ಟು ಪರವಾನಗಿ ಶುಲ್ಕವನ್ನು ಹೆಚ್ಚಿಸುವುದೆಂದು ತೀರ್ಮಾನಿಸಲಾಗಿರುತ್ತದೆ. (ಪ್ರತಿ ಲಗತ್ತಿಸಿದೆ). ಈ ನಿರ್ಣಯವನ್ನು ದಿನಾಂಕ: 27-9-1994ರ ವಿಷಯದ ಸಂಖ್ಯೆ 20(99)ರಲ್ಲಿ ಮಹಾನಗರ ಪಾಲಿಕೆ ಸಭೆಯು ಒಪ್ಪಿರುವುದು ಕಂಡು ಬರುತ್ತದೆ.

ದಿನಾಂಕ: 26-9-1997ರ ವಿಷಯದ ಸಂಖ್ಯೆ. 18(230) ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ಈ ಹಿಂದೆ ತೆರಿಗೆ, ಆರ್ಥಿಕ ಮತ್ತು ಮೇಲ್ಮನವಿ ಸಮಿತಿಯವರು ದಿನಾಂಕ: 26-8-1997 ರಲ್ಲಿ ತೆಗೆದುಕೊಂಡಂತಹ ನಿರ್ಣಯದಲ್ಲಿ ಮಂಡಿಸಿದಂತಹ ವಿಷಯವನ್ನು ಅಂದರೆ ವಾಣಿಜ್ಯ ಸಂಕೀರ್ಣಗಳು ಹಾಗೂ ಮಾರುಕಟ್ಟೆಗಳನ್ನು ಎ.ಬಿ.ಸಿ.ಡಿ. ಎಂಬುದಾಗಿ ನಾಲ್ಕು ವರ್ಗಗಳಾಗಿ ಅವುಗಳು ಇರುವ ಪ್ರದೇಶ ಕಟ್ಟಡ ಪೂರ್ಣ ವರ್ಷ ಮತ್ತು ಅಲ್ಲಿ ನಡೆಯುತ್ತಿರುವ ವ್ಯಾಪಾರ ವಹಿವಾಟುಗಳ ಆಧಾರದ ಮೇಲೆ ವಿಂಗಡಿಸಲಾಗಿದೆ. ಪ್ರತಿ ವರ್ಗದ ಮಳಿಗೆಗಳನ್ನು ಶೇಕಡವಾರು ಪರವಾನಗಿ ಶುಲ್ಕ ಹೆಚ್ಚಳ ಮಾಡುವುದರೊಂದಿಗೆ ಪ್ರತಿ ಮೂರು ವರ್ಷಕ್ಕೆ ನಿರಂತರವಾಗಿ ಪರವಾನಗಿಗಳನ್ನು ನವೀಕರಿಸಲು ತೀರ್ಮಾನಿಸಿರುವುದು ಕಂಡು ಬರುತ್ತದೆ.

ದಿನಾಂಕ:14-6-2000 ವಿಷಯದ ಸಂಖ್ಯೆ. 36/00-01ರಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ನಗರ ಪಾಲಿಕೆಯ ದಿನಾಂಕ: 26-6-97ರ ವಿಷಯದ ಸಂಖ್ಯೆ. 18(230) ರಲ್ಲಿ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಮಳಿಗೆಗಳ ಪರವಾನಗಿ ಶುಲ್ಕವನ್ನು ದಿನಾಂಕ:1-4-98 ರಿಂದ ಕನಿಷ್ಠ ರೂ.100 ಮತ್ತು ಎ,ಬಿ,ಸಿ,ಡಿ ಎಂಬುದಾಗಿ 4 ವರ್ಗಗಳಾಗಿ ವಿಂಗಡಿಸಿ ಶೇಕಡ 25,20,15 ಮತ್ತು 10 ರಂತೆ ಪರವಾನಗಿ ಶುಲ್ಕವನ್ನು ಹೆಚ್ಚಿಸಲಾಗಿದೆ. ಈ ರೀತಿ ಹೆಚ್ಚಳ ಪ್ರತಿ ಮೂರು ವರ್ಷಕ್ಕೊಮ್ಮೆ ಪರವಾನಗಿ ನವೀಕರಿಸಿ ಹೆಚ್ಚಿಸಲಾಗುವುದು. ಈ ಹೆಚ್ಚಳ ದಿನಾಂಕ:1-4-2001 ರಿಂದ ಮತ್ತೆ ತಾನೇ ತಾನಾಗಿ ಜಾರಿಗೆ ಬರುವುದು. ಪಾಲಿಕೆಯ ಆರ್ಥಿಕ ಹಿತದೃಷ್ಟಿಯಿಂದ ಈ ನಿರ್ಣಯದ ಜೊತೆಗೆ ಅಡಕಗೊಳಿಸಲಾಗಿರುವ ಪಟ್ಟಿಯಂತೆ ಪರವಾನಗಿ ಶುಲ್ಕ ಪರಿಷ್ಕರಣೆ ಮಾಡಲು ಸಮಿತಿಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿಯನ್ನು ಸಮಿತಿಯು ಒಪ್ಪಿರುತ್ತದೆ.

ದಿನಾಂಕ:16-11-2006ರಂದು ಅಪೀಲು ಸ್ಥಾಯಿ ಸಮಿತಿಯಲ್ಲಿ ನಡೆದ ವಿಷಯದ ಸಂಖ್ಯೆ:ಅ.ಸ್ಥಾ.ಸ(ತೆ)186/06-07ರ ನಡವಳಿಕೆಗಳು ಈ ಕೆಳಕಂಡಂತೆ ಇರುತ್ತದೆ.

ದಿನಾಂಕ:26-09-1997ರಂದು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ:18(230)ರಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿರುವ ಎಲ್ಲಾ ಮಾರುಕಟ್ಟೆಗಳನ್ನು ಆಯಾ ಪ್ರದೇಶಗಳಿಗೆ ಅನುಗುಣವಾಗಿ ಹಾಗೂ ವ್ಯಾಪಾರ ವಹಿವಾಟು ಆಧಾರದ ಮೇಲೆ ಎ,ಬಿ,ಸಿ ಮತ್ತು ಡಿ ಎಂಬುದಾಗಿ ನಾಲ್ಕು ವರ್ಗೀಕರಣಗಳನ್ನು ಮಾಡಲಾಗಿದ್ದು, ಇವುಗಳಿಗೆ ಕ್ರಮವಾಗಿ ಶೇಕಡ 25,20,15 ಮತ್ತು 10 ಪ್ರತಿ ಮೂರು ವರ್ಷಗಳಿಗೊಮ್ಮೆ ಪ್ರಸ್ತುತ ಪಾವತಿಸುತ್ತಿರುವ ಪರವಾನಗಿ ಶುಲ್ಕವನ್ನು ಪರಿಷ್ಕರಿಸಲಾಗಿರುತ್ತದೆ. ಆದರೆ ಶ್ರೀ ಜಯಚಾಮರಾಜೇಂದ್ರ ಸಗಟು ತರಕಾರಿ ಮಾಟುಕಟ್ಟೆ, ಕಲಾಸಿಪಾಳ್ಯದ ಸಗಟು ತರಕಾರಿ ಮತ್ತು ಹಣ್ಣು ವರ್ತಕರ ಸಂಘರವರು ಈ ಮಾರುಕಟ್ಟೆಗಳಿಗೆ ವಿಧಿಸಿರುವ ತೆರಿಗೆ ಬಗ್ಗೆ ಮೇಲ್ಮನವಿಯನ್ನು ಸಲ್ಲಿಸಿದ್ದು, ಅದರಲ್ಲಿ ಕಲಾಸಿಪಾಳ್ಯ ಸಗಟು ತರಕಾರಿ ಮತ್ತು ಹಣ್ಣು ಮಾರುಕಟ್ಟೆಯನ್ನು ಎ.ಪಿ.ಎಂ.ಸಿ. ರವರಿಗೆ ವಹಿಸಿದ್ದು, ಸದರಿಯವರು ಮಾರುಕಟ್ಟೆಯನ್ನು ಸಮರ್ಪಕವಾದ ನಿರ್ವಹಣೆ ಮತ್ತು ಸ್ವಚ್ಚತೆ ಇಲ್ಲದಿರುವುದರಿಂದ ಎ ವರ್ಗಕ್ಕೆ ಸೇರಿಸಿರುವುದನ್ನು ತೆಗೆದು ಡಿ ವರ್ಗಕ್ಕೆ ಸೇರಿಸಿಕೊಂಡು ಶೇಕಡ 10ರಷ್ಟನ್ನು ಪರಿಷ್ಕರಿಸಲು ಕೋರಿರುವ ಮೇರೆಗೆ ಸದರಿ ಸಮಿತಿಯು ಸಂಘನ ಮೇಲ್ಮನವಿಯನ್ನು ಒಪ್ಪಿ ತೀರ್ಮಾನಿಸಿರುತ್ತಾರೆ. ಶ್ರೀ ಜಯಚಾಮರಾಜೇಂದ್ರ ಸಗಟು ತರಕಾರಿ ಮಾರುಕಟ್ಟೆಯು ನಗರ ಮಧ್ಯಭಾಗದಲ್ಲಿದ್ದು, ಹೆಚ್ಚಿನ ವ್ಯಾಪಾರ ವಹಿವಾಟು ನಡೆಸುತ್ತಿರುವುದರಿಂದ ಸದರಿ ಮಾರುಕಟ್ಟೆಯನ್ನು ಎ ವರ್ಗದಲ್ಲಿಯೇ ಮುಂದುವರೆಸಬೇಕೆಂದು ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರಿಗೆ ದಿನಾಂಕ:31-1-2009, 30-08-2010 ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದಶಿ, ನಗರಾಭಿವೃದ್ಧಿ ಇಲಾಖೆಯವರಿಗೆ ದಿನಾಂಕ:30-6-2011ರಂದು ಪತ್ರವನ್ನು ಬರೆದು ದಿನಾಂಕ:16-11-2006ರ ವಿಷಯದ ಸಂಖ್ಯೆ:ಅಸ್ಥಾಸ(ತೆ)186/2006-07ನ್ನು ರದ್ದುಪಡಿಸುವಂತೆ ಕೋರಿರುವುದು ಕಂಡು ಬರುತ್ತದೆ.

ದಿನಾಂಕ: 21-3-2001 ರಂದು ನಡೆದ ಮಹಾನಗರ ಪಾಲಿಕೆ ಸಭೆಯಲ್ಲಿ ದಿನಾಂಕ:1-1-81ರಿಂದ 1-6-93 ರವರೆವಿಗೂ ಶೇಕಡ 30ರ ಪರವಾನಗಿ ಶುಲ್ಕ ನಗರಪಾಲಿಕೆಗೆ ಬರಬೇಕಾಗಿದ್ದ ಹಣ ಕೈತಪ್ಪಿ ಹೋಗುವ ಸಂಬಂಧದಲ್ಲಿ ಪಾಲಿಕೆ ಸಭೆಯು 17-2-94 ರ ಸ್ಥಾಯಿ ಸಮಿತಿ ನಿರ್ಣಯವನ್ನು ಅನುಮೋದಿಸಿತ್ತು. ಸದರಿ ನಿರ್ಣಯದಿಂದ ಪಾಲಿಕೆಗೆ ಆರ್ಥಿಕ ನಷ್ಟವಾಗುವ ಹಿನ್ನೆಲೆಯಲ್ಲಿ ದಿ:17-2-1994 ರ ಸ್ಥಾಯಿ ಸಮಿತಿ ನಿರ್ಣಯವನ್ನು ರದ್ದುಗೊಳಿಸಿ ಸರ್ಕಾರ ಆದೇಶ ಹೊರಡಿಸಿದೆ. ಈ ಬಗ್ಗೆ

ಪಾಲಿಕೆ ಸಭೆಯು ವಿಷಯದ ಸಂಖ್ಯೆ. 22(343) ರಲ್ಲಿ ದಿನಾಂಕ:1-1-81 ರಿಂದ 1-6-93 ರವರೆಗಿನ ಶೇಕಡ 30 ರಷ್ಟು ಪರವಾನಗಿ ಶುಲ್ಕ ಕೈಬಿಟ್ಟಿರುವುದನ್ನು ಕೂಡಲೇ ಆಯುಕ್ತರು ಪರವಾನಗಿದಾರರಿಂದ ವಸೂಲಿ ಮಾಡುವಂತೆ ಕ್ರಮ ಕೈಗೊಳ್ಳುವಂತೆ ತೀರ್ಮಾನಿಸಿರುತ್ತದೆ.

ಈ ಮೇಲ್ಕಂಡ ಮಹಾನಗರ ಪಾಲಿಕೆ ಸಭೆಯ ನಿರ್ಣಯದ ವಿರುದ್ದ ಜಯನಗರ ವಾಣಿಜ್ಯ ಸಂಕೀರ್ಣದ ಪರವಾನಗಿದಾರರು ಮತ್ತೊಮ್ಮೆ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಎಂ.ಎ.ನಂ.86/2002 ದಾವೆ ಹೂಡಿರುತ್ತಾರೆ. ಘನ ನ್ಯಾಯಾಲಯವು ಈ ಬಗ್ಗೆ ಈ ಕೆಳಕಂಡ ರೀತಿಯಲ್ಲಿ ಆದೇಶವಿತ್ತಿರುತ್ತದೆ.

The impugned notices in the above mentioned appeals, mentioned in the tabular form supra are hereby set aside. The Respondents are hereby directed to afford an opportunity to the Appellants before enhancement of rent/license fee in respect of their respective shop premises as provided in the above mentioned decisions and then to consider the objections if any, filed by the Appellants and thereafter to proceed further in accordance with law.

The Appellants are not entitled to declaratory relief or for refund of any money as prayed in the appeal. Original of this Judgment shall be kept in M.A.No.86/2002 and the copies of the same shall be kept in the remaining cases for reference.

ಮಾನ್ಯ ಆಡಳಿತಗಾರರು ತೋಟಗಾರಿಕೆ ಮತ್ತು ಮಾರುಕಟ್ಟೆ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರು ದಿನಾಂಕ: 2-7-2007 ರ ವಿಷಯದ ಸಂಖ್ಯೆ. 51/2007-08 ರಲ್ಲಿ ಜಯನಗರ ವಾಣಿಜ್ಯ ಸಂಕೀರ್ಣದ ಪರವಾನಗಿ ಶುಲ್ಕದ ಪರಿಷ್ಕರಣೆಯನ್ನು ನೆಲಅಂತಸ್ತಿಗೆ ಪ್ರತಿ ಚದರ ಅಡಿಗೆ ರೂ. 40/-, 1ನೇ ಅಂತಸ್ತಿನ ಮಳಿಗೆಗಳಿಗೆ ಚದರ ಅಡಿಗೆ ರೂ. 30/- ರಂತೆ ಹಾಗೂ 2ನೇ ಮಹಡಿಯಿಂದ 9ನೇ ಮಹಡಿಯವರೆಗೂ ಚದರ ಅಡಿ ಒಂದಕ್ಕೆ ರೂ. 20/- ನ್ನು ದಿನಾಂಕ: 1-4-2007 ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲಾಗಿದ್ದು, ಪರಿಷ್ಕರಿಸಿರುವ ಮೊತ್ತದ ಬಗ್ಗೆ ನೋಟೀಸುಗಳನ್ನು ಪರವಾನಗಿದಾರರಿಗೆ ಜಾರಿ ಮಾಡಿರುವುದು ಕಂಡು ಬರುತ್ತದೆ.

ಈ ಮೇಲ್ಕಂಡ ಮಾನ್ಯ ಆಡಳಿತಗಾರರ ನಿರ್ಣಯದ ವಿರುದ್ದ ಜಯನಗರ ವಾಣಿಜ್ಯ ಸಂಕೀರ್ಣದ ವರ್ತಕರ ಸಂಘದವರು ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಮತ್ತೊಮ್ಮೆ ಮಿಸ್‌ಲೇನಿಯಸ್ ನಂ. 628/2008 ರಲ್ಲಿ ದಾವೆ ಹೂಡಿರುತ್ತಾರೆ. ಘನ ನ್ಯಾಯಾಲಯವು ಈ ಕೆಳಕಂಡಂತೆ ಆದೇಶವಿತ್ತಿರುತ್ತದೆ.

The petition filed by the petitioner is allowed. The impugned notice issued by the respondents dated 22.7.2008 is hereby set aside. However, the respondents are at liberty to enhance reasonable rate of license fee with effect from 1.4.2007 in accordance with law and service charges of the shop premises of the petitioner after giving notice and giving an opportunity to the petitioner before enhancing the above said license fee and service charges.

Further it is directed to the respondents to issue notice to the petitioner within one month from the date of this order and collect objections from the petitioner within one month from the date of issue of notice. In case the petitioner failed to file objections and failed to appear before the Corporation to say about his grievance, then the respondent is at liberty to pass order for revising or enhancing the rate of rent of the shop within three months from the date of this order.

**ನಿರ್ಣಯ:**- ಮೇಲ್ಕಂಡ ಎಲ್ಲಾ ಅಂಶಗಳಿಂದ ಪ್ರಕರಣವು ಬಹಳ ವರ್ಷಗಳಿಂದ ಬಾಕಿ ಉಳಿದಿರುವುದು ಕಂಡು ಬರುತ್ತದೆ. ಅಲ್ಲದೆ ಪ್ರತಿ ಬಾರಿ ನಗರ ಪಾಲಿಕೆಯು ಪರವಾನಗಿ ಶುಲ್ಕವನ್ನು ಪರಿಷ್ಕರಿಸಿ ನಿಗಧಿಪಡಿಸಿ ನೋಟೀಸ್ ಜಾರಿಮಾಡಿರುವ ಸಂದರ್ಭಗಳಲ್ಲಿ ಮೇಲ್ಮನವಿದಾರರು ನ್ಯಾಯಾಲಯದಲ್ಲಿ ದಾವೆ ಹೂಡಿದಾಗ ನ್ಯಾಯಾಲಯವು ಪ್ರತಿ ಬಾರಿಯೂ ನಗರ ಪಾಲಿಕೆಗೆ ಪ್ರಕರಣವನ್ನು ಹಿಂದಿರುಗಿಸುತ್ತಾ, ನಗರ ಪಾಲಿಕೆಯ ಹಂತದಲ್ಲೇ ಕಾನೂನು ಚೌಕಟ್ಟಿನಲ್ಲಿ ತೀರ್ಮಾನ ಕೈಗೊಳ್ಳಲು ಸೂಚಿಸಿರುವುದು ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಯೊಂದಿಗೆ ಲಗತ್ತಿಸಿರುವ ಅಡಕಗಳಿಂದ ಕಂಡುಬರುತ್ತದೆ. ಆದರೆ ಸಂಬಂಧಪಟ್ಟ ಅಧಿಕಾರಿಗಳು ಮಳಿಗೆದಾರರನ್ನು ಕರೆದು ಚರ್ಚಿಸಿ ತೀರ್ಮಾನ ಕೈಗೊಂಡಿರುವುದು ಕಂಡು ಬಂದಿರುವುದಿಲ್ಲ. ಹಾಗೂ ದಿನಾಂಕ:02-07-2007ರಂದು ಮಾನ್ಯ ಆಡಳಿತಗಾರರು ಮಳಿಗೆದಾರರನ್ನು ವಿಚಾರಣೆಗೆ ಕರೆಯದೆ ಪರವಾನಗಿ ಶುಲ್ಕವನ್ನು ಪರಿಷ್ಕರಿಸಿ ನಿಗಧಿಪಡಿಸಿರುತ್ತಾರೆ. ಆದರೆ ದಿನಾಂಕ:26-09-1997ರಂದು ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾರುಕಟ್ಟೆಗಳನ್ನು ಎ.ಬಿ.ಸಿ.ಡಿ ಎಂದು ವರ್ಗಗಳನ್ನಾಗಿ ವಿಂಗಡಿಸಿ ನಿರ್ಣಯಿಸಿರುವುದು

ಕಂಡುಬರುತ್ತದೆ. ನಂತರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ:14-06-2000ರ ನಿರ್ಣಯದಲ್ಲಿ ಈಗಾಗಲೇ ಮಹಾನಗರ ಪಾಲಿಕೆಯಲ್ಲಿ ನಿರ್ಣಯವಾಗಿದ್ದು ಅದರಂತೆ ಎ.ಬಿ.ಸಿ.ಡಿ ವರ್ಗಗಳ ಆಧಾರದ ಮೇಲೆ ದಿನಾಂಕ:01-04-1998ರಿಂದ ಜಾರಿಗೆ ಬರುವಂತೆ ಕನಿಷ್ಠ ರೂ.100/-(ಒಂದು ನೂರು ರೂಪಾಯಿಗಳಂತೆ ಮಾತ್ರ) ಮತ್ತು ಎ.ಬಿ.ಸಿ.ಡಿ ವರ್ಗಗಳಿಗೆ ಶೇ.25, 20, 15, 10ನ್ನು ಹೆಚ್ಚಿಸಿರುವುದು 3 ವರ್ಷಗಳಿಗೊಮ್ಮೆ ತಾನೇ ತಾನಾಗಿ ಜಾರಿಗೆ ಬರುವುದಾಗಿ ನಿರ್ಣಯಿಸಿರುವುದು ಕಂಡು ಬರುತ್ತದೆ. ಅಲ್ಲದೆ ಜಯನಗರ ವಾಣಿಜ್ಯ ಸಂಕೀರ್ಣದ ಪರವಾನಗಿದಾರರು ವರ್ಗವನ್ನು ಬದಲಾಯಿಸಿಕೊಡುವಂತೆ ಕೋರಿಕೊಂಡಿರುವುದು ಎಲ್ಲೂ ಕಂಡು ಬರುವುದಿಲ್ಲ.

ಮೇಲ್ಕಂಡ ಎಲ್ಲಾ ಕಾರಣಗಳಿಂದ ಹಾಗೂ ನಗರ ಪಾಲಿಕೆಯ ಆರ್ಥಿಕ ಹಿತದೃಷ್ಟಿಯನ್ನು ಮತ್ತು ಆಯುಕ್ತರು ಸರ್ಕಾರಕ್ಕೆ ಬರೆದಿರುವ ಪತ್ರಗಳನ್ನು ಸಮಿತಿಯು ಗಮನದಲ್ಲಿಟ್ಟುಕೊಂಡು ಹಿಂದಿನ ಎಲ್ಲಾ ನೋಟೀಸ್‌ಗಳನ್ನು ರದ್ದುಪಡಿಸುತ್ತಾ, ಜಯನಗರ ವಾಣಿಜ್ಯ ಸಂಕೀರ್ಣದಲ್ಲಿರುವ ತರಕಾರಿ ಮಾರುಕಟ್ಟೆಯ ಒಳಭಾಗದಲ್ಲಿರುವ ನೆಲ ಅಂತಸ್ತು ಮತ್ತು ಮೆಜನೈನ್ ಫ್ಲೋರಿನಲ್ಲಿರುವ ಮಳಿಗೆಗಳು, ಬ್ಯಾಂಕುಗಳು, ಸರ್ಕಾರಿ ಕಛೇರಿಗಳು ಕೋಲ್ಡ್ ಸ್ಟೋರೇಜ್ ಮತ್ತು ಫಿಶ್ ಮಾರ್ಕೆಟ್‌ನ್ನು ಹೊರತುಪಡಿಸಿ ದಿನಾಂಕ:26-09-1997ರ ನಗರ ಪಾಲಿಕೆಯ ನಿರ್ಣಯದಂತೆ ಜಯನಗರ ವಾಣಿಜ್ಯ ಸಂಕೀರ್ಣವು ಯಾವ ವರ್ಗಕ್ಕೆ ಬರುತ್ತದೆಂದು ಸಂಬಂಧ ಪಟ್ಟ ಅಧಿಕಾರಿಗಳು ದೃಢಪಡಿಸಿಕೊಂಡು ಜಯನಗರ ವಾಣಿಜ್ಯ ಸಂಕೀರ್ಣದ ಮಳಿಗೆದಾರರು ದಿನಾಂಕ:01-04-1998ರಲ್ಲಿ ಪಾವತಿಸುತ್ತಿದ್ದ ಪರವಾನಗಿ ಶುಲ್ಕದ ಮೇಲೆ ಶೇಕಡ 25, 20, 15 ಮತ್ತು 10ರಂತೆ ನಿಗಧಿಪಡಿಸಿ ದಿನಾಂಕ:01-04-1998ರಿಂದ ಜಾರಿಗೆ ನೀಡಿ ವಸೂಲು ಮಾಡುವುದೆಂದು, ಹಾಗೂ ಜಾರಿಯಲ್ಲಿರುವ ಶುಲ್ಕದ ಮೇಲೆ ಶೇ.25, 20, 15, 10ರಂತೆ ಪ್ರತಿ 3 ವರ್ಷಗಳಿಗೊಮ್ಮೆ ಪರವಾನಗಿ ಶುಲ್ಕವನ್ನು ಹೆಚ್ಚಿಸಿ ಕರಾರು ಪತ್ರವನ್ನು ಮಾಡಿಕೊಂಡು ವಸೂಲು ಮಾಡಲು ಕ್ರಮ ಕೈಗೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>04.ವಿಷಯ:ಸಂಖ್ಯೆ:ಅಸ್ಥಾಸ/(ತೆ/47/2011-12</u>

ಎಂ.ರಾಜ ಎಂಬುವವರು ಸಹಾಯಕ ಕಂದಾಯ ಅಧಿಕಾರಿ (ಗೋವಿಂದ ರಾಜನಗರ)ರವರು ಸಂಖ್ಯೆ:547/50/1, 10ನೇ ಸಿ ಮುಖ್ಯರಸ್ತೆ, 6ನೇ ಬ್ಲಾಕ್, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು ಈ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಿಸಿ ನೀಡಿರುವ ದಿನಾಂಕ:25-06-2011ರ ನೋಟೀಸಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-11-2011ರ ಟಿಪ್ಪಣಿ.

<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಗೂ ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಕಂದಾಯ ಇಲಾಖೆಯವರು ಕಂದಾಯವನ್ನು ನಿಗಧಿಪಡಿಸುವಾಗ ವಲಯವನ್ನು ಬದಲಾಯಿಸಿರುತ್ತಾರೆ. ಅದನ್ನು ಸರಿಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳಿಗೆ ಸದರಿ ಪ್ರದೇಶವು ಯಾವ ವಲಯಕ್ಕೆ ಬರುತ್ತದೆಂದು ಸಭೆಗೆ ತಿಳಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಪ್ರಕರಣಕ್ಕೆ ಸಂಬಂಧಿಸಿದಂತ ಪ್ರದೇಶವು ಯಾವ ವಲಯಕ್ಕೆ ಬರುತ್ತದೆಂದು ವರದಿಯನ್ನು ನೀಡುವುದು. ಆ ವರದಿಯನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

<u>05.ವಿಷಯ:ಸಂಖ್ಯೆ:ಅಸ್ಥಾಸ/(ಜಾ/48/2011-12</u>

ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:01) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:10-01-2012ರ ಟಿಪ್ಪಣಿ.

<u>ಪ್ರಸ್ತಾವನೆ</u>:- ಆಯುಕ್ತರ ಟಿಪ್ಪಣಿ ಹಾಗೂ ಮೇಲ್ಮನವಿದಾರರು ನೀಡಿರುವ ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಕಮರ್ಷಿಯಲ್ ಸ್ಟ್ರೀಟ್, ಬ್ರಿಗೇಡ್ ರಸ್ತೆ/ಎಂ.ಜಿ.ರಸ್ತೆ ಜಂಕ್ಷನ್‌ನಿಂದ ಬ್ರಿಗೇಡ್ ರಸ್ತೆ ಜಂಕ್ಷನ್‌ವರೆಗೂ ಮತ್ತು ಇಂದಿರಾನಗರ ಬಿ.ಡಿ.ಎ.ಕಾಂಪ್ಲೆಕ್ಸ್‌ವರೆಗೆ 44 ಸಂಖ್ಯೆಯ ಹೂ ಕುಂಡಗಳನ್ನು ಅಳವಡಿಸಿ ಜಾಹೀರಾತು ಪ್ರದರ್ಶಿಸಲು ದಿನಾಂಕ:03-01-2008ರಂದು ಟೆಂಡರ್ ಕಂ ಹರಾಜು ನಡೆಸಲಾಗಿರುವುದು ಕಂಡು ಬರುತ್ತದೆ. ಟೆಂಡರ್‌ದಾರರು ದಿನಾಂಕ:07-03-2008ರಂದು ನೆಲಬಾಡಿಗೆಯಾಗಿ ರೂ.21,00,000/-ಗಳನ್ನು ಪಾವತಿಸಿದ್ದು, ಟೆಂಡರ್ ಮುಕ್ತಾಯವಾದ ತಕ್ಷಣವೇ ಕರಾರನ್ನು ಮಾಡಿಕೊಡದೇ ದಿನಾಂಕ:05-12-2009ರಂದು ಕರಾರು ಪತ್ರ ಮಾಡಿಕೊಟ್ಟಿರುವುದರಿಂದ ಸಂಸ್ಥೆಗೆ 2 ವರ್ಷಗಳ ಕಾಲ ವ್ಯವಹಾರಿಕ ನಷ್ಟವುಂಟಾಗಿರುವುದಾಗಿ ತಿಳಿಸುತ್ತಾ, ಟೆಂಡರ್ ಮಾಡಿದ ತಕ್ಷಣವೇ ಆದೇಶವನ್ನು ನೀಡಿಲ್ಲದಿರುವುದರಿಂದ ಸಾಕಷ್ಟು ಆರ್ಥಿಕ ನಷ್ಟವುಂಟಾಗಿರುವುದಾಗಿ ತಿಳಿಸಿರುತ್ತಾರೆ. ಬ್ರಿಗೇಡ್ ರಸ್ತೆಯಲ್ಲಿನ ಮಳಿಗೆಯ ಮಾಲೀಕರ ಸಂಘದವರು ಹೂ ಕುಂಡಗಳನ್ನು ಅಳವಡಿಸಬಾರದೆಂದು ಆಕ್ಷೇಪಣೆ ವ್ಯಕ್ತ ಪಡಿಸಿದ್ದರೂ ಸಹ 11 ಹೂ ಕುಂಡಗಳನ್ನು ಅಳವಡಿಸಿರುತ್ತೇವೆ. ಆದರೆ ಅಳವಡಿಸಿದ್ದ 11 ಹೂ ಕುಂಡಗಳನ್ನು ಕಳವು ಮಾಡಲಾಗಿದ್ದು ಕಳವಾಗಿರುವ ಬಗ್ಗೆ ಪೋಲಿಸ್‌ಗೆ ದೂರನ್ನು ಸಹ ಸಲ್ಲಿಸಿರುತ್ತೇವೆ. ಸದರಿ 11 ಹೂ ಕುಂಡಗಳ ಕಳುವಿನಿಂದಾಗಿ ನನಗೆ ರೂ.3,00,000/-ಗಳಷ್ಟು ನಷ್ಟವುಂಟಾಗಿರುತ್ತದೆ. ಸದರಿ ಪ್ಯಾಕೇಜ್‌ಗೆ ಸಂಬಂಧಿಸಿದಂತೆ ಇಂದಿರಾನಗರ ಬಿ.ಡಿ.ಎ.ಕಾಂಪ್ಲೆಕ್ಸ್ ಹತ್ತಿರ ಅಳವಡಿಸಿದ್ದ 21 ಹೂ ಕುಂಡಗಳಿಗೆ ವಿದ್ಯುತ್ ಸರಬರಾಜಿಗಾಗಿ ರೂ.66,400/-ಗಳನ್ನು ಪಾವತಿಸಲಾಗಿತ್ತು. ಆದರೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯುತ್ ನಿರ್ವಹಣಾ ವಿಭಾಗದವರು ಸಮರ್ಪಕವಾದ ವಿದ್ಯುತ್ ಸರಬರಾಜು ಇಲ್ಲದಿರುವುದರಿಂದ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿರುತ್ತಾರೆ. ಇದರಿಂದಾಗಿ ಸಂಸ್ಥೆಗೆ ಅಪಾರ ಆರ್ಥಿಕ ನಷ್ಟವುಂಟಾಗಿರುವುದಲ್ಲದೆ ವ್ಯವಹಾರಿಕವಾಗಿ ಕಂಪನಿಯ ಹಿತಕ್ಕೆ ಧಕ್ಕೆ ಉಂಟಾಗಿರುತ್ತದೆ. ವಿದ್ಯುತ್ ಸರಬರಾಜು ಕಲ್ಪಿಸಿಕೊಡದಿದ್ದರೂ ಸಹ 2ನೇ ವರ್ಷಕ್ಕೂ ಸಹ ಸಂಸ್ಥೆಯಿಂದ ವಿದ್ಯುತ್ ಸರಬರಾಜಿಗಾಗಿ ರೂ.52,800/-ಗಳಷ್ಟು ಹಣವನ್ನು

ಪಾವತಿಸಿಕೊಂಡಿರುತ್ತಾರೆ. ಆದರೂ ಸಹ ವಿದ್ಯುತ್ ಸರಬರಾಜನ್ನು ನೀಡಿರುವುದಿಲ್ಲ. ಅದಕ್ಕೆ ಬದಲಿಯಾಗಿ ನಾವು ಬೆಸ್ಕಾಂರವರಿಂದಲೇ ನೇರವಾಗಿ ವಿದ್ಯುತ್ ಸಂಪರ್ಕವನ್ನು ಪಡೆದು ಹೂ ಕುಂಡಗಳ ಮೇಲೆ ಜಾಹೀರಾತು ಪ್ರದರ್ಶಿಸಿರುತ್ತೇವೆ. ಅಲ್ಲದೆ ವಾರ್ಷಿಕ ಶೇಕಡಾ 10ರಷ್ಟು ಹೆಚ್ಚುವರಿ ಶುಲ್ಕವನ್ನು ಪಾವತಿಸಲು ಟೆಂಡರ್ ನಿಭಂದನೆಗಳಲ್ಲಿ ನಮೂದಿಸಲಾಗಿರುತ್ತದೆ. ಆದರೆ ಕರಾರು ಪತ್ರದಲ್ಲಿ ಶೇಕಡಾ 10ರಷ್ಟನ್ನು ಪಾವತಿಸುವ ಬಗ್ಗೆ ಯಾವುದೇ ಒಡಬಂಡಿಕೆಯನ್ನು ಮಾಡಿಕೊಂಡಿರುವುದಿಲ್ಲ. ಆದರೂ ಸಹ 2ನೇ ವರ್ಷದಲ್ಲಿ ಹೆಚ್ಚುವರಿ ಶೇಕಡಾ 10ರಂತೆ ರೂ.2,10,000/-ಗಳನ್ನು ಪಾವತಿಸಿರುತ್ತೇವೆ. ಆದುದರಿಂದ ನಮ್ಮ ಲಿಖಿತ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಂಡು ಬ್ರಿಗೇಡ್ ರಸ್ತೆಯಲ್ಲಿ ಅಳವಡಿಸಿದ್ದ 11 ಹೂ ಕುಂಡಗಳನ್ನು ತೆರವುಗೊಳಿಸಿದ ಅವಧಿಯನ್ನು ಮುಂದುವರೆಸಿಕೊಡುವಂತೆ ದಿನಾಂಕ:17-02-2010ರಂದು ಪತ್ರ ಬರೆದು ಕೋರಿಕೊಂಡಿರುತ್ತೇವೆ. ಆದರೆ ಸದರಿ ಅವಧಿಯನ್ನು ಸಹ ಮುಂದುವರೆಸಿಕೊಟ್ಟಿಲ್ಲದಿರುವುದರಿಂದ ನಮ್ಮ ಸಂಸ್ಥೆಗೆ ಸಾಕಷ್ಟು ಆರ್ಥಿಕ ನಷ್ಟವುಂಟಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಈಗ ವಿಧಿಸಿರುವ ದಂಡದ ಮೊತ್ತ ರೂ.9,60,000/-ಗಳನ್ನು ಮನ್ನಾ ಮಾಡಿ ಬ್ರಿಗೇಡ್ ರಸ್ತೆಯ ಹೂ ಕುಂಡಗಳನ್ನು ಕಿತ್ತು ಹಾಕಿದ ಅವಧಿ ಮತ್ತು ಅಳವಡಿಸಲು ತೆಗದೆಕೊಂಡ ಅವಧಿಗೆ ಸಮನಾಗಿ 2 ತಿಂಗಳ ಅವಧಿಯನ್ನು ಮುಂದುವರೆಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ.

<u>ನಿರ್ಣಯ</u>:- ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯು ಗಮನಕ್ಕೆ ತೆಗೆದುಕೊಂಡು ಟೆಂಡರ್ ನಿಬಂಧನೆಗಳಂತೆ ಟೆಂಡರ್ ಕಂ ಹರಾಜು ನಡೆಸಿದ ತಕ್ಷಣ ಕರಾರು ಪತ್ರ ಮಾಡಿಕೊಳ್ಳದಿರುವುದು ಆಯುಕ್ತರ ಟಿಪ್ಪಣಿಯಿಂದ ಕಂಡು ಬರುತ್ತದೆ. ಅಲ್ಲದೆ ಮೇಲ್ಮನವಿದಾರರಿಗೆ ನಷ್ಟವುಂಟಾಗಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಲಕಾಲಕ್ಕೆ ತಿಳಿಸಿರುವುದು ಕಂಡು ಬರುತ್ತದೆ. ಇಂದಿರಾನಗರ ಬಿ.ಡಿ.ಎ.ಕಾಂಪ್ಲೆಕ್ಸ್ ಹತ್ತಿರ ವಿದ್ಯುತ್ ಸರಬರಾಜನ್ನು ನೀಡದಿರುವುದರಿಂದ ಮೇಲ್ಮನವಿದಾರರಿಗೆ ಆರ್ಥಿಕ ನಷ್ಟವುಂಟಾಗಿರುವುದು ಸ್ಪಷ್ಟವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಮೆ॥ಪ್ರಕಾಶ್ ಆರ್ಟ್ಸ್ ಸಂಸ್ಥೆಯವರಿಗೆ ಈಗ ವಿಧಿಸಿರುವ ರೂ.9,60,000/-ಗಳ ದಂಡದ ಬದಲಿಗೆ ರೂ.2,50,000/-ಗಳ ದಂಡವನ್ನು ವಿಧಿಸಿ ಬ್ರಿಗೇಡ್ ರಸ್ತೆಯ ಹೂ ಕುಂಡಗಳನ್ನು ಕಿತ್ತು ಹಾಕಿದ ಅವಧಿ ಮತ್ತು ಅಳವಡಿಸಲು ತೆಗದೆಕೊಂಡ ಅವಧಿಗೆ ಸಮನಾಗಿ 2 ತಿಂಗಳ ಅವಧಿಯನ್ನು ಮುಂದುವರೆಸಲು ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>06.ವಿಷಯ:ಸಂಖ್ಯೆ:ಅಸ್ಥಾಸ/(ಜಾ)/49/2011-12</u>

ಮೆ॥ ಪ್ರಕಾಶ್ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್‌ರವರು (ಪ್ಯಾಕೇಜ್ ಸಂಖ್ಯೆ:03ರ) ಉಪ ಆಯುಕ್ತರು (ಜಾಹೀರಾತು)ರವರು ದಿನಾಂಕ: 22-09-2010 ಮತ್ತು 24-09-2010ರಂದು ನೀಡಿರುವ ನೋಟೀಸ್‌ಗಳ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:19-01-2012ರ ಟಿಪ್ಪಣಿ.

<u>ಪ್ರಸ್ತಾವನೆ</u>:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಹೂ ಕುಂಡಗಳನ್ನು ಅಳವಡಿಸಿ ಜಾಹೀರಾತು ಪ್ರದರ್ಶಿಸಲು ಯಶಸ್ವಿ ಟೆಂಡರ್‌ದಾರರಾಗಿರುತ್ತೇನೆ. ಆದರೆ ಕರಾರನ್ನು 2 ವರ್ಷಗಳ ನಂತರ ಮಾಡಿಕೊಟ್ಟಿರುತ್ತಾರೆ. ಇದರಿಂದಾಗಿ ನಮಗೆ ಬಹಳಷ್ಟು ಆರ್ಥಿಕ ನಷ್ಟವುಂಟಾಗಿರುತ್ತದೆ. ಆದುದರಿಂದ ಈಗ ವಿಧಿಸಿರುವ ದಂಡವನ್ನು ಮನ್ನಾ ಮಾಡಿಕೊಡಬೇಕೆಂದು ಹಾಗೂ ನಮ್ಮ ಹೇಳಿಕೆಗಳನ್ನು ಲಿಖಿತವಾಗಿ ನೀಡುತ್ತಿದ್ದು ಅದರಂತೆ ನಮಗೆ ನ್ಯಾಯ ಒದಗಿಸಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಸಭೆಯಲ್ಲಿ ಹಾಜರಿದ್ದ ಪ್ರತಿವಾದಿಗಳು ಜಾಹೀರಾತುದಾರರು ಸರಿಯಾದ ಸಮಯಕ್ಕೆ ಹೂ ಕುಂಡಗಳನ್ನು ಅಳವಡಿಸಿರುವುದಿಲ್ಲ ಹಾಗೂ ಅಳತೆ ಮತ್ತು ಹೆಚ್ಚಿನ ಸಂಖ್ಯೆಯ ಹೂ ಕುಂಡಗಳನ್ನು ಅಳವಡಿಸಿರುತ್ತಾರೆ. ಆದ್ದರಿಂದ ಈಗ ವಿಧಿಸಿರುವ ದಂಡವನ್ನು ಮೇಲ್ಮನವಿದಾರರು ಪಾವತಿಸುವಂತೆ ಆದೇಶ ನೀಡುವಂತೆ ಕೋರಿಕೊಂಡಿರುತ್ತಾರೆ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

ಆಯುಕ್ತರ ಟಿಪ್ಪಣಿ ಹಾಗೂ ಮೇಲ್ಮನವಿದಾರರು ನೀಡಿರುವ ಹೇಳಿಕೆಗಳು ಮತ್ತು ಲಿಖಿತ ಹೇಳಿಕೆಗಳನ್ನು ಪರಿಶೀಲಿಸಲಾಯಿತು. ಆಯುಕ್ತರ ಟಿಪ್ಪಣಿಯಲ್ಲಿ ವಿವರಿಸಿರುವಂತೆ ಡಿ.ವಿ.ಜಿ. ರಸ್ತೆ, ಗಾಂಧಿಬಜಾರ್ ಮುಖ್ಯರಸ್ತೆಯಲ್ಲಿ 73 ಸಂಖ್ಯೆಯ ಹೂ ಕುಂಡಗಳನ್ನು ಅಳವಡಿಸಿ ಜಾಹೀರಾತು ಪ್ರದರ್ಶಿಸಲು ದಿನಾಂಕ:03-01-2008ರಂದು ಟೆಂಡರ್ ಕಂ ಹರಾಜು ನಡೆಸಲಾಗಿರುವುದು ಕಂಡು ಬರುತ್ತದೆ. ಟೆಂಡರ್‌ದಾರರು ದಿನಾಂಕ:07-03-2008ರಂದು ರೂ.15,50,000/-ಗಳನ್ನು ಪಾವತಿಸಿದ್ದು, ಟೆಂಡರ್ ಮುಕ್ತಾಯವಾದ ತಕ್ಷಣವೇ ಕರಾರನ್ನು ಮಾಡಿಕೊಡದೇ ದಿನಾಂಕ:05-12-2009ರಂದು ಕರಾರು ಪತ್ರ ಮಾಡಿಕೊಟ್ಟಿರುವುದರಿಂದ ಸಂಸ್ಥೆಗೆ 2 ವರ್ಷಗಳ ಕಾಲ ವ್ಯವಹಾರಿಕ ನಷ್ಟವುಂಟಾಗಿರುತ್ತದೆ. ಈ ಬಗ್ಗೆ ಮೇಲ್ಮನವಿದಾರರು ತಮ್ಮ ಲಿಖಿತ ಹೇಳಿಕೆಗಳಲ್ಲಿ ಟೆಂಡರ್ ಮಾಡಿದ ತಕ್ಷಣವೇ ಆದೇಶವನ್ನು ನೀಡಿಲ್ಲದಿರುವುದರಿಂದ ಸಾಕಷ್ಟು ಆರ್ಥಿಕ ನಷ್ಟವುಂಟಾಗಿರುವುದಾಗಿ ಹಾಗೂ ಡಿ.ವಿ.ಜಿ.ರಸ್ತೆಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಿದ್ಯುತ್ ನಿರ್ವಹಣಾ ವಿಭಾಗದವರು ಹೊಸ ವಿದ್ಯುತ್ ಕಂಬಗಳನ್ನು ಅಳವಡಿಸುವ ಸಲುವಾಗಿ ಯಾವುದೇ ನೋಟೀಸ್ ನೀಡದೆ ನಾವು ಅಳವಡಿಸಿದ್ದ 15 ಹೂ ಕುಂಡಗಳನ್ನು ತೆರವುಗೊಳಿಸಿರುತ್ತಾರೆ. ಹಾಗೂ ತೆರವುಗೊಳಿಸಿರುವ ಹೂ ಕುಂಡಗಳನ್ನು ನಮಗೆ ಹಿಂದಿರುಗಿಸಿರುವುದಿಲ್ಲ. ಇದರಿಂದಾಗಿ ನಮಗೆ ಬಹಳಷ್ಟು ಆರ್ಥಿಕ ನಷ್ಟವುಂಟಾಗಿರುತ್ತದೆ. ಅಲ್ಲದೆ ಮತ್ತೆ ಆದೇ ರಸ್ತೆಯಲ್ಲಿ 26-04-2011ರಂದು ಮತ್ತೆ ಹೊಸದಾಗಿ ಹೂ ಕುಂಡಗಳನ್ನು ಅಳವಡಿಸಲಾಗಿತ್ತು. ಆದರೆ ಡಿವಿಜಿಯವರ 100ನೇ ಜನ್ಮ ದಿನ ಆಚರಣೆಗಾಗಿ ಡಿ.ವಿ.ಜಿ.ಯವರ ಕೃತಿಗಳನ್ನು ಪ್ರಚುರ ಪಡಿಸುವ ಸಲುವಾಗಿ ಹೊಸದಾಗಿ ಅಳವಡಿಸಿರುವ ಹೂ ಕುಂಡಗಳನ್ನು ತೆರವುಗೊಳಿಸುವಂತೆ ಹಾಗೂ ಸದರಿ ಹೂ ಕುಂಡಗಳನ್ನು ಅಳವಡಿಸಿರುವ ಸ್ಥಳಕ್ಕೆ ಬದಲಿಯಾಗಿ ಬೇರೆ ಸ್ಥಳವನ್ನು ಕೋರುವಂತೆ ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಸ್ಥಳೀಯ ನಗರ ಪಾಲಿಕೆ ಸದಸ್ಯರು ದಿನಾಂಕ:27-014-2011ರಂದು ಮೌಖಿಕವಾಗಿ ತಿಳಿಸಿದ್ದರು. ಆ ಮೇರೆಗೆ ನಾವು ಬೇರೆ ಸ್ಥಳವನ್ನು ಗುರುತಿಸಿ ನೀಡುವಂತೆ ಅರ್ಜಿಯನ್ನು ಸಲ್ಲಿಸಿದ್ದೆವು. ಆದರೆ ಇದುವರೆವಿಗೂ ಸಹ ಬದಲಿ ಸ್ಥಳವನ್ನು ಮಂಜೂರು ಮಾಡಿರುವುದಿಲ್ಲ. ಇದಾದ ನಂತರ ದಿನಾಂಕ:29-06-2011ರಂದು ನಮಗೆ ಯಾವುದೇ

ಸೂಚನೆಯನ್ನು ನೀಡದೆ ಡಿ.ವಿ.ಜಿ. ರಸ್ತೆಯಲ್ಲಿ ಅಳವಡಿಸಿದ್ದ 33 ಸಂಖ್ಯೆಯ ಹೂ ಕುಂಡಗಳನ್ನು ತೆರವುಗೊಳಿಸಿದ್ದು, ತೆರವುಗೊಳಿಸಿದ್ದ ಹೂ ಕುಂಡಗಳನ್ನು ನಮ್ಮ ಸುಪರ್ದಿಗೆ ನೀಡಿರವುದಿಲ್ಲ. ಇದರಿಂದಾಗಿ ನಮಗೆ ಬಹಳಷ್ಟು ಆರ್ಥಿಕ ನಷ್ಟವುಂಟಾಗಿದ್ದು ನಗರ ಪಾಲಿಕೆಯೇ ನಮಗೆ ಆರ್ಥಿಕ ನಷ್ಟವನ್ನು ಭರಿಸಿಕೊಡಬೇಕಾಗಿರುತ್ತದೆ. ಆದುದರಿಂದ ನಮ್ಮ ನಷ್ಟವನ್ನು ತುಂಬಿಕೊಳ್ಳುವ ಸಲುವಾಗಿ ಮತ್ತೊಂದು ವರ್ಷಕ್ಕೆ ಮುಂದುವರೆಸಿಕೊಡುವುದು. ಹಾಗೂ ನಾವು ಕೋರಿರುವ ಬದಲಿ ಸ್ಥಳಕ್ಕೆ ದಿನಾಂಕ:04-01-2012ರಂದು ಹಿಂಬರಹವನ್ನು ನೀಡಿ ನಾವು ಕೋರಿರುವ ಸ್ಥಳವು ಪೂರ್ವ ವಲಯಕ್ಕೆ ಬರುವುದರಿಂದ ದಕ್ಷಿಣ ವಲಯಕ್ಕೆ ಸಂಬಂಧಪಟ್ಟಂತೆ ಸ್ಥಳವನ್ನು ಕೋರುವಂತೆ ಸೂಚಿಸಿರುತ್ತಾರೆ. ಅದರಂತೆ ನಾವು ದಕ್ಷಿಣ ವಲಯದಲ್ಲೇ ಸ್ಥಳವನ್ನು ಕೋರಿದ್ದರೂ ಸಹ ಸ್ಥಳವನ್ನು ನೀಡದೆ ಟೆಂಡರ್ ಕರೆದಿರುತ್ತಾರೆ. ಗಾಂಧಿ ಬಜಾರ್ ಮುಖ್ಯರಸ್ತೆಯಲ್ಲಿ ಅಳವಡಿಸಿದ್ದ 1 ಹೂ ಕುಂಡದ ಹತ್ತಿರ ಪಾದಚಾರಿ ರಸ್ತೆಯ ವ್ಯಾಪರಸ್ಥರು ಹೂ ಕುಂಡವು ಕಾಣದಂತೆ ಟಾರ್ಪಲ್‌ನ್ನು ಹೊದಿಸಿಕೊಂಡಿದ್ದರು.ಈ ಹಿನ್ನೆಲೆಯಲ್ಲಿ ನಾವು ಬದಲಿ ಜಾಗವನ್ನು ನೀಡುವಂತೆ ಕೋರಿಕೊಂಡಿದ್ದೆವು. ಆದರೆ ಇದುವರೆವಿಗೂ ಬದಲಿ ಜಾಗವನ್ನು ನೀಡಿರುವುದಿಲ್ಲ. ದಿನಾಂಕ:23-01-2012ರಂದು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ರಸ್ತೆ ಬದಿಯ ವ್ಯಾಪಾರಿಗಳನ್ನು ತೆರವುಗೊಳಿಸಲು ಜೆ.ಸಿ.ಬಿ. ಮುಖಾಂತರ ಪಾದಚಾರಿಯ ರಸ್ತೆಯ ಮೇಲೆ ನಿರ್ಮಿಸಿದ್ದ ತಾತ್ಕಾಲಿಕ ಶೆಡ್ಡುಗಳನ್ನು ತೆರವುಗೊಳಿಸುವ ಸಂದರ್ಭದಲ್ಲಿ ನಮ್ಮ 10 ಸಂಖ್ಯೆಯ ಹೂ ಕುಂಡಗಳನ್ನು ಮುರಿದು ಹಾಕಿರುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಈ ಪ್ಯಾಕೇಜ್‌ನಿಂದ ಚೇತರಿಸಿಕೊಳ್ಳಲಾಗದಷ್ಟು ಆರ್ಥಿಕ ನಷ್ಟವುಂಟಾಗಿರುತ್ತದೆ. ಅಲ್ಲದೆ ವಾರ್ಷಿಕ ಶೇಕಡಾ 10ರಷ್ಟು ಹೆಚ್ಚುವರಿ ಶುಲ್ಕವನ್ನು ಪಾವತಿಸಲು ಟೆಂಡರ್ ನಿಭಂದನೆಗಳಲ್ಲಿ ನಮೂದಿಸಲಾಗಿರುತ್ತದೆ. ಆದರೆ ಕರಾರು ಪತ್ರದಲ್ಲಿ ಶೇಕಡಾ 10ರಷ್ಟನ್ನು ಪಾವತಿಸುವ ಬಗ್ಗೆ ಯಾವುದೇ ಒಡಬಂಡಿಕೆಯನ್ನು ಮಾಡಿಕೊಂಡಿರುವುದಿಲ್ಲ. ಆದರೂ ಸಹ 2ನೇ ವರ್ಷದಲ್ಲಿ ಹೆಚ್ಚುವರಿ ಶೇಕಡಾ 10ರಂತೆ ಹಣವನ್ನು ಪಾವತಿಸಿರುತ್ತೇನೆ. ಆದುದರಿಂದ ನಮ್ಮ ಲಿಖಿತ ಹೇಳಿಕೆಗಳನ್ನು ಪರಿಗಣನೆಗೆ ತೆಗೆದುಕೊಂಡು ಈಗ ವಿಧಿಸಿರುವ ದಂಡದ ಮೊತ್ತ ರೂ.9,60,000/-ಗಳನ್ನು ಮನ್ನಾ ಮಾಡಿಕೊಡಬೇಕೆಂದು ಹಾಗೂ ಈ ಪ್ಯಾಕೇಜ್ ಅವಧಿಯನ್ನು 19ತಿಂಗಳು 10 ದಿನದವರೆವಿಗೂ ಮುಂದುವರಿಸಿಕೊಡುವಂತೆ ಆದೇಶ ಹೊರಡಿಸುವಂತೆ ಕೋರಿಕೊಂಡಿರುತ್ತಾರೆ.

<u>ನಿರ್ಣಯ</u>:- ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯು ಗಮನಕ್ಕೆ ತೆಗೆದುಕೊಂಡು ಟೆಂಡರ್ ನಿಬಂಧನೆಗಳಂತೆ ಟೆಂಡರ್ ಕಂ ಹರಾಜು ನಡೆಸಿದ ತಕ್ಷಣ ಕರಾರು ಪತ್ರ ಮಾಡಿಕೊಳ್ಳದಿರುವುದು ಕಂಡು ಬರುತ್ತದೆ. ಮೇಲ್ಮನವಿದಾರರು ಅವರಿಗೆ ನಷ್ಟವುಂಟಾಗಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾಲಕಾಲಕ್ಕೆ ತಿಳಿಸಿರುವುದು ಹಾಗೂ ಡಿ.ವಿ.ಜಿ.ರಸ್ತೆಯ ಹೂ ಕುಂಡಗಳನ್ನು ತೆರವುಗೊಳಿಸಿದ್ದು ಇದುವರೆವಿಗೂ ಅಳವಡಿಸಲು ಅವಕಾಶ ನೀಡದಿರುವುದು ಸ್ಪಷ್ಟವಾಗಿರುತ್ತದೆ. ಈ ಎಲ್ಲಾ ಕಾರಣಗಳಿಂದಾಗಿ ಮೆ॥ಪ್ರಕಾಶ್ ಆರ್ಟ್ಸ್ ಸಂಸ್ಥೆಯವರಿಗೆ ಈಗ ವಿಧಿಸಿರುವ ರೂ.9,60,000/-ಗಳ ದಂಡದ ಬದಲಿಗೆ ರೂ.2,50,000/-ಗಳ ದಂಡವನ್ನು ವಿಧಿಸಿ ಈ ಪ್ಯಾಕೇಜ್‌ನ ಅವಧಿಯನ್ನು ಹಾಲಿ ನಿಗಧಿಪಡಿಸಿರುವ ಟೆಂಡರ್ ನಿಬಂಧನೆಗಳ ಆಧಾರದ ಮೇಲೆಯೇ ದಕ್ಷಿಣ ವಲಯದಲ್ಲೇ ಮೇಲ್ಮನವಿದಾರರು ಕೋರಿರುವ ಬದಲಿ ಸ್ಥಳವನ್ನು ನೀಡಿ ಹೂ ಕುಂಡಗಳನ್ನು ಅಳವಡಿಕೊಳ್ಳಲು ಸ್ಥಳವನ್ನು ನೀಡದಿರುವ ಅವಧಿಗೆ ಸಮನಾಗಿ 19 ತಿಂಗಳು ಹೂ ಕುಂಡಗಳನ್ನು ಅಳವಡಿಸಿಕೊಳ್ಳಲು ಅವಕಾಶ ನೀಡುವ ಬಗ್ಗೆ ಆಯುಕ್ತರು ಕ್ರಮ ತೆಗೆದುಕೊಳ್ಳುವುದೆಂದು ಸಮಿತಿಯು ತೀರ್ಮಾನಿಸಲಾಯಿತು.

<u>07.ವಿಷಯ:ಸಂಖ್ಯೆ:ಅಸ್ಥಾಸ/(ಖಾ)/50/2011-12</u>
ಶ್ರೀ.ಪಿ.ವಿನ್ಸೆಂಟ್‌ರವರು ಸ್ವತ್ತಿನ ಸಂಖ್ಯೆ:13, 13/1, 13/2 ಮತ್ತು 13/3, 1ನೇ ಮುಖ್ಯರಸ್ತೆ, ಜಕ್ಕಸಂದ್ರ, ವಾರ್ಡ್-151ರ ಸ್ವತ್ತುಗಳ ಖಾತಾ ರದ್ದುಪಡಿಸಲು ಕೋರಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹ ಕಂದಾಯ ಅಧಿಕಾರಿ, ಕೋರಮಂಗಲ ಉಪ ವಲಯರವರು ದಿನಾಂಕ:24-10-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಕ್ಷಿಣ)ರವರ ದಿನಾಂಕ:26-11-2011ರ ಟಿಪ್ಪಣಿ.
<u>ಪ್ರಸ್ತಾವನೆ:</u>-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ ಪ್ರತಿವಾದಿಗಳು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಗೈರು ಹಾಜರಾಗಿರುವುದರಿಂದ ಮತ್ತೊಂದು ಅವಕಾಶವನ್ನು ಮೇಲ್ಮನವಿದಾರರಿಗೆ ನೀಡಲು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.

ಃಸಹಿಃ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:11-04-2012ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಎಸ್.ಎಸ್.ಪ್ರಸಾದ್ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಪದ್ಮಾವತಿ ಶ್ರೀನಿವಾಸ್ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ದಕ್ಷಿಣ) |
| 03 | ಎಂ.ಗೌತಮ್ ಕುಮಾರ್ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪಶ್ಚಿಮ) |
| 04 | ಬಿ.ಎಸ್.ಆನಂದ | ಸದಸ್ಯರು | ಸಹಾಯಕ ಕಾರ್ಯಪಾಲಕ ಅಭಿಯಂತರರು(ಬನಶಂಕರಿ) |
| 05 | ಎಂ.ವಸಂತಕುಮಾರಿ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗಾಂಧಿನಗರ/ಶಾಂತಿನಗರ) |
| 06 | ಬಿ.ಗೋವಿಂದರಾಜು | ಸದಸ್ಯರು | ೯ |
| 07 | ಡಿ.ವೆಂಕಟೇಶ್ | ಸದಸ್ಯರು | |
| 08 | ಬಿ.ಎನ್.ಕೋಕಿಲ | ಸದಸ್ಯರು | |
| 09 | ಪಿ.ಎಂ.ಸರೋಜ | ಸದಸ್ಯರು | |
| 10 | ಶಾಹೀನ್ ತಾಜ್ | ಸದಸ್ಯರು | |
| 11 | ಕೆ.ಆರ್.ಯಶೋದಮ್ಮ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

01.ವಿಷಯ:ಸಂಖ್ಯೆ:ಅಸ್ಥಾಸ/(ಆ)/35/2011-12

ನಂ.301, 66ನೇ ಕ್ರಾಸ್, 5ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-10 ಈ ಉದ್ದಿಮೆಯ ಮಾಲೀಕರಾದ ಶ್ರೀ.ಇ.ಹೆಚ್.ಟೋಪಿಸಾಹೇಬ್‌ರವರು ದಿನಾಂಕ:17-09-2011ರಂದು ಉಪ ಆರೋಗ್ಯಾಧಿಕಾರಿ (ಪಶ್ಚಿಮ)ರವರು ನೀಡಿರುವ ಪತ್ರದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:02-11-2011ರ ಟಿಪ್ಪಣಿ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಅವರ ಪ್ರತಿನಿಧಿ ವಕೀಲರು ಹಾಜರಿದ್ದು ತಕಾರರನ್ನು ಸಲ್ಲಿಸಿರುತ್ತಾರೆ. ಪ್ರತಿವಾದಿಗಳು ಹಾಜರಿದ್ದು ಲಿಖಿತ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ. ಮೇಲ್ಮನವಿದಾರರು ಲಿಖಿತ ಹೇಳಿಕೆಗಳನನು ಸಲ್ಲಿಸಲು ಕಾಲಾವಕಾಶ ಕೋರಿಕೊಂಡಿರುತ್ತಾರೆ. ಪ್ರಕರಣವನ್ನು ತಪಾಸಣೆಗಾಗಿ ಮುಂದೂಡಿದೆ.

02. ವಿಷಯ:ಸಂಖ್ಯೆ:ಅಸ್ಥಾಸ/(ಕಾ)/45/2011-12

ಎಸ್.ವಿ.ಸಿ.ಕೆ. ಎಜುಕೇಷನ್ ಇನ್‌ಸ್ಟಿಟ್ಯೂಷನ್‌ರವರು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬನಶಂಕರಿ ಉಪ ವಿಭಾಗರವರು ದಿನಾಂಕ:18-08-2011ರಂದು ನೀಡಿರುವ ಪತ್ರದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

ಪ್ರಸ್ತಾವನೆ:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಪ್ರತಿವಾದಿಗಳು ಇದುವರೆವಿಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿದ ಕಡತವನ್ನು ಆಯುಕ್ತರ ಮುಖಾಂತರ ಸಮಿತಿಗೆ ಸಲ್ಲಿಸಿರುವುದಿಲ್ಲ. ಎರಡೂ ಕಡೆಯ ವಾದ ಮತ್ತು ಪ್ರತಿ ವಾದಗಳನ್ನು ಆಲಿಸಿದ ನಂತರ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಲಾಯಿತು.

**ನಿರ್ಣಯ**:- ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕ:16-11-2011ರಂದು ಪತ್ರ ಬರೆದು ಎಸ್.ವಿ.ಸಿ.ಕೆ. ಎಜುಕೇಷನ್ ಇನ್‌ಸ್ಟಿಟ್ಯೂಷನ್‌ರವರು ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಗೆ ಸಂಬಂಧಿಸಿದಂತೆ ವಿವರವಾದ ಟಿಪ್ಪಣಿಯೊಂದಿಗೆ ಕಡತವನ್ನು 3 ದಿನಗಳೊಳಗಾಗಿ ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಲಾಗಿತ್ತು. ಆದರೆ ಸಂಬಂಧಪಟ್ಟ ಅಧಿಕಾರಿಗಳು ಇದುವರೆವಿಗೂ ಸಮಿತಿಯ ಮುಂದೆ ಟಿಪ್ಪಣಿಯನ್ನು ಮಂಡಿಸಲು ವಿಫಲರಾಗಿರುತ್ತಾರೆ. ಇದರಿಂದಾಗಿ ಸಂಬಂಧಪಟ್ಟ ಅಧಿಕಾರಿಗಳು ಯಾವ ಕ್ರಮ ಕೈಗೊಂಡಿರುತ್ತಾರೆಂಬ ಬಗ್ಗೆ ಸಮಿತಿಗೆ ತಿಳಿದಿರುವುದಿಲ್ಲ.

ಮೇಲ್ಮನವಿದಾರರು ಮತ್ತು ಪ್ರತಿವಾದಿಗಳ ವಾದಗಳನ್ನು ಆಲಿಸಿದ ನಂತರ ಮೇಲ್ಮನವಿದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು. ವಾರ್ಡ್-167ರ ಪ್ರದೇಶದಲ್ಲಿನ ತ್ಯಾಗರಾಜನಗರ ಸಾರ್ವಜನಿಕ ಟೆಂಪಲ್ ರಸ್ತೆಯಲ್ಲಿ ಎದುರು ಬದುರು ಇರುವ ಎಸ್.ವಿ.ಸಿ.ಕೆ ವಿದ್ಯಾ ಸಂಸ್ಥೆಯವರು ತಮ್ಮ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳು ರಸ್ತೆ ದಾಟಲು ಅನುಕೂಲವಾಗುವ ರೀತಿ ಎರಡೂ ಬದಿಯಲ್ಲಿನ ಶಾಲಾ ಕಟ್ಟಡಕ್ಕೆ ಸುಮಾರು 22 ಅಡಿಗಳ ಎತ್ತರದಲ್ಲಿ ಕಬ್ಬಿಣದ ಸಂಪರ್ಕ ಸೇತುವೆ ನಿರ್ಮಾಣ ಮಾಡಿಕೊಳ್ಳಲು ಅನುಮತಿ ಕೋರಿದ್ದು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಬನಶಂಕರಿ ಉಪವಿಭಾಗದವರು ದಿನಾಂಕ:18-08-2011ರಂದು ಸದರಿ ಸಂಸ್ಥೆಯ ಕೋರಿಕೆಯನ್ನು ತಿರಸ್ಕರಿಸಿರುವುದು ಕಂಡು ಬರುತ್ತದೆ. ಮೇಲ್ಮನವಿದಾರರು ಅವರ ಮನವಿಯನ್ನು ತಿರಸ್ಕರಿಸಿರುವಾಗ ಯಾವ ನಿಯಮಗಳಿಡಿ ತಿರಸ್ಕರಿಸಲಾಗಿದೆಂದು ನಮೂದಿಸಿರುವುದಿಲ್ಲವೆಂದು ತಿಳಿಸುತ್ತಾ ಮೇಲು ಸೇತುವೆ ನಿರ್ಮಿಸಿಕೊಳ್ಳಲು ಅನುಮತಿ ನೀಡುವಂತೆ ಕೋರಿಕೊಂಡಿರುತ್ತಾರೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ಸಮಿತಿಯು ಕೂಲಂಕಷವಾಗಿ ಪರಿಶೀಲಿಸಿದಾಗ ಕೆ.ಎಂ.ಸಿ.ಕಾಯ್ದೆಯಲ್ಲಿ ಸ್ವಂತ ಉಪಯೋಗಕ್ಕಾಗಿ ಮೇಲು ಸೇತುವೆ ನಿರ್ಮಿಸಿಕೊಳ್ಳಲು ಅವಕಾಶ ಕಲ್ಪಿಸಿಕೊಟ್ಟಿರುವುದಿಲ್ಲ. ಹಾಗೂ ಈ ವಿಷಯವು ಹೊಸ ವಿಷಯವಾಗಿದ್ದು ಕಾರ್ಯ ನೀತಿಯನ್ನು ರೂಪಿಸಿಕೊಳ್ಳಬೇಕಾಗಿರುತ್ತದೆ. ಹೊಸ ನೀತಿಯನ್ನು ಜಾರಿಗೆ ತರಬೇಕಾದಲ್ಲಿ ಹೊಸದಾಗಿ ಕಾನೂನನ್ನು ರೂಪಿಸಿಕೊಳ್ಳಬೇಕಾಗಿರುವುದು ಸರ್ಕಾರದ ವಿವೇಚನೆಗೆ ಬಿಟ್ಟ ವಿಷಯವಾಗಿರುತ್ತದೆ. ಆದ್ದರಿಂದ ಮೇಲ್ಮನವಿದಾರರು ತಮಗೆ ಮೇಲುಸೇತುವೆ ನಿರ್ಮಾಣ ಮಾಡಿಕೊಳ್ಳಲು ಅನುಮತಿ ಬೇಕಾದಲ್ಲಿ ಸರ್ಕಾರದ ಹಂತದಲ್ಲಿ ವ್ಯವಹರಿಸಿಕೊಳ್ಳಬಹುದಾಗಿರುತ್ತದೆಂದು ತೀರ್ಮಾನಿಸುತ್ತಾ, ಮೇಲ್ಮನವಿದಾರರು ಸಲ್ಲಿಸಿರುವ ಮೇಲ್ಮನವಿಯನ್ನು ವಜಾಗೊಳಿಸಲಾಯಿತು.

03.ವಿಷಯ:ಸಂಖ್ಯೆ:ಅಸ್ಥಾಸ/(ತೆ)/47/2011-12

ಎಂ.ರಾಜ ಎಂಬುವವರು ಸಹಾಯಕ ಕಂದಾಯ ಅಧಿಕಾರಿ (ಗೋವಿಂದ ರಾಜನಗರ)ರವರು ಸಂಖ್ಯೆ:547/50/1, 10ನೇ ಸಿ ಮುಖ್ಯರಸ್ತೆ, 6ನೇ ಬ್ಲಾಕ್, ಕೈಗಾರಿಕಾನಗರ, ರಾಜಾಜಿನಗರ, ಬೆಂಗಳೂರು ಈ ಸ್ವತ್ತಿಗೆ ಪ್ರಥಮ ಅಪೀಲು ಅಧಿಕಾರಿಗಳು ಕಂದಾಯ ಪರಿಷ್ಕರಿಸಿ ನೀಡಿರುವ ದಿನಾಂಕ:25-06-2011ರ ನೋಟೀಸಿನ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ಪಶ್ಚಿಮ)ರವರ ದಿನಾಂಕ:10-11-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಹಾಗೂ ಪ್ರತಿವಾದಿಗಳು ಹಾಜರಾಗಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಕಂದಾಯ ಇಲಾಖೆಯವರು ಕಂದಾಯವನ್ನು ನಿಗಧಿಪಡಿಸುವಾಗ ವಲಯವನ್ನು ಬದಲಾಯಿಸಿರುತ್ತಾರೆ. ಅದನ್ನು ಸರಿಪಡಿಸಿಕೊಡುವಂತೆ ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳಿಗೆ ಸದರಿ ಪ್ರದೇಶವು ಯಾವ ವಲಯಕ್ಕೆ ಬರುತ್ತದೆಂದು ಸಭೆಗೆ ತಿಳಿಸಲು ಸಾಧ್ಯವಾಗಿರುವುದಿಲ್ಲ. ಆದುದರಿಂದ ಪ್ರಕರಣಕ್ಕೆ ಸಂಬಂಧಿಸಿದಂತ ಪ್ರದೇಶವು ಯಾವ ವಲಯಕ್ಕೆ ಬರುತ್ತದೆಂದು ವರದಿಯನ್ನು ನೀಡುವುದು. ಆ ವರದಿಯನ್ನು ಪರಿಶೀಲಿಸಿದ ನಂತರ ಮುಂದಿನ ಕ್ರಮ ಕೈಗೊಳ್ಳುವುದೆಂದು ತೀರ್ಮಾನಿಸಿ ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

04.ವಿಷಯ:ಸಂಖ್ಯೆ:ಅಸ್ಥಾಸ/(ಖಾ)/50/2011-12

ಶ್ರೀ.ಪಿ.ವಿನ್ಸೆಂಟ್‌ರವರು ಸ್ವತ್ತಿನ ಸಂಖ್ಯೆ:13, 13/1, 13/2 ಮತ್ತು 13/3, 1ನೇ ಮುಖ್ಯರಸ್ತೆ, ಜಕ್ಕಸಂದ್ರ, ವಾರ್ಡ್-151ರ ಸ್ವತ್ತುಗಳ ಖಾತಾ ರದ್ದುಪಡಿಸಲು ಕೋರಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹ ಕಂದಾಯ ಅಧಿಕಾರಿ, ಕೋರಮಂಗಲ ಉಪ ವಲಯರವರು ದಿನಾಂಕ:24-10-2011ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಜಂಟಿ ಆಯುಕ್ತರು (ದಕ್ಷಿಣ)ರವರ ದಿನಾಂಕ:26-11-2011ರ ಟಿಪ್ಪಣಿ.

ಪ್ರಸ್ತಾವನೆ:-ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳಿಗೆ ಆಯುಕ್ತರ ಮುಖಾಂತರ ಹೊಸದಾಗಿ ನೋಟೀಸ್ ನೀಡಲು ಗೈರು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.

05.ವಿಷಯ:ಸಂಖ್ಯೆ:ಅಸ್ಥಾಸ/(ಖಾ)/53/2011-12

ಶ್ರೀ.ಎಸ್.ಉದಯರೆಡ್ಡಿ, ನಂ.100/2, 8ನೇ ಮುಖ್ಯರಸ್ತೆ, ದೊಮ್ಮಲೂರು, ಬೆಂಗಳೂರು-560 070 ಇವರು ದಿನಾಂಕ:14-03-2011ರಂದು ಸಮಿತಿಗೆ ಮನವಿ ಸಲ್ಲಿಸಿ ಸ್ವತ್ತಿನ ಸಂಖ್ಯೆ:35/1, 1ನೇ ಮುಖ್ಯರಸ್ತೆ, ಕಾಳಿದಾಸ ಮಾರ್ಗ, ಗಾಂಧಿನಗರ, ವಾರ್ಡ್-94ರ ಆಸ್ತಿಯು ಸದರಿಯವರ ತಂದೆಯವರಾದ ಶ್ರೀ.ಆರ್.ಶ್ರೀನಿವಾಸ ರೆಡ್ಡಿಯವರ ಹೆಸರಿನಲ್ಲಿದ್ದು, ಅವರ ತಂದೆಯವರು ಸದರಿ ಆಸ್ತಿಯನ್ನು 3 ಜನ ಗಂಡು ಮಕ್ಕಳಿಗೆ ಸಮವಾಗಿ ಹಂಚಿ ನೋಂದಾಯಿತ ವಿಲ್ ಯಾ ಮರಣ ಶಾಸನ ಪತ್ರ ಮಾಡಿಕೊಟ್ಟಿದ್ದು, ಸದರಿ ಆಸ್ತಿಯನ್ನು ಅವರ ತಮ್ಮಂದಿರಾದ ಶ್ರೀ.ಪುಲಿಕೇಶಿ ರೆಡ್ಡಿ ಮತ್ತು ಶ್ರೀ.ಹರಿಹರರೆಡ್ಡಿರವರು ಶ್ರೀ.ಎಸ್.ಉದಯರೆಡ್ಡಿಯವರ ಸಹಿ ಪಡೆಯದೆ ಪ್ರಮಾಣ ಪತ್ರವನ್ನು ಮಾಡಿಕೊಂಡು ಜಂಟಿ ಖಾತಾ ಮಾಡಿಕೊಳ್ಳಲು ಅವಣಿಸುತ್ತಿದ್ದು, ನನ್ನ ಸಹಿ ಇಲ್ಲದೆ ಯಾರ ಹೆಸರಿಗೂ ಜಂಟಿ ಖಾತಾವನ್ನು ವರ್ಗಾವಣೆ ಮಾಡದಂತೆ ಆದೇಶಿಸಲು ಕೋರಿ ಮನವಿ ನೀಡಿದ್ದು. ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಖಾತಾವನ್ನು ವರ್ಗಾವಣೆ ಮಾಡದೆ ಪೂರ್ಣ ಕಡತವನ್ನು ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿದ್ದರೂ ಸಹ ಸಮಿತಿಯ ಮುಂದೆ ಕಡತವನ್ನು ಮಂಡಿಸದೆ ಏಕಾ ಏಕಿ ಖಾತಾವನ್ನು ವರ್ಗಾವಣೆ ಮಾಡಿದ್ದು, ವರ್ಗಾವಣೆ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸಮಿತಿಯು ಸೂಚಿಸಿದ್ದು, ಸದರಿ ಅಧಿಕಾರಿಗಳಿಗೆ ಕಾರಣ ಕೇಳಿ ಪತ್ರ ನೀಡಿ ಅವರು ನೀಡಿರುವ ಸಮಜಾಯಿಷಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳು ಹಾಗೂ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಆಯುಕ್ತರವರ ದಿನಾಂಕ:24-02-2012ರ ಟಿಪ್ಪಣಿ.

**ಪ್ರಸ್ತಾವನೆ**:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ನಾನು ಖಾತಾವನ್ನು ವರ್ಗಾವಣೆ ಮಾಡಬೇಡಿ ಎಂದು ಅಪೀಲು ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿದ್ದರೂ ಸಹ ಪ್ರತಿವಾದಿಗಳು ಪ್ರಶ್ನಿತ ಸ್ವತ್ತಿನ ಖಾತಾವನ್ನು ವರ್ಗಾವಣೆ ಮಾಡಿರುತ್ತಾರೆ. ಆದುದರಿಂದ ವರ್ಗಾವಣೆ ಮಾಡಿರುವ ಖಾತಾವನ್ನು ರದ್ದುಪಡಿಸುವಂತೆ ಕೋರಿಕೊಂಡಿರುತ್ತಾರೆ. ಹಾಜರಿದ್ದ ಪ್ರತಿವಾದಿಗಳು ಈ ಬಗ್ಗೆ ಯಾವುದೇ ಮಾಹಿತಿಯನ್ನು ಸಮಿತಿಯ ಮುಂದೆ ವ್ಯಕ್ತ ಪಡಿಸಿರುವುದಿಲ್ಲ. ಪ್ರಕರಣವನ್ನು ಆದೇಶಕ್ಕಾಗಿ ಕಾಯ್ದಿರಿಸಿದೆ.

**ನಿರ್ಣಯ**:- ಮೇಲ್ಮನವಿದಾರರ ಹೇಳಿಕೆಗಳು ಹಾಗೂ ಕಡತವನ್ನು ಪರಿಶೀಲಿಸಲಾಯಿತು. ಮೇಲ್ಮನವಿದಾರರು ಖಾತಾವನ್ನು ವರ್ಗಾವಣೆ ಮಾಡದಂತೆ ಸಂಬಂಧಪಟ್ಟವರಿಗೆ ಆದೇಶಿಸಬೇಕೆಂದು ಸಮಿತಿಯ ಮುಂದೆ ದಿನಾಂಕ:14-03-2011ರಂದು

ಮನವಿ ಸಲ್ಲಿಸಿದ್ದರು. ಈ ಬಗ್ಗೆ ಸಮಿತಿಯು ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಖಾತಾವನ್ನು ವರ್ಗಾವಣೆ ಮಾಡದೆ ಪೂರ್ಣ ಕಡತವನ್ನು ಸಮಿತಿಯ ಮುಂದೆ ಮಂಡಿಸುವಂತೆ ಸೂಚಿಸಿದ್ದರೂ ಸಹ ಸಮಿತಿಯ ಮುಂದೆ ಕಡತವನ್ನು ಮಂಡಿಸದೆ ಏಕಾ ಏಕಿ ಖಾತಾವನ್ನು ವರ್ಗಾವಣೆ ಮಾಡಿದ್ದು, ವರ್ಗಾವಣೆ ಮಾಡಿರುವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲು ಸಮಿತಿಯು ಸೂಚಿಸಿದ್ದು, ಸದರಿ ಅಧಿಕಾರಿಗಳಿಗೆ ಕಾರಣ ಕೇಳಿ ಪತ್ರ ನೀಡಿ ಅವರು ನೀಡಿರುವ ಸಮಜಾಯಿಷಿಯ ಮೇಲೆ ಸೂಕ್ತ ಕ್ರಮ ಕೈಗೊಳ್ಳಲು ಕಡತ ಮಂಡಿಸಿರುವುದು ಕಂಡು ಬರುತ್ತದೆ.

ಮೇಲ್ಕಂಡ ಎಲ್ಲಾ ವಿಷಯಗಳನ್ನು ಪರಿಶೀಲಿಸಿದಾಗ ಕಂದಾಯ ಅಧಿಕಾರಿಯವರು ಸಮಿತಿಯ ಮೇಲ್ಮನವಿಗೆ ಯಾವುದೇ ಬೆಲೆ ನೀಡದೆ ಪ್ರಶ್ನಿತ ಸ್ವತ್ತಿಗೆ ಸಂಬಂಧಿಸಿದಂತೆ ಕಂದಾಯ ಬಾಕಿ ಇದ್ದರೂ ಸಹ ಅದನ್ನು ಗಣನೆಗೆ ತಗೆದುಕೊಳ್ಳದೆ, ಮೇಲಧಿಕಾರಿಗಳ ಸಹಿಯನ್ನೂ ಪಡೆಯದೆ ತಮ್ಮ ಇಷ್ಟಾನುಸಾರ ದಿನಾಂಕ:03-08-2011ರಂದು ಖಾತಾವನ್ನು ವರ್ಗಾವಣೆ ಮಾಡಲು ಕಾರಣಕರ್ತರಾಗಿರುವುದು ಸ್ಪಷ್ಟವಾಗಿರುತ್ತದೆ. ಇದರಿಂದಾಗಿ ಸದರಿ ಅಧಿಕಾರಿಯಿಂದ ನಗರ ಪಾಲಿಕೆಗೆ ಆರ್ಧಿಕ ನಷ್ಟವುಂಟಾಗಿರುವುದಲ್ಲದೆ ಪಾಲಿಕೆಯ ಕಾರ್ಯ ವೈಖರಿಯನ್ನು ಸಹ ಸಾರ್ವಜನಿಕರು ಪ್ರಶ್ನಿಸುವಂತಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಸದರಿ ವಿಷಯವನ್ನು ಸಮಿತಿಯು ಗಂಭೀರವಾಗಿ ಪರಿಗಣಿಸಿ ಸದರಿ ಅಧಿಕಾರಿಗೆ ಮತ್ತೊಮ್ಮೆ ಈ ರೀತಿಯ ಅವಘಡಗಳಿ ಅವಕಾಶ ನೀಡದಂತೆ ಆಯುಕ್ತರು ಎಚ್ಚರಿಕೆ ನೀಡುವುದು ಹಾಗೂ ದಿನಾಂಕ:03-08-2011ರಂದು ಪಶ್ನಿತ ಸ್ವತ್ತಿನ ಖಾತಾವನ್ನು ಶ್ರೀ.ಎಸ್.ಉದಯರೆಡ್ಡಿ ಮತ್ತು ಎಸ್.ಪುಲಕೇಶಿ ರೆಡ್ಡಿಯವರ ಹೆಸರಿಗೆ ವರ್ಗಾವಣೆ ಮಾಡಿರುವುದನ್ನು ರದ್ದು ಪಡಿಸಿ ಹಿಂದೆ ನೋಂದಾವಣೆಯಾಗಿದ್ದ ಶ್ರೀ.ಆರ್.ಶ್ರೀನಿವಾಸ ರೆಡ್ಡಿಯ ಹೆಸರಲ್ಲೇ ಮುಂದುವರೆಸುವುದೆಂದು ತೀರ್ಮಾನಿಸಲಾಯಿತು.

06.ವಿಷಯ:ಸಂಖ್ಯೆ:ಅಸ್ಥಾಸ/(ಕಾ)/54/2011-12

ಶ್ರೀಮತಿ.ಡಿ.ವಿಜಯಲಕ್ಷ್ಮಿ ಮತ್ತು ಶ್ರೀ.ಎನ್.ವೆಂಕಟೇಶ್, ನಂ.41, 1ನೇ ಮುಖ್ಯ ರಸ್ತೆ, 8ನೇ ಅಡ್ಡರಸ್ತೆ, ಗಿರಿನಗರ 2ನೇ ಹಂತ, ಬೆಂಗಳೂರು-85 ಇವರು ಸಹಾಯಕ ನಿರ್ದೇಶಕರು ನಗರ ಯೋಜನೆ (ದಕ್ಷಿಣ)ರವರು ದಿನಾಂಕ:30-11-2011ರಂದು ನಕ್ಷೆ ಮಂಜೂರಾತಿ ತಿರಸ್ಕರಿಸಿ ನೀಡಿರುವ ಹಿಂಬರಹದ ವಿರುದ್ಧ ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ಪ್ರಸ್ತಾವನೆ**:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಗೈರು ಹಾಜರಾಗಿರುತ್ತಾರೆ. ಪ್ರತಿವಾದಿಗಳು ಮೇಲ್ಮನವಿದಾರರಿಗೆ ನೋಟೀಸ್‌ನ್ನು ಜಾರಿ ಮಾಡಲು ಸಾಧ್ಯವಾಗಿರವುದಿಲ್ಲ. ಕಾರಣ ಅವರು ಕೊಟ್ಟಿರುವ ವಿಳಾಸವನ್ನು ಗುರುತಿಸಲು ಸಾಧ್ಯವಾಗಿರುವುದಿಲ್ಲ. ಆರ್.ಪಿ.ಎ.ಡಿ. ಮುಖಾಂತರ ನೋಟೀಸ್‌ನ್ನು ಜಾರಿ ಮಾಡಿರುತ್ತೇವೆಂದು ಸ್ವೀಕೃತಿಯನ್ನು ಸಮಿತಿಯ ಮುಮದೆ ನೀಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸಮಿತಿಯು ಮೇಲ್ಮನವಿದಾರರಿಗೆ ದಿನಾಂಕ:20-04-2012ರಂದು ಸಭೆಗೆ ಹಾಜರಗುವಂತೆ ಹೊಸದಾಗಿ ನೋಟೀಸ್ ಜಾರಿ ಮಾಡಿ ಸ್ವೀಕೃತಿಯನ್ನು ಸಲ್ಲಿಸುವುದೆಂದು ತಿಳಿಸುತ್ತಾ, ಮುಂದಿನ ದಿನಾಂಕಕ್ಕೆ ಪ್ರಕರಣವನ್ನು ಮುಂದೂಡಲಾಯಿತು.

07.ವಿಷಯ:ಸಂಖ್ಯೆ:ಅಸ್ಥಾಸ/(ತೆ)/55/2011-12

ಮಾಲೀಕರು ಮೆ॥ದುರ್ಗಾ ಎಂಟರ್ ಪ್ರೈಸಸ್, ನಂ.40 ಎಂ.ಜಿ.ರಸ್ತೆ, ಬೆಂಗಳೂರು ಇವರು 10 ವರ್ಷಗಳ ಹಿಂದೆ ಕಂದಾಯ ಅದಾಲತ್ ನಡೆಸಿ ಜಂಟಿ ಆಯುಕ್ತರು ಇದುವರೆವಿಗೂ ಯಾವುದೇ ಆದೇಶವನ್ನು ಹೊರಸಿಡಿರುವುದಿಲ್ಲ. ಕಂದಾಯ ನಿಯಮಗಳಂತೆ ನಾವು ಕಂದಾಯವನ್ನು ಪಾವತಿಸಿರುತ್ತೇವೆ. ಈ ಬಗ್ಗೆ ಸಾಕಷ್ಟು ಅರ್ಜಿಗಳನ್ನು ಸಹ ನೀಡಿರುತ್ತೇವೆ. ಆದರೂ ಸಹ ಯಾವುದೇ ನಡವಳಿಯನ್ನು ತೆಗೆದುಕೊಳ್ಳದೆ ಬೇಕಂತಲೇ ಪ್ರಕರಣವನ್ನು ವಿಲೇ ಇಟ್ಟಿರುತ್ತಾರೆ. ಆದುದರಿಂದ ತಾವು ಪರಿಶೀಲಿಸಿ ನ್ಯಾಯುತವಾದ ಆದೇಶವನ್ನು ಹೊರಡಿಸಬೇಕೆಂದು ಕೋರಿ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನಕ್ಕಾಗಿ ಮಂಡಿಸಿರುವ ಅಪರ ಆಯುಕ್ತರು (ಪೂರ್ವ)ರವರ ದಿನಾಂಕ:20-03-2012ರ ಟಿಪ್ಪಣಿ.

**ಪ್ರಸ್ತಾವನೆ**:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರು ಮತ್ತು ಪ್ರತಿವಾದಿಗಳು ಹಾಜರಿರುತ್ತಾರೆ. ಹಾಜರಿದ್ದ ಮೇಲ್ಮನವಿದಾರರು ಒಂದು ಬಾರಿ ಕಂದಾಯವನ್ನು ಸ್ವೀಕರಿಸಿದ ಮೇಲೆ ಸಹಾಯಕ ಕಂದಾಯ ಅಧಿಕಾರಿಯವರಿಗೆ ಕಂದಾಯ ಹೆಚ್ಚಿಸಲು ತೆರಿಗೆ ನಿಯಮ ರೂಲ್ 7ರಲ್ಲಿ ಅಧಿಕಾರವಿರುವುದಿಲ್ಲ. ಹಾಗೂ ಕೆ.ಎಂ.ಸಿ. ಕಾಯ್ದೆ ಕಲಂ 72ರಡಿಯಲ್ಲಿ ಯಾವುದೇ ನಿರ್ಣಯಗಳನ್ನು ಸರ್ಕಾರವು ರದ್ದುಗೊಳಿಸಬಹುದಾಗಿರುತ್ತದೆ ಅಥವಾ ಮಾರ್ಪಡಿಸಬಹುದಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಸಹಾಯಕ ಕಂದಾಯ ಅಧಿಕಾರಿಯೇ ಮಾರ್ಪಡಿಸಿ ನೋಟೀಸ್ ನೀಡಿರುವುದು ಸಮಂಜಸವಾಗಿರುವುದಿಲ್ಲ. ಹಾಗೂ ಈಗಾಗಲೇ ನಾನು ಎಸ್.ಎ.ಎಸ್.2000ರ ಪದ್ಧತಿಯಂತೆ ಕಂದಾಯವನ್ನು ಪಾವತಿಸಿಕೊಂಡಿರುತ್ತೇನೆ. ಆದ್ದರಿಂದ ಸಹಾಯಕ ಕಂದಾಯ ಅಧಿಕಾರಿಯವರು ನೀಡಿರುವ ನೋಟೀಸ್‌ಗಳನ್ನು ರದ್ದು ಪಡಿಸುವಂತೆ ಕೋರಿಕೊಂಡಿರುತ್ತಾರೆ.

ಸಭೆಯಲ್ಲಿ ಹಾಜರಿದ್ದ ಉಪ ಕಾನೂನು ಅಧಿಕಾರಿಗಳು ಸಹಾಯಕ ಕಂದಾಯ ಅಧಿಕಾರಿಯವರು ಮಾಡಿರುವ ಆದೇಶ ಸಮಂಜಸವಾಗಿರುತ್ತದೆ ಅದನ್ನೇ ಮುಂದುವರೆಸುವಂತೆ ಸಮಿತಿಯನ್ನು ಕೇಳಿಕೊಂಡಿರುತ್ತಾರೆ.

ಹಾಜರಿದ್ದ ಪ್ರತಿವಾದಿಗಳು ನೀಡಿರುವ ನೋಟೀಸ್‌ಗಳನ್ನು ಸ್ಥಿರೀಕರಿಸುವಂತೆ ಕೋರಿಕೊಂಡಿರುತ್ತಾರೆ.

**ನಿರ್ಣಯ**:- ಮೇಲ್ಮನವಿದಾರರು, ಪ್ರತಿವಾದಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಹೇಳಿಕೆಗಳು ಹಾಗೂ ಕಡತವನ್ನು ಪರಿಶೀಲಿಸಲಾಯಿತು. ಮೇಲ್ಮನವಿದಾರರ ಸ್ವತ್ತಿಗೆ ವಾರ್ಷಿಕ ಮೌಲ್ಯ ರೂ.3,51,000/-(ವಸತಿಯೇತರ)ಗಳನ್ನು

ದಿನಾಂಕ:31-03-1999ರವರೆಗೆ ಪಾವತಿಸಿರುವುದು ಕಂಡು ಬರುತ್ತದೆ. ದಿನಾಂಕ:01-04-1999ರಿಂದ ಜಾರಿಗೆ ಬರುವಂತೆ ಸದರಿ ವಾರ್ಷಿಕ ಮೌಲ್ಯವನ್ನು ರೂ.36,16,560/-(ವಸತಿಯೇತರ)ಗಳಿಗೆ ನಿಗಧಿಪಡಿಸಿ ದಿನಾಂಕ:08-12-1999 ನೋಟೀಸ್ ಜಾರಿ ಮಾಡಲಾಗಿರುತ್ತದೆ.

ಸದರಿ ನೋಟೀಸ್ ವಿರುದ್ಧ ಮೇಲ್ಮನವಿದಾರರು ನ್ಯಾಯಾಲಯದ ಮೋರೆರಿಹೋಗಿದ್ದು, ನ್ಯಾಯಾಲಯವು ಕಂದಾಯ ಪರಿಷ್ಕರಣೆಗೆ ಕಾರಣವನ್ನು ತಿಳಿಸಿಲ್ಲದಿರುವುದರಿಂದ ದಿನಾಂಕ:08-12-1999ರಂದು ಜಾರಿಗೊಳಿಸಿದ್ದ ವಿಶೇಷ ಸೂಚನಾ ಪತ್ರವನ್ನು ರದ್ದುಗೊಳಿಸಿರುವುದು ಕಂಡು ಬರುತ್ತದೆ. ನಂತರ ಮೇಲ್ಮನವಿದಾರರು ದಿನಾಂಕ:01-04-2000ರಿಂದ ಸ್ವಯಃ ಘೋಷಿತ ಆಸ್ತಿ ತೆರಿಗೆ ಪದ್ದತಿಯಡಿಯಲ್ಲಿ ಕಂದಾಯವನ್ನು ನಿಗಧಿಪಡಿಸಿಕೊಂಡು ಪಾವತಿಸಿಕೊಂಡಿರುತ್ತಾರೆ. ಆದರೆ ಪ್ರತಿವಾದಿಗಳು ಮತ್ತೆ ದಿನಾಂಕ:02-08-2001ರಂದು ಕಂದಾಯವನ್ನು ಪರಿಷ್ಕರಿಸಿರುವ ಬಗ್ಗೆ ವಿಶೇಷ ಸೂಚನಾ ಪತ್ರವನ್ನು ಜಾರಿ ಮಾಡಿದ್ದು, ಮೇಲ್ಮನವಿದಾರರು ಮತ್ತೊಮ್ಮೆ ನ್ಯಾಯಾಲಯದ ಮೊರೆ ಹೋಗಿದ್ದು, ನ್ಯಾಯಾಲಯವು ಕಂದಾಯ ಪರಿಷ್ಕರಿಸಿರುವ ಆದೇಶವನ್ನು ತಾತ್ಕಾಲಿಕವಾಗಿ ತಡೆಹಿಡಿದಿದ್ದು, ತದನಂತರ 2008ನೇ ಸಾಲಿನಲ್ಲಿ ದಾವೆಯನ್ನು ವಜಾ ಮಾಡಿರವುದು ಕಂಡು ಬರುತ್ತದೆ. ಈ ಬಗ್ಗೆ ಮೇಲ್ಮನವಿದಾರರಿಗೆ ನಗರ ಪಾಲಿಕೆಯು ದಿನಾಂಕ:21-02-2006ರಂದು ತೆರಿಗೆ ಅದಾಲತ್‌ನಲ್ಲಿ ನ್ಯಾಯಾಲಯದಲ್ಲಿ ದಾವೆ ಹೂಡಿರುವ ಪ್ರಕರಣಗಳನ್ನು ರಾಜಿ ಮೂಲಕ ಇತ್ಯರ್ಥಗೊಳಿಸಿಕೊಳ್ಳಬಹುದೆಂದು ಪತ್ರ ಬರೆದಿರುವುದು ಕಂಡು ಬರುತ್ತದೆ. ಅದರಂತೆ 2009ರವರೆವಿಗೂ ಹಲವಾರು ಬಾರಿ ಸಭೆಗಳನ್ನು ನಡೆಸಿದ್ದು ಅಂತಿಮವಾಗಿ ಯಾವುದೇ ನಡವಳಿಕೆಗಳನ್ನಾಗಲೀ, ನಿರ್ಣಯವನ್ನಾಗಲೀ ಅಥವಾ ಆದೇಶವನ್ನಾಗಲೀ ಹೊರಡಿಸಿರುವುದು ಕಂಡು ಬರುತ್ತಿಲ್ಲ. ಹಾಗೂ ಎಸ್.ಎ.ಎಸ್. 2000 ಪುಸ್ತಕದ ಪುಟ ಸಂಖ್ಯೆ:7ರಲ್ಲಿನ ಸಾಮಾನ್ಯ ನಿಬಂಧನೆಗಳು ಕಲಂ 3ರಂತೆ ಕಂದಾಯವನ್ನು ಪಾವತಿಸಿಕೊಂಡಿರುವುದು ಸ್ಪಷ್ಟವಾಗಿರುತ್ತದೆ.

ಮೇಲ್ಕಂಡ ಎಲ್ಲಾ ವಿಷಯಗಳನ್ನು ಅವಲೋಕಿಸಿದ ನಂತರ ಈ ಪ್ರಕರಣದಲ್ಲಿ ನಗರ ಪಾಲಿಕೆಯ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ವಿಳಂಭ ನೀತಿ ಅನುಸರಿಸಿರುವುದನ್ನು ಸಮಿತಿಯು ಗಂಭೀರವೆಂದು ಪರಿಗಣಿಸಿ, ಈ ಅವಘಡಕ್ಕೆ ಕಾರಣರಾದ ಅಧಿಕಾರಿಗಳನ್ನು ವಿಚಾರಣೆಗೆ ಒಳಪಡಿಸಿ ಸೂಕ್ತ ಶಿಸ್ತಿನ ಕ್ರಮ ಕೈಗೊಳ್ಳುವುದು. ಹಾಗೂ ಅಸ್ಸಸಾರ್ 76/ಪಿಆರ್ 124/99-2000/ಎಂ.ಆರ್.113/99-2000, ದಿನಾಂಕ:08-12-1999ರಂದು ಕಂದಾಯ ಪರಿಷ್ಕರಿಸಿ ನೀಡಿದ್ದ ವಿಶೇಷ ಸೂಚನಾ ಪತ್ರವನ್ನು ***ಘನ ನ್ಯಾಯಾಲಯವು ರದ್ದು ಪಡಿಸಿರುವುದರಿಂದ ಸದರಿ ವಿಶೇಷ ಸೂಚನಾ ಪತ್ರದ ಬಗ್ಗೆ ಮತ್ತೊಮ್ಮೆ ಪರಿಶೀಲಿಸುವ ಅವಶ್ಯಕತೆಯೇ ಕಂಡುಬರುವುದಿಲ್ಲ.*** ಹಾಗೂ ದಿನಾಂಕ:02-08-2001ರಂದು ಕಂದಾಯ ಪರಿಷ್ಕರಿಸಿ ನೀಡಿರುವ ವಿಶೇಷ ಸೂಚನಾ ಪತ್ರವು ಜಾರಿಗೆ ಬರುವ ಮೊದಲೇ ಎಸ್.ಎ.ಎಸ್. ಪದ್ದತಿಯನ್ನು ಜಾರಿಗೆ ತಂದಿದ್ದು, ಅದರಂತೆ ಮೇಲ್ಮನವಿದಾರರು ಎಸ್.ಎ.ಎಸ್. 2000 ಪುಸ್ತಕದ ಪುಟ ಸಂಖ್ಯೆ:7ರಲ್ಲಿನ ಸಾಮನ್ಯ ನಿಬಂಧನೆಗಳು ಕಲಂ 3ರಂತೆ ಕಂದಾಯವನ್ನು ಪಾವತಿಸಿಕೊಂಡಿರುವುದರಿಂದ ಕೆ.ಎಂ.ಸಿ.ಕಾಯ್ದೆ ಕಲಂ 72ರಡಿಯಲ್ಲಿ ಅದನ್ನು ಮಾರ್ಪಡಿಸುವ ಅಧಿಕಾರ ನಗರ ಪಾಲಿಕೆಗೆ ಇಲ್ಲದೇ ಇರುವುದನ್ನು ಮನಗಂಡು ಸಂಖ್ಯೆ:40-41, ಎಂ.ಜಿ.ರಸ್ತೆ, ಮೆ॥ದುರ್ಗಾ ಎಂಟರ್ ಪ್ರೈಸಸ್ ಈ ಸ್ವತ್ತಿನ ಕಂದಾಯ ಪರಿಷ್ಕರಿಸಿ ಅಸ್ಸಸಾರ್ 76/ಪಿಆರ್ 124/99-2000/ಎಂ.ಆರ್.113/99-2000, ದಿನಾಂಕ:02-08-2001ರಂದು ನೀಡಿರುವ ನೋಟೀಸ್‌ನ್ನು ರದ್ದುಪಡಿಸುತ್ತಾ, ಮೇಲ್ಮನವಿದಾರರು ಹಾಲಿ ಸ್ವಯಃಘೋಷಣಾ ಆಸ್ತಿ ತೆರಿಗೆ ಪದ್ಧತಿ-2000ರಡಿಯಲ್ಲಿ ಪಾವತಿಸಿಕೊಂಡಿರುವ ಕಂದಾಯವನ್ನೇ ಸ್ಥಿರೀಕರಿಸುವುದೆಂದು ತೀರ್ಮಾನಿಸಲಾಯಿತು.

<u>08.ವಿಷಯ:ಸಂಖ್ಯೆ:ಅಸ್ಥಾಸ/(ಖಾ)/56/2011-12</u>

ಶ್ರೀಮತಿ.ಲೀಲಾ ಮೋಸಸ್‌ರವರು ಜಂಟಿ ಆಯುಕ್ತರು (ದಕ್ಷಿಣ) ವಲಯರವರು ದಿನಾಂಕ:25-02-2012ರಂದು ಹೊರಡಿಸಿರುವ ಆದೇಶದ ವಿರುದ್ಧ ಸಮಿತಿಯ ಮುಂದೆ ಸಲ್ಲಿಸಿರುವ ಮೇಲ್ಮನವಿ ಬಗ್ಗೆ.

**ಪ್ರಸ್ತಾವನೆ**:- ಪ್ರಕರಣವನ್ನು ಕರೆಯಲಾಯಿತು. ಮೇಲ್ಮನವಿದಾರರ ಪರವಾಗಿ ಅವರ ವಕೀಲರು ಮತ್ತು ಜಿ.ಪಿ.ಎ. ಹೋಲ್ಡರ್ ಶ್ರೀ.ಜೇವಿಯರ್ ಹಾಜರಿರುತ್ತಾರೆ. ಪ್ರತಿವಾದಿಗಳು ಗೈರು ಹಾಜರಾಗಿರುತ್ತಾರೆ. ಮೇಲ್ಮನವಿದಾರರು ಲಿಖಿತ ಹೇಳಿಕೆಗಳನ್ನು ಕಛೇರಿಗೆ ಸಲ್ಲಿಸುವುದಾಗಿ ತಿಳಿಸಿರುತ್ತಾರೆ. ಆಯುಕ್ತರ ಮುಖಾಂತರ ಸಂಬಂಧಪಟ್ಟ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ನೀಡುವುದೆಂದು ತೀರ್ಮಾನಿಸಿ ಪ್ರಕರಣವನ್ನು ಮುಂದೂಡಲಾಯಿತು.

ಸಹಿ
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ.

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಅಪೀಲು ಸ್ಥಾಯಿ ಸಮಿತಿಯ ದಿನಾಂಕ:18-6-2012ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಪುಟ್ಟಮ್ಮ | ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ |
| 02 | ಬಿ.ಎಸ್.ಮಂಜುನಾಥ ರೆಡ್ಡಿ | ಸದಸ್ಯರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 03 | ಹೆಚ್.ಆರ್.ಕೃಷ್ಣಪ್ಪ | ಸದಸ್ಯರು | ಜಂಟಿ ಆಯುಕ್ತರು (ಜಾಹೀರಾತು) |
| 04 | ಜಿ.ಹೆಚ್.ರಾಮಚಂದ್ರ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ(ಪಶ್ಚಿಮ) |
| 05 | ಎಲ್.ರಮೇಶ್ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪಶ್ಚಿಮ) |
| 06 | ಸುಕಂದ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಗೋವಿಂದರಾಜನಗರ/ಕೋರಮಂಗಲ) |
| 07 | ಎಂ.ಮುನಿಸ್ವಾಮಿ | ಸದಸ್ಯರು | |
| 08 | ಜಿ.ವರಲಕ್ಷ್ಮಿ | ಸದಸ್ಯರು | |
| 09 | ಎನ್.ಜಯಪಾಲ | ಸದಸ್ಯರು | |
| 10 | ಲಾವಣ್ಯ ಗಣೇಶ್ ರೆಡ್ಡಿ | ಸದಸ್ಯರು | |
| 11 | ಆಶಾ ಸುರೇಶ್ | ಸದಸ್ಯರು | |

ಮಾನ್ಯ ಅಪೀಲು ಸ್ಥಾಯಿ ಸಮಿತಿ ಸದಸ್ಯರಾದ ಶ್ರೀ.ಹೆಚ್.ಆರ್.ಕೃಷ್ಣಪ್ಪ ರವರು ಅಧ್ಯಕ್ಷರ ಅನುಮತಿ ಮೇರೆಗೆ ಮಾತನಾಡುತ್ತಾ, ಅಪೀಲು ಸ್ಥಾಯಿ ಸಮಿತಿಯ ಅಧ್ಯಕ್ಷರಿಗೆ, ಸಮಿತಿಯ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತವನ್ನು ಕೋರಿದರು ಮತ್ತು ಸದಸ್ಯರಿಗೆ ಹಾಗೂ ಎಲ್ಲಾ ಅಧಿಕಾರಿಗಳಿಗೆ ತಮ್ಮ ಪರಿಚಯವನ್ನು ಮಾಡಿಕೊಳ್ಳಲು ತಿಳಿಸಿದರು.

ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಅಧಿಕಾರಿಗಳು ತಮ್ಮ ಪರಿಚಯವನ್ನು ಮಾಡಿಕೊಂಡರು.

ಮಾನ್ಯ ಸದಸ್ಯರಾದ ಶ್ರೀ.ಹೆಚ್.ಆರ್.ಕೃಷ್ಣಪ ಇವರು ಮಾತನಾಡುತ್ತಾ, ಮುಖ್ಯ ಅಭಿಯಂತರರು (ದಕ್ಷಿಣ), ಮುಖ್ಯ ಅಭಿಯಂತರರು ಬೊಮ್ಮನಹಳ್ಳಿ, ಅಪರ ಆಯುಕ್ತರು (ಯೋಜನೆ), ಅಪರ ಆಯುಕ್ತರು (ಕಲ್ಯಾಣ), ಪೂರ್ವ, ದಕ್ಷಿಣ ದಾಸರಹಳ್ಳಿ, ಯಲಹಂಕ ವಲಯದ ಆರೋಗ್ಯಾಧಿಕಾರಿಗಳು ಸಭೆಯಲ್ಲಿ ಹಾಜರಿಲ್ಲದ ಕಾರಣ, ಅವರ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

**ಸದಸ್ಯರು:** ಎಲ್ಲ ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡುತ್ತಾ, ತಮ್ಮ ವ್ಯಾಪ್ತಿಗೆ ಸಂಬಂಧಿಸಿದಂತೆ ಇರುವ ಸಮಸ್ಯೆಗಳ ಬಗ್ಗೆ, ಅಪೀಲುಗಳ ಬಗ್ಗೆ, ಆರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಬಾಕಿ ಇರುವ ಅಪೀಲು ಪ್ರಕರಣಗಳ ಬಗ್ಗೆ ಹಾಗೂ ಸಮಿತಿಯಿಂದ ಅದಕ್ಕೆ ಸಂಬಂಧಪಟ್ಟ ಪರಿಹಾರಕ್ಕೆ ಸಂಬಂಧಿಸಿದಂತೆ ತಮ್ಮ ಅಭಿಪ್ರಾಯವನ್ನು ತಿಳಿಸಲು ಸೂಚಿಸಿದರು.

**ಆರೋಗ್ಯಾಧಿಕಾರಿ (ಪಶ್ಚಿಮ ವಲಯ)** ರವರು ಮಾತನಾಡುತ್ತಾ, ಅಪೀಲು ಪ್ರಕರಣಕ್ಕೆ ಸಂಬಂಧಿಸಿದಂತೆ, ದಿವ್ಯ ಸಿಲ್ಕ್ ರವರಿಂದ ಪತ್ರ ಬಂದಿದ್ದು, ಪತ್ರದಲ್ಲಿ ಸ್ಥಾಯಿ ಸಮಿತಿಗೆ ಅಪೀಲು ಹಾಕಿದ್ದಾರೆ. ಆದರೆ, ಮೊದಲೇ ಅದು disconnect ಆಗಿದ್ದು, ತಮ್ಮಿಂದ hearing ಆದ ಮೇಲೆ ಜಂಟಿ ಆಯುಕ್ತರ jurisdiction ನಿಂದ ಅದನ್ನು cancel ಮಾಡಿದ್ದಾರೆ ಎಂದು ತಿಳಿಸಿದರು.

**ಮಹದೇವ ಪುರ ವಲಯದ ಅಭಿಯಂತರರು** ಅಪೀಲು ಸ್ಥಾಯಿ ಸಮಿತಿಗೆ ಸಂಬಂಧಿಸಿದಂತೆ ಯಾವುದೇ cases pending ಇಲ್ಲ ಎಂದು ತಿಳಿಸಿದರು.

__ಸದಸ್ಯರು:__ ಇವರು ಮಾತನಾಡುತ್ತಾ, ಕಾನೂನು ಅಧಿಕಾರಿಗೆ ಪ್ರಸ್ತುತ ಒಟ್ಟು ಎಷ್ಟು ಕೇಸ್‌ಗಳು ಇವೆ ಎಂದು ಕೇಳಿದರು.

**ಕಾನೂನು ಅಧಿಕಾರಿ** ರವರು ಮಾತನಾಡುತ್ತಾ, ನೇರವಾಗಿ ಎಲ್ಲಾ ಇಲಾಖೆಯಿಂದ ಅಪೀಲು ಹಾಕುತ್ತಾರೆ. ಬಿ.ಬಿ.ಎಂ.ಪಿ ಯ ಅಧಿಕಾರಿಗಳ ಪರವಾಗಿ ತಾವು ವಾದ ಮಾಡುವುದಾಗಿ ತಿಳಿಸಿದರು. ಕೆ.ಎ.ಟಿ division matter ಗೆ ಸಂಬಂಧಿಸಿದಂತೆ ಸಾವಿರ ಪ್ರಕರಣಗಳಿವೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ.ಹೆಚ್.ಆರ್.ಕೃಷ್ಣಪ್ಪ ಇವರು ಮಾತನಾಡುತ್ತಾ, ನೀವು ಯಾವ ವಕೀಲರನ್ನು ನೇಮಿಸುತ್ತೀರೋ ಅವರೇ ಕೇಸ್ ಮುಗಿಯುವವರೆಗೆ ಬರಬೇಕು. ಅದರಲ್ಲಿ ತಾವು ಇರಬೇಕು ಇದರ ಬಗ್ಗೆ ಲೀಗಲ್ ಸೆಲ್ ನಲ್ಲಿ ತಿಳಿಸಿ ಹಾಗೂ ತಾವು ಕೆ.ಎ.ಟಿಗೆ ಸಂಬಂಧಿಸಿದಂತೆ ಸಾವಿರ ಪ್ರಕರಣಗಳಿವೆ ಎಂದು ತಿಳಿಸಿದ್ದೀರಾ ಆ ಪ್ರಕರಣಗಳ ಸಂಪೂರ್ಣ ಮಾಹಿತಿಯನ್ನು ಸಮಿತಿಗೆ ನೀಡಬೇಕೆಂದು ತಿಳಿಸಿದರು.

ವಿಜಯನಗರದ ಕಂದಾಯ ಅಧಿಕಾರಿಗಳು ರೆವಿನ್ಯೂ ಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಿದರು.

ಮಾನ್ಯ ಸದಸ್ಯರಾದ ಶ್ರೀ. ಎನ್.ಜಯಪಾಲ ಇವರು ಮಾತನಾಡುತ್ತಾ, ಜಾಹೀರಾತಿಗೆ ಸಂಬಂಧಿಸಿದಂತೆ ಯಾವ ಕ್ರಮ ಕೈಗೊಂಡಿದ್ದೀರ ಎಂದು ಪ್ರಶ್ನಿಸಿದರು.

ಸಹ ಕಂದಾಯ ಅಧಿಕಾರಿ(ಜಾಹಿರಾತು) ಇವರು ಮಾತನಾಡುತ್ತಾ, ಜಾಹೀರಾತಿಗೆ ಸಂಬಂಧಿಸಿದಂತೆ 3 ಪ್ರಕರಣಗಳು dismiss ಆಗಿದ್ದು, ಜಡ್ಜ್‌ಮೆಂಟ್ ನಿರೀಕ್ಷಿಸುತ್ತಿರುವುದಾಗಿ ವಲಯಗಳಿಂದ ಮಾಹಿತಿ ಪಡೆದು ನೀಡುವುದಾಗಿ ತಿಳಿಸಿದರು.

__ಸದಸ್ಯರು:__ ಇವರು ಮಾತನಾಡುತ್ತಾ, ನಿಮ್ಮ ಬಳಿ ಮಾಹಿತಿ ಇರಬೇಕು, ಮುಂದಿನ ಸಭೆಗಳಲ್ಲಿ ಎಲ್ಲಾ ಮಾಹಿತಿಯೊಂದಿಗೆ ಸಭೆಗೆ ಹಾಜರಾಗಬೇಕೆಂದು ಅಧಿಕಾರಿಗಳಿಗೆ ತಿಳಿಸಿದರು ಹಾಗೂ ಕೆಲವು ಅನಧಿಕೃತವಾಗಿ ಜಾಹೀರಾತು ಫಲಕಗಳನ್ನು ಹಾಕಿದ್ದಾರೆ ಅದರ ಬಗ್ಗೆ ಯಾವ ಕ್ರಮ ತೆಗೆದುಕೊಂಡಿದ್ದೀರ ಹಾಗೂ ವಲಯಗಳಲ್ಲಿ ಯಾರ್ಯಾರು ಅನಧಿಕೃತವಾಗಿ ಜಾಹೀರಾತು ಫಲಕಗಳನ್ನು ಹಾಕಿದ್ದಾರೆ ಅವರ ಸಂಪೂರ್ಣ ಮಾಹಿತಿ ಹಾಗೂ ಅವರಿಂದ ಬಿ.ಬಿ.ಎಂ.ಪಿ ಗೆ ಎಷ್ಟು ತೆರಿಗೆ ಪಾವತಿಯಾಗಬೇಕು ಅದರ ಬಗ್ಗೆ ಮಾಹಿತಿ ನೀಡಬೇಕು ಎಂದು ತಿಳಿಸಿದರು.

**ಅಧಿಕಾರಿ**: ಇವರು ಮಾತನಾಡುತ್ತಾ, ಮಾಹಿತಿ ನೀಡುವುದಾಗಿ ತಿಳಿಸಿದರು.

__ಸದಸ್ಯರು:__ ಇವರು ಮಾತನಾಡುತ್ತಾ, ಕಂದಾಯ ಇಲಾಖೆಗೆ ಸಂಬಂಧಿಸಿದಂತೆ ರೆವಿನ್ಯೂ ಉತ್ತಮವಾಗಿದೆಯೇ ಇಲ್ಲವೇ, ತೆರಿಗೆಯನ್ನು ಸಂಗ್ರಹಿಸಲು ಯಾವ ಕ್ರಮ ತೆಗೆದುಕೊಂಡಿದ್ದೀರಾ ಪ್ರತಿ ವಲಯಕ್ಕೆ ಸಂಬಂಧಿಸಿದಂತೆ ಇರುವ ಸ್ವತ್ತುಗಳೆಷ್ಟು, ಆಯಾ ವಲಯಗಳಲ್ಲಿರುವ ಕಲ್ಯಾಣ ಮಂಟಪಗಳು, ಸಿನಿಮಾ ಮಂದಿಗಳು ಹಾಗೂ ಮಾಲ್ ಗಳಿಂದ ವಸೂಲಾಗುತ್ತಿರುವ ತೆರಿಗೆಯ ಮೊತ್ತ, ಬಾಕಿ ಇರುವ ತೆರಿಗೆಯ ಮೊತ್ತ, ವಸೂಲು ಮಾಡಲು ತೆಗೆದುಕೊಂಡಿರುವ ಕ್ರಮದ ಬಗ್ಗೆ ವಲಯದ ಕಂದಾಯಾಧಿಕಾರಿಗಳನ್ನು ಪ್ರಶ್ನಿಸಿದರು.

ಮಹದೇವ ಪುರ ವಲಯದ ಕಂದಾಯಾಧಿಕಾರಿ ಇವರು ಮಾತನಾಡುತ್ತಾ, 37 ಆಸ್ತಿಗಳ ಸರ್ವೆ ಆಗಬೇಕಾಗಿದ್ದು, ಬಾಕಿ ಇರುವ ಆಸ್ತಿ ತೆರಿಗೆ ಸಂಗ್ರಹವಾಗಬೇಕಾಗಿದ್ದು, ಅದಕ್ಕಾಗಿ ನೋಟಿಸ್ ನೀಡಿದ್ದೇವೆಂದು ತಿಳಿಸಿದರು.

**<u>ಸದಸ್ಯರು:</u>** ಇವರು ಮಾತನಾಡುತ್ತಾ, ಅಧಿಕಾರಿಗಳು ನೋಟೀಸ್ ನೀಡುತ್ತೀರಾ, ಆದರೆ, ಅದನ್ನು follow up ಮಾಡುವುದಿಲ್ಲ. ಇದರಿಂದ ತೆರಿಗೆ ಸಂಗ್ರಹವಾಗುವುದಿಲ್ಲ ಎಂದು ತಿಳಿಸಿದರು ಹಾಗೂ ಅಧಿಕಾರಿಗಳಿಗೆ ಏನಾದರೂ ತೊಂದರೆ ಇದ್ದರೆ ಸಮಿತಿಗೆ ತಿಳಿಸಬೇಕೆಂದು ಹಾಗೂ ಅದಕ್ಕೆ ಸಂಬಂಧಿಸಿದಂತೆ ಕ್ರಮಕೈಗೊಳ್ಳುವುದಾಗಿಯೂ ತಿಳಿಸಿದರು.

**ಬೊಮ್ಮನಹಳ್ಳಿ ವಲಯದ ಕಂದಾಯಾಧಿಕಾರಿ** ಇವರು ಮಾತನಾಡುತ್ತಾ, ಕಳೆದ ಸಾಲು ಹಾಗೂ ಈ ವರ್ಷದ ತೆರಿಗೆ ಸೇರಿ ರೂ.123 ಕೋಟಿ ಸಂಗ್ರಹವಾಗಬೇಕಾದ್ದು, ಅದರಲ್ಲಿ ರೂ. 116 ಕೋಟಿ ತೆರಿಗೆ ಸಂಗ್ರಹವಾಗಿದ್ದು, ಬಾಕಿ ತೆರಿಗೆ ವಸೂಲು ಮಾಡಬೇಕಾಗಿದ್ದು, ಅದಕ್ಕಾಗಿ ನೋಟೀಸ್ ನೀಡಿದ್ದೇವೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಜಿ.ಹೆಚ್.ರಾಮಚಂದ್ರ ಇವರು ಮಾತನಾಡುತ್ತಾ, ಈ ರೀತಿ ಒಂದು ವಲಯದಲ್ಲಿ ರೂ. 20, 30 ಕೋಟಿ ತೆರಿಗೆ ಉಳಿಸಿಕೊಂಡರೆ ಬಿ.ಬಿ.ಎಂ.ಪಿ ಹೇಗೆ ಅಭಿವೃದ್ಧಿ ಹೊಂದಬೇಕು? ಇದರ ಬಗ್ಗೆ ಶೀಘ್ರ ಕ್ರಮ ತೆಗೆದುಕೊಳ್ಳಿ ಎಂದು ಅಧಿಕಾರಿಗಳಿಗೆ ತಿಳಿಸಿದರು.

**ದಕ್ಷಿಣ ವಲಯದ ಕಂದಾಯಾಧಿಕಾರಿ** ಇವರು ಮಾತನಾಡುತ್ತಾ, ತಮ್ಮ ವಲಯದಲ್ಲಿ 45 ಸಾವಿರ ಪ್ರಾಪರ್ಟಿ ಇದ್ದು, ಕಳೆದ ಸಾಲಿನಲ್ಲಿ ರೂ.80 ಕೋಟಿ ತೆರಿಗೆ ಸಂಗ್ರಹವಾಗಿದ್ದು, ರೂ.5.00 ಕೋಟಿ ತೆರಿಗೆ ಬಾಕಿ ಇದೆ ಎಂದು ತಿಳಿಸಿದರು.

**ಪೂರ್ವ ವಲಯದ ಕಂದಾಯಾಧಿಕಾರಿ** ಇವರು ಮಾತನಾಡುತ್ತಾ, ಒಟ್ಟು 21 ಕೋಟಿ ಇದ್ದು, ಅದರಲ್ಲಿ ರೂ.19 ಕೋಟಿ ಸಂಗ್ರಹವಾಗಿದೆ ಎಂದು ತಿಳಿಸಿದರು.

**ಹೆಬ್ಬಾಳದ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ 29 ಕೋಟಿ ತೆರಿಗೆ ಸಂಗ್ರಹವಾಗಬೇಕಾಗಿದ್ದು, ಅದರಲ್ಲಿ 24 ಕೋಟಿ ಸಂಗ್ರಹವಾಗಿದ್ದು, ರೂ.6 ಕೋಟಿ ತೆರಿಗೆ ಬಾಕಿ ಇದ್ದು, ರೂ. 62,000 ಚೆಕ್ ಬೌನ್ಸ್ ಆಗಿದೆ ಎಂದು ತಿಳಿಸದಿರು.

**<u>ಸದಸ್ಯರು:</u>** ಇವರು ಮಾತನಾಡುತ್ತಾ, ಚೆಕ್ ಬೌನ್ಸ್ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಿದರು.

**ಪುಲಿಕೇಶಿನಗರದ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ತಮ್ಮ ವಲಯದಲ್ಲಿ ರೂ. 10 ಕೋಟಿ ತೆರಿಗೆ ಬಾಕಿ ಇದ್ದು, ಕೆ.ಜೆ.ಹಳ್ಳಿ. ಡಿ.ಜಿ. ಹಳ್ಳಿಗಳಲ್ಲಿ ಸಮಸ್ಯೆ ಇದೆ ಎಂದು ತಿಳಿಸಿದರು.

**ಶಾಂತಿನಗರ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ ರೂ. 80 ಕೋಟಿ ತೆರಿಗೆ ಸಂಗ್ರಹವಾಗಬೇಕಾಗಿದ್ದು, ಅದರಲ್ಲಿ 41 ಕೋಟಿ ಸಂಗ್ರಹವಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ. ಜಿ.ಹೆಚ್.ರಾಮಚಂದ್ರ ಇವರು ಮಾತನಾಡುತ್ತಾ, 50% ತೆರಿಗೆ ಸಂಗ್ರಹವಾಗಿಲ್ಲದ ಕಾರಣ ಶೀಘ್ರ ಕ್ರಮ ತೆಗೆದುಕೊಳ್ಳಲು ತಿಳಿಸಿದರು.

**ಪಶ್ಚಿಮ ವಲಯ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ ರೂ.53 ಕೋಟಿ ತೆರಿಗೆ ಸಂಗ್ರಹವಾಗಬೇಕಾಗಿದ್ದು, ಅದರಲ್ಲಿ ರೂ.42 ಕೋಟಿ ಸಂಗ್ರಹವಾಗಿದ್ದು, 11 ಕೋಟಿ ಬಾಕಿ ಇದ್ದು, ಗಾಂಧಿನಗರದ ಕೆಲವು ಕಡೆ ಸಮಸ್ಯೆಯಿದೆ ಎಂದು ತಿಳಿಸಿದರು ಹಾಗೂ ಮಂತ್ರಿಮಹಲ್ ವರ್ಷಕ್ಕೆ ರೂ. 6.50 ಕೋಟಿ ತೆರಿಗೆ ಪಾವತಿ ಮಾಡಬೇಕಾಗಿದ್ದು, ಆದರೆ ಅವರು ರೂ.3.50 ಕೋಟಿ ಮಾತ್ರ ಪಾವತಿ ಮಾಡಿದ್ದಾರೆ ಅವರಿಂದ ರೂ.7 ಕೋಟಿ ತೆರಿಗೆ ಬಾಕಿ ಬರಬೇಕು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ.ಹೆಚ್.ಆರ್.ಕೃಷ್ಣಪ ಇವರು ಮಾತನಾಡುತ್ತಾ, ಮಂತ್ರಿ ಮಹಲ್ ನವರು ರೂ.6.50 ಕೋಟಿ ತೆರಿಗೆ ಪಾವತಿಸಬೇಕಾಗಿದ್ದರೂ ರೂ.3.50 ಕೋಟಿ ತೆರಿಗೆ ಕಟ್ಟಿಸಿಕೊಳ್ಳಲು ಕಾರಣವೇನು ಎಂದು ಪ್ರಶ್ನಿಸಿದರು.

**ಮಲ್ಲೇಶ್ವರನ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ ರೂ.25 ಕೋಟಿ 45 ಲಕ್ಷ ತೆರಿಗೆ ಸಂಗ್ರಹವಾಗಿದ್ದು, ರೂ.4.50 ಕೋಟಿ ಬಾಕಿ ಇದೆ ಎಂದು ತಿಳಿಸಿದರು

**ರಾಜಾಜಿನಗರದ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ ರೂ.18 ಕೋಟಿ ಆಸ್ತಿ ತೆರಿಗೆಯಲ್ಲಿ ರೂ.15 ಕೋಟಿ ಆಸ್ತಿ ತೆರಿಗೆಯು ಸಂಗ್ರಹವಾಗಿದ್ದು, ರೂ.3.00 ಕೋಟಿ ಬಾಕಿ ತೆರಿಗೆ ಸಂಗ್ರಹವಾಗಬೇಕಾಗಿದೆ ಎಂದು ತಿಳಿಸಿದರು.

**ಗೋವಿಂದರಾಜನಗರ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ ರೂ.18 ಕೋಟಿ ತೆರಿಗೆ ಸಂಗ್ರಹವಾಗಬೇಕಾಗಿದ್ದು, ಅದರಲ್ಲಿ ರೂ.14 ಕೋಟಿ ತೆರಿಗೆ ಸಂಗ್ರಹವಾಗಿದ್ದು, ರೂ.4 ಕೋಟಿ ಬಾಕಿ ತೆರಿಗೆ ಸಂಗ್ರಹವಾಗಬೇಕಾಗಿದೆ ಎಂದು ತಿಳಿಸಿದರು.

**ದಾಸರಹಳ್ಳಿ ವಲಯದ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ ರೂ. 50 ಕೋಟಿ ಆಸ್ತಿ ತೆರಿಗೆಯು ಸಂಗ್ರಹವಾಗಬೇಕಾಗಿದ್ದು, ಅದರಲ್ಲಿ ರೂ.37 ಕೋಟಿ ಸಂಗ್ರಹವಾಗಿದ್ದು, ರೂ.13 ಕೋಟಿ ಬಾಕಿ ತೆರಿಗೆ ಸಂಗ್ರಹವಾಗಬೇಕಾಗಿದೆ ಎಂದು ತಿಳಿಸಿದರು.

**ಯಲಹಂಕ ವಲಯದ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ, ಕಳೆದ ಸಾಲಿನಲ್ಲಿ ರೂ.70 ಕೋಟಿ ಆಸ್ತಿ ತೆರಿಗೆಯು ಸಂಗ್ರಹವಾಗಬೇಕಾಗಿದ್ದು, ಅದರಲ್ಲಿ ರೂ.66 ಕೋಟಿ ಸಂಗ್ರಹವಾಗಿದ್ದು, ರೂ.4.00 ಕೋಟಿ ಬಾಕಿ ತೆರಿಗೆ ಸಂಗ್ರಹವಾಗಬೇಕಾಗಿದೆ ಎಂದು ತಿಳಿಸಿದರು.

**ರಾಜರಾಜೇಶ್ವರಿ ನಗರ ವಲಯದ ಕಂದಾಯಾಧಿಕಾರಿ**: ಇವರು ಮಾತನಾಡುತ್ತಾ: ಕಳೆದ ಸಾಲಿನಲ್ಲಿ ರೂ.75 ಕೋಟಿ ಆಸ್ತಿ ತೆರಿಗೆಯಲ್ಲಿ ರೂ.63 ಕೋಟಿ ಸಂಗ್ರಹವಾಗಿದ್ದು, ರೂ.12 ಕೋಟಿ ಬಾಕಿ ತೆರಿಗೆ ಸಂಗ್ರಹವಾಗಬೇಕಾಗಿದೆ ಎಂದು ತಿಳಿಸಿದರು ಹಾಗೂ ಹೆಚ್.ಎಂ.ಟಿ ಯಲ್ಲಿ ಸ್ವಲ್ಪ ಸಮಸ್ಯೆ ಇದ್ದು, ಅಲ್ಲಿನ ತೆರಿಗೆ ಸಂಗ್ರಹವಾದರೆ, ಆ ಸಮಸ್ಯೆಯು ಪರಿಹಾರವಾಗುತ್ತದೆ ಎಂದು ತಿಳಿಸಿದರು ಹಾಗೂ ಗೋಪಾಲನ್ ಮಾಲ್ ರವರು ರೂ.1 3/4 ಕೋಟಿ ತೆರಿಗೆಯನ್ನು 1 ವರ್ಷಕ್ಕೆ ಕಟ್ಟಬೇಕಾಗಿದ್ದು, ಅದಕ್ಕಾಗಿ ತಮಟೆ ಚಳುವಳಿ ಮಾಡುತ್ತಿರುವುದಾಗಿ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ.ಹೆಚ್.ಆರ್.ಕೃಷ್ಣಪ ಇವರು ಮಾತನಾಡುತ್ತಾ, ತಮಟೆ ಚಳುವಳಿ ನಡೆಸಬಾರದೆಂದಾದರೆ, ಘನತ್ಯಾಜ್ಯ ವನ್ನು ತೆಗೆದುಕೊಂಡು ಗೋಪಾಲನ್ ಮಾಲ್ ಮುಂದೆ ಹಾಕಿ ಎಂದು ತಿಳಿಸಿದರು ಹಾಗೂ ಕಟ್ಟಡದ ಮಾಲೀಕರಿಗೆ 1 ವಾರದ ಸಮಯ ನೀಡಿ ಅವರ ಹತ್ತಿರ ಮಾತನಾಡಲು ತಿಳಿಸಿದರು.

ಇಂದಿನ ಸಭೆಯನ್ನು ಪರಿಚಯ ಮಾಡಿಕೊಳ್ಳಲು ಕರೆದಿದ್ದು, ಮುಂದಿನ ಸಭೆಯಲ್ಲಿ ಎಲ್ಲಾ ಅಧಿಕಾರಿಗಳು ಈ ಕಳಗೆ ತಿಳಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲಾ ದಾಖಲೆಗಳನ್ನು ಪೂರ್ಣ ಮಾಹಿತಿಯೊಂದಿಗೆ ಸಭೆಗೆ ಹಾಜರಾಗುವಂತೆ ಸೂಚಿಸುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

1. ತಮ್ಮಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಬಾಕಿ ಇರುವ ಅಪೀಲುಗಳ ಪ್ರಕರಣಗಳೆಷ್ಟು ?
2. ಯಾವ ಯಾವ ಮಾದರಿಯ ಅಪೀಲುಗಳು ಬಾಕಿ ಇರುತ್ತವೆ.
3. ವಲಯಕ್ಕೆ ಸಂಬಂಧಿಸಿದಂತೆ ವಸೂಲಾಗಿರುವ ತೆರಿಗೆಯೆಷ್ಟು
4. ತೆರಿಗೆಯನ್ನು ಘೋಷಿಸಿಕೊಂಡಿಲ್ಲದ ಮಾಲೀಕರ ಮೇಲೆ ತೆಗೆದುಕೊಂಡಿರುವ ಕ್ರಮಗಳೇನು.

5. ಪ್ರತಿ ವಲಯಕ್ಕೊ ಸಂಬಂಧಿಸಿದಂತೆ ಇರುವ ಸ್ವತ್ತುಗಳೆಷ್ಟು, ವಾಣಿಜ್ಯ ಸ್ವತ್ತುಗಳೆಷ್ಟು.
6. ಅಯಾ ವಲಯದಲ್ಲಿರುವ ಕಲ್ಯಾಣ ಮಂಟಪಗಳೆಷ್ಟು, ಸಿನಿಮಾ ಮಂದಿರಗಳೆಷ್ಟು ಹಾಗೂ ಅವುಗಳಿಂದ ವಸೂಲಾಗುತ್ತಿರುವ ತೆರಿಗೆಯೆಷ್ಟು.
7. ಚೆಕ್‌ಗಳ ಮುಖಾಂತರ ಸ್ವತ್ತಿನ ತೆರಿಗೆಯನ್ನು ಪಾವತಿಸಿದಾಗ,ಬ್ಯಾಂಕಿಗೆ ಚೆಕ್‌ಗಳನ್ನು ಸಲ್ಲಿಸಿದಾಗ ಕೆಲವೊಂದು ಚೆಕ್‌ಗಳು ತಿರಸ್ಕೃತಗೊಂಡಿರುತ್ತವೆ.
8. ಅಂತಹ ಮಾಲೀಕರ ವಿರುದ್ಧ ಕೈಗೊಂಡಿರುವ ಕ್ರಮಗಳೇನು.
9. ಆಯಾ ವಲಯಕ್ಕೆ ಸಂಬಂಧಿಸಿದಂತೆ ವಸೂಲಾಗಿರುವ ತೆರಿಗೆಯ ಮೊತ್ತವೆಷ್ಟು, ಬಾಕಿ ಇರುವ ತೆರಿಗೆಯ ಮೊತ್ತವೆಷ್ಟು.ವಸೂಲು ಮಾಡಲು ತೆಗೆದುಕೊಂಡಿರುವ ಕ್ರಮಗಳೇನು?
10. ಕೆ.ಎ.ಟಿಯಲ್ಲಿರುವ ಪ್ರಕರಣಗಳೆಷ್ಟು.
11. ರಸ್ತೆ ಕಡಿತವನ್ನು ನೀಡಿರುವ ಪ್ರಕರಣಗಳೆಷ್ಟು ಅದರಲ್ಲಿ ವಸೂಲಾಗಿರುವ ಮೊತ್ತವೆಷ್ಟು, ಅನಧಿಕೃತವಾಗಿ ಮಾಡಿರುವ ಮಾಲೀಕರಿಗೆ ವಿಧಿಸಿರುವ ದಂಡವೆಷ್ಟು.
12. ಕೆ.ಎ.ಟಿಯಲ್ಲಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ರಸ್ತೆ ಕಡಿತಕ್ಕೆ ಅನುಮತಿ ನೀಡಲಾಗಿರುತ್ತದೆಯೇ.
13. ಅರೋಗ್ಯ ಇಲಾಖೆಗೆ ಸಂಬಂಧಿಸಿದಂತೆ ಬಾಕಿ ಇರುವ ಅಪೀಲು ಪ್ರಕರಣಗಳೆಷ್ಟು.
14. ನನಗೆ ಮಾಹಿತಿ ಬಂದಿರುವ ಪ್ರಕಾರ ಅರೋಗ್ಯ ಇಲಾಖೆಯಲ್ಲಿ ಹೊಸ ಪರವಾನಗಿ ಅಥವಾ ನವೀಕರಣಕ್ಕಾಗಿ ಅರ್ಜಿಯನ್ನು ಸಲ್ಲಿಸಿದಾ ಸ್ವೀಕೃತಿಯನ್ನು ನೀಡುತ್ತಿರುವುದಿಲ್ಲ ಕಾರಣವೇನು?
15. ಪರವಾನಗಿಗಾಗಿ ಹಣವನ್ನು ಸ್ವೀಕರಿಸಿದ್ದರೂ ಸಹ ರಶೀದಿಯನ್ನು ನೀಡುತ್ತಿಲ್ಲ ಕಾರಣವೇನು?
16. ರಿಟ್ ಅರ್ಜಿ ಸಂಖ್ಯೆ:5954/2011ರಂತೆ ಇದುವರೆವಿಗೂ ಯಾವ ಕ್ರಮ ಕೈಗೊಳ್ಳಲಾಗಿರುತ್ತದೆ ವಿವರವನ್ನು ಒದಗಿಸುವುದು.
17. ಜಾಹೀರಾತಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಷ್ಟು ವಿಧವಾದ ಜಾಹೀರಾತುಗಳನ್ನು ಅಳವಡಿಸಲಾಗಿರುತ್ತದೆ, ಅನಧಿಕೃತವಾಗಿ,ಪ್ರದರ್ಶಿಸಿರುವ ಜಾಹೀರಾತುಗಳೆಷ್ಟು. ನ್ಯಾಯಾಲಯದಲ್ಲಿರುವ ಪ್ರಕರಣಗಳೆಷ್ಟು ಪೂರ್ಣ ವಿವರಗಳನ್ನು ಒದಗಿಸುವುದು.
18. ನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಎಷ್ಟು ಬಸ್ ತಂಗುದಾಣಗಳನ್ನು ನಿರ್ಮಿಸಲಾಗಿರುತ್ತದೆ, ಅನಧಿಕೃತ ಬಸ್ ತಂಗುದಾಣಗಳ ಮೇಲೆ ಅಳವಡಿಸಿರುವ ಜಾಹೀರಾತಿಗಳ ವಿವರ ಮತ್ತು ಬಸ್ ತಂಗುದಾಣಗಳು ಇರುವ ವಿವರಗಳನ್ನು ಒದಗಿಸುವುದು.

ಅಧ್ಯಕ್ಷರು

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**

**ಆಪೀಲು ಸ್ಥಾಯಿ ಸಮಿತಿಯ ದಿನಾಂಕ:22-6-2012ರಂದು ನಡೆದ ಸಭೆಯ ನಡವಳಿಗಳು**

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಪುಟ್ಟಮ್ಮ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಬಿ.ಎಸ್.ಮಂಜುನಾಥ ರೆಡ್ಡಿ | ಸದಸ್ಯರು | ಆರೋಗ್ಯಾಧಿಕಾರಿಗಳು(ಪೂರ್ವ)(ದಕ್ಷಿಣ) |
| 03 | ಹೆಚ್.ಆರ್.ಕೃಷ್ಣಪ್ಪ | ಸದಸ್ಯರು | ಸಹಾಯಕ ನಿರ್ದೇಶಕರು, ನಗರಯೋಜನೆ (ದಕ್ಷಿಣ) |
| 04 | ಜಿ.ಹೆಚ್.ರಾಮಚಂದ್ರ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪಶ್ಚಿಮ) |
| 05 | ಎಲ್.ರಮೇಶ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿಗಳು ಜೆ.ಭಿ.ನಗರ/ ಕೋರಮಂಗಲ ಗಾಂಧಿನಗರ/ಯಶವಂತಪುರ |
| 06 | ಸುಕಂದ | ಸದಸ್ಯರು | ಹಿರಿಯ ಅರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ:43 |
| 07 | ಎಂ.ಮುನಿಸ್ವಾಮಿ | ಸದಸ್ಯರು | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಎಂ.ಪಿ.ಡಿ) |
| 08 | ಜಿ.ವರಲಕ್ಷ್ಮಿ | ಸದಸ್ಯರು | |
| 09 | ಎನ್.ಜಯಪಾಲ | ಸದಸ್ಯರು | |
| 10 | ಲಾವಣ್ಯ ಗಣೇಶ್ ರೆಡ್ಡಿ | ಸದಸ್ಯರು | |
| 11 | ಆಶಾ ಸುರೇಶ್ | ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)

**ವಿಷಯ:ಸಂಖ್ಯೆ:ಅಸ್ಥಾಸ(ಖಾ)/50/2011-12** ಜಂಟಿ ಅಯುಕ್ತರು(ದಕ್ಷಿಣ) ರವರ ಟಿಪ್ಪಣಿ ಸಂಖ್ಯೆ:ಡಿಎ/ ಜಂ.ಅ.(ದ) ಪಿಆರ್/6211/11-12 ದಿನಾಂಕ; 26-11-2011ಲ್ಲಿ, ಸಹ ಕಂದಾಯಾಧಿಕಾರಿ(ಕೋರಮಂಗಲ) ವಲಯದ ವಾರ್ಡ್ ನಂ-151/68- ಕೋರಮಂಗಲ,ಬೆಂಗಳೂರು.ಸ್ವತ್ತಿನ ಸಂಖ್ಯೆ:13/1,13/2 ಮತ್ತು 13/3, 1ನೇ ಮುಖ್ಯರಸ್ತೆ,ಜಕ್ಕಸಂದ್ರದ ಈ ಸ್ವತ್ತಿನ ಪೂರಕ ಟಿಪ್ಪಣಿ.

ಶ್ರೀ.ಪಿ.ವಿನ್ಸೆಂಟ್ ರವರು ಖಾತಾ ನೊಂದಾಯಿಸಿರುವ ಸ್ವತ್ತಿಗೆ ಅರ್ಜಿದಾರರುಗಳು ಈ ಮೊದಲೇ ಕ್ರಯ ಪತ್ರವನ್ನು ಪಡೆದಿದ್ದು,ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು, ನ್ಯಾಯಾಲಯದ ದಾವೆ ಸಂಖ್ಯೆ: 6545/95, 6546/95 ಮತ್ತು 6547/95 ಕ್ಕೆ ಅರ್ಜಿದಾರರ ಪರವಾಗಿ ದಿನಾಂಕ:3-5-2005 ರಂದು ಡಿಕ್ರಿಯಾಗಿರುತ್ತದೆ. ಸದರಿ ಸ್ವತ್ತಿಗೆ ಅರ್ಜಿದಾರರುಗಳು ಆಕ್ಷೇಪಣೆಯನ್ನು ಸಲ್ಲಿಸಿ, ಖಾತಾ ರದ್ದು ಪಡಿಸಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಸದರಿ ಕಡತವನ್ನು ಪರಿಶೀಸಲಾಗಿ, ಜಂಟಿ ಅಯುಕ್ತರು(ಪೂರ್ವ) ಕಂಡಿಕೆ 49ರ ಕಡತದ ಪುಟ ಸಂಖ್ಯೆ:202 ರಿಂದ 205 ಕೆಎಂಸಿ ಕಾಯಿದೆ 114(ಎ) ಪ್ರಕಾರ ಸದರಿರವರ ಹಾಗೂ ಅರ್ಜಿದಾರರುಗಳನ್ನು ವಿಚಾರಣೆ ನಡಿಸಿ,ಸದರಿ ಸ್ವತ್ತಿನ ನ್ಯಾಯಾಲಯದ ಡಿಕ್ರಿಯ ಆದೇಶದನ್ವಯ ಖಾತೆಯನ್ನು ರದ್ದುಪಡಿಸಿ ತೀರ್ಮಾನ ಮಾಡಿರುತ್ತದೆ.

ಈ ಸಂಬಂಧ ಮಂಜೂರಾತಿ ನಕ್ಷೆಯನ್ನು ಜಂಟಿ ಅಯುಕ್ತರು(ಪೂರ್ವ) ರವರು ದಿನಾಂಕ:26–12–2005 ರಂದು ರದ್ದುಪಡಿಸಿರುತ್ತಾರೆ. ಪುಟ ಸಂಖ್ಯೆ:104ರಲ್ಲಿ ಅಡಕಗೊಳಿಸಿದೆ. ಇದರ ವಿರುದ್ದ ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿ ಡಬ್ಲ್ಯೂಪಿ ನಂ–1797/2006ರ ರೀತ್ಯಾ ದಿನಾಂಕ26–12–2005ರ ಆದೇಶವನ್ನು ಮಾರ್ಪಾಡುಗೊಳಿಸಿ ಪುನರ್ ಪರಿಶೀಲಿಸಲು ಆದೇಶಿಸಿರುತ್ತಾರೆ. ಈ ಬಗ್ಗೆ ಅರ್ಜಿದಾರರಿಗೆ ಜಂಟಿ ಅಯುಕ್ತರು(ಪೂರ್ವ) ರವರಿಂದ ದಿನಾಂಕ: 31–3–2006 ರಂದು ಪತ್ರದ ಮೂಲಕ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗಿದೆ ಎಂದು ಅರ್ಜಿದಾರರಿಗೆ ತಿಳಿಯಪಡಿಸಲಾಗಿರುತ್ತದೆ.(ಪುಟ ಸಂಖ್ಯೆ 164)

ಅರ್ಜಿದಾರರುಗಳಾದ ಶ್ರೀಮತಿ.ಕಸ್ತೂರು, ಶ್ರೀ.ಷಣ್ಮುಗಂ ಮತ್ತು ಶ್ರೀ.ವಿ.ಸುಬ್ಬರಾಯನ್ ರವರುಗಳ ಹೆಸರಿಗೆ ನ್ಯಾಯಾಲಯದ ಡಿಕ್ರಿ ಆದೇಶದಂತೆ ಖಾತಾ ನೊಂದಾಯಿಸಲಾಗಿರುತ್ತದೆ. ಈಗ ಶ್ರೀ.ಪಿ.ವಿನ್ಸೆಂಟ್ ರವರಿಗೆ ನೊಂದಾಯಿಸಿರುವ ಒಟ್ಟು ಅಳತೆ 20667 ಚದರ ಅಡಿಗಳಲ್ಲಿ 13812 ಚದರ ಅಡಿ ಕಳೆದು ಉಳಿದ 6855 ಚದರ ಅಡಿ ಅಳತೆಯ ಹಾಲಿ ಖಾತೆದಾರರ ಹೆಸರಿನಲ್ಲಿ ಮುಂದುವರೆಸಲಾಗಿ–ರುವುದು ಎಂಬುದಾಗಿ ತಿಳಿವಳಿಕೆ ಪತ್ರವನ್ನು ನೀಡಲಾಗಿರುತ್ತದೆ. ಸದರಿ ತಿಳುವಳಿಕೆ ಪತ್ರವು ಅಂಚೆ ರವಾನೆಯ ಮೂಲಕ ಸದರಿ ಕಛೇರಿಗೆ ಹಿಂದುರಿಗಿರುತ್ತದೆ. ಶ್ರೀ.ಪಿ.ವಿನ್ಸೆಂಟ್ ರವರು ನ್ಯಾಯಾಲಯದಲ್ಲಿ 7766/2006ರ ಅದೇಶವು ವಜಾಗೊಂಡಿರುತ್ತದೆ. ವಜಾಗೊಂಡಿರುವ ಆದೇಶವನ್ನು ನಗರ ಪಾಲಿಕೆ ವಕೀಲರು ಪತ್ರದ ಮೂಲಕ ತಿಳಿಸಿರುತ್ತಾರೆ. ಮತ್ತೊಮ್ಮೆ ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಡಬ್ಲ್ಯೂಪಿ ನಂ–16249/2006 ದಿನಾಂಕ:31–8–2010. ಇತರೆ ಆದೇಶದನ್ವಯ ಪಕ್ಷಕಾರರು ತಮ್ಮ ವಿವಾದವನ್ನು ಸಕ್ಷಮ ಸಿವಿಲ್ ನ್ಯಾಯಾಲಯದ ಮುಂದೆ ಇತ್ಯರ್ಥ ಪಡಿಸಿಕೊಳ್ಳದ ಹೊರತು ತಮ್ಮ ಮನವಿಯನ್ನು ಪರಿಗಣಿಸಲು ಸಾಧ್ಯ ವಿಲ್ಲವೆಂದು ಅಭಿಪ್ರಾಯ ನೀಡಿರುವ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ತೀರ್ಪಿನೊಂದಿಗೆ ಸಂಪರ್ಕಿಸಲು ತಿಳಿಯಪಡಿಸಿದ್ದು, ಇದರ ವಿರುದ್ದವಾಗಿ ಅಪೀಲು ಸ್ಥಾಯಿ ಸಮಿತಿ ಮುಂದೆ ಮೇಲ್ಮನವಿ ಸಲ್ಲಿಸಿರುವುದರಿಂದ ಸಂಪೂರ್ಣ ಟಿಪ್ಪಣಿಯನ್ನು ತಮ್ಮ ಅವಗಾಹನೆಗೆ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಿಯಾಗಿದ್ದು ಪ್ರತಿವಾದಿಗಳು ಹಾಜರಾಗಿರುತ್ತಾರೆ ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ/(ಕಾ)/54/2011-12** ಜಂಟಿ ಅಯುಕ್ತರು(ದಕ್ಷಿಣ) ರವರ ಟಿಪ್ಪಣಿ ರೀತ್ಯಾ ಶ್ರೀಮತಿ.ಡಿ.ವಿಜಯಲಕ್ಷ್ಮಿ ಮತ್ತು ಶ್ರೀ.ಎನ್.ವೆಂಕಟೇಶ್ ರವರು ದಿನಾಂಕ:2–2–2012 ರಂದು ಆಪೀಲುಗಳ ಸ್ಥಾಯಿ ಸಮಿತಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರಿಗೆ ಮೇಲ್ಮನವಿ ಸಲ್ಲಿಸಿ, ಸ್ವತ್ತಿನ ಸಂಖ್ಯೆ:1370(ಹಳೇ ನಂ:1174), 4ನೇ ಎ ಮೈನ್,ಗಿರಿನಗರ 1ನೇ ಹಂತ, ಬೆಂಗಳೂರು ಇಲ್ಲಿನ ಸ್ವತ್ತಿಗೆ ಸಂಬಂಧಿಸಿದಂತೆ, ನಕ್ಷೆ, ಮಂಜೂರಾತಿಯನ್ನು ತಿರಸ್ಕರಿಸಿ ಸಹಾಯಕ ನಿರ್ದೇಶಕರು ನಗರ ಯೋಜನೆ (ದಕ್ಷಿಣ) ರವರು ದಿನಾಂಕ: 31–11–2011 ರಂದು ನೀಡಿರುವ ಹಿಂಬರಹವನ್ನು ರದ್ದುಪಡಿಸುವಂತೆಯೂ ಹಾಗೂ ಸದರಿ ,ಸ್ವತ್ತಿಗೆ ನಕ್ಷೆ ಮಂಜೂರಾತಿ ನೀಡುವಂತೆ, ಸಹಾಯಕ ನಿರ್ದೇಶಕರು ನಗರ ಯೋಜನೆ (ದಕ್ಷಿಣ)ರವರಿಗೆ ನಿರ್ದೇಶಿಸುವಂತೆ ಕೋರಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಅದರಂತೆ,ಅಧ್ಯಕ್ಷರು, ಆಪೀಲುಗಳ ಸ್ಥಾಯಿ ಸಮಿತಿ ರವರು ದಿನಾಂಕ:6–3–2012 ರಲ್ಲಿ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿವರವಾದ ವರದಿಯನ್ನು ಸಲ್ಲಿಸುವಂತೆ ಸಂಬಂಧಪಟ್ಟವರಿಗೆ ಆದೇಶಿಸುವಂತೆ ಕೋರಿ ಅಯುಕ್ತರು ರವರಿಗೆ ಪತ್ರ ಬರೆದಿರುತ್ತಾರೆ. ಅದರಂತೆ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವಿವರವಾದ ಟಿಪ್ಪಣಿಯನ್ನು ಈ ಕೆಳಕಂಡಂತೆ ಸಲ್ಲಿಸಿದೆ.

ಸ್ವತ್ತಿನ ಸಂಖ್ಯೆ:1370(ಬಿ), (ಹಳೇ ನಂ: 1174), 4ನೇ ಎ ಮ್ಯೆನ್ ಗಿರಿನಗರ 1ನೇ ಹಂತ, ಬೆಂಗಳೂರು ಗೆ ಸಂಬಂಧಿಸಿದಂತೆ ನಕ್ಷೆ ಮಂಜೂರಾತಿ ಕೋರಿ ಶ್ರೀ.ಎನ್.ಕೃಷ್ಣರೆಡ್ಡಿ ರವರು ದಿನಾಂಕ:17-11-2011 ರಂದು ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅದರಂತೆ ಪರಿಶೀಲಿಸಲಾಗಿ,ಸದರಿ ಸ್ವತ್ತು ಗಿರಿನಗರ 2ನೇ ಫೇಸ್‌ನಲ್ಲಿ ಬರುವುದು ಕಂಡುಬಂದಿದ್ದು ಸದರಿ ಗಿರಿನಗರ 2ನೇ ಫೇಸ್‌ನ ಲೇಔಟ್ ನಕ್ಷೆಯ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದಿಂದ ಅನುಮೋದನೆಯಾಗಿಲ್ಲದೇ ಇರುವುದು ಕಂಡುಬಂದಿದ್ದು, ಈ ಬಗ್ಗೆ ಯೋಜನೆ ಸದಸ್ಯರು ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ ರವರು ದಿನಾಂಕ:11-2-2009ರ ಪತ್ರದಲ್ಲಿ ವಿಶ್ವಭಾರತಿ ಗೃಹ ನಿರ್ಮಾಣ ಸಂಘ(ರಿ) ರವರ ಪರವಾಗಿ ಫೇಸ್-1 ವಸತಿ ಬಡಾವಣೆಗೆ ಮಾತ್ರ ನಕ್ಷೆ ಅನುಮೋದನೆಯಾಗಿದ್ದು ಉಳಿದಂತೆ ಫೇಸ್-2, ಫೇಸ್-3, ಮತ್ತು ಫೇಸ್-4 ಬಡಾವಣೆಗಳ ನಕ್ಷೆಗಳು, ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಅದ್ದರಿಂದ ಶ್ರೀ.ಎನ್.ಕೃಷ್ಣರೆಡ್ಡಿ ರವರ ಸ್ವತ್ತು ಫೇಸ್-2ರಲ್ಲಿ ಬರುತ್ತಿರುವುದು ಕಂಡುಬಂದಿದ್ದರಿಂದ ಸದರಿ ಸ್ವತ್ತಿಗೆ ಕಟ್ಟಡ ನಕ್ಷಗೆ ಅನುಮೋದನೆ ನೀಡಲು ಬರುವುದಿಲ್ಲವೆಂದು ದಿನಾಂಕ:30-11-2011ರಂದು ಈ ಕಛೇರಿಯಿಂದ ಹಿಂಬರಹ ನೀಡಲಾಗಿತ್ತು.

ಅದರೆ ಸದರಿ ಸ್ವತ್ತಿಗೆ ಡಿಸಿ(ದ)/1730/05-06 ದಿನಾಂಕ:5-4-2006ರಲ್ಲಿ ಸಹಾಯಕ ನಿರ್ದೇಶಕರು ನಗರ ಯೋಜನೆ (ದಕ್ಷಿಣ)ರವರ ಕಛೇರಿಯಿಂದ ನಕ್ಷೆ ಮಂಜೂರಾಗಿದ್ದು,ಸದರಿ ನಕ್ಷೆಯ ಅವಧಿಯ ದಿನಾಂಕ:17-11-2011 ರಂದು ಶ್ರೀ.ಎನ್.ಕೃಷ್ಣರೆಡ್ಡಿ ರವರು ಸಲ್ಲಿಸಿರುವ ಅರ್ಜಿಯನ್ನು ತಿರಸ್ಕರಿಸುವುದು ತಪ್ಪೆಂದು ಅರ್ಜಿದಾರರು ವಾದ ಮಂಡಿಸಿರುತ್ತಾರೆ. ಆದರೆ ಸದರಿ ಸ್ವತ್ತಿಗೆ ವಿಶ್ವಭಾರತಿ ಗೃಹ ನಿರ್ಮಾಣ ಸಂಘ(ರಿ) ರವರ ಫೇಸ್-2, ಲೇಔಟ್‌ಗೆ ಮಂಜೂರಾತಿ ನೀಡಲಾಗಿರುವುದಿಲ್ಲವೆಂದು ಯೋಜನಾ ಸದಸ್ಯರು,

ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ ರವರು ದಿನಾಂಕ:11-2-2009 ರಲ್ಲಿ ಪತ್ರ ಬರೆದಿರುವುದರಿಂದ ದಿನಾಂಕ:17-11-2011ರ ಶ್ರೀ.ಎನ್.ಕೃಷ್ಣರೆಡ್ಡಿ ರವರ ನಕ್ಷೆ ಮಂಜೂರಾತಿ ಅರ್ಜಿಯನ್ನು ತಿರಸ್ಕರಿಸ ಲಾಗಿರುತ್ತದೆ.

ಅದರೆ ಅರ್ಜಿದಾರರು ಶ್ರೀಮತಿ.ಡಿ.ವಿಜಯಲಕ್ಷ್ಮಿ ಮತ್ತು ಶ್ರೀ.ಎನ್.ವೆಂಕಟೇಶ್ ರವರು ಶ್ರೀ.ಎನ್.ಕೃಷ್ಣರೆಡ್ಡಿ ರವರಿಂದ ಸ್ವತ್ತನ್ನು (ಶ್ರೀ.ರಾಜೇಶ್.ಎಂ.ಎನ್ ಲೀಗಲ್ ಅಟಾರ್ನಿ ರವರ ಮೂಲಕ) ದಿನಾಂಕ:6-1-2012ರಂದು ಖರೀದಿಸಿದ್ದು, ಅರ್ಜಿದಾರರು ಈವರೆವಿಗೂ ಈ ಕಛೇರಿಗೆ ಸದರಿ ಸ್ವತ್ತಿನ ನಕ್ಷೆ ಮಂಜೂರಾತಿ ಬಗ್ಗೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ, ಅದರೆ ಅರ್ಜಿದಾರರು ಈ ಕಛೇರಿಯಿಂದ ದಿನಾಂಕ: 30-11-2011 ರಂದು ಶ್ರೀ.ಎನ್.ಕೃಷ್ಣರೆಡ್ಡಿ ರವರಿಗೆ ನೀಡಲಾಗಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಹಿಂಬರಹ ಅರ್ಜಿದಾರರ ಹೆಸರಿನಲ್ಲಿ ಇಲ್ಲದೇ ಇರುವುದನ್ನು ಹಾಗೂ ಸದರಿ ಸ್ವತ್ತಿಗೆ ನಕ್ಷೆ ಮಂಜೂರಾತಿ ಕೋರಿ ಅರ್ಜಿದಾರರು ಈವರೆವಿಗೂ ಈ ಕಛೇರಿಗೆ ಯಾವುದೇ ಅರ್ಜಿ ಸಲ್ಲಿಸಿಲ್ಲದೇ ಇರುವ ವಿಷಯವನ್ನು ಅವಗಾಹನೆಗಾಗಿ ಸಲ್ಲಿಸಿದೆ.

ಅದ್ದರಿಂದ ಯೋಜನಾ ಸದಸ್ಯರು, ಬೆಂಗಳೂರು ಅಭಿವೃದ್ದಿ ಪ್ರಾಧಿಕಾರ ರವರ ದಿನಾಂಕ:11-2-2009ರ ಪತ್ರದಲ್ಲಿ ವಿಶ್ವಭಾರತಿ ಗೃಹ ನಿರ್ಮಾಣ ಸಂಘ(ರಿ) ರವರ ಫೇಸ್-2 ನಕ್ಷೆ ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದಿಂದ ಅನುಮೋದನೆಯಾಗಿಲ್ಲದೇ ಇರುವುದಾಗಿ ತಿಳಿಸಿರುವುದರಿಂದ ಸದರಿ ಸ್ವತ್ತಿಗೆ ನಕ್ಷೆ ಮಂಜೂರಾತಿಯನ್ನು ಕೋರಿ ಶ್ರೀ.ಎನ್.ಕೃಷ್ಣರೆಡ್ಡಿ ರವರು ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಲಾಗಿದೆ ಎಂಬ ಅಂಶವನ್ನು ತಮ್ಮ ಗಮನಕ್ಕೆ ಸಲ್ಲಿಸಿದೆ.

**ನಿರ್ಣಯ:-** ಪ್ರಕರಣವನ್ನು ಕರೆಯಲಾಯಿತು. ಅಸ್ತಿಯ ಮಾಲೀಕರ ಪರವಾಗಿ ಶ್ರೀ.ಎನ್.ವೆಂಕಟೇಶ್ ಜಿ.ಪಿ.ಎ.ಹೋಲ್ಡರ್ ರವರು ಹಾಜರಿದ್ದು ತಮ್ಮ ಹೇಳಿಕೆಯನ್ನು ಈ ಕೆಳಕಂಡಂತೆ ನೀಡಿರುತ್ತಾರೆ. ಪ್ರಸ್ಥಾವಿತ ಪ್ರದೇಶವನ್ನು ಪಾಲಿಕೆಯು ಬಹಳ ಹಿಂದೆಯ ಅಭಿವೃದ್ದಿ ಶುಲ್ಕವನ್ನು ಪಡೆದು ಎಲ್ಲಾ ವಿಧವಾದ ನಾಗರೀಕ ಸೌಲಭ್ಯಗಳನ್ನು ಒದಗಿಸಲಾಗಿದ್ದು ಸದರಿ ಪ್ರದೇಶದಲ್ಲಿ ವಾಸಿಸುತ್ತಿರುವ ಸಾರ್ವಜನಿಕರು ಚ.ಗ.ಒಂದಕ್ಕೆ ರೂ.50 ರಂತೆ ಅಭಿವೃದ್ದಿ ಶುಲ್ಕ ಪಾವತಿಸಿ ಖಾತೆ ನೋಂದಾವಣೆ ಮಾಡಿಸಿಕೊಂಡು ಈ ಹಿನ್ನೆಲೆಯಲ್ಲಿ ನಕ್ಷೆ ಮಂಜೂರಾತಿ ಮಾಡಿಸಿಕೊಂಡಿರುವುದಾಗಿ ತಿಳಿಸಿರುತ್ತಾರೆ. ಹಾಲಿ ಈ ಬಡಾವಣೆಯಲ್ಲಿ ಪಾಲಿಕೆಯು ಎಲ್ಲಾ ವಿದವಾದ ಸಾಮಾನ್ಯ ನಾಗರೀಕ ಸೌಲಬ್ಯಗಳನ್ನು ಒದಗಿಸಿ, ತಹಲ್‌ವರೆವಿಗೂ  ಈ ಬಡಾವಣೆಯು ವಾಸಸ್ಥರಿಂದ ಕಾಲಕಾಲಕ್ಕೆ ಕಂದಾಯವನ್ನು ವಸೂಲಿ ಮಾಡುತ್ತಿರುವುದಾಗಿ ತಿಳಿಸಿ ಈ ಹಿನ್ನೆಲೆಯಲ್ಲಿ ತಾವು ಸಹ ಈ ಆಸ್ತಿಯ ಹಿಂದಿನ ಮಾಲೀಕರಿಂದ ಶುದ್ದ ಕ್ರಯಪತ್ರದ ಮೂಲಕ ಆಸ್ತಿಯನ್ನು ಖರೀದಿಸಿ ಖಾತಾ ವರ್ಗಾವಣೆ ಸಂಬಂಧಿಸಿದಂತೆ ಪಾಲಿಕೆಗೆ ಮನವಿ ಸಲ್ಲಿಸಿದ್ದು ಈ ಪ್ರದೇಶದ ಬಡಾವಣೆ ನಕ್ಷೆಗಳು ಬೆಂಗಳೂರು ಅಭಿವೃದ್ದಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವುದಿಲ್ಲವೆಂದು ತಿಳಿಸಿರುವುದರಿಂದ ಇವರ ಮನವಿಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದ ಮೇರೆಗೆ ನ್ಯಾಯಾಲಯದ ಮೊರೆಹೋಗಿರುವುದಾಗಿ ತಿಳಿಸಿದ್ದು ನ್ಯಾಯಾಲಯವು  1976 ಕೆ.ಎಂ.ಸಿ ಕಾಯ್ದೆ 444(i) (b) ರೀತ್ಯಾ ಸ್ಥಾಯಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಲು ಆದೇಶಿಸಿದ್ದು ಈ ಮೇರೆಗೆ ಸ್ವತ್ತಿನ ಮಾಲೀಕರ ಪರವಾಗಿ ತಾವು ಮನವಿ ಸಲ್ಲಿಸಿ ನಕ್ಷೆ ಮಂಜೂರಾತಿ ಮಾಡಿಕೊಡಲು ಕೋರಿರುವುದಾಗಿ  ತಮ್ಮ ಮುಂದೆ ಮೇಲ್ಮನವಿ ಸಲ್ಲಿಸಿರುವುದಾಗಿ ತಿಳಿಸಿದ್ದು

ನ್ಯಾಯಾಲಯದ ಆದೇಶದನ್ವಯ ಕಡತದಲ್ಲಿನ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹಾಗು ಮಾಲೀಕರ ಪರವಾಗಿ ಸಮಿತಿಯ ಮುಂದೆ ಹಾಜರಿದ್ದ ಶ್ರೀ.ಎನ್.ವೆಂಕಟೇಶ್ ರವರ ಹೇಳಿಕೆಯಲ್ಲಿನ ಸಾರಂಶವನ್ನು ಕೂಲಂಕುಷವಾಗಿ ಪರಿಶೀಲಿಸಿ ಈಗಾಗಲೇ ಪಾಲಿಕೆಯು ಪ್ರಸ್ಥಾವಿತ ಪ್ರದೇಶದಲ್ಲಿ ಎಲ್ಲಾ ವಿದವಾದ ನಾಗರೀಕ ಸೌಲಬ್ಯಗಳನ್ನು ಒದಗಿಸಿದ್ದು ಸ್ವತ್ತಿನ ಮಾಲೀಕರಿಂದ ಆಭಿವೃದ್ದಿ ಶುಲ್ಕವನ್ನು ಪಡೆದು ಖಾತ ನೋಂದಾಯಿಸಿರುವುದರಿಂದ ಇವರ ಮನವಿಯನ್ನು ಪರಿಗಣಿಸಿ ನಕ್ಷೆ ಮಂಜೂರಾತಿ ಮಾಡಿಕೊಡಲು ಸೂಕ್ತ ಕ್ರಮಕ್ಕೈಗೊಳ್ಳುವುದೆಂದು ತೀರ್ಮಾನಿಸಿದೆ.

**ವಿಷಯ:ಸಂಖ್ಯೆ:ಅಸ್ಥಾಸ(ಖಾ)/56/2011-12** ಜಂಟಿ ಅಯುಕ್ತರು(ದಕ್ಷಿಣ) ರವರ ಟಿಪ್ಪಣಿ ಸಂಖ್ಯೆ:ಜಂ.ಅ.(ದ) ಪಿಆರ್/581/12-13 ದಿನಾಂಕ; 2-5-2012ಲ್ಲಿ, ಸಹ ಕಂದಾಯಾಧಿಕಾರಿ(ಕೋರಮಂಗಲ) ವಲಯದ ವಾರ್ಡ್ ನಂ- 151/68 ಕೋರಮಂಗಲ,ಬೆಂಗಳೂರು ಸ್ವತ್ತಿನ ಸಂಖ್ಯೆ:114, 1ನೇ ಬ್ಲಾಕ್,ಕೋರಮಂಗಲ ಈ ಸ್ವತ್ತಿನ  ಸದರಿ ಆಸ್ತಿಯು ಕಛೇರಿ ದಾಖಲಾತಿಯಲ್ಲಿ ಶ್ರೀ.ಎಂ.ಮೋಸಸ್ ಮತ್ತು ಲೀಲಾ ಮೋಸಸ್ ರವರ ಹೆಸರಿನಲ್ಲಿದ್ದು, ಇವರ ಮಾರಾಟದಿಂದ ಕ್ರಯ ಪತ್ರದ ನೊಂದಾವಣೆ ಸಂಖ್ಯೆ:729/2007-08, ದಿನಾಂಕ: 05-05-2007 ರಂತೆ ಶ್ರೀ.ಹೆಚ್.ಕೆ.ಮುಂಜುನಾಥ ಗೌಡ ರವರ ಹೆಸರಿಗೆ ಖಾತೆಯನ್ನು ವರ್ಗಾಯಿಸಲಾಗಿತ್ತದೆ. ಈ ಮಧ್ಯೆ ಶ್ರೀಮತಿ. ಲೀಲಾ ಮೋಸಸ್ ರವರ ಪರ ವಕೀಲರಾದ ಶ್ರೀ.ಹರಿನಾಥ್ ರವರು ತಕರಾರು ಸಲ್ಲಿಸುತ್ತಾ ಶ್ರೀಮತಿ. ಲೀಲಾ ಮೋಸಸ್ ರವರ ಸಹಿಯನ್ನು ಪೋರ್ಜರಿ ಮಾಡಿರುತ್ತಾರೆಂದು ಈ ಬಗ್ಗೆ ಓ.ಎಸ್. ನಂ.5033/2008 ರಂತೆ ದಾವೆ ಇರುವುದಾಗಿ ತಿಳಿಸಿ ಖಾತೆಯನ್ನು ರದ್ದು ಪಡಿಸುವಂತೆ ಕೋರಿರುತ್ತಾರೆ.

ಈ ಸಂಬಂಧ ಪ್ರಸ್ತುತ ಪ್ರಕರಣವು ಕರ್ನಾಟಕ ನಗರ ಪಾಲಿಕೆ ಕಾಯ್ದೆ ಕಲಂ 114:ಎ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂಬ ಅಭಿಪ್ರಾಯಕ್ಕೆ ಬಂದು ಸ್ವತ್ತಿನ ಮಾಲೀಕತ್ವದ ಬಗ್ಗೆ ಘೋಷಣೆ ಕೋರಿ ಸಿಟಿ ಸಿವಿಲ್ ನ್ಯಾಯಾಲಯದದಿಂದ ಡಿಕ್ರಿ ಪಡೆದು ಸಂಪರ್ಕಿಸಲು ತಿಳಿಯಪಡಿಸಲಾಗಿರುತ್ತದೆ. ಆದರೂ ಸಹ

ಅರ್ಜಿದಾರರು ಅಪೀಲು ಸ್ಥಾಯಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ವಿಷಯದ ಬಗ್ಗೆ ಕಾನೂನು ಕೋಶದ ಅಭಿಪ್ರಾಯ ಪಡೆಯಲಾಗಿ ಕೆ.ಎಂ.ಸಿ ಕಾಯ್ದೆ 114 ಎ ಅಡಿಯಲ್ಲಿ ಸಕ್ಷಮ ಪ್ರಾಧಿಕಾರಿಗಳು ಹೊರಡಿಸಿರುವ ಆದೇಶದ ಮೇಲೆ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮೇಲ್ಮನವಿ ಸಲ್ಲಿಸಲು ಅವಕಾಶವಿಲ್ಲವೆಂದು ಅಭಿಪ್ರಾಯ ನೀಡಲಾಗಿದೆ. ಸದರಿ ವಿಷಯದಲ್ಲಿ ಇರುವಂತಹ ವಾಸ್ತವಾಂಶಗಳನ್ನು ವಿವರಿಸುತ್ತಾ ಸದರಿ ಮೇಲ್ಮನವಿ ಬಗ್ಗೆ ಮುಂದಿನ ತೀರ್ಮಾನಕ್ಕಾಗಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಾಗಿದ್ದು, ಮನವಿದಾರರು ತಮ್ಮ ಹೇಳಿಕೆಯಲ್ಲಿ ಜಂಟಿ ಆಯುಕ್ತರು (ದಕ್ಷಿಣ) ಇವರು ನ್ಯಾಯಾಲಯದ ಆದೇಶವನ್ನು ಪರಿಗಣಿಸಿರುವುದಿಲ್ಲ ಹಾಗು ತಮ್ಮ ವಾದವನ್ನು ಅಲಿಸಿರುವುದಿಲ್ಲ, ಆದೇಶ ನೀಡುವುದಕ್ಕೆ ಮುನ್ನ ತಮ್ಮ ವಾದ ಮಂಡನೆಗೆ ಅವಕಾಶ ನೀಡಿರುವುದಿಲ್ಲ. ಕಂದಾಯ ಇಲಾಖಾ ಅಧಿಕಾರಿಗಳು ನಕಲು ದಾಖಲಾತಿಗಳ ಆಧಾರದ ಮೇಲೆ ಖಾತೆಯನ್ನು ಮಾಡಿರುತ್ತಾರೆ. ಜಂಟಿ ಆಯುಕ್ತರು (ದಕ್ಷಿಣ) ಇವರಿಗೆ ಪರಿಷ್ಕೃತ ಮನವಿ ಸಲ್ಲಿಸಿದ್ದರು ಸಹ ಆದೇಶ ನೀಡುವುದಕ್ಕೆ ಮೊದಲು ತಿಳುವಳಿಕೆಪತ್ರವನ್ನು ನೀಡಿರುವುದಿಲ್ಲ. ಪ್ರತಿವಾದಿಗಳು ಹಾಜರಿದ್ದು ತಮ್ಮ ಹೇಳಿಕೆಯಲ್ಲಿ ಜಂಟಿ ಆಯುಕ್ತರು (ದಕ್ಷಿಣ) ಇವರು ಹೊರಡಿಸಿರುವ ಆದೇಶವು ಕ್ರಮಬದ್ದವಾಗಿದ್ದು ಸಂಬಂಧಪಟ್ಟವರಿಗೆ ಸಾಕಷ್ಟು ಕಾಲಾವಕಾಶ ನೀಡಲಾಗಿದೆ. ಅರ್ಜಿದಾರರು ಸಲ್ಲಿಸುವ ದಾಖಲೆಗಳು ತೃಪ್ತಿಕರವಾಗಿಲ್ಲದ ಕಾರಣ ದಾಖಲಾತಿಗಳ ಆಧಾರದ ಮೇಲೆ ಖಾತೆಯನ್ನು ಪುಸ್ತಕದಲ್ಲಿ ದಾಖಲಿಸಿಕೊಳ್ಳಲಾಗಿದೆ.

ಪ್ರಕರಣವನ್ನು ಸ್ಥಳ ಪರಿಶೀಲನೆ ಹಾಗು ಆದೇಶಕ್ಕಾಗಿ ಮುಂದೂಡಲಾಗಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಆ)/01/2012-13** ಅಯುಕ್ತರು ರವರ ಟಿಪ್ಪಣಿ ಸಂಖ್ಯೆ:ಉ.ಅ.ಅ(ಪೂ) ಪಿಅರ್/53/11-12 ದಿನಾಂಕ; 16-3-2012ರಂದು ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಸಂಖ್ಯೆ:49 ರಲ್ಲಿ ಸಂಖ್ಯೆ: 2/124ರಲ್ಲಿ ಮೆ:ಕಿರಣ್ ಫ್ಲೋರ್ ಮಿಲ್, ಶ್ರೀ.ಎಂ.ನಾಗರಾಜು ರವರು ಹಿಟ್ಟಿನ ಗಿರಣಿಯನ್ನು ಬಿ.ಬಿ.ಎಂ.ಪಿ ಪರವಾನಿಗೆ ಸಂಖ್ಯೆ:05/03-04, 5-ಹಚ್.ಪಿ ಪರವಾನಿಗೆಯನ್ನು ಪಡೆದು ಉದ್ದಿಮೆ ನಡಿಸುತ್ತಿರುವುದು ಸರಿಯಷ್ಟೆ ಉಲ್ಲೇಖ:-1,2,3, ಮತ್ತು 4 ರಂತೆ 49ನೇ ವಾರ್ಡಿನ ಶ್ರೀ.ವೇಣುಗೋಪಾಲಸ್ವಾಮಿ ದೇವಸ್ಥಾನದ ನಿವಾಸಿಗಳು ಶಬ್ದ ಮಾಲಿನ್ಯದಿಂದ ತೊಂದರೆಯಾಗುತ್ತಿರುವುದಾಗಿ ತಿಳಿಸಿರುತ್ತಾರೆ. ಈ ಸಂಬಂಧ ಉಚ್ಛ ನ್ಯಾಯಾಲಯವು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿರವರ ನಿರ್ಣಯದಂತೆ ಹಾಗೂ ಆರೋಗ್ಯಾಧಿಕಾರಿ(ಪೂರ್ವ)ರವರೊಂದಿಗೆ ವಿಚಾರಣೆ ನಡಿಸಲಾಗಿದ್ದು, ಹಿಟ್ಟಿನ ಗಿರಣಿಯಿಂದ ಅಕ್ಕಪಕ್ಕದ ನಿವಾಸಿಗಳಿಗೆ ತೊಂದರೆಯಾಗುವುದೆಂದು ದೃಢಪಟ್ಟಿದ್ದು, ಈ ಸಂಬಂಧ ತಮಗೆ ಪಾಲಿಕೆಯಿಂದ ನೀಡಲಾಗಿರುವ ಉದ್ದಿಮೆ ಪರವಾನಿಗೆಯನ್ನು ದಿನಾಂಕ:1-2-2012 ರಿಂದ ಜಾರಿಗೆ ಬರುವಂತೆ ರದ್ದುಪಡಿಸಲಾಗಿದೆ ಹಾಗೂ ಇನ್ನು ಮುಂದೆ ಹಿಟ್ಟಿನ ಗಿರಣಿಯನ್ನು ಚಾಲನೆ ಮಾಡಬಾರದು ಎಂದು ಈ ಮೂಲಕ ಸೂಚಿಸಲಾಗಿದ್ದು, ಈ ಸಂಬಂಧ ಶ್ರೀ.ಎಂ.ನಾಗರಾಜು ರವರು ಬಿಬಿಎಂಪಿ ಅಪೀಲು ಸ್ಥಾಯಿ ಸಮಿತಿಗೆ ಮೇಲ್ಮನವಿ ಸಲ್ಲಿಸಲಾಗಿದ್ದು, ಮಾನ್ಯ ಅಪೀಲು ಸ್ಥಾಯಿ ಸಮಿತಿ ಸಂಖ್ಯೆ:ಅಸ್ಥಾಸ/ಪಿಅರ್/ 203/11-12, ದಿನಾಂಕ:15-2-2012 ರವರ ಪತ್ರದಲ್ಲಿ ವಿವರವಾದ ಟಿಪ್ಪಣಿಯೊಂದಿಗೆ ಕಡತವನ್ನು ಸೂಕ್ತ ನಿರ್ಣಯಕ್ಕೆ ಮಂಡಿಸಿದೆ.

**ನಿರ್ಣಯ:** ಪ್ರಕರಣವನ್ನು ಕರೆಯಲಾಯಿತು ಶ್ರೀ.ಎಂ.ನಾಗರಾಜು ಮನವಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡುತ್ತ, ತಮಗೆ ಆಸ್ತಿಯ ಮಾಲೀಕರು ಕರಾರಿನ ಮೂಲಕ ಅಂಗಡಿ ನಡೆಸಲು ಒಪ್ಪಿಗೆ ನೀಡಿದ್ದು ಇದು ತಮ್ಮ ಜೀವನೋಪಾಯವಾಗಿರುವುದರಿಂದ ಪರವಾನಗಿಯನ್ನು ನವೀಕರಿಸಲು ಕೋರಿದ್ದು, ಈ ಸಂಬಂಧದಲ್ಲಿ ಹಾಜರಿದ್ದ ಸ್ವತ್ತಿನ ಮಾಲೀಕರಾದ ಶ್ರೀಮತಿ.ಸರಸ್ವತಿರವರು ತಮ್ಮ ಹೇಳಿಕೆಯಲ್ಲಿ ಈ

ಪ್ರದೇಶವು ವಸತಿ ಪರಿವಿದಿಗೆ ಬರುತ್ತಿದ್ದು ಹಿಟ್ಟಿನ ಗಿರಣಿಯಿಂದ ಶಬ್ದ ಮಾಲೀನ್ಯ ಉಂಟಾಗುತ್ತಿದ್ದು ಇಲ್ಲಿನ ನಿವಾಸಿಗಳು ಸಹ ಈ ಬಗ್ಗೆ ತಮ್ಮ ಅಕ್ಷೇಪಣೆಯನ್ನು ನೀಡಿದ್ದು ಹಾಗು ಮಾಲೀನ್ಯ ನಿಯಂತ್ರಣ ಮಂಡಳಿಯು ಸಹ ಈ ಪ್ರದೇಶವು ವಸತಿ ಪ್ರದೇಶವಾಗಿರುವುದರಿಂದ ಪರವಾನಿಗೆ ನವೀಕರಣ ಕುರಿತಂತೆ ನಿಯಮಾನುಸಾರ ಕ್ರಮತೆಗೆದುಕೊಳ್ಳಲು  ಸೂಚಿಸಿರುವುದಾಗಿ ವಿವರಿಸಿರುವುದರಿಂದ ಪರವಾನಗಿ ನವೀಕರಿಸ ಕೊಡದೆಂದು ಕೋರಿರುವ ಹಿನ್ನೆಲೆಯಲ್ಲಿ ಹಾಗು ಹಾಜರಿದ್ದ ಆರೋಗ್ಯಾಧಿಕಾರಿ(ಪೂರ್ವ)ರವರು ನ್ಯಾಯಾಲಯವು ತನ್ನ ಅದೇಶದಲ್ಲಿ ತಿಳಿಸಿರುವಂತೆ ಪರವಾನಗಿಯನ್ನು  ನವೀಕರಿಸಲು ಕೋರಿರುವ ಮನವಿಯನ್ನು ತಿರಸ್ಕರಿಸಲು ಕೋರಿರುವ ಮೇರೆಗೆ ದಾಖಲೆಗಳನ್ನು ಹಾಗು ಆಸ್ತಿಯ ಮಾಲೀಕರ ಮನವಿಯನ್ನು ಕೂಲಂಕುಷವಾಗಿ ಪರಿಶೀಲಿಸಿ ಹಿಟ್ಟಿನ ಗಿರಣಿ ನಡೆಸುತ್ತಿರುವ ಪ್ರದೇಶವು ವಸತಿ ಪ್ರದೇಶದಲ್ಲಿರುವುದರಿಂದ ಅರ್ಜಿದಾರರ ಮನವಿಯನ್ನು ಪುರಸ್ಕರಿಸಲು ಸಾದ್ಯವಿಲ್ಲವೆಂದು ತಿಳಿಸಿ ಪರವಾನಗಿಯನ್ನು ರದ್ದು ಪಡಿಸಲು ತೀರ್ಮಾನಿಸಿದೆ.

**<u>ವಿಷಯ:ಸಂಖ್ಯೆ:ಆಸ್ಥಾಸ/(ಆ)/03/2012-13</u>** ವಿಶೇಷ ಅಯುಕ್ತರು (ಯೋಜನೆ) ರವರ ಟಿಪ್ಪಣಿ ರೀತ್ಯಾ ನಿವೇಶನ ಸಂಖ್ಯೆ: 124 2ನೇ ಮುಖರಸ್ತೆ. ಸೀತಾ ಸರ್ಕಲ್ ಹತ್ತಿರ ಬ್ಯಾಂಕ್ ಕಾಲೋನಿ, ಶ್ರೀವಾಸ್ ನಗರ, ಬೆಂಗಳೂರು ರಲ್ಲಿ ಶ್ರೀ.ವಾದಿರಾಜ ವಿಜಯ ಧಾರ್ಮಿಕ ಮಂದಿರ ಎಂಬ ಸಂಸ್ಥೆಯು ಈ ಸ್ಥಳದಲ್ಲಿ ಸಾರ್ವಜನಿಕರಿಂದ ಹಣವನ್ನು ಪಡೆದು ವೈಧಿಕ, ಶ್ರೀಮಂತ, ನಾಮಕರಣ, ಉಪನಯನ, ಇತರೆ ಸಮಾರಂಭಗಳನ್ನು ನಡಿಸುತ್ತಿರುವುದರಿಂದ ಅಕ್ಕಪಕ್ಕದ ನಿವಾಸಿಗಳೀಗೆ ತುಂಬಾ ತೊಂದರೆ ಉಂಟಾಗುತ್ತಿರುತ್ತದೆಯೆಂದು  ಕೆ.ವಿ.ನಾಗರಾಜ್ ರವರು ದೂರನ್ನು ಸಲ್ಲಿಸಿರುತ್ತಾರೆ ಹಾಗೂ ನ್ಯಾಯಾಲಯದಲ್ಲಿ ಪ್ರಕರಣವನ್ನು ಸಹ ದಾಖಲು ಮಾಡಲಾಗಿರುತ್ತದೆ. ನ್ಯಾಯಾಲಯವು ಕಲ್ಯಾಣ ಮಂಟಪವನ್ನು ಮುಚ್ಚುವಂತೆ ಪಾಲಿಕೆಗೆ ಆದೇಶಿಸಿರುವುದರಿಂದ ಸದರಿ ಕಲ್ಯಾಣ ಮಂಟಪವನ್ನು 2002 ರಲ್ಲಿ ಮುಚ್ಚಲಾಗಿತ್ತು ಎಂದು ತಿಳಿಸಿರುತ್ತಾರೆ. ಮುಚ್ಚಲಾಗಿದ ಈ ಕಟ್ಟಡದಲ್ಲಿ ಈಗ ಮತ್ತೆ ಧಾರ್ಮಿಕ ಸಂಸ್ಥೆಯೆಂಬ ಹೆಸರಿನಲ್ಲಿ ಕಾರ್ಯಚರಣೆ ಮಾಡುತ್ತಿದ್ದಾರೆ ಎಂದು ದೂರು ಸಲ್ಲಿಸಿರುತ್ತಾರೆ. ಸದರಿ ನಿವೇಶದಲ್ಲಿ ಅನಧಿಕೃತವಾಗಿ ವಸತಿ ಕಟ್ಟಡದಲ್ಲಿ ಯಾವುದೇ ಜ್ಞಾಪನಾಪತ್ರವನ್ನು ದಿನಾಂಕ:13-12-2011 ಮತ್ತು 21-12-2011 ರಂದು ಶ್ರೀ.ವಾದಿರಾಜ ವಿಜಯ ಧಾರ್ಮಿಕ ಮಂದಿರ ರವರಿಗೆ ಜಾರಿ ಮಾಡಲಾಗಿರುತ್ತದೆ.

ಸದರಿ ಸ್ಥಳವು ವಸತಿ ಪ್ರದೇಶದಲ್ಲಿದ್ದು ವಸತಿಯೇತರ ಚಟುವಟಿಕೆಗೆ ಉಪಯೋಗಿಸುತ್ತಿರುವ ದಿನಾಂಕ:16-2-2012 ರಂದು ಹಿರಿಯ ಆರೋಗ್ಯ ಪರಿವೀಕ್ಷಕ ರವರು ಸದರಿ ಉದ್ದಿಮೆ ಬೀಗ ಮುದ್ರೆಯನ್ನು ಹಾಕಿ ಅಕ್ಕಪಕ್ಕದವರಿಂದ ಮಹಜರ್ ಪತ್ರಕ್ಕೆ ಸಹಿ ಪಡೆಯಲಾಗಿದೆ. ಆದ್ದರಿಂದ ಶ್ರೀ.ವಾದಿರಾಜ ವಿಜಯ ಧಾರ್ಮಿಕ ಸಂಸ್ಥೆಯವರು ಉಚಿತವಾಗಿ ಧಾರ್ಮಿಕ ವಿಧಿವಿಧಾನಗಳನ್ನು ನಡೆಸುತ್ತಿರುತ್ತಾರೆ ಎಂದು ತಿಳಿಸುತ್ತಾ ವಾದ್ಯಗಳನ್ನು ನುಡಿಸದೆ ಶಬ್ದ ಮಾಲಿನ್ಯ ಮಾಡದ್ದಿದ್ದರು, ಸದರಿ ಚಟುವಟಿಕೆಯನ್ನು ಮುಚ್ಚಬೇಕೆಂದು ನೋಟಿಸ್ ನೀಡುವ ಮೂಲಕ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಎಲ್ಲಾ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ ಉದ್ದಿಮೆದಾರರನ್ನು ಮತ್ತು ದೂರುದಾರರನ್ನು ಕರೆಸಿ ವಿಚಾರಣೆ ನಡೆಸಲು ಪೂರ್ಣ ಕಡತವನ್ನು ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು, ಮನವಿದಾರರು ಹಾಜರಾಗಿದ್ದು ತಮ್ಮ ಹೇಳಿಕೆಯಲ್ಲಿ ಉದ್ದಿಮೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರ ಇವರು ಉದ್ದಿಮೆ ಪರವಾನಗಿ ನೀಡಿರುವುದಿಲ್ಲ. ಈ ಸ್ವತ್ತಿನಲ್ಲಿ ಕಲ್ಯಾಣಮಂಟಪ ನಡೆಸುತ್ತಿದ್ದು ಘನ ಉಚ್ಛನ್ಯಾಯಾಲಯವು ಈ ಸ್ಥಳದಲ್ಲಿ ಉದ್ದಿಮೆ ನಡೆಸಲು ಸ್ಥಳೀಯ ಪ್ರಾಧಿಕಾರದಿಂದ ಪರವಾನಗಿ ಪಡೆದು ಉದ್ದಿಮೆ ನಡೆಸುವಂತೆ ಆದೇಶಿಸಿದೆ. ಈ ಸ್ವತ್ತಿನಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಉಚಿತವಾಗಿ ನಡೆಸಲಾಗುತ್ತಿದೆ. ಮದುವೆ ಹಾಗೂ ಇನ್ನಿತರೆ ಕಾರ್ಯಕ್ರಮಗಳಿಗೆ

ನೀಡಲಾಗುತ್ತಿಲ್ಲ. ಘನ ಉಚ್ಛನ್ಯಾಯಾಲಯವು ಕಲ್ಯಾಣಮಂಟಪ ನಡೆಸಲು ಪರವಾನಗಿ ಪಡೆಯಲು ಸೂಚಿಸಿರುವುದಿಲ್ಲ. ಅದ್ದರಿಂದ ಉದ್ದಿಮೆ ನಡೆಸಲು ಪರವಾನಗಿ ಅವಶ್ಯಕತೆ ಇಲ್ಲವೆಂದಿದ್ದಾರೆ.

ಪ್ರತಿವಾದಿಗಳು ತಮ್ಮ ಹೇಳಿಕೆಯಲ್ಲಿ ಮನವಿದಾರರು ಉದ್ದಿಮೆ ಪರವಾನಗಿ ಪಡೆಯದೆ ನಡೆಸುತ್ತಿದ್ದಾರೆ ಹಾಗೂ ಉದ್ದಿಮೆಯನ್ನು ಕಾನೂನುಬಾಹಿರವಾಗಿ ಹಾಗು ಅನಧಿಕೃತವಾಗಿ ನಡೆಸಲಾಗುತ್ತಿದೆ ಎಂಬುದಾಗಿ ಹೇಳಿರುತ್ತಾರೆ. ಶ್ರೀ.ಕೆ.ವಿ.ನಾಗರಾಜ್ ಆಕ್ಷೇಪಣೆದಾರರು ಲಿಖಿತ ಮನವಿ ಸಲ್ಲಿಸಿದ್ದು ಇದನ್ನು ದಾಖಲೆಗೆ ತೆಗೆದುಕೊಳ್ಳಲಾಗಿದೆ.

ಪ್ರತಿವಾದಿಗಳು ತಮ್ಮ ವಾದವನ್ನು ಮುಂದುವರೆಸುತ್ತಾ ಈ ಸ್ವತ್ತು ವಸತಿ ಪ್ರದೇಶದಲ್ಲಿದ್ದು ಉದ್ದಿಮೆಯನ್ನು ಅನಧಿಕೃತವಾಗಿ ನಡೆಸಲಾಗುತ್ತಿದ್ದು, ವಸತಿ ಪ್ರದೇಶದಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುತ್ತಿದ್ದು ಅರ್ಜಿದಾರರು ಪರವಾನಗಿ ಸಾಬೀತು ಮಾಡುವಲ್ಲಿ ವಿಫಲರಾಗಿರುತ್ತಾರೆ.

ಸ್ಥಳ ಪರಿಶೀಲನೆ ಹಾಗೂ ಆದೇಶಕ್ಕಾಗಿ ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಆಸ್ಥಾಸ/(ತೆ)/04/2012-13** ಅಪರ ಅಯುಕ್ತರು (ಯೋಜನೆ) ರವರ ಟಿಪ್ಪಣಿ ರೀತ್ಯಾ ಸದರಿ ಸ್ವತ್ತಿನ ಖಾತೆಯು ಈ ಕಛೇರಿ ದಾಖಲೆಗಳಲ್ಲಿ ಶ್ರೀ.ಚಂದ್ರಶೇಖರ್.ಎಸ್. ಶೆಟ್ಟಿ ಮತ್ತು ರೇವತಿ. ಸಿ.ಶೆಟ್ಟಿ ರವರ ಹೆಸರಿನಲ್ಲಿದ್ದು, ಸ್ವತ್ತಿನ ಅಳತೆ 2400 ಚದರ ಅಡಿಗಳಿದ್ದು. ಸ್ವತ್ತಿನ ಖಾತೇದಾರರು ದಿನಾಂಕ:1-4-2008 ರಿಂದ ಜಾರಿಗೆ ಬರುವಂತೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆ ಅಡಿಯಲ್ಲಿ 3500 ಚದರಡಿಗಳ ಕಟ್ಟಡಕ್ಕೆ ವಸತಿ ದರದಲ್ಲಿ ಬಾಡಿಗೆ ಆಧಾರ 700 ಚದರಡಿ ಹಾಗೂ ಸ್ವಂತ ವಾಸದ ಆಧಾರ 800 ಚದರಡಿ ಕಟ್ಟಡಕ್ಕೆ ಸೇರಿಸಿ ಒಟ್ಟು ವಾರ್ಷಿಕ ಮೌಲ್ಯ ರೂ.21210-00(ವಸತಿ) ಹಾಗೂ 700 ಚದರಡಿ ವಸತಿಯೇತರ ಸ್ವಂತ ಹಾಗೂ 1300 ಚದರಡಿ ಬಾಡಿಗೆ ಆಧಾರ ಒಟ್ಟು ವಾರ್ಷಿಕ ಮೌಲ್ಯ ರೂ.92400/- (ವಸತಿಯೇತರ) ಗಳಿಗೆ ನಿಗಧಿಪಡಿಸಿಕೊಂಡು ಕಂದಾಯ ಪಾವತಿಸಿರುತ್ತಾರೆ.

ಸದರಿ ಸ್ವತ್ತಿನ ಮಾಲೀಕರು ತಪ್ಪು ಮಾಹಿತಿ ನೀಡಿ ಕಂದಾಯ ಪಾವತಿಸುತ್ತಿರುವುದು ಕಂಡು ಬಂದಿರುವುದರಿಂದ ಕಟ್ಟಡದಲ್ಲಿ ನೆಲ ಅಂತಸ್ತು 1320 ಚದರಡಿ(ವಸತಿಯೇತರ) 1ನೇ ಅಂತಸ್ತು 700 ಚದರಡಿ (ವಸತಿಯೇತರ) ಕಟ್ಟಡ ಬಾಡಿಗೆ 720 ಚದರಡಿ (ವಸತಿ) 2ನೇ ಅಂತಸ್ತು 100 ಚದರಡಿ ಮನೆ ಬಾಡಿಗೆ ಆಧಾರ, 2ನೇ ಅಂತಸ್ತು 700 ಚದರಡಿ, 3ನೇ ಅಂತಸ್ತು 700 ಚದರಡಿ(ವಸತಿಯೇತರ)ಉಪಯೋಗ ಬಾಡಿಗೆ ಆಧಾರ ಒಟ್ಟು ವಾರ್ಷಿಕ ಮೌಲ್ಯ ರೂ.13,776/-(ವಸತಿ),1,91,520/-(ವಸತಿಯೇತರ) ಗಳಿಗೆ ದಿನಾಂಕ:1-4-2008ರಿಂದ ಜಾರಿಗೆ ಬರುವಂತೆ ಕಂದಾಯ ನಿಗಧಿಪಡಿಸಿ ಈ ವಲಯ ಕಛೇರಿ ವಾರ್ಡ್-17ರ ಎಂ.ಟಿ.ಅರ್.19/11-12 ರಂತೆ ವಿಶೇಷ ಸೂಚನಾಪತ್ರವನ್ನು ದಿನಾಂಕ:3-10-2011 ರಂದು ಸ್ವತ್ತಿನ ಮಾಲೀಕರಿಗೆ ಜಾರಿಗೊಳಿಸಿದೆ.

ದಿನಾಂಕ:3-10-2011 ರಂದು ಈ ಕಛೇರಿಯಿಂದ ನೀಡಿರುವ ವಿಶೇಷ ಸೂಚನಾ ಪತ್ರದಲ್ಲಿ ನಿಗಧಿಪಡಿಸಿರುವ ಕಂದಾಯದ ವಿರುದ್ಧ ಪ್ರಥಮ ಅಪೀಲು ಅಧಿಕಾರಿ (ಕಂದಾಯ ಆಧಿಕಾರಿ) ರಾಜರಾಜೇಶ್ವರಿನಗರ ವಲಯ) ರವರಿಗೆ ಅಪೀಲು ಮನವಿ ಸಲ್ಲಿಸಿದ್ದ ಮೇರೆಗೆ ಅಪೀಲು ಹೇಳಿಕೆ ಪ್ರಕಾರ 4220 ಚದರಡಿ ಕಟ್ಟಡಕ್ಕೆ ರೂ.21,336/-(ವಸತಿ) ರೂ.1,23,200/-( ವಸತಿಯೇತರ)ಗಳಿಗೆ ದಿನಾಂಕ: 1-4-2008 ರಿಂದ ಕಂದಾಯವನ್ನು ಮರು ನಿಗಧಿಪಡಿಸಿ ಈ ವಲಯ ಕಛೇರಿ ವಿಶೇಷ ಸೂಚನಾ ಪತ್ರದ ಎಂ.ಟಿ.ಅರ್.31/11-12 ರಂತೆ ಕಂದಾಯವನ್ನು ಮರು ನಿಗಧಿಪಡಿಸಿದೆ. ಕಂದಾಯ ನಿಗಧಿಪಡಿಸಿರುವುದರ ವಿರುದ್ಧ ಖಾತೇದಾರರು ಅಧ್ಯಕ್ಷರು ಅಪೀಲು ಸ್ಥಾಯಿ ಸಮಿತಿ ರವರಿಗೆ ಅರ್ಜಿ ಸಲ್ಲಿಸಿದ್ದು ಅಪೀಲು ಅರ್ಜಿಯು ಕಾಲಮಿತಿಯಲ್ಲಿರುವುದಿಲ್ಲ, ಪೂರ್ಣ ಕಡತವನ್ನು ಸಮಿತಿಯ ತೀರ್ಮಾನ ಕೋರಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು ಪ್ರತಿವಾದಿಗಳು, ಶ್ರೀ.ಎಂ.ಈಶ್ವರ್ ಸಹಕಂದಾಯಾಧಿಕಾರಿ ಮತ್ತು ಶ್ರೀ. ಶ್ರೀಧರ್ ಕಂದಾಯ ಪರಿವೀಕ್ಷಕರು ಇವರುಗಳು ಹಾಜರಿದ್ದು ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ/(ಆ)/08/2012-13** ಆಪರ ಅಯುಕ್ತರು (ಯೋಜನೆ) ರವರ ಟಿಪ್ಪಣಿ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಕಾವೇರಿನಗರ 10ನೇ ಅಡ್ಡರಸ್ತೆಯಲ್ಲಿ ಬಿ ಅಡ್ಡರಸ್ತೆ, ಕಾವಲ್ ಬೈರಸಂದ್ರ ಬೆಂಗಳೂರು. ಇಲ್ಲಿ ಮೆ:ವಿಜಯಲಕ್ಷ್ಮಿ ಟ್ರೇಡರ್ಸ್, ಎಂಬ''ಗುಜರಿ ಮಾರಾಟ'' (Scrap Retail Store) ವ್ಯವಹಾರ ಉದ್ದಿಮೆಯನ್ನು ನಡೆಸುತ್ತಿದ್ದು, ಈ ಉದ್ದಿಮೆಯಿಂದ ಶಬ್ದ ಮಾಲಿನ್ಯ ಮತ್ತು ಕಬ್ಬಿಣ ಕತ್ತರಿಸಲು ಉಪಯೋಗಿಸುತ್ತಿರುವ ಗ್ಯಾಸ್ ಕಟ್ಟಿಂಗ್‌ನಿಂದ ತೊಂದರೆಯುಂಟಾಗುತ್ತಿದೆ ಎಂದು ಈ ಉದ್ದಿಮೆಯನ್ನು ಮುಚ್ಚಿಸಲು ಕನಕನಗರ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ(ರಿ) ಕನಕನಗರ ಬೆಂಗಳೂರು ರವರು ಹಾಗೂ ಶಶಿಧರ್, ನಂ.4 10ನೇ ಅಡ್ಡರಸ್ತೆ ಕಾವೇರಿನಗರ ಆರ್.ಟಿ.ನಗರ ಅಂಚೆ ಬೆಂಗಳೂರು–32 ರವರುಗಳು ಸಲ್ಲಿಸಿರುವ ಮನವಿಯ ಪತ್ರವನ್ನು ಪರಿಶೀಲಿಸಲಾಗಿದ್ದು, ದಿನಾಂಕ:21–2–2012 ಮೆ:ವಿಜಯಲಕ್ಷ್ಮಿ ಟ್ರೇಡರ್ಸ್, ರವರಿಗೆ ಉಪ ಆರೋಗ್ಯಾಧಿಕಾರಿ(ಪೂರ್ವ) ರವರು ನೋಟೀಸ್ ಜಾರಿ ಮಾಡಲಾಗಿದ್ದು, ಮನವಿದಾರರು ಸಲ್ಲಿಸಿರುವ ದೂರುಗಳನ್ನು ಸರಿಪಡಿಸಿಕೊಳ್ಳಲು ತಿಳಿಸಲಾಗಿರುತ್ತದೆ.

ಸದರಿ ನೋಟೀಸ್‌ಗೆ ಸಂಬಂಧಿಸಿದಂತೆ ಕೆ.ಎನ್.ನಲ್ಲಗೌಂಡರ್, ಮೆ: ವಿಜಯಲಕ್ಷ್ಮಿ ಟ್ರೇಡರ್ಸ್, ಗುಜರಿ ಮಾರಾಟ (Scrap Retail Store)ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಫೀಲು ಸ್ಥಾಯಿ ಸಮಿತಿಗೆ ಮೇಲ್ಮನವಿ ಸಲ್ಲಿಸಿದ್ದು,ಮಾನ್ಯ ಅಫೀಲು ಸ್ಥಾಯಿ ಸಮಿತಿ ರವರ ಪತ್ರ ಸಂಖ್ಯೆ:ಅಸ್ಥಾಸ/ಪಿಅರ್/ 214/2011–12 ದಿನಾಂಕ: 2–3–2012ರ ಪತ್ರದಲ್ಲಿ ವಿವರವಾದ ಟಿಪ್ಪಣಿಯೊಂದಿಗೆ ಸಮಿತಿಗೆ ಕಡತವನ್ನು ಮಂಡಿಸಲು ಸೂಚನೆ ನೀಡಲಾಗಿರುತ್ತದೆ. ಮೇಲ್ಕಂಡ ಅಂಶಗಳನ್ನು ಮಾನ್ಯ ಅಫೀಲು ಸ್ಥಾಯಿ ಸಮಿತಿಯ ಸೂಕ್ತ ನಿರ್ಣಯಕ್ಕೆ ಟಿಪ್ಪಣಿಯನ್ನು ಮಂಡಿಸಿದೆ.

**ಪ್ರಕರಣವನ್ನು** ಕರೆಯಲಾಯಿತು ಮನವಿದಾರರು ಅಧಿಕೃತ ಪತ್ರದೊಂದಿಗೆ ಹಾಜರಾಗಿದ್ದು, ಆದರೆ ಅಧಿಕೃತ ಪತ್ರವು ಸರಿಯಾದ ನಮೂನೆಯಲ್ಲಿ ಇರುವುದಿಲ್ಲವಾದ್ದರಿಂದ ಹಾಜರು ಪಡಿಸಲು ಕಾಲಾವಕಾಶ ಕೋರಿದರು ಶ್ರೀಮತಿ.ಸುಜಾತ ಆಕ್ಷೇಪಣೆದಾರರು ಮನವಿಯಲ್ಲಿ ಅರ್ಜಿದಾರರು ಉದ್ದಿಮೆಯನ್ನು ಜನರೇಟರ್ ಉಪಯೋಗಿಸಿ ನಡೆಸುತ್ತಿರುವುದರಿಂದ ಪ್ರದೇಶದ ನಿವಾಸಿಗಳಿಗೆ ಶಾಂತಿಭಂಗವಾಗುತ್ತಿದೆ. ಉದ್ದಿಮೆಯು ವಸತಿ ಪ್ರದೇಶದಲ್ಲಿ ನಡೆಯುತ್ತಿದೆ. ಆದುದರಿಂದ ಸಂಬಂಧಪಟ್ಟ ಪ್ರಾಧಿಕಾರದವರು ಅರ್ಜಿದಾರರಿಗೆ ಪರವಾನಗಿ ನೀಡಬಾರದೆಂಬುವುದಾಗಿ ಕೋರಿರುತ್ತಾರೆ. ಪ್ರತಿವಾದಿಗಳು ಹಾಜರಿದ್ದು ಮನವಿದಾರರು ಪರವಾನಗಿ ಪಡೆದಿದ್ದು ಆಕ್ಷೇಪಣೆ ಇರುವುದರಿಂದ ಉದ್ದಿಮೆ ಪರವಾನಗಿಯನ್ನು ನವೀಕರಿಸುವುದಿಲ್ಲ, ನಿಯಮಾವಳಿಪ್ರಕಾರ ಕ್ರಮವನ್ನು ತೆಗೆದುಕೊಂಡಿದೆ ಎಂಬುದಾಗಿ ತಿಳಿಸಿರುತ್ತಾರೆ.

ಸ್ಥಳ ಪರಿಶೀಲನೆಗಾಗಿ ತೆಗೆದುಕೊಂಡು ಪ್ರಕರಣವನ್ನು ಮುಂದೂಡಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ಜಾ)/09/2012-13** ವಿಶೇಷ ಅಯುಕ್ತರು (ಯೋಜನೆ) ರವರ ಟಿಪ್ಪಣಿ ರೀತ್ಯಾ ದಿನಾಂಕ: 10–6–2011ರ ಪತ್ರದಲ್ಲಿ ಜುಲೈ ಮತ್ತು ಆಗಸ್ಟ್ 2009 ರಂದು ಕಾರ್ಯ ನಿರ್ವಹಿಸಿರುವ ಅವಧಿಗೆ ಹಣ ಪಾವತಿಸಲು ಆದೇಶಿಸುವಂತೆ ಶ್ರೀ.ಬಿ.ಎಲ್.ಪ್ರಕಾಶ್, ಗುತ್ತಿಗೆದಾರರು ಸ್ಥಾಯಿ ಸಮಿತಿಗೆ ಮೇಲ್ಮನವಿ ಸಲ್ಲಿಸಿದ್ದು, ಕಡತವನ್ನು ಪರಿಶೀಲಿಸಲಾಗಿ ದಿನಾಂಕ:1–7–2009 ರಿಂದ 31–7–2009 ರವರೆಗೆ ಹಾಗೂ ದಿನಾಂಕ:1–8–2009 ರಿಂದ 31–8–2009 ರವರೆಗೆ ಅನಧಿಕೃತ ಜಾಹೀರಾತು ಫಲಕಗಳನ್ನು, ಬ್ಯಾನರ್ ಮತ್ತು ಬಂಟಿಂಗ್ಸ್ ಗಳನ್ನು ತೆರವುಗೊಳಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿರುವುದರಿಂದ

ಪ್ಯಾಕೇಜ್ ಸಂಖ್ಯೆ:02 ಪಶ್ಚಿಮ ವಲಯ ಪ್ಯಾಕೇಜ್ ಸಂಖ್ಯೆ:04 ರಲ್ಲಿ ಮಹದೇವಪುರ/ ಬ್ಯಾಟರಾಯನಪುರ ಪ್ಯಾಕೇಜ್ ಸಂಖ್ಯೆ:05 ರಲ್ಲಿ ರಾಜರಾಜೇಶ್ವರಿ ನಗರ/ ದಾಸರಹಳ್ಳಿ ಪ್ರತಿ ತಿಂಗಳಿಗೆ ರೂ.90,000/-ಗಳಂತೆ ಪಾವತಿಸಬಹುದೆಂದು ಅಪರ ಆಯುಕ್ತರು(ರಾಜರಾಜೇಶ್ವರಿ ನಗರ)ಹಾಗೂ (ದಾಸರಹಳ್ಳಿ) ವಲಯದವರು ಕಾರ್ಯಾದೇಶ ನೀಡದೇ ಟಿಪ್ಪಣಿಯಲ್ಲಿ ಸದರಿ ಗುತ್ತಿಗೆದಾರರು ತೆರವುಗೊಳಿಸುವ ಕಾರ್ಯವನ್ನು ಮಾಡಿರುವುರೆಂದು ದೃಢೀಕರಿಸಿರುತ್ತಾರೆ.

ಗುತ್ತಿಗೆದಾರರು ಹಣ ಪಾವತಿಸಲು ಕೋರಿರುವ ಮೇರೆಗೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಕೋರಿ ಸಲ್ಲಿಸಲಾಗಿದ್ದು, ಕಂಡಿಕೆ 118 ರಿಂದ 121 ರವರೆಗೆ ತಮ್ಮ ಅಭಿಪ್ರಾಯದಲ್ಲಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಂದ ದೃಢೀಕರಣ ಪಡೆದು ಮಾನ್ಯ ಆಯುಕ್ತರ ಅನುಮೋದನೆ ಪಡೆದು ಬಿಲ್ಲಿನ ಮೊತ್ತ ಪಾವತಿಸಲು ಕಾನೂನಿನ ಅಡಿಯಲ್ಲಿ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳ ಬಹುದಾಗಿರುತ್ತದೆ ಎಂಬ ಅಂಶವನ್ನು ಅಪೀಲು ಸ್ಥಾಯಿ ಸಮಿತಿ ಗಮನಕ್ಕೆ ತರಲಾಗಿದೆ.

ಪ್ರಕರಣವನ್ನು ಕರೆಯಲಾಯಿತು, ಮನವಿದಾರರು ಹಾಜರಾಗಿದ್ದು ಸೇವೆಯನ್ನು ಸಲ್ಲಿಸಿದ್ದರು ಸಹ ಇದುವರೆವಿಗೂ ಸಂಬಂಧಪಟ್ಟ ಪ್ರಾಧಿಕಾರ ಬಿಲ್ಲಿನ ಹಣವನ್ನು ಪಾವತಿಸಿರುವುದಿಲ್ಲ. ಸಂಬಂಧ ಆಧಿಕಾರಿಗಳ ಆದೇಶದ ಮೇರೆಗೆ ತೆರವುಗೊಳಿಸುವ ಕಾರ್ಯವನ್ನು ಮಾಡಲಾಗಿದ್ದು, ಕಾನೂನು ಪ್ರತಿವಾದಿಗಳ ಹೇಳಿಕೆ ಪ್ರಕಾರ ಕಾರ್ಯಾದೇಶ ನೀಡಿಲ್ಲವಾದ್ದರಿಂದ ಮನವಿದಾರರಿಗೆ ಯಾವುದೇ ಪರಿಹಾರ ನೀಡಲು ಬರುವುದಿಲ್ಲ.

ಪ್ರತಿವಾದಿಗಳಾದ ಜಾಹೀರಾತು ವಿಭಾಗದಿಂದ ಗೈರುಹಾಜರಾಗಿದ್ದು ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ/(ಆ)/10/2012-13** ವಿಶೇಷ ಅಯುಕ್ತರು (ಯೋಜನೆ) ರವರ ಟಿಪ್ಪಣಿ ರೀತ್ಯಾ ಉಪ ಅರೋಗ್ಯಾಧಿಕಾರಿ (ದಕ್ಷಿಣ) ಚಿಕ್ಕಪೇಟೆ ವಲಯ, ವಾರ್ಡ್ ಸಂಖ್ಯೆ: 145ರ ವ್ಯಾಪ್ತಿಯಲ್ಲಿರುವ ಉಲುಚುಕ್ಕಮ್ಮ ಬ್ರಾಹ್ಮಣ ಮಹಾಸಭಾ, ನಂ.33 ಹೆಚ್.ಸಿದ್ದಯ್ಯ ರಸ್ತೆ, ವಿಲ್ಸನ್‌ಗಾರ್ಡನ್,ಬೆಂಗಳೂರು ರವರು 2010ರಲ್ಲಿ ಮಹಾನಗರ ಪಾಲಿಕೆಯಿಂದ ಸರಳ ಪರವಾನಗಿ ಅಡಿಯಲ್ಲಿ ಪ್ರಾರ್ಥನಾಮಂದಿರ ಮತ್ತು ಕಮ್ಯೂನಿಟಿ ಹಾಲ್ ಉದ್ದಿಮೆ ನಡೆಸಲು ಪರವಾನಗಿಯನ್ನು ಪಡೆದಿರುತ್ತಾರೆ. ಆದರೆ ಸ್ಥಳೀಯ ನಿವಾಸಿಗಳು ಅಂದರೆ 8ನೇ ಅಡ್ಡರಸ್ತೆ ಹೆಚ್.ಸಿದ್ದಯ್ಯ ರಸ್ತೆ, ವಿಲ್ಸನ್‌ಗಾರ್ಡನ್ ರವರು ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ದೂರು ನೀಡಿ ತೊಂದರೆಯಾಗುತ್ತದೆ ಎಂದೂ ಪರವಾನಗಿಯನ್ನು ರದ್ದುಪಡಿಸಬೇಕೆಂದು ದಿನಾಂಕ: 4-11-2011 ರಂದು ಜಂಟಿ ಆಯುಕ್ತರವರಿಗೆ ದೂರು ನೀಡಿರುತ್ತಾರೆ. ದಿನಾಂಕ:22-11-2011 ಉದ್ದಿಮೆದಾರರಿಗೆ ಹಿಂಬರಹ ಜಾರಿ ಮಾಡಲಾಗಿರುತ್ತದೆ. ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ಮಂಡಳಿಗೆ ಪತ್ರ ಬರೆಯಲಾಗಿರುತ್ತದೆ. ಉದ್ದಿಮೆದಾರರು ದಿನಾಂಕ: 28-11-2011 ರಂದು ಕಛೇರಿಗೆ ಲಿಖಿತ ಮೂಲಕ ಪತ್ರ ನೀಡಿ ಕಾಲಾವಕಾಶ ಕೋರಿರುತ್ತಾರೆ. ಪುನ: ದಿನಾಂಕ:25-11-2011 ರಂದು ದೂರುದಾರರು ಜಂಟಿ ಆಯುಕ್ತರು (ದಕ್ಷಿಣ) ರವರಿಗೆ ಮೇಲ್ಮನವಿ ಸಲ್ಲಿಸಿರುವ ಕಾರಣ ಎರಡನೇ ಬಾರಿಗೆ ಉದ್ದಿಮೆದಾರರಿಗೆ ದಿನಾಂಕ:27-12-2011 ರಂದು ಹಿಂಬರಹ ನೀಡದರೂ ಸಹ ಉದ್ದಿಮೆದಾರರು ಸಮಜಾಯಿಷಿ ನೀಡಿರುವುದಿಲ್ಲ.

ದೂರುದಾರರು ಪುನ: ಮೂರನೇ ಬಾರಿಗೆ ಜಂಟಿ ಆಯುಕ್ತರು (ದಕ್ಷಿಣ) ರವರನ್ನು ಭೇಟಿ ಮಾಡಿ ಮೇಲ್ಮನವಿ ಸಲ್ಲಿಸಲಾಗಿ ಜಂಟಿ ಆಯುಕ್ತರು (ದಕ್ಷಿಣ) ರವರು ದಿನಾಂಕ:23-3-2012 ರಂದು ಸದರಿ ಉದ್ದಿಮೆಯ ಪರವಾನಗಿಯನ್ನು ರದ್ದುಪಡಿಸಲು ಆದೇಶ ಹೊರಡಿಸಿರುತ್ತಾರೆ. ದಿನಾಂಕ: 29-2-2012 ರಂದು ಉದ್ದಿಮೆದಾರರಿಗೆ ಪರವಾನಗಿ ರದ್ದುಪಡಿಸಿರುವ ಆದೇಶದ ಪ್ರತಿಯನ್ನು ಅಂಚೆ ಮುಖಾಂತರ

ರವಾನಿಸಲಾಗಿರುತ್ತದೆ. ಎಲ್ಲಾ ವಿಷಯಗಳನ್ನು ತಮ್ಮ ಆದೇಶದಂತೆ ಎರಡು ಮೂಲ ಕಡತದೊಂದಿಗೆ ತಮ್ಮಗಳ ಅವಗಾಹನೆಗೆ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಈ ಮನವಿದಾರರು ತಮ್ಮ ವಾದವನ್ನು ಮಂಡಿಸುತ್ತಾ ಮೇಲಿನ ಆಧಿಕಾರಿಗಳ ನಿರ್ದೇಶನ ನೀಡಿದ್ದರೂ ಸಹ ಉದ್ದಿಮೆಯ ಪರವಾನಗಿಯನ್ನು ನೀಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆಕ್ಷೇಪಣೆದಾರರು, ಅಕ್ಷೇಪಣೆಯನ್ನು ಸಲ್ಲಿಸಿದ್ದು ಇದನ್ನು ದಾಖಲೆಗೆ ತೆಗೆದುಕೊಳ್ಳಲಾಗಿದೆ. ಪ್ರತಿವಾದಿ ಉಪ ಆರೋಗ್ಯಾಧಿಕಾರಿ ಇವರು ಹಾಜರಿದ್ದು, ತಮ್ಮ ಹೇಳಿಕೆಯಲ್ಲಿ ಅರ್ಜಿದಾರರು ಪರವಾನಿಗೆಯನ್ನು ಪಡೆದು ಉದ್ದಿಮೆ ನಡೆಸುತ್ತಿದ್ದು ಅಕ್ಷೇಪಣೆದಾರರುಗಳಿಂದ , ಅಕ್ಷೇಪಣೆಗಳು ಬಂದ ಕಾರಣ ಉದ್ದಿಮೆಯ ಪರವಾನಿಗೆಯನ್ನು ನವೀಕರಿಸಲು ತಿರಸ್ಕರಿಸಿದೆ. ತೆಗೆದುಕೊಂಡಿರುವ ಕ್ರಮವು ಪ್ರಸುತ್ತ ಇರುವ ನಿಯಮಾವಳಿ ಅನುಸಾರವಾಗಿರುತ್ತದೆ ಹಾಗು ಮನವಿದಾರರಿಗೆ ಹಾಲಿ ಇರುವ ಕಟ್ಟಡದ ಪ್ರವೇಶದ್ವಾರವನ್ನು ಬದಲಾಯಿಸುವಂತೆ ಸೂಚಿಸಲಾಗಿದೆ. ಆದರೆ ಮನವಿದಾರರು, ಇದನ್ನು ಒಪ್ಪದೇಯಿರುವ ಕಾರಣ ಪ್ರತಿವಾದಿಗಳು ಉದ್ದಿಮೆಯ ಪರವಾನಿಗೆಯನ್ನು ನವೀಕರಿಸಿರುವುದಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಪ್ರಕರಣವನ್ನು ಸ್ಥಳ ಪರಿಶೀಲನೆ ಹಾಗು ಅದೇಶಕ್ಕಾಗಿ ಮುಂದೂಡಿದೆ.

**ವಿಷಯ:ಸಂಖ್ಯೆ:ಆಸ್ಥಾಸ/(ಆ)/11/2012-13** ಅಯುಕ್ತರುರವರ ಟಿಪ್ಪಣಿ ಸಂಖ್ಯೆ:ಅ.ಅ(ಪ)ಪಿಅರ್/252/12–13 ದಿನಾಂಕ:18–5–2012ರಲ್ಲಿ,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ವ್ಯಾಪ್ತಿಗೆ ಒಳಪಡುವ ಉಪ ಆರೋಗ್ಯಾಧಿಕಾರಿ (ಪಶ್ಚಿಮ) ಮಹಾಲಕ್ಷ್ಮೀಪುರಂ ವಲಯದ ವಾರ್ಡ್–43ರಲ್ಲಿರುವ ಸ್ವತ್ತಿನ ಸಂಖ್ಯೆ: 76, 8ನೇ ಕ್ರಾಸ್, ಜೆ.ಎಸ್.ನಗರ, ಸರಸ್ವತಿಪುರಂ, ನಂದಿನಿಬಡವಾಣೆ ಬೆಂಗಳೂರು–86ರಲ್ಲಿ ಅಶ್ವಶಕ್ತಿಯೊಂದಿಗೆ ವೆಲೆಡಿಂಗ್ ವರ್ಕಶಾಪ್ ಉದ್ದಿಮೆ ನಡೆಸಲು ಪರವಾನಗಿಯನ್ನು ಕೋರಿ ಶ್ರೀ.ಆರ್. ಈಶ್ವರರಾವ್ ರವರು ದಿನಾಂಕ:19–10–2011 ರಂದು ಆರ್ಜಿಯನ್ನು ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಅರ್ಜಿದಾರರು ಉದ್ದಿಮೆಯನ್ನು ನಡೆಸಲು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ, ಪಕ್ಕದ ಮನೆ ಸಂಖ್ಯೆ: 76/ಎ,ರವರು ಹಾಗೂ ಹಿಂಭಾಗದ ಮನೆ ಸಂಖ್ಯೆ:1/1 ಈ ಮುಖ್ಯರಸ್ತೆಯಲ್ಲಿರುವವರು ಇವರಿಗೆ ಪರವಾನಗಿ ನೀಡುವ ಒಪ್ಪಿಗೆ ಪತ್ರಕ್ಕೆ ಸಹಿಗಳನ್ನು ಮಾಡಿರುವುದಿಲ್ಲ ಹಾಗೂ ವಾರ್ಡ್–43ರ ಪಾಲಿಕೆ ಸದಸ್ಯರು ಸದರಿ ಉದ್ದಿಮೆಗೆ ಪರವಾನಗಿಯನ್ನು ನೀಡಬಾರದೆಂದು ದಿನಾಂಕ:17–5–2011ರಂದು ಕಛೇರಿಗೆ ಪತ್ರ ಸಲ್ಲಿಸಿರುತ್ತಾರೆ. ಹಾಗು ಜೆ.ಎಸ್.ನಗರ ನಾಗರೀಕರು ಸಹ ಪರವಾನಗಿಯನ್ನು ನೀಡಬಾರದೆಂದು ಅರ್ಜಿಯನ್ನು ದಿನಾಂಕ:8–12–2011ರಂದು ಕಛೇರಿಗೆ ದೂರು ಸಲ್ಲಿಸಿರುತ್ತಾರೆ. ಈ ಪರವಾನಗಿಯ ಮಂಜೂರಾತಿ ವಿಷಯದಲ್ಲಿ ದೂರುಗಳು ಬಂದ ಹಿನ್ನಲೆಯಲ್ಲಿ ಅರ್ಜಿದಾರರಿಗೆ ದಿನಾಂಕ:21–12–11ರಂದು ಪರವಾನಗಿಯನ್ನು ಮಂಜೂರು ಮಾಡಲು ಸಾಧ್ಯವಿಲ್ಲವೆಂದು ಕಛೇರಿಯಿಂದ ಹಿಂಬರಹವನ್ನು ನೀಡಲಾಗಿರುತ್ತದೆ.

ಸದರಿ ಉದ್ದಿಮೆದಾರರು ಹಿಂಬರಹವನ್ನು ಮಾನ್ಯ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ. ದಾವೆ ಸಂಖ್ಯೆ(ಡಬ್ಲ್ಯೂ.ಪಿ 3816/2012) ಆಗಿದ್ದು,ದಿನಾಂಕ:22–3–2012ರಂದು ಉದ್ದಿಮೆ ಸ್ಥಳಕ್ಕೆ ಭೇಟಿ ನೀಡಿ ಅಕ್ಕಪಕ್ಕದ ನಿವಾಸಿಗಳನ್ನು ವಿಚಾರಿಸಿದಾಗ ಉದ್ದಿಮೆ ನಡೆಸಲು ಪರ ಹಾಗೂ ವಿರೋಧ ವ್ಯಕ್ತಪಡಿಸಿ, ಮಹಜರ್ ವರದಿಗೆ ಸಹಿಯನ್ನು ನೀಡಿರುತ್ತಾರೆ ಎಲ್ಲಾ ವಿಷಯವನ್ನು ತಮ್ಮ ಅದ್ಯ ಗಮನಕ್ಕೆ ತರಲಾಗಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಿದ್ದು ಪ್ರತಿವಾದಿಗಳು ಹಾಜರಿದ್ದು ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ(ತ)/12/2012-13** ಅಪರ ಅಯುಕ್ತರು(ಪೂರ್ವ) ರವರ ಟಿಪ್ಪಣಿ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೂರ್ವ ವಲಯ ವ್ಯಾಪ್ತಿಗೆ ಒಳಪಡುವ ಸ್ವತ್ತಿನ ಸಂಖ್ಯೆ: 1134,ಹೆಚ್.ಎ.ಎಲ್ 2ನೇ ಹಂತ, ವಾರ್ಡ್–88 ಸದರಿ ಸ್ವತ್ತಿನಲ್ಲಿ ತಳ ಅಂತಸ್ತು, ನೆಲಅಂತಸ್ತು ಒಂದನೇ ಅಂತಸ್ತು, ಎರಡನೇ ಅಂತಸ್ತು,ಮೂರನೇ ಅಂತಸ್ತು,ನಾಲ್ಕನೇ ಅಂತಸ್ತು, ಮತ್ತು ಐದನೇ ಅಂತಸ್ತಿನ ಕಟ್ಟಡ ಹೊಂದಿದ್ದು,ಪೂರಾ ಅಂತಸ್ತನ್ನು ವಸತಿಯೇತರ ಕಟ್ಟಡ್ಡಕ್ಕೆ ಉಪಯೋಗಿಸುತ್ತಿದ್ದು, ಬಾಡಿಗೆಗೆ ನೀಡಲಾಗಿರುತ್ತದೆ. ಈ ಮೇರೆಗೆ ಹೊಸ ಯು.ಎ.ವಿ ಪದ್ದತಿಯ ಪ್ರಕಾರ ಸದರು ಸ್ವತ್ತು ಅನುಬಂಧ–2ರ ವರ್ಗ VI ವಲಯ ಎ ಗೆ ಬಂದಿದ್ದು ಪ್ರತಿ ಚದರಡಿ ಒಂದಕ್ಕೆ ಬಾಡಿಗೆ ಅಧಾರ ರೂ.20/– ರಂತೆ ತೆಗೆದುಕೊಂಡು ಕಂದಾಯವನ್ನು ದಿನಾಂಕ: 1–4–2008 ರಿಂದ ಜಾರಿಗೊಳಿಸಿ ದಿನಾಂಕ:24–3–2011 ರಂದು ವಿಶೇಷ ಸೂಚನಾಪತ್ರವನ್ನು ಜಾರಿ ಮಾಡಲಾಗಿರುತ್ತದೆ ಪ್ರತಿ ಅಂತಸ್ತಿನ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಅಂತಸ್ತು | ಮು ಸಂಖ್ಯೆ | ಖಾತೆದಾರರ ಹೆಸರು | ಕಟ್ಟಡದ ಅಳತೆ | ವಾರ್ಷಿಕ ಮೌಲ್ಯ |
|---|---|---|---|---|---|
| 1 | ತಳ | 1134 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 3000 ಚ.ಅ | 5,82,000/– |
| 2 | ನೆಲ | 1134/1 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 4000 ಚ.ಅ | 7,76,000/– |
| 3 | ಒಂದನೇ | 1134/2 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 4000 ಚ.ಅ | 7,76,000/– |
| 4 | ಎರಡನೇ | 1134/3 | ಶ್ರೀಮತಿ.ಸುಮತಿ ದೇವಿ | 4000 ಚ.ಅ | 7,76,000/– |
| 5 | ಮೂರನೇ | 1134/4 | ಶ್ರೀಮತಿ.ಸುಮತಿ ದೇವಿ | 4000 ಚ.ಅ | 7,76,000/– |
| 6 | ನಾಲ್ಕನೇ | 1134/5 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 4000 ಚ.ಅ | 7,76,000/– |

ಮೇಲ್ಕಂಡಂತೆ ನಿಗಧಿಪಡಿಸಲಾದ ಕಂದಾಯದ ವಿರುದ್ದ ಖಾತೆದಾರರು ಅಧ್ಯಕ್ಷರು ಅಪೀಲು ಸ್ಥಾಯಿ ಸಮಿತಿ ರವರಿಗೆ ಅರ್ಜಿ ಸಲ್ಲಿಸಿದ್ದು ಅಪೀಲು ಅರ್ಜಿಯ ಕಾಲಮಿತಿಯಲ್ಲಿ ರುವುದಿಲ್ಲ, ಪೂರ್ಣ ಕಡತವನ್ನು ಅಪೀಲು ಸ್ಥಾಯಿ ಸಮಿತಿಯ ಅಧ್ಯಕ್ಷರ ಅವಗಾಹನೆಗಾಗಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಿದ್ದು ಪ್ರತಿವಾದಿಗಳು ಹಾಜರಾಗಿರುತ್ತಾರೆ ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ(ಖಾ)/13/2012-13** ಅಪರಅಯುಕ್ತರು(ಪಶ್ಚಿಮ) ರವರ ಟಿಪ್ಪಣಿ ಸಂಖ್ಯೆ:ಅ.ಅ.(ಪ) ಪಿಆರ್/96/12–13 ದಿನಾಂಕ; 18–5–2012ರಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಂದಾಯ ಇಲಾಖೆ ಗಾಂಧಿನಗರ ವಿಭಾಗದ ವಾರ್ಡ್ 94ರ ರಾಜವೆಂಟಕರಾಮ ಶೆಟ್ಟಿ ಲೇಔಟ್ ನಲ್ಲಿರುವ ಸ್ವತ್ತಿನ ಸಂಖ್ಯೆ:17 ಮತ್ತು 18ರ ಸ್ವತ್ತುಗಳನ್ನು ಶ್ರೀ.ಎಂ.ಶೇಷಪ್ಪ ರವರು ಕ್ರಯಕ್ಕೆ ಪಡೆದು ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಶ್ರೀ.ಎಂ ಶೇಷಪ್ಪ ರವರಿಗೆ ಶ್ರೀಮತಿ ನಾಗುಬಾಯಿ ಮತ್ತು ಶ್ರೀಮತಿ.ರಾಜುಬಾಯಿ ಎಂಬ ಇಬ್ಬರು ಹೆಂಡತಿಯರಿದ್ದು ಇವರಲ್ಲಿ ಶ್ರೀಮತಿ. ನಾಗುಬಾಯಿ ರವರಿಗೆ ಶ್ರೀಮತಿ.ವಿ.ಸರಸ್ವತಿಬಾಯಿ ಒಬ್ಬಳೇ ಮಗಳಿದ್ದು ಶ್ರೀಮತಿ.ರಾಜುಬಾಯಿ ರವರಿಗೆ ಮಕ್ಕಳಿರುವುದಿಲ್ಲ.

ಸದರಿ ಸ್ವತ್ತನ್ನು ಶ್ರೀ.ಎಂ ಶೇಷಪ್ಪ ರವರ ಮರಣ ನಂತರ ಅವರ 2ನೇ ಹೆಂಡತಿಯಾದ ಶ್ರೀಮತಿ.ರಾಜುಬಾಯಿ ರವರ ಹೆಸರಿಗೆ ಖಾತೆ ವರ್ಗಾಯಿಸಲಾಗಿದ್ದು, ತದನಂತರ ಶ್ರೀಮತಿ. ರಾಜುಬಾಯಿ ರವರು ದಿನಾಂಕ: 12–10–2003 ರಂದು ನಿಧನ ಹೊಂದಿದ್ದು,ನಂತರ ಶ್ರೀಮತಿ.ವಿ.ಸರಸ್ವತಿಬಾಯಿ ರವರ

ಹೆಸರಿಗೆ ದಿನಾಂಕ:28-8-2010ರಂದು ಮೂಲಪತ್ರ, ವಂಶವೃಕ್ಷ, ಮರಣ ಸಮರ್ಥನ ಪ್ರಮಾಣ ಪತ್ರ ಮತ್ತು ನೋಟರಿ ಪ್ರಮಾಣ ಪತ್ರದ ಆಧಾರದ ಮೇಲೆ ಖಾತಾ ವರ್ಗಾಯಿಸಲಾಗಿದೆ.ಶ್ರೀಮತಿ.ವಿ.ಸರಸ್ವತಿಬಾಯಿ ರವರಿಗೆ ಮೂರು ಜನ ಮಕ್ಕಳಾದ ಶ್ರೀ.ವಿ. ಲೋಕನಾಥರಾವ್, ಶ್ರೀಮತಿ.ವಿ.ವಳ್ಳಿಬಾಯಿ ಮತ್ತು ಶ್ರೀ.ವಿ.ಸುಬ್ರಮಣ್ಯ ಇವರ ಪೈಕಿ ಶ್ರೀ.ವಿ. ಲೋಕನಾಥರಾವ್ ರವರಿಗೆ ಶ್ರೀಮತಿ. ವಿ.ಸರಸ್ವತಿಬಾಯಿ ರವರು ಸದರಿ ಸ್ವತ್ತನ್ನು ದಾನಪತ್ರದ ಮೂಲಕ ಹಕ್ಕನ್ನು ನೀಡಿರುತ್ತಾರೆ. ಈ ದಾಖಲೆ ಆಧಾರದ ಮೇಲೆ ಶ್ರೀ.ವಿ. ಲೋಕನಾಥರಾವ್ ರವರು ಖಾತಾ ವರ್ಗಾವಣೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಹಾಗೂ ಶ್ರೀಮತಿ.ವಿ.ವಳ್ಳಿಬಾಯಿ ರವರು ಸಹ ಶ್ರೀಮತಿ.ರಾಜುಬಾಯಿ ರವರು ನೀಡಿರುವ ನೊಂದಾಯಿತ ವಿಲ್‌ಯಾ ಮರಣ ಶಾಸನ ಪತ್ರವನ್ನು ಹಾಜರು ಪಡಿಸಿ ಶ್ರೀಮತಿ.ವಿ.ಸರಸ್ವತಿಬಾಯಿ ರವರ ಹೆಸರಿಗೆ ಮಾಡಿರುವ ಖಾತೆಯನ್ನು ರದ್ದುಪಡಿಸಿ ತಮ್ಮ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಡಲು ಕೋರಿರುತ್ತಾರೆ. ಈ ಪೈಕಿ ಸದರಿ ಸ್ವತ್ತಿನ ಬಗ್ಗೆ ವಿಚಾರಣೆ ನಡೆಸುವ ಸಲುವಾಗಿ ವಿಚಾರಣೆಗೆ ಹಾಜರಾಗಲು ಶ್ರೀಮತಿ.ವಿ.ಸರಸ್ವತಿಬಾಯಿ, ಶ್ರೀ.ವಿ. ಲೋಕನಾಥರಾವ್ ಮತ್ತು ಶ್ರೀಮತಿ .ವಿ.ವಳ್ಳಿಬಾಯಿ ರವರಿಗೆ ವಿಚಾರಣೆ ನೋಟಿಸ್ ಜಾರಿ ಮಾಡಲಾಗಿದ್ದು ಖಾತೆದಾರರಾದ ಶ್ರೀಮತಿ.ವಿ.ಸರಸ್ವತಿಬಾಯಿ ರವರು ವಿಚಾರಣೆಗೆ ಗೈರುಹಾಜರಾಗಿದ್ದು ಉಳಿದ ಅರ್ಜಿದಾರರು ವಿಚಾರಣೆಗೆ ಹಾಜರಾಗಿರುತ್ತಾರೆ. ವಿಚಾರಣೆಯಲ್ಲಿ ಶ್ರೀ.ವಿ. ಲೋಕನಾಥರಾವ್ ರವರು ಹೇಳಿಕೆ ನೀಡಿ ಸದರಿ ಸ್ವತ್ತು ನಮ್ಮ ತಾತನವರಾದ ಶ್ರೀ. ಎಂ ಶೇಷಪ್ಪ ನವರ ಆಸ್ತಿಯಾಗಿದ್ದು ಅವರ ಒಬ್ಬಳೇ ಮಗಳಾದ ಶ್ರೀಮತಿ. ವಿ.ಸರಸ್ವತಿಬಾಯಿ ರವರ ಹೆಸರಿಗೆ ಖಾತೆ ಮಾಡಿರುವುದು ಸರಿಯಾಗಿದ್ದು ನಮ್ಮ ತಾಯಿಯವರು ನನಗೆ ಮಾಡಿರುವ ನೊಂದಾಯಿತ ದಾನ ಪತ್ರದ ಮೂಲಕ ನನ್ನ ಹೆಸರಿಗೆ ವರ್ಗಾಯಿಸಲು ವಿಚಾರಣೆ ಸಮಯದಲ್ಲಿ ತಿಳಿಸಿರುತ್ತಾರೆ.

ಶ್ರೀಮತಿ.ವಿ.ವಳ್ಳಿಬಾಯಿ ರವರು ಸಹ ನೊಂದಾವಣೆ ಸಂಖ್ಯೆ:232/97-98 ದಿನಾಂಕ:16/10/1997 ರಂದು ಅವರ ಅಜ್ಜಿಯಾದ ಶ್ರೀಮತಿ.ರಾಜುಬಾಯಿ ರವರು ನೀಡಿರುವ ವಿಲ್‌ಯಾ ಮರಣ ಶಾಸನ ಪತ್ರದ ಪ್ರಕಾರ ಸದರಿ ಸ್ವತ್ತನ್ನು ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡಲು ಕೋರಿರುತ್ತಾರೆ.ಈ ಪೈಕಿ ಖಾತೆ ವರ್ಗಾಯಿಸುವ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಕೋರಲಾಗಿ ಕಾನೂನು ಕೋಶದ ಮುಖ್ಯಸ್ಥರು ಸದರಿ ಕಾಯ್ದೆ ಕಲಂ 114/ಎ ರ ಅಡಿ ಹಾಲಿ ಖಾತೆದಾರರು, ಅರ್ಜಿದಾರರು ಹಾಗೂ ತಕರಾರುದಾರರುಗಳಿಗೆ ವಿಚಾರಣೆಗೆ ಅವಕಾಶ ನೀಡಿ ವಿಚಾರಣೆ ನಡಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಬಹುದಾಗಿ ಅಭಿಪ್ರಾಯದೊಂದಿಗೆ ಕಡತವನ್ನು ಹಿಂದಿರುಗಿಸಿರುತ್ತಾರೆ. ಎಲ್ಲಾ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ ಮೂಲ ಕಡತವನ್ನು ಅಧ್ಯಕ್ಷರು ಅಪೀಲುಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಿ ಪ್ರತಿವಾದಿಗಳು ಮತ್ತು ಶ್ರೀ.ಸುರೇಂದ್ರ ಕಂದಾಯ ಪರಿವೀಕ್ಷಕರು ಹಾಜರಿದ್ದು ಸದರಿ ಪ್ರಕರಣವನ್ನು ಮುಂದೂಡಲಾಯಿತು.

(ಪುಟ್ಟಮ್ಮ)
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ ದಿನಾಂಕ:28-7-2012ರಂದು ನಡೆದ ಸಭೆಯ ನಡವಳಿಗಳು

| ಕ್ರಮ ಸಂಖ್ಯೆ | ಸದಸ್ಯರು ಹೆಸರು ಶ್ರೀಯುತರುಗಳಾದ | ಪದನಾಮ | ಹಾಜರಿದ್ದ ಅಧಿಕಾರಿಗಳು |
|---|---|---|---|
| 01 | ಪುಟ್ಟಮ್ಮ | ಅಧ್ಯಕ್ಷರು | ಅಧಿಕ ಕೌನ್ಸಿಲ್ ಕಾರ್ಯದರ್ಶಿ |
| 02 | ಬಿ.ಎಸ್.ಮಂಜುನಾಥ ರೆಡ್ಡಿ | ಸದಸ್ಯರು | ಸಹಾಯಕ ಆಯುಕ್ತರು(ಜಾಹಿರಾತು) |
| 03 | ಹೆಚ್.ಆರ್.ಕೃಷ್ಣಪ್ಪ | ಸದಸ್ಯರು | ಉಪ ಕಾನೂನು ಅಧಿಕಾರಿ |
| 04 | ಜಿ.ಹೆಚ್.ರಾಮಚಂದ್ರ | ಸದಸ್ಯರು | ಉಪ ಆರೋಗ್ಯಾಧಿಕಾರಿ (ಪಶ್ಚಿಮ) |
| 05 | ಎಲ್.ರಮೇಶ್ | ಸದಸ್ಯರು | ಸಹಾಯಕ ಕಂದಾಯ ಅಧಿಕಾರಿಗಳು ಜೆ.ಭಿ.ನಗರ/ ಕೋರಮಂಗಲ/ಯಶವಂತಪುರ/ಗಾಂಧಿನಗರ |
| 06 | ಸುಕಂದ | ಸದಸ್ಯರು | ಹಿರಿಯ ಅರೋಗ್ಯ ಪರಿವೀಕ್ಷಕರು ವಾರ್ಡ್ ಸಂಖ್ಯೆ:43 ಮತ್ತು 65 |
| 07 | ಎಂ.ಮುನಿಸ್ವಾಮಿ | ಸದಸ್ಯರು | |
| 08 | ಜಿ.ವರಲಕ್ಷ್ಮಿ | ಸದಸ್ಯರು | |
| 09 | ಎನ್.ಜಯಪಾಲ | ಸದಸ್ಯರು | |
| 10 | ಲಾವಣ್ಯ ಗಣೇಶ್ ರೆಡ್ಡಿ | ಸದಸ್ಯರು | |
| 11 | ಆಶಾ ಸುರೇಶ್ | ಸದಸ್ಯರು | |

**(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)**

**ವಿಷಯ:ಸಂಖ್ಯೆ:ಅಸ್ಥಾಸ/ಖಾ)/50/2011-12** ಜಂಟಿ ಅಯುಕ್ತರು(ದಕ್ಷಿಣ) ರವರ ಟಿಪ್ಪಣಿ ಸಂಖ್ಯೆ:ಡಿಎ/ಜಂ.ಅ.(ದ) ಪಿಆರ್/6211/11-12 ದಿನಾಂಕ; 26-11-2011ಲ್ಲಿ, ಸಹ ಕಂದಾಯಾಧಿಕಾರಿ(ಕೋರಮಂಗಲ) ವಲಯದ ವಾರ್ಡ್ ನಂ-151/68- ಕೋರಮಂಗಲ,ಬೆಂಗಳೂರು.ಸ್ವತ್ತಿನ ಸಂಖ್ಯೆ:13/1,13/2 ಮತ್ತು 13/3, 1ನೇ ಮುಖ್ಯರಸ್ತೆ,ಜಕ್ಕಸಂದ್ರದ ಈ ಸ್ವತ್ತಿನ ಪೂರಕ ಟಿಪ್ಪಣಿ.

ಶ್ರೀ.ಪಿ.ವಿನ್ಸೆಂಟ್ ರವರು ಖಾತಾ ನೊಂದಾಯಿಸಿರುವ ಸ್ವತ್ತಿಗೆ ಅರ್ಜಿದಾರರುಗಳು ಈ ಮೊದಲೇ ಕ್ರಯ ಪತ್ರವನ್ನು ಪಡೆದಿದ್ದು,ಈ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು, ನ್ಯಾಯಾಲಯದ ದಾವೆ ಸಂಖ್ಯೆ: 6545/95, 6546/95 ಮತ್ತು 6547/95 ಕ್ಕೆ ಅರ್ಜಿದಾರರ ಪರವಾಗಿ ದಿನಾಂಕ:3-5-2005 ರಂದು ಡಿಕ್ರಿಯಾಗಿರುತ್ತದೆ. ಸದರಿ ಸ್ವತ್ತಿಗೆ ಅರ್ಜಿದಾರರುಗಳು ಆಕ್ಷೇಪಣೆಯನ್ನು ಸಲ್ಲಿಸಿ, ಖಾತಾ ರದ್ದು ಪಡಿಸಲು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಈ ಬಗ್ಗೆ ಸದರಿ ಕಡತವನ್ನು ಪರಿಶೀಸಲಾಗಿ, ಜಂಟಿ ಅಯುಕ್ತರು(ಪೂರ್ವ) ಕಂಡಿಕೆ 49ರ ಕಡತದ ಪುಟ ಸಂಖ್ಯೆ:202 ರಿಂದ 205 ಕೆಎಂಸಿ ಕಾಯಿದೆ 114(ಎ) ಪ್ರಕಾರ ಸದರಿರವರ ಹಾಗೂ ಅರ್ಜಿದಾರರುಗಳನ್ನು ವಿಚಾರಣೆ ನಡಿಸಿ,ಸದರಿ ಸ್ವತ್ತಿನ ನ್ಯಾಯಾಲಯದ ಡಿಕ್ರಿಯ ಆದೇಶದನ್ವಯ ಖಾತೆಯನ್ನು ರದ್ದುಪಡಿಸಿ ತೀರ್ಮಾನ ಮಾಡಿರುತ್ತದೆ.

ಈ ಸಂಬಂಧ ಮಂಜೂರಾತಿ ನಕ್ಷೆಯನ್ನು ಜಂಟಿ ಅಯುಕ್ತರು(ಪೂರ್ವ) ರವರು ದಿನಾಂಕ: 26-12-2005 ರಂದು ರದ್ದುಪಡಿಸಿರುತ್ತಾರೆ. ಪುಟ ಸಂಖ್ಯೆ:104ರಲ್ಲಿ ಅಡಕಗೊಳಿಸಿದೆ. ಇದರ ವಿರುದ್ದ ಉಚ್ಚ

ನ್ಯಾಯಾಲಯದಲ್ಲಿ ದಾವೆ ಹೂಡಿ ಡಬ್ಲ್ಯೂಪಿ ನಂ-1797/2006ರ ರೀತ್ಯಾ ದಿನಾಂಕ26-12-2005ರ ಆದೇಶವನ್ನು ಮಾರ್ಪಾಡುಗೊಳಿಸಿ ಪುನರ್ ಪರಿಶೀಲಿಸಲು ಆದೇಶಿಸಿರುತ್ತಾರೆ. ಈ ಬಗ್ಗೆ ಅರ್ಜಿದಾರರಿಗೆ ಜಂಟಿ ಅಯುಕ್ತರು(ಪೂರ್ವ) ರವರಿಂದ ದಿನಾಂಕ: 31-3-2006 ರಂದು ಪತ್ರದ ಮೂಲಕ ಅರ್ಜಿದಾರರ ಮನವಿಯನ್ನು ತಿರಸ್ಕರಿಸಲಾಗಿದೆ ಎಂದು ಅರ್ಜಿದಾರರಿಗೆ ತಿಳಿಯಪಡಿಸಲಾಗಿರುತ್ತದೆ.(ಪುಟ ಸಂಖ್ಯೆ 164)

ಅರ್ಜಿದಾರರುಗಳಾದ ಶ್ರೀಮತಿ.ಕಸ್ತೂರು, ಶ್ರೀ.ಷಣ್ಮುಗಂ ಮತ್ತು ಶ್ರೀ.ವಿ.ಸುಬ್ಬರಾಯನ್ ರವರುಗಳ ಹೆಸರಿಗೆ ನ್ಯಾಯಾಲಯದ ಡಿಕ್ರಿ ಆದೇಶದಂತೆ ಖಾತಾ ನೊಂದಾಯಿಸಲಾಗಿರುತ್ತದೆ. ಈಗ ಶ್ರೀ.ಪಿ.ವಿನ್ಸೆಂಟ್ ರವರಿಗೆ ನೊಂದಾಯಿಸಿರುವ ಒಟ್ಟು ಅಳತೆ 20667 ಚದರ ಅಡಿಗಳಲ್ಲಿ 13812 ಚದರ ಅಡಿ ಕಳೆದು ಉಳಿದ 6855 ಚದರ ಅಡಿ ಅಳತೆಯ ಹಾಲಿ ಖಾತೆದಾರರ ಹೆಸರಿನಲ್ಲಿ ಮುಂದುವರೆಸಲಾಗಿ-ರುವುದು ಎಂಬುದಾಗಿ ತಿಳಿವಳಿಕೆ ಪತ್ರವನ್ನು ನೀಡಲಾಗಿರುತ್ತದೆ. ಸದರಿ ತಿಳುವಳಿಕೆ ಪತ್ರವು ಅಂಚೆ ರವಾನೆಯ ಮೂಲಕ ಸದರಿ ಕಛೇರಿಗೆ ಹಿಂದುರಿಗಿರುತ್ತದೆ. ಶ್ರೀ.ಪಿ.ವಿನ್ಸೆಂಟ್ ರವರು ನ್ಯಾಯಾಲಯದಲ್ಲಿ 7766/2006ರ ಅದೇಶವು ವಜಾಗೊಂಡಿರುತ್ತದೆ. ವಜಾಗೊಂಡಿರುವ ಆದೇಶವನ್ನು ನಗರ ಪಾಲಿಕೆ ವಕೀಲರು ಪತ್ರದ ಮೂಲಕ ತಿಳಿಸಿರುತ್ತಾರೆ. ಮತ್ತೊಮ್ಮೆ ಕಾನೂನು ಸಲಹೆಗಾರರ ಅಭಿಪ್ರಾಯದಂತೆ ಡಬ್ಲ್ಯೂಪಿ ನಂ-16249/2006 ದಿನಾಂಕ:31-8-2010. ಇತರೆ ಆದೇಶದನ್ವಯ ಪಕ್ಷಕಾರರು ತಮ್ಮ ವಿವಾದವನ್ನು ಸಕ್ಷಮ ಸಿವಿಲ್ ನ್ಯಾಯಾಲಯದ ಮುಂದೆ ಇತ್ಯರ್ಥ ಪಡಿಸಿಕೊಳ್ಳದ ಹೊರತು ತಮ್ಮ ಮನವಿಯನ್ನು ಪರಿಗಣಿಸಲು

ಸಾಧ್ಯ ವಿಲ್ಲವೆಂದು ಅಭಿಪ್ರಾಯ ನೀಡಿರುವ ಮೇರೆಗೆ ಸಿವಿಲ್ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿ ತೀರ್ಪಿನೊಂದಿಗೆ ಸಂಪರ್ಕಿಸಲು ತಿಳಿಯಪಡಿಸಿದ್ದು, ಇದರ ವಿರುದ್ದವಾಗಿ ಅಪೀಲು ಸ್ಥಾಯಿ ಸಮಿತಿ ಮುಂದೆ ಮೇಲ್ಮನವಿ ಸಲ್ಲಿಸಿರುವುದರಿಂದ ಸಂಪೂರ್ಣ ಟಿಪ್ಪಣಿಯನ್ನು ತಮ್ಮ ಅವಗಾಹನೆಗೆ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಅವರ ವಕೀಲರಾದ ಶ್ರೀ.ಕೆ.ಅರ್.ನಾಗರಾಜ್ ಇವರ ಮುಖಾಂತರ ಹಾಜರಿದ್ದು ಪ್ರತಿವಾದಿಗಳು ಹಾಜರಿದ್ದು, ಶ್ರೀ.ಶ್ರೀನಿವಾಸ್ ಸಹ ಕಂದಾಯಾಧಿಕಾರಿ ಇವರು ಕಾಲಾವಕಾಶ ಕೋರಿದ್ದು ಕೊನೆಯ ಕಾಲಾವಕಾಶ ನೀಡುತ್ತಾ ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ/(ತೆ)/04/2012-13** ಅಪರ ಅಯುಕ್ತರು (ಯೋಜನೆ) ರವರ ಟಿಪ್ಪಣಿ ರೀತ್ಯಾ ಸದರಿ ಸ್ವತ್ತಿನ ಖಾತೆಯು ಈ ಕಛೇರಿ ದಾಖಲೆಗಳಲ್ಲಿ ಶ್ರೀ.ಚಂದ್ರಶೇಖರ್.ಎಸ್. ಶೆಟ್ಟಿ ಮತ್ತು ರೇವತಿ. ಸಿ.ಶೆಟ್ಟಿ ರವರ ಹೆಸರಿನಲ್ಲಿದ್ದು, ಸ್ವತ್ತಿನ ಅಳತೆ 2400 ಚದರ ಅಡಿಗಳಿದ್ದು. ಸ್ವತ್ತಿನ ಖಾತೇದಾರರು ದಿನಾಂಕ:1-4-2008 ರಿಂದ ಜಾರಿಗೆ ಬರುವಂತೆ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆ ಅಡಿಯಲ್ಲಿ 3500 ಚದರಡಿಗಳ ಕಟ್ಟಡಕ್ಕೆ ವಸತಿ ದರದಲ್ಲಿ ಬಾಡಿಗೆ ಆಧಾರ 700 ಚದರಡಿ ಹಾಗೂ ಸ್ವಂತ ವಾಸದ ಆಧಾರ 800 ಚದರಡಿ ಕಟ್ಟಡಕ್ಕೆ ಸೇರಿಸಿ ಒಟ್ಟು ವಾರ್ಷಿಕ ಮೌಲ್ಯ ರೂ.21210-00(ವಸತಿ) ಹಾಗೂ 700 ಚದರಡಿ ವಸತಿಯೇತರ ಸ್ವಂತ ಹಾಗೂ 1300 ಚದರಡಿ ಬಾಡಿಗೆ ಆಧಾರ ಒಟ್ಟು ವಾರ್ಷಿಕ ಮೌಲ್ಯ ರೂ.92400/- (ವಸತಿಯೇತರ) ಗಳಿಗೆ ನಿಗಧಿಪಡಿಸಿಕೊಂಡು ಕಂದಾಯ ಪಾವತಿಸಿರುತ್ತಾರೆ.

ಸದರಿ ಸ್ವತ್ತಿನ ಮಾಲೀಕರು ತಪ್ಪು ಮಾಹಿತಿ ನೀಡಿ ಕಂದಾಯ ಪಾವತಿಸುತ್ತಿರುವುದು ಕಂಡು ಬಂದಿರುವುದರಿಂದ ಕಟ್ಟಡದಲ್ಲಿ ನೆಲ ಅಂತಸ್ತು 1320 ಚದರಡಿ(ವಸತಿಯೇತರ) 1ನೇ ಅಂತಸ್ತು 700 ಚದರಡಿ (ವಸತಿಯೇತರ) ಕಟ್ಟಡ ಬಾಡಿಗೆ 720 ಚದರಡಿ (ವಸತಿ) 2ನೇ ಅಂತಸ್ತು 100 ಚದರಡಿ ಮನೆ ಬಾಡಿಗೆ ಆಧಾರ, 2ನೇ ಅಂತಸ್ತು 700 ಚದರಡಿ, 3ನೇ ಅಂತಸ್ತು 700 ಚದರಡಿ(ವಸತಿಯೇತರ)ಉಪಯೋಗ ಬಾಡಿಗೆ ಆಧಾರ ಒಟ್ಟು ವಾರ್ಷಿಕ ಮೌಲ್ಯ ರೂ.13,776/-(ವಸತಿ),1,91,520/-(ವಸತಿಯೇತರ) ಗಳಿಗೆ ದಿನಾಂಕ:1-4-2008ರಿಂದ ಜಾರಿಗೆ ಬರುವಂತೆ ಕಂದಾಯ ನಿಗಧಿಪಡಿಸಿ ಈ ವಲಯ ಕಛೇರಿ ವಾರ್ಡ್-17ರ

ಎಂ.ಟಿ.ಅರ್.19/11-12 ರಂತೆ ವಿಶೇಷ ಸೂಚನಾಪತ್ರವನ್ನು ದಿನಾಂಕ:3-10-2011 ರಂದು ಸ್ವತ್ತಿನ ಮಾಲೀಕರಿಗೆ ಜಾರಿಗೊಳಿಸಿದೆ.

ದಿನಾಂಕ:3-10-2011 ರಂದು ಈ ಕಛೇರಿಯಿಂದ ನೀಡಿರುವ ವಿಶೇಷ ಸೂಚನಾ ಪತ್ರದಲ್ಲಿ ನಿಗಧಿಪಡಿಸಿರುವ ಕಂದಾಯದ ವಿರುದ್ಧ ಪ್ರಥಮ ಅಪೀಲು ಅಧಿಕಾರಿ (ಕಂದಾಯ ಆಧಿಕಾರಿ) ರಾಜರಾಜೇಶ್ವರಿನಗರ ವಲಯ) ರವರಿಗೆ ಅಪೀಲು ಮನವಿ ಸಲ್ಲಿಸಿದ್ದ ಮೇರೆಗೆ ಅಪೀಲು ಹೇಳಿಕೆ ಪ್ರಕಾರ 4220 ಚದರಡಿ ಕಟ್ಟಡಕ್ಕೆ ರೂ.21,336/-(ವಸತಿ) ರೂ.1,23,200/-( ವಸತಿಯೇತರ)ಗಳಿಗೆ ದಿನಾಂಕ: 1-4-2008 ರಿಂದ ಕಂದಾಯವನ್ನು ಮರು ನಿಗಧಿಪಡಿಸಿ ಈ ವಲಯ ಕಛೇರಿ ವಿಶೇಷ ಸೂಚನಾ ಪತ್ರದ ಎಂ.ಟಿ.ಅರ್.31/11-12 ರಂತೆ ಕಂದಾಯವನ್ನು ಮರು ನಿಗಧಿಪಡಿಸಿದೆ. ಕಂದಾಯ ನಿಗಧಿಪಡಿಸಿರುವುದರ ವಿರುದ್ದ ಖಾತೇದಾರರು ಅಧ್ಯಕ್ಷರು ಅಪೀಲು ಸ್ಥಾಯಿ ಸಮಿತಿ ರವರಿಗೆ ಅರ್ಜಿ ಸಲ್ಲಿಸಿದ್ದು ಅಪೀಲು ಅರ್ಜಿಯು ಕಾಲಮಿತಿಯಲ್ಲಿರುವುದಿಲ್ಲ, ಪೂರ್ಣ ಕಡತವನ್ನು ಸಮಿತಿಯ ತೀರ್ಮಾನ ಕೋರಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಾಗಿದ್ದು, ಪ್ರತಿವಾದಿ ಸಹಕಂದಾಯಾಧಿಕಾರಿ ಮತ್ತು ಕಂದಾ ಪರಿವೀಕ್ಷಕರು ಇವರು ಹಾಜರಾಗಿದ್ದು ಸ್ವತ್ತಿನ ಸ್ಥಳ ಪರಿಶೀಲನೆ ನಂತೆ ಕಂದಾಯವನ್ನು ನಿಗದಿ ಪಡಿಸಿದ್ದು, ನಿಗದಿ ಪಡಿಸಿರುವ ಕಂದಾಯವು ಕ್ರಮ ಬದ್ದವಾಗಿರುತ್ತದೆ ಎಂಬುದಾರಿ ತಿಳಿಸಿರುತ್ತಾರೆ.

ಪ್ರಕರಣವನ್ನು ಸ್ಥಳ ಪರಿಶೀಲನೆಗಾಗಿ ಹಾಗು ಆದೇಶಕ್ಕಾಗಿ ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಆಸ್ಥಾಸ/(ಜಾ)/09/2012-13** ವಿಶೇಷ ಅಯುಕ್ತರು (ಯೋಜನೆ) ರವರ ಟಿಪ್ಪಣಿ ರೀತ್ಯಾ ದಿನಾಂಕ: 10-6-2011ರ ಪತ್ರದಲ್ಲಿ ಜುಲೈ ಮತ್ತು ಆಗಸ್ಟ್ 2009 ರಂದು ಕಾರ್ಯ ನಿರ್ವಹಿಸಿರುವ ಅವಧಿಗೆ ಹಣ ಪಾವತಿಸಲು ಆದೇಶಿಸುವಂತೆ ಶ್ರೀ.ಬಿ.ಎಲ್.ಪ್ರಕಾಶ್, ಗುತ್ತಿಗೆದಾರರು ಸ್ಥಾಯಿ ಸಮಿತಿಗೆ ಮೇಲ್ಮನವಿ ಸಲ್ಲಿಸಿದ್ದು, ಕಡತವನ್ನು ಪರಿಶೀಲಿಸಲಾಗಿ ದಿನಾಂಕ:1-7-2009 ರಿಂದ 31-7-2009 ರವರೆಗೆ ಹಾಗೂ ದಿನಾಂಕ:1-8-2009 ರಿಂದ 31-8-2009 ರವರೆಗೆ ಅನಧಿಕೃತ ಜಾಹೀರಾತು ಫಲಕಗಳನ್ನು, ಬ್ಯಾನರ್ ಮತ್ತು ಬಂಟಿಂಗ್ಸ್ ಗಳನ್ನು ತೆರವುಗೊಳಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿರುವುದರಿಂದ ಪ್ಯಾಕೇಜ್ ಸಂಖ್ಯೆ:02 ಪಶ್ಚಿಮ ವಲಯ ಪ್ಯಾಕೇಜ್ ಸಂಖ್ಯೆ:04 ರಲ್ಲಿ ಮಹದೇವಪುರ/ ಬ್ಯಾಟರಾಯನಪುರ ಪ್ಯಾಕೇಜ್ ಸಂಖ್ಯೆ:05 ರಲ್ಲಿ ರಾಜರಾಜೇಶ್ವರಿ ನಗರ/ ದಾಸರಹಳ್ಳಿ ಪ್ರತಿ ತಿಂಗಳಿಗೆ ರೂ.90,000/-ಗಳಂತೆ ಪಾವತಿಸಬಹುದೆಂದು ಅಪರ ಆಯುಕ್ತರು(ರಾಜರಾಜೇಶ್ವರಿ ನಗರ)ಹಾಗೂ (ದಾಸರಹಳ್ಳಿ) ವಲಯದವರು ಕಾರ್ಯಾದೇಶ ನೀಡದೇ ಟಿಪ್ಪಣಿಯಲ್ಲಿ ಸದರಿ ಗುತ್ತಿಗೆದಾರರು ತೆರವುಗೊಳಿಸುವ ಕಾರ್ಯವನ್ನು ಮಾಡಿರುವುರೆಂದು ದೃಢೀಕರಿಸಿರುತ್ತಾರೆ.

ಗುತ್ತಿಗೆದಾರರು ಹಣ ಪಾವತಿಸಲು ಕೋರಿರುವ ಮೇರೆಗೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಕೋರಿ ಸಲ್ಲಿಸಲಾಗಿದ್ದು, ಕಂಡಿಕೆ 118 ರಿಂದ 121 ರವರೆಗೆ ತಮ್ಮ ಅಭಿಪ್ರಾಯದಲ್ಲಿ ಸಂಬಂಧಪಟ್ಟ ಕಂದಾಯ ಅಧಿಕಾರಿಗಳಿಂದ ದೃಢೀಕರಣ ಪಡೆದು ಮಾನ್ಯ ಆಯುಕ್ತರ ಅನುಮೋದನೆ ಪಡೆದು ಬಿಲ್ಲಿನ ಮೊತ್ತ ಪಾವತಿಸಲು ಕಾನೂನಿನ ಅಡಿಯಲ್ಲಿ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳ ಬಹುದಾಗಿರುತ್ತದೆ ಎಂಬ ಅಂಶವನ್ನು ಅಪೀಲು ಸ್ಥಾಯಿ ಸಮಿತಿ ಗಮನಕ್ಕೆ ತರಲಾಗಿದೆ.

ಪ್ರಕರಣವನ್ನು ಕರೆಯಲಾಯಿತು, ಮನವಿದಾರರು ಹಾಗೂ ಪ್ರತಿವಾದಿಗಳು ಹಾಜರಿದ್ದು, ಮನವಿದಾರರು ಹೇಳಿಕೆ ನೀಡಿದ್ದು ಟೆಂಡರ್ ಅನುಮೋದಿಸಿದ್ದು ನಾನು ಟೆಂಡರ್‌ದಾರನಾಗಿದ್ದು

ತೃಪ್ತಿಕರಣವಾಗಿ ಕಾರ್ಯನಿರ್ವಹಿಸಿರುತ್ತೇನೆ. ಟೆಂಡರ್‌ಗೆ ಆಯುಕ್ತರವರಿಂದ ಅನುಮೋದನೆ- ಯಾಗಿದ್ದು, ನಾನು ಅರ್ಹನಾಗಿದ್ದರು ಬೇರೆ ಗುತ್ತಿಗೆದಾರರಿಗೆ ನೀಡಲಾಗಿದೆ, ಸಂಬಂಧಪಟ್ಟ ಪ್ರಾಧಿಕಾರದವರು ಕಾರ್ಯಾದೇಶ ನೀಡಲು ಹಿಂದೆ-ಮುಂದೆ ಎಳೆದಾಡಲಾಗಿದೆ ಹಾಗೂ ನಾನು ಕಾಮಗಾರಿಯನ್ನು ಮಾಡಿದ್ದರು ಸಹ ಯಾವುದೇ ಕ್ರಮ ತೆಗೆದುಕೊಳ್ಳದೆ ಎರಡು ದಿನಗಳವರೆಗೆ ಕಡತವನ್ನು ಇಡಲಾಗಿದೆ, ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ತಗೆದುಕೊಂಡಿರುವುದಿಲ್ಲ. ಪ್ರತಿವಾದಿಗಳು ಹೇಳಿಕೆಯನ್ನು ನೀಡುತ್ತಾ ಮನವಿದಾರರು ಟೆಂಡರ್ ಪಡೆಯಲು ಅರ್ಹರಾಗಿರುವುದಿಲ್ಲ, ತೆಗೆದುಕೊಂಡಿರುವ ಕ್ರಮವು ಕ್ರಮ ಬದ್ದವಾಗಿರುತ್ತದೆ. ಸಂಬಂಧಪಟ್ಟ ಜಂಟಿ ಆಯುಕ್ತರವರಿಗೆ ಸಮಿತಿಯ ಮುಂದೆ ಹಾಜರಾಗಿ ಹಾಗೂ ಹೇಳಿಕೆ ನೀಡಲು ನಿರ್ದೇಶಿಸಲು ಕೋರಲಾಗಿರುವುದರಿಂದ ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ/(ಆ)/11/2012-13** ಅಯುಕ್ತರುರವರ ಟಿಪ್ಪಣಿ ಸಂಖ್ಯೆ:ಅ.ಅ(ಪ)ಪಿಆರ್/252/12-13 ದಿನಾಂಕ:18-5-2012ರಲ್ಲಿ,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ವ್ಯಾಪ್ತಿಗೆ ಒಳಪಡುವ ಉಪ ಆರೋಗ್ಯಾಧಿಕಾರಿ (ಪಶ್ಚಿಮ) ಮಹಾಲಕ್ಷ್ಮಿಪುರಂ ವಲಯದ ವಾರ್ಡ್-43ರಲ್ಲಿರುವ ಸ್ವತ್ತಿನ ಸಂಖ್ಯೆ: 76, 8ನೇ ಕ್ರಾಸ್, ಜೆ.ಎಸ್.ನಗರ, ಸರಸ್ವತಿಪುರಂ, ನಂದಿನಿಬಡವಾಣೆ ಬೆಂಗಳೂರು-86ರಲ್ಲಿ ಅಶ್ವಶಕ್ತಿಯೊಂದಿಗೆ ವೆಲೆಡಿಂಗ್ ವರ್ಕಶಾಪ್ ಉದ್ದಿಮೆ ನಡೆಸಲು ಪರವಾನಗಿಯನ್ನು ಕೋರಿ ಶ್ರೀ.ಆರ್. ಈಶ್ವರರಾವ್ ರವರು ದಿನಾಂಕ:19-10-2011 ರಂದು ಆರ್ಜಿಯನ್ನು ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ಅರ್ಜಿದಾರರು ಉದ್ದಿಮೆಯನ್ನು ನಡೆಸಲು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಲಾಗಿ, ಪಕ್ಕದ ಮನೆ ಸಂಖ್ಯೆ: 76/ಎ,ರವರು ಹಾಗೂ ಹಿಂಭಾಗದ ಮನೆ ಸಂಖ್ಯೆ:1/1 ಈ ಮುಖ್ಯರಸ್ತೆಯಲ್ಲಿರುವವರು ಇವರಿಗೆ ಪರವಾನಗಿ ನೀಡುವ ಒಪ್ಪಿಗೆ ಪತ್ರಕ್ಕೆ ಸಹಿಗಳನ್ನು ಮಾಡಿರುವುದಿಲ್ಲ ಹಾಗೂ ವಾರ್ಡ್-43ರ ಪಾಲಿಕೆ ಸದಸ್ಯರು ಸದರಿ ಉದ್ದಿಮೆಗೆ ಪರವಾನಗಿಯನ್ನು ನೀಡಬಾರದೆಂದು ದಿನಾಂಕ:17-5-2011ರಂದು ಕಛೇರಿಗೆ ಪತ್ರ ಸಲ್ಲಿಸಿರುತ್ತಾರೆ. ಹಾಗು ಜೆ.ಎಸ್.ನಗರ ನಾಗರೀಕರು ಸಹ ಪರವಾನಗಿಯನ್ನು ನೀಡಬಾರದೆಂದು ಅರ್ಜಿಯನ್ನು ದಿನಾಂಕ:8-12-2011ರಂದು ಕಛೇರಿಗೆ ದೂರು ಸಲ್ಲಿಸಿರುತ್ತಾರೆ. ಈ ಪರವಾನಗಿಯ ಮಂಜೂರಾತಿ ವಿಷಯದಲ್ಲಿ ದೂರುಗಳು ಬಂದ ಹಿನ್ನಲೆಯಲ್ಲಿ ಅರ್ಜಿದಾರರಿಗೆ ದಿನಾಂಕ:21-12-11ರಂದು ಪರವಾನಗಿಯನ್ನು ಮಂಜೂರು ಮಾಡಲು ಸಾಧ್ಯವಿಲ್ಲವೆಂದು ಕಛೇರಿಯಿಂದ ಹಿಂಬರಹವನ್ನು ನೀಡಲಾಗಿರುತ್ತದೆ.

ಸದರಿ ಉದ್ದಿಮೆದಾರರು ಹಿಂಬರಹವನ್ನು ಮಾನ್ಯ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ. ದಾವೆ ಸಂಖ್ಯೆ(ಡಬ್ಲ್ಯೂ.ಪಿ 3816/2012) ಆಗಿದ್ದು,ದಿನಾಂಕ:22-3-2012ರಂದು ಉದ್ದಿಮೆ ಸ್ಥಳಕ್ಕೆ ಭೇಟಿ ನೀಡಿ ಅಕ್ಕಪಕ್ಕದ ನಿವಾಸಿಗಳನ್ನು ವಿಚಾರಿಸಿದಾಗ ಉದ್ದಿಮೆ ನಡೆಸಲು ಪರ ಹಾಗೂ ವಿರೋಧ ವ್ಯಕ್ತಪಡಿಸಿ, ಮಹಜರ್ ವರದಿಗೆ ಸಹಿಯನ್ನು ನೀಡಿರುತ್ತಾರೆ ಎಲ್ಲಾ ವಿಷಯವನ್ನು ತಮ್ಮ ಅದ್ಯ ಗಮನಕ್ಕೆ ತರಲಾಗಿದೆ.

ನಿರ್ಣಯ:- ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಹಾಜರಿದ್ದು ತಮ್ಮ ಹೇಳಿಕೆಯನ್ನು ನೀಡಿದ್ದು ಈ ಉದ್ಯಮವು 18 ವರ್ಷಗಳ ಹಿಂದಿನಿಂದಲು ನಡೆಯುತ್ತಿದ್ದು ಇದು ತಮ್ಮ ಜೀವನೋಪಾಯಕ್ಕೆ ಮಾರ್ಗ ವಾಗಿದ್ದು ಈ ಉದ್ಯಮವನ್ನು ಹೊರತುಪಡಿಸಿದಲ್ಲಿ ತಾವು ಜೀವನ ನಡೆಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಹಾಜರಿದ್ದ ಆಧಿಕಾರಿಗಳು ಈ ಪ್ರದೇಶದ ಸಾರ್ವಜನಿಕರು ನೀಡಿರುವ ದೂರಿನ ಅನ್ವಯ ಪರವಾನಗಿಯನ್ನು ಮಂಜೂರು ಮಾಡಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ, ಸದರಿ ಹಿಂಬರಹದ ಆಧಾರದ ಮೇಲೆ ಮನವಿದಾರರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದು ನ್ಯಾಯಾಲಯವು ನಿಯಮಗಳ ಅನುಸಾರ ಸ್ಥಾಯಿ ಸಮಿತಿಯ ಮುಂದೆ ಮನವಿ ಸಲ್ಲಿಸಲು ಸೂಚಿಸಿರುವ ಮೇರೆಗೆ ಮನವಿದಾರರು ಸಲ್ಲಿಸಿರುವ ಮೇಲ್ಮನವಿ ಹಾಗು ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಸ್ಥಳ ಮಹಜರ್ ವರದಿಯಲ್ಲಿ 24

ಜನ ಪರವಾಗಿಯು ಹಾಗು 7 ಜನ ವಿರುದ್ಧವಾಗಿಯು ತಮ್ಮ ಹೇಳಿಕೆಗಳನ್ನು ನೀಡಿದ್ದು ಮಾನ್ಯ ಪಾಲಿಕೆ ಸದಸ್ಯರು ಈ ಬಗ್ಗೆ ಪರಿಶೀಲಿಸಿ ಪರವಾನಗಿ ಮಂಜೂರಾತಿ ನೀಡಲು ಕೋರಿರುವ ಮೇರೆಗೆ ಹಾಗು ಮನವಿದಾರರ ಈ ಉದ್ದಿಮೆಯಿಂದ ಜೀವನೋಪಾಯ ಸಾಗಿಸುತ್ತಿರುವುದಾಗಿ ಕೋರಿಕೊಂಡಿರುವ ಹಿನ್ನೆಲೆಯಲ್ಲಿ ಮನವಿದಾರರಿಗೆ ಸದರಿ ಉದ್ದಿಮೆ ನಡೆಸುವ ಸಲುವಾಗಿ ಸಾರ್ವಜನಿಕರಿಗೆ ಯಾವುದೇ ವಿಧವಾದ ಅಡಚಣೆ ನೀಡಬಾರದೆಂಬ ಷರತ್ತಿಗೊಳಪಡಿಸಿ ಉದ್ದಿಮೆ ಪರವಾನಗಿ ಮಂಜೂರಾತಿ ನೀಡಲು ತೀರ್ಮಾನಿಸಿದೆ.

**ವಿಷಯ:ಸಂಖ್ಯೆ:ಅಸ್ಥಾಸ/(ತ)/12/2012-13** ಅಪರ ಅಯುಕ್ತರು(ಪೂರ್ವ) ರವರ ಟಿಪ್ಪಣಿ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪೂರ್ವ ವಲಯ ವ್ಯಾಪ್ತಿಗೆ ಒಳಪಡುವ ಸ್ವತ್ತಿನ ಸಂಖ್ಯೆ: 1134,ಹೆಚ್.ಎ.ಎಲ್ 2ನೇ ಹಂತ, ವಾರ್ಡ್–88 ಸದರಿ ಸ್ವತ್ತಿನಲ್ಲಿ ತಳ ಅಂತಸ್ತು, ನೆಲಅಂತಸ್ತು ಒಂದನೇ ಅಂತಸ್ತು, ಎರಡನೇ ಅಂತಸ್ತು,ಮೂರನೇ ಅಂತಸ್ತು,ನಾಲ್ಕನೇ ಅಂತಸ್ತು, ಮತ್ತು ಐದನೇ ಅಂತಸ್ತಿನ ಕಟ್ಟಡ ಹೊಂದಿದ್ದು,ಪೂರಾ ಅಂತಸ್ತನ್ನು ವಸತಿಯೇತರ ಕಟ್ಟಡ್ಡಕ್ಕೆ ಉಪಯೋಗಿಸುತ್ತಿದ್ದು, ಬಾಡಿಗೆಗೆ ನೀಡಲಾಗಿರುತ್ತದೆ. ಈ ಮೇರೆಗೆ ಹೊಸ ಯು.ಎ.ವಿ ಪದ್ದತಿಯ ಪ್ರಕಾರ ಸದರು ಸ್ವತ್ತು ಅನುಬಂಧ–2ರ ವರ್ಗ VI ವಲಯ ಎ ಗೆ ಬಂದಿದ್ದು ಪ್ರತಿ ಚದರಡಿ ಒಂದಕ್ಕೆ ಬಾಡಿಗೆ ಅಧಾರ ರೂ.20/– ರಂತೆ ತೆಗೆದುಕೊಂಡು ಕಂದಾಯವನ್ನು ದಿನಾಂಕ: 1–4–2008 ರಿಂದ ಜಾರಿಗೊಳಿಸಿ ದಿನಾಂಕ:24–3–2011 ರಂದು ವಿಶೇಷ ಸೂಚನಾಪತ್ರವನ್ನು ಜಾರಿ ಮಾಡಲಾಗಿರುತ್ತದೆ ಪ್ರತಿ ಅಂತಸ್ತಿನ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರಮ ಸಂಖ್ಯೆ | ಅಂತಸ್ತು | ಮು ಸಂಖ್ಯೆ | ಖಾತೆದಾರರ ಹೆಸರು | ಕಟ್ಟಡದ ಅಳತೆ | ವಾರ್ಷಿಕ ಮೌಲ್ಯ |
|---|---|---|---|---|---|
| 1 | ತಳ | 1134 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 3000 ಚ.ಅ | 5,82,000/– |
| 2 | ನೆಲ | 1134/1 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 4000 ಚ.ಅ | 7,76,000/– |
| 3 | ಒಂದನೇ | 1134/2 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 4000 ಚ.ಅ | 7,76,000/– |
| 4 | ಎರಡನೇ | 1134/3 | ಶ್ರೀಮತಿ.ಸುಮತಿ ದೇವಿ | 4000 ಚ.ಅ | 7,76,000/– |
| 5 | ಮೂರನೇ | 1134/4 | ಶ್ರೀಮತಿ.ಸುಮತಿ ದೇವಿ | 4000 ಚ.ಅ | 7,76,000/– |
| 6 | ನಾಲ್ಕನೇ | 1134/5 | ಶ್ರೀ.ಎಂ.ರಾಮ್ ಚಿತ್ತರಂಜನ್ ದಾಸ್ | 4000 ಚ.ಅ | 7,76,000/– |

ಮೇಲ್ಕಂಡಂತೆ ನಿಗಧಿಪಡಿಸಲಾದ ಕಂದಾಯದ ವಿರುದ್ಧ ಖಾತೆದಾರರು ಅಧ್ಯಕ್ಷರು ಅಪೀಲು ಸ್ಥಾಯಿ ಸಮಿತಿ ರವರಿಗೆ ಅರ್ಜಿ ಸಲ್ಲಿಸಿದ್ದು ಅಪೀಲು ಅರ್ಜಿಯ ಕಾಲಮಿತಿಯಲ್ಲಿ ರುವುದಿಲ್ಲ, ಪೂರ್ಣ ಕಡತವನ್ನು ಅಪೀಲು ಸ್ಥಾಯಿ ಸಮಿತಿಯ ಅಧ್ಯಕ್ಷರ ಅವಗಾಹನೆಗಾಗಿ ಮಂಡಿಸಿದೆ.

ಪ್ರಕರಣವನ್ನು ಕರೆಯಲಾಯಿತು ಮನವಿದಾರರು ಗೈರುಹಾಜರಿಯಾಗಿದ್ದು ಪ್ರತಿವಾದಿಗಳು ಹಾಜರಾಗಿರುತ್ತಾರೆ ಪ್ರಕರಣವನ್ನು ಮುಂದೂಡಲಾಯಿತು.

**ವಿಷಯ:ಸಂಖ್ಯೆ:ಅಸ್ಥಾಸ/(ಖಾ)/13/2012-13** ಅಪರಅಯುಕ್ತರು(ಪಶ್ಚಿಮ) ರವರ ಟಿಪ್ಪಣಿ ಸಂಖ್ಯೆ:ಅ.ಅ.(ಪ) ಪಿಅರ್/96/12–13 ದಿನಾಂಕ; 18–5–2012ರಲ್ಲಿ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಂದಾಯ ಇಲಾಖೆ ಗಾಂಧಿನಗರ ವಿಭಾಗದ ವಾರ್ಡ್ 94ರ ರಾಜವೆಂಟಕರಾಮ ಶೆಟ್ಟಿ ಲೇಔಟ್ ನಲ್ಲಿರುವ ಸ್ವತ್ತಿನ ಸಂಖ್ಯೆ:17 ಮತ್ತು 18ರ ಸ್ವತ್ತುಗಳನ್ನು ಶ್ರೀ.ಎಂ.ಶೇಷಪ್ಪ ರವರು ಕ್ರಯಕ್ಕೆ ಪಡೆದು ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ. ಶ್ರೀ.ಎಂ ಶೇಷಪ್ಪ ರವರಿಗೆ ಶ್ರೀಮತಿ ನಾಗುಬಾಯಿ ಮತ್ತು ಶ್ರೀಮತಿ.ರಾಜುಬಾಯಿ

ಎಂಬ ಇಬ್ಬರು ಹೆಂಡತಿಯರಿದ್ದು ಇವರಲ್ಲಿ ಶ್ರೀಮತಿ. ನಾಗುಬಾಯಿ ರವರಿಗೆ ಶ್ರೀಮತಿ.ವಿ.ಸರಸ್ವತಿಬಾಯಿ ಒಬ್ಬಳೇ ಮಗಳಿದ್ದು ಶ್ರೀಮತಿ.ರಾಜುಬಾಯಿ ರವರಿಗೆ ಮಕ್ಕಳಿರುವುದಿಲ್ಲ.

ಸದರಿ ಸ್ವತ್ತನ್ನು ಶ್ರೀ.ಎಂ ಶೇಷಪ್ಪ ರವರ ಮರಣ ನಂತರ ಅವರ 2ನೇ ಹೆಂಡತಿಯಾದ ಶ್ರೀಮತಿ.ರಾಜುಬಾಯಿ ರವರ ಹೆಸರಿಗೆ ಖಾತೆ ವರ್ಗಾಯಿಸಲಾಗಿದ್ದು, ತದನಂತರ ಶ್ರೀಮತಿ. ರಾಜುಬಾಯಿ ರವರು ದಿನಾಂಕ: 12-10-2003 ರಂದು ನಿಧನ ಹೊಂದಿದ್ದು,ನಂತರ ಶ್ರೀಮತಿ.ವಿ.ಸರಸ್ವತಿಬಾಯಿ ರವರ ಹೆಸರಿಗೆ ದಿನಾಂಕ:28-8-2010ರಂದು ಮೂಲಪತ್ರ, ವಂಶವೃಕ್ಷ, ಮರಣ ಸಮರ್ಥನ ಪ್ರಮಾಣ ಪತ್ರ ಮತ್ತು ನೋಟರಿ ಪ್ರಮಾಣ ಪತ್ರದ ಆಧಾರದ ಮೇಲೆ ಖಾತಾ ವರ್ಗಾಯಿಸಲಾಗಿದೆ. ಶ್ರೀಮತಿ.ವಿ.ಸರಸ್ವತಿಬಾಯಿ ರವರಿಗೆ ಮೂರು ಜನ ಮಕ್ಕಳಾದ ಶ್ರೀ.ವಿ. ಲೋಕನಾಥರಾವ್, ಶ್ರೀಮತಿ.ವಿ.ವಳ್ಳಿಬಾಯಿ ಮತ್ತು ಶ್ರೀ.ವಿ.ಸುಬ್ರಮಣ್ಯ ಇವರ ಪೈಕಿ ಶ್ರೀ.ವಿ. ಲೋಕನಾಥರಾವ್ ರವರಿಗೆ ಶ್ರೀಮತಿ. ವಿ.ಸರಸ್ವತಿಬಾಯಿ ರವರು ಸದರಿ ಸ್ವತ್ತನ್ನು ದಾನಪತ್ರದ ಮೂಲಕ ಹಕ್ಕನ್ನು ನೀಡಿರುತ್ತಾರೆ. ಈ ದಾಖಲೆ ಆಧಾರದ ಮೇಲೆ ಶ್ರೀ.ವಿ. ಲೋಕನಾಥರಾವ್ ರವರು ಖಾತಾ ವರ್ಗಾವಣೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಹಾಗೂ ಶ್ರೀಮತಿ.ವಿ.ವಳ್ಳಿಬಾಯಿ ರವರು ಸಹ ಶ್ರೀಮತಿ.ರಾಜುಬಾಯಿ ರವರು ನೀಡಿರುವ ನೊಂದಾಯಿತ ವಿಲ್‌ಯಾ ಮರಣ ಶಾಸನ ಪತ್ರವನ್ನು ಹಾಜರು ಪಡಿಸಿ ಶ್ರೀಮತಿ.ವಿ.ಸರಸ್ವತಿಬಾಯಿ ರವರ ಹೆಸರಿಗೆ ಮಾಡಿರುವ ಖಾತೆಯನ್ನು ರದ್ದುಪಡಿಸಿ ತಮ್ಮ ಹೆಸರಿಗೆ ಖಾತಾ ವರ್ಗಾವಣೆ ಮಾಡಿಕೊಡಲು ಕೋರಿರುತ್ತಾರೆ. ಈ ಪೈಕಿ ಸದರಿ ಸ್ವತ್ತಿನ ಬಗ್ಗೆ ವಿಚಾರಣೆ ನಡೆಸುವ ಸಲುವಾಗಿ ವಿಚಾರಣೆಗೆ ಹಾಜರಾಗಲು ಶ್ರೀಮತಿ.ವಿ.ಸರಸ್ವತಿಬಾಯಿ, ಶ್ರೀ.ವಿ. ಲೋಕನಾಥರಾವ್ ಮತ್ತು ಶ್ರೀಮತಿ .ವಿ.ವಳ್ಳಿಬಾಯಿ ರವರಿಗೆ ವಿಚಾರಣೆ ನೋಟಿಸ್ ಜಾರಿ ಮಾಡಲಾಗಿದ್ದು ಖಾತೆದಾರರಾದ ಶ್ರೀಮತಿ.ವಿ.ಸರಸ್ವತಿಬಾಯಿ ರವರು ವಿಚಾರಣೆಗೆ ಗೈರುಹಾಜರಾಗಿದ್ದು ಉಳಿದ ಅರ್ಜಿದಾರರು ವಿಚಾರಣೆಗೆ ಹಾಜರಾಗಿರುತ್ತಾರೆ. ವಿಚಾರಣೆಯಲ್ಲಿ ಶ್ರೀ.ವಿ. ಲೋಕನಾಥರಾವ್ ರವರು ಹೇಳಿಕೆ ನೀಡಿ ಸದರಿ ಸ್ವತ್ತು ನಮ್ಮ ತಾತನವರಾದ ಶ್ರೀ. ಎಂ ಶೇಷಪ್ಪ ನವರ ಆಸ್ತಿಯಾಗಿದ್ದು ಅವರ ಒಬ್ಬಳೇ ಮಗಳಾದ ಶ್ರೀಮತಿ. ವಿ.ಸರಸ್ವತಿಬಾಯಿ ರವರ ಹೆಸರಿಗೆ ಖಾತೆ ಮಾಡಿರುವುದು ಸರಿಯಾಗಿದ್ದು ನಮ್ಮ ತಾಯಿಯವರು ನನಗೆ ಮಾಡಿರುವ ನೊಂದಾಯಿತ ದಾನ ಪತ್ರದ ಮೂಲಕ ನನ್ನ ಹೆಸರಿಗೆ ವರ್ಗಾಯಿಸಲು ವಿಚಾರಣೆ ಸಮಯದಲ್ಲಿ ತಿಳಿಸಿರುತ್ತಾರೆ.

ಶ್ರೀಮತಿ.ವಿ.ವಳ್ಳಿಬಾಯಿ ರವರು ಸಹ ನೊಂದಾವಣೆ ಸಂಖ್ಯೆ:232/97-98 ದಿನಾಂಕ:16/10/1997 ರಂದು ಅವರ ಅಜ್ಜಿಯಾದ ಶ್ರೀಮತಿ.ರಾಜುಬಾಯಿ ರವರು ನೀಡಿರುವ ವಿಲ್‌ಯಾ ಮರಣ ಶಾಸನ ಪತ್ರದ ಪ್ರಕಾರ ಸದರಿ ಸ್ವತ್ತನ್ನು ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಕೊಡಲು ಕೋರಿರುತ್ತಾರೆ.ಈ ಪೈಕಿ ಖಾತೆ ವರ್ಗಾಯಿಸುವ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಕೋರಲಾಗಿ ಕಾನೂನು ಕೋಶದ ಮುಖ್ಯಸ್ಥರು ಸದರಿ ಕಾಯ್ದೆ ಕಲಂ 114/ಎ ರ ಅಡಿ ಹಾಲಿ ಖಾತೆದಾರರು, ಅರ್ಜಿದಾರರು ಹಾಗೂ ತಕರಾರುದಾರರುಗಳಿಗೆ ವಿಚಾರಣೆಗೆ ಅವಕಾಶ ನೀಡಿ ವಿಚಾರಣೆ ನಡೆಸಿ ನಿಯಮಾನುಸಾರ ಕ್ರಮ ಕೈಗೊಳ್ಳಬಹುದಾಗಿ ಅಭಿಪ್ರಾಯದೊಂದಿಗೆ ಕಡತವನ್ನು ಹಿಂದಿರುಗಿಸಿರುತ್ತಾರೆ. ಎಲ್ಲಾ ವಿಷಯವನ್ನು ತಮ್ಮ ಅವಗಾಹನೆಗೆ ತರುತ್ತಾ ಮೂಲ ಕಡತವನ್ನು ಅಧ್ಯಕ್ಷರು ಅಪೀಲುಗಳ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾಗಿದೆ.

**ನಿರ್ಣಯ**: ಪ್ರಕರಣ ಕುರಿತಂತೆ ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಈ ಪ್ರಕ್ರಿಯೆ ಕುರಿತಂತೆ ಜಂಟಿ ಅಯುಕ್ತರು( ಪಶ್ಚಿಮ) ರವರ ಮುಂದೆ ಬಾಕಿ ಇರುವ ಮೇಲ್ಮನವಿ ಇತ್ಯರ್ಥವಾಗದೆ ಇರುವುದು ಕಂಡು ಬಂದಿರುವುದರಿಂದ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಹಿಂತಿರುಗಿಸಲು ತೀರ್ಮಾನಿಸಲಾಗಿದೆ

<u>ವಿಷಯ:ಸಂಖ್ಯೆ:ಆಸ್ಥಾಸ/(ಆ)/14/2012-13</u> ಅಯುಕ್ತರುರವರ ಟಿಪ್ಪಣಿ ಸಂಖ್ಯೆ:ಅ.ಅ(ಪ)ಇಸಿ/ಪಿಅರ್/186/12-13 ದಿನಾಂಕ:21-6-2012ರಲ್ಲಿ,ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಪಶ್ಚಿಮ ವಲಯ ವ್ಯಾಪ್ತಿಯ ವಾರ್ಡ್-65ರಲ್ಲಿರುವ ಸ್ವತ್ತಿನ ಸಂಖ್ಯೆ:3373/49,3374/48, 5ನೇ ಕ್ರಾಸ್, ಸಿದ್ಧಾಶ್ರಮ ರಸ್ತೆ, ವಿವೇಕಾನಂದ ಲಾ ಕಾಲೇಜು ಹತ್ತಿರ, ಬೆಂಗಳೂರು-21ರಲ್ಲಿ ನಡೆಸುತ್ತಿರುವ ದಿವ್ಯ ಸಿಲ್ಕ್ ಎಂಬ ಮಗ್ಗದ ಉದ್ದಿಮೆಯಿಂದ ಆಧಿಕವಾಗಿ ಶಬ್ದ ಮಾಲಿನ್ಯ ಉಂಟಾಗುತ್ತಿರುವುದರ ಬಗ್ಗೆ ಪಕ್ಕದ ನಿವಾಸಿಯಾದ ಕು# ಮುಂಜುಳ ಎಲ್.ಬಿನ್ ಲಿಂಗಪ್ಪ ನಂ: 3377,4ನೇ ಅಡ್ಡರಸ್ತೆ, ವಿವೇಕಾನಂದ ಲಾ ಕಾಲೇಜು ಹತ್ತಿರ, ಬೆಂಗಳೂರು-21ರವರು ಮಾನ್ಯ ಕರ್ನಾಟಕ ಲೋಕಾಯುಕ್ತರವರಿಗೆ ದೂರನ್ನು ಸಲ್ಲಿಸಿರುತ್ತಾರೆ. ಸದರಿ ದೂರಿನ ಮೇರೆಗೆ ದೂರಿನ ಸ್ಥಳವನ್ನು ತಪಾಸಣೆ ಮಾಡಲಾಗಿ ಈ ಉದ್ದಿಮೆ ನಡೆಯುತ್ತಿರುವ ಸ್ಥಳವು ವಸತಿ ಮುಖ್ಯ ಪ್ರದೇಶದಲ್ಲಿ ಇರುತ್ತದೆ ಎಂದು ಸಹಾಯಕ ನಿರ್ದೇಶಕರು ನಗರ ಯೋಜನೆ (ಪಶ್ಚಿಮ) ರವರು ವರದಿಯನ್ನು ನೀಡಿದ್ದು. ಈ ಕೆಳಕಂಡ ಉದ್ದಿಮೆದಾರರಿಗೆ ಸ್ವಯಂ ಪ್ರೇರಿತವಾಗಿ ಉದ್ದಿಮೆಯನ್ನು ಮುಚ್ಚಲು ನೋಟಿಸ್ ನೀಡಿ ಉದ್ದಿಮೆಯನ್ನು. ಸ್ಥಗಿತಗೊಳಿಸಲು ಮತ್ತು ಕೈಗಾರಿಕಾ ವಲಯಕ್ಕೆ ಸ್ಥಳಾಂತರಿಸಲು ಸೂಚಿಸಿ ನೋಟಿಸ್‌ನ್ನು ಜಾರಿ ಮಾಡಲಾಗಿರುತ್ತದೆ.

1. ಶ್ರೀಮತಿ.ಕಮಲಮ್ಮ,ಎಸ್.ಸಂಖ್ಯೆ: 3374/48, 4ನೇ ಅಡ್ಡರಸ್ತೆ, ಗಾಯಿತ್ರಿನಗರ ಸಿದ್ಧಾಶ್ರಮ ರಸ್ತೆ, ಬೆಂಗಳೂರು ರವರಿಗೆ 08 ಅಶ್ವಶಕ್ತಿ (ಪರವಾನಗಿ ಸಂಖ್ಯೆ:3173/1978-79)
2. ಶ್ರೀ.ಎಸ್.ಷಣಗ್ಮುಂ, .ಸಂಖ್ಯೆ: 3374/48, 4ನೇ ಅಡ್ಡರಸ್ತೆ, ಗಾಯಿತ್ರಿನಗರ ಸಿದ್ಧಾಶ್ರಮ ರಸ್ತೆ, ಬೆಂಗಳೂರು ರವರಿಗೆ 10 ಅಶ್ವಶಕ್ತಿ (ಪರವಾನಗಿ ಸಂಖ್ಯೆ:7975/1978-79)
3. ಶ್ರೀ.ಎಸ್.ಶಂಕರ್ .ಸಂಖ್ಯೆ: 3374/48, 4ನೇ ಅಡ್ಡರಸ್ತೆ, ಗಾಯಿತ್ರಿನಗರ ಸಿದ್ದಾಶ್ರಮ ರಸ್ತೆ, ಬೆಂಗಳೂರು ರವರಿಗೆ 09 ಅಶ್ವಶಕ್ತಿ (ಪರವಾನಗಿ ಸಂಖ್ಯೆ:02/2011-12)
4. ಶ್ರೀ.ಎಸ್.ಶಂಕರ್ .ಸಂಖ್ಯೆ: 3373/49, 4ನೇ ಅಡ್ಡರಸ್ತೆ, ಗಾಯಿತ್ರಿನಗರ ಸಿದ್ಧಾಶ್ರಮ ರಸ್ತೆ, ಬೆಂಗಳೂರು ರವರಿಗೆ 05 ಅಶ್ವಶಕ್ತಿ (ಪರವಾನಗಿ ಸಂಖ್ಯೆ:27/1998-99)
5. ಶ್ರೀ.ಎಸ್.ಶಂಭುಲಿಂಗಂ .ಸಂಖ್ಯೆ: 3373/49, 4ನೇ ಅಡ್ಡರಸ್ತೆ,ಗಾಯಿತ್ರಿನಗರ ಸಿದ್ಧಾಶ್ರಮ ರಸ್ತೆ, ಬೆಂಗಳೂರು ರವರಿಗೆ 09 ಅಶ್ವಶಕ್ತಿ (ಪರವಾನಗಿ ಸಂಖ್ಯೆ:28/1998-99)

ಈ ಮೇಲ್ಕಂಡ ಉದ್ದಿಮೆದಾರರು ಪಾಲಿಕೆಯಿಂದ ಜಾರಿಮಾಡಿರುವ ನೋಟಿಸ್‌ನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತಾರೆ.(ಸಂಖ್ಯೆ:ಡಬ್ಲ್ಯೂ ಪಿ.41040/41043) ಮಾನ್ಯ ನ್ಯಾಯಾಲಯವು ದಿನಾಂಕ: 4/11/2011ರಂದು ಈ ಪ್ರಕರಣದ ವಿಚಾರಣೆಯನ್ನು ನಡೆಸಿ ಉದ್ದಿಮೆದಾರರುಗಳಿಗೆ ಪಾಲಿಕೆಯಿಂದ ಜಾರಿ ಮಾಡಿರುವ ನೋಟಿಸ್‌ನ್ನು ಕಾರಣಕೇಳಿ ಪತ್ರ ಎಂದು ಭಾವಿಸಿ 4 ವಾರದೊಳಗಾಗಿ ಸಮಜಾಯಿಷಿಯನ್ನು ಆಯುಕ್ತರಿಗೆ ಸಲ್ಲಿಸಲು ಸೂಚಿಸಿ, ಇವರು ಸಲ್ಲಿಸಿರುವ ಸಮಜಾಯಿಷಿಯನ್ನು ಅಯುಕ್ತರು ಪರಿಶೀಲಿಸಿ ಕಾನೂನುಬದ್ಧವಾಗಿ ಪ್ರಕರಣವನ್ನು ಇತ್ಯರ್ಥಗೊಳ್ಳಿಸಲು ಅದೇಶಿಸಿದ್ದು. ಉದ್ದಿಮೆದಾರರುಗಳು ದಿನಾಂಕ: 30-11-2011ರಂದು ತಮ್ಮ ಸಮಜಾಯಿಷಿಯನ್ನು ಸಲ್ಲಿಸಿರುತ್ತಾರೆ.

ಮಾನ್ಯ ನ್ಯಾಯಾಲಯದ ನಿರ್ದೇಶನದ ಮೇರೆಗೆ ಈ ಪ್ರಕರಣದ ವಿಚಾರಣೆಯನ್ನು ನಡೆಸಲು ದೂರುದಾರರಾದ ಕು# ಮುಂಜುಳ ಮತ್ತು ಉದ್ದಿಮೆದಾರರುಗಳಿಗೆ ತಿಳುವಳಿಕೆ ಪತ್ರವನ್ನು ಜಾರಿ ಮಾಡಿ ವಿಚಾರಣೆ ವೇಳೆಯಲ್ಲಿ 2 ಕಡೆಗಳಿಂದ ಹೇಳಿಕೆಗಳು ಮತ್ತು ದಾಖಲಾತಿಗಳನ್ನು ಪಡೆಯಲಾಯಿತು. ಉದ್ದಿಮೆದಾರರು ಕೆಲವು ದಾಖಲಾತಿಗಳನ್ನು ನೀಡಿ ಅಂದರೆ ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿರವರು ದಿನಾಂಕ: 13-5-2011 ರಂದು ಉದ್ದಿಮೆಯನ್ನು ತಪಾಸಣೆ ಮಾಡಿ ಈ ಮಗ್ಗದ ಉದ್ದಿಮೆಯಿಂದ ಯಾವುದೇ ರೀತಿಯ ಶಬ್ದ ಮಾಲಿನ್ಯ ಉಂಟಾಗುತ್ತಿಲ್ಲವೆಂದು ಮತ್ತು ಅದರಲ್ಲೂ ದೂರುದಾರರಾದ ಕು# ಮಂಜುಳ ರವರಿಗೆ ಯಾವುದೇ ರೀತಿಯ ಶಬ್ದಮಾಲಿನ್ಯ ತೊಂದರೆ ಉಂಟಾಗುತ್ತಿಲ್ಲವೆಂದು ವರದಿ ನೀಡಿರುತ್ತಾರೆ,ಮತ್ತು ಇದೇ ದೂರಿಗೆ ಸಂಬಂಧಪಟ್ಟಂತೆ ಕು# ಎಸ್.ಅರುಳ್‌ಕುಮಾರಿ ರವರು ಮಾನ್ಯ ಲೋಕಯುಕ್ತಕ್ಕೆ ದೂರು ನೀಡಿರುತ್ತಾರೆ. ಈ ಇಲಾಖೆಯ

ಅಧಿಕಾರಿಗಳು ದಿನಾಂಕ: 29/6/2011ರ ತಪಾಸಣೆಯನ್ನು ನಡಿಸಿ, ತಪಾಸಣೆ ವರದಿಯಲ್ಲಿ ಅಧಿಕವಾಗಿ ಶಬ್ದ ಮಾಲಿನ್ಯ ಉಂಟಾಗುತ್ತಿರುವುದರ ಬಗ್ಗೆ ಮತ್ತು ಅಗ್ನಿದುರಂತಗಳಿಗೆ ಸಂಬಂಧಪಟ್ಟಂತೆ, ಅಗ್ನಿನಿರೋಧಕ ಮುಂಜಾಗ್ರತಾ ಕ್ರಮಕೈಗೊಂಡು ಈ ಇಲಾಖೆಯಿಂದ ಪ್ರಮಾಣಪತ್ರವನ್ನು ಪಡೆದ ನಂತರ ಪರವಾನಗಿಯನ್ನು ನವೀಕರಣ ಮಾಡಬಹುದೆಂದು ವರದಿಯನ್ನು ನೀಡಿರುತ್ತಾರೆ.

ಈ ಪ್ರಕರಣದಲ್ಲಿ ನಡೆದಿರುವ ವಿಚಾರಣೆಯಲ್ಲಿನ ಹೇಳಿಕೆಗಳನ್ನು ಮತ್ತು ದಾಖಲಾತಿಗಳನ್ನು ಪರಿಶೀಲಿಸಿ ಸುವರ್ಣ ಅರೋಗ್ಯ ಪರವಾನಗಿ–2007ಕೈಪಿಡಿಯಲ್ಲಿನ ಪುಟ ಸಂಖ್ಯೆ:18ರಲ್ಲಿರುವಂತೆ ಸರ್ಕಾರದ ಅದೇಶದ ಸಂಖ್ಯೆ:ಎಂ.ಯು.ಡಿ–139,ಎಂ.ಎನ್.ಜೆ–94,ದಿನಾಂಕ:05–01–1994ರಂತೆ ಸಿಡಿಪಿ ನಿಯಾಮವಳಿ ಪ್ರಕಾರ ವಸತಿ ಮುಖ್ಯ ಪ್ರದೇಶದಲ್ಲಿ 5ರಿಂದ 10 ಅಶ್ವಶಕ್ತಿಯವರೆಗೂ ಹಲ್ಲರ್ ಮತ್ತು ಫ್ಲೋರ್‌ಮೆಷಿನ್ ಎಂಬ ಉದ್ದಿಮೆಯನ್ನು ನಡೆಸುವುದಕ್ಕೆ ಮಾತ್ರ ಅವಕಾಶವಿದ್ದು, ಮಗ್ಗದ ಅಥವಾ ಪವರ್ ಲೂಮ್ಸ್ ಉದ್ದಿಮೆ ಪರವಾನಗಿಯನ್ನು ನಡೆಸಲು ಅವಕಾಶವಿರುವುದಿಲ್ಲ.ಅದಕಾರಣ ಮೇಲ್ಕಂಡ ಉದ್ದಿಮೆದಾರರುಗಳಿಗೆ ಪಾಲಿಕೆಯಿಂದ ಮಗ್ಗದ ಮತ್ತು ಪವರ್ ಲೂಮ್ಸ್ ಉದ್ದಿಮೆಯನ್ನು ನಡೆಸಲು ನೀಡಿರುವ ಅಶ್ವಶಕ್ತಿಯ ಪರವಾನಗಿಯನ್ನು ರದ್ದುಪಡಿಸಲಾಗಿರುತ್ತದೆ.

ಪ್ರಕರಣವನ್ನು ಕರೆಯಲಾಯಿತು ಮೇಲ್ಮನವಿದಾರರು ಹಾಗು ಪ್ರತಿವಾದಿಗಳು ಹಾಜರಿದ್ದು ತಮ್ಮ ಹೇಳಿಕೆಗಳನ್ನು ನೀಡಿರುತ್ತಾರೆ. ಮೇಲ್ಮನವಿದಾರರು ನಡೆಸುತ್ತಿರುವ ಉದ್ದಿಮೆಯು ವಸತಿ ಪ್ರದೇಶದಲ್ಲಿ ಇದ್ದು ಸ್ಥಳೀಯ ನಿವಾಸಿಗಳ ದೂರನ್ನು ಆಧಾರಿಸಿ ಉದ್ದಿಮೆಯನ್ನು ಮುಚ್ಚಲಾಗಿದ್ದು ಉದ್ದಿಮೆದಾರರು ನ್ಯಾಯಾಲಯದಲ್ಲಿ ದಾವೆ ಹೂಡ್ಡಿದ್ದು ನ್ಯಾಯಾಲಯದ ನಿರ್ದೇಶನದ ಮೇರೆಗೆ ಅಯುಕ್ತರವರಿಗೆ ಸಮಜಾಷಿಯನ್ನು ಸಲ್ಲಿಸಿದ್ದು ಈ ಮೇರೆಗೆ ದಿನಾಂಕ:21–5–2012ರಲ್ಲಿ ಉದ್ದಿಮೆಯ ಪರವಾನಗಿಯನ್ನು ರದ್ದು ಪಡಿಸಲು ಅದೇಶಿಸಲಾಗಿದ್ದು ಸದರಿ ಅದೇಶದ ಮೇರೆಗೆ ಈ ಕಳಕಂಡ ನಿರ್ಣಯವನ್ನು ಕೈಗೊಳ್ಳಲಾಗಿರುತ್ತದೆ.

**ನಿರ್ಣಯ:–** ಕಡತವನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು. ಉದ್ದಿಮೆದಾರರು ಮತ್ತು ಪ್ರತಿವಾದಿಗಳ ಲಿಖಿತ ಹೇಳಿಕೆಯನ್ನು ಪರಿಶೀಲಿಸಲಾಯಿತು. ಪ್ರಸ್ಥಾವಿತ ಪ್ರದೇಶದಲ್ಲಿ ಮಗ್ಗದ ಉದ್ದಿಮೆಯನ್ನು ಹಲವು ದಶಕಗಳಿಂದ ನಡೆಸುತ್ತಿರುವುದಾಗಿ ಉದ್ದಿಮೆದಾರರು ವಿಚಾರಣೆ ಸಮಯದಲ್ಲಿ ಸಮಿತಿಗೆ ವಿವರಿಸಿರುತ್ತಾರೆ, ಅಧಿಕಾರಿಗಳು ಸ್ಥಳ ಪರಿಶೀಲನೆ ಮಾಡಿದ ಸಂದರ್ಭದ ವರದಿಯ ರೀತ್ಯಾ ಈ ಉದ್ದಿಮೆಯಿಂದ ಯಾವುದೇ ರೀತಿಯ ಶಬ್ದ ಮಾಲಿನ್ಯ ಉಂಟಾಗುತ್ತಿಲ್ಲವೆಂದು ಹಾಗೂ ದೂರುದಾರರಾದ ಕು:ಮಂಜುಳ ರವರಿಗೆ ಯಾವುದೇ ವಿಧವಾದ ತೊಂದರೆ ಉಂಟಾಗುತ್ತಿಲ್ಲವೆಂಬ ಅಂಶವನ್ನು ಮನಗಂಡು ಹಾಗು ಬಹಳ ಹಿಂದಿನಿಂದಲೂ ಈ ಉದ್ದಿಮೆಯು ಚಾಲನೆಯಲ್ಲಿದ್ದು ಆ ಸಂದರ್ಭದಿಂದಲು ಯಾವುದೇ ವಿಧವಾದ ದೂರನ್ನು ನೀಡದೆ ಪ್ರಸುತ್ತ ದೂರು ಸಲ್ಲಿಸುತ್ತಿರುವುದು ಹಲವು ಅನುಮಾನಗಳಿಗೆ ಅಸ್ಪದ ನೀಡಿದಂತ್ತಿರುವುದು ಮೇಲ್ನೊಟಕ್ಕೆ ಕಂಡು ಬಂದಿರುವ ಹಿನ್ನೆಲೆಯಲ್ಲಿ ಹಾಗು ಸರ್ಕಾರವು ನೇಕಾರರ ಅಭಿವೃದ್ಧಿಗಾಗಿ ಅನೇಕ ಅವಕಾಶಗಳನ್ನು ಕಲ್ಪಿಸಿಕೊಟ್ಟಿರುವ ಮೇರೆಗೆ ಉದ್ದಿಮೆದಾರರ ಮನವಿಯನ್ನು ಸಹಾನೂಭೂತಿಯಿಂದ ಪರಿಗಣಿಸಿ ಸದರಿ ಉದ್ದಿಮೆಗಳ ಪರವಾನಗಿಯನ್ನು ನವೀಕರಿಸಲು ಸದರಿ ವಿದ್ಯುತ್ ಮಗ್ಗ ಮತ್ತು ನೂಲಿನ ಯಂತ್ರಕ್ಕೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಬಾರದೆಂದು ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

(ಪುಟ್ಟಮ್ಮ)
ಅಧ್ಯಕ್ಷರು,
ಅಪೀಲುಗಳ ಸ್ಥಾಯಿ ಸಮಿತಿ